ಕ್ಷೇತ್ರದರ್ಶನ

ಪ್ರೊ. ಎಸ್. ಕೆ. ರಾಮಚಂದ್ರರಾವ್

ಚಿಂತನ ಪ್ರಕಾಶನ

ಬೆಂಗಳೂರು

DY. S. P.

ಕ್ಷೇತ್ರ ದರ್ಶನ

22/10/89

ಪ್ರೊ. ಎಸ್. ಕೆ. ರಾಮಚಂದ್ರರಾವ್

ಚಿಂತನ ಪ್ರಕಾಶನ, ಬೆಂಗಳೂರು

KSHETHRA DARSHANA by Prof. S. K. Ramachandra Rao
published by Chinthana Prakashana, Bangalore.
pp. 264 + vi 1980.

ಬೆಲೆ : ರೂ. 10-00

ಮುದ್ರಣ :
ಅಕ್ಷರ, ಬೆಂಗಳೂರು 560 027

ಅವುಗಳ ಮೇಲೆ ಮತ್ತೆ ಕೈಯಾಡಿಸಬೇಕೆಂಬ ಕಾತರವಿದ್ದಿತಾದರೂ, ಬೇರೆ ಕೆಲಸಗಳ ಒತ್ತಡದಿಂದ ಸಾಧ್ಯವಾಗಲಿಲ್ಲ. ಬೇರೆ ಬೇರೆ ಸಮಯಗಳಲ್ಲಿ, ಬೇರೆ ಬೇರೆ ಸಂದರ್ಭಗಳಲ್ಲಿ ಮೈದಳೆದ ಬರಹಗಳಾದುದರಿಂದ ಅಲ್ಲಲ್ಲಿ ಪುನರುಕ್ತಿಯ ದೋಷ ಕಾಣುತ್ತದೆ. ಕೆಲವು ಕಡೆ ಹಳೆಯ ಅಂಕಿ-ಅಂಶಗಳೇ ಉಳಿದುಕೊಂಡಿವೆ. ಓದುಗರು ಅವನ್ನು ತಾಳಿಕೊಳ್ಳುವರೆಂಬ ನಂಬಿಕೆ ನನಗುಂಟು.

ಈ ಸಂಕಲನವನ್ನು ತಮ್ಮ ಪ್ರಕಟನೆಗಳ ಹರವಿನಲ್ಲಿ ಸೇರಿಸಿಕೊಂಡುದಕ್ಕಾಗಿ 'ಚಿಂತನ ಪ್ರಕಾಶನ'ದ ಒಡೆಯರಿಗೆ, ಅಂದವಾಗಿ ಅಚ್ಚುಮಾಡಿದ 'ಅಕ್ಷರ' ಮುದ್ರಣಾಲಯದ ಕೆಲಸಗಾರರಿಗೆ ವಂದನೆಗಳು.

ಸಾ. ಕೃ. ರಾಮಚಂದ್ರರಾವ್

ಪರಿವಿಡಿ

ಹಿಮಾಲಯದ ಕತೆ 1
ಕ್ಷೇತ್ರರಾಜ ಕಾಶಿ 6
ಶ್ರೀರಾಮ ಕ್ಷೇತ್ರಗಳು 18
ಶಬರಿಮಲೆಯ ಶಾಸ್ತ 23
ಶ್ರೀರಂಗದ ದೇವಾಲಯ 49
ಮಾಮಲ್ಲಪುರದ ಕಡಲ ದೇವಾಲಯ 54
ಆಲೋಕನಾಮೃತ ಅಜಂಟಾ 63
ಎಲ್ಲೋರದ ಗುಹಾಂತರ್ದೇವಾಲಯಗಳು 72
ಖಜೂರಹೋ ದೇಗುಲಗಳು 77
ಮಂತ್ರಾಲಯ ಪ್ರಭು 83
ಶೃಂಗೇರಿ 94
ಬೇಲೂರು ಚೆನ್ನಿಗರಾಯ 105
ಮರಳಾಗಿರುವ ತಲಕಾಡು 118
ಶ್ರವಣಬೆಳ್ಗೊಳ-ಚಂದ್ರಗಿರಿ 125
ಲೇಪಾಕ್ಷಿಯ ಕಲೆಗಾರಿಕೆ 138
ಹಾಳು ಬಿದ್ದಿರುವ ಹಂಪಿ 148
ಧರ್ಮದೇವತೆಗಳ ಬೀಡು ಧರ್ಮಸ್ಥಳ 156
ಬಾದಾಮಿ ಚಾಳುಕ್ಯರ ಸ್ಮಾರಕಗಳು 182
ಕಾರ್ಕಳದ ಗೊಮ್ಮಟಸ್ವಾಮಿ 189
ಕಟೀಲದ ದ್ವೀಪ ದೇವಸ್ಥಾನ 199
ಕೆಳದಿ ನೃಪ ವಿಜಯ 204
ಮೇಲುಕೋಟೆಯ ಚೆಲುವ 212
ಉಡುಪಿಯಲ್ಲಿ ಪರ್ಯಾಯ 224
ಕೋಟೆಯ ವೆಂಕಟೇಶ್ವರ 234
ಗೂಳೂರಿನಲ್ಲಿ ಶ್ರೀಶೈಲ ಸನ್ನಿಧಿ 243
ಮಹಾಸಿದ್ಧರ ಸಿರಿ ನೆಲೆ 258

ಹಿಮಾಲಯದ ಕತೆ

ನಮ್ಮ ಜನ ಹಿಮಾಲಯುವನ್ನು ಎಂದೂ ಬರಿಯ ಬೆಟ್ಟವನ್ನಾಗಿ ಪರಿಗ್ರಹಿಸಿಲ್ಲ, ವೈದಿಕ ಯುಗದಿಂದ ಇಂದಿನವರೆಗೂ ಹಿಮಾಲಯ ದೇವತಾತ್ಮನೆಂದೇ ಕಲ್ಪನೆ ಉಳಿದು ಬಂದಿದೆ. ಮನುಷ್ಯರಾದ ಯೋಗಿಗಳೂ ಸಿದ್ಧರೂ ದೇವತಾ ಸಾನ್ನಿಧ್ಯವನ್ನು ಬಯಸಿ ಹಿಮಾಲಯದ ಗಿರಿಕಂದರಗಳಲ್ಲಿ ತಪಶ್ಚರ್ಯೆ ಮಾಡುತ್ತ ತಂಗುವುದು ತುಂಬ ಹಿಂದಿನಿಂದ ಬಂದ ಪದ್ಧತಿ. ಮನುಷ್ಯಲೋಕಕ್ಕೆ ಅತೀತರೆನಿಸಿದ ಕಿನ್ನರರೂ, ಗಂಧರ್ವರೂ ಈ ಪ್ರದೇಶದಲ್ಲಿ ವಿಹರಿಸುತ್ತಾರೆಂಬುದು ನಮ್ಮ ನಂಬಿಕೆ. ಹಿಮಾಲಯ ದೇವತೆಗಳ ಲೋಕ; ಅದರ ತುಟ್ಟತುದಿಯಾದ ಕೈಲಾಸ ಶಿಖರದ ಮೇಲೆ ಸ್ವಯಂ ಪರಮೇಶ್ವರನೇ ಮನೆ ಮಾಡಿ ನಿಂತಿದ್ದಾನಲ್ಲವೇ ? ದೇವತೆಗಳ ವಾಸಕ್ಷೇತ್ರವೆಂದು ಮಾತ್ರವಲ್ಲ, ಹಿಮಾಲಯ ತಾನೇ ಒಂದು ದೇವತೆಯೆಂದು ನಮ್ಮ ಕಲ್ಪನೆ. ಅದಕ್ಕೇ ಪೂಜೆ ಪುನಸ್ಕಾರಗಳನ್ನು ಸಲ್ಲಿಸುವ ಪರಿಪಾಠ ನಮ್ಮಲ್ಲಿ ಮಾತ್ರ ವಲ್ಲ, ಟಿಬೆಟ್ ಜನರಲ್ಲೂ ಚೀಣೀಯರಲ್ಲೂ ಉಂಟು. ಬೆಟ್ಟವನ್ನು ದೇವತೆಯೆಂದೋ ದೇವತೆಗಳ ಆವಾಸವೆಂದೋ ಭಾವಿಸುವುದು ನಮ್ಮ ಜನರಿಗೆ ಮಾತ್ರ ಸಿದ್ಧವಾದುದಲ್ಲ; ಜಗತ್ತಿನಲ್ಲೆಲ್ಲಾ ಈ ಭಾವನೆ ಹಿಂದೆ ತುಂಬಿ ಬಂದಿತ್ತು.

ಬೆಟ್ಟವನ್ನು ಶುಭ ಬಯಸಿ ಪ್ರಾರ್ಥಿಸುವ ಮನೋಭಾವ ಋಗ್ವೇದದಲ್ಲೇ ಕಂಡುಬರುತ್ತದೆ. ಪಾಪಗಳನ್ನು ತೊಳೆದುಕೊಳ್ಳಲು ಬೆಟ್ಟವನ್ನೇರಬೇಕೆನ್ನುವ ಕಲ್ಪನೆ ಋಗ್ವೇದದ ಹತ್ತನೇ ಮಂಡಲದಲ್ಲಿ ಬರುವ "ಅರಾಯಿ ಕಾಣೇ ವಿಕಟೇಗಿರಿಂ ಗಚ್ಛ ಸದಾನ್ವೇ" ಎಂಬ ಮಂತ್ರದಲ್ಲಿ ಧ್ವನಿತವಾಗುತ್ತದೆ. ಹಿಮಾಲಯುವನ್ನೇ ಸ್ಪಷ್ಟವಾಗಿ ನಿರ್ದೇಶಿಸಿರುವ ಋಕ್ಕುಗಳೂ ಹಲವಾರು ಉಂಟು. ಯಾವ

ದೇವರಿಗೆ ಹವಿಸ್ಸು ಕೊಡುವುದು ಎಂದು ಹೃದಯ ತುಯ್ದಾಡುವಾಗ 'ಯಸ್ಯೇ ಮೇ ಹಿಮವಂತೋ ಮಹಿತ್ವಾ ಯಸ್ಯ ಸಮುದ್ರಂ ರಸಯಾ ಸಹಾಹುಃ' ಎಂದರೆ ಹಿಮಾಲಯವು ತನ್ನ ಮಹತ್ವದಿಂದ ಯಾರ ಶಿರಃಸ್ಥಾನವಾಗಿದೆಯೋ ಅಂಥ ಆ ದೇವರಿಗೆ ಹವಿಸ್ಸು ಎನ್ನುತ್ತದೆ ಋಗ್ವೇದ. ಅಥರ್ವ ವೇದದಲ್ಲಿ ಹಿಮಾಲಯದ ತ್ರಿಕಕುದವೆಂಬೆಡೆ- ಉಂಟಾಗುವ ಅಂಜನದ ಪ್ರಸ್ತಾಪ ಬರುತ್ತದೆ; ಈ ಅಂಜನದಿಂದ ಎಲ್ಲಾ ದುಷ್ಟ ಶಕ್ತಿಗಳನ್ನೂ ಭಂಜನ ಮಾಡಬಹುದೆನ್ನುವುದು ಅಲ್ಲಿನ ಸಂದರ್ಭ.

ವೈದಿಕ ಯುಗದಲ್ಲಿ ಆರ್ಯರು ಗಂಗಾ-ಸಿಂಧೂ ನದಿಗಳ ದಂಡೆಯ ಮೇಲೆ ಬೀಡುಬಿಟ್ಟು ಆರ್ಯಾವರ್ತವನ್ನು ರೂಪುಗೊಳಿಸುತ್ತಿದ್ದಾಗ ಅವರಿಗೆ ಹಿರಿದಾಗಿ, ಉಜ್ವಲವಾಗಿ ನಿರಂತರ ಸಾಕ್ಷಿಯಾಗಿ ಕಂಡದ್ದು ಹಿಮಾಲಯ ಶ್ರೇಣಿ. ಪೂರ್ವದಲ್ಲಿ ಅಸ್ಸಾಂ ರಾಜ್ಯದ ಉಶಾಯ್ ಎಂಬ ಬೆಟ್ಟದಿಂದ ಪಶ್ಚಿಮದಲ್ಲಿ ಹಿಂದೂಕುಷ್ ಬೆಟ್ಟದವರೆಗೂ ಸುಮಾರು ಸಾವಿರದ ಐನೂರು ಮೈಲಿಗಳಷ್ಟು ಪ್ರದೇಶವನ್ನು ತುಂಬಿ ನಿಂತಿರುವ ಈ ಪರ್ವತ ಶ್ರೇಣಿಯನ್ನು ಆರ್ಯರು ಮರೆಯುವುದು ಹೇಗೆ ? ದುರ್ಗಮವಾದ ಶಿಖರಗಳಿಂದ, ಅಸದಳವೆನಿಸುವ ಕಾಡು-ಮೇಡುಗಳಿಂದ, ನದೀ ನಿರ್ಝರಗಳಿಂದ, ಕರಗಲೊಲ್ಲದ ಹಿಮರಾಶಿಯಿಂದ ರಮಣೀಯ ಭಯಂಕರವಾದ ಹಿಮಾಲಯದ ವಿಚಾರವಾಗಿ ಅವರಿಗೆ ಭಕ್ತಿ ಉಂಟಾದದ್ದೂ ಆಶ್ಚರ್ಯವಲ್ಲ. ಗಹನವಾದ ಗಿರಿಯ ಪಾರ್ಶ್ವಗಳಲ್ಲಿ ದೇವತೆಗಳು ತಂಗಿದ್ದಾರೆಂಬ ಊಹನೆಯೂ ಅವರಿಗೆ ಅಸಹಜವೆನಿಸಲಿಲ್ಲ. ಆಕಾಶವನ್ನು ಮುಟ್ಟುವ ಶಿಖರಗಳಿದ್ದರೆ ಅಲ್ಲಿ ದೇವತೆಗಳೇಕೆ ತಂಗಲೊಲ್ಲರು ? ಅದ್ಭುತವಾಗಿ ಗಗನ ಪರ್ಯಂತ ಬೆಳೆದು ನಿಂತ ಈ ಪರ್ವತವನ್ನು ಅವರು ಪೂಜಾಸ್ಥಾನವೆಂದು ಗ್ರಹಿಸಿದರು.

ಹಿಮಾಲಯಕ್ಕೆ ನಮ್ಮ ಇತಿಹಾಸದ ಅವತರಣಿಕೆಯಲ್ಲೇ ದೊರೆತ ಈ ಹಿರಿಮೆ ಮುಂದಿನ ವಾಙ್ಮಯದಲ್ಲೆಲ್ಲಾ ಪ್ರತಿಫಲಿಸಿತು. ತತ್ರಾಪಿ ಪುರಾಣದಲ್ಲಿ, ಕಾವ್ಯದಲ್ಲಿ. ವಾಯುಪುರಾಣವೂ, ಕೂರ್ಮಪುರಾಣವೂ 'ಸರ್ವಂ ಪುಣ್ಯಂ ಹಿಮವತಃ ಅಂದರೆ ಹಿಮಾಲಯದ ಎಲ್ಲ ಭಾಗವೂ ಪುಣ್ಯಪ್ರದವಾದದ್ದು,

'ಸರ್ವತ್ರ ಹಿಮವಾನ್ ಪುಣ್ಯಃ' ಎಂದು ಹೇಳಿದರೆ ಬ್ರಹ್ಮ ಪುರಾಣವು ಹಿಮಾಲಯದ ಮಡಿಲಿಂದ ಎದ್ದ ಭಾಗೀರಥೀ, ನರ್ಮದಾ, ಯಮುನಾ. ಸರಸ್ವತಿ, ವಿಶೋಕಾ, ವಿತಸ್ತಾ, ಈ ಆರು ನದಿಗಳನ್ನು ದೇವತೀರ್ಥಗಳೆನ್ನುತ್ತದೆ. ಹಿಮಾಲಯದ ಪ್ರಮುಖ ನದಿಯಾದ ಗಂಗಾ ಮಹಾತ್ಮೆಯಂತೂ ಎಲ್ಲಾ ಪುರಾಣಗಳಲ್ಲೂ ಪ್ರಮುಖವಾಗಿಯೇ ಬರುತ್ತದೆ. ಕೂರ್ಮ ಪುರಾಣದಲ್ಲಿ ಹಿಮಾಲಯದ ಸುಂದರವಾದ, ಸವಿಸ್ತಾರವಾದ, ವರ್ಣನೆಯಿದ್ದು ಹಿಮಾಲಯದ ಉದ್ದ ಸಾವಿರದ ಎಂಬತ್ತು ಯೋಜನಗಳೆಂಬ ವಿವರವೂ ಇದೆ. ಮತ್ತೊಂದು ಕಡೆ 'ಅಸ್ಯ ದೀರ್ಘೇ ದಶಸಹಸ್ರಯೋಜನಾನಿ, ಪ್ರಸ್ಥೇ ದ್ವಿಸಹಸ್ರ ಯೋಜನಾನಿ' ಎಂಬ ವಿವರವೂ ಬರುತ್ತದೆ. ಪದ್ಮಪುರಾಣದಲ್ಲಿ ಹಿಮಾಲಯದ ಭಾಗವಾದ ಬದರಿಕಾಶ್ರಮದ ವರ್ಣನೆಯಿದೆ. ಸಹಸ್ರ ಕವಚನೆಂಬ ರಾಕ್ಷಸನನ್ನು ಕೊಲ್ಲಲು ದಕ್ಷ ಪ್ರಜಾಪತಿಯ ಮಗಳಾದ ಮಾತಾದೇವಿಯ ಗರ್ಭದಿಂದ ನರನಾರಾಯಣರು ಅವತರಿಸಿ ಈ ಸ್ಥಳದಲ್ಲೇ ತಪಸ್ಸು ಮಾಡಿದರೆಂಬ ಕಥೆ ಹಲವಾರು ಪುರಾಣಗಳಲ್ಲಿ ಬರುತ್ತದೆ. ಈ ಕ್ಷೇತ್ರದಲ್ಲೇ ನಾರದನೂ ತಪಸ್ಸು ಮಾಡಿ ನಾರಾಯಣನನ್ನು ಒಲಿಸಿಕೊಂಡ ಕಥೆಯೂ ಇದೆ.

ಬದರಿಕಾಶ್ರಮದ ಬಳಿಯೇ ವ್ಯಾಸರು ಹದಿನೆಂಟು ಪುರಾಣಗಳನ್ನೂ ರಚಿಸಿದರೆಂದು ಪುರಾಣದ ಕಲ್ಪನೆ. 'ವ್ಯಾಸಗುಹೆ'ಯೆಂಬ ಈ ಸ್ಥಾನವನ್ನು ಈಗಲೂ ತೋರಿಸುತ್ತಾರೆ. ಚಿರಂಜೀವಿಯಾದ ವೇದವ್ಯಾಸರು ಅದ್ಯಾಪಿ ಅಲ್ಲಿಯೇ ಇದ್ದಾರೆಂದು ಶ್ರದ್ಧೆ. ಶಂಕರಾಚಾರ್ಯರೂ ಮಧ್ವಾಚಾರ್ಯರೂ ಅವರನ್ನು ಸಂಧಿಸಿ ಅವರ ಅನುಮೋದನೆಯನ್ನು ಪಡೆದರೆಂದು ತಾನೆ ಅವರ ಪ್ರಾಮಾಣ್ಯ? ಬದರಿಯಲ್ಲದೆ ಅಮರನಾಥ, ಕೇದಾರನಾಥ, ದೇವಪ್ರಯಾಗ, ಗಂಗೋತ್ರಿ, ಯಮುನೋತ್ರಿ ಮುಂತಾದ ಹಿಮಾಲಯದ ತೀರ್ಥಗಳ ಪ್ರಸ್ತಾಪವೂ, ಪ್ರಶಸ್ತಿಯೂ ಪುರಾಣಗಳಲ್ಲುಂಟು. ಕೈಲಾಸ ಶೈಲ ಶಿಖರದಲ್ಲಿ ಒಂದಾನೊಂದು ಪ್ರದೋಷದ ಸಮಯದಲ್ಲಿ ಪಾರ್ವತಿಯ ಮುಂದೆ ಶಿವ ನೃತ್ಯ ಮಾಡಿ ಮುಗಿಸುವಾಗ ಢಕ್ಕೆಯನ್ನು ಬಡಿದು ಅದರಿಂದ ಎದ್ದ ಶಬ್ದದಿಂದಲೇ ಇಡೀ ವಾಙ್ಮಯವನ್ನೆಲ್ಲಾ ಉಂಟು ಮಾಡಿದನೆಂಬ ಕಥೆ ಹೃದ್ಯವಾಗಿದೆ. ಯಾತ್ರಿಕರು ಮೂರು ನಾಲ್ಕು ದಿನಗಳು ಅಲೆದು, ಕೈಲಾಸ ಶಿಖರವನ್ನು ಪ್ರದಕ್ಷಿಣೆ ಹಾಕುತ್ತಾರೆ. ನಮ್ಮ

ಜನಕ್ಕೆ ಮಾತ್ರವಲ್ಲ, ಟಿಬೆಟ್‌ನ ಜನಕ್ಕೂ ಈ ಕೈಲಾಸ ಶಿಖರವೂ, ಕಾಂಚನಗಂಗಾ ಶಿಖರವೂ ಪವಿತ್ರವಾದ ಕ್ಷೇತ್ರಗಳು.

ಮಹಾಭಾರತದ ವನಪರ್ವದಲ್ಲಿ ಹಿಮಾಲಯದ ವರ್ಣನೆಯಿದೆ. ಅರ್ಜುನ ಹಿಮಾಲಯದ ಭಾಗವಾದ ಇಂದ್ರಕೀಲ ಪರ್ವತಕ್ಕೆ ಹೋಗಿ ಅಲ್ಲಿ ಕಿರಾತರೂಪನಾದ ಶಿವನೊಂದಿಗೆ ಯುದ್ಧ ಮಾಡಿದ ಕಥೆ ಪುರಾಣಗಳಲ್ಲೂ, ಕಾವ್ಯಗಳಲ್ಲೂ ಬಂದಿದೆ. ತನ್ನ ನಾಲ್ವರು ತಮ್ಮಂದಿರು ಮಡಿದಂದು ಧರ್ಮರಾಜ ಹಿಮಾಲಯಕ್ಕೆ ಹೋಗಿ ಇರುತ್ತಾನೆ. ಎಲ್ಲಾ ಋಷಿಗಳಿಗೂ ತಪಸ್ಸಿಗೆ ಹಿಮಾಲಯ ಪ್ರಶಸ್ತವಾದದ್ದೆಂದು ಭಾರತ ಹೇಳುತ್ತದೆ. ಹಾಗೆಂದೇ ಕೃಷ್ಣನೂ ಭಗವದ್ಗೀತೆಯಲ್ಲಿ 'ಸ್ಥಾವರಾಣಾಂ ಹಿಮಾಲಯಃ' ಎಂದು ತನ್ನನ್ನು ತಾನು ಬಣ್ಣಿಸಿಕೊಂಡಿದ್ದಾನೆ. ಇಂದ್ರಕೀಲದಂತೆ ಹೇಮಕೂಟವೂ ಹಿಮಾಲಯದ ಒಂದು ಪ್ರಶಸ್ತ ತಪೋವನ. ಶಕುಂತಲೆಯ ಉಪಾಖ್ಯಾನದಲ್ಲಿ ಇದರ ಪ್ರಸ್ತಾಪ ಬರುತ್ತದೆ. ದೇವತೆಗಳಿಗೇ ಪುಣ್ಯಕ್ಷೇತ್ರವೆನಿಸಿದ ಮಾನಸ ಸರೋವರದ ಉಲ್ಲೇಖವು ಪುರಾಣಗಳಲ್ಲೂ, ಭಾರತದಲ್ಲೂ ಬರುತ್ತದೆ.

ತ್ರಿಕಾಂಡಶೇಷವೂ ಜಟಾಧರನೂ, ಹೇಮಚಂದ್ರನೂ ಹಿಮಾಲಯವನ್ನು 'ನಗಪತಿ', 'ನಗಾಧಿಪ', 'ಅದ್ರಿರಾಟ್'. ಅಂದರೆ ಬೆಟ್ಟಗಳಿಗೆ ಒಡೆಯ, ಎಂದು ವ್ಯವಹರಿಸಿದ್ದಾರೆ. ಹಿಮ ಪ್ರಧಾನವಾಗಿ ಉಳ್ಳದ್ದರಿಂದ 'ಹಿಮಾಲಯ', 'ಹಿಮವಾನ್', 'ಹಿಮಪ್ರಸ್ಥ' ಎಂಬ ಹೆಸರುಗಳು ಪ್ರಸಕ್ತವಾಗಿವೆ. ಹಿಮಾಲಯವನ್ನು ಪುರುಷನಂತೆ ಪರಿಗಣಿಸಿ ಮೇನಕೆಯೆಂಬ ಸ್ತ್ರೀಯನ್ನು ಅದಕ್ಕೆ ಪುರಾಣದಲ್ಲಿ ಕಲ್ಪಿಸಿದ್ದಾರೆ. ಈ ಕಾರಣದಿಂದ ಹೇಮಚಂದ್ರನು ಹಿಮಾಲಯವನ್ನು 'ಮೇನಕಾ ಪ್ರಾಣೇಶ'ನೆಂದೂ, ತ್ರಿಕಾಂಡಶೇಷದ ಕರ್ತೃವು 'ಮೇನಾಧವ'ನೆಂದೂ ಕರೆದಿದ್ದಾರೆ. ರಾಮಾಯಣದಲ್ಲಿ ಬರುವ 'ಮೈನಾಕ ಪರ್ವತ' ಹಿಮಾಲಯದ ಮಗನಂತೆ. ಈ ಮಗನಲ್ಲದೆ ಹಿಮಾಲಯನಿಗೆ ಪಾರ್ವತಿ, ಗಂಗೆಯರೆಂಬ ಇಬ್ಬರು ಹೆಣ್ಣು ಮಕ್ಕಳು. ಗಂಗೆ-ಗೌರಿಯರ ಕಥೆಯೂ ಪುರಾಣ ಪ್ರಸಿದ್ಧವಾದದ್ದೇ. 'ಉಮಾ ಹೈಮವತಿ'ಯೆಂಬುವಳು ಇಂದ್ರನಿಗೆ ಪರಬ್ರಹ್ಮದ ವಿಚಾರವಾಗಿ ಉಪದೇಶ ಮಾಡಿದ ವೃತ್ತಾಂತ ಕೇನೋಪನಿಷತ್ತಿನಲ್ಲಿ ಬರುತ್ತದೆ. ಈಕೆ

ಹಿಮಾಲಯದಲ್ಲೇ ತಪಸ್ಸು ಮಾಡಿ ಶಿವನನ್ನು ವರಿಸಿದ ಪುರಾಣ ಕಥೆಯನ್ನು ಕಾಳಿದಾಸ ಆಯ್ದುಕೊಂಡು ತನ್ನ 'ಕುಮಾರ ಸಂಭವ' ಕಾವ್ಯವನ್ನು ಬರೆದಿದ್ದಾನಷ್ಟೆ.

ಪುರಾಣಗಳಲ್ಲಿ ಗಂಗೆಗೂ ಹಿಮಾಲಯಕ್ಕೂ ತೀರದ ನಂಟು. ಹರಿಯ ಅಡಿಯಲ್ಲಿ ಹುಟ್ಟಿದ ಗಂಗೆ ಭಗೀರಥನ ಪ್ರಯತ್ನದಿಂದ, ಹರನ ಮುಡಿಯಿಂದ ಧುಮುಕಿ ಹರಿದು ಬರುವಾಗ ಹಿಮಾಲಯದ ಪ್ರಸ್ಥಭೂಮಿಯಲ್ಲಿ ಅವಳ ಬಿಡಾರ. ಸಪ್ತ ಋಷಿಗಳನ್ನು ಕಂಡು ಒಬ್ಬ ಋಷಿಯ ಬೀಡಿನ ಮುಂದೆ ಹರಿದು ಹೋದರೆ, ಉಳಿದ ಆರು ಋಷಿಗಳಿಗೆ ಅಪಚಾರವಾದೀತೆಂದು ಶಂಕಿಸಿ, ತಟ್ಟನೆ ನಿಂತುಬಿಟ್ಟಳಂತೆ. ನಂತರ ಶಿವನ ಆಜ್ಞೆಯಿಂದ ತಾನು ಏಳು ಹೋಳಾಗಿ ಸೀಳಿ ಏಳೂ ಋಷಿಗಳ ಮುಂದೆ ಹರಿದು ಹೋದಳಂತೆ. ಇದು ನಡೆದ ಸ್ಥಳವನ್ನು ಸಪ್ತಧಾರೆ ಎಂಬಲ್ಲಿ ಇಂದಿಗೂ ತೋರಿಸುತ್ತಾರೆ. ಇದೊಂದು ಮಾತ್ರವಲ್ಲ, ಗಂಗೆಯ ವಿಚಾರವಾಗಿ ನೂರೆಂಟು ಕಥಾ ಪುರಾಣಗಳಲ್ಲಿ ಬರುತ್ತದೆ. ಗಂಗೆಯ ಪಾವಿತ್ರ್ಯಕ್ಕೆ ಹಿಮಾಲಯವೇ ಹಿನ್ನೆಲೆ ಎಂಬುದರಲ್ಲಿ ಸಂಶಯವಿಲ್ಲ.

ಹೀಗೆ ಹಿಮಾಲಯದ ಹಿರಿಮೆ ಪುರಾಣಗಳಲ್ಲೂ ಅದಕ್ಕೆ ಮುಂಚಿನ ವೈದಿಕ-ಐತಿಹಾಸಿಕ ವಾಙ್ಮಯಗಳಲ್ಲೂ ಸ್ಪಷ್ಟವಾಗಿ ಬಂದಿದೆ. ನಾಡಿನ ಕಾಂತಿಯನ್ನು ಹೆಚ್ಚಿಸಿ, ಸಂಸ್ಕೃತಿಯನ್ನು ಬೆಳಗಿಸಿ, ಸುಭದ್ರತೆಗೆ ಸಹಕಾರಿಯಾಗಿ ನಿಂತ ಈ ನಗಾಧಿರಾಜನನ್ನು ಕಾಳಿದಾಸ ದೇವತಾತ್ಮನೆಂದು ವ್ಯವಹರಿಸಿದ್ದು ಸಹಜವೇ. ಇಡೀ ಭೂಮಿಗೇ ಮಾನದಂಡವಂತೆ ಹಿಮಾಲಯ-ಸ್ಥಿತಃ ಪೃಥಿವ್ಯಾ ಇವ ಮಾನದಂಡಃ". ಭೂಮಿಯಲ್ಲಿ ಉಳಿದ ಉತ್ತುಂಗ ಪರ್ವತಗಳುಂಟು. ಆದರೆ ಇಷ್ಟು ಪ್ರಾಶಸ್ತ್ಯ, ಪಾವಿತ್ರ್ಯದ ಪುಣ್ಯ ಪಡೆದ ಪರ್ವತ ಜಗತ್ತಿನಲ್ಲೇ ಮತ್ತೊಂದಿಲ್ಲ. ಭೂಮಿಗೆ ಹೇಗಾದರೂ ಇರಲಿ, ನಮ್ಮ ಸಂಸ್ಕೃತಿಗಂತೂ ಹಿಮಾಲಯವೇ ಮಾನದಂಡ.

ಕ್ಷೇತ್ರರಾಜ ಕಾಶಿ

ಹಿಂದೂ ಜನರಿಗೆ ಕಾಶಿಯಷ್ಟು ಪುಣ್ಯಕ್ಷೇತ್ರ ಮತ್ತೊಂದಿಲ್ಲ. ಇದು ತುಂಬ ಹಿಂದಿನ ಕಾಲದಿಂದ ಬಂದಿರುವ ಕಲ್ಪನೆ. ಇದಕ್ಕೆ ವಾರಾಣಸೀ, ಅವಿಮುಕ್ತ, ಆನಂದ ಕಾನನ, ಮಹಾ ಶ್ಮಶಾನ ಎಂಬ ಹೆಸರುಗಳೂ ಇವೆ. ಕಾಶಿಯೆಂದರೆ ಹೊಳೆಯುವುದು (ಕಾಶ್), ಮೋಕ್ಷವನ್ನು ಬೆಳಗಿಸುವುದು (ನಿರ್ವಾಣಕಾಶನಾದ್ಯತ). ವಾರಾಣಸಿ ಎಂದರೆ ವರಣಾ ಮತ್ತು ಅಸಿ ಎಂಬ ಎರಡು ನದಿಗಳ ನಡುವೆ ಇರುವ ಕ್ಷೇತ್ರ (ವರಣಾಯಾಸ್ತಥಾ ಚಾಸ್ಯಾ ಮಧ್ಯೇ ವಾರಾಣಸೀ ಪುರೀ). ಈಗಲೂ ಈ ನಗರದ ಉತ್ತರಭಾಗದಲ್ಲಿ ವರಣಾ ನದಿಯೂ ದಕ್ಷಿಣ ಭಾಗದಲ್ಲಿ ಅಸಿ ನದಿಯೂ ಹರಿಯುತ್ತವೆ. ಶಿವನು ಎಂದೂ ಈ ನಗರವನ್ನು ಬಿಡದೆ ಇದ್ದುದರಿಂದ ಇದು ಅವಿಮುಕ್ತವೆನಿಸಿಕೊಂಡಿತೆಂದು ಒಂದು ಪುರಾಣದ ವಿವರಣೆ. ಇನ್ನೊಂದು ಪುರಾಣವು ಅವಿಯೆಂದರೆ ಪಾಪವೆಂದೂ ಅದರಿಂದ ಎಂದೂ ಮುಕ್ತವಾದುದು ಅವಿಮುಕ್ತ ಎಂದೂ ಹೇಳುತ್ತದೆ. (ಲಿಂಗಪುರಾಣ, 92-143). ಶಿವನಿಗೆ ಈ ಕ್ಷೇತ್ರ ಆನಂದದಾಯಕವಾದುದರಿಂದ ಇದು ಆನಂದ ಕಾನನ. ಸಂಸಾರವನ್ನು ಸುಟ್ಟು ಬೂದಿಮಾಡುವ ಸ್ಥಳ ಇದೆಂದು ಇದಕ್ಕೆ ಮಹಾ ಶ್ಮಶಾನವೆನ್ನುತ್ತಾರೆ. ಇಲ್ಲಿ ಸತ್ತರೆ ಪುನರ್ಜನ್ಮವಿಲ್ಲವೆಂಬ ನಂಬಿಕೆ ಬಹುಕಾಲದಿಂದ ಇದೆಯಾಗಿ ಮುದುಕರು, ರೋಗಿಗಳು ಕಾಶಿಗೆ ಬಂದು ಇಲ್ಲಿ ಸಾಯಲು ನಿಲ್ಲುತ್ತಾರೆ!

ಕಾಶಿಯ ಖ್ಯಾತಿ ವೈದಿಕ ವಾಙ್ಮಯದಲ್ಲೇ ಇದೆ. ಬ್ರಾಹ್ಮಣಗಳ ಕಾಲದಲ್ಲೇ ಕಾಶಿಯು ಪ್ರಸಿದ್ಧವಾದ ಕ್ಷೇತ್ರವಾಗಿದ್ದಿತು. ಶತಪಥ ಬ್ರಾಹ್ಮಣ, ಗೋಪಥ ಬ್ರಾಹ್ಮಣಗಳಲ್ಲಿ ಬರುವ ಪ್ರಸ್ತಾಪದಿಂದ ಕಾಶಿಯು ಒಂದು ಪ್ರದೇಶದ ಹೆಸರೆಂದು

ಸ್ಫುಟವಾಗುತ್ತದೆ. ಕಾಶೀ ಎಂಬ ಪದವನ್ನು ಇಲ್ಲೆಲ್ಲ ಬಹುವಚನದಲ್ಲೇ ಉಪಯೋಗಿಸಿದ್ದಾರೆ. (ಕಾಶಿಷು, ಕಾಶೀನಾಂ ಇತ್ಯಾದಿ). ಶತಪಥದಲ್ಲಿ ಬರುವ ಧೃತರಾಷ್ಟ್ರ-ವಿಚಿತ್ರ ವೀರ್ಯನು ಕಾಶ್ಯ; ಬೃಹದಾರಣ್ಯಕ ಉಪನಿಷತ್ತಿನಲ್ಲಿ ಅಜಾತಶತ್ರು ಕಾಶಿಯ ರಾಜ (ಕಾಶ್ಯ). ಪಾಣಿನಿಯ ಕಾಲಕ್ಕೆ ಕಾಶಿಯೆಂಬುದು ಗಣವೊಂದರ ಪ್ರಧಾನ ಪ್ರದೇಶ. ಕಾಶೀ ಪ್ರಾಂತ್ಯದ ಮುಖ್ಯ ನಗರಿಯ ಹೆಸರನ್ನು ಮೊದಲು ಕಾಶಿಯೆಂದೇ ವ್ಯವಹರಿಸುತ್ತಿದ್ದರೆಂದೂ ಅನಂತರ ವಾರಾಣಸಿಯೆಂಬ ಹೆಸರು ಬಳಕೆಗೆ ಬಂದಿತೆಂದೂ ತಿಳಿದು ಬರುತ್ತದೆ. ಕ್ರಿಸ್ತಾಬ್ದ 400ರ ಸುಮಾರಿಗೆ ಭಾರತ ದೇಶಕ್ಕೆ ಬಂದಿದ್ದ ಚೀಣೀ ಯಾತ್ರಿಕ ಫಾಹಿಯಾನನು ಕಾಶೀ ಪ್ರಾಂತ್ಯದಲ್ಲಿದ್ದ ವಾರಾಣಸಿ ನಗರಕ್ಕೆ ಬಂದಿದ್ದನೆಂಬ ಉಲ್ಲೇಖವಿದೆ. ಅಶ್ವಘೋಷನ ಬುದ್ಧಚರಿತದಲ್ಲಿ ಕೂಡ ಕಾಶೀದೇಶ, ವಾರಾಣಸೀ ನಗರ (ಬು. ಚ. 15,101)ದ ಉಲ್ಲೇಖವಿದೆ.

ಪುರಾಣ ವಿವರಣೆ

ಮಹಾಭಾರತದಲ್ಲಿ ದಿವೋದಾಸನೆಂಬ ಕಾಶೀ ರಾಜನು ವಾರಾಣಸೀ ನಗರವನ್ನು ನಿರ್ಮಿಸಿದನೆಂಬ ಕಥೆ ಬರುತ್ತದೆ. (ಅನುಶಾಸನ ಪರ್ವ, 30). ಪತಂಜಲಿಯ ಕಾಲಕ್ಕೇ ವಾರಾಣಸಿಯೆಂಬ ಊರು ಗಂಗಾ ನದಿಯ ದಂಡೆಯ ಮೇಲೆ ಇದ್ದಿತು. ವರ್ತಕರು ಇದನ್ನು ಜಿತ್ವರಿ ಎಂದು ಕರೆಯುತ್ತಿದ್ದರಂತೆ. (ಮಹಾಭಾಷ್ಯ, ಪಾ. 4, 3, 84). ಕ್ರಿಸ್ತಪೂರ್ವ ಐದನೆಯ ಶತಮಾನದಲ್ಲಾಗಲೇ ವಾರಾಣಸಿಯು ಸುಪ್ರಸಿದ್ಧ ನಗರವಾಗಿದ್ದಿತು. ಗಯಾಶೀರ್ಷದಲ್ಲಿ ತನಗೆ ಸಂಬೋಧಿ ದೊರೆತರೂ ಬುದ್ಧನು ತನ್ನ ಪ್ರಥಮ ದೇಶನಕ್ಕೆ ಕಾಶಿಗೇ ಬಂದನು. ಬರುವ ದಾರಿಯಲ್ಲಿ ಉಪಕನೆಂಬ ಭಿಕ್ಷು ಕೇಳಿದ ಪ್ರಶ್ನೆಗೆ ಉತ್ತರವಾಗಿ 'ಗಚ್ಛಾಮಿ ಕಾಶಿಕಂ ಪುರಂ" ಎಂದು ಹೇಳುತ್ತಾನೆ. ಧರ್ಮಚಕ್ರಪ್ರವರ್ತನ ಸೂತ್ರದ ಸಂದರ್ಭ ಕಥನದಲ್ಲಿ 'ಭಗವಾ ವಾರಾಣಸಿಯಂ ವಿಹರತಿ ಇಸಿಪತನೇ ಮಿಗದಾಯೇ' ಎಂಬ ಮಾತು ಬರುತ್ತದೆ. ಮಹಾಪರಿನಿಬ್ಬಾಣಸುತ್ತದಲ್ಲಿ ವಾರಾಣಸಿಯು ಚಂಪಾ, ರಾಜಗೃಹ, ಶ್ರಾವಸ್ತಿ, ಸಾಕೇತ, ಕೌಶಾಂಬಿಗಳಂತೆಯೇ ಮಹಾನಗರ ಆಗಿದ್ದಿತೆಂಬ ವರ್ಣನೆಯಿದೆ. ಹಲವಾರು ಜಾತಕ ಕಥೆಗಳಲ್ಲಿ ವಾರಾಣಸಿಯ ರಾಜ ಬ್ರಹ್ಮದತ್ತನ ಪ್ರಸ್ತಾಪವಿದೆ.

ಪುರಾಣಗಳಲ್ಲಿ ಕಾಶಿಯ ಉಲ್ಲೇಖ ಉಜ್ವಲವಾಗಿ ಬರುತ್ತದೆ. ಮತ್ಸ್ಯ ಪುರಾಣ (180–185), ಸ್ಕಾಂದ ಪುರಾಣ (ಕಾಶೀಖಂಡ 6), ಪದ್ಮಪುರಾಣ (ಆದಿಖಂಡ, 33–37, 170), ಕೂರ್ಮ ಪುರಾಣ (1, 31–35), ಲಿಂಗ ಪುರಾಣ (ಪೂರ್ವಭಾಗ, 92, 190) ಮೊದಲಾಗಿ ಪುರಾಣಗಳಲ್ಲಿ ಕ್ಷೇತ್ರ ನಿರ್ದೇಶನವನ್ನೂ ಮಾಡಿದ್ದಾರೆ. ಪದ್ಮಪುರಾಣವು "ದಕ್ಷಿಣೋತ್ತರಯೋರ್ನದ್ಯೌ ವರಣಾಸಿಶ್ಚ ಪೂರ್ವತಃ, ಜಾಹ್ನವೀ ಪಶ್ಚಿಮೇ ಚಾಪಿ ಪಾಶಪಾಣಿರ್ಗಣೇಶ್ವರಃ" (ಪಾತಾಳಖಂಡ), ಎಂದರೆ ದಕ್ಷಿಣ ಮತ್ತು ಉತ್ತರಗಳಲ್ಲಿ ವರಣಾ ಮತ್ತು ಅಸೀ ನದಿಗಳೂ, ಪೂರ್ವದಲ್ಲಿ ಗಂಗಾ ನದಿಯೂ ಪಶ್ಚಿಮದಲ್ಲಿ ದೇಹಲಿ ಗಣೇಶನ ಗುಡಿ–ಇದು ಕಾಶೀ ಕ್ಷೇತ್ರವೆಂದು ಹೇಳುತ್ತದೆ.

ಪೂರ್ವಪಶ್ಚಿಮದಲ್ಲಿ ಎರಡೂವರೆ ಯೋಜನ ವಿಸ್ತೀರ್ಣ, ದಕ್ಷಿಣೋತ್ತರ ದಲ್ಲಿ ಅರ್ಧ ಯೋಜನ ವಿಸ್ತೀರ್ಣ ಎಂದು ಮತ್ಸ್ಯಪುರಾಣವು ಕ್ಷೇತ್ರದ ವಿಸ್ತಾರವನ್ನು ನಿರೂಪಿಸುತ್ತದೆ (184, 50–52). ಪದ್ಮಪುರಾಣದ ಪಾತಾಳ ಖಂಡದಲ್ಲೇ ಮಧ್ಯಮೇಶ್ವರ ಲಿಂಗದಿಂದ ಆರಂಭಿಸಿ ದೇಹಲಿ ವಿಘ್ನೇಶ್ವರನವರೆಗೆ ದಾರವನ್ನು ಕಟ್ಟಿ ಆ ದಿಕ್ಕಿನಲ್ಲಿ ಮಂಡಲಾಕೃತಿಯಿಂದ ತಿರುಗಿದರೆ ಆ ಪ್ರದೇಶ ವೆಲ್ಲವೂ ಕಾಶಿಯೆಂಬ ವರ್ಣನೆ ಇದೆ. (ಮಧ್ಯಮೇಶ್ವರಮಾರಭ್ಯ ಯಾವದ್ದೇಹಲಿ ವಿಘ್ನಪಂ। ಸೂತ್ರಂ ಸಂಸ್ಥಾಪ್ಯ ತದ್ದಿಕ್ಷು ಭ್ರಾಮಯೇನ್ಮಂಡಲಾಕೃತಿ। ತತ್ರ ಯಾ ಜಾಯತೇ ರೇಖಾ ತನ್ಮಧ್ಯೇ ಕ್ಷೇತ್ರಮುತ್ತಮಂ)

ಕಾಶೀ ಖಂಡವು ಅವಿಮುಕ್ತ ಕ್ಷೇತ್ರ ಎಂಬುದು ಪಂಚಕ್ರೋಶ ಪರಿಮಿತ ವೆಂದು ಹೇಳುತ್ತದೆ (26, 31). ಕಾಶೀ ಕ್ಷೇತ್ರದಲ್ಲಿಯೂ ಅತಿ ಪುಣ್ಯ ಪ್ರದೇಶ ವೆಂದರೆ ಪಶ್ಚಿಮದಲ್ಲಿ ಗೋಕರ್ಣೇಶ್ವರನಿಂದ ಹಿಡಿದು ಪೂರ್ವದಲ್ಲಿ ಗಂಗಾ ನದಿಯ ಮಧ್ಯದವರೆಗೆ, ಉತ್ತರದಲ್ಲಿ ಭಾರಭೂತದಿಂದ ಹಿಡಿದು ದಕ್ಷಿಣದಲ್ಲಿ ಬ್ರಹ್ಮೇಶ್ವರ ಸ್ಥಾನದವರೆಗೆ ಎಂದು ಪದ್ಮಪುರಾಣದ ನಿರೂಪಣೆ. ಇದನ್ನೇ ಅವಿಮುಕ್ತವೆಂದು ಕಾಶೀ ಖಂಡವು ವ್ಯವಹರಿಸುತ್ತದೆ. ಏಳನೇ ಶತಮಾನದಲ್ಲಿ ಇಲ್ಲಿಗೆ ಬಂದಿದ್ದ ಯುವಾನ್‌ಛ್ವಾಂಗನು ಕಾಶೀ ಕ್ಷೇತ ದ ವಿಸ್ತಾರವನ್ನು ಹೇಳುತ್ತ ಹದಿನೆಂಟು ಲಿ (ಎಂದರೆ ಸುಮಾರು ಮೂರೂವರೆ ಮೈಲಿ) ಉದ್ದ, ಐದು ಆರು ಲಿ (ಎಂದರೆ ಒಂದು ಮೈಲಿಗಿಂತ ಸ್ವಲ್ಪ ಹೆಚ್ಚು) ಅಗಲವೆಂದು ನಿರೂಪಿಸಿದ್ದಾನೆ. ಎಂದರೆ

ವರಣಾ ನದಿ ಉತ್ತರದಲ್ಲಿ, ಅಸಿ ನದಿ ದಕ್ಷಿಣದಲ್ಲಿ; ದೇಹಲಿ ಗಣೇಶ ಪಶ್ಚಿಮದಲ್ಲಿ, ಗಂಗಾ ನದಿ ಪೂರ್ವದಲ್ಲಿ ಇದ್ದು ನಡುವಣ ಪ್ರದೇಶವೇ ಕಾಶೀ ಕ್ಷೇತ್ರ.

ಪಾಪ ವಿನಾಶಿನ ಕ್ಷೇತ್ರ

ಎಲ್ಲ ಪುರಾಣಗಳೂ ಕಾಶೀ ಕ್ಷೇತ್ರದ ಮಾಹಾತ್ಮ್ಯೆಯನ್ನು ಹೇಳುತ್ತವೆ. 'ಜನ್ಮಾಂತರ ಸಹಸ್ರೇಣ ಯತ್ಪಾಪಂ ಪೂರ್ವ ಸಂಚಿತಂ; ಅವಿಮುಕ್ತಂ ಪ್ರವಿಷ್ಟಸ್ಯ ತತ್ ಸರ್ವಂ ವ್ರಜತಿ ಕ್ಷಯಂ' ಎನ್ನುತ್ತದೆ ಮತ್ಸ್ಯಪುರಾಣ. ಶಿವನೇ, 'ಇದಂ ಗುಹ್ಯತಮಂ ಕ್ಷೇತ್ರಂ ಸದಾ ವಾರಾಣಸೀ ಮಮ; ಸರ್ವೇಷಾಮೇವ ಭೂತಾನಾಂ ಹೇತುರ್ಮೋಕ್ಷಸ್ಯ ಸರ್ವದಾ' ಎಂದು ಹೇಳಿದಂತೆ ಪುರಾಣ ಉಲ್ಲೇಖಿಸುತ್ತದೆ (ಮತ್ಸ್ಯ, 180, 47). ಅತ್ಯಲ್ಪ ಆಯಾಸದಿಂದಲೇ ಇಲ್ಲಿ ಮೋಕ್ಷಪ್ರಾಪ್ತಿ ಆಗುವುದು ಈ ಕ್ಷೇತ್ರದ ವೈಶಿಷ್ಟ್ಯ ಎಂದು ಲಿಂಗಪುರಾಣ (ಪೂರ್ವಾರ್ಧ, 92, 48) ಹೇಳುತ್ತದೆ. ಇಲ್ಲಿ ಸತ್ತವರು ಸಂಸಾರದಲ್ಲಿ ಮತ್ತೆ ಬರುವುದಿಲ್ಲವೆಂಬ ಆಶ್ವಾಸನೆಯೂ ಪುರಾಣದಲ್ಲಿ ದೊರೆಯುತ್ತದೆ. ಯೋಗವಿಲ್ಲದೆ ಲೋಕದಲ್ಲಿ ಮೋಕ್ಷ ದೊರೆಯದು, ಆದರೆ ಅವಿಮುಕ್ತ ಕ್ಷೇತ್ರದಲ್ಲಿ ಇರುವವನಿಗೆ ಯೋಗವೂ ಮೋಕ್ಷವೂ ದೊರೆಯುವುವು ಎಂದು ಮತ್ಸ್ಯ ಪುರಾಣದ ವಾದ (ನಹಿ ಯೋಗಾದೃತೇ ಮೋಕ್ಷಃ ಪ್ರಾಪ್ಯತೇ ಭುವಿ ಮಾನವೈಃ; ಅವಿಮುಕ್ತೇ ನಿವಸತಾಂ ಯೋಗೋ ಮೋಕ್ಷಶ್ಚ ಸಿದ್ಧ್ಯತಿ).

ಬೇರೆಡೆ ಮಾಡಿದ ಪಾಪವು ಕಾಶಿಗೆ ಬಂದರೆ ಪರಿಹಾರವಾಗುವುದೆಂದು ಪುರಾಣವು ಒಪ್ಪಿದರೂ ಕಾಶಿಯಲ್ಲೇ ಇದ್ದು ಮಾಡಿದ ಪಾಪ ದಾರುಣವಾಗುವುದೆಂದು ಹೆದರಿಸುತ್ತದೆ. (ಅನ್ಯತ್ರ ವಿಹಿತಂ ಪಾಪಂ ನಶ್ಯೇತ್ ಕಾಶೀ ನಿರೀಕ್ಷಣಾತ್, ಕಾಶ್ಯಾಂ ಕೃತಾನಾಂ ಪಾಪಾನಾಂ ದಾರುಣೇಯಂ ತು ಯಾತನಾ). ಇನ್ನೊಂದೆಡೆ ಕಾಶಿಯಲ್ಲಿ ಮಾಡಿದ ಪಾಪದಿಂದ ಮನುಷ್ಯನು ಪಿಶಾಚನಾಗುವನೆಂದು ಹೇಳಿದೆ (ಕಾಶ್ಯಾಂ ತು ಯತ್ಕೃತಂ ಪಾಪಂ ತತ್ ಪೈಶಾಚ ಪದಪ್ರದಂ). ಮೂವತ್ತು ಸಾವಿರ ವರ್ಷಗಳವರೆಗೆ ಈ ಪಿಶಾಚಸ್ಥಿತಿ ಇರುವುದಂತೆ! ಅನಂತರ ಮತ್ತೆ ಕಾಶಿಗೇ ಬಂದು ಮುಕ್ತನಾಗಬೇಕಂತೆ. ಕಾಶಿಯಲ್ಲಿ ಮಾಡಿದ ಪಾಪಗಳಿಗೆ ಕಾಲ ಭೈರವನೇ ಶಿಕ್ಷೆ ವಿಧಿಸುತ್ತಾನೆಂಬ ನಂಬಿಕೆಯೂ ಇದೆ. ಈ ಮುಂತಾದ ನಂಬಿಕೆ

ಗಳಿಂದ ಕಾಶೀ ಕ್ಷೇತ್ರವು ಹಿಂದೂ ಜನರಿಗೆ ಅತ್ಯಂತ ಮಹತ್ವದ ಪುಣ್ಯಕ್ಷೇತ್ರ ವಾಗಿದೆ.

ಅನಾರ್ಯರ ಕ್ಷೇತ್ರ ?

ಕಾಶಿಯೂ ಅಲ್ಲಿನ ದೇವತೆಯಾದ ಮಹಾದೇವನು ಮೊದಲಿಗೆ ಪ್ರಾಚೀನ ರಾದ ಅನಾರ್ಯರ ಕ್ಷೇತ್ರ-ದೇವನಾಗಿದ್ದನೆಂದೂ, ಆರ್ಯರು ಭಾರತಕ್ಕೆ ಬಂದು ಗಂಗಾ ನದಿಯ ದಂಡೆಯ ಮೇಲೆ ಬೀಡುಬಿಟ್ಟಂದು ಕಾಶಿಯ ಮಾಹಾತ್ಮ್ಯೆಯನ್ನು ಅವರೂ ಪುರಸ್ಕರಿಸಿದರೆಂದೂ ಒಂದು ವಾದವಿದೆ (ಎ. ಎಸ್. ಅಲ್ತೇಕರ್ ಅವರ 'ವಾರಾಣಸೀಇತಿಹಾಸ'). ಇದರ ತಥ್ಯಾಂಶವನ್ನು ನಿರ್ಧರಿಸುವುದು ಕಷ್ಟ. ವೇದಬ್ರಾಹ್ಮಣಗಳ ಕಾಲಕ್ಕೆ ಕಾಶಿಯು ವಿಖ್ಯಾತವಾದ ಜಾನಪದವಾಗಿದ್ದಿತಾದರೂ ಅಲ್ಲಿ ವಿಶ್ವೇಶ್ವರನ ಪ್ರಸ್ತಾಪ ಬರುವುದಿಲ್ಲ. ಬೌದ್ಧ ಗ್ರಂಥಗಳಲ್ಲಾಗಲೀ, ಇತಿಹಾಸದಲ್ಲಾಗಲೀ ವಿಶ್ವೇಶ್ವರನ ಉಲ್ಲೇಖವಿಲ್ಲ. ಕ್ಷೇತ್ರದ ಪ್ರಶಸ್ತಿಯೇನೋ ಪ್ರಾಚೀನವಾದುದು; ಆದರೆ ಅಲ್ಲಿನ ದೈವಸಾನ್ನಿಧ್ಯ ಪೌರಾಣಿಕ ಯುಗದಿಂದೀಚೆಗೆ ಬಂದದ್ದು ಎಂಬುದು ಸ್ಪಷ್ಟವಾಗುತ್ತದೆ. ಕಾಶಿಯೇ ಪವಿತ್ರವಾದದ್ದು; ಹೆಜ್ಜೆ ಹೆಜ್ಜೆಗೂ ಅಲ್ಲಿ ತೀರ್ಥಗಳುಂಟು, ಲಿಂಗವಿಲ್ಲದ ಎಳ್ಳಷ್ಟು ಜಾಗವೂ ಅಲ್ಲಿಲ್ಲ. (ತಿಲಾಂತರಾಪಿ ನೋ ಕಾಶ್ಯಾಂ ಭೂಮಿರ್ಲಿಂಗಂ ವಿನಾ ಕ್ವಚಿತ್) ಎಂಬುವ ಶ್ರದ್ಧೆ ಇದಕ್ಕೆ ಪೂರಕವಾಗಿದೆ. ಯುವಾನ್ ಛ್ವಾಂಗನು ವಿಶ್ವೇಶ್ವರನ ಲಿಂಗವನ್ನು ಪ್ರಸ್ತಾಪ ಮಾಡಿಲ್ಲ. ಕಾಶಿಯಲ್ಲಿ ನೂರು ದೇವಾಲಯಗಳಿದ್ದುವೆಂದೂ, ನೂರಡಿ ಎತ್ತರದ ದೇವ-ಮಹೇಶ್ವರನ ತಾಮ್ರದ ವಿಗ್ರಹವಿದ್ದಿತೆಂದೂ ಬರೆದಿದ್ದಾನೆ.

ಈ ಕಾಲಕ್ಕೆ ವಿಶ್ವನಾಥ ಮಂದಿರವೇ ಕಾಶಿಯ ಕೇಂದ್ರಸ್ಥಳವಾದರೂ ಯಾತ್ರಾಕ್ರಮದಲ್ಲಿ ದಶಾಶ್ವಮೇಧ, ಲೋಲಾರ್ಕ (ಸೂರ್ಯ ಮಂದಿರ), ಕೇಶವ, ಬಿಂದುಮಾಧವ ಮತ್ತು ಮಣಿಕರ್ಣಿಕೆ ಈ ಪಂಚತೀರ್ಥಗಳನ್ನು ಸಂದರ್ಶನ ಮಾಡಲೇಬೇಕೆಂಬ ನಿಯಮವಿದೆ. ಈಗಲೂ ಕಾಶಿಗೆ ಹೋದ ಯಾತ್ರಿಕರು ಈ ಪಂಚತೀರ್ಥಗಳನ್ನು ನೋಡಿಯೇ ಬರುತ್ತಾರೆ. ಗಂಗಾ-ಅಸೀ ಸಂಗಮ, ದಶಾಶ್ವಮೇಧ ಘಟ್ಟ, ಮಣಿಕರ್ಣಿಕಾ, ಪಂಚಗಂಗಾ ಘಟ್ಟ, ವರಣಾ-ಗಂಗಾ ಸಂಗಮ. ದಶಾಶ್ವಮೇಧವು 'ಸರ್ವತೀರ್ಥ ನಿಷೇವಿತ'ವೆಂದೂ, ಪಂಚನದವು

(ಪಂಚ ಗಂಗಾ ಘಟ್ಟ) 'ಸ್ನಾನಮಾತ್ರಾದಘೌಘಹೃತ್' ಎಂದೂ, ಮಣಿಕರ್ಣಿಕೆಯು 'ಮನೋವಯವಶುದ್ಧಿದ'ವೆಂದೂ ಪುರಾಣದ ವರ್ಣನೆ.

ಗಂಗಾ ಕ್ಷೇತ್ರ

ಕಾಶೀಕ್ಷೇತ್ರದಲ್ಲಿ ಗಂಗೆಯ ಪಾವಿತ್ರ್ಯದ ಕಲ್ಪನೆಯೂ ಪ್ರಾಚೀನವಾದುದು. ಕಾಶಿಯ ಪಕ್ಕದಲ್ಲಿ ಹರಿಯುವ ಗಂಗೆಯು ಉತ್ತರ ದಿಕ್ಕಿಗೆ, ಎಂದರೆ ಹಿಮಾಲಯದ ಕಡೆ, ತಿರುಗಿಕೊಳ್ಳುವುದೆಂಬ ಕಾರಣದಿಂದ ಗಂಗೆ ಇಲ್ಲಿ ಪವಿತ್ರವೆಂದು ಹೇಳುತ್ತಾರೆ. ಈ ತಿರುಗುವ ಸ್ಥಳ ಈಗ ಕಪಾಲಮೋಚನ ಘಟ್ಟವೆನಿಸಿಕೊಳ್ಳುತ್ತದೆ. ಕ್ರಿಸ್ತಾಬ್ದ ಮೊದಲ ಶತಮಾನಗಳಲ್ಲೇ ಭಾರಶಿವರಾಜರು ಇಲ್ಲಿ ದಶಾಶ್ವಮೇಧಗಳನ್ನು ಪೂರೈಸಿ ಗಂಗೆಯ ನೀರಿನಿಂದ ಅಭಿಷಿಕ್ತರಾಗಿ ರಾಜರಾದವರೆಂದು ವಾಕಾಟಕ ಶಾಸನ ತಿಳಿಸುತ್ತದೆ (ಪರಾಕ್ರಮಾಧಿಗತ – ಭಾಗೀರಥ್ಯಮಲಜಲ ಮೂರ್ಧಾಭಿಷಿಕ್ತಾನಾಂ ದಶಾಶ್ವಮೇಧಾವಭೃತಸ್ನಾನಾನಾಂ ಭಾರಶಿವಾನಾಂ...). ಈಗಿನ ದಶಾಶ್ವಮೇಧ ಘಾಟಿಗೆ ಮೊದಲು ರುದ್ರಸರಸ್ಸೆಂದು ಹೆಸರಿದ್ದಿತೆಂದೂ ಬ್ರಹ್ಮನು ಇಲ್ಲಿ ಹತ್ತು ಅಶ್ವಮೇಧ ಯಾಗಗಳನ್ನು ಮಾಡಿದ ನಂತರ ಇದು ದಶಾಶ್ವಮೇಧವೆನಿಸಿಕೊಂಡಿತೆಂದು ಕಾಶೀಖಂಡದ ವಿವರಣೆ. ಗಂಗೆಯ ಈ ಮಡುವು ತುಂಬ ಪ್ರಾಚೀನ ಕಾಲದಿಂದ ಪ್ರಖ್ಯಾತವಾದುದು.

ಹಾಗೆಯೇ ಮಣಿಕರ್ಣಿಕೆ ; ಇದು ಮುಕ್ತಿ ಕ್ಷೇತ್ರವಂತೆ. ಸಂಸಾರ ಚಿಂತಾಮಣಿಯಾದ ಶಿವನು ಈ ಸ್ಥಳದಲ್ಲಿ ಸಜ್ಜನರ ಕಿವಿಯಲ್ಲಿ ತಾರಕ ಮಂತ್ರೋಪದೇಶ ಮಾಡುತ್ತಾನೆಂದು ಇದು ಮಣಿಕರ್ಣಿಕೆಯೆಂದು ಕಾಶೀಖಂಡ ಹೇಳುತ್ತದೆ. (ಸಂಸಾರ ಚಿಂತಾಮಣಿರತ್ರ ಯಸ್ಮಾತ್ ತಂ ತಾರಕಂ ಸಜ್ಜನ ಕರ್ಣಿಕಾಯಾಂ, ಶಿವೋಽಭಿಧತ್ತೇ ಸಹಸಾಂತಕಾಲೇ ತದ್ಗೀಯತೇಽಸೌ ಮಣಿಕರ್ಣಿಕೇತಿ. ಮುಕ್ತಿ ಲಕ್ಷ್ಮೀ ಮಹಾಪೀಠ ಮಣಿಃ ತಚ್ಚರಣಾಬ್ಜಯೋಃ ಕರ್ಣಿಕೇಯಂ ತತಃ ಪ್ರಾಹುಃ ಯಾಂ ಜನಾ ಮಣಿಕರ್ಣಿಕಾಂ). ಕರ್ಣಿಕೆಯೆಂದರೆ ಮುಕ್ತಿ ಕ್ಷೇತ್ರ. ಅಂಥ ಮುಕ್ತಿ ಕ್ಷೇತ್ರಗಳಲ್ಲಿ ಇದು ಮಣಿ (ಶ್ರೇಷ್ಠ)ಯೆಂದು ಮಣಿಕರ್ಣಿಕೆಯನ್ನು 'ಮಣಿಶ್ಚಾಸೌ ಕರ್ಣಿಕಾ ಚ' ಎಂದು ಬಿಡಿಸುತ್ತಾರೆ. ಮಣಿಕರ್ಣಿಕಾ ಸರಸ್ಸಿನಲ್ಲಿ ಸ್ನಾನ ಮಾಡುವಾಗ 'ಓಂ ಐಂ ಹ್ರೀಂ ಶ್ರೀಂ ಕ್ಲೀಂ ಓಂ ಮಂ ಮಣಿ

ಕರ್ಣಿಕೇ ನಮಃ ಓಂ’ ಎಂಬ ಮಂತ್ರವನ್ನು ಹೇಳುವ ನಿಯಮವಿದೆ.

ಈ ಮಣಿಕರ್ಣಿಕಾ ಸರಸ್ಸಿನ ಪಕ್ಕದಲ್ಲಿ ತಾರಕೇಶ್ವರನ ದೇವಾಲಯವಿದೆ. ಸಾಯುವ ಮನುಷ್ಯನ ಕಿವಿಯಲ್ಲಿ ಇಲ್ಲಿಯೇ ಶಿವನು ತಾರಕಮಂತ್ರೋಪದೇಶ ಮಾಡುತ್ತಾನೆಂಬ ಕಲ್ಪನೆಯಿದೆ. ಪಂಚಗಂಗಾ ಘಟ್ಟದಲ್ಲಿ ಕಿರಣಾ, ಧೂತಪಾಪಾ, ಸರಸ್ವತೀ ಗಂಗಾ ಮತ್ತು ಯಮುನಾ ಈ ಐ[illegible] ನದಿಗಳು ಸೇರುವುವೆಂದೂ ಇದಕ್ಕಾಗಿ ಈ ಪ್ರದೇಶಕ್ಕೆ ಪಂಚನದವೆಂಬ ಹೆಸರೂ ಬಂದಿತೆಂದೂ ನಾರದ ಪುರಾಣ ಹೇಳುತ್ತದೆ. ಇಲ್ಲಿ ಸ್ನಾನ ಮಾಡಿದರೆ ಎಲ್ಲ ಪಾಪಗಳೂ ಹೋಗುವು ವೆಂದೂ, ಸಂಸಾರವನ್ನು ಕಡಿದು ಮನುಷ್ಯನು ಹೋಗುವನೆಂದೂ ಇದರ ಪ್ರಶಸ್ತಿ (ಸ್ನಾನಮಾತ್ರಾನ್ನರೋ ಯಾತಿ ಭಿತ್ತ್ವಾ ಬ್ರಹ್ಮಾಂಡ ಮಂಡಪಂ). ಇದನ್ನೇ ಕೃತಯುಗದಲ್ಲಿ ಧರ್ಮನಂದವೆಂದೂ, ತ್ರೇತಾಯುಗದಲ್ಲಿ ಧೂತಪಾಪಕ ವೆಂದೂ, ದ್ವಾಪರದಲ್ಲಿ ಬಿಂದುತೀರ್ಥವೆಂದೂ, ಕಲಿಯುಗದಲ್ಲಿ ಪಂಚನದ ವೆಂದೂ ಕರೆದಿದ್ದಾರಂತೆ. ವರಣಾ-ಗಂಗಾ ಸಂಗಮ ಸ್ಥಳವೂ ಪ್ರಾಚೀನವಾದ ಘಟ್ಟ. ಇದನ್ನು ಮೊದಲಿಗೆ ಆದೀಕೇಶವ ಘಾಟೆಂದು ವ್ಯವಹರಿಸುತ್ತಿದ್ದಂತೆ ತಿಳಿದುಬರುತ್ತದೆ. ಕನ್ಯಾಕುಬ್ಜದ ಗಾಹಡ್ವಾಲಾ ಅರಸರು ಈ ಘಟ್ಟವನ್ನು ತುಂಬ ಅಕ್ಕರೆಯಿಂದ ಕಾಣುತ್ತಿದ್ದರು. ಇವರು ಇಲ್ಲಿ ಮಾಡಿದ ಸೇವೆ, ದಾನ ಗಳನ್ನು ತಿಳಿಸುವ ತಾಮ್ರ ಶಾಸನಗಳಿವೆ.

ಮಣಿಕರ್ಣಿಕೆಯೇ ಮಧ್ಯವಾಗಿ ಕಾಶಿಯ ಸುತ್ತಲೂ ಅರ್ಧ ವೃತ್ತ ಆಕಾರ ದಲ್ಲಿ ಹೋಗುವ ದಾರಿ ಪಂಚಕ್ರೋಶಿಯೆಂದು ಪ್ರಸಿದ್ಧವಾಗಿದೆ. ಈ ರಸ್ತೆ ಐವತ್ತು ಮೈಲಿಗಳಷ್ಟು ಉದ್ದವಿದ್ದು, ಇಕ್ಕೆಲಗಳಲ್ಲಿ ನೂರಾರು ಗುಡಿಗಳಿವೆ. ಯಾತ್ರಿಕರು ಈ ರಸ್ತೆಯಲ್ಲಿ ನಡೆದರೇ ಪುಣ್ಯ ಪಡೆಯುತ್ತಾರೆಂಬ ಶ್ರದ್ಧೆಯಿದೆ. ಮಣಿಕರ್ಣಿಕಾ ಘಟ್ಟದಿಂದ ಹೊರಟು ಗಂಗಾ ನದಿಯ ಪಕ್ಕದಲ್ಲೇ ನಡೆದು ಅಸಿ-ಗಂಗಾ ಸಂಗಮವನ್ನು ದಾಟಿದರೆ ಆರು ಮೈಲಿ ದೂರದಲ್ಲಿ ಖಾಂಡವ ಗ್ರಾಮ ವಿದೆ ; ಅಲ್ಲಿಂದ ಎಂಟು-ಒಂಬತ್ತು ಮೈಲಿ ದೂರದಲ್ಲಿ ಧೂಪ ಚಂಡಿಯ ಮಂದಿರ ವಿದೆ. ಅಲ್ಲಿಗೆ ಹದಿನಾಲ್ಕು ಮೈಲಿಗಳಾಚೆ ರಾಮೇಶ್ವರ ಗ್ರಾಮ ; ಅಲ್ಲಿಂದ ಎಂಟು ಮೈಲಿಗಳ ದೂರ ನಡೆದರೆ ಶಿವಪುರ. ಇಲ್ಲಿಗೆ ಆರು ಮೈಲಿಗಳ ದೂರದಲ್ಲಿ ರುವ ಕಪಿಲಧಾರಾ ಕ್ಷೇತ್ರದಲ್ಲಿ ಯಾತ್ರಿಕರು ಪಿತೃಗಳಿಗೆ ತರ್ಪಣ ಕೊಡುತ್ತಾರೆ.

ಕಪಿಲ ಧಾರೆಯಿಂದ ವರಣಾ ಸಂಗಮದ ಕಡೆಗೆ ತಿರುಗಿ ಮಣಿಕರ್ಣಿಕೆಗೆ ಮರಳಿ ಬರಲು ಆರು ಮೈಲಿ ದೂರ ನಡೆಯಬೇಕು. ಈ ಪಂಚಕ್ರೋಶೀ ಯಾತ್ರೆಯನ್ನು ಮುಗಿಸಿದೊಡನೆ ಸಾಕ್ಷೀ ವಿನಾಯಕನ ಮಂದಿರಕ್ಕೆ ಹೋಗಿ ಬರುವ ಪದ್ಧತಿಯಿದೆ.

ದೇವಾಲಯಗಳ ನಗರ

ಜ್ಞಾನವಾಪಿ. ದುರ್ಗಾಮಂದಿರ, ಕಾಲಭೈರವ ದೇವಾಲಯ, ಷಟ್ ಪಂಚಾಶತ್ (56)ಗಣಪತಿಗಳ, ತತ್ರಾಪಿ ಡುಂಢೀ ಗಣೇಶನ ಮಂದಿರ ಮುಂತಾದುವು ಕಾಶಿಯಲ್ಲಿ ಪುಣ್ಯ ಸ್ಥಳಗಳೆಂದು ಪ್ರಸಿದ್ಧವಾಗಿವೆ. ಗಂಗೆಯು ಉತ್ತರ ದಿಕ್ಕಿಗೆ ತಿರುಗುವಲ್ಲಿ ಕಪಾಲಮೋಚನೇಶ್ವರ ಮಂದಿರವಿದೆ ; ಕಪಾಲಮೋಚನ ಘಟ್ಟವೆಂಬುದು ತುಂಬ ಹಿಂದಿನ ಕಾಲದಿಂದ ಪ್ರಸಿದ್ದವಾದದ್ದು. ಈ ಕಾಲದಲ್ಲಿ ಸಾರನಾಥ (ಸಾರಂಗನಾಥ) ವೆಂಬುದು ಬೌದ್ಧರ ಯಾತ್ರಾಸ್ಥಳವಾಗಿದೆ. ಇಲ್ಲಿನ ಮೃಗದಾವದ ಋಷಿಪತನದಲ್ಲಿಯೇ ಬುದ್ಧನು ಪಂಚವರ್ಗೀಯ ಭಿಕ್ಷುಗಳಿಗೆ ಧರ್ಮಚಕ್ರ ಪ್ರವರ್ತನಸೂತ್ರವನ್ನು ಬೋಧಿಸಿದನು. ಅಶೋಕಮೌರ್ಯನು ಇಲ್ಲಿಗೆ ಬಂದು ಈ ಸ್ಥಳದಲ್ಲಿ ಧರ್ಮಚಕ್ರ ಸ್ತೂಪ (ಧಾಮೇಕ್ ಸ್ತೂಪ) ವನ್ನು ಕಟ್ಟಿಸಿದನು.

ಕಾಶಿಯಲ್ಲಿ ಸಾವಿರಾರು ದೇವಾಲಯಗಳಿದ್ದುವು. ಯುವಾನ್ ಛ್ವಾಂಗನು ಇಲ್ಲಿಗೆ ಬಂದಾಗಲೇ ನೂರು ದೇವಾಲಯಗಳಿದ್ದುವಂತೆ. 1194ರಲ್ಲಿ ಕುತುಬ್ ದೀನ್ ಐಬಕ್ಕನು ಇಲ್ಲಿ ಒಂದು ಸಾವಿರಕ್ಕೆ ಮೀರಿ ದೇವಾಲಯಗಳನ್ನು ನಾಶ ಮಾಡಿದನೆಂದು ಉಲ್ಲೇಖವಿದೆ. ಅಲಾವುದೀನ್ ಖಿಲ್ಜಿಯು ಕಾಶಿಯಲ್ಲಿ ಮತ್ತೊಂದು ಸಾವಿರ ದೇವಾಲಯಗಳನ್ನು ಒಡೆದು ಹಾಕಿಸಿದನು. ಆದರೆ ಮತ್ತೆ ಮತ್ತೆ ದೇವಾಲಯಗಳು ಮೂಡಿಕೊಳ್ಳುತ್ತ ಬಂದಿವೆ. ಈಗ ಕಾಶಿಯಲ್ಲಿ ಒಟ್ಟು 1500 ಪ್ರಮುಖ ದೇವಾಲಯಗಳೇ ಇವೆಯೆಂದೂ, ಸಣ್ಣ ಗುಡಿಗಳಿಗೆ ಲೆಕ್ಕವಿಲ್ಲವೆಂದೂ ಹ್ಯಾವೆಲ್ ಬರೆದಿದ್ದಾನೆ. ಜನಗಳ ಆಸ್ಥೆ ಅಷ್ಟು ಪ್ರಬಲವಾಗಿದೆ. ಈ ದೇವಾಲಯಗಳಲ್ಲೆಲ್ಲ ಮುಖ್ಯವಾದುವು ವಿಶ್ವನಾಥ ಮಂದಿರ ಮತ್ತು ಅನ್ನಪೂರ್ಣಾ ದೇವಾಲಯ.

ಕಾಶಿಯ ಅಭಿಮಾನ ದೇವತೆ ವಿಶ್ವನಾಥ; ಕ್ಷೇತ್ರಪಾಲ ಕಾಲಭೈರವ.

ವಿಶ್ವನಾಥನ ಶಕ್ತಿ ಅನ್ನಪೂರ್ಣೇಶ್ವರಿ. ವಿಶ್ವನಾಥನ ಜ್ಯೋತಿರ್ಲಿಂಗವು ಎಂದೂ ಈಗಿರುವ ಸ್ಥಳದಲ್ಲೇ ಇದ್ದಿತೆನ್ನಲಾಗದು. ಹಲವಾರು ಬಾರಿ ಶತ್ರುಗಳ, ಮ್ಲೇಚ್ಛರ ಹಾವಳಿಯಿಂದ ತಪ್ಪಿಸಲು ಅದನ್ನು ಗುಪ್ತವಾದ ಸ್ಥಳಗಳಿಗೆ ಸಾಗಿಸಿ, ಧಾಳಿಯ ಭೀತಿ ಮರೆಯಾದಂದು ಮತ್ತೆ ಅಲ್ಲಿ ಪ್ರತಿಷ್ಠೆ ಮಾಡಿದ್ದಾರೆ. ಸ್ಥಳದಲ್ಲಿ ವಿಶ್ವನಾಥ ಲಿಂಗವು ಕಾಣದಿದ್ದಾಗಲೂ ಯಾತ್ರಿಕರು ಬಂದು ಸ್ಥಳಕ್ಕೇ ಪ್ರದಕ್ಷಿಣೆ ನಮಸ್ಕಾರಗಳನ್ನು ಮಾಡುತ್ತಿದ್ದರು. ತ್ರಿಸ್ಥಲೀ ಸೇತುವಿನಲ್ಲಿ "ಯದಾಪಿ ಮ್ಲೇಚ್ಛಾದಿ ದುಷ್ಟರಾಜವಶಾತ್ ತಸ್ಮಿನ್ ಸ್ಥಾನೇ ಕಿಂಚಿದಪಿ ಲಿಂಗಂ ಕದಾಚಿನ್ನ ಸ್ಯಾತ್ ತದಾಪಿ ಪ್ರದಕ್ಷಿಣ ನಮಸ್ಕಾರಾದ್ಯಾಃ ಸ್ಥಾನಧರ್ಮಾ ಭವನ್ತ್ಯೇವ; ತಾವತೇವ ಚ ನಿತ್ಯ ಯಾತ್ರಾ ಸಿದ್ಧಿಃ" ಎಂದು ನಿರ್ಣಯ ಹೇಳಿದ್ದಾರೆ.

ಮುಸ್ಲಿಮರ ದಾಳಿ

1194ರಲ್ಲೇ ಕುತುಬ್ ದೀನ್ ಐಬಕ್ ವಿಶ್ವನಾಥಾಲಯವನ್ನು ಮುತ್ತಿದಾಗ ಅರ್ಚಕರು ಲಿಂಗವನ್ನು ಗುಟ್ಟಾಗಿ ಬೇರೆಡೆ ಸಾಗಿಸಿ ಮತ್ತೊಂದು ಕೃತಕ ಲಿಂಗವನ್ನು ಅಲ್ಲಿಟ್ಟರು. 1585ರ ಸುಮಾರಿಗೆ ರಾಜಾ ತೋಡರ ಮಲ್ಲನ ನೆರವನ್ನು ಪಡೆದು ನಾರಾಯಣ ಭಟ್ಟನೆಂಬ ಶ್ರದ್ಧಾಳುವು ವಿಶ್ವನಾಥ ಮಂದಿರವನ್ನು ಮತ್ತೆ ಕಟ್ಟಿಸಿ ವಿಶ್ವನಾಥ ಲಿಂಗವನ್ನು ತರಿಸಿ ಪುನಃ ಪ್ರತಿಷ್ಠೆ ಮಾಡಿಸಿದನು. ಮತ್ತೆ ಮುಸಲ್ಮಾನರ ಆತಂಕವು ತಲೆದೋರಿ ವಿಶ್ವನಾಥಲಿಂಗವನ್ನು ಅರ್ಚಕರು ಬೇರೆಡೆ ಸಾಗಿಸಿದರು. ದೇವಾಲಯವನ್ನು ದಾಳಿ ಮಾಡಿದ ಮುಸಲ್ಮಾನರು ಕೃತಕವಾದ ಲಿಂಗವೊಂದನ್ನು ಒಡೆದು ಸಮಾಧಾನಗೊಂಡರು. 1669ರಲ್ಲಿ ದಿಲ್ಲಿ ಸುಲ್ತಾನನೇ ವಾರಾಣಸಿಯ ವಿಶ್ವನಾಥ ಮಂದಿರವನ್ನು ನಾಶ ಮಾಡಲು ಅಪ್ಪಣೆ ಮಾಡಿದನು.

ಅವರಂಗಜೇಬನ ಕಾಲಕ್ಕೆ ಕಾಶಿಗೆ ತುಂಬ ಕಷ್ಟ ಸ್ಥಿತಿಯು ಬಂದಿತು. ಅವರಂಗಜೇಬನು ಸ್ವತಃ ಕಾಶಿಗೆ ಬಂದು ವಿಶ್ವನಾಥ ಮಂದಿರವನ್ನು ನೆಲಸಮ ಮಾಡಿಸಿ ಆ ಸ್ಥಳದಲ್ಲಿ ಮಸೀದಿಯೊಂದನ್ನು ಕಟ್ಟಿಸಿದನು. ಆ ಮಸೀದಿ ಇಂದಿಗೂ ಇದೆ. ಈ ಕಾಲದ ನಂತರ ನೂರಾರು ವರ್ಷಗಳು ವಿಶ್ವನಾಥ ಮಂದಿರವೇ ಕಾಶಿಯಲ್ಲಿರಲಿಲ್ಲ. ಈ ಕಾಲದಲ್ಲೇ ಯಾತ್ರಿಕರು ಲಿಂಗವಿದ್ದ ಸ್ಥಳಕ್ಕೆ ಬಂದು ಪ್ರದಕ್ಷಿಣ ನಮಸ್ಕಾರಗಳನ್ನು ಸಲ್ಲಿಸಬೇಕೆಂಬ ವಿಧಿ ಒದಗಿದುದು. "ಅತ್ರಯದ್ಯಪಿ

ವಿಶ್ವೇಶ್ವರಲಿಂಗಂ ಕಿಂಚಿದಪನೀಯತೇ ಅನ್ಯದಾನೀಯತೇ ಚ ಕಾಲವಶಾತ್ ಪುರುಷೈಃ..." ಇತ್ಯಾದಿ ಮಾತುಗಳು ತ್ರಿಸ್ಥಲೀಸೇತುವಿನಲ್ಲಿಯೂ ತೀರ್ಥ ಪ್ರಕಾಶದಲ್ಲಿಯೂ ಬರುತ್ತವೆ. ಲಿಂಗ ಮರೆಯಾದಾಗ ಲಿಂಗವಿದ್ದ ಸ್ಥಳಕ್ಕೇ ಪೂಜೆ ಸಲ್ಲಿಸಬೇಕೆಂಬ ನಿಯಮವು ಶಾಸ್ತ್ರ ಶುದ್ಧವಲ್ಲ; ಆದರೂ ಶಿಷ್ಟಾಚಾರ ಇದನ್ನು ಅನುಮೋದಿಸುತ್ತದೆ. ಮಂದಿರವು ಪದೇ ಪದೇ ಭಗ್ನವಾಗುತ್ತಿದ್ದರೂ ವಿಶ್ವನಾಥ ಲಿಂಗವನ್ನು ಮಾತ್ರ ಶ್ರದ್ಧೆಯಿಂದ ಅಪಾಯ ಇಲ್ಲದಂತೆ ಉಳಿಸಿ ಕೊಂಡು ಬಂದಿದ್ದಾರೆ. ಈಗ ಇರುವ ವಿಶ್ವನಾಥ ಮಂದಿರವನ್ನು ಹದಿನೆಂಟನೆಯ ಶತಮಾನದ ಪರಾರ್ಧದಲ್ಲಿ ಅಹಲ್ಯಾಬಾಯಿ ಹೋಳ್ಕರ್ ರಾಣಿಯು ಕಟ್ಟಿಸಿದಳು.

ವಿಶ್ವನಾಥ

ಕಾಶಿಯಲ್ಲಿ ಯಾತ್ರಿಕರೇ ವಿಶ್ವನಾಥ ಲಿಂಗವನ್ನು ಮುಟ್ಟಿ ಗಂಗೆಯ ನೀರಿನಿಂದ ಅಭಿಷೇಕ ಮಾಡಿ ಬಿಲ್ವಾರ್ಚನೆ ಮಾಡಿ ಹೋಗುವ ಸಂಪ್ರದಾಯವಿದೆ. ಇಲ್ಲಿ ಮಾತ್ರ ಜಾತಿ ಭೇದವೆಂಬ ಸೊಲ್ಲೇ ಇಲ್ಲ. ಅಸ್ಪೃಶ್ಯರೆನಿಸಿಕೊಂಡವರು ಕೂಡ ವಿಶ್ವೇಶ್ವರ ಲಿಂಗದ ಸ್ಪರ್ಶ ಮಾಡಲು ಶಾಸ್ತ್ರದ ಆಧಾರವೇ ಇದೆ. ಇದರಿಂದ ಲಿಂಗದ ಪಾವಿತ್ರ್ಯಕ್ಕಾಗಲೀ ಪ್ರಭಾವಕ್ಕಾಗಲೀ ಊನವಿಲ್ಲ (ವಿಶ್ವೇಶ್ವರ ಲಿಂಗೇ ಅಸ್ಪೃಶ್ಯ ಸ್ಪರ್ಶ ನಿಬಂಧನೋ ದೋಷೋ ನಾಸ್ತಿ). ಸನತ್ಕುಮಾರ ಸಂಹಿತೆಯಲ್ಲಿ ಇದಕ್ಕೆ ಸ್ವಾರಸ್ಯವಾದ ಸಮಾಧಾನವೊಂದನ್ನು ಕಲ್ಪಿಸಿದ್ದಾರೆ. ದಿನವೂ ಮುಂಜಾನೆ ವಿಶ್ವೇಶ್ವರನೇ ಮಣಿಕರ್ಣಿಕೆಯಲ್ಲಿ ಸ್ನಾನ ಮಾಡಿ ತನ್ನನ್ನು ತಾನೇ ಆರಾಧಿಸಿಕೊಳ್ಳುತ್ತಾನಂತೆ (ಬ್ರಾಹ್ಮೇ ಮುಹೂರ್ತೇ ಮಣಿಕರ್ಣಿಕಾಯಾಂ ಸ್ನಾತ್ವಾ ಸಮಾರಾಧಯತಿ ಸ್ವಮೇವ). ಹೀಗೆ ಮಾಡುವುದು ವಾಸ್ತವವಾಗಿ ಅನಗತ್ಯವಾದರೂ ಕಲಿಯುಗದಲ್ಲಿ ಮನುಷ್ಯರ ಹಿತಕ್ಕಾಗಿ ಎಂದು ಮುಂದಿನ ಸಮಾಧಾನ (ಅಸ್ಪೃಶ್ಯ ಸಂಸ್ಪರ್ಶ ವಿಶೋಧನಾಯ ಕಲೌ ನರಣಾಂ ಕೃಪಯಾ ಹಿತಾಯ) ! ಅಂತೂ ವಿಶ್ವನಾಥ ಲಿಂಗದ ಪಾವಿತ್ರ್ಯ ಅಷ್ಟು ಸ್ಥಿರವಾದುದು. ಅಕ್ಷೋಭ್ಯವಾದುದು. ಕಾಶೀಪುರೀ ವಾಸಿಯಾದ ಮ್ಲೇಚ್ಛನೂ ಶುಚಿಯೆಂದು ಕಲ್ಪನೆ ಒದಗಿದೆ.

ವಿಶ್ವನಾಥ ಲಿಂಗವಲ್ಲದೆ ಮೊದಲಿಗೆ ಅವಿಮುಕ್ತೇಶ್ವರ ಲಿಂಗವೂ ಇದ್ದಿತೆಂದು ಸ್ಕಾಂದ ಪುರಾಣದ ಸೂಚನೆ (ಕಾಶೀಖಂಡ, 10, 93). ಆದರೆ ಅವಿಮುಕ್ತನೆಂಬುದು ವಿಶ್ವನಾಥನ ಹೆಸರೇ ಎಂದೂ, ವಿಶ್ವನಾಥಲಿಂಗವೇ ಅವಿಮುಕ್ತೇಶ್ವರ ಲಿಂಗವೆಂದೂ ತೀರ್ಥ ಚಿಂತಾಮಣಿ ಹೇಳುತ್ತದೆ (ಅವಿಮುಕ್ತೇಶ್ವರಂ ಲಿಂಗಂ ವಿಶ್ವನಾಥ ನಾಮ್ನಾ ಲೋಕ ಪ್ರಸಿದ್ಧಂ). ಕಾಶೀಖಂಡವು "ಅವಿಮುಕ್ತಂ ಮಹಾಕ್ಷೇತ್ರಂಪಂಚಕ್ರೋಶ ಪರಿಮಿತಂ; ಜ್ಯೋತಿರ್ಲಿಂಗಂ ತದೇಕಂ ಹಿ ಜ್ಞೇಯಂ ವಿಶ್ವೇಶ್ವರಾಭಿದಂ" ಎಂದು ಹೇಳಿದೆ. ಜಾಬಾಲೋಪನಿಷತ್ತಿನಲ್ಲಿ ಅವ್ಯಕ್ತವಾದ ಆತ್ಮವು ಅವಿಮುಕ್ತದಲ್ಲಿ ಪ್ರತಿಷ್ಠಿತವಾಗಿದೆಯೆಂದೂ, ಅವಿಮುಕ್ತವು ವರಣಾ (ಎಂದರೆ, ಸರ್ವಾನ್ ಇಂದ್ರಿಯಕೃತಾನ್ ದೋಷಾನ್ ವಾರಯತೀತಿ ವರಣಾ) ಮತ್ತು ನಾಸೀ (ಎಂದರೆ, ಸರ್ವಾನ್ ಇಂದ್ರಿಯ ಕೃತಾನ್ ದೋಷಾನ್ ನಾಶಯತೀತಿ ತೇನ ನಾಸೀ ಭವತಿ) ಇವುಗಳ ಮಧ್ಯೆ ಇದೆಯೆಂದೂ, ವರಣ ಮತ್ತು ನಾಸಿಗಳ ಸಂಧಿ ಕ್ಷೇತ್ರವೆಂದರೆ ಹುಬ್ಬಿನ ನಡುವೆ ಮತ್ತು ಮೂಗು ಇವುಗಳ ಸಂಧಿಸ್ಥಾನ (ಭ್ರುವೋರ್ಘ್ರಾಣಸ್ಯ ಚ ಯಾ ಸಂಧಿಃ ಸ ಏಷ ದ್ಯುರ್ಲೋಕಸ್ಯ ಪರಸ್ಯ ಚ ಸಂಧಿರ್ಭವತೀತಿ) ಎಂದೂ ಅರ್ಥ ಮಾಡಿದ್ದಾರೆ. ಎಂದರೆ ಅವಿಮುಕ್ತದ ಉಪಾಸನೆಯನ್ನು ಭ್ರೂಮಧ್ಯ ಮತ್ತು ನಾಸಾಗ್ರಗಳ ನಡುವೆ ದೃಷ್ಟಿಯನ್ನು ನಿಲ್ಲಿಸಿ ಮಾಡಬೇಕೆಂದು ತಾತ್ಪರ್ಯ. ಈ ದೃಷ್ಟಿಯಿಂದಲೇ ಕಾಶಿಯನ್ನು ಆನಂದ ಕಾನನವೆಂದೂ ವ್ಯವಹರಿಸಿದ್ದಾರೆ. ಧ್ಯಾನದ ಪರಾಕಾಷ್ಠತೆಯಿಂದ ಒದಗುವ ಬ್ರಹ್ಮಾನಂದ ಇಲ್ಲಿ ಸೂಚಿತವಾಗಿದೆ. ವರಣವೆಂದರೆ ಪಿಂಗಳಾನಾಡಿಯೆಂದೂ ಅಸಿಯೆಂದರೆ ಇಡಾನಾಡಿಯೆಂದೂ, ಇವುಗಳ ನಡುವೆ ಅವಿಮುಕ್ತವೆನ್ನುವುದು ಸುಷುಮ್ನಾ ನಾಡಿ ಎಂದೂ ಮೂರೂ ಸೇರಿ ವಾರಾಣಸಿ ಎಂದೂ (ನಾಡೀ ತ್ರಯಂ ವಾರಾಣಸೀ) ಕಾಶೀಖಂಡ ನಿರೂಪಿಸುತ್ತದೆ.

ಶಿವಗಣಗಳಲ್ಲಿ ಒಬ್ಬನಾದ ನಿಕುಂಭನೇ ವಾರಾಣಸಿಯನ್ನು ನಿರ್ಮಿಸಿದನೆಂದೂ ಐಲನ ವಂಶದಲ್ಲಿ ಬಂದ ದಿವೋದಾಸನು ಇದನ್ನು ಜೀರ್ಣೋದ್ಧಾರ ಮಾಡಿದನೆಂದೂ ಪ್ರತೀತಿಯಿದೆ. ಇದು ಪ್ರಮುಖವಾಗಿ ಶೈವಕ್ಷೇತ್ರವಾದರೂ ಸರ್ವಮಾನ್ಯವಾದ ಕ್ಷೇತ್ರ. ಇಲ್ಲಿ ವೈಷ್ಣವ ದೇವಾಲಯುಗಳೂ ಇವೆ. ಕಾಶಿಗೆ ಉತ್ತರ ದಿಗ್ಭಾಗದಲ್ಲಿ ಧರ್ಮ ಕ್ಷೇತ್ರವೆಂಬೆಡೆ ವಿಷ್ಣುವಿನ ಸ್ಥಾನವೆಂದು ಕಾಶೀ

ಖಂಡ ಹೇಳುತ್ತದೆ. ಆದಿಕೇಶವ ಕ್ಷೇತ್ರವೆಂದೂ ಕಾಶಿಗೆ ವ್ಯವಹಾರವಿದ್ದಿತು. ಕಾಶಿಯ ಬಿಂದುಮಾಧವಸ್ವಾಮಿ ಪ್ರಸಿದ್ಧನಾದ ದೇವರು. ಎಲ್ಲ ಹಿಂದು ಗಳಿಗೂ ಪವಿತ್ರವೆನಿಸಿದ ಈ ಕ್ಷೇತ್ರವು ಭಾರತದ ಸಂಸ್ಕೃತಿಗೆ ತೌರೂರಾಗಿದೆ.

ವಿದ್ಯೆಯ ಸದನವೆಂದು ಪ್ರಖ್ಯಾತವಾದ ಕಾಶೀ ಪಟ್ಟಣಕ್ಕೆ ನಾಡಿನ ಎಲ್ಲೆಡೆ ಗಳಿಂದಲೂ ವಿದ್ಯಾರ್ಥಿಗಳೂ ವಿದ್ವಾಂಸರೂ ಬರುತ್ತಿದ್ದರು. ಬೌದ್ಧರಿಗೂ ವೈದಿಕ ಸಂಪ್ರದಾಯದವರಿಗೂ ಕಾಶಿಯೂ ಕಾಶ್ಮೀರವೂ ಸಾರಸ್ವತ ಪೀಠವಾಗಿ ದ್ದುವು. ಮದುವೆಗೆ ಮುನ್ನ ವರನು ಕಾಶೀ ಯಾತ್ರೆಗೆ ಹೋಗುವ ಆಚರಣೆಯ ಮೂಲ ಸ್ನಾತಕನಾದ ಬ್ರಹ್ಮಚಾರಿಯು ಗುರುಕುಲವನ್ನು ಮುಗಿಸಿದೊಡನೆ ವಿದ್ವಜ್ಜೀವನ ನಡೆಸಲು ಕಾಶೀ ನಗರಕ್ಕೆ ತೆರಳುವ ಪದ್ಧತಿಯು ಪ್ರಚಲಿತವಾಗಿ ದ್ದುದು. ಶಾಸ್ತ್ರಾಧ್ಯಯನಕ್ಕೆ ಕಾಶಿಯ ವಿದ್ಯಾಲಯಗಳು ಪ್ರಾಚೀನ ಕಾಲದಿಂದ ಪ್ರಸಿದ್ಧವಾಗಿವೆ. ಈಗಂತೂ ಪಂಡಿತ ಮದನ ಮೋಹನ ಮಾಳವೀಯರ ಆಸೆಯಿಂದ ಉತ್ಸಾಹದಿಂದ ಕಾಶೀ ವಿದ್ಯಾಲಯವು ರೂಪ ತಳೆದು ಪ್ರಾಚೀನ–ಅರ್ವಾಚೀನ ಎರಡೂ ಬಗೆಯ ವಿದ್ಯೆಗೆ ಪ್ರಖ್ಯಾತವಾದ ಕೇಂದ್ರ ವಾಗಿದೆ. ಮಧ್ಯಯುಗದಲ್ಲಿ ಕಬೀರದಾಸರು ಈ ಕಡೆ ವಿಶೇಷವಾಗಿ ಭಕ್ತಿ ಪಂಥದ ಪ್ರಚಾರ ನಡೆಸಿದರು. ಕಾಶಿಯ ಮಹಾರಾಜರು ವಿದ್ವಜ್ಜನ ಪೋಷಕರೂ ಕಲಾಭಿಮಾನಿಗಳೂ ಆಗಿದ್ದು ಕಾಶಿಗೆ ಕ್ಷೇತ್ರವೆಂಬ ಪ್ರಖ್ಯಾತಿ ಮಾತ್ರವಲ್ಲದೆ ಕುಶಲ ಕಲೆಗಳಿಗೆ ತೌರೂರೆಂಬ ಪ್ರಶಸ್ತಿಯೂ ಒದಗಿದೆ.

ಶ್ರೀರಾಮ ಕ್ಷೇತ್ರಗಳು

ಶ್ರೀರಾಮನು ಅಯೋಧ್ಯೆಯಲ್ಲಿ ಹುಟ್ಟಿ ಕೋಸಲದೇಶದ ರಾಜನಾದರೂ. ಹದಿನಾಲ್ಕು ವರ್ಷಗಳು ವನವಾಸ ಮಾಡಬೇಕಾಗಿ ಬಂದುದರಿಂದಲೂ, ಸೀತೆಯನ್ನು ಲಂಕೇಶ್ವರನಾದ ರಾವಣನು ಅಪಹರಿಸಿಕೊಂಡು ಹೋದುದರಿಂದಲೂ ಇಡೀ ದೇಶವನ್ನೆಲ್ಲ ಸುತ್ತಾಡಬೇಕಾಯಿತು. . ಉತ್ತರದಲ್ಲಿ ಹಿಮಾಲಯದ ಹತ್ತಿರ ಇರುವ ಊರಿನಿಂದ ಹೊರಟು ಚಿತ್ರಕೂಟ, ಮಧ್ಯಪ್ರದೇಶ, ದಂಡಕಾರಣ್ಯ, ದಕ್ಷಿಣ ದೇಶಗಳಲ್ಲಿ ಶ್ರೀರಾಮನು ಸುತ್ತಾಡಿದ ಉಲ್ಲೇಖವಿದೆ. ಈ ಪ್ರದೇಶಗಳಲ್ಲೆಲ್ಲ ಊರುಊರಿನಲ್ಲಿಯೂ ಹಳ್ಳಿಹಳ್ಳಿಯಲ್ಲಿಯೂ ಶ್ರೀರಾಮನ ಬಂದಿದ್ದನೆನ್ನುವ ಕಥೆಗಳಿವೆ. ಹೀಗಾಗಿ ಶ್ರೀರಾಮನ ಆಗಮನದಿಂದ ಪವಿತ್ರವಾದ ನೂರಾರು, ಸಾವಿರಾರು ಸ್ಥಳಗಳಲ್ಲಿ ಶ್ರೀರಾಮನ ಗುಡಿಗಳನ್ನು ಕಟ್ಟಿಸಿದ್ದಾರೆ. ಅಲ್ಲೆಲ್ಲ ಪೂಜೆ ನಡೆಯುತ್ತ ಬಂದಿದೆ.

ಶ್ರೀ ರಾಮನ ಜನ್ಮಭೂಮಿಯಾದ ಅಯೋಧ್ಯೆಯಲ್ಲಿ ಶ್ರೀರಾಮನ ಮಂದಿರ ವೈಭವಪೂರ್ಣವಾಗಿ ಇಂದಿಗೂ ಉಳಿದಿದೆ. ಇಲ್ಲಿಯೇ ಇರುವ 'ಅಮ್ಮಾಜಿ ಮಂದಿರ' ಹೆಸರುವಾಸಿಯಾದುದು. ದಕ್ಷಿಣ ದೇಶದ ಮಹಿಳೆಯೊಬ್ಬಳಿಗೆ ಕನಸಿನಲ್ಲಿ ಆದೇಶವಾಗಿ ಈ ದೇವಾಲಯ ನಿರ್ಮಿತವಾಯಿತಂತೆ. ಈ ಗುಡಿಯಲ್ಲಿ ದಕ್ಷಿಣ ಸಂಪ್ರದಾಯದಂತೆಯೇ ಪೂಜೆ ನಡೆಯುತ್ತದೆ. ಇದೇ ಊರಿನಲ್ಲಿ ಸರಯೂ ನದಿಯ ದಂಡೆಯ ಮೇಲೆ ರಾಮ, ಲಕ್ಷ್ಮಣ, ಹನುಮಂತ ಇವರಿಗೆ ಪ್ರತ್ಯೇಕ ಮಂದಿರಗಳಿವೆ.

ವನವಾಸದ ಸಂದರ್ಭದಲ್ಲಿ ಶ್ರೀರಾಮ ಪಂಚವಟಿಯಲ್ಲಿ ಆಶ್ರಮವನ್ನು ಕಟ್ಟಿಕೊಂಡು ಸ್ವಲ್ಪಕಾಲ ವಾಸಿಸಿದನಷ್ಟೆ. ನಾಸಿಕಕ್ಕೆ ಐದು ಮೈಲಿ ದೂರ

ದಲ್ಲಿದೆ ಈ ಕ್ಷೇತ್ರ. ಗೋದಾವರಿ ತೀರದ ಜನಸ್ಥಾನವಲ್ಲಿಯೇ ಶೂರ್ಪನಖಿ ಇದ್ದುದು; ಸೀತಾಪಹರಣದ ಹಿನ್ನೆಲೆ ಇಲ್ಲಿಯೇ ಸಿದ್ಧವಾದುದು. ಈಗ ಪಂಚವಟಿಯಲ್ಲಿ ಸುಪ್ರಸಿದ್ಧವಾದ ಒಂದು ರಾಮ ಮಂದಿರವಿದೆ.

ಅಲ್ಲಿಂದ ಸೀತೆಯನ್ನು ಹುಡುಕಾಡುತ್ತ ರಾಮಲಕ್ಷ್ಮಣರು ಪಂಪಾ-ಸರಸ್ಸಿಗೆ ಬಂದು ಅಲ್ಲಿ ಶಬರಿಯ ಆತಿಥ್ಯವನ್ನು ಸ್ವೀಕರಿಸಿ ಋಷ್ಯಮೂಕ ಪರ್ವತಕ್ಕೆ ಹೋದರಷ್ಟೆ. ಋಷ್ಯಮೂಕದಲ್ಲಿಯೇ ಸುಗ್ರೀವನನ್ನು ಕಂಡುದು; ಕಿಷ್ಕಿಂಧೆಯಲ್ಲಿಯೇ ವಾಲಿ ವಧೆಯಾದುದು. ಇದು ಈಗಿನ ಬಳ್ಳಾರಿ ಜಿಲ್ಲೆಯ ಪರಿಸರ. ವಿಜಯನಗರ ಸಾಮ್ರಾಜ್ಯದ ಹಂಪಿ ಅವಶೇಷಗಳಲ್ಲಿ ಮತಂಗ ಪರ್ವತ, ಮಾಲ್ಯವಂತ, ಹಜಾರ ರಾಮಸ್ವಾಮಿ ದೇವಾಲಯ, ಕೋದಂಡ ರಾಮಾಲಯ, ಪಟ್ಟಾಭಿರಾಮನ ಗುಡಿ, ರಘುನಾಥ ದೇವಾಲಯ ಇವೆಲ್ಲವೂ ಶ್ರೀರಾಮನ ನೆನಪನ್ನು ಉಳಿಸಿವೆ.

ಅಲ್ಲಿಂದ ಮುಂದೆ ರಾಮಲಕ್ಷ್ಮಣರು ವಾನರ ಸೇನೆಯೊಡಗೂಡಿ ರಾಮೇಶ್ವರಕ್ಕೆ ಬಂದರು. ಶ್ರೀರಾಮನು ಇಲ್ಲಿ ಈಶ್ವರ ಲಿಂಗವನ್ನು ಸಮುದ್ರದ ತೀರದಲ್ಲಿ ಪ್ರತಿಷ್ಠೆ ಮಾಡಿದುದರಿಂದ ಈ ಸ್ಥಳಕ್ಕೆ ರಾಮೇಶ್ವರವೆಂದು ಹೆಸರಾಯಿತು. ಆದರೆ ಶಿವಲಿಂಗವನ್ನು ಶ್ರೀರಾಮನು ಪ್ರತಿಷ್ಠೆ ಮಾಡಿದುದು ರಾವಣ ವಧೆಯ ನಂತರ; ಬ್ರಹ್ಮಹತ್ಯಾ ದೋಷವನ್ನು ತೊಡೆದುಕೊಳ್ಳುವುದಕ್ಕಾಗಿ. ಅದಕ್ಕೆ ಮೊದಲೇ ಸೇತುಬಂಧವನ್ನು ಮಾಡುವ ಸಂದರ್ಭದಲ್ಲಿ ನವಗ್ರಹಗಳನ್ನು ಪೂಜಿಸಿದ ಸ್ಥಳ ನವಪಾಷಾಣ. ಈಗ ಇದು ರಾಮನಾಡು ಜಿಲ್ಲೆಯಲ್ಲಿರುವ ಪ್ರಸಿದ್ಧವಾದ ಸ್ನಾನಘಟ್ಟ; ರಾಮನಾಡು–ದೇವೀ ಪಟ್ಟಣಂ ರಸ್ತೆಯಲ್ಲಿದೆ.

ಈ ಸಂದರ್ಭದಲ್ಲಿಯೇ ಲಂಕೆಯನ್ನು ಮುಟ್ಟಲು ಸಮುದ್ರದ ಮೇಲೆ ಹೋಗುವ ಮೊದಲು ಶ್ರೀರಾಮನು ಸಮುದ್ರರಾಜನನ್ನು ಪ್ರಾರ್ಥಿಸಿ ಕುಶ–ದರ್ಭೆ ಹುಲ್ಲಿನ ಹಾಸಿಗೆಯ ಮೇಲೆ ಮಲಗಿದನಂತೆ. ರಾಮನಾಥಪುರದಿಂದ 9 ಮೈಲಿ ದೂರದಲ್ಲಿರುವ 'ಸೇತುಕ್ಕರೈ' ಎನ್ನುವ ಊರೇ ಇದು ಎಂದು ನಿರ್ದೇಶಿಸುತ್ತಾರೆ. ಇದನ್ನು 'ದರ್ಭಶಯನ' (ತಿರುಪ್ಪುಳ್ಳಾನಿ) ಎಂದೂ ಕರೆಯುತ್ತಾರೆ. ಇಲ್ಲಿ ಶ್ರೀರಾಮನು ಮಲಗಿರುವಂತೆ ಶಯನಮೂರ್ತಿಯ ದೇವಾಲಯವಿದೆ. ಇದೂ ಪ್ರಸಿದ್ಧವಾದ ಕ್ಷೇತ್ರ.

ಹೀಗೆಯೇ ರಾಮೇಶ್ವರ, ಧನುಷ್ಕೋಟಿ ಇಲ್ಲಿರುವ ರಾಮನ ಗುಡಿಗಳೂ ವಿಖ್ಯಾತವಾದುವು. ರಾಮೇಶ್ವರ ಕ್ಷೇತ್ರದಲ್ಲಿ ಇಪ್ಪತ್ತನಾಲ್ಕು ತೀರ್ಥಗಳೂ ಸೇರುವುವೆಂದು ಪ್ರತೀತಿ. ಬಂಗಾಳಾ ಕೊಲ್ಲಿ ಮತ್ತು ಹಿಂದೂ ಸಮುದ್ರ ಇವು ಸೇರುವ ಕಡೆ ಸ್ನಾನ ಮಾಡುವುದು ಪುಣ್ಯಕರವೆಂಬ ನಂಬಿಕೆ ಇದೆ. ರಾಮನು ಸೇತುವೆಯನ್ನು ಕಟ್ಟಿ ಲಂಕೆಗೆ ಹೋಗಿ ಹಿಂದಿರುಗಿ ಬಂದಾಗ ಊರ ಜನ ಈ ಸೇತುವೆಯ ಮೂಲಕ ರಾಕ್ಷಸರು ಇಲ್ಲಿಗೆ ಬಂದಾರು ಎಂದು ಕಳವಳವನ್ನು ವ್ಯಕ್ತ ಪಡಿಸಲು, ರಾಮನು ತನ್ನ ಕೋದಂಡದಿಂದ ಈ ಸೇತುವೆಯನ್ನು ಮುರಿದನಂತೆ. ಈ ಸ್ಥಳವನ್ನು ಈಗಲೂ ತೋರಿಸುತ್ತಾರೆ. ಇಲ್ಲಿರುವ ಹನ್ನೊಂದು ಲಿಂಗ ಗಳನ್ನು ರಾಮ, ಸೀತೆ, ಲಕ್ಷ್ಮಣ, ಸುಗ್ರೀವ, ನಳ, ಅಂಗದ, ನೀಲ, ಜಾಂಬವಂತ, ವಿಭೀಷಣ, ಇಂದ್ರ ಮತ್ತು ಹನುಮಂತ ಇವರು ಪ್ರತಿಷ್ಠೆ ಮಾಡಿದುವೆಂದು ಹೇಳುತ್ತಾರೆ.

ಇಲ್ಲಿನ ದೇವಾಲಯಕ್ಕೆ ಮೂರು ಪ್ರಕಾರಗಳಿವೆ. ಈ ದೇವಾಲಯದ ಸಾವಿರ ಕಾಲು ಮಂಟಪ ಜಗದ್ವಿಖ್ಯಾತವಾದುದು. ಸುಮಾರು 4000 ಅಡಿ ಉದ್ದ ಇರುವ ಈ ಮಂಟಪ 17ರಿಂದ 21 ಅಡಿ ಅಗಲವಿದೆ; ಎತ್ತರ ಸುಮಾರು 30 ಅಡಿ. ನಮ್ಮ ದೇಶದ ಪವಿತ್ರ ಕ್ಷೇತ್ರಗಳಲ್ಲಿ ಕಾಶೀ ರಾಮೇಶ್ವರಕ್ಕೆ ಸಮನಾದುವು ಯಾವುವು?

ಇಷ್ಟು ರಾಮನ ವನಗಮನ, ಸೀತಾ ಪರಿಮಾರ್ಗಣ, ಲಂಕಾಗಮನ ಇವುಗಳಿಗೆ ಸಂಬಂಧಿಸಿದ ಕ್ಷೇತ್ರಗಳಾದರೆ ರಾಮನ ಅಲೆದಾಟಕ್ಕೆ ಸಂಬಂಧಿಸಿದ ಕ್ಷೇತ್ರಗಳು ಅಸಂಖ್ಯಾತವಾಗಿವೆ. ಒಂದೊಂದು ಊರಿನಲ್ಲಿಯೂ ರಾಮ ತಂಗಿದ ಸ್ಥಳ, ಲಕ್ಷ್ಮಣ ಇದ್ದ ಸ್ಥಳ, ಸೀತೆ ಸ್ನಾನ ಮಾಡಿದ ಸ್ಥಳ ಎಂದು ಮುಂತಾಗಿ ತೋರಿಸುತ್ತಾರೆ. ಸ್ಥಳಪುರಾಣವಿಲ್ಲದ ಊರು ಯಾವುದು ? ನಮ್ಮ ರಾಜ್ಯ ದಲ್ಲೇ ರಾಮನಾಥಪುರ, ಚುಂಚನಕಟ್ಟೆ ಮೊದಲಾದ ಕ್ಷೇತ್ರಗಳು ರಾಮನಿಗೆ ಸಂಬಂಧಿಸಿದುವೇ. ಚುಂಚನ ಕಟ್ಟೆಯಲ್ಲಿ ಸೀತೆ ಎಣ್ಣೆ–ನೀರು ಹಾಕಿಕೊಂಡ ಸ್ಥಳವನ್ನು ಇಂದಿಗೂ ತೋರಿಸುತ್ತಾರಷ್ಟೆ! ಕಾವೇರಿಯ ಪಕ್ಕದಲ್ಲೇ ಇರುವ ರಾಮ ದೇವಸ್ಥಾನ ರಮಣೀಯವಾಗಿದೆಯೆನ್ನಿ.

ದಕ್ಷಿಣದೇಶದಲ್ಲಿ ರಾಮನಿಗೆ ಸಂಬಂಧಿಸಿದ ಪುಣ್ಯಕ್ಷೇತ್ರಗಳು ಹಲವಾರು ಇವೆ. ಇವುಗಳಲ್ಲಿ ಕೆಲವು ಮುಖ್ಯವಾದುವು. ನಿದರ್ಶನಕ್ಕೆ ಭದ್ರಾಚಲ. ರಾಜ ಮಹೇಂದ್ರಿಯಿಂದ 60 ಮೈಲಿ ದೂರ ಇರುವ ಈ ಕ್ಷೇತ್ರ ಕಾಡಿನ ನಡುವೆ ಇದೆ. ಗೋಲ್ಕೊಂಡ ನವಾಬನ ಕೋಶಾಧಿಕಾರಿಯಾಗಿದ್ದ ಮಂಚೆರ್ಲಗೋಪಣ್ಣ ಎಂಬ ರಾಮಭಕ್ತನೂ ವಾಗ್ಗೇಯಕಾರನೂ ಈ ಕ್ಷೇತ್ರದ ಪ್ರಸಿದ್ಧಿಗೆ ಕಾರಣನಾದನು; ಇವನನ್ನೇ ಭದ್ರಾಚಲ ರಾಮದಾಸನೆಂದು ವ್ಯವಹರಿಸುತ್ತಾರೆ. ಇಲ್ಲಿನ ರಾಮ ದೇವಾಲಯದ ಕಲ್ಯಾಣಮಂಟಪದಲ್ಲಿ ರಾಮಪಟ್ಟಾಭಿಷೇಕದ ಸುಂದರ ಶಿಲ್ಪವಿದೆ.

ಹೀಗೆಯೇ ದಕ್ಷಿಣ ಆರ್ಕಾಟ್ ಜಿಲ್ಲೆಯ ಶ್ರಿಮುಷ್ಣವೂ ಪ್ರಸಿದ್ಧವಾದ ರಾಮ ಕ್ಷೇತ್ರ. ವೃದ್ಧಾಚಲದಿಂದ ಒಂಬತ್ತು ಮೈಲಿ, ಚಿದಂಬರದಿಂದ 26 ಮೈಲಿ ದೂರ ಇರುವ ಈ ಸ್ಥಳದಲ್ಲಿ ರಾಮಪಂಚಾಯತನದ ಪ್ರಾಚೀನ ಶಿಲಾ ಶಿಲ್ಪವಿದೆ. ಕುಂಭಕೋಣದ ರಾಮಸ್ವಾಮಿ ದೇವಸ್ಥಾನ, ತಿಲ್ಲೈವಿಳಗಂನಲ್ಲಿರುವ ಶ್ರೀರಾಮನ ಗುಡಿ, ಮನ್ನಾರುಗುಡಿಯ ಬಳಿಯಿರುವ ವಡವೂರು ಶ್ರೀ ರಾಮನ ಗುಡಿ; ಕಾಂಚೀಪುರದ ಯಥೋಕ್ತಕಾರಿಸ್ವಾಮಿ ದೇವಾಲಯದಲ್ಲಿ ರಾಮನ ಸನ್ನಿಧಿ, ಪೂನ್‌ಮಲ್ಲೈ ಬಳಿ ಇರುವ ಮೆಪ್ಪೂರಿನ ರಾಮಾಲಯ, ಮದುರಾಂತಕಂನ ಕೋದಂಡರಾಮ ದೇವಾಲಯ, ತಿರುವಹೀಂದ್ರಪುರದರಾಮನ ಗುಡಿ, ತಂಜಾವೂರು ಜಿಲ್ಲೆಯಲ್ಲಿ ಪುಲ್ಲಬೂತಂಗುಡಿಯ ವಲ್ವಿಲಿರಾಮ ದೇವಾಲಯ (ಇಲ್ಲಿಯೇ ಜಟಾಯುವಿಗೆ ರಾಮನು ಅಗ್ನಿಸಂಸ್ಕಾರ ಮಾಡಿದನೆಂದು ಪ್ರತೀತಿ) ಮತ್ತು ಜಟಾಯು ತೀರ್ಥ, ಕಂಬ ಕವಿ ಹುಟ್ಟಿದ ತಿರುಚೆಂದೂರಿನ ರಾಮಾಲಯ, ಕುಂಭಕೋಣ-ತಿರುವಾರೂರು ರಸ್ತೆಯಲ್ಲಿರುವ ತಿರುಚ್ಚೇರಿಯ ಶರನಾಥ ಪೆರುಮಾಳ್ ದೇವಾಲಯ ಮೊದಲಾದುವು ಪ್ರಖ್ಯಾತವಾದ ರಾಮ ಕ್ಷೇತ್ರಗಳು.

ಇಲ್ಲಿನ ದೇವಾಲಯಗಳಲ್ಲಿ ಬಹುಮಟ್ಟಿಗೆ ಕೋದಂಡಪಾಣಿಯಾದ ರಾಮ, ಲಕ್ಷ್ಮಣ, ಸೀತೆ, ಹನುಮಂತ ಇವರ ಮೂರ್ತಿಗಳು ಪೂಜೆಗೊಳ್ಳುತ್ತವೆ. ರಾಮನು ದ್ವಿಭುಜನಾಗಿ ಎಡಗೈಯಲ್ಲಿ ಬಿಲ್ಲು, ಬಲಗೈಯಲ್ಲಿ ಬಾಣ ಹಿಡಿದಂತೆ ಚಿತ್ರಿತನಾಗಿರುವುದು ವಾಡಿಕೆ. ಅದರೆ ಕೆಲವು ಕಡೆ ಚತುರ್ಭುಜ ರಾಮನ

ಮೂರ್ತಿಗಳಿವೆ. ಪೊನಪದಿರ್‌ಕೊಟ್ಟಂ (ತಿರುಕ್ಕಳಿ ಕುಂನ್ರಂನಿಂದ ನಾಲ್ಕು ಮೈಲಿ)ನಲ್ಲಿರುವ ರಾಮ ಶಂಖ-ಚಕ್ರಗಳನ್ನೂ, ಬಿಲ್ಲು-ಬಾಣಗಳನ್ನೂ ಹಿಡಿದಿದ್ದಾನೆ; ಮದ್ರಾಸು-ತಿರುಚ್ಚಿ ರಸ್ತೆಯಲ್ಲಿರುವ ತಿರುವಣ್ ಪುರುಷೋತ್ತಮಂನಲ್ಲಿಯೂ ಪುಲಬೂತಂಗುಡಿಯಲ್ಲಿಯೂ ಶಂಖ-ಚಕ್ರ, ವರದಾಭಯ ಹಸ್ತಗಳ ರಾಮನ ವಿಗ್ರಹವಿದೆ. ಕೆಲವು ಪ್ರಾಚೀನ ಶಿಲ್ಪಗಳಲ್ಲಿ ರಾಮ-ಲಕ್ಷ್ಮಣ ಸೀತೆಯರು ಕುಳಿತಿಸುವಂತೆ ಚಿತ್ರಿತರಾಗಿದ್ದಾರೆ. ಆದರೆ ನಿಂತಿರುವ ಶಿಲ್ಪಗಳೇ ಬಹಳ.

ಅಂತೂ ನಮ್ಮ ದೇಶದಲ್ಲಿ ರಾಮನ ನೆನಪನ್ನು ಉಳಿಸಿಕೊಂಡಿರುವ ಸ್ಥಳಗಳು ಅಸಂಖ್ಯಾತವಾಗಿವೆ. ರಾಮಗಿರಿ. ರಾಮನಗರ. ರಾಮಸಮುದ್ರ. ರಾಮಪುರ ಈ ಮೊದಲಾದ ಹೆಸರುಗಳಿರುವ ಸ್ಥಳಗಳು ಎಷ್ಟಿವೆಯೋ! ರಾಮನ ಬಂಟನಾದ ಹನುಮಂತನ ವ್ಯಾಪ್ತಿ ಇನ್ನೂ ಹೆಚ್ಚಿನದು. ಹನುಮಂತನ ಗುಡಿಯಿಲ್ಲದ ಹಳ್ಳಿಯೇ ನಮ್ಮ ದೇಶದಲ್ಲಿಲ್ಲ ಎಂದರೆ ಉತ್ಪ್ರೇಕ್ಷೆ ಅಲ್ಲ. ಪ್ರತಿಯೊಂದು ಊರಿನಲ್ಲಿಯೂ 'ಊರ ಬಾಗಿಲ ಹನುಮಂತ' ಒಂದೊಂದು ಕೋಟೆಯಲ್ಲಿಯೂ 'ಕೋಟೆ ಹನುಮಂತ'! ಹೀಗೆ ಶ್ರೀರಾಮನ ವ್ಯಕ್ತಿತ್ವ ನಮ್ಮ ಸಂಸ್ಕೃತಿಯಲ್ಲಿ ಹಿಂದಿನಿಂದ ಇಂದಿನವರೆಗೂ ಧ್ವನಿತವಾಗಿದೆ.

ಶಬರಿಮಲೆಯ ಶಾಸ್ತ

ನಮ್ಮ ದೇಶದ ಒಂದೊಂದು ದೇವತೆಗೂ ವಿಶಿಷ್ಟವಾದ ಇತಿಹಾಸವುಂಟು. ವ್ಯಕ್ತಿತ್ವವುಂಟು. ಇತಿಹಾಸದಿಂದ ವ್ಯಕ್ತಿತ್ವ ಮೈದುಂಬಿ ಬರುತ್ತದೆ. ದೇವತೆಯ ಇತಿಹಾಸವು ಜನರ ಅನುಭವಗಳನ್ನೂ, ಆಕಾಂಕ್ಷೆಗಳನ್ನೂ, ಜಾನಪದ ಪ್ರವೃತ್ತಿಗಳನ್ನೂ, ಪ್ರಸಂಗಗಳನ್ನೂ ಪ್ರತಿಬಿಂಬಿಸುತ್ತದೆ. ದೇವತೆಯ ಸೃಷ್ಟಿ ಮನುಷ್ಯನಿಂದಲೇ ಆಗುತ್ತದೆ; ಆದರೆ ಈ ಸೃಷ್ಟಿಯಲ್ಲಿ ತಲೆಮಾರುಗಳ ವಿಕಾಸ ಕಾಣಬರುತ್ತದೆ. ಇಡೀ ಜನಾಂಗದ ಸುಪ್ತಚೇತನ ಹೊರಹೊಮ್ಮಿ ಪುತ್ಥಳಿಯಾಗುವುದು ಕಾಣಬರುತ್ತದೆ. ಮೇಲುನೋಟಕ್ಕೆ ಸಂದಿಗ್ಧವೆನಿಸಿದರೂ, ಆಕಸ್ಮಿಕವೆನಿಸಿದರೂ ಮೂಲಭೂತವಾದ ಪ್ರವೃತ್ತಿಗಳ ಅಗತ್ಯವನ್ನು ಗಮನಿಸುವುದು ಸಾಧ್ಯ. ಜನರ ಜೀವನವಿಧಾನ, ಪರಿಸರದ ಒತ್ತಡ, ಚರಿತ್ರೆಯ ಹೆಜ್ಜೆಗಳು, ಜನಾಂಗದ ಸ್ವಭಾವ ಇವೆಲ್ಲವೂ ದೇವತಾ ಕಲ್ಪನೆಯಲ್ಲಿ ಅಡಗಿರುತ್ತವೆ.

ಈ ದೃಷ್ಟಿಯಿಂದ ಶಾಸ್ತ ಅಥವಾ ಅಯ್ಯಪ್ಪ ಸ್ವಾರಸ್ಯವಾದ ದೇವತೆ. ಮೊದಲಿಗೆ ಈ ದೇವತೆಯ ಪ್ರಸಿದ್ಧಿ ಕೇರಳ ಪ್ರಾಂತ್ಯಕ್ಕೆ ಸೀಮಿತವಾಗಿದ್ದಿತು. ನೆರೆಹೊರೆಯ ಅಂಚಿನ ಪ್ರಾಂತ್ಯಗಳಿಗೆ ಅಷ್ಟಿಷ್ಟು ಹರಡಿದ್ದಿತು. ತಮಿಳುನಾಡು, ಕೊಡಗು ಸೀಮೆ ಇಲ್ಲಿ ಮಾತ್ರ ಕೇರಳದ ಶಾಸ್ತನ ಪ್ರಖ್ಯಾತಿಯಿದ್ದಿತು. ಇಷ್ಟು ಬಿಟ್ಟರೆ ಕರ್ನಾಟಕದಲ್ಲಾಗಲೀ, ಆಂಧ್ರ ಮಹಾರಾಷ್ಟ್ರಗಳಲ್ಲಾಗಲೀ ಶಾಸ್ತನೆಂಬ ದೇವತೆಯ ಪರಿಚಯವಿದ್ದುದು ಕಡಮೆಯೇ. ಇನ್ನು ಉತ್ತರ ಹಿಂದೂಸ್ತಾನದ ಮಾತು ಬಿಡಿ. ಆದರೆ ಇದು ಸುಮಾರು ಇಪ್ಪತ್ತು-ಮೂವತ್ತು ವರ್ಷಗಳ ಹಿಂದಿನ ಮಾತು. ಈಗ ಇಡೀ ದೇಶದಲ್ಲೆಲ್ಲ ಅಯ್ಯಪ್ಪನ ಪೂಜೆ ನಡೆಯುತ್ತದೆ. ಮಲೆಯಾಳಿಗಳಲ್ಲದವರೂ ಶಬರಿಮಲೆಗೆ ಹೋಗಿ ಬರುತ್ತಾರೆ. ಈ ದೇವತೆಯ

ಜನಪ್ರೀತಿ ಹೆಚ್ಚುತ್ತಾ ಬಂದಿದೆ.

ಆದಿವಾಸಿಗಳ ದೇವತೆಯೆ ?

ಕೇರಳದಲ್ಲಿಯೂ ಹೀಗೆಯೇ ನಡೆಯಿತೆನ್ನಿ. ತುಂಬ ಹಿಂದಿನ ಕಾಲದಲ್ಲಿ ಅಯ್ಯಪ್ಪ ಕೇವಲ ಕಾಡುಜನರ, ಬೇಟೆಗಾರರ, ಆದಿವಾಸಿಗಳ ದೇವತೆ. ಆರ್ಯ ಸಂಸ್ಕೃತಿಗೂ ಈ ದೇವತೆಗೂ ಯಾವ ಸಂಬಂಧವೂ ಇದ್ದ ಹಾಗಿರಲಿಲ್ಲ. ಆದರೆ ಬರಬರುತ್ತಾ ಕೇರಳದ ಎಲ್ಲ ಜನರೂ ಎಲ್ಲ ಸಾಂಸ್ಕೃತಿಕ ಸ್ತರದವರೂ ಈ ದೇವತೆಯ ವಿಚಾರದಲ್ಲಿ ಭಯ ಭಕ್ತಿಗಳಿಂದ ನಡೆದುಕೊಳ್ಳತೊಡಗಿದರು. ಆರ್ಯಸಂಸ್ಕೃತಿಯ ಅಧ್ವರ್ಯುಗಳೂ ಈ ದೇವತೆಯನ್ನು ಆದರದಿಂದ ತಮ್ಮೊಳಗೆ ಬರಮಾಡಿಕೊಂಡರು. ಇದೊಂದು ಸ್ವಾರಸ್ಯವಾದ ಇತಿಹಾಸ. ಜನರ ಅಗತ್ಯವೇ ನಿಮಿತ್ತವೋ, ದೇವತೆಯ ಸಾಮರ್ಥ್ಯವು ಕಾರಣವೋ ಹೇಳುವುದು ಕಷ್ಟ; ಅಂತೂ ಇಂದು ಶಾಸ್ತ ದೇಶದಲ್ಲೆಲ್ಲ ಪ್ರಸಿದ್ಧನಾದ ದೇವತೆ.

ಶಾಸ್ತ ಕ್ಷೇತ್ರಗಳಲ್ಲಿ ತುಂಬ ಪ್ರಖ್ಯಾತವಾದುದು ಶಬರಿಮಲೆ. ಕೇರಳ ದೇಶದ ಕ್ವಿಲಾನ್ ಜಿಲ್ಲೆಗೆ ಸೇರಿದಂತಿರುವ ಪಶ್ಚಿಮಘಟ್ಟ ಸಾಲಿನಲ್ಲಿ ತುಂಬ ಎತ್ತರವಾದ, ನಿರ್ಜನವಾದ, ದಟ್ಟವಾದ ಕಾಡಿನಿಂದ ಕೂಡಿದ ಶಬರಿಮಲೆ ಸಾವಿರಾರು ವರ್ಷಗಳಿಂದಲೂ ಪ್ರಸಿದ್ಧವಾಗಿದ್ದ ಉಲ್ಲೇಖವಿದೆ. ಗುಡಿಯಿರುವ ಭಾಗವಂತೂ ದುರ್ಗಮವಾದುದೇ. ಮೈಲಿಗಳವರೆಗೆ ಯಾವ ಜನವಸತಿಯೂ ಇಲ್ಲ. ಹತ್ತಿರದ ಹಳ್ಳಿಯೆಂದರೆ ಸುಮಾರು ನಲವತ್ತು ಮೈಲಿ ದೂರವಿರುವ ಎರುವೇಲಿ. ಯಾತ್ರಿಕರು ಇಲ್ಲಿಂದಲೇ ಶಬರಿಮಲೆಗೆ ಹೋಗುವುದು. ಗುಡಿಯಿರುವ ಬೆಟ್ಟವನ್ನು ಮುಟ್ಟಲು ಐದಾರು ತೊರೆಗಳನ್ನು ದಾಟಿ ಐದಾರು ಕಡಿದಾದ ಬೆಟ್ಟಗಳನ್ನು ಏರಿಳಿದು ನಡೆದೇ ಹೋಗಬೇಕು. ಹುಲಿ, ಚಿರತೆ, ಕರಡಿ, ಆನೆ, ಕಾಡೆಮ್ಮೆಗಳ ಹಾವಳಿ ಹೆಚ್ಚು. ಹೀಗಿದ್ದೂ ಎರಡು ತಿಂಗಳು ಲಕ್ಷಗಟ್ಟಲೆ ಯಾತ್ರಿಕರು ನಿರಾಯುಧರಾಗಿ ಈ ನಲವತ್ತು ಮೈಲಿಗಳನ್ನು ದಾಟಿ ಶಬರಿಮಲೆಗೆ ಹೋಗಿ ಬರುತ್ತಾರೆ. ಎರುವೇಲಿಯಿಂದ ಹೊರಡುವಾಗ ಬಣ್ಣಬಣ್ಣದ ಬಿಲ್ಲು-ಬಾಣಗಳನ್ನೂ, ಗದೆಯಂಥ ದೊಣ್ಣೆಯನ್ನೂ ಕೊಂಡೊಯ್ಯುವ ವಾಡಿಕೆಯಿದೆ. ಮೊದಲಬಾರಿಗೆ ಹೋಗುವವರು ಬಣ್ಣದ ಬಾಣವನ್ನೂ, ಎರಡನೆಯ ಬಾರಿಗೆ

ಹೋಗುವವರು ಮರದ ದೊಣ್ಣೆಯನ್ನೂ ಎರುವೇಲಿಯಲ್ಲಿ ಕೊಂಡುಕೊಳ್ಳು ತ್ತಾರೆ. ಆದರೆ ಇದೇನು ಶಸ್ತ್ರವೆಂದಲ್ಲ; ಇದರಿಂದ ಯಾವ ಪ್ರಾಣಿಯನ್ನೂ ಹೆದರಿಸುವುದಾಗದು. ಈ ಆಟಿಗೆ ಆಯುಧ ಕೊಂಡೊಯ್ಯುವುದು ಧಾರ್ಮಿಕ ವಿಧಿ ಅಷ್ಟೆ. ಶಬರಿಮಲೆಗೆ ಹೋದನಂತರ ಅಲ್ಲಿ ಗುಡಿಯ ಬಳಿಯಿರುವ ದೊಡ್ಡ ಮರವೊಂದರ ಬುಡದಲ್ಲಿ (ಶಬರಿಪೀಠ) ಈ ಆಯುಧಗಳನ್ನಿರಿಸಿ ಹಿಂದಿ-ರುಗುತ್ತಾರೆ. ಜನರ ಶ್ರದ್ಧೆಯೇ ಅವರನ್ನು ಕಾಪಾಡುವ ಆಯುಧ, ರಕ್ಷೆ.

ತಿರುವಾಂಕೂರಿನ ನಡುವೆ ಹಾದು ಹೋಗುವ ಕೊಟ್ಟಾಯಂ-ಕುಮಿಳಿ ರಸ್ತೆಯಲ್ಲಿ ಕೊಟ್ಟಾಯಂನಿಂದ ನಲವತ್ತು ಮೈಲಿ ದೂರದಲ್ಲಿ ವಂಡಿಪ್ಪೆರಿಯಾರ್ ಎಸ್ಟೇಟ್ ಇದೆ. ಇಲ್ಲಿಂದ ದಟ್ಟವಾದ ಕಾಡಿನ ನಡುವೆ ಇಪ್ಪತ್ತು ಮೈಲಿಗಳಷ್ಟು ದೂರ ನಡೆದು ಹೋದರೆ ಶಬರಿಮಲೆಯನ್ನು ಮುಟ್ಟಬಹುದು. ಪ್ರತಿ ಮಲೆ-ಯಾಳೀ ಮಾಸದಲ್ಲಿ ಸುಮಾರು ಎರಡು ವಾರಗಳ ಕಾಲ ಗುಡಿಯಲ್ಲಿ ಪೂಜೆ ನಡೆಯುತ್ತದೆ. ಸಾಮಾನ್ಯವಾಗಿ ದೂರದ ಚೆಂಗನ್ನೂರಿನಲ್ಲಿ ವಾಸ ಮಾಡುವ ಶಬರಿ-ಮಲೆ ಗುಡಿಯ ಪೂಜಾರಿ ಈ ಎಸ್ಟೇಟಿನಿಂದಲೇ ನಡೆದು ಹೋಗುತ್ತಾನೆ. ಅವನೊಂದಿಗೆ ಸಶಸ್ತ್ರ ರಕ್ಷಕರೂ ಇರುತ್ತಾರೆ. ಈ ಪೂಜಾರಿಯನ್ನು ಕಡುವಾ ಪೊಟ್ಟಿ (ಎಂದರೆ ಹುಲಿ-ಪೂಜಾರಿ) ಎಂದು ಕರೆಯುತ್ತಾರೆ.

ಶಬರಿಪೀಠ

ಶಬರಿಮಲೆಯೆಂದರೆ ಶಬರಿಯ ಬೆಟ್ಟವೆಂದರ್ಥ. ಬೇಡರವಳಾದ ಶಬರಿಯು ರಾಮನನ್ನು ಕುರಿತು ತಪಸ್ಸು ಮಾಡಿ ಮೋಕ್ಷಕ್ಕೆ ಸಂದ ಸ್ಥಳವೆಂದು ಪ್ರತೀತಿ ಇದೆ. ಆದರೆ ಇದು ಈಚೆಗೆ ಆರ್ಯ ಸಂಸ್ಕೃತಿಗೆ ಅಳವಡಿಸಿಕೊಂಡ ಕಥೆಯೆಂದು ತೋರುತ್ತದೆ. ಶಾಸ್ತನ ಗುಡಿಗೆ ಹೋಗುವ ದಾರಿಯಲ್ಲಿ ಶಬರೀ ದೇವತೆಯ ಸನ್ನಿಧಿಯೂ ಒಂದಿದೆ. ಇದಕ್ಕೆ ಶಬರಿಪೀಠವೆಂದು ಹೆಸರು. ಈಕೆ ರಾಮಾಯ-ಣದ ಶಬರಿ ಇರಲಾರಳು; ಕಾಡುಜನರ, ಬೇಟೆಗಾರರ (ಶಬರರ) ಅಭಿಮಾನಿ ದೇವತೆಯಿರಬಹುದು. ಮುಂದೆ ಕ್ಷುದ್ರದೇವತೆಯಾಗಿ ಪರಿಣಮಿಸಿದ ಈಕೆಯು ಮೊದಲಿಗೆ ಪ್ರಮುಖಳಾದ ಮಾತೃದೇವತೆಯಾಗಿದ್ದಳೆಂದು ತೋರುತ್ತದೆ. ಇಡೀ ಬೆಟ್ಟಕ್ಕೆ ಅವಳ ಹೆಸರು ಬಂದುದೂ, ಅದೇ ಹೆಸರು ನಿಂತುದೂ ಆಕಸ್ಮಿಕವಲ್ಲ.

ಬೆಟ್ಟದ ಮೇಲೆ ಸುಮಾರು ಒಂದು ಚದರ ಮೈಲಿ ಆವರಣದಲ್ಲಿ ಗುಡಿಯಿದೆ: ಆವರಣದ ಸುತ್ತಲೂ ಅಗಲವಾದ, ಆಳವಾದ ಕಂದಕವಿದ್ದು ಕಾಡು ಪ್ರಾಣಿಗಳು ಇಲ್ಲಿಗೆ ಬರದಂತೆ ತಡೆಯುತ್ತದೆ. ಗುಡಿಯಲ್ಲಿ ಸುಮಾರು ಹತ್ತು ಅಡಿ ಎತ್ತರದ ಕಟ್ಟೆಯಿದ್ದು ಅದರ ಮೇಲೆ ಶಾಸ್ತನ ಲೋಹದ ಮೂರ್ತಿಯಿದೆ. ಅದೇ ಕಟ್ಟೆಯ ಮೇಲೆ ಶಾಸ್ತನ ಬಳಿಯೇ 'ಮಲೆ'ಯೆನಿಸಿಕೊಳ್ಳುವ ಬೆಟ್ಟದೇವತೆಯ ಮೂರ್ತಿಯೂ ಇರುವುದು ಸ್ವಾರಸ್ಯ. ಬೆಟ್ಟವನ್ನೇ ದೇವತೆಯೆಂದು ಬಗೆದುಪೂಜೆಮಾಡುವ ಪದ್ಧತಿ ಎಲ್ಲೆಲ್ಲಿಯೂ ಇದ್ದಂತೆ ಇಲ್ಲಿಯೂ ಇದ್ದಿತು. ಶಾಸ್ತನ ಒಕ್ಕಲಾದ ಮಲೆ-ರಾಯನ ಆದಿವಾಸಿಗಳು ಮಣಿಮಲೆ ಬೆಟ್ಟ ಸಾಲಿನಲ್ಲಿ ತಲಪಾರಮಲೆ, ಆಳಮಲೆ, ಪ್ರತಿಯಮಲೆ, ಪೋತನ್‌ಮಲೆ ಮತ್ತು ಸವಂಪಾರಮಲೆ ಎನ್ನುವ ಐದು ಬೆಟ್ಟದ ಕೋಡುಗಳನ್ನು ದೇವತೆಗಳೆಂದು ಪೂಜಿಸಿ, ಈ ಐದು ದೇವತೆಗಳನ್ನು ಪ್ರತಿನಿಧಿಸಿ ಐದು ಸಣ್ಣ ಕಲ್ಲು ಗುಂಡುಗಳನ್ನು ತಮ್ಮ ಗುಡಿಸಿಲ ಹೊರಗೆ ಇರಿಸಿಕೊಳ್ಳುತ್ತಾರೆ. ಇಂಥ ಪದ್ಧತಿಗಳು ಕೇರಳದ ಕಾಡುಜನರಲ್ಲಿ ಬಳಕೆಯಲ್ಲಿವೆ. ಶಾಸ್ತನ ಕಟ್ಟೆಯ ಮೇಲೆ ಈ 'ಮಲೆದೇವತೆ'ಯಲ್ಲದೆ ಗಣಪತಿ ಮತ್ತು ಸುಬ್ರಹ್ಮಣ್ಯ ಇವರ ಮೂರ್ತಿಗಳೂ ಇವೆ. ಆದರೆ ಇವೆರಡೂ ಈಚೆಗೆ ಅಲ್ಲಿ ಮೂಡಿಕೊಂಡ ಮೂರ್ತಿಗಳೆನ್ನುವುದು ಸ್ಪಷ್ಟವಾಗಿದೆ. ಶಾಸ್ತನು ಶಿವನ ಮಗನೆಂದು ಕಲ್ಪನೆ ಬೇರೂರಿದಾಗ ಶಿವನ ಈ ಇಬ್ಬರು ಮಕ್ಕಳಿಗೂ ಅಲ್ಲಿ ಸ್ಥಾನವನ್ನು ಒದಗಿಸಿಕೊಟ್ಟರು.

ಗಂಡು ದೇವತೆಗಳು

ಕಟ್ಟೆಯ ಹೊರಗೆ ಆವರಣದಲ್ಲಿಯೇ ಕರುಪ್ಪನ್ (ಅಥವಾ ಕುರುಪ್ಪು-ಸ್ವಾಮಿ) ಮತ್ತು ಕೊಚಕಡುತ್ತ ಎಂಬೆರಡು ಗಂಡು ದೇವತೆಗಳೂ ಒಂದು ಸ್ತ್ರೀ ದೇವತೆಯೂ ಪೂಜೆಗೊಳ್ಳುತ್ತವೆ. ಕರುಪ್ಪವೆನ್ನುವುದು ಕರಿಭೂತ; ಈ ದೈವದ ಪೂಜೆ ತಮಿಳುನಾಡಿನಲ್ಲಿಯೂ ಉಂಟು. ಕಡುತ್ತನು ಭಯಂಕರವಾದ ದೈವ. ರಕ್ತವನ್ನು ಬಯಸುವ ಬಂಟ. ಇವರಿಬ್ಬರೂ ಶಾಸ್ತನ ಬೇಟೆಯಲ್ಲಿ ನೆರವಾದವರೆಂದು ಅವರಿಗೆ ಅಲ್ಲಿ ಪೂಜೆ ನಡೆಯುವುದು. ಇವರೊಂದಿಗೆ ಅಲ್ಲಿ ಪೂಜೆಗೊಳ್ಳುವ ಹೆಣ್ಣು ದೇವತೆ ಎಮ್ಮೆಯ ರೂಪದಲ್ಲಿದ್ದ ರಾಕ್ಷಸಿ. ಮಹಿಷಿಯನ್ನು ಶಾಸ್ತನು ಕೊಂದಾಗ ಎಮ್ಮೆಯ ಮೈಯಿಂದ ಹೊರಹೊಮ್ಮಿದ ಭೂತವೆಂದು ಹೇಳು

ತ್ತಾರೆ. ಹೀಗೆ ಕರುಪ್ಪ, ಕಡುತ್ತ, ಮಹಿಷಿ ಮೂವರೂ ಭೂತಗಳೇ. ಅವರಿಗೆ ಒಡೆಯನಾದ ಶಾಸ್ತ ಭೂತನಾಥ.

ವಾವಾರ್ ಸನ್ನಿಧಿ

ಈ ದೇವತೆಗಳಲ್ಲದೆ ಆವರಣದೊಳಗೆ ಪೂಜೆಗೊಳ್ಳುವ ವಾವಾರ್ ಪ್ರತೀಕವೂ ಒಂದಿದೆ. ವಾವಾರ್ (ಅಥವಾ ಬಾವಾ, ಬಾಬಾ) ಎನ್ನುವವನು ಮುಸಲ್ಮಾನ ಸಾಧುವೆಂದೂ, ಶಾಸ್ತನ ಸ್ನೇಹಿತನಾಗಿದ್ದನೆಂದೂ ಕಥೆಗಳಿವೆ. ಎರುವೇಲಿ ಹಳ್ಳಿಯಲ್ಲಿ ಮಸೀದಿಯೊಂದಿದ್ದು ಅಲ್ಲಿ ಇವನ ಚೇತನ ಉಳಿದಿದೆಯೆಂದು ಪ್ರತೀತಿಯಿದೆ. ಶಬರಿಮಲೆ ಯಾತ್ರಿಕರು ಮೊದಲು ಎರುವೇಲಿಯಲ್ಲಿಯೂ ಅನಂತರ ಶಬರಿಮಲೆಯಲ್ಲಿಯೂ ಈತನನ್ನು ಪೂಜಿಸುವ ಪದ್ಧತಿಯಿದೆ. ಅರಬ್ಬಿ ಜನಾಂಗದ ಹಡಗುಕಳ್ಳನೂ ಸಾಹಸಿಯೂ ಆಗಿದ್ದ ಈತನು ಶಾಸ್ತನ ಸಾಹಸ ಕೃತ್ಯಗಳಲ್ಲಿ ನೆರವಾದವನೆಂದು ಅವನಿಗೆ ಪೂಜೆ ಸಲ್ಲುತ್ತದೆ. ಪಂದಲಂ ಪ್ರಾಂತ್ಯದಲ್ಲಿ ಉದಯನ್ ಎಂಬ ದರೋಡೆಗಾರನು ಜನರಿಗೆಲ್ಲ ಸಿಂಹಸ್ವಪ್ನನಾಗಿ ಶಬರಿಮಲೆಯ ಮೇಲೆ ಅಡಗಿರುತ್ತ, ಹಳ್ಳಿ ಪಟ್ಟಣಗಳನ್ನು ಕೊಳ್ಳೆ ಹೊಡೆಯುತ್ತಿದ್ದನಂತೆ. ಆಗ ಶಾಸ್ತನು ಪಂದಲಂ ರಾಜನ ಸಾಕು ಮಗನಾಗಿ ಮಣಿಕಂಠನೆಂಬ ಹೆಸರಿನಿಂದ ಬೆಳೆಯುತ್ತಿದ್ದನಂತೆ. ಮಣಿಕಂಠನು ವಾವಾರನ ಮೈತ್ರಿಯನ್ನು ಸಂಪಾದಿಸಿ ಅವನ ನೆರವಿನಿಂದ ಉದಯನನ್ನೂ ಅವನ ಸಂಗಡಿಗರನ್ನೂ ಎರುವೇಲಿಯಲ್ಲಿ ಹಿಡಿದು ಕೊಂದನಂತೆ. ಪಂದಲಂ ರಾಜನು ವಾವಾರನಿಗೆ ಭೂಮಿ ಕಾಣಿ ಕೊಟ್ಟು ಎರುವೇಲಿಯಲ್ಲಿಯೇ ನೆಲಸುವಂತೆ ಕೇಳಿಕೊಂಡನಂತೆ. ಇದು ನಡೆದದ್ದು 900 ವರ್ಷಗಳ ಹಿಂದೆ ಎಂದು ಹೇಳುತ್ತಾರೆ.

ಶಬರಿಮಲೆ ದೇವಾಲಯದ ನಿರ್ವಹಣೆಯಲ್ಲಿ ವಾವಾರನ ಮನೆತನದವರಿಗೆ ಒಂದು ಹಕ್ಕಿದ್ದಿತು. ಮಕರವಿಳಕ್ಕು ಉತ್ಸವದಲ್ಲಿ ವಾವಾರನ ಸಂತತಿಯವರು ಪಾಲುಗೊಳ್ಳುವ ಪದ್ಧತಿಯಿದೆ. ಅಂತೂ ಎರುವೇಲಿಯಲ್ಲಿ ವಾವಾರನ ಸನ್ನಿಧಿಯಿದ್ದು ಅದು ಶಬರಿಮಲೆ ಯಾತ್ರಿಕರನ್ನು ಇಂದಿಗೂ ಆಕರ್ಷಿಸುತ್ತದೆ. ಪೆಟ್ಟತ್ತುಳ್ಳಲ್ ಎನಿಸಿಕೊಳ್ಳುವ ವಿಧಿಯಲ್ಲಿ ಯಾತ್ರಿಕರು ಮುಖಕ್ಕೆ ಮಸಿ ಬಳಿದುಕೊಂಡು ಪೆಟ್ಟ ಶಾಸ್ತನ ಗುಡಿಗೆ ಓಡಿಬಂದು ಅಲ್ಲಿಂದ ವಾವಾರನ ಸನ್ನಿಧಿಗೆ

ಬಂದು ಅಲ್ಲಿ ಕಾಣಿಕೆ ಕೊಡುತ್ತಾರೆ. ಶಾಸ್ತನಿಗೆ ನೆರವಾದ ಕಿರಾತರನ್ನು ನೆನಪಿಗೆ ತರುವ ವಿಧಿಯಿದು.

ಒಂದು ನೂರು ವರ್ಷಗಳ ಹಿಂದೆ ಫ್ರಾನ್ಸಿಸ್ ಡೇ ಎಂಬಾತನು ಬರೆದ ದಿ ಲ್ಯಾಂಡ್ ಆಫ್ ಪೆರುಮಾಳ್ಸ್ (ಮದ್ರಾಸು 1863) ಎಂಬ ಪುಸ್ತಕದಲ್ಲಿ ಶಾಸ್ತ ಮತ್ತು ವಾವಾರಿಬ್ಬರಿಗೂ ಕ್ರೈಸ್ತಪಾದ್ರಿಯೊಬ್ಬ ನೆರವಾದ ಉಲ್ಲೇಖವಿದೆ. ಸಂತ ಆಂಡ್ರೂ ಎಂಬಾತನ ಸಮಾಧಿಯು ಸಮುದ್ರತೀರದ ಆಲೆಪ್ಪಿಯಲ್ಲಿದೆ. ಶಬರಿಮಲೆ ಯಾತ್ರಿಕರು ಇಲ್ಲಿಗೆ ಬಂದು ಸಮುದ್ರ ಸ್ನಾನ ಮಾಡಿ ಈ ಸಂತನ ಸಮಾಧಿಯಲ್ಲಿ ಪ್ರಾರ್ಥನೆ ಸಲ್ಲಿಸಿ ಕ್ರಾಂಗನೂರಿಗೆ ಹೋಗುವ ಪದ್ಧತಿಯಿದ್ದಿತೆಂದು ಈ ಪುಸ್ತಕದಿಂದ ತಿಳಿದು ಬರುತ್ತದೆ. ಈ ಸಂತನ ಬಾಳುವೆಯ ವಿವರಗಳಾಗಲೀ ಅವನಿಗೂ ಶಬರಿಮಲೆಗೂ ಒದಗಿ ಬಂದ ಸಂಬಂಧದ ವಿಚಾರವಾಗಲೀ ತಿಳಿದು ಬರುವುದಿಲ್ಲ.

ಪದಿನೆಟ್ಟಾಂಪಡಿ

ಶಬರಿಮಲೆಯ ಮೇಲೆ ಶಾಸ್ತನ ಮೂರ್ತಿಯಿರುವ ಕಟ್ಟೆಗೆ ಪೂರ್ವದಿಕ್ಕಿನಲ್ಲಿ ಹದಿನೆಂಟು ಮೆಟ್ಟಲುಗಳಿವೆ; ಗುಡಿಯನ್ನು ಸೇರಲು ಈ ಮೆಟ್ಟಲುಗಳನ್ನು ಹತ್ತಿ ಹೋಗುವುದು ತುಂಬ ಶ್ರೇಯಸ್ಕರವೆಂದು ನಂಬಿಕೆ. ಇದಕ್ಕೆ 'ಪದಿನೆಟ್ಟಾಂಪಡಿ' ಎಂದು ಹೆಸರು. ಈ ಸೋಪಾನವನ್ನೇರುವಾಗ ಯಾತ್ರಿಕರು ತೆಂಗಿನಕಾಯಿ ಒಡೆಯುವ ಪದ್ಧತಿಯಿದೆ. ಉತ್ತರ ಮತ್ತು ಪಶ್ಚಿಮ ದಿಕ್ಕುಗಳಲ್ಲಿಯೂ ಮೆಟ್ಟಲುಗಳಿವೆ; ಆದರೆ ಇವನ್ನು ಪದಿನೆಟ್ಟಾಂಪಡಿಯಷ್ಟು ಪವಿತ್ರವೆಂದು ಪರಿಗಣಿಸುವುದಿಲ್ಲ. ಈ ಹದಿನೆಂಟು ಮೆಟ್ಟಲುಗಳಿಗೆ ಆಧ್ಯಾತ್ಮಿಕ ಅರ್ಥವನ್ನೂ ಹೇಳುವುದಿದೆ.

ಹದಿನೆಂಟು ಪ್ರಬಲವಾದ ಸಂಖ್ಯೆ: ಅಷ್ಟಾದಶ ಪುರಾಣಗಳು, ಭಗವದ್ಗೀತೆಯ ಅಷ್ಟಾದಶ ಅಧ್ಯಾಯಗಳು, ಅಷ್ಟಾದಶ ಧಾನ್ಯಗಳು, ಅಷ್ಟಾದಶ ವಿವಾದ ಪದಗಳು, ಅಷ್ಟಾದಶ ಉಪಚಾರಗಳು ಇತ್ಯಾದಿ ಇತ್ಯಾದಿ. ಶಾಸ್ತನ ಗುಡಿಗಿರುವ ಹದಿನೆಂಟು ಮೆಟ್ಟಲುಗಳು ಜೀವದ ಹದಿನೆಂಟು ಆರೋಹಣಸ್ಥಾನಗಳು. ಶಾಸ್ತ ಪರಬ್ರಹ್ಮನಾದರೆ, ಯಾತ್ರಿಕ ಜೀವವಾದರೆ ಶಾಸ್ತನ ಬಲಗೈಯಲ್ಲಿರುವ ಚಿನ್ಮುದ್ರೆ

ಯನ್ನು ಅನುಭವಿಸಿ, ಆನಂದವನ್ನು ಪಡೆಯಲು ಈ ಹದಿನೆಂಟು ಮೆಟ್ಟಲುಗಳನ್ನು ಏರಿಹೋಗಬೇಕು. ಪೂರ್ವಭಾವಿಯಾಗಿ ಯಮ, ನಿಯಮಗಳನ್ನು ಅಭ್ಯಾಸಮಾಡಿ ಅನಂತರವೇ ಪದಿನೆಟ್ಟಾಂಪಡಿಯನ್ನು ಮೆಟ್ಟಬೇಕು. ಹದಿನೆಂಟು ಮೆಟ್ಟಲುಗಳ ಸಂಕೇತ ಹೀಗೆ - ಐದು ಇಂದ್ರಿಯಗಳು, ಎಂಟು ರಜಸ್ಸುಗಳು, ಮೂರು ಗುಣಗಳು, ವಿದ್ಯೆ ಮತ್ತು ಅವಿದ್ಯೆ.

ಪರಶುರಾಮ ಸೃಷ್ಟಿ

ಶಬರಿಮಲೆಯ ಮೇಲೆ ಶಾಸ್ತನ ಗುಡಿಯನ್ನು ಪರಶುರಾಮನ ಸೂಚನೆಯ ಮೇಲೆ ವಿಶ್ವಕರ್ಮನೇ ಕಟ್ಟಿದನೆಂದು ಸ್ಥಳಪುರಾಣ ಹೇಳುತ್ತದೆ. ಪರಶುರಾಮನು ಪಶ್ಚಿಮಘಟ್ಟಸಾಲಿನಲ್ಲಿ ಎಂಟು ಶಾಸ್ತದೇವಾಲಯಗಳನ್ನು ನಿರ್ಮಿಸಿದನೆಂದು ಪ್ರತೀತಿ; ಇವುಗಳಲ್ಲಿ ಶಬರಿಮಲೆ, ಅಚ್ಚನ್‌ಕೋಯಿಲ್, ಕುಲತ್ತುಪ್ಪುಷ, ಅರಯನ್ ಕಾವು ಇವು ಪ್ರಸಿದ್ಧವಾದುವು. ಮಧುರೆಯಿಂದ ತಿರುವಾಂಕೂರಿನ ಪಂದಲಂ ಪ್ರಾಂತ್ಯಕ್ಕೆ ಬಂದು ಅಲ್ಲಿ ಕ್ರಿಸ್ತಾಬ್ದ 904ರಲ್ಲಿ ಅರಸೊತ್ತಿಗೆಯೊಂದನ್ನು ಆರಂಭಿಸಿದ ಪಾಂಡ್ಯ ರಾಜರಿಗೂ, ಶಬರಿಮಲೆ ಗುಡಿಗೂ ಮೊದಲಿಂದ ನೆಂಟು ಉಳಿದು ಬಂದಿದೆ. ಶಬರಿಮಲೆಯಿಂದ ನೇರವಾಗಿ ಬರುವುದಾದರೆ ಪಂದಲಂ ಕೇವಲ ಇಪ್ಪತ್ತೈದು ಮೈಲಿ ದೂರದಲ್ಲಿದೆ. ಶಾಸ್ತನು ಮಣಿಕಂಠನಾಗಿ ಅವತರಿಸಿದಾಗ ಈ ರಾಜಮನೆತನದಲ್ಲಿಯೇ ಬೆಳೆದು ಈ ಪರಿಸರದಲ್ಲಿಯೇ ತನ್ನ ಸಾಹಸಕೃತ್ಯಗಳಿಂದ ಪ್ರಸಿದ್ಧನಾದುದು. ಶಬರಿಮಲೆಯ ಗುಡಿಯನ್ನು ಪಂದಲಂ (ರಾಜರೇ ಕಟ್ಟಿಸಿದರೆಂದು ತಿಳಿದು ಬರುತ್ತದೆ. ಸುಮಾರು ಇನ್ನೂರು ವರ್ಷಗಳ ಹಿಂದೆ ತಿರುವಾಂಕೂರಿನ ಅರಸರು ಪಂದಲಂ, ಪ್ರಾಂತ್ಯವನ್ನು ವಶಪಡಿಸಿಕೊಳ್ಳುವವರೆಗೂ ಈ ಗುಡಿಯು ಪಂದಲಂ ಅರಸರ ವಶದಲ್ಲಿಯೇ ಇದ್ದಿತು. ಅನಂತರವೂ ದೇವರ ವಿಶೇಷ ಆಭರಣಗಳನ್ನು ಪಂದಲಂ ಅರಮನೆಯಲ್ಲಿಯೇ ಇರಿಸಿ ವರ್ಷಕ್ಕೊಮ್ಮೆ ಮಕರವಿಳಕ್ಕು ಸಂದರ್ಭದಲ್ಲಿ ಉತ್ಸವದಿಂದ ಬೆಟ್ಟದ ಮೇಲೆ ಗುಡಿಗೆ ಪಹರೆಯೊಡನೆ ಕೊಂಡೊಯ್ಯುವ ಪದ್ಧತಿ ಉಳಿದುಬಂದಿದೆ. ಗುಡಿಯಿರುವುದು ಕಾಡಿನ ನಡುವೆ ಆದುದರಿಂದ ಬೆಲೆಬಾಳುವ ಅಲಂಕರಣ ಸಾಮಗ್ರಿಗಳನ್ನೂ, ವಸ್ತ್ರ, ಆಭರಣಗಳನ್ನೂ ಗುಡಿಯಲ್ಲಿ ಇರಿಸಿಕೊಳ್ಳುವುದಿಲ್ಲ; ಅವು ಪಂದಲಂ ಅರಮನೆಯಲ್ಲಿರುತ್ತವೆ.

ಪಂದಲಂ ಅರಸರು ಬರುವ ಮೊದಲೇ ಬೆಟ್ಟದ ಮೇಲೆ ಸಣ್ಣದೊಂದು ಗುಡಿ ಇದ್ದಿತೆಂಬುದು ದಿಟ. ಋಷಿಗಳು ನೀಲಿ ಮಲೆಯ ಮೇಲೆ 'ಪೊನ್ನಂಬಲ ಮೇಡು' (ಬಂಗಾರದ ಗುಡಿ)ಯನ್ನು ಕಟ್ಟಿಸಿದ್ದ ಉಲ್ಲೇಖವಿದೆ. ಇದು ಈಗ ಕಾಣುವುದಿಲ್ಲ. ಮೊದಲಿಗೆ ಶಬರಿಮಲೆ ಈಗಿನ ಹಾಗೆ ನಿರ್ಜನ ವನ್ಯ ಪ್ರದೇಶ ವಾಗಿರಲಿಲ್ಲ. 1816-1820 ರಲ್ಲಿ ಈ ಪ್ರಾಂತ್ಯವನ್ನು ಸರ್ವೇಕ್ಷಣ ಮಾಡಿದ ವಾರ್ಡ್ ಮತ್ತು ಕಾರ್ನರ್ ಇವರ ವರದಿಯ ಪ್ರಕಾರ ಈ ಬೆಟ್ಟದ ಮೇಲೂ ಆಸುಪಾಸಿನಲ್ಲೂ ಜನವಸತಿಯಿದ್ದಿತು. ಅಷ್ಟು ಮಾತ್ರವಲ್ಲದೆ ಪೂರ್ವದ ತಮಿಳು ನಾಡಿನಿಂದ ಪಶ್ಚಿಮದ ಮಲಯಾಳ ನಾಡಿಗೆ ಹೋಗುವ ವ್ಯಾಪಾರ ಮಾರ್ಗ ದಲ್ಲಿಯೇ ಈ ಪ್ರದೇಶವಿದ್ದಿತು. ಕಾರಣಾಂತರದಿಂದ ಕಾಡು ದಟ್ಟವಾಗಿ ಬೆಳೆದು ಶಾಸ್ತನ ಗುಡಿದುರ್ಗಮವಾಗಿಬಿಟ್ಟಿತು; ಶಬರಿಮಲೆಯ ಯಾತ್ರೆ ಕಷ್ಟಸಾಧ್ಯವಾಗಿ ಪರಿಣಮಿಸಿತು.

ಪಶ್ಚಿಮ ಕರಾವಳಿಯ ಪ್ರಾಚೀನ ಗುಡಿಗಳಂತೆ ಶಬರಿಮಲೆ ಗುಡಿಯೂ ದಾರುಮಯವಾಗಿದ್ದು ಎರಡು ಬಾರಿ ಬೆಂಕಿಗೆ ತುತ್ತಾಯಿತು ; ಮೂರ್ತಿಯೂ ಸೇರಿ ಇಡೀ ದೇವಾಲಯ ಸುಟ್ಟು ಬೂದಿಯಾದಂತೆ ತಿಳಿದುಬರುತ್ತದೆ. ಮಲಯಾಳ ಶಕೆ 1085 ರಲ್ಲಿ, ಎಂದರೆ ಕ್ರಿಸ್ತಾಬ್ದ 1910ರಲ್ಲಿ ಶಾಸ್ತನ ಮೂರ್ತಿಯನ್ನು ಪ್ರತಿಷ್ಠೆ ಮಾಡಿದರೆನ್ನುವ ವಿವರ ಗುಡಿಯಲ್ಲಿರುವ ಸಂಸ್ಕೃತ ಶಾಸನವೊಂದರಿಂದ ಸ್ಪಷ್ಟವಾಗುತ್ತದೆ. ಇದನ್ನು ಹೇಳುವ ಶ್ಲೋಕ ಇದು–

ಸ ಮೀನಭಾಸ್ವನ್ನಯನಃ ಪ್ರಿಯಾ ದಿನಾ
ಪ್ರಭಾಪತಿರ್ಭಾಗ್ಯವಶಾನ್ನವಾಲಯೇ
ಪ್ರಭಾಕರಾಚಾರ್ಯಕರ ಪ್ರತಿಷ್ಠಿತೋ
ಮಹಾನಯಂ ವರ್ಷತು ಭೂರಿ ಮಂಗಳಂ॥

ಇಲ್ಲಿ 'ಮೀನ', 'ಪ್ರಿಯೆ,' ಮೊದಲಾದ ಕೆಲವು ಪದಗಳು ಪ್ರತಿಷ್ಠೆಯ ವರ್ಷವನ್ನು ಸೂಚಿಸುತ್ತವೆ. ಗುಡಿಯನ್ನು ಹೊಸದಾಗಿ ಕಟ್ಟಿಸಿದರೆನ್ನುವುದು

'ನವಾಲಯ' ಎಂಬ ಮಾತಿನಿಂದ ತಿಳಿದುಬರುತ್ತದೆ. ಮೂರ್ತಿಯನ್ನು ಪ್ರತಿಷ್ಠೆ ಮಾಡಿದ ಪ್ರಭಾಕರಾಚಾರ್ಯನು ಯಾರೆಂಬುದು ಸ್ಪಷ್ಟವಾಗುವುದಿಲ್ಲ. 1950 ರಲ್ಲಿ ಮೂರ್ತಿಯನ್ನು ಪುನಃ ಪ್ರತಿಷ್ಠೆ ಮಾಡುವ ಸಂದರ್ಭವೊದಗಿತು: ಇದೇ ಈಗಿರುವ ಮೂರ್ತಿ. ಲೋಹದ್ದು.

ಇತರ ಶಾಸ್ತ್ರಕ್ಷೇತ್ರಗಳು

ಕೇರಳದಲ್ಲಿ ಶಬರಿಮಲೆಯಲ್ಲದೆ, ಇನ್ನು ಮೂರು ಶಾಸ್ತ ಕ್ಷೇತ್ರಗಳೂ ಪ್ರಸಿದ್ಧವಾಗಿವೆ. ಅಚ್ಚಿನ್‌ಕೋಯಿಲ್, ಕುಲತ್ತುಪುಷ, ಆರ್ಯನ್‌ಕಾವು. ಶಾಸ್ತನು ತನ್ನ ಬಾಲ್ಯವನ್ನು ಅಚ್ಚಿನ್‌ಕೋಯಿಲ್‌ನಲ್ಲೂ ಕೌಮಾರವನ್ನು ಆರ್ಯನ್‌ಕಾವಿನಲ್ಲೂ, ಕಳೆದು, ಕುಲತ್ತುಪುಷದಲ್ಲಿ ಪೂರ್ಣಾ ಮತ್ತು ಪುಷ್ಪಳೆಯರನ್ನು ಮದುವೆಯಾಗಿ ಶಬರಿಮಲೆಯಲ್ಲಿ ಸಂನ್ಯಾಸಾಶ್ರಮವನ್ನು ಸ್ವೀಕರಿಸಿದನೆಂದೂ ಹೇಳುತ್ತಾರೆ. ಇವೆಲ್ಲವೂ ಬೆಟ್ಟಗುಡ್ಡಗಳೇ. ದಟ್ಟವಾದ ಕಾಡಿನ ನಡುವೆಯೇ ಶಾಸ್ತನ ಗುಡಿಯಿರುವುದು ಸ್ವಾರಸ್ಯ. ಹಳ್ಳಿಗಳಲ್ಲಿ ಶಾಸ್ತನ ಗುಡಿಯಿದ್ದಾಗಲೂ ಅದರ ಸುತ್ತಲೂ ಗಿಡಮರಗಳನ್ನು ಕಾಡಾಗಿ ಬೆಳೆಸುತ್ತಾರೆ; ಇದಕ್ಕೆ 'ಕಾವು' ಎಂದು ಹೆಸರು. ಶಂಕೊಟ್ಟೆಯ ಬಳಿಯಿರುವ 'ಆರ್ಯನ್‌ಕಾವು' ಇದಕ್ಕೆ ಒಂದು ನಿದರ್ಶನ. ಪೆರಿಯಾರ್ ನದೀ ಶಾಖೆಯೊಂದು ಮಾಡ್‌ನಲ್ಲಿ ಜಲಪಾತವಾಗಿ ಮಾರ್ಪಟ್ಟ ಕಡೆ ಒಂದು ಶಾಸ್ತನ ಗುಡಿಯಿದೆ; ಇದು 'ಮೆಟ್ಟಿಂಗಳ್ ಶಾಸ್ತ' ಎಂದು ಪ್ರಸಿದ್ಧವಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೂಡ ಶಾಸ್ತನ ಪೂಜೆ ವಿಶೇಷವಾಗಿ ನಡೆಯುತ್ತದೆ. ಅಲ್ಲಿನ ದೈವಸ್ಥಾನಗಳಲ್ಲಿ ಕುಕ್ಷಿ ಶಾಸ್ತ (ಕುಟ್ಟಿಚಾತ) ನನ್ನೂ 'ಶಾಸ್ತಾವು ಕಲ್ಲು' ಗಳನ್ನೂ ಕಾಣಬಹುದು. ದೇಶಮಂಗಲದಲ್ಲಿ ಕುಕ್ಷಿಶಾಸ್ತನಿಗೇ ಗುಡಿಯಿದೆ: ಧರ್ಮಸ್ಥಳದ ಗುಡಿಯಲ್ಲಿಯೂ ಶಾಸ್ತನಿಗೆ ಆಲಯವಿದೆ. ಕೊಡಗು ಸೀಮೆಯಲ್ಲಿ ಶಾಸ್ತನನ್ನು ಅಯ್ಯಪ್ಪನೆಂದೇ ಕರೆದು ಅವನನ್ನು ಕೇರಿಕೇರಿಗಳಲ್ಲಿಯೂ ಆರಾಧಿಸುತ್ತಾರೆ. ಇಲ್ಲಿನ ಬಲ್ಮಾವತಿ ಬಳಿಯಿರುವ ಪೂನಿಕಾಡು ಎಂಬ ಕಾಡಿನಲ್ಲಿರುವ ಅಯ್ಯಪ್ಪನ ಗುಡಿ ಪ್ರಸಿದ್ಧವಾದುದು. ತಮಿಳುನಾಡಿನಲ್ಲಿ ಅಯ್ಯಪ್ಪನನ್ನು 'ಅಯ್ಯನಾರ್' ಎಂಬ ಹೆಸರಿನಿಂದ ಕರೆಯುತ್ತಾರೆ. ಪ್ರತಿಹಳ್ಳಿಯಲ್ಲಿಯೂ

ಅಯ್ಯನಾರ್ ಕೋವಿಲ್ ಇರುತ್ತದೆ; ಗ್ರಾಮದೇವತೆ ಅವನು. ಶಿವನ ಮಕ್ಕಳಾದ ಪಿಳ್ಳೈಯಾರ್ (ಗಣೇಶ) ಮತ್ತು ಕುಮಾರನ್ (ಸುಬ್ರಹ್ಮಣ್ಯ) ಇವರೊಂದಿಗೆ ಇವನಿಗೂ ಸ್ಥಾನವಿದೆ.

ಶಾಸ್ತ ಎನ್ನುವುದು ಸಂಸ್ಕೃತಪದ; 'ಶಾಸ್ತ' ಈ ಮಾತಿಗೆ ಒಡೆಯ, ಗುರು, ಸ್ವಾಮಿ, ನಿಯಮಗಳನ್ನು ವಿಧಿಸುವಾತ ಎಂದರ್ಥ. ಬೌದ್ಧ ಪಂಥದಲ್ಲಿ ಬುದ್ಧನನ್ನು ಶಾಸ್ತನೆಂದು ಕರೆಯುತ್ತಾರೆ, ಪಾಳಿಯಲ್ಲಿ 'ಸತ್ಥಾ' ಎಂದಾಗುತ್ತದೆ. ಅಮರಕೋಶವು ಬುದ್ಧನ ಹೆಸರುಗಳನ್ನು ಹೇಳುತ್ತ-'ಮುನೀಂದ್ರಃ ಶ್ರೀಘನಃ ಶಾಸ್ತಾ ಮುನಿಃ ಶಾಕ್ಯಮುನಿಸ್ತುಯಃ' ಎನ್ನುತ್ತದೆ. ಶಬರಿಮಲೆಯು ಮೊದಲಿಗೆ ಬೌದ್ಧ ವಿಹಾರವಾಗಿಯೇ ಇದ್ದಿತೆಂದೂ, ಅಲ್ಲಿನ ಧರ್ಮಶಾಸ್ತನು ಬುದ್ಧನೇ ಎಂದೂ ಒಂದು ವಾದವಿದೆ; 'ಸ್ವಾಮಿಯೇ ಶರಣಂ, ಶರಣಂ ಅಯ್ಯಪ್ಪ' ಎಂದು ಯಾತ್ರಿಕರು ಅಡಿಗಡಿಗೆ ಹೇಳುವ ಶರಣಾಗತಿ ಮಂತ್ರವು ಬೌದ್ಧರ ತ್ರಿಶರಣದಿಂದ ಪ್ರಭಾವಿತವಾದುದೆಂದೂ, ಶಾಸ್ತನಿಗೆ ನೆರವಾದನೆಂದು ಕಥೆಯಿರುವ ವಾವಾರ್ ದಿಟವಾಗಿ ದ್ವಾಪರನೆನ್ನುವ ಬೌದ್ಧ ಸಂತನೆಂದೂ, ಯಾತ್ರಿಕರು ಕೈಗೊಳ್ಳುವ ಅಹಿಂಸಾದಿ ವ್ರತಗಳು ಬೌದ್ಧಧರ್ಮದಿಂದ ಆಯ್ದುಕೊಂಡವೇ ಎಂದೂ ಈ ವಾದ ಸಮರ್ಥಿಸಿಕೊಳ್ಳುತ್ತದೆ.

ಶಾಸ್ತನ ಇನ್ನೊಂದು ಹೆಸರಾದ ಅಯ್ಯಪ್ಪನಲ್ಲಿರುವ 'ಅಯ್ಯ' ಎನ್ನುವುದು ಸಂಸ್ಕೃತದ 'ಆರ್ಯ' ಎನ್ನುವುದರ ತದ್ಭವವೆಂದೂ, ಆರ್ಯ ಎನ್ನುವುದು ಬುದ್ಧನಿಗೆ ಹೆಸರೆಂದೂ ಇದೇ ವಾದದವಿವರಗಳು, ಈ ವಾದವನ್ನು ಎತ್ತಿ ಹಿಡಿಯುವುದು ಕಷ್ಟ ; ಸ್ಥೂಲ ಸಾದೃಶ್ಯಗಳಿಂದ ಏನನ್ನು ಸ್ಥಾಪಿಸುವುದೂ ಸಲ್ಲದು. ಇದು ಹೇಗಾದರೂ ಇರಲಿ. ಶಾಸ್ತ ಮತ್ತು ಅಯ್ಯಪ್ಪ ಎರಡೂ ಪದಗಳು ಸಂಸ್ಕೃತದಿಂದಲೇ ಬಂದವೇ ಎನ್ನುವುದೂ ಜಿಜ್ಞಾಸೆಯೇ. ಅಯ್ಯಪ್ಪ ಎನ್ನುವುದು ಗೌಡದ್ರಾವಿಡ ಪದ; ದ್ರಾವಿಡ ಅಯ್ಯ ಸಂಸ್ಕೃತ ಆರ್ಯದಿಂದ ಬಂದುದಲ್ಲವೆಂದು ಭಾಷಾ ಶಾಸ್ತ್ರಜ್ಞರು ಸ್ಪಷ್ಟ ಪಡಿಸಿದ್ದಾರೆ. ಸಂಸ್ಕೃತದ ಆರ್ಯ ಪ್ರಾಕೃತದಲ್ಲಿ ಅಜ್ಜ, ಅಯ್ಯ ಎಂದಿರುವುದು ದಿಟ. ಆದರೆ ಅಯ್ಯವೇ ಮೊದಲಿನ ರೂಪವೆಂದೂ ಅದರ ಸಂಸ್ಕೃತೀಕರಣ 'ಆರ್ಯ'ವಾಯಿತೆಂದೂ ತಿಳಿದುಬರುತ್ತದೆ.

ಪರ್ಯಾಯ ಪದಗಳೇ

ಅಯ್ಯ, ಅಪ್ಪ ಎರಡೂ ತಂದೆಗೆ ಬಳಸುವ ಸಂಬೋಧನ ಪದಗಳು. ತಮಿಳುನಾಡಿನಲ್ಲಿ ಶಾಸ್ತನನ್ನು ಅಯ್ಯನ್, ಅಯ್ಯನಾರ್ ಎಂದು ಕರೆಯುತ್ತಾರೆ ; ಇದು ಗೌರವಾರ್ಥದ ಪ್ರಯೋಗ. ತಮಿಳ್ ಅಕಾರಾದಿ ನಿಘಂಟಿನಲ್ಲಿ 'ಅಯ್ಯನ್ ಎನ್ಬದು ಮುತ್ತೋನ್‌ಚಾತ್ತನ್ ಅಪ್ಪನ್ ಚುವಾಮಿ ಎನುಂ ಪೆಯರ್' ಎಂದಿದೆ. ಅಯ್ಯನ್ ಎನ್ನುವುದಕ್ಕೆ ಅಪ್ಪನ್ ಮತ್ತು ಚುವಾಮಿ (ಸ್ವಾಮಿ) ಎರಡೂ ಪರ್ಯಾಯ ಪದಗಳೇ. 'ಸ್ವಾಮಿಯೇ ಶರಣಂ, ಶರಣಂ ಅಯ್ಯಪ್ಪ' ಎನ್ನುವ ಮಂತ್ರದಲ್ಲಿ ಸ್ವಾಮಿ, ಅಯ್ಯಪ್ಪ ಎರಡೂ ಪದಗಳು ಜನರಿಗೆ, ಜನಾಂಗಕ್ಕೆ ಜಗತ್ತಿಗೆ ತಂದೆಯಾದವನನ್ನು ನಿರ್ದೇಶಿಸುತ್ತವೆ.

ಶಾಸ್ತ ಎನ್ನುವ ಮಾತು ಇಷ್ಟು ಸ್ಪಷ್ಟವಾಗಿಲ್ಲ. ಮೇಲೆ ತಿಳಿಸಿದ ವಾದಕ್ಕೆ ಇಂಬು ಕೊಡುವಂತೆ ಮಧುರೈ ತಮಿಳ ಸಂಗಂನವರ ನಿಘಂಟಿನಲ್ಲಿ 'ಚಾತ್ತನ್ ಎನ್ಬದುವೇ ಅರಹನುಂ ಬುದ್ಧನುಂ ಹರಿಹರ ಪುತ್ತಿರನುಡಂ ಮುಪ್ಪೆಯರೇ' ಎಂದಿದೆ. ಎಂದರೆ ಅರ್ಹನ್ (ಜಿನ), ಬುದ್ಧ ಮತ್ತು ಹರಿಹರಪುತ್ರ ಮೂವರಿಗೂ ಶಾಸ್ತನೆಂದೇ ಹೆಸರು. ಈ ನಿಘಂಟು ಸಿದ್ಧವಾಗುವ ಕಾಲಕ್ಕೆ ಸಂಸ್ಕೃತದ ಶಾಸ್ತನಿಂದ ದ್ರಾವಿಡ 'ಚಾತ್ತನ್' ಮೈದಳೆಯಿತೆನ್ನುವ ನಂಬಿಕೆಯಿದ್ದಿತು. ಆದರೆ ಈಗ ಈ ನಂಬಿಕೆ ಶಿಥಿಲವಾಗಿದೆ. ಚಾತ್ತನೇ ಶಾಸ್ತನ ಮೂಲರೂಪವೋ ಎಂಬ ಸಂಶಯವಿದೆ.

ಚಾತ್ತನ್

ಈ ವಿವಾದ ಇಲ್ಲಿ ಪ್ರಸಕ್ತವಲ್ಲ. ದಕ್ಷಿಣ ದೇಶದಲ್ಲಿ ದ್ರಾವಿಡ ಧರ್ಮದ ನೆಲೆಯಲ್ಲಿ ಚಾತ್ತನ್ ಎಂಬ ದೇವತೆಯ ಆರಾಧನೆ ತುಂಬ ಪ್ರಾಚೀನವಾದುದು ಎನ್ನುವುದು ಮುಖ್ಯ ವಿಚಾರ. ಆರ್ಯ ಸಂಸ್ಕೃತಿ ಇಲ್ಲಿ ತನ್ನ ಪ್ರಭಾವವನ್ನು ಬೀರುವ ಮೊದಲೇ ಚಾತ್ತನ್ ಪ್ರಬಲನಾದ ದೇವತೆಯಾಗಿದ್ದ. ಆರ್ಯದೇವತೆಗಳು ಇಲ್ಲಿಗೆ ಬಂದಿಳಿದು ಬೇರು ಬಿಟ್ಟು ನಿಂತಾಗಲೂ ಈ ಚಾತ್ತನ್ ಕಳೆಗುಂದಲಿಲ್ಲ. ಸಂಪರ್ಕದ ಫಲವಾಗಿ ಈ ಚಾತ್ತನಿಗೂ ಪುರಾಣ ಪ್ರಸಕ್ತಿ ಒದಗಿತು. ಆಗಮಶುದ್ಧಿ ದೊರೆಯಿತು. ದೇವಸ್ಥಾನ ಪ್ರಾಪ್ತವಾಯಿತು. ಶಿವನೊಂದಿಗೆ ವಿಷ್ಣುವಿನೊಂದಿಗೆ ಹತ್ತಿರದ ನೆಂಟು ಬೆಳೆಯಿತು.

ದಕ್ಷಿಣ ದೇಶದ ತೀರ ದಕ್ಷಿಣಭಾಗ ಪ್ರಾಚೀನ ದ್ರಾವಿಡ ಸಂಸ್ಕೃತಿಯ ನೆಲೆವೀಡು. ಇಲ್ಲಿ ಚಾತ್ತನ್ ಗ್ರಾಮದೇವತೆ. ಬೇಟೆಗಾರರನ್ನು ಕಾಪಾಡುವ ದೈವ; ಆದಿವಾಸಿಗಳ, ಕಾಡು ಜನರ. ಕಿರಾತರ ಆರಾಧ್ಯ ದೇವತೆ. ಬೆಟ್ಟಗುಡ್ಡಗಳಲ್ಲಿ ವಾಸಿಸುವ ಜನರಿಗೆ ಇವನು ಬೇಟೆಯಲ್ಲಿ ನೆರವಾಗುವ ದೈವ; ಬಯಲು ದೇಶದಲ್ಲಿರುವ ಆದಿವಾಸಿಗಳಿಗೆ ದುಷ್ಟಭೂತ, ತುಂಬ ಕಾರಣಿಕವುಳ್ಳ ಕ್ರೂರದೇವತೆ. ಕೇರಳದೇಶದಲ್ಲಿ ಪುಲಯನ್, ವೇಲನ್, ಕನನ್, ಕಣಿಯನ್. ಮಲಯರಾಯನ್, ಊರಾಳಿ, ಮನ್ನಾನ್, ಕಾನಿಕ್ಕಾರನ್. ವಿಷುವನ್. ಮಲಪಂಡಾರಂ ಮೊದಲಾದ ಆದಿವಾಸಿ ಜನಾಂಗಗಳಿಗೆ ಚಾತ್ತನೆಂದರೆ ಭಯ ಭಕ್ತಿ, ಅವನನ್ನು ಕಾಡಿ ಬೇಡಿ ಒಲಿಸಿಕೊಳ್ಳುವ ಕಾತರ. ಆ ಜನಾಂಗಗಳ ಮಂತ್ರವಾದಿಗಳು ಚಾತ್ತನನ್ನು ಪೂಜೆ ಮಾಡಿ ವಶೀಕರಣ, ಸಮ್ಮೋಹನ, ಅಭಿಚಾರ, ಅಪಸ್ಮಾರ ಭೇದನ, ಛೇದನಗಳಿಗೆ ಅವನನ್ನು ಬಿಡುತ್ತಾರೆ.

ಸೇಡು ತೀರಿಸಿಕೊಳ್ಳುವವರಿಗೆ ಚಾತ್ತನಿಗಿಂತ ಹೆಚ್ಚು ಸಮರ್ಥ ದೈವವಿಲ್ಲ. ಯಾರ ಕೈವಾಡವೂ ಕಾಣದೆ ಮನೆಯ ಮೇಲೆ ಕಲ್ಲು ಬೀಳುವುದು. ಊಟದಲ್ಲಿ ಹುಳು ಕಾಣಿಸುವುದು, ಅಮೇಧ್ಯ ಸಿಗುವುದು ಕಾರಣ ಇಲ್ಲದೆ ರೋಗಕ್ಕೆ ಪಕ್ಕಾಗುವುದು ಇಂಥ ನೂರೆಂಟು ಉಪದ್ರವಗಳಿಗೆ ಚಾತ್ತನೇ ನಿಮಿತ್ತ. ಅವನಿಗೆ ಅಸಾಧ್ಯವಾದುದೇ ಇಲ್ಲ. ತಂಟೆ - ತಕರಾರೆಂದರೆ ಅವನಿಗೆ ಪ್ರೀತಿ. ಅವನನ್ನು ಒಲಿಸಿಕೊಳ್ಳಲು ಶರಣಾಗತಿಯೊಂದೇ ದಾರಿ. ಅವನ ನೆರವನ್ನು ಪಡೆದವರು ಅವನಿಗೆ ಕೋಳಿ, ಆಡು, ಹೆಂಡ. ಗಾಂಜಾ ಇವನ್ನು ಸಮರ್ಪಿಸುತ್ತಾರೆ. ಆದಿವಾಸಿ ಜನರಂತೆ ಅವರ ದೇವರಾದ ಚಾತ್ತನೂ ಮಾಂಸಾಹಾರಿ, ಮದ್ಯಪ್ರಿಯ.

ಅವರು ಸಾಮಾನ್ಯವಾಗಿ ಚಾತ್ತನನ್ನು ಹನ್ನೆರಡು ವರ್ಷದ ಹುಡುಗನೆಂದು ಚಿತ್ರಿಸಿಕೊಳ್ಳುತ್ತಾರೆ; ಅವರಿಗೆ ಅವನು 'ಕುಟ್ಟಿಚಾತ್ತ'. ಎಂದರೆ ಹುಡುಗ-ಶಾಸ್ತ. ಕೈಯಲ್ಲಿ ಕತ್ತಿ ಹಿಡಿದು ಎಮ್ಮೆಯ ಮೇಲೆ ಕುಳಿತ ಕುಟ್ಟಿಚಾತ್ತ ಯಮನಂತೆಯೇ ಕಾಣುತ್ತಾನೆ. ಕೇರಳದಲ್ಲೆಲ್ಲ ಅವನಿಗೆ ಪೂಜಾಸ್ಥಾನಗಳಿವೆ; ಇವಕ್ಕೆ ಕೊಟ್ಟಿಲುಗಳೆಂದು ಹೆಸರು. ಹಳ್ಳಿಗೆ ಹೋಗುವ ಮೊದಲೇ ಬಾಗಿಲಲ್ಲಿ ಇಂಥ ಗುಡಿಗಳನ್ನು

ಕಾಣಬಹುದು. ಮಧ್ಯ ಕೇರಳದ ಅವನಂಗೋಡೆ ಎಂಬ ಹಳ್ಳಿಯಲ್ಲಿ ಕುಟ್ಟಿಚಾತ್ತನ ಮುಖ್ಯ ದೇವಾಲಯವಿದೆ. ಬಾಲಗ್ರಹ, ಪಿಶಾಚ ಬಾಧೆ, ಅಪಮೃತ್ಯು, ಉನ್ಮಾದ, ಮೊದಲಾದ ವೈಪರೀತ್ಯಗಳು ಕುಟ್ಟಿಚಾತ್ತನು ಸಿಟ್ಟಿಗೆದ್ದನೆನ್ನುವ ಸೂಚನೆ. ಅವನನ್ನು ಶಾಂತಗೊಳಿಸಲು ಜನ ಅವನಂಗೋಡೆಯಲ್ಲಿ ಸೇರುತ್ತಾರೆ. ತ್ರಿಚೂರಿನ ಬಳಿ ತ್ರಿಪ್ರಯರ್ ಎಂಬಲ್ಲಿ ಚಾತ್ತಸೇವಾ ಮಠವೊಂದಿದೆ. ಚಾತ್ತ ಸೇವೆಯೆನ್ನುವುದು ಆದಿವಾಸಿಗಳಲ್ಲಿ ವಿಶೇಷವಾಗಿ ಹರಡಿರುವ ಧಾರ್ಮಿಕ ಕಲ್ಪನೆ.

ಮುಖ್ಯವಾಗಿ ಚಾತ್ತ ಬೇಟೆಗಾರರ ದೇವತೆ; ಕಿರಾತ-ಶಾಸ್ತನೆಂದೇ ವ್ಯವಹಾರವಿದೆ. ಕಾನಿಕ್ಕರ್ ಮೊದಲಾದ ಕಾಡುಜನರ ಬೇಟೆಯ ದೇವತೆಗಳಿಗೆ 'ಮುತ್ತನ್'ಗಳೆಂಬ ಹೆಸರಿದೆ. ಮುತ್ತನ್ ಅಥವಾ ಮುತ್ತೋನ್ ಎನ್ನುವುದು ಚಾತ್ತನ ಹೆಸರುಗಳಲ್ಲಿ ಒಂದು ಎಂದು ಮೇಲೆ ಉಲ್ಲೇಖಿಸಿದ ತಮಿಳು ಅಕಾರಾದಿ ನಿಘಂಟು ಹೇಳುತ್ತದೆ. ಈ ದೇವತೆಗಳಿಗೆ ಹೆಂಡ, ಅವಲಕ್ಕಿ, ಕೋಳಿಗಳ ನೈವೇದ್ಯ ನಡೆಯುತ್ತದೆ. ಪೂಜಾರಿಯಾದವನು ವಿಶೇಷ ಪೂಜೆಯ ಸಂದರ್ಭದಲ್ಲಿ ಮೂರು ದಿವಸ ಮುನ್ನ ಸ್ತ್ರೀಸಂಪರ್ಕವಿಲ್ಲದೆ ನಿಯಮದಿಂದ ಇರಬೇಕು; ಈ ದೇವತೆಗಳಿಗೆ ಎಡೆಯಿಡುವ ಸ್ಥಳಕ್ಕೆ ಹೆಂಗಸರು ಬರಬಾರದು.

ಎಲ್ಲವೂ ಅಯ್ಯಪ್ಪ

ಬೆಟ್ಟದ ಕೋಡುಗಳು ಚಾತ್ತನ ನೆಲೆಯೆನ್ನುವ ನಂಬಿಕೆಯೂ ಆದಿವಾಸಿಗಳಲ್ಲಿದೆ. ಕಡಿದಾಗಿದ್ದು ಏರಲು ಕಷ್ಟವೆನಿಸಿದಷ್ಟೂ ಅದರ ಬಗ್ಗೆ ಭಯ ಭಕ್ತಿ ಹೆಚ್ಚುತ್ತವೆ. ತಮ್ಮ ಪರಿಸರದಲ್ಲಿರುವ ಬೆಟ್ಟವನ್ನು ಅವರು ಚಾತ್ತನ ರೂಪಗಳೆಂದೇ ಬಗೆದು ಅವುಗಳ ಪ್ರತೀಕಗಳೆಂದು ಸಣ್ಣ ಸಣ್ಣ ಕಲ್ಲುಗಳನ್ನು ತಮ್ಮ ಗುಡಿಸಿಲ ಹೊರಗೆ ಇರಿಸಿಕೊಳ್ಳುತ್ತಾರೆ; ಅವುಗಳಿಗೆ ಪೂಜೆಯೂ ಉಂಟು. ಬೆಟ್ಟವು ಚಾತ್ತನ ನೆಲೆ ಮಾತ್ರವಲ್ಲ, ಚಾತ್ತನು ಬೆಟ್ಟದ ಜೀವವೇ ಎಂದು ಅವರ ಕಲ್ಪನೆ. ಶಬರಿಮಲೆಯ ಯಾತ್ರಿಕರು ಪೆರುಂತೊಡೆಯ ಕಲ್ಲುಬಂಡೆಗಳನ್ನು ಪೂಜಿಸುವುದೂ, ಕಲ್ಲಿಡಂಕುನ್ನುವಿನಲ್ಲಿ ಬೆಟ್ಟದ ತುದಿಗೆ ಕಲ್ಲನ್ನು ಎಸೆಯುವುದೂ, ಕೊಟ್ಟಪಾಡಿಯಿಂದ ಮುಂದಕ್ಕೆ ಹೋಗುವಾಗ ಶಬರಿಮಲೆಯವರೆಗೂ ಸಿಗುವ ಎಲ್ಲ ಕಲ್ಲುಬಂಡೆಗಳನ್ನು ಪೂಜಿಸುವುದೂ ಈ ಕಲ್ಪನೆಯನ್ನು ಪ್ರತಿಬಿಂಬಿಸುತ್ತದೆ.

ಶಬರಿಮಲೆಯ ಗುಡಿಯಲ್ಲಿ ಪವಿತ್ರವಾದ ಕಲ್ಲುಕಟ್ಟೆಯಮೇಲೆ ಶಾಸ್ತನ ಮೂರ್ತಿಯೊಂದಿಗೆ ಮಲೆದೇವತೆಯ ಪ್ರತೀಕವನ್ನೂ ಇರಿಸಿ ಪೂಜಿಸುವುದನ್ನು ಇಲ್ಲಿ ನೆನಸಿಕೊಳ್ಳಬೇಕು.

ಶಾಸ್ತನ ಹಿನ್ನೆಲೆ ಇದು. ಆದಿವಾಸಿಗಳ, ಕಾಡುಜನರ ಪ್ರಾಚೀನ ಕಲ್ಪನೆಯಾದ ಪ್ರಚಂಡ ಮಲೆದೈವ ನಿತ್ಯಜೀವನದಲ್ಲಿ ಹಾಸುಹೊಕ್ಕಾಗಿ ಬೆರೆತು ಜನರ ಭಯಕ್ಕೂ, ಆತಂಕಕ್ಕೂ, ಸಂತೋಷಕ್ಕೂ, ಸಮಾಧಾನಕ್ಕೂ ಕಾರಣವಾಗಿ, ಬೆಟ್ಟವಾಗಿ, ನದಿಯ ನೀರಾಗಿ, ಕಲ್ಲು ಬಂಡೆಯಾಗಿ, ಮರವಾಗಿ, ಮೃಗವಾಗಿ ಕಾಣಿಸಿಕೊಂಡುದು ಪ್ರಾಚೀನ ಮನೋವೃತ್ತಿಯ ನೆಲೆಯಲ್ಲಿ. ಇರುವುದೆಲ್ಲ ಚಾತ್ತನೇ, ಓಡಿಯಾಡುವುದೆಲ್ಲ ಚಾತ್ತನೇ, ಬೆಳೆಯುವುದೆಲ್ಲ ಚಾತ್ತನೇ: 'ಸರ್ವಂ ಶಾಸ್ತಮಯಂ' ಎನ್ನುವ ಕಲ್ಪನೆ. ಶಬರಿಮಲೆ ಯಾತ್ರಿಕರು ತಮ್ಮ-ತಮ್ಮೊಳಗೆ ವ್ಯವಹಾರ ಮಾಡುವಾಗ ಅಯ್ಯಪ್ಪನೆಂದೇ ಕರೆದುಕೊಳ್ಳುತ್ತಾರೆ. ಒಬ್ಬೊಬ್ಬ ಯಾತ್ರಿಕನೂ ಅಯ್ಯಪ್ಪನೇ. ಅಷ್ಟು ಮಾತ್ರವಲ್ಲ, ಎದುರಿಗೆ ಬಂದ ಆನೆಯೂ ಅಯ್ಯಪ್ಪನ ರೂಪವೇ. ಅದು 'ಆನೆಸ್ವಾಮಿ'; ಅದು ಹಾಕಿದ ಲದ್ದಿಯೂ ಅಯ್ಯಪ್ಪನೇ. ಅದು 'ಪೀ ಸ್ವಾಮಿ!' ಕಣ್ಣಿಗೆ ಕಂಡ ಕಲ್ಲು 'ಕಲ್ಲು-ಸ್ವಾಮಿ'. ಅವರ ಮಂತ ದಲ್ಲಿ ಮಾತ್ರ ಸ್ವಾಮಿ ಅಯ್ಯಪ್ಪನಿಗೆ ಸ್ಥಾನವಲ್ಲ; ಅವರ ಎಲ್ಲ ನಡೆಯಲ್ಲೂ, ನುಡಿಯಲ್ಲೂ, ಆಲೋಚನೆಯಲ್ಲೂ ಸ್ವಾಮಿ ಅಯ್ಯಪ್ಪ ಎಡೆಬಿಡದೆ ಪ್ರವೇಶಿಸುತ್ತಾನೆ. ಅವರ ಕಣ್ಣಿಗೆ ಕಾಣುವುದೆಲ್ಲ ಅಯ್ಯಪ್ಪನೇ, ಅವರ ಮನಸ್ಸೆಲ್ಲ ಅಯ್ಯಪ್ಪನಲ್ಲೇ. ಇದು ಶಬರಿಮಲೆ ಯಾತ್ರೆಯ ವೈಶಿಷ್ಟ್ಯ.

ಮಣಿಕಂಠ

ಶಬರಿಮಲೆಯ ಶಾಸ್ತನು ಆದಿವಾಸಿಗಳ ಚಾತ್ತನೇ ಎನ್ನುವುದು ನಿರ್ವಿವಾದ. ಯಾತ್ರಿಕರು ಕೈಗೊಳ್ಳುವ ವ್ರತಗಳೂ, ಧರಿಸುವ ಬಿಲ್ಲುಬಾಣಗಳೂ, ಪೆಟ್ಟುತ್ತುಳಲ್ ವಿಧಿಯೂ ಇದನ್ನು ಸಮರ್ಥಿಸುತ್ತವೆ. ಬರಿಯ ಗ್ರಾಮದೇವತೆಯಾಗಿದ್ದ, ಬೇಟೆರಾಯನಾಗಿದ್ದ, ಪ್ರಭಾವಶಾಲಿ ಭೂತನಾಗಿದ್ದ ಚಾತ್ತನು ಆರ್ಯಸಂಸ್ಕೃತಿಯ ಪದರದಲ್ಲಿ ಸೇರಿಕೊಂಡು ಪರಾತ್ಪರ ದೈವ, ಪರಬ್ರಹ್ಮಸ್ವರೂಪನಾದ ಶಾಸ್ತನಾದುದು ಸೋಜಿಗ, ಸ್ವಾರಸ್ಯ. ಈ ಮಾರ್ಪಾಡಿಗೆ ಎಡೆಮಾಡಿ ಕೊಡುವಂತೆ ಹಲವಾರು ಪುರಾಣ ಕಥೆಗಳು ಹುಟ್ಟಿಕೊಂಡವು.

ಪ್ರಾಚೀನ ಕಲ್ಪನೆಗೂ ಪುರಾಣ ಕಥೆಗಳಿಗೂ ಸೇತುಬಂಧವಾಗಿ ಒಂದು ಅರೆ-ಐತಿಹಾಸಿಕ ವಿವರವಿದೆ. ಅದಕ್ಕೆ ಒಂದು ಸಾಂಪ್ರದಾಯಿಕ ಪೀಠಿಕೆಯನ್ನೂ ಅಳವಡಿಸಿದ್ದಾರೆ. ಶಬರಿ ಈಗಿನ ಶಬರಿಮಲೆಯಲ್ಲಿ ತಪಸ್ಸು ಮಾಡುತ್ತಿದ್ದಾಗ ಪಾಂಡ್ಯರಾಜ್ಯದಲ್ಲಿ ವಿಜಯನೆಂಬ ಬ್ರಾಹ್ಮಣ ಮಕ್ಕಳಿಲ್ಲದೆ ಕೊರಗುತ್ತಿದ್ದ. ಅವನು ಶಬರಿಯನ್ನು ಕೇಳಲು ಆಕೆ ಶಬರೀತೀರ್ಥದಲ್ಲಿ ಸ್ನಾನಮಾಡೆಂದು ಸೂಚಿಸಿದಳು. ಆಗಲೆಂದು ಬ್ರಾಹ್ಮಣ ಸ್ನಾನಮಾಡಲು ಅವನ ಪಾಪಗಳೆಲ್ಲ ಕರಿಯ ಕಾಗೆಗಳಂತೆ ಹೊರಗೆ ಬಂದು ನೀರಿನಲ್ಲಿ ತೊಳೆದು ಹೋದುವು. ಒಡನೆಯೇ ಧರ್ಮಶಾಸ್ತ ಕಾಣಿಸಿಕೊಂಡು ಮುಂದಿನ ಜನ್ಮದಲ್ಲಿ ಬ್ರಾಹ್ಮಣನಿಗೆ ತಾನು ಮಗನಾಗಿ ಬರುವುದಾಗಿ ಭರವಸೆ ಕೊಟ್ಟು ಮರೆಯಾದನು.

ಇಷ್ಟು ಪೀಠಿಕೆ. ಪಾಂಡ್ಯದೇಶದ ರಾಜಕುಮಾರನೊಬ್ಬ ಕೇರಳದ ಪಂದಳಂಗೆ ಬಂದು ಅಲ್ಲಿ ಅರಸೊತ್ತಿಗೆಯನ್ನು ಆರಂಭಿಸಿದುದು ದಿಟ; ಅದು ಮೊನ್ನೆ ಮೊನ್ನೆಯವರೆಗೂ ಉಳಿದು ಬಂದಿದ್ದಿತು. ಇದಾದುದು ಕ್ರಿಸ್ತಾಬ್ದ 904ರಲ್ಲಿ ಎಂದೂ ಊಹೆಯಿದೆ. ಈ ರಾಜಮನೆತನದಲ್ಲಿ ರಾಜಶೇಖರನೆಂಬ ಒಬ್ಬ ರಾಜನಿದ್ದನೆಂದೂ, ಅವನಿಗೆ ಪಂಬ ನದಿಯ ದಡದಲ್ಲಿ ಮಗುವೊಂದು ದೊರೆತು ಅದನ್ನು ಸಾಕುಮಗನಾಗಿ ಬೆಳೆಸಿದನೆಂದೂ ಕಥೆಯಿದೆ. ರಾಜಶೇಖರನೇ ಹಿಂದಿನ ಜನ್ಮದಲ್ಲಿ ಬ್ರಾಹ್ಮಣ ವಿಜಯನಾಗಿದ್ದು, ಅವನ ಸಾಕುಮಗನೇ ಧರ್ಮಶಾಸ್ತನೆಂದು ವಿವರಿಸುವುದು ಪೀಠಿಕೆಯ ಉದ್ದೇಶ.

ಪಂದಳಂ ಶಬರಿಮಲೆಯಿಂದ ಇಪ್ಪತ್ತೈದು ಮೈಲಿ ದೂರವಿರುವ ಊರು. ಮಗು ದೊರೆತ ಪಂಬ ನದಿಯ ದಂಡೆಯನ್ನು ಈಗಲೂ ಗುರುತಿಸುತ್ತಾರೆ. ಈ ನದಿ ಶಬರಿಮಲೆ ಬೆಟ್ಟಸಾಲಿನಲ್ಲಿಯೇ ಹುಟ್ಟುತ್ತದೆ. ದ್ರಾವಿಡ ಪಂಬವನ್ನು ಸಂಸ್ಕೃತ ಮಾಡಿ ಪಂಪಾ ಎಂದೂ ಕರೆಯುವುದುಂಟು. ಕೊಟ್ಟಾಯಂ ಪ್ರದೇಶದಲ್ಲಿ ಪಂಬವಲ್ಲದೆ ಅದಕ್ಕೆ ಉಪನದಿಯಾದ ಮಣಿಮಲೆಯೂ, ಮೀನಚಿಲ್, ಅರಕುಲಂ ನದಿಗಳೂ ಹರಿಯುತ್ತವೆ. ಮಣಿಮಲೆಯೆಂದು ಅಲ್ಲಿನ ಬೆಟ್ಟಸಾಲಿಗೂ ಹೆಸರಿದೆ. ಈ ಬೆಟ್ಟಸಾಲಿನ ಐದು ಕೋಡುಗಳನ್ನು (ತಲಪಾರಮಲೆ ಇತ್ಯಾದಿ) ಮಲಯರಾಯನ್ ಆದಿವಾಸಿಗಳು ದೈವಗಳೆಂದು ಪೂಜಿಸುತ್ತಾರೆ. ರಾಜ-

ಶೇಖರನ ಸಾಕುಮಗನ ಹೆಸರು ಮಣಿಕಂಠ ಎನ್ನುವುದನ್ನು ಈ ಹಿನ್ನೆಲೆಯಲ್ಲಿ ಗಮನಿಸಬೇಕು. ರಾಜನಿಗೆ ಆಕಸ್ಮಿಕವಾಗಿ ದೊರೆತ ಮಗುವು ಮಣಿಮಲೆಯ ಕೊಡುಗೆಯೇ ಎಂದು ಜನರು ಬಗೆದಿದ್ದರೆ ಆಶ್ಚರ್ಯವೇನಲ್ಲ. ಮಲೆದೈವವೇ ಜೀವತಳೆದು ಬಂದಿತೆನ್ನುವ ಕಲ್ಪನೆ ಪ್ರಾಚೀನ ಮನೋವೃತ್ತಿಯಲ್ಲಿ ಸಹಜವೇ.

ಹುಲಿಯ ಹಾಲು

ಅಂತೂ ಮಣಿಕಂಠ, ರಾಜನ ಸಾಕುಮಗನಾದರೂ, ಬೇಟೆಗಾರರಲ್ಲಿ ಬೇಟೆಗಾರನಾಗಿ, ಬಿಲ್ಲಾಳಾಗಿ, ಸಾಹಸಿಯಾಗಿ, ಶೂರನಾಗಿ ಬೆಳೆದ. ಹನ್ನೆರಡು ವರ್ಷದ ಹರೆಯದಲ್ಲೇ ಅಲ್ಲಿನ ಆದಿವಾಸಿಗಳಿಗೆ ನಾಯಕನಾದ. ಅವನೊಂದಿಗೆ ಕಿರಾತರೂ ಕಾಡು ಜನರೂ ಬೆಟ್ಟಗುಡ್ಡಗಳಲ್ಲಿ, ಕಾಡುಮೇಡುಗಳಲ್ಲಿ ಸಂಚರಿಸಿ ದುಷ್ಟ ಪ್ರಾಣಿಗಳನ್ನು, ದರೋಡೆಕೋರರನ್ನು, ಹಡಗು ಕಳ್ಳರನ್ನು ಸದೆಬಡಿಯುತ್ತಿದ್ದರು. ಉದಯನೆಂಬ ಕಳ್ಳನನ್ನು ಮಣಿಕಂಠ ಎರುವೇಲಿಯಲ್ಲಿ ಹಿಡಿದು ಕೊಂದ ಪ್ರಸ್ತಾಪ ಹಿಂದೆಯೇ ಬಂದಿತಷ್ಟೆ; ಈ ಕೆಲಸದಲ್ಲಿ ಅವನಿಗೆ ನೆರವಾದ ವಾವಾರನ ಪ್ರಸ್ತಾಪವೂ ಬಂದಿತು.

ಮಣಿಕಂಠ ದೊರೆತಾಗ ರಾಜಶೇಖರನಿಗೆ ಮಕ್ಕಳಿರಲಿಲ್ಲ. ಅವನೇ ತನ್ನ ಉತ್ತರಾಧಿಕಾರಿಯಾಗತಕ್ಕವನೆಂದು ರಾಜ ನಿರ್ಧರಿಸಿದ್ದ. ಆದರೆ ಹತ್ತು ಹನ್ನೆರಡು ವರ್ಷಗಳ ನಂತರ ರಾಣಿಗೆ ಗಂಡುಮಗನೊಬ್ಬ ಹುಟ್ಟಿದ. ರಾಜನು ಮಾತ್ರ ಮಣಿಕಂಠನನ್ನೇ ಹಿರಿಯ ಮಗನೆಂದು ಬಗೆದಿದ್ದ. ಇದರಿಂದ ರಾಣಿಗೆ ತನ್ನ ಮಗನ ವಿಚಾರವಾಗಿ ಕಾತರ ಮೂಡಿತು. ಮಣಿಕಂಠನಿರುವವರೆಗೆ ತನ್ನ ಮಗ ರಾಜನಾಗುವ ಸಂಭವವಿಲ್ಲವೆಂದು ಆಕೆಗೆ ಖಚಿತವಾಯಿತು. ಹೇಗಾದರೂ ಮಣಿಕಂಠನನ್ನು ಮುಗಿಸುವ ಸನ್ನಾಹ ಮಾಡಿದಳು.

ಮಂತ್ರಿಯ, ಮತ್ತಿತರ ಅಧಿಕಾರಿಗಳ ನೆರವನ್ನು ಪಡೆದು ತನಗೆ ದುಸ್ಸಹವಾದ ಹೊಟ್ಟೆಬೇನೆಯೆಂದೂ, ಹುಲಿಯ ಹಾಲಿನಿಂದ ಮಾತ್ರ ಈ ವ್ಯಾಧಿ ಗುಣವಾಗುವುದೆಂದೂ ವದಂತಿ ಹರಡಿಸಿದಳು. ಬೇಟೆಯಲ್ಲಿ ಗುರಿತಪ್ಪದ, ಬಿಲ್ಲಾಳಾದ ಮಣಿಕಂಠನೇ ಹುಲಿಯ ಹಾಲನ್ನು ತರಲು ತಕ್ಕವನೆಂದು ಮಂತ್ರಿ ಸೂಚಿಸಿದನು.

ರಾಜ ಹಿಂಜರಿದರೂ ಮಣಿಕಂಠ ತರಲೊಪ್ಪಿದ. ಇರುಮುಡಿಯನ್ನು ತಲೆಯ ಮೇಲೆ ಹೊತ್ತು ತಾನೊಬ್ಬನೇ ಹೊರಟ. ಇರುಮುಡಿಯೆಂದರೆ ಎರಡು ಬಾಯಿಯಿರುವ ಗಂಟು; ಒಂದರಲ್ಲಿ ತನಗೆ ಬೇಕಾದ ಅಹಾರ, ಇನ್ನೊಂದರಲ್ಲಿ ತ್ರಿಣೇತ್ರ ಶಿವನ ಶಕ್ತಿಯನ್ನು ಆಹ್ವಾನಿಸಿದ ತೆಂಗಿನಕಾಯಿ. ಈಗಲೂ ಶಬರಿಮಲೆ ಯಾತ್ರಿಕರು ಎರುವೇಲಿಯಿಂದ ಹೊರಡುವಾಗ ಇರುಮುಡಿಯನ್ನು ಹೊತ್ತು ಹೊರಡುತ್ತಾರೆ. ಈ ಗಂಟನ್ನು ಕಟ್ಟುವ ವಿಧಿ 'ಕಟ್ಟು ಮುರುಕ್ಕು' ಎನಿಸಿಕೊಳ್ಳುತ್ತದೆ. ಶಾಸ್ತನ ಪ್ರಸ್ಥಾನವನ್ನು ನೆನಸಿಕೊಳ್ಳುವ ವಿಧಿಯಿದು.

ಮಣಿಕಂಠನು ಎರುವೇಲಿಯಿಂದ ಹೊರಟು ಕಾಡಿನ ಒಳಹೊಕ್ಕು ಹುಲಿಯನ್ನು ಹಿಡಿದು ಅದರ ಬೆನ್ನೇರಿ ಪಂದಲಂ ರಾಜಧಾನಿಗೆ ಬಂದನೆಂದು ಕಥೆ. ದೇವತೆಗಳೆಲ್ಲ ಚಿರತೆಗಳಾಗಿ, ದೇವೇಂದ್ರನೇ ಹುಲಿಯಾಗಿ ಶಾಸ್ತನ ಬರವನ್ನು ಎದುರು ನೋಡುತ್ತಿದ್ದರೆಂದು ಉಪಕಥೆ. ಮಣಿಕಂಠನು ಹುಲಿಯನ್ನೇರಿ ಹಿಂದಿರುಗಿ ಬಂದಾಗ ಕಾಡಿನ ಚಿರತೆಗಳೆಲ್ಲ ಅವನನ್ನು ಹಿಂಬಾಲಿಸಿದುವಂತೆ. ಇದನ್ನು ನೋಡಿ ದಿಗಿಲು ಬಿದ್ದ ರಾಣಿಗೆ ಒಮ್ಮೆಲೇ ಗುಣವಾಗಿಬಿಟ್ಟಿತಂತೆ !

ದೈವವಾದ

ರಾಜನು ಮಣಿಕಂಠನ ಸಾಹಸಕ್ಕೆ ಮೆಚ್ಚಿ ಅವನೇ ರಾಜನಾಗಬೇಕೆಂದು ಬೇಡಿಕೊಂಡ. ಆದರೆ ಮಣಿಕಂಠ ಒಪ್ಪದೆ ಕಾಡಿನೊಳಗೆ ಮರೆಯಾದ. ಮರೆಯಾಗುವ ಮೊದಲು ದೂರದಲ್ಲಿದ್ದ ಆಲದ ಮರಕ್ಕೆ ಬಾಣವೊಂದನ್ನು ಬಿಟ್ಟು ಅಲ್ಲಿ ತನಗೆ ಗುಡಿಯೊಂದನ್ನು ಕಟ್ಟುವಂತೆ ಸೂಚಿಸಿದ. ಇದು 'ಸರಂಕುಟ್ಟಿಯಲ್' ಎಂದು ಪ್ರಸಿದ್ಧವಾಗಿದೆ. ಈಗಲೂ ಮೊದಲ ಬಾರಿ ಶಬರಿಮಲೆ ಯಾತ್ರೆಗೆ ಹೋದವರು ಈ ಮರದೆಡೆಗೆ ಬಾಣ ಬಿಡುವ ಪದ್ಧತಿಯಿದೆ. ತನ್ನ ಪೂಜೆಯನ್ನು ನಡೆಸುವ ವಿಧಾನವನ್ನೂ, ಅದಕ್ಕೆ ಯಾತ್ರಿಕರು ಕೈಗೊಳ್ಳಬೇಕಾದ ನಿಯಮಗಳನ್ನೂ ಮಣಿಕಂಠನೇ ಸೂಚಿಸಿದನಂತೆ.

ಹೀಗೆ ಮರೆಯಾದ ಮಣಿಕಂಠ ಜನರಿಗೆ ದೈವವಾದ. ವೀರರು ತೀರಿಕೊಂಡು ಭೂತಗಳಾಗುವುದು, ಪಿತೃ ದೇವತೆಗಳಾಗಿ ಪೂಜೆಗೊಳ್ಳುವುದು ಎಲ್ಲ

ಪ್ರಾಚೀನ ಜನಾಂಗಗಳಲ್ಲಿಯೂ ಕಂಡುಬರುವ ವಿವರ. ಅದ್ಭುತ ಕೆಲಸಗಳನ್ನು ಮಾಡಿ ಜನರಿಗೆ ಆಶ್ಚರ್ಯವನ್ನೂ, ಸುಖವನ್ನೂ ಒದಗಿಸಿದ ಮಣಿಕಂಠ ಅವರ ದೈವವಾದ ಚಾತ್ತನಲ್ಲಿ ಬೆರೆತು ಹೋದುದು ಸಹಜವೇ.

ಚಾತ್ತನ ಅಸ್ಪಷ್ಟ, ಅನಿರ್ದಿಷ್ಟ ವ್ಯಕ್ತಿತ್ವಕ್ಕೆ ಮಣಿಕಂಠನ ಮಾನವ ವ್ಯಕ್ತಿತ್ವವು ಕೂಡಿಕೊಂಡು ಶಾಸ್ತನ ಕಲ್ಪನೆ ಮೂಡಿತೆನ್ನ ಬಹುದು. ಆದರೆ ಈ ನೆಲೆಯಲ್ಲಿ ಶಾಸ್ತನಿಗೂ ಶಿವ - ವಿಷ್ಣು - ಶಕ್ತಿಯರಿಗೂ ಯಾವ ಸಂಬಂಧವೂ ಕಾಣಬರುವುದಿಲ್ಲ. ಮುಂದೆ ಶಿವನೂ ವಿಷ್ಣುವೂ ನಾಡಿನಲ್ಲೆಲ್ಲ ವಿಶಿಷ್ಟ ದೇವತೆಗಳಾಗಿ ಜನಪ್ರಿಯರಾಗತೊಡಗಿ ದಾಗ ಶಾಸ್ತನ ಭಕ್ತರು ಇವರಿಬ್ಬರಿಗೂ ಶಾಸ್ತನ ನೆಂಟನ್ನು ಒದಗಿಸಲೆತ್ನಿಸಿದುದು ಸಹಜವೇ. ಈ ಪ್ರಯತ್ನದ ಫಲವಾಗಿ ಶಾಸ್ತ ಹರಿಹರ ಪುತ್ರನಾದ. ಭಾಗವತ ಪುರಾಣ, ಸುಪ್ರಭೇದಾಗಮಗಳಲ್ಲಿ ಶಾಸ್ತನ ಬಗ್ಗೆ ಕಥೆಗಳು ತಲೆದೋರಿದವು. ಮಣಿಕಂಠನಿಗೂ ಹರಿಹರ ಪುತ್ರನಿಗೂ ತಾದಾತ್ಮ್ಯವನ್ನು ಕಲ್ಪಿಸಿದರು.ಮಹಿಷಾ-ಸುರ ವಧೆ, ಅಮೃತ ಮಂಥನ, ದತ್ತಾತ್ರೇಯ ಚರಿತ್ರೆ, ಭಸ್ಮಾಸುರ ಪ್ರಸಂಗ ಇವೆಲ್ಲವನ್ನೂ ಶಾಸ್ತನಿಗೆ ಅಳವಡಿಸಿದರು.

ಹೀಗಾಗಿ ಇತರ ದೇವತೆಗಳಂತೆ ಶಾಸ್ತನೂ ಪುರಾಣಪ್ರಸಿದ್ಧನಾಗಿ ಆಗಮಸಿದ್ಧನಾಗಿ ಮೈದಳೆದು ನಿಲ್ಲುವುದು ಸಾಧ್ಯವಾಯಿತು.

ನಮ್ಮ ನಾಡಿನ ಧರ್ಮ ಕ್ಷೇತ್ರಗಳಲ್ಲಿ ಕೆಲವು ತುಂಬ ಕುತೂಹಲಕಾರಿ ಯಾದವು. ಅವುಗಳಲ್ಲಿ ಧಾರ್ಮಿಕ ವಿವರಗಳಷ್ಟೇ ಅಲ್ಲದೆ, ಸ್ವಾರಸ್ಯವಾದ ಸಾಮಾಜಿಕ ವಿವರಗಳೂ, ಐತಿಹಾಸಿಕ ಪ್ರಸಂಗಗಳೂ ಕಲೆತು ಬಂದಿರುತ್ತವೆ. ಪ್ರಸ್ತುತ ಚೇತನದಿಂದ ಜಾರಿಹೋದ ಘಟನೆಗಳು ಸಂಕೇತಗಳಲ್ಲಿ, ಪದ್ಧತಿಗಳಲ್ಲಿ ಪುರಾಣಗಳಲ್ಲಿ ಉಳಿದುಬಂದಿದ್ದು ಅವುಗಳ ವಿಶ್ಲೇಷಣೆ ನಮ್ಮ ಸಂಸ್ಕೃತಿಯ ಅಧ್ಯಯನಕ್ಕೆ ಅವಶ್ಯವೆನಿಸುತ್ತವೆ. ಒಂದೊಂದು ಧರ್ಮಕ್ಷೇತ್ರಕ್ಕೂ ಒಂದೊಂದು ವ್ಯಕ್ತಿತ್ವವಿರುತ್ತದೆ; ಈ ವ್ಯಕ್ತಿತ್ವದ ಸ್ವಾರಸ್ಯವೇ ಜನಪ್ರೀತಿಗೆ ಕಾರಣವಾಗು ವುದು. ಶಬರಿಮಲೆಯಾತ್ರೆಯ ಸ್ವಾರಸ್ಯ ಕ್ಷೇತ್ರದ ವ್ಯಕ್ತಿತ್ವಕ್ಕೆ ಸಂಬಂಧಿಸಿದುದು.

ಮಲೆಯಾಳ ಪಂಚಾಂಗದಲ್ಲಿ ವೃಶ್ಚಿಕ ಮಾಸದ ಮೊದಲ ದಿನದಿಂದ (ಎಂದರೆ ಸಾಮಾನ್ಯವಾಗಿ ನವೆಂಬರ್ ತಿಂಗಳ ನಡುವೆ) ಆರಂಭವಾಗಿ ಮಕರ ಸಂಕ್ರಾಂತಿಯಂದು (ಎಂದರೆ ಜನವರಿ 14ನೆಯ ತಾರೀಖಿನ ಸುಮಾರು) ಮುಗಿಯುವ ಎರಡು ತಿಂಗಳ ಕಾಲ ಶಬರಿಮಲೆಯಲ್ಲಿ ಮಂಡಲ ಪೂಜೆ ನಡೆ-ಯುತ್ತದೆ. ಜನವರಿ 14ರ ಸುಮಾರಿಗೆ ನಡೆಯುವ ಮಕರವಿಳಕ್ಕು ಉತ್ಸವ ತುಂಬ ವೈಭವದಿಂದ ಜರುಗುತ್ತದೆ. ಈ ಪೂಜೆ ಮತ್ತು ಉತ್ಸವಕ್ಕಾಗಿ ಕೇರಳದ ಎಲ್ಲ ಭಾಗಗಳಿಂದಲೂ, ದಕ್ಷಿಣ ದೇಶದ ನಾನಾ ಕಡೆಗಳಿಂದಲೂ ಲಕ್ಷಾಂತರ ಜನರು ಗುಂಪು ಗುಂಪಾಗಿ ಬಂದು ನೆರೆಯುತ್ತಾರೆ. ಹೀಗೆ ಶಬರಿಮಲೆಗೆ ಬರುವ ಯಾತ್ರಿಕರು ಕೆಲವು ನಿಯಮಗಳನ್ನು ಅನುಸರಿಸಿ ಮೂವತ್ತು ನಲವತ್ತು ಮೈಲಿ ಕಾಡಿನೊಳಗೆ ನಡೆದೇ ಬರಬೇಕು. ಕಷ್ಟಸಾಧ್ಯವಾದ ಯಾತ್ರೆಯಾದರೂ ಜನ ಉತ್ಸಾಹದಿಂದ ಶ್ರದ್ಧೆಯಿಂದ, ಕೃತಕೃತ್ಯತೆಯಿಂದ ಅದನ್ನು ಕೈಕೊಳ್ಳುವುದು ಸೋಜಿಗವೆನಿಸುತ್ತದೆ.

ಹೆಂಗಸರಿಗೆ ನಿರ್ಬಂಧ

ಯಾತ್ರಿಕರಲ್ಲಿ ಗಂಡಸರೇ ಹೆಚ್ಚು ಮಂದಿ ಇರುತ್ತಾರೆ. ಮೈನೆರೆಯದ ಹೆಣ್ಣುಮಕ್ಕಳೂ, ಮುಟ್ಟು ನಿಂತ ಹೆಂಗಸರೂ ಶಬರಿಮಲೆಗೆ ಹೋಗಿಬರ ಬಹುದು. ಇತರರು ಹೋಗುವ ಹಾಗಿಲ್ಲ. ಮಲಯರಾಯನ್ ಎನಿಸಿಕೊಳ್ಳುವ ಆದಿವಾಸಿಗಳು ಶಬರಿಮಲೆ ಯಾತ್ರೆ ನಡೆಸುವ ಪದ್ಧತಿಯನ್ನೇ ಹೆಚ್ಚು ಕಡಿಮೆ ಎಲ್ಲರೂ ಅನುಸರಿಸುತ್ತಾರೆ. ಈ ಆದಿವಾಸಿಗಳು ಕೊಟ್ಟಾಯಂ ಜಿಲ್ಲೆಯ ತೊಡ-ಪುಷ, ಮಿನಚಿಲ್, ಚಂಗನಚ್ಚೇರಿ ತಾಲ್ಲೂಕುಗಳಲ್ಲಿ ಬಹುಮಟ್ಟಿಗೆ ವಾಸಮಾಡುವ ಕಾಡುಜನ; ಕಾಡು ಪ್ರಾಣಿಗಳನ್ನು ಕೊಂದು ಹೊಟ್ಟೆಹೊರೆದುಕೊಳ್ಳುತ್ತಾರೆ; ಬೇಸಾಯವನ್ನೂ ಆಗಾಗ ನಡೆಸುವ ಅಲೆಮಾರಿ ಜನ ಇವರು. ಇವರ ಸಾಂಸ್ಕೃತಿಕ ನೆಲೆ ತುಂಬ ಪ್ರಾಚೀನವಾದುದು. ಇವರು ಬೆಟ್ಟಗಳನ್ನೇ ದೈವಗಳೆಂದು ಪೂಜಿಸುತ್ತಾರೆ. ಶಬರಿಮಲೆಯ ಶಾಸ್ತನಿಗೆ ವಿಶೇಷವಾಗಿ ನಡೆದುಕೊಳ್ಳುತ್ತಾರೆ.

ಶಾಸ್ತನ ವಿಚಾರವಾಗಿ ಇವರಲ್ಲಿ ಹೆಂಗಸಿಗೆ ನಿರ್ಬಂಧ ಹೆಚ್ಚು. ಎಲ್ಲ ಆದಿ ವಾಸಿಗಳೂ ತಮ್ಮ ಧಾರ್ಮಿಕ ವಿಧಿಗಳಿಂದ ಹೆಂಗಸರನ್ನು ದೂರವಿಡುವುದು

ಸಾಮಾನ್ಯ. ಕೆಲವು ದೇವತೆಗಳ ಬಗ್ಗೆ ಈ ನಿರ್ಬಂಧ ಕಠಿಣವಾಗುತ್ತದೆ. ಶಬರಿ-ಮಲೆಯ ಯಾತ್ರೆಗೆ ಹೊರಟ ಮಲೆಯರಾಯನ್ ಆದಿವಾಸಿ ಹದಿನಾಲ್ಕು ದಿನ ಮುಂಚೆ ಸ್ತ್ರೀ ಸಂಪರ್ಕವನ್ನು ಬಿಟ್ಟಿರುತ್ತಾನೆ; ಮಾಂಸಾಹಾರವನ್ನೂ ಬಿಟ್ಟಿರುತ್ತಾನೆ. ಮನ್ನಾನ್ ಆದಿವಾಸಿಗಳೂ ಬೇಸಾಯದ ವಿಧಿಗೆ ಮೊದಲು ಐದು ದಿನ ಹೆಂಗಸರೊಂದಿಗೆ ಕೂಡುವುದಿಲ್ಲ. ಕಾನಿಕ್ಕಾರನ್ ಆದಿವಾಸಿಗಳು ದೇವರಿಗೆ ಎಡೆಯಿಡುವ ಸ್ಥಳಕ್ಕೆ ಹೆಂಗಸರು ಬರುವುದಿಲ್ಲ. ನಾಗಬನಗಳಿಗೆ, ಕಾವುಗಳಿಗೆ, ದೈವಗಳು ನೆಲೆಸಿರುವ ಬೀಡುಗಳಿಗೆ ಹೆಂಗಸರ ಪ್ರವೇಶವಿಲ್ಲ.

ರಜಸ್ವಲೆಯಾಗುವುದು, ಯೋನಿಯಿಂದ ರಕ್ತಸ್ರಾವವಾಗುವುದು ಹೆಂಗಸಿನ ದೋಷಗಳೆಂದು ಬಗೆದು ಧಾರ್ಮಿಕ ವಿಧಿಯಿಂದ ಅಂತಹ ಹೆಂಗಸನ್ನು ಬಹಿಷ್ಕೃತೆಯೆಂದು ನಿಶ್ಚಯಿಸುವುದು ಪ್ರಾಚೀನ ಮನೋಧರ್ಮ. ಪ್ರಪಂಚದ ಎಲ್ಲ ಆದಿವಾಸಿಗಳಲ್ಲಿಯೂ ಇದನ್ನು ಗಮನಿಸಬಹುದು. ಸಂದರ್ಭ ಇಲ್ಲದಿದ್ದರೂ ಸಂಭವವೇ ಸಾಕಾಗುತ್ತದೆ. ಸಾಮಾನ್ಯವಾಗಿ ಆದಿವಾಸಿಗಳ ಗಂಡು ದೈವಗಳು ವೀರಾಳುಗಳು; ಬಹಿಷ್ಕೃಯಾಗುವ ಅಬಲೆಯಾದ ಹೆಂಗಸೆಂದರೆ ಅವರಿಗೆ ಸಹನೆಯಿಲ್ಲ. ಸುಸಂಸ್ಕೃತ ಜನಾಂಗಗಳಲ್ಲಿನ ಧಾರ್ಮಿಕ ವ್ರತಗಳಲ್ಲಿ ಬ್ರಹ್ಮಚರ್ಯಕ್ಕೆ ಕೊಟ್ಟಿರುವ ಪ್ರಾಶಸ್ತ್ಯ ಗಮನಾರ್ಹವಾದುದು. ಈ ಸ್ತ್ರೀ ದ್ವೇಷಕ್ಕೆ ಪ್ರತೀಕಾರವೆಂಬಂತೆ ಕೆಲವು ವಿಧಿಗಳಿರುವುದೂ ಸ್ವಾರಸ್ಯ.

ನಿದರ್ಶನಕ್ಕೆ, ಕೊಡಗು ಸೀಮೆಯ ಬಲ್ಮಾವತಿಯಲ್ಲಿ ಅಯ್ಯಪ್ಪನ ಪೂಜೆಗೆ ಪೂರ್ವಭಾವಿಯಾಗಿ ನಡೆಯುವ ವಿಧಿಯನ್ನು ನೋಡಿ. ಇಲ್ಲಿನ ಪೊನಿಕಾಡಿನಲ್ಲಿ ಅಯ್ಯಪ್ಪನ ಗುಡಿಯೊಂದಿದೆ. ಅಯ್ಯಪ್ಪ ಅವಿವಾಹಿತ, ಬ್ರಹ್ಮಚಾರಿ. ಪೂಜೆಯ ದಿನ ಮುಂಜಾನೆ ಹೆಂಗಸರೆಲ್ಲ ಕಲೆತು ಗುಡಿಯ ಬಳಿಯಿರುವ ಕೊಳಕ್ಕೆ ಮೀಯಲು ಹೋಗುತ್ತಾರೆ. ಮಿಂದು ಬರಿಬೆತ್ತಲೆ ಮೈಯಿರುವಾಗ ಒಬ್ಬೊಬ್ಬಳೂ ಒಂದೊಂದು ಒಲೆ ಹೊತ್ತಿಸಿ ಅರಿಶಿನ ಕೂಡಿದ ಅಕ್ಕಿಹಿಟ್ಟಿನ ರೊಟ್ಟಿಯನ್ನು ಬೇಯಿಸಿ ಅಯ್ಯಪ್ಪನಿಗೆ ಎಡೆಯಿಡುತ್ತಾಳೆ. ರೊಟ್ಟಿ ಆಗುತ್ತಿರುವಾಗ, ಬೆತ್ತಲೆ ಹೆಂಗಸರು ಕೂಡಿಕೊಂಡು ಅಶ್ಲೀಲವೆನಿಸುವ ಮಾತುಕತೆಯಲ್ಲಿ ತೊಡಗುತ್ತಾರೆ. ಎಡೆಯಿಟ್ಟನಂತರ ಅವರೆಲ್ಲ ಅಯ್ಯಪ್ಪನು ಕೊಡಗು ಸೀಮೆಗೆ ಬಂದ

ಕಥೆಯನ್ನು ಹಾಡಿನಲ್ಲಿ ಹಾಡಿ, ಕುಣಿಯುತ್ತಾರೆ. ಇದರ ಮನೋವೈಜ್ಞಾನಿಕ ಇಂಗಿತ ಪ್ರಬಲವಾದುದು. ಜನರ ಪ್ರಸುಪ್ತ ಚೇತನದ ಆಳದಲ್ಲಿ ಅಡಗಿರುವ ಕಾಮುಕತೆ ಮತ್ತು ಮೇಲಿನ ಸ್ತರಗಳಲ್ಲಿ ಮೂಡಿ ಬರುವ ಸಾಂಘಿಕ ಸಮನ್ವಯ ದೃಷ್ಟಿ ಇವುಗಳ ಹುಯ್ದಾಟ ಇಲ್ಲಿ ಕಾಣಬರುತ್ತದೆ.

ಜೀಟೆಯ ನೆನಪು

ಇದು ಹೇಗಾದರೂ ಇರಲಿ, ಮಲಯರಾಯನ್ ಆದಿವಾಸಿಗಳು ಹದಿನಾಲ್ಕು ದಿನಗಳ ಸಂಯಮವನ್ನು ನಡೆಸಿದನಂತರ ಶಬರಿಮಲೆಗೆ ಹೊರಡುವ ಹಿಂದಿನ ದಿನ ಎಲ್ಲ ಯಾತ್ರಿಕರೂ ಕಲೆತು, ಪ್ರಯಾಣದಲ್ಲಿ ಬೇಕಾಗುವ ಪಾಥೇಯವನ್ನು ಕಟ್ಟಿಕೊಳ್ಳುತ್ತಾರೆ. ಅನಂತರ ಬೆಂಕಿಯ ಸುತ್ತ ಕುಣಿದಾಡುತ್ತಿದ್ದಾಗ ಒಬ್ಬನಿಗೆ ಆವೇಶ ಬರುತ್ತದೆ. ಅವನು ಆ ಸ್ಥಿತಿಯಲ್ಲಿ ಆಡುವ ಮಾತು ಅಯ್ಯಪ್ಪನೇ ನುಡಿಸಿದುದೆಂದು ನಂಬಿಕೆ. ಹೀಗೆ ಆವಿಷ್ಟವಾದ ಅಯ್ಯಪ್ಪ ಬೆಂಕಿಯ ಮೇಲೆ ನಡೆಯುತ್ತಾನೆ. ಜನರ ಶ್ರದ್ಧೆ ಬಲವಾಗುತ್ತದೆ. ಈ ಮನೋವೃತ್ತಿಯಿಂದ ಹೊರಟು ಎರುವೇಲಿಯಲ್ಲಿ ಮಲೆಯಾಳ ಧನುರ್ಮಾಸದ ಇಪ್ಪತ್ತೇಳನೆಯ ದಿನ (ಎಂದರೆ ಜನವರಿ ಹತ್ತರ ಸುಮಾರಿಗೆ) ಪೆಟ್ಟುತ್ತುಳಲ್ ವಿಧಿಯನ್ನು ಆಚರಿಸುತ್ತಾರೆ.

ಆದಿವಾಸಿಗಳಲ್ಲದ ಸುಸಂಸ್ಕೃತರು ಯಾತ್ರೆಗೆ ಪೂರ್ವಭಾವಿಯಾಗಿ ನಲವತ್ತೊಂದು ದಿನಗಳ ಸಂಯಮವನ್ನು ನಡೆಸುತ್ತಾರೆ. ಈ ಅವಧಿಯಲ್ಲಿ ಲೈಂಗಿಕ ವ್ಯಾಪಾರ, ಮದ್ಯಪಾನ, ಮಾಂಸಾಹಾರ ಎಲ್ಲವೂ ವರ್ಜ್ಯ. ತಲೆಗೂದಲನ್ನು ಕತ್ತರಿಸದೇ, ಮುಖ ಕ್ಷೌರ ಮಾಡಿಸದೆ, ದೀಕ್ಷೆ ತೊಡುತ್ತಾರೆ. ನೀಲಿಗಪ್ಪು ಬಣ್ಣದ ಬಟ್ಟೆಯುಟ್ಟು, ತುಲಸೀ ಮಾಲೆಯನ್ನೋ, ರುದ್ರಾಕ್ಷಿ ಮಾಲೆಯನ್ನೋ ಧರಿಸುತ್ತಾರೆ. ಕಪ್ಪು ಬಟ್ಟೆಯ ಉದರ ಬಂಧವನ್ನು ಕಟ್ಟಿಕೊಳ್ಳುವುದು ವಾಡಿಕೆ; ಅದನ್ನು ತುಂಬ ಜಾಗರೂಕತೆಯಿಂದ ನೋಡಿಕೊಳ್ಳುತ್ತಾರೆ. ಯಾವ ಕೆಲಸವನ್ನು ಮಾಡಬೇಕಾದರೂ ಅಯ್ಯಪ್ಪನ ಹೆಸರನ್ನು ಮುಂದೆಮಾಡಿಕೊಂಡು, ಅಡಿಗಡಿಗೆ 'ಸ್ವಾಮಿಯೇ ಶರಣಂ, ಶರಣಂ ಅಯ್ಯಪ್ಪ' ಎಂಬ ಸೂತ್ರವನ್ನು ಪುರಶ್ಚರಣ ಮಾಡುತ್ತಿರುತ್ತಾರೆ.

ಎಲ್ಲರೂ ಅಯ್ಯಪ್ಪಗಳೇ

ಈ ಯಾತ್ರಿಕರ ಗುಂಪಿನಲ್ಲಿ ಎಲ್ಲರೂ ಸ್ವಾಮಿಗಳೇ, ಅಯ್ಯಪ್ಪಗಳೇ. ಅವರ ವ್ಯಕ್ತಿತ್ವ ಯಾತ್ರೆಯ ಅವಧಿಯಲ್ಲಿ ಮರೆಯಾಗಿರುತ್ತದೆ. ಪರಸ್ಪರ ಮರ್ಯಾದೆ, ಸೌಹಾರ್ದ, ಸಹಕಾರ ಇವು ಈ ಗುಂಪಿನ ವಿಶಿಷ್ಟ ಗುಣಗಳು. ಗುಂಪಿನಲ್ಲಿ ಹೆಚ್ಚು ಬಾರಿ ಶಬರಿಮಲೆಗೆ ಹೋಗಿ ಬಂದವನು 'ಪೆರಿಯಸ್ವಾಮಿ'. ಅವನೇ ಗುಂಪಿನ ನಾಯಕ. ಅವನ ಅಪ್ಪಣೆಯನ್ನು ಚ-ಚು ಮೀರದೆ, ಅವನಿಗೆ ವಿಧೇಯ ರಾಗಿ ಎಲ್ಲರೂ ನಡೆದುಕೊಳ್ಳುತ್ತಾರೆ. ಬೆಳ್ಳಿಕಟ್ಟಿನ ಬಿದಿರು ಬೆತ್ತವನ್ನು ಹಿಡಿದು ಬಗಲಿಗೆ ವಿಭೂತಿ ಚೀಲವನ್ನು ಆತ ಕಟ್ಟಿಕೊಂಡಿರುತ್ತಾನೆ. ಈ ಗುಂಪಿನಲ್ಲಿ ಜಾತಿ-ಮತಗಳ ಬಡವ-ಸಿರಿವಂತ ಎಂಬ ಬೇಧವಿಲ್ಲ; ಎಲ್ಲರೂ ಸಮಾನರೇ. ಪುಲಯ ಆದಿವಾಸಿ ಮಾಡುವ ಅಯ್ಯಪ್ಪನ ಪೂಜೆಯಲ್ಲಿ ನಂಬೂದ್ರಿ ಬ್ರಾಹ್ಮಣನೂ ಬಿಂಕವಿಲ್ಲದೆ ಪಾಲ್ಗೊಳ್ಳುತ್ತಾನೆ. ಯಾವ ಕಾರಣದಿಂದಾದರೂ ಅಶೌಚ ಇದ್ದವರು ಈ ಗುಂಪಿನ ಬಳಿಗೆ ಬರುವುದಿಲ್ಲ. ಯಾತ್ರೆಯ ದೀಕ್ಷೆಯನ್ನು ಕೈಗೊಂಡ ಪ್ರತಿಯೊಬ್ಬನೂ ಅಯ್ಯಪ್ಪ ದೇವರೇ.

ಸಾಮಾನ್ಯವಾಗಿ ಯಾತ್ರೆಗೆ ಪೂರ್ವಭಾವಿಯಾದ ಪೂಜೆ ಶನಿವಾರ ರಾತ್ರಿ ಪೆರಿಯಸ್ವಾಮಿಯ ನೇತೃತ್ವದಲ್ಲಿ ನಡೆಯುತ್ತದೆ. ಮೊದಲ ಬಾರಿ ಯಾತ್ರೆಗೆ ಹೊರಡುವ ಕನ್ನಿ ಅಯ್ಯಪ್ಪನು ಈ ಪೂಜೆಯನ್ನು ವ್ಯವಸ್ಥೆ ಮಾಡುತ್ತಾನೆ. ರಾತ್ರಿಯೆಲ್ಲ ಭಜನೆ ನಡೆಯುತ್ತದೆ; ಸರಿರಾತ್ರಿಯಲ್ಲಿ ಆವೇಶದಿಂದ ಕೂಡಿದ ನರ್ತನ ಜರುಗಿ, ಪೆರಿಯಸ್ವಾಮಿಗೆ ಅಯ್ಯಪ್ಪನ ಆವೇಶ ಒದಗಿಬರುತ್ತದೆ. ಇದು ಈ ರಾತ್ರಿ ಪೂಜೆಯ ವೈಶಿಷ್ಟ್ಯ. ಶನಿವಾರ ಅಯ್ಯಪ್ಪನ ಜನ್ಮದಿನವೆಂದು ಪ್ರತೀತಿ. ಅಂದು ಯಾತ್ರಿಕನು ತುಲಸೀಮಾಲೆಯನ್ನು ವಿಧ್ಯುಕ್ತವಾಗಿ ಧರಿಸು ವುದೇ ದೀಕ್ಷೆ. ಅಲ್ಲಿಂದ ಮುಂದೆ ಯಾತ್ರೆ ಮುಗಿಯುವವರೆಗೂ ಅವನು ಪ್ರಾಪಂಚಿಕ ವ್ಯವಹಾರಗಳಿಂದ ವಿಮುಖನಾಗಿರುವನೆಂದು ಸಂಕೇತ; ಮನೆಯಲ್ಲಿ ಹುಟ್ಟು-ಸಾವುಗಳು, ರೋಗ-ರುಜಿನಗಳು ಅವನನ್ನು ಬಾಧಿಸುವಂತಿಲ್ಲ.

ಯಾತ್ರಾ ವಿಧಿ

ತಾನು ಯಾತ್ರೆಯಲ್ಲಿ ಪರಾಧೀನನಾಗದೆ ಸರ್ವಸ್ವತಂತ್ರನಾಗಿರುವ

ಉದ್ದೇಶದಿಂದ ತನಗೆ ಆಗತ್ಯವಾದ ಸಾಮಗ್ರಿಗಳನ್ನು ತಾನೇ ಗಂಟು ಕಟ್ಟಿಕೊಂಡು, ಅದನ್ನು ತಾನೇ ಹೊತ್ತು ಶಬರಿಮಲೆಯನ್ನು ಮುಟ್ಟಬೇಕೆಂಬ ವಿಧಿಯಿದೆ. ಮೂರು-ನಾಲ್ಕು ದಿವಸಗಳಿಗೆ ಬೇಕಾಗುವ ಆಹಾರ ಸಾಮಗ್ರಿ, ಬಟ್ಟೆಬರೆ. ಪಾತೆ ಪಡಗ, ಪೂಜಾಸಾಮಗ್ರಿ ಎಲ್ಲವೂ ಈ ಗಂಟಿನಲ್ಲಿರುತ್ತದೆ. ಇದಕ್ಕೆ 'ಇರು ಮುಡಿಕಟ್ಟು' ಎಂದು ಹೆಸರು. ಈ ಗಂಟನ್ನು ಕಟ್ಟಿಕೊಳ್ಳುವ, ತಲೆಯ ಮೇಲೆ ಹೊತ್ತುಕೊಳ್ಳುವ ವಿಧಿಗೆ 'ಕಟ್ಟು ಮುರಕ್ಕು' ಎಂದು ಹೆಸರು. ಈ ಗಂಟಿನಲ್ಲಿರುವ ಮುಖ್ಯ ಪದಾರ್ಥವೆಂದರೆ ತುಪ್ಪ ತುಂಬಿದ ತೆಂಗಿನಕಾಯಿ: ಇದು ಶಾಸ್ತನ ಶಕ್ತಿಯನ್ನು ಸಂಕೇತಿಸುತ್ತದೆ.

ಡಿಸೆಂಬರ್ ತಿಂಗಳ ಕೊನೆಯ ಭಾಗದಲ್ಲಿ ಅಥವಾ ಜನವರಿಯ ಮೊದಲ ಭಾಗದಲ್ಲಿ ಯಾತ್ರಿಕರು ಎರುವೇಲಿಯನ್ನು ಮುಟ್ಟುತ್ತಾರೆ; ಇಲ್ಲಿಂದಲೇ ದಿಟವಾಗಿ ಯಾತ್ರೆ ಆರಂಭವಾಗುವುದು. ಇಲ್ಲಿ ಪೆಟ್ಟಶಾಸ್ತನ ಗುಡಿಯೂ ವಾವಾರ್ ಸನ್ನಿಧಿಯೂ ಇವೆ. ಎರುವೇಲಿಯಲ್ಲಿ ನಡೆಯುವ ವಿಧಿ 'ಪೆಟ್ಟತ್ತುಳ್ಳಲ್' ಎನಿಸಿಕೊಳ್ಳುತ್ತದೆ. ಯಾತ್ರಿಕರು ಮುಖಕ್ಕೆ ಮಸಿ ಬಳಿದುಕೊಂಡು ಕಟ್ಟಿಗೆಗಳನ್ನು ಹಿಡಿದು ಪೆಟ್ಟಶಾಸ್ತನ ಗುಡಿಯ ಕಡೆ ಓಡುವುದು ಇದರ ಮುಖ್ಯ ವಿವರ. ಆದಿವಾಸಿಗಳ ಬೇಟೆಯನ್ನು ನೆನಪಿಗೆ ತರುವ ಈ ವಿಧಿಯಲ್ಲಿ ಕಿರಾತರು ಮಣಿಕಂಠ ಶಾಸ್ತನಿಗೆ ನೆರವಾದ ಪ್ರಸಂಗ ಧ್ವನಿತವಾಗುತ್ತದೆ. ಎರುವೇಲಿಯಿಂದ ಹೊರಟವರು ಶಬರಿಮಲೆಯನ್ನು ಮುಟ್ಟಬೇಕಾದರೆ ಸುಮಾರು ನಲವತ್ತೈದು ಮೈಲಿಗಳು ಕಾಡುದಾರಿಯಲ್ಲಿ ನಡೆದುಹೋಗಬೇಕು.

ಹೀಗೆ ಹೊರಟ ಯಾತ್ರಿಕರು ನಡೆಯುತ್ತ ಪೆರುಂತೊಡೆ ನದಿಯ ದಡವನ್ನು ಮುಟ್ಟಿ, ಅಲ್ಲಿ ಶಾಸ್ತ ತಂಗಿದ್ದನೆಂಬ ಕಾರಣದಿಂದ ನದೀದಡದ ಬಂಡೆಗಳಿಗೆ ಹುರಿದಕ್ಕಿ ಬೆಲ್ಲವನ್ನು ಸಮರ್ಪಿಸಿ, ರಾತ್ರಿ ಅಲ್ಲಿಯೇ ತಂಗಿದ್ದು ಮರುದಿನ ಬೆಳಿಗ್ಗೆ ಅಷುತ್ತ ಬೆಟ್ಟವನ್ನು ಏರುತ್ತಾರೆ. ಮುಳ್ಳು ಪೊದೆಗಳು, ಕಡಿದಾದ ಬಂಡೆಗಳು, ಇವನ್ನೆಲ್ಲ ದಾಟಿ ಆರು ಮೈಲಿಗಳಷ್ಟು ದೂರ ಹತ್ತಿಹೋದನಂತರ ಅಷುತ್ತ ನದಿಯನ್ನು ಮುಟ್ಟಿ ಅದರ ದಡದ ಮೇಲೆ ಎರಡನೆಯ ರಾತ್ರಿ ಕಳೆಯುತ್ತಾರೆ. ಮುಂದೆ ಕಲ್ಲಿಡಂಕನ್ನು ಎನ್ನುವಲ್ಲಿ ಗುಡ್ಡದ ತುದಿಗೆ ಸಣ್ಣ ಕಲ್ಲೊಂದನ್ನು

ಎಸೆಯುವ ವಾಡಿಕೆಯಿದೆ. ಇಲ್ಲಿ ಅಸುರನೊಬ್ಬನಿದ್ದಾನೆಂದು ಬಗೆದು ಅವನು ಅಲ್ಲಿಂದ ಬಂದು ತಮಗೆ ತೊಂದರೆ ಮಾಡದಿರಲೆಂದು ಕಲ್ಲು ಎಸೆಯುವುದು. ಮಣಿಕಂಠನು ಮಹಿಷಿಯನ್ನು ಕೊಂದು ಕಳೇಬರವನ್ನು ಇಲ್ಲಿ ಎಸೆದಿದ್ದನೆಂದು ಕಥೆ.

ಕರಿಮಲೆಯೆಂಬ ಬೆಟ್ಟವನ್ನು ಏರಿಳಿದು ಪಂಬನದಿಯನ್ನು ಮುಟ್ಟುವುದು ಯಾತ್ರೆಯಲ್ಲಿ ಮುಖ್ಯ ಘಟ್ಟ. ಶಾಸ್ತನು ಯಾತ್ರೆಯ ಸಮಯದಲ್ಲಿ ಯಾರಿಗೂ ಕಾಣದಂತೆ ಅಯ್ಯಪ್ಪಗಳೊಂದಿಗೆ ಬರುತ್ತಿರುತ್ತಾನೆಂದೂ ಈ ನದಿಯ ದಡದಲ್ಲಿ ಅವರೊಂದಿಗೇ ಅಡಿಗೆ ಮಾಡಿಕೊಂಡು ಊಟ ಮಾಡುತ್ತಾನೆಂದೂ ನಂಬಿಕೆ. ಅವನು ವೇಷ ಮರೆಮಾಚಿಕೊಂಡು ಯಾರಿಗೂ ಅವನ ಸುಳಿವು ತಿಳಿಯುವುದಿಲ್ಲವಂತೆ; ಆದರೆ ಅವನು ತಮ್ಮೊಡನೆ ಇದ್ದಾನೆಂದು ಅವರಿಗೆ ದೃಢವಾದ ವಿಶ್ವಾಸ. ಅವನ ಪ್ರೀತ್ಯರ್ಥವಾಗಿ ನದಿಯ ಮೇಲೆ ದೀಪಗಳನ್ನು ತೇಲಿಬಿಡುತ್ತಾರೆ. ರಾತ್ರಿಯಲ್ಲಿ ಅಸಂಖ್ಯಾತ ದೀಪಗಳು ನದಿಯ ಮೇಲೆ ತೇಲಿ ಸಾಗುವುದು ತುಂಬ ರಮಣೀಯವಾದ ದೃಶ್ಯವಲ್ಲವೇ ? ಇದಕ್ಕೆ 'ಪಂಬವಿಳಕ್ಕು' (ಪಂಬ ನದಿಯ ಬೆಳಕು) ಎಂದು ಹೆಸರು. ಇದು ಮಕರ ಸಂಕ್ರಮಣದ ಹಿಂದಿನ ದಿನ ನಡೆಯುವುದು ವಾಡಿಕೆ.

ಪೂಜಾ ವಿಧಿ

ಅಲ್ಲಿಂದ ಹೊರಟು ಯಾತ್ರಿಕರು ಮರುದಿನ ಬೆಳಿಗ್ಗೆ ಶಬರಿಮಲೆಯನ್ನು ಸೇರುತ್ತಾರೆ. ಪೂರ್ವಕ್ಕೆ ಮುಖ ಮಾಡಿ ನಿಂತ ಗುಡಿಯನ್ನು ಪದಿನೆಟ್ಟಾಂಪಡಿ (ಹದಿನೆಂಟು ಮೆಟ್ಟಿಲುಗಳು)ಯಿಂದ ಪ್ರವೇಶ ಮಾಡುತ್ತಾರೆ. ಪವಿತ್ರವಾದ ಈ ಮೆಟ್ಟಿಲುಗಳನ್ನು ಏರುವ ಮೊದಲು ತೆಂಗಿನಕಾಯನ್ನು ಒಡೆಯುತ್ತಾರೆ. ಯಾತ್ರಿಕರು ಎಷ್ಟು ಬಾರಿ ಶಬರಿಮಲೆ ಯಾತ್ರೆ ಮಾಡಿದ್ದಾರೋ ಅಷ್ಟನೆಯ ಮೆಟ್ಟಿಲ ಮೇಲೆ ಕಾಯಿ ಒಡೆಯುವುದೂ ಉಂಟು. ಅನಂತರ ಪ್ರದಕ್ಷಿಣೆ ಮಾಡಿ ಶಾಸ್ತನಿಗೆ ತಾವು ತೆಂಗಿನಕಾಯೊಳಗೆ ತಂದ ತುಪ್ಪವನ್ನು ಸಮರ್ಪಿಸುತ್ತಾರೆ. ಕೊಚುಕುಡುತ್ತ ಮತ್ತು ಕರುಪ್ಪುಸ್ವಾಮಿ ದೈವಗಳಿಗೂ ಪೂಜೆ ನಡೆಸುತ್ತಾರೆ.

ಮಕರ ಸಂಕ್ರಮಣದ ರಾತ್ರಿ ಮಕರವಿಳಕ್ಕು ಉತ್ಸವ ಬರುತ್ತದೆ. ವೈಭವ

ದೀಪ ದೀಪಗಳೊಡಗೂಡಿ ಮಲಿಕಪ್ಪುರತಮ್ಮನ ಸನ್ನಿಧಿಯಿಂದ ಶಾಸ್ತನ ಗುಡಿಗೆ ಸಾಗುವ ಈ ಉತ್ಸವವನ್ನು ನೋಡುವುದು ಯಾತ್ರೆಯ ಪ್ರಮುಖಘಟ್ಟ. ಮಲಿಕಪ್ಪುರಂ ಎನ್ನುವ ಸ್ಥಳ ಹತ್ತಿರದಲ್ಲಿಯೇ ಇದೆ. ಶಾಸ್ತನ ಶಕ್ತಿಯನ್ನು ಇಲ್ಲಿ ಪ್ರತಿಷ್ಠಾಪಿಸಿದ್ದಾರೆಂದು ಪ್ರತೀತಿ. ಆದರೆ ಮಲಿಕಪ್ಪುರತಮ್ಮ ಯಾರೆಂದು ಸ್ಪಷ್ಟವಾಗಿಲ್ಲ. ಶಾಸ್ತನ ಶಕ್ತಿಯೆಂದಷ್ಟೇ ಹೇಳುತ್ತಾರೆ. ಮರುದಿನ ಬೆಳಿಗ್ಗೆ ಒರಕುಷಿ ತೀರ್ಥದಲ್ಲಿ ಮಿಂದು ಸಂತರ್ಪಣೆ ನಡೆಸಿ ಹಿಂದಿರುಗುತ್ತಾರೆ. ಯಾತ್ರೆಯನ್ನು ಯಶಸ್ವಿಯಾಗಿ ನಡೆಸಿದ ಮೇಲೆ ದೀಕ್ಷೆಯೂ ಮುಗಿಯಿತೆಂದರ್ಥ. ಇನ್ನು ಮುಂದೆ ಯಾತ್ರಿಕ ನಿತ್ಯವ್ಯವಹಾರದಲ್ಲಿ ತೊಡಗಬಹುದು; ಅವನ ಆಹಾರ ವಿಹಾರಗಳಲ್ಲಿ ಯಾವ ನಿರ್ಬಂಧವೂ ಇಲ್ಲ. ಅವನ ಮೇಲೆ ಪೆರಿಯ ಸ್ವಾಮಿಯ ಅಧಿಕಾರವೂ ಇಲ್ಲಿಗೆ ಮುಗಿಯುತ್ತದೆ.

ಭೂತನಾಥ

ಈ ಯಾತ್ರಾಪದ್ಧತಿಯ ಮುಖ್ಯ ವಿವರಗಳೆಲ್ಲವೂ ಮಲಯರಾಯನ್ ಆದಿವಾಸಿಗಳಿಂದಲೇ ನಿಶ್ಚಿತವಾದವು. ಇತರರು ಅವನ್ನು ಪರಿಗ ಹಿಸಿದ್ದಾರಷ್ಟೆ. ಆದುದರಿಂದ ಈ ವಿವರಗಳಲ್ಲಿ ಹಲವಾರು ಪ್ರಾಚೀನ ಕಲ್ಪನೆಗಳನ್ನೂ, ವಿಧಿಗಳನ್ನೂ ಗುರುತಿಸಬಹುದು. ಈ ಆದಿವಾಸಿಗಳು ಶಬರಿಮಲೆ ಯಾತ್ರೆಯನ್ನು ಕೈಗೊಳ್ಳುವುದು ಕಾಡಿನಲ್ಲಿ ದುಷ್ಟಶಕ್ತಿಗಳು ತಮ್ಮನ್ನು ಬವಣೆ ಪಡಿಸದಿರಲೆಂದು. ಅನಿಷ್ಟದಿಂದ ತಮ್ಮನ್ನು ಕಾಪಾಡಿಕೊಳ್ಳುವುದು ಯಾತ್ರೆಯ ಮುಖ್ಯ ಉದ್ದೇಶ. ಈ ದೃಷ್ಟಿಯಿಂದ ಶಾಸ್ತನು ಪ್ರಬಲ ದೈವವೆಂದು ಬಗೆದು ಅವನ ಬಗ್ಗೆ ತುಂಬ ಎಚ್ಚರದಿಂದ ನಡೆದುಕೊಳ್ಳುತ್ತಾರೆ. ಆದಿವಾಸಿಗಳಲ್ಲಿ ಶ್ರದ್ಧೆಯೆಂದರೆ ಭಯದ ಪಾಲು ಹೆಚ್ಚು. ಧಾರ್ಮಿಕ ವಿಧಿಗಳಲ್ಲಿ ಭೀತಿ ಹಾಸುಹೊಕ್ಕಾಗಿ ಸೇರಿರುತ್ತದೆ.

ಶಾಸ್ತನು ಅವರ ದೃಷ್ಟಿಯಲ್ಲಿ ಭೂತನಾಥ; ಅಶರೀರವಾಗಿ ನಮ್ಮ ಸುತ್ತಲೂ ಸುಳಿದಾಡುವ ದೈವಗಳಿಗೆ ಒಡೆಯ. ಆನೆಯನ್ನೋ, ಕುದುರೆಯನ್ನೋ ಏರಿ, ಕೈಯಲ್ಲಿ ಕತ್ತಿ ಹಿಡಿದು ನಡುರಾತ್ರಿಯಲ್ಲಿ ಎಲ್ಲೆಡೆಯೂ ಅಲೆದಾಡುತ್ತ ಶಾಸ್ತನು ಬೇಟೆಯಾಡುತ್ತಾನೆಂದು ಅವರ ಕಲ್ಪನೆ. ಅವನ ಬಂಟರಾಗಿ ಇತರ ದೈವಗಳು ಕಂದೀಲುಗಳನ್ನು ಹಿಡಿದು ಅವನಿಗೆ ದಾರಿ ತೋರಿಸುತ್ತ ಸಾಗುತ್ತಿರು

ತ್ತಾರೆ. ನಡುರಾತ್ರಿಯ ಈ ಬೇಟೆಗಾರರನ್ನು ಯಾವನಾದರೂ ಮನುಷ್ಯ ಕಂಡನೆಂದರೆ ಅವನಿಗೆ ಸಾವು ಸಿದ್ಧ. ಶಾಸ್ತನ ದಾರಿಯಲ್ಲಿ ಯಾರೂ ಅಡ್ಡ ಬರುವ ಹಾಗಿಲ್ಲ; ಶಾಸ್ತನನ್ನು ಬರಿಗಣ್ಣಿನಿಂದ ನೋಡುವ ಹಾಗಿಲ್ಲ. ಸಾವು ಸನ್ನಿಹಿತವಾಗಿದ್ದರೇ ಈ ಬೇಟೆಗಾರರ ತಂಡ ಕಾಣಿಸಿಕೊಳ್ಳುವುದು.

ಬೇಟೆಯಾಡದಿರುವಾಗ ಶಾಸ್ತನು ಯೋಗಿ. ಪದ್ಮಾಸನದಲ್ಲಿಯೋ, ಸುಖಾ-ಸನದಲ್ಲಿಯೋ, ಪಟ್ಟಬಂಧದಲ್ಲಿಯೋ ಕುಳಿತು, ತಲೆಯ ಮೇಲೆ ಕಿರೀಟವನ್ನೂ, ಹಣೆಯಲ್ಲಿ ವಿಭೂತಿಯನ್ನೂ ಧರಿಸಿ, ಕೈಯಲ್ಲಿ ವಜ್ರದಂಡವನ್ನು ಹಿಡಿದು ಧ್ಯಾನ ದಲ್ಲಿ ಕುಳಿತಿರುವಂತೆ ಚಿತ್ರಿಸಿಕೊಳ್ಳುತ್ತಾರೆ. ಶಬರಿಮಲೆಯ ಮೇಲಿರುವ ಗುಡಿ ಯಲ್ಲಿ ಶಾಸ್ತನ ಮೂರ್ತಿ ಯೋಗಿಯಂತೆಯೇ ಇದೆ. ದಕ್ಷಿಣಾಮೂರ್ತಿಯಂತೆ ಯೋಗಪಟ್ಟದಲ್ಲಿ ಕುಳಿತ ಶಾಸ್ತನ ಬಲಗೈ ಚಿನ್ಮುದ್ರೆಯಲ್ಲಿದೆ. ಎಡಗೈ ಆನೆಯ ಸೊಂಡಿಲಿನಂತೆ ಹೊರಚಾಚಿದೆ. ತಲೆಯ ಮೇಲೆ ಕಿರೀಟ, ಮುಕುಟ, ಮೈಯಲ್ಲಿ ಉಪವೀತಗಳಿವೆ. ಸರ್ವಾಲಂಕಾರಭೂಷಿತವಾದ ಈ ಮೂರ್ತಿಯ ಕಲ್ಪನೆ ಆದಿವಾಸಿಗಳಿಗೆ ಹೊಸದೇ. ಅವರು ಶಾಸ್ತನನ್ನು ಕಾಣುವುದು ಕೊಚುಕೊಡುತ್ತ, ಕರುಪ್ಪನ್ ದೈವಗಳಂತೆಯೇ.

ಶಾಸ್ತನ ಈ ಮೂರ್ತಿನಿರ್ದೇಶನವನ್ನು ಮಾಡಿದವನು ಪರಶುರಾಮ ನೆಂದು ಪ್ರತೀತಿ. ಮೂರ್ತಿಯನ್ನು ಪರಶುರಾಮನೇ ಶಬರಿಮಲೆಯ ಕಟ್ಟೆಯ ಮೇಲೆ ಪ್ರತಿಷ್ಠೆ ಮಾಡಿದನಂತೆ. ಅವನ ಆಣತಿಯಂತೆ ದೇವತೆಗಳ ಶಿಲ್ಪಿಯಾದ ವಿಶ್ವಕರ್ಮನೇ ಗುಡಿಯನ್ನು ಕಟ್ಟಿದನೆಂದು ಪ್ರತೀತಿಯಿದೆ. ಕೇರಳದಲ್ಲಿಯೂ ತುಳುನಾಡಿನಲ್ಲಿಯೂ ಸಾಂಸ್ಕೃತಿಕ ನೆಲೆಗಳ ಪರಿವರ್ತನೆಗೆ ಪರಶುರಾಮನೇ ಕಾರಣ ನೆಂದು ಐತಿಹ್ಯ. ಆರ್ಯ ಸಂಸ್ಕೃತಿಯ ಹಿಡಿತಕ್ಕೆ ಒಳಪಟ್ಟ ಭಾಗವನ್ನು ಪರಶುರಾಮ ಕ್ಷೇತ್ರವೆಂದೇ ವ್ಯವಹರಿಸುತ್ತಾರೆ. ಮಲಯರಾಯನ್, ಮನ್ನಾನ್, ಕಾನಿಕ್ಕಾರನ್ ಮೊದಲಾದ ಆದಿವಾಸಿಗಳ ಶಾಸ್ತ ಕಲ್ಪನೆಯಲ್ಲಿ ಪರಶುರಾಮನ ಪಾತ್ರವಿಲ್ಲ. ಹೀಗೆ ತುಂಬ ಪ್ರಾಚೀನವಾದ ಕಾನನ ದೈವವೊಂದಕ್ಕೆ ವರ್ಧಿಷ್ಣು ವಾದ ನಾಗರಸಂಸ್ಕೃತಿಯ ಸಂಪರ್ಕ ಒದಗಿ ಬಂದಿದೆ.

ಶ್ರೀರಂಗದ ದೇವಾಲಯ

ದಕ್ಷಿಣ ದೇಶದ ದೇವಾಲಯಗಳಲ್ಲಿ ಶ್ರೀರಂಗದ ರಂಗನಾಥನ ದೇವಾಲಯ ವಿಖ್ಯಾತವಾದುದು. ಶ್ರೀ ವೈಷ್ಣವ ಜನಾಂಗಕ್ಕೆ ರಂಗನೇ ದೈವ. ಶ್ರೀರಂಗದ ಗುಡಿಯೇ 'ಗುಡಿ' (ಕೋಯಿಲ್). ಈ ಜನರ ಇತಿಹಾಸಕ್ಕೂ ಈ ದೇವಾಲಯದ ಭಾಗ್ಯಕ್ಕೂ ನೇರವಾದ, ನಿಕಟವಾದ ಸಂಬಂಧವಿದೆ. ಶ್ರೀರಂಗದ ವೈಭವ ಅನುದಿನವೂ ಹೆಚ್ಚಲಿ ಎಂಬುದು ಅವರ ದಿನದಿನದ ಕೋರಿಕೆ.

ತಿರುಚಿರಪಳ್ಳಿಗೆ ಮೂರು ಮೈಲಿ ದೂರದಲ್ಲಿರುವ ಶ್ರೀರಂಗವು ಒಂದು ದ್ವೀಪ. ಇಲ್ಲಿಗೆ ಐದು ಮೈಲಿ ಮೊದಲು ಕಾವೇರಿ ನದಿಯು ಇಬ್ಭಾಗವಾಗಿ ಒಡೆದು ಶ್ರೀರಂಗವನ್ನು ಸುತ್ತುವರಿದು ಮುಂದೆ ಹನ್ನೆರಡು ಮೈಲಿ ದೂರದಲ್ಲಿ ಮತ್ತೆ ಒಂದಾಗಿ ಹರಿದುಹೋಗುತ್ತದೆ. ಈ ದ್ವೀಪದ ಉದ್ದ ಸುಮಾರು 19 ಮೈಲಿ. ಕಾವೇರಿಯು ಈ ದ್ವೀಪವನ್ನು ಮಾಲೆಯಂತೆ ಬಳಸಿದೆ.

ದೇವಾಲಯದೊಳಗೆ ಊರು

ಇಡೀ ಊರು ದೇವಾಲಯದ ಒಳಗೇ ಇದೆಯೆಂದರೆ ನಿಮಗೆ ಆಶ್ಚರ್ಯವಾಗದೆ ? ಪ್ರಾಚೀನ ಶಿಲ್ಪಾಗಮಗಳಲ್ಲಿ ನಗರ ನಿರ್ಮಾಣವು ಹೀಗೆಯೇ ಆಗಬೇಕೆಂದಿದೆ. ಶ್ರೀರಂಗದ ದೇವಾಲಯವನ್ನು ಶಿಲ್ಪಶಾಸ್ತ್ರಕ್ಕೆ ಅನುಸಾರವಾಗಿಯೇ ಕಟ್ಟಿದ್ದಾರೆ; ಎಲ್ಲ ವಿವರಗಳನ್ನು ಶಾಸ್ತ್ರ ಶುದ್ಧವಾಗಿಯೇ ಅಳವಡಿಸಿದ್ದಾರೆ. ಸುಮಾರು 42,000 ಜನ ವಾಸ ಮಾಡುವ ಈ ಊರು ದೇವಾಲಯದ ಹೊರ ಪ್ರಾಕಾರದ ಒಳಗೇ ಇದೆ.

ಈ ಗುಡಿಗೆ ಒಂದರ ಒಳಗೊಂದು ಒಟ್ಟು ಏಳು ಪ್ರಾಕಾರಗಳು.

ಇಪ್ಪತ್ತೊಂದು ಗೋಪುರಗಳು. ಅದರ ಉದ್ದಅಗಲ ಹೀಗಿವೆ–

7ನೆಯ ಹೊರ ಪ್ರಾಕಾರ 3,072 ಅಡಿ ಉದ್ದ, 2,521 ಅಡಿ ಅಗಲ; 6ನೆಯ ಪ್ರಾಕಾರ 2,108 ಅಡಿ ಉದ್ದ, 1,846 ಅಡಿ ಅಗಲ; 5ನೆಯ ಪ್ರಾಕಾರ 1,653 ಅಡಿ ಉದ್ದ, 1,270 ಅಡಿ ಅಗಲ; 4ನೆಯ ಪ್ರಾಕಾರ 1,235 ಅಡಿ ಉದ್ದ, 849 ಅಡಿ ಅಗಲ; 3ನೆಯ ಪ್ರಾಕಾರ 767 ಅಡಿ ಉದ್ದ, 503 ಅಡಿ ಅಗಲ; 2ನೆಯ ಪ್ರಾಕಾರ 426 ಅಡಿ ಉದ್ದ, 295 ಅಡಿ ಅಗಲ; ಒಳ ಪ್ರಾಕಾರ 240 ಅಡಿ ಉದ್ದ, 181 ಅಡಿ ಅಗಲ. ಒಟ್ಟು ಪ್ರಾಕಾರಗಳ ಉದ್ದ ಸುಮಾರು 6 ಮೈಲಿಗಳು.

ನಾಲ್ಕನೆಯ ಪ್ರಾಕಾರದಿಂದಲೇ ಗುಡಿಯ ಕಟ್ಟಡ ಆರಂಭವಾಗುತ್ತದೆ ಎನ್ನಬಹುದು. ಹೊರ ಪ್ರಾಕಾರದಲ್ಲಿ ಊರಿನ ಬೀದಿಗಳೂ ಮನೆಗಳೂ ಇವೆ. ಆರನೆಯ ಮತ್ತು ಐದನೆಯ ಪ್ರಾಕಾರಗಳಲ್ಲಿ ಹಲವಾರು ಗುಡಿಗಳೂ ಮಂಟಪ ಗಳೂ ಇವೆ. ನಾಲ್ಕನೆಯ ಪ್ರಾಕಾರದಲ್ಲಿ ಗರ್ಭಗುಡಿಯ ಕಡೆ ಬಿಟ್ಟು ಉಳಿದ ಮೂರು ಕಡೆ ಗೋಪುರಗಳಿವೆ. ಇಲ್ಲಿ ಪುಷ್ಕರಿಣಿಗಳೂ ವಾಹನ ಮಂಟಪಗಳೂ ಇವೆ. ಇಲ್ಲಿನ ನಾಚ್ಚಿಯಾರ್ ಸನ್ನಿಧಿ ಎನಿಸಿಕೊಳ್ಳುವ ಆಂಡಾಳ್ (ಗೋದಾ ದೇವಿ) ಗುಡಿ ಮುಖ್ಯವಾದುದು. ಆಳ್ವಾರರಲ್ಲಿ ಒಬ್ಬಳಾದ ಈಕೆಯನ್ನು ರಂಗ ನಾಥನ ಪ್ರೇಯಸಿಯೆಂದು ಬಗೆದು ಶ್ರೀರಂಗನಾಚ್ಚಿಯಾರ್ ಎಂದು ವ್ಯವಹರಿ ಸುತ್ತಾರೆ.

ದಿವ್ಯ – ಭವ್ಯ

ಇಲ್ಲಿ ಒಂಬತ್ತು ಮಹಡಿಗಳಿರುವ ಬೆಳ್ಳಿ ಗೋಪುರ ಭವ್ಯವಾದುದು. ಇದರ ಎತ್ತರ 164 ಅಡಿ. ಈ ಗೋಪುರವನ್ನೇರಿ ನೋಡಿದರೆ ಊರಿನ ಸೊಗ ಸಾದ ನೋಟ ಒದಗುತ್ತದೆ. ಮೂರನೆಯ ಪ್ರಾಕಾರದಲ್ಲಿ ಬಂಗಾರದ ಕವಚ ವಿರುವ ಧ್ವಜಸ್ತಂಭ, ಬಲಿಪೀಠ, ತುಲಾಭಾರ ಮಂಟಪ, ವೈಕುಂಠದ್ವಾರ (ಪರಮಪದವಾಶಲ್) ಮೊದಲಾದುವು ಗಮನಾರ್ಹವಾದುವು. ಎರಡನೆಯ ಪ್ರಾಕಾರದಲ್ಲಿ ಯಾಗಶಾಲೆ, ವಿಷ್ವಕ್ಸೇನನ ಗುಡಿ, ಅಳಗಿಯ ಮನವಾಳ ಮಂಟಪ ಮೊದಲಾದುವಿವೆ.

ಒಳ ಪ್ರಾಕಾರದಲ್ಲಿರುವ ಗರ್ಭಗುಡಿಗೆ 'ಪೆರಿಯ ಸನ್ನಿಧಿ' ಎಂದು ಹೆಸರು. ಇದರ ಮೇಲೆ ಮೂಡಿಸಿರುವ ರಂಗ ವಿಮಾನವನ್ನು ಬಂಗಾರದ ತಗಡುಗಳಿಂದ ಮುಚ್ಚಿದ್ದಾರೆ ! ಈ ವಿಮಾನಕ್ಕೆ ನಾಲ್ಕು ವೇದಗಳನ್ನು ಪ್ರತಿನಿಧಿಸುವ ನಾಲ್ಕು ಕಲಶಗಳು. ತುಂಬ ಸೊಗಸಾದ ಕಲಾಕೃತಿ ಇದು. ಈ ವಿಮಾನದಲ್ಲಿ ದಕ್ಷಿಣಾಭಿ-ಮುಖವಾಗಿ ನಿಂತ ಪರವಾಸುದೇವನ ಸ್ಥಾನಕ ಮೂರ್ತಿಯಿದೆ.

ಗರ್ಭಗುಡಿಯಲ್ಲಿ ಐದು ಹೆಡೆ ಆದಿಶೇಷನ ಮೇಲೆ ಮಲಗಿರುವ ರಂಗನಾಥನ 'ಸ್ಟಕ್ಕೊ' ಧ್ರುವ ಮೂರ್ತಿಯಿದೆ; ಇದರ ಉದ್ದ 21ಅಡಿಗಳು. ಯೋಗ ಶಯನ ಭಂಗಿಯಲ್ಲಿರುವ ಈ ಧ್ರುವಬೇರಕ್ಕೆ ಅಳಗಿಯ ಮನವಾಳ ಎನಿಸಿಕೊಳ್ಳುವ ಉತ್ಸವಮೂರ್ತಿ ಸ್ಥಾನಕ ಭಂಗಿಯಲ್ಲಿ ಶ್ರೀದೇವಿ, ಭೂದೇವಿಯರೊಡಗೂಡಿ ಇರುವುದು ಗಮನಾರ್ಹ. ಧ್ರುವಬೇರಕ್ಕೆ ವರ್ಷಕ್ಕೊಮ್ಮೆ 'ತೈಲಕಾಪ್ಪು' ಎಂದರೆ ಲೇಪವನ್ನು ಬಳಿಯುತ್ತಾರೆ. ಸ್ಟಕ್ಕೋ ಮೂರ್ತಿಯಲ್ಲಿ ಶೈಥಿಲ್ಯ ಒದಗದಿರಲೆಂದು ಈ ಲೇಪ. ಇದು ಸ್ವಾರಸ್ಯವಾದ ವಿಧಿ.

ಈ ದೇವಾಲಯದ ಜವಾಹರಿ ಅತ್ಯಮೂಲ್ಯವಾದುದು. ಮುತ್ತಿನ ಅಂಗಿ (11 ಲಕ್ಷ ರೂ.), ರತ್ನ ಕಿರೀಟ-ರತ್ನಾಂಗಿ (12 ಲಕ್ಷ) ಮೊದಲಾದುವು ಕಾಲಕಾಲಕ್ಕೆ ರಾಜಮಹಾರಾಜರು ಸಲ್ಲಿಸಿದ ಸೇವೆ. ವರ್ಷಕ್ಕೆ 322 ದಿನ ಇಲ್ಲಿ ಉತ್ಸವಗಳು ನಡೆಯುತ್ತವೆ ! ಇವುಗಳಲ್ಲಿ ವೈಕುಂಠ ಏಕಾದಶಿ ಮುಖ್ಯವಾದುದು. ತಮಿಳು 'ತೈ' (ಜನವರಿ) ತಿಂಗಳಿನಲ್ಲಿಯೂ 'ಚಿತ್ತಿರೈ' (ಏಪ್ರಿಲ್) ತಿಂಗಳಿನಲ್ಲಿಯೂ ರಥೋತ್ಸವಗಳು ನಡೆಯುತ್ತವೆ. ಮಾಶಿ [ಮಾರ್ಚಿ] ತಿಂಗಳಿನಲ್ಲಿ ನಡೆಯುವ ತೆಪ್ಪೋತ್ಸವ ನಯನಮನೋಹರವಾದುದು.

ಮಲಿಕ್‌ಕಾಫರನ ಲೂಟಿ

ಮಲಿಕ್‌ಕಾಫರನು 1311 ರಲ್ಲಿ ದಕ್ಷಿಣಕ್ಕೆ ದಂಡಯಾತ್ರೆ ಬಂದಿದ್ದಾಗ ಶ್ರೀರಂಗದ ದೇವಾಲಯವನ್ನು ಲೂಟಿ ಮಾಡಿದನು. 1327-28 ರಲ್ಲಿ ಎರಡನೆಯ ಬಾರಿ ಮುಸಲ್ಮಾನರು ದೇವಾಲಯಕ್ಕೆ ನುಗ್ಗಿ, ಅಲ್ಲಿದ್ದ 12,000 ಜನ ಶ್ರೀವೈಷ್ಣವರನ್ನು ಕೊಂದು ಗುಡಿಯ ಭಂಡಾರವನ್ನು ಲೂಟಿ ಮಾಡಿದರು. ಆಗ

ವೇದಾಂತ ದೇಶಿಕರೂ, ಪಿಳ್ಳೆ ಲೋಕಾಚಾರ್ಯರೂ ಶ್ರೀರಂಗನಾಥನ ಅಳಗಿಯ ಮನವಾಳ ಎನ್ನುವ ಉತ್ಸವ ಮೂರ್ತಿಯನ್ನು ಸುರಕ್ಷಿತವಾದ ಸ್ಥಳಕ್ಕೆ ಸಾಗಿಸುವ ವ್ಯವಸ್ಥೆ ಮಾಡಿದರು. ತುಂಬ ಸಾಹಸದಿಂದ ಮುಸಲ್ಮಾನರ ಕಣ್ಣು ತಪ್ಪಿಸಿ ಈ ಮೂರ್ತಿಯನ್ನು ಕಾಡುಮೇಡುಗಳಲ್ಲಿ ಕಾಪಾಡಿ ಕಡೆಗೆ ತಿರುಮಲೆ ದೇವಾಲಯದಲ್ಲಿ ಕೆಲವು ವರ್ಷಗಳು ಇರಿಸಿದ್ದರು. ಅಲ್ಲಿಂದಲೂ ಹೊರಟು ಬಂದು, ಇಮ್ಮಡಿ ಕೆಂಪರಾಯನ ಮಂತ್ರಿ ಗೋಪಣ್ಣನೆಂಬ ನಾಯಕನ ಆಸಕ್ತಿ-ಉತ್ಸಾಹಗಳಿಂದ ಅವನ ರಾಜಧಾನಿಯಾದ ಸಿಂಗಾವರಂ ಅಥವಾ ಸೆಂಜಿಯನ್ನು ಮುಟ್ಟಿ 1371 ರಲ್ಲಿ ಎಂದರೆ, 43 ವರ್ಷಗಳ ನಂತರ ಮತ್ತೆ ಶ್ರೀರಂಗವನ್ನು ಸೇರಿತು. ರಂಗನಾಥನ ಈ ಯಾತ್ರೆ ರೋಮಾಂಚಕಾರಿಯಾದುದು. ಹಲವಾರು ಗ್ರಂಥಗಳಲ್ಲಿ ಈ ಪ್ರಸ್ತಾಪವು ಬರುತ್ತದೆ.

ವಾಲ್ಮೀಕಿ ರಾಮಾಯಣದಲ್ಲಿಯೇ ಶ್ರೀರಂಗ ದೇವಾಲಯದ ಉಲ್ಲೇಖವಿದೆ ಎಂದು ಹೇಳುತ್ತಾರೆ. ವೈಕುಂಠದಲ್ಲಿ ಬ್ರಹ್ಮನು ಪೂಜೆ ಮಾಡುತ್ತಿದ್ದ ರಂಗನಾಥ ಮೂರ್ತಿಯನ್ನು ಇಕ್ಷ್ವಾಕು ರಾಜನು ಭೂಮಿಗೆ ತಂದನೆಂದೂ, ಅವನ ವಂಶದಲ್ಲಿ ಇದು ಪೂಜೆಗೊಳ್ಳುತ್ತಿದ್ದು ಶ್ರೀರಾಮನ ಕಾಲದಲ್ಲಿ ಇದು ತನಗೆ ನೆರವಾದ ವಿಭೀಷಣನಿಗೆ ಕೊಡಲ್ಪಟ್ಟಿತೆಂದೂ, ವಿಭೀಷಣನು ಇದನ್ನು ಅಯೋಧ್ಯೆಯಿಂದ ಲಂಕೆಗೆ ಒಯ್ಯುತ್ತ ದಾರಿಯಲ್ಲಿ ಈಗ ಶ್ರೀರಂಗ ಇರುವ ಕಡೆ ನೆಲದ ಮೇಲೆ ಇಟ್ಟನಾಗಿ ಮೂರ್ತಿಯು ಅಲ್ಲಿಯೇ ಬೇರೂರಿ ಸ್ಥಿರವಾಗಿ ನಿಂತುಬಿಟ್ಟಿತೆಂದೂ ಸ್ಥಳ ಪುರಾಣ ಹೇಳುತ್ತದೆ. ಎರಡನೆಯ ಪ್ರಾಕಾರದಲ್ಲಿ ವಿಷ್ವಕ್ಸೇನನ ಗುಡಿಯಲ್ಲಿ ವಿಭೀಷಣನ ಮೂರ್ತಿಯನ್ನು ಈಗಲೂ ಕಾಣಬಹುದು. ಆಡಿ ಮತ್ತು ಪಂಗುನಿ ಬ್ರಹ್ಮೋತ್ಸವಗಳಲ್ಲಿ, ಅಂಕುರಾರ್ಪಣದ ಸಮಯದಲ್ಲಿ ವಿಭೀಷಣನು ಪಾಲ್ಗೊಳ್ಳುತ್ತಾನೆ.

ಇತಿಹಾಸ ಯುಗದಲ್ಲಿ ಈ ದೇವಾಲಯದ ಕೀರ್ತಿಗೆ ಕಾರಣರಾದವರು ಚೋಳ, ಪಾಂಡ್ಯ, ಹೊಯ್ಸಳ, ವಿಜಯನಗರದ ಅರಸರು. ಜಟಾವರ್ಮ ಸುಂದರಪಾಂಡ್ಯನು 1253 ರಲ್ಲಿ ಒಬ್ಬ ರಾಜನಿಂದ ಶ್ರೀರಂಗವನ್ನು ಪಡೆದು ಈ ದೇವಾಲಯಕ್ಕೆ ವಿಪುಲವಾದ ಸೇವೆ ಸಲ್ಲಿಸಿದನು. ಕನ್ನಡಿಗನಾದ ಮಹಾಪ್ರಧಾನಿ ಸಿಂಗಣ ದಂಣಾಯಕನು ಈ ದೇವಾಲಯದಲ್ಲಿ ಆರೋಗ್ಯಶಾಲೆ

ಒಂದನ್ನು ವ್ಯವಸ್ಥೆ ಮಾಡಿದುದು ಉಲ್ಲೇಖಾರ್ಹವಾಗಿದೆ. ಮುಸಲ್ಮಾನರು ದಾಳಿ ಮಾಡಿದಾಗ ಈ ಆರೋಗ್ಯಶಾಲೆಯೂ ನೆಲಸಮವಾಯಿತಂತೆ.

ಶ್ರೀರಂಗದ ಯಶಸ್ಸಿಗೆ ಬಹುಮಟ್ಟಿಗೆ ಕಾರಣರಾದವರು ಶ್ರೀರಾಮಾನುಜಾರ್ಯರು (1017–1137) ಎನ್ನುವುದರಲ್ಲಿ ಸಂದೇಹ ಇಲ್ಲ. ಅವರ ಹಿಂದೆ ನಾಥಮುನಿಗಳೂ, ಯಾಮುನಾಚಾರ್ಯರೂ ಈ ದೇವಾಲಯದ ಆಶ್ರಯದಲ್ಲಿಯೇ ಶ್ರೀವೈಷ್ಣವ ಜನಾಂಗವನ್ನು ರೂಢಿಸುವ ಕೆಲಸವನ್ನು ಆರಂಭಿಸಿದ್ದರು. ಈ ಕೆಲಸವನ್ನು ಸಾಹಸದಿಂದಲೂ ಜಾಣ್ಮೆಯಿಂದಲೂ ನಿರ್ವಹಿಸಿದವರು ರಾಮಾನುಜರು. ಶ್ರೀರಂಗ ದೇವಾಲಯದ ಐದನೆಯ ಪ್ರಾಕಾರದಲ್ಲಿರುವ 'ಭಾಷ್ಯಕಾರ ಸನ್ನಿಧಿ' (ಉಡೈಯವರ್ ಸನ್ನಿಧಿ) ಇವರ ನೆನಪನ್ನು ಉಳಿಸಿದೆ. ಶ್ರೀರಂಗನಾಥನ ಕೈಂಕರ್ಯದಲ್ಲಿಯೇ ಅವರ ತುಂಬು ಜೀವನದ ಬಹುಭಾಗ ಸಂದಿತು. ಮುಂದೆ ವೇದಾಂತ ದೇಶಿಕರು (1268ರಲ್ಲಿ ಜನನ) ಶ್ರೀರಂಗದ ಹಿರಿಮೆಯನ್ನು ಎತ್ತಿ ಹಿಡಿದರು. ಅವರ 'ಪಾದುಕಾಸಹಸ್ರ' ರಂಗನಾಥನನ್ನು ಕುರಿತದ್ದೇ.

ಮಾಮಲ್ಲಪುರದ ಕಡಲ ದೇವಾಲಯ

ಕಡಲನ್ನು ತಡೆಯುವ ಸಾಹಸ ಯಾರಿಗೆ ? ಅಗಸ್ತ್ಯನು ಸಾಗರವನ್ನೇ ಆಪೋಶನವಾಗಿ ಕುಡಿದನಂತೆ. ಪರಶುರಾಮನು ಕೊಡಲಿಯನ್ನು ಸಮುದ್ರದಲ್ಲಿ ಬೀಸಿ ಎಸೆದು ಬಿದ್ದಷ್ಟು ದೂರವೂ ನೀರನ್ನು ಹಿಂದೂಡಿದನಂತೆ. ಇವು ಪುರಾಣದ ಕಥೆಗಳು. ಇತಿಹಾಸದ ಸತ್ಯವಿದ್ದರೂ ಕಲ್ಪನೆಯ ಹಂದರದಿಂದ ಹಿಗ್ಗಿದ ಘಟನೆಗಳು. ಆದರೆ ನಿಜವಾಗಿ ನಮ್ಮ ಜನಕ್ಕೆ ಈ ಸಾಹಸ ಇದ್ದಿತೆನ್ನಲು ಮಾಮಲ್ಲಪುರದ ಅವಶೇಷಗಳು ನಿದರ್ಶನ.

ಮದರಾಸಿಗೆ ದಕ್ಷಿಣಕ್ಕೆ ಮೂವತ್ತೆಂಟು ಮೈಲು ದೂರದ, ಸಮುದ್ರ ತೀರದಲ್ಲಿ ಮಾಮಲ್ಲಪುರವೆಂಬ ಪ್ರದೇಶವಿದೆ. ಇಲ್ಲಿನ ವಾಸ್ತು-ಶಿಲ್ಪ ಅವಶೇಷ-ಗಳು ಲೋಕ ಪ್ರಸಿದ್ಧವಾದುವು. ಬಂಗಾಳ ಕೊಲ್ಲಿಯೆನಿಸಿಕೊಳ್ಳುವ ಸಮುದ್ರ ಭಾಗದ ತೀರ ಅಂಚಿನಲ್ಲೇ ಪಲ್ಲವರ ಕಾಲದ ಶಿಲಾ ದೇವಾಲಯವೊಂದಿದೆ. ಸಾವಿರ ವರ್ಷಗಳಿಗೂ ಹಿಂದಿನ ಕಟ್ಟಡ ಇದು. ಮೊರೆಯುವ ನೀರಿನ ಅಲೆಗಳ ಆರ್ಭಟವನ್ನು ಎದುರಿಸಿ, ಒಣಗದ ಮರಳು ಹರವಿನ ಮೇಲೆ ಪಲ್ಲವ ಶಿಲ್ಪಿಗಳು ಶಿವಾಲಯವೊಂದನ್ನು ಮೂಡಿಸಿದ್ದಾರೆ. ಕಾಲದ ಕೈವಾಡ, ಸಮುದ್ರದ ಸೇಡು ಎರಡೂ ಕೂಡಿ ಈ ದೇಗುಲ ಇಂದು ಭಗ್ನಾವಶೇಷವಾಗಿದೆ. ದೇವಾಲಯದ ಪ್ರಾಂಗಣದ ಬಹು ಭಾಗ ನೀರಿನ ಹೊಡೆತದಲ್ಲಿ ಅಡಗಿತು ; ಹೊರ ಪ್ರಾಕಾರ ಪೂರಾ ಮರೆಯಾಗಿ ಒಳ ಪ್ರಾಕಾರವೂ ಶಿಥಿಲವಾಗಿ ನಿಂತಿದೆ. ಒಮ್ಮೆ ದೇಗುಲದ ಮುಂಭಾಗದಲ್ಲಿ ದೇಗುಲಕ್ಕೇ ಸೇರಿದಂತೆ ಇದ್ದ ಧ್ವಜಸ್ತಂಭ ಇಂದು ಸಮುದ್ರ ಮಧ್ಯದಲ್ಲಿ ದೂರ ಬೇರೆಯಾಗಿ ಉಳಿದಿದೆ. ಗರ್ಭಗೃಹದಲ್ಲಿರುವ ಶಿವಲಿಂಗ ಪೆಟ್ಟು ತಿಂದು ನಿತ್ಯದ ಪೂಜೆಯನ್ನು ಕಳೆದುಕೊಂಡಿದೆ. ಆದರೆ ದೇವಾಲಯದ ಭವ್ಯತೆಗೆ

ಊನ ಬಂದಿಲ್ಲ. ಅರವತ್ತು ಅಡಿ ಎತ್ತರ ಮೈಚಾಚಿ ನಿಂತ ಗೋಪುರ. ಅದರ ಬದಿಗೇ ಮತ್ತೊಂದು ಸಣ್ಣ ಗೋಪುರ. ಇವು ಇಂದಿಗೂ ತಲೆಯೆತ್ತಿ ನಿಂತಿವೆ. ಶತಮಾನಗಳ ಶಿಲಾ-ಸಾಗರ ಸಮರ• ಈ ದೇವಾಲಯದ ಅದ್ಭುತ ರಮಣೀಯ ಗುಣವನ್ನು ತಗ್ಗಿಸಿಲ್ಲ. ಸಾಗರದ ದೂರ ದಿಗಂತದ ಉದ್ದಕ್ಕೂ ನೀಲಿ ನೀರಿನ ಹರವಿನ ಹಿನ್ನೆಲೆಯಲ್ಲಿ ಈ ಪುರಾತನ ದೇಗುಲದ ಉತ್ತುಂಗ ಗೋಪುರಗಳು ನಮ್ಮ ಹಿಂದಿನವರ ಸಾಹಸವನ್ನು ಸಾರಿ ಹೇಳುತ್ತ ನಿಂತಿವೆ.

ಪ್ರಕೃತಿಯ ದುರ್ದಮ್ಯ ಪ್ರವೃತ್ತಿಗಳಿಗೆ ಪ್ರತೀಕ ಸಮುದ್ರವಾದರೆ, ಮನುಷ್ಯನ ಅದ್ಭುತ ದರ್ಶನಕ್ಕೆ, ಸೌಂದರ್ಯ ಸೃಷ್ಟಿಗೆ ಸಾಕ್ಷಿ ಈ ದೇವಾಲಯ./ ಸಮುದ್ರದ ವೀರ ಘೋಷಕ್ಕೆ ನಮ್ಮ ಶಿಲ್ಪಿಗಳು ಪ್ರತಿಧ್ವನಿಯನ್ನು ಮೇಳೈಸಿದರು. ಮಾಮಲ್ಲಪುರವೆನಿಸಿಕೊಳ್ಳುವ ಹಳ್ಳಿಗೆ ಮೂರು ಮೈಲು ದೂರದಲ್ಲಿರುವ ಈ ಕಡಲ ದೇಗುಲದ ಒಟ್ಟು ವಿಸ್ತೀರ್ಣ ಒಂದು ಸಾವಿರ ಆರು ನೂರು ಚದರ ಅಡಿಗಳಷ್ಟು. ಈ ಹರವಿನಲ್ಲಿ ಎರಡು ದೇವಾಲಯಗಳಿದ್ದುವಂತೆ; ಎರಡು ಗೋಪುರಗಳೇನೋ ಇಂದಿಗೂ ಇವೆ. ಕಡಲಿಗೇ ಮುಖ ಮಾಡಿನಿಂತ ದೇವಾಲಯ ಶಿವನದು. ಗರ್ಭ ಗುಡಿಯಲ್ಲಿರುವ ಷೋಡಶ ಮುಖ ಲಿಂಗವು ಬೃಹದಾಕಾರದ್ದು. ಒಳ ಮಂಟಪದಲ್ಲಿ ಶಿವ, ಪಾರ್ವತಿ, ಸುಬ್ರಹ್ಮಣ್ಯ ಇವರ ಮೂರ್ತಿಗಳನ್ನು ಬಿಡಿಸಿದ್ದಾರೆ.

ಈ ಮುಖ್ಯ ಮಂಟಪದ ಪ್ರದಕ್ಷಿಣಾ ಪಥದ ಎಡ ಮೂಲೆಯಲ್ಲಿ ಕತ್ತಲೆಯ ಕಲ್ಲು ಕೋಣೆಯೊಂದಿದೆ. ಅದರಲ್ಲಿ ದೊಡ್ಡ ಪ್ರಮಾಣದ ಶೇಷಶಾಯಿ ವಿಷ್ಣುವಿನ ಮೂರ್ತಿಯನ್ನು ಒಂದೇ ಬಂಡೆಯಲ್ಲಿ ಕಡೆದಿಟ್ಟಿದ್ದಾರೆ. ಶಿವಾಲಯದಲ್ಲಿ ಈ ಮೂರ್ತಿಯಿರುವುದು ಜಿಜ್ಞಾಸೆಗೆ ಎಡೆಕೊಡುತ್ತದೆ. ಮೂರ್ತಿಯೇನೋ ತುಂಬ ಭಗ್ನವಾಗಿದೆ. ಇದ್ದ ನಾಲ್ಕು ಭುಜಗಳಲ್ಲಿ ಒಂದು ಮಾತ್ರ ಸುಮಾರಾಗಿ ಉಳಿದುಕೊಂಡಿದೆ. ಕಿರೀಟ ಪಲ್ಲವರ ಶೈಲಿಯದು; ಯಜ್ಞೋಪವೀತವೊಂದು ವಿನಾ ಉಳಿದ ಯಾವ ಆಭರಣವೂ ಇದ್ದಂತಿಲ್ಲ. ಬೆನ್ನಮೇಲೆ ಮಲಗಿರುವ ಮೂರ್ತಿಯ ಅಡಿಯಲ್ಲಿ ಆದಿಶೇಷನಾಗಲೀ ಪರ್ಯಂಕವಾಗಲೀ ಕಾಣಿಸುವುದಿಲ್ಲ. ತಲೆಯ ಮೇಲೆ ಬಾಗಿರುವ ಹಾವಿನ ಹೆಡೆಗಳೂ ಇಲ್ಲ. ಅನಂತಶಯನ ಮೂರ್ತಿಯ

ಸಮೀಪದಲ್ಲಿ ಸಾಮಾನ್ಯವಾಗಿ ಲಕ್ಷ್ಮಿ, ಬ್ರಹ್ಮ, ಪರಿವಾರ ದೇವತೆಗಳನ್ನು ಮೂಡಿಸುತ್ತಾರೆ. ಇಲ್ಲಿ ಅಂಥ ಯಾವ ಚಿತ್ರಣವೂ ಕಾಣಿಸುವುದಿಲ್ಲ. ಶಯನ ಸ್ಥಿತಿಯಿಂದ ಈ ಮೂರ್ತಿಯನ್ನು ವಿಷ್ಣುವೆಂದು ಗ್ರಹಿಸಬೇಕಷ್ಟೆ. ಅಲ್ಲದೆ, ಬ್ರಹ್ಮಾಂಡ ಪುರಾಣದ ಕ್ಷೇತ್ರ ಖಂಡದಲ್ಲಿ ಅಡಕವಾಗಿರುವ ಮಲ್ಲಾಪುರೀ ಮಾಹಾತ್ಮ್ಯೆ ಇಲ್ಲಿನ ಪ್ರಮುಖ ದೈವವನ್ನು ಸ್ಥಲಶಯನ-ವಿಷ್ಣುವೆಂದು ಬಣ್ಣಿಸುತ್ತದೆ; ಈ ಕ್ಷೇತ್ರದ ಕಾರಣಪುರುಷನಾದ ಶತಾನಂದ ಮಲ್ಲೇಶ್ವರನು ವಿಷ್ಣು ಭಕ್ತನಂತೆ. ಅಲ್ಲದೆ ಹಳ್ಳಿಯಲ್ಲಿ ಮಹಿಷಾಸುರಮರ್ದಿನಿಯ ಶಿಲ್ಪ ಫಲಕದ ಬಳಿ ಮತ್ತೊಂದು ನಾಗ ಶಯನ ವಿಷ್ಣುವಿನ ದೊಡ್ಡ ವಿಗ್ರಹವಿದೆ. ಇಲ್ಲಿ ಮಲಗಿರುವ ದ್ವಿಭುಜ ವಿಷ್ಣು ಒಂಬತ್ತೂವರೆ ಅಡಿ ಉದ್ದದ ಮೂರ್ತಿ; ನಾಗ ಪರ್ಯಂಕವಿದೆ. ಐದು ಹೆಡೆಗಳ ಛತ್ರ ತಲೆಯ ಮೇಲೆ ಕಾಣಿಸುತ್ತದೆ: ಲಕ್ಷ್ಮಿಯಾಗಲೀ ಬ್ರಹ್ಮನಾಗಲೀ ಇರದಿದ್ದರೂ ಭಕ್ತ ವಿಗ್ರಹಗಳೂ ಪರಿವಾರ ದೇವತೆಗಳೂ ಇದ್ದಾರೆ. ಈ ಶಿಲಾ ಫಲಕದ ಉದ್ದ ಹದಿಮೂರು ಅಡಿ, ಎತ್ತರ ಎಂಟು ಅಡಿ.

ಆದರೆ ಈ ದೇವಾಲಯವೇನೋ ಶೈವ ಸಂಪ್ರದಾಯದ್ದೇ. ಪ್ರಾಕಾರದ ಮೇಲೆ ಸಾಲಾಗಿ ಕಲ್ಲು ನಂದಿಗಳನ್ನು ಕೂಡಿಸಿದ್ದಾರೆ. ನೀರು ನಿರಂತರವಾಗಿ ಎರಗಿ ಶಿಲ್ಪ ವಿವರಗಳು ಅಳಿಸಿ ಹೋಗಿವೆ. ಆದರೂ ಒಂದೊಂದೂ ಭವ್ಯವಾದ ವಿಗ್ರಹ ವೆಂದು ಒಡನೆಯೇ ತಿಳಿಯುತ್ತದೆ. ದೇವಾಲಯದ ಗೋಪುರ ಕಲಶಗಳಿಗೆ ಒಂದು ಕಾಲಕ್ಕೆ ಬಂಗಾರದ ಮೆರಗು ಹಾಕಿದ ತಾಮ್ರ ಕವಚವನ್ನು ಹೊದಿಸಿದ್ದರಂತೆ. ಅದು ಬಹು ದೂರದಿಂದಲೇ ನಾವಿಕರಿಗೆ ದೀಪಸ್ತಂಭದಂತೆ ಕಾಣುತ್ತಿದ್ದಿತಂತೆ. ಸ್ಥಳಪುರಾಣವು ಇದನ್ನು ಆನಂದ ನಿಲಯ ವಿಮಾನವೆಂದು ವ್ಯವಹರಿಸುತ್ತದೆ.

ಈ ದೇವಾಲಯಕ್ಕೂ ಮಾಮಲ್ಲಪುರದ ಉಳಿದ ಶಿಲ್ಪಗಳಿಗೂ ಅಷ್ಟಾಗಿ ಸಂಬಂಧವಿದ್ದಂತಿಲ್ಲ. ಮಾಮಲ್ಲಪುರದ ಹಳ್ಳಿಯಲ್ಲಿ ಪಂಚ ಪಾಂಡವರ ರಥಗಳು, ದ್ರೌಪದಿಯ ರಥ, ಬಂಡೆಯಲ್ಲಿ ಕಡೆದು ನಿಲ್ಲಿಸಿದ ಆನೆ, ಸಿಂಹ, ಕೃಷ್ಣ ಮಂಟಪ, ಆದಿ ವರಾಹಸ್ವಾಮಿ ಮಂದಿರ, ಮಹಿಷಾಸುರ ಮರ್ದಿನಿಯ ಶಿಲ್ಪ ಫಲಕ, ಗಂಗಾವತರಣದ ಶಿಲ್ಪಫಲಕ ಇವೆಲ್ಲವೂ ಕಡಲೂರು ದಾರಿಯ ಇಕ್ಕೆಲ ಗಳಲ್ಲೂ ಕಾಣಿಸುತ್ತವೆ. ಈ ಶಿಲ್ಪಗಳ ಸೌಂದರ್ಯ ಜಗತ್ಪ್ರಸಿದ್ಧವಾಗಿದೆ. ಇವು ಗಳಿಂದ ಪ್ರಖ್ಯಾತವಾದ ಹಳ್ಳಿಯ ಹೆಸರು ಹೇಗೆ ಬಂದಿತೆಂಬುದು ವಿವಾದಾಸ್ಪದ

ವಾಗಿದೆ. ಈ ಕಾಲಕ್ಕೆ ಹಳ್ಳಿಯನ್ನು ಮಹಾಬಲಿಪುರವೆಂದು ಕರೆಯುತ್ತಾರೆ. ಆದರೆ ಸ್ಥಳಪುರಾಣದಲ್ಲಿ ಬಲಿಗೂ ಈ ಕ್ಷೇತ್ರಕ್ಕೂ ಯಾವ ನೆಂಟೂ ಇಲ್ಲ. ತ್ರಿವಿಕ್ರಮಾವತಾರದ ಶಿಲ್ಪವೇನೋ ಇಲ್ಲಿದೆ. ಅದರಲ್ಲೂ ಬಲಿಚಕ್ರವರ್ತಿಯ ಚಿತ್ರಣವಿಲ್ಲ. ಈ ಸಂಸ್ಕೃತದ ಹೆಸರೇ ತಮಿಳಿನಲ್ಲಿ "ಮಾವಳಿಪುರ"ವೆಂದು ಪ್ರಚುರವಾಗಿದೆ. ಆದರೆ ಮಹಾಬಲಿಪುರವೆಂಬುದು ಹಿಂದಿನ ಹೆಸರಲ್ಲ; ಸ್ಥಳ ಪುರಾಣದಲ್ಲಾಗಲಿ ಶಾಸನಗಳಲ್ಲಾಗಲೀ ಈ ಹೆಸರು ಬರುವುದಿಲ್ಲ. ಸ್ಥಳ ಪುರಾಣದ ಪ್ರಕಾರ ಈ ಊರು ಮಹಾಮಲ್ಲಪುರ; ಶಾಸನಗಳಲ್ಲೂ ಇದೇ ಹೆಸರು ಬಂದಿದೆ. ಇದು ತದ್ಭವದಲ್ಲಿ ಮಾಮಲ್ಲಪುರವೆಂದಾಗುತ್ತದೆ.

ಸಾಳುವನ್ ಕುಪ್ಪಂ ಎಂಬಲ್ಲಿ ದೊರೆತ ತಮಿಳು ಶಾಸನವೊಂದರಲ್ಲಿ ಪುಂಜೇರಿ, ತಿರುಪಾರಿ ಕಡಲ್ ಮತ್ತು ಮಹಾಮಲ್ಲೈಪುರಂ ಎಂಬ ಮೂರು ಹಳ್ಳಿಗಳು ಚೋಳಮಂಡಲದ ಅಧೀನದಲ್ಲಿ ಆಮೂರ್‌ಕೊಟ್ಟಂ ಎಂಬ ಪ್ರಾಂತದಲ್ಲಿದ್ದ ವಡಕನಾಡಿಗೆ ಸೇರಿದ್ದುವೆಂದು ಹೇಳಿದೆ. ಈ ಶಾಸನದ ಕಾಲ ಶಕ ವರ್ಷ 1157, ಎಂದರೆ ಕ್ರಿಸ್ತಾಬ್ದ 1235. ಈ ಮೂರೂ ಹಳ್ಳಿಗಳ ದೈವವನ್ನು 'ಪೆರುಮಾಳ್ ಆದಿ ವರಹ ಜ್ಞಾನಪ್ಪಿರಾನ್' ಎಂದು ಈ ಶಾಸನ ಸಾರುತ್ತದೆ. ಇಂದಿಗೂ ಮಾಮಲ್ಲಪುರದ ಶಿಲ್ಪಗಳಲ್ಲಿ ಆದಿ ವರಾಹಸ್ವಾಮಿಯ ಶಿಲ್ಪ ಪ್ರಮುಖವಾದುದು. ಆದಿ ವರಾಹಸ್ವಾಮಿ ಗುಡಿಯ ಬಳಿ ದೊರೆತ ಮತ್ತೊಂದು ಪ್ರಾಚೀನ ತಮಿಳು ಶಾಸನ 'ಪರಮೇಶ್ವರ ಮಹಾವರಾಹ ವಿಷ್ಣು'ವನ್ನು ವ್ಯವಹರಿಸಿ 'ಮಲ್ಲೈಪೆರುಮಾಳ್' ಎಂದು ಪ್ರಸ್ತಾಪಿಸುತ್ತದೆ. ಮಹಾವಿಷ್ಣುವಿನ ಗದಾಂಶ ಸಂಭೂತನಾದ ಭೂತನೆಂಬ ಆಳ್ವಾರಿಗೆ ಬಿಟ್ಟ ದೇವದಾನ ಈ ಶಾಸನದ ವಸ್ತು. ಈ ಭೂತ ಆಳ್ವಾರನು ಮಲ್ಲಾಪುರಿಯ ಸಮುದ್ರ ತೀರದಲ್ಲಿ ಕನ್ನೈದಿಲೆಯ ಒಡಲಿಂದ ಎದ್ದು ಬಂದವನಂತೆ. ಈ ಆಳ್ವಾರನ ಧ್ಯಾನ ಶ್ಲೋಕ ಹೀಗಿದೆ:- "ತುಲಾ ಶ್ರವಿಷ್ಠ ಸಂಭೂತಂ ಭೂತಂ ಕಲ್ಲೋಲ ಮಾಲಿನಃ ತೀರೇ ಫುಲ್ಲೋತ್ಪ ಲಾತ್ ಮಲ್ಲಾಪುರ್ಯಾಮೀಡೆ ಗದಾಂಶಕಂ". ಹೀಗೆ ಮಲ್ಲಾಪುರವೆಂಬುದು ಶಾಸನ ಶುದ್ಧವಾದ ಹೆಸರು. ಬ್ರಹ್ಮಾಂಡ ಪುರಾಣದಲ್ಲೂ ಈ ಕ್ಷೇತ್ರವನ್ನು ಮಲ್ಲಾಪುರೀ ಎಂದೇ ವ್ಯವಹರಿಸಿದ್ದಾರೆ.

ಈ ಮಲ್ಲ ಶಬ್ದಕ್ಕೆ ಆಕರ ಯಾವುದು ? ಮಲ್ಲರೆಂಬ ಜನ ತೆಲಂಗಾಣದಲ್ಲಿ ಇರುತ್ತಿದ್ದ ಗುಡ್ಡಗಾಡಿನವರು. ಈ ಜನ ಗುಂಪು ಗುಂಪಾಗಿ ಬಂದು ದಕ್ಷಿಣ ದೇಶದ ಹಲವು ಕಡೆಗಳಲ್ಲಿ ನೆಲೆಸಿದರಂತೆ. ಕನ್ನಡ ನಾಡಿಗೂ ಇವರಿಗೂ ಪ್ರಾಚೀನ ವಾದ ಋಣಾನುಬಂಧವಿದ್ದು ಈ ಪ್ರದೇಶದಲ್ಲಿ ದೊರೆತ ಹಳಗನ್ನಡ ಶಾಸನ ಗಳಿಂದ ತಿಳಿದು ಬರುತ್ತದೆ. ಚೋಳ ಚಕ್ರವರ್ತಿಯಾದ ಕುಲೋತ್ತುಂಗನ ಮಗ ಆದೊಂಡ್ಯೆ ಈ ಪ್ರದೇಶವನ್ನೆಲ್ಲ ಆಳುತ್ತಿದ್ದನು. ಅವನ ಆಳ್ವಿಕೆ ಮುಗಿದಂದು ಈ ಮಲ್ಲರು ಬಲಶಾಲಿಗಳಾಗಿ ಈ ಪ್ರದೇಶದಲ್ಲಿ ಪ್ರಭುತ್ವವನ್ನು ಆರಂಭಿಸಿದರು. ಇದು ಕ್ರಿಸ್ತಾಬ್ದ ಏಳನೆಯ ಶತಮಾನದ ಮಾತು. ಪಲ್ಲವ ರಾಜನಾದ ನರಸಿಂಹ ವರ್ಮ [625-645]ನಿಗೆ ಮಹಾಮಲ್ಲ ಅಥವಾ ಮಾಮಲ್ಲನೆಂಬ ಪ್ರಶಸ್ತಿ ಯಿದ್ದಿತು.

ಮಾಮಲ್ಲಪುರದ ಶಿಲ್ಪಗಳೆಲ್ಲ ಪಲ್ಲವರ ಆಸಕ್ತಿಯಿಂದ ಮೂಡಿ ಬಂದವು. ಪಲ್ಲವರು ಕ್ರಿಸ್ತಾಬ್ದ ಎರಡನೆಯ ಶತಮಾನದ ಸುಮಾರಿಗೆ ಗೋದಾವರಿ-ಕೃಷ್ಣಾ ನದಿಗಳ ಬಯಲಿನಲ್ಲಿ ಆಳುತ್ತಿದ್ದ ಆಂಧ್ರ ರಾಜರ ಸಾಮಂತರಾಗಿದ್ದರು. ಮೂರು ನಾಲ್ಕನೆಯ ಶತಮಾನದಲ್ಲಿ ಅವರು ಸ್ವತಂತ್ರರಾಗಿ ಕ್ರಿಸ್ತಾಬ್ದ 600-750 ರ ನಡುವೆ ಬಲಶಾಲಿಗಳಾಗಿ ಮೆರೆದರು. ಅವರಿಗೂ ಪಶ್ಚಿಮದ ಚಾಳುಕ್ಯರಿಗೂ ಬದ್ಧ ವೈರವಿದ್ದಿತು. ಪಲ್ಲವರಾಜ ರಾಜಸಿಂಹ-ವಿಷ್ಣು [575-600] ವನ್ನು ಚಾಳುಕ್ಯರು ಸೋಲಿಸಿ ವೆಂಗಿಯನ್ನು ವಶಪಡಿಸಿಕೊಂಡಿದ್ದರು; ಆದರೂ ಸಿಂಹ-ವಿಷ್ಣು ಪರಾಕ್ರಮದಿಂದ ತನ್ನ ರಾಜ್ಯವನ್ನು ದಕ್ಷಿಣದಲ್ಲಿ ತಂಜಾವೂರಿನವರೆಗೂ ವಿಸ್ತರಿಸಿಕೊಂಡು ಕಾಂಚೀಪುರದಲ್ಲಿ ನೆಲೆಸಿದನು. ಅವನ ಮಗ ಮಹೇಂದ್ರವರ್ಮ [600-625]ನೆಂಬುವನು ಚಾಳುಕ್ಯ ರಾಜನಾಗಿದ್ದ ಇಮ್ಮಡಿ ಪುಲಿಕೇಶಿಯನ್ನು ಸೋಲಿಸಿದ ವೀರ. ಮೊದಲಿಗೆ ಅವನು ಬೌದ್ಧ ಧರ್ಮಕ್ಕೆ ಸೇರಿದವನಂತೆ. ಶೈವ ಸಂತ ಅಪ್ಪರ್ ಅವರ ಪ್ರಭಾವದಿಂದ ಶೈವ ದೀಕ್ಷೆಯನ್ನು ತಳೆದನಂತೆ. ಈತನೇ ಮಾಮಲ್ಲಪುರದ ಶಿಲ್ಪಗಳನ್ನೆಲ್ಲ ಆರಂಭಮಾಡಿದ ಪುಣ್ಯಪುರುಷ. ಅವನ ನಂತರ ರಾಜನಾದ ನರಸಿಂಹವರ್ಮನು [625-645] ಪಲ್ಲವ ವಂಶಕ್ಕೆ ಭೂಷಣ ನಾಗಿ ಬಾಳಿ ಹೋದವನು. ಸಮರ, ರಾಜಕಾರಣ, ರಾಜ್ಯಭಾರಗಳಲ್ಲಿ ಅವನಷ್ಟು ಪ್ರತಿಭಾನ್ವಿತರಾಗಿ ಮೆರೆದ ರಾಜರು ಆ ವಂಶದಲ್ಲಿ ಬರಲಿಲ್ಲ. ಇಮ್ಮಡಿ ಪುಲಿಕೇಶಿ

ಯನ್ನು ಅವನ ರಾಜಧಾನಿಯಾಗಿದ್ದ ಬಾದಾಮಿಯಿಂದಲೇ ಓಡಿಸಿ ಅದನ್ನು ವಶಪಡಿಸಿಕೊಂಡ ಇವನಿಗೆ ಮಹಾಮಲ್ಲ [ಮಾಮಲ್ಲ]ನೆಂಬ ಬಿರುದು ಇದ್ದಿತು. ಮಾಮಲ್ಲಪುರವೆಂಬ ಹೆಸರಿಗೆ ಇವನೇ ಕಾರಣ. ಅಲ್ಲಿನ ರಥವೊಂದರಲ್ಲಿ ಮಾಮಲ್ಲನೆಂಬ ಇವನ ಪ್ರಶಸ್ತಿಯನ್ನು ಬರೆಯಿಸಿ ಉಳಿಸಿದ್ದಾರೆ. ಈ ಪ್ರದೇಶದ ಶಿಲ್ಪಗಳು ಬಹುಮಟ್ಟಿಗೆ ಇವನ ಕಾಲದವು.

ನರಸಿಂಹವರ್ಮನ ನಂತರ ಬಂದ ರಾಜರು ಸಮರ್ಥರಾಗಿರಲಿಲ್ಲ. ಪಲ್ಲವ ಪರಮೇಶ್ವರವರ್ಮ [655-690]ನನ್ನು ಇಮ್ಮಡಿ ಪುಲಿಕೇಶಿಯ ಮಗ ಚಾಳುಕ್ಯ ವಿಕ್ರಮಾದಿತ್ಯನು ಸೋಲಿಸಿ ಕಾಂಚೀಪುರವನ್ನು ಆಕ್ರಮಿಸಿಕೊಂಡನು. ಎಂಟನೆಯ ಶತಮಾನದ ಆರಂಭದಲ್ಲೇ ಚಾಳುಕ್ಯ ರಾಜ ಇಮ್ಮಡಿ ವಿಕ್ರಮಾದಿತ್ಯನೂ ರಾಷ್ಟ್ರಕೂಟ ರಾಜನಾದ ಧ್ರುವವರ್ಷನೂ ಅವನ ಮಗ ಮುಮ್ಮಡಿ ಗೋವಿಂದನೂ ಪಲ್ಲವರ ಪ್ರಭುತ್ವವನ್ನು ಮುರಿದರು. ರಾಷ್ಟ್ರಕೂಟ ರಾಜರಿಗೆ ಅಧೀನರಾದ ಪಲ್ಲವರು ಒಂದು ಶತಮಾನ ಕಳೆಯುವಲ್ಲಿ ಚೋಳ ಮಂಡಲದಲ್ಲಿ ಅಡಗಿ ಇತಿಹಾಸದಿಂದ ಮರೆಯಾದರು.

ಪಲ್ಲವ ರಾಜರು ರಸಿಕರು. ಕಲೆಯಲ್ಲಿ ಅನುರಕ್ತರು. ಮಾಮಲ್ಲಪುರದ ಶಿಲ್ಪವೆಲ್ಲ ಅವರ ಕಲಾಭಿರುಚಿಗೆ ಸ್ಮಾರಕ. ಕ್ರಿಸ್ತಾಬ್ದ 600 ರಿಂದ 850ರವರೆಗೆ ಪಲ್ಲವರ ಕಲೆ ಉಚ್ಛ್ರಾಯ ಸ್ಥಿತಿಯಲ್ಲಿದ್ದಿತು. ಕಾಂಚೀಪುರದ ಕೈಲಾಸನಾಥ ಮಂದಿರವೂ ಮಾಮಲ್ಲಪುರದ ದೇವಾಲಯ ಮಂಟಪಗಳೂ ಇದೇ ಕಾಲದವು. ಪಲ್ಲವ ರಾಜನಾದ ಮಹೇಂದ್ರವರ್ಮನು ಮಾಮಲ್ಲಪುರದ ಕೃತಿಗಳನ್ನು ಆರಂಭ ಮಾಡಿದವನು. ಆದಿವರಾಹಸ್ವಾಮಿ ಶಿಲಾ ಮಂಟಪದಲ್ಲಿ ಇವನು ತನ್ನ ಇಬ್ಬರು ಮಡದಿಯರೊಂದಿಗೆ ನಿಂತಿರುವ ವೈಭವದ ಶಿಲ್ಪ ಫಲಕವಿದೆ. ವ್ಯಕ್ತಿಚಿತ್ರಣ ಭಾರತೀಯರ ಶಿಲ್ಪದಲ್ಲಿ ನೈಜವಾಗಿ ಬಂದಿಲ್ಲವೆನ್ನುವವರಿಗೆ ಇದು ಪ್ರತ್ಯುತ್ತರದಂತಿದೆ. ಮಹೇಂದ್ರವರ್ಮನಲ್ಲದೆ. ಅವನ ನಂತರ ಬಂದ ನರಸಿಂಹವರ್ಮ ಮತ್ತು ಪರಮೇಶ್ವರವರ್ಮ ಇವರ ಕಾಲದಲ್ಲೂ ಮಾಮಲ್ಲಪುರದ ಕಲಾಕೃತಿಗಳು ಬೆಳೆದು ಬಂದವು.

ಇಲ್ಲಿನ ಅವಶೇಷಗಳಲ್ಲಿ ಪ್ರಮುಖವಾದುದೆಂದರೆ ಆದಿವರಾಹಸ್ವಾಮಿಯ

ಶಿಲಾ ಮಂಟಪ. ಒಂದೇ ಬಂಡೆಯಲ್ಲಿ ಕೊರೆದು ಮಾಡಿದ ಮಂಟಪ ಇದು. ಈ ಮಂದಿರದ ಗರ್ಭಗುಡಿಯಲ್ಲಿ ಯಾವ ಮೂರ್ತಿಯೂ ಇಲ್ಲ. ದ್ವಾರಪಾಲಕರೇನೋ ಇದ್ದಾರೆ. ಮುಂದಿನ ಅಂಗಳದ ಎರಡೂ ಕಡೆ ಕಲ್ಲು ಗೋಡೆಗಳ ಮೇಲೆ ದೊಡ್ಡ ಪ್ರಮಾಣದ ಫಲಕಗಳನ್ನು ಬಿಡಿಸಿದ್ದಾರೆ. ಎಡಭಾಗದಲ್ಲಿ ವರಾಹಾವತಾರದ ಚಿತ್ರವಿದೆ. ಮಾಮಲ್ಲಪುರವೇ ವರಾಹಕ್ಷೇತ್ರವೆಂದು ಕಲ್ಪನೆಯುಷ್ಟೆ. ಅಸುರ ಹಿರಣ್ಯಾಕ್ಷನ ಹಿಡಿತದಿಂದ ಭೂದೇವಿಯನ್ನು ಉದ್ಧರಿಸಿ ಲೋಕಸಂಗ್ರಹ ಮಾಡಿದ ಆದಿ ವರಾಹಮೂರ್ತಿ ಈ ಫಲಕದಲ್ಲಿ ಚತುರ್ಭುಜದ ದಿವ್ಯ ಮೂರ್ತಿ.–ಬಲಗಾಲನ್ನು ಆದಿಶೇಷನ ಮೇಲಿಟ್ಟು ಬಲತೊಡೆಯ ಮೇಲೆ ಭೂದೇವಿಯನ್ನು ಕುಳ್ಳಿರಿಸಿಕೊಂಡು ತನ್ನ ವರಾಹ ಮುಖದಿಂದ ಆಕೆಯನ್ನು ನೇವರಿಸುತ್ತ ಬಲಗೈಯಿಂದ ಆಕೆಯ ನಡುವು ಎಡಗೈಯಿಂದ ಕಾಲುಗಳನ್ನು ಹಿಡಿದು ವೀರ ಭಂಗಿಯಲ್ಲಿ ನಿಂತ ಶಂಖ ಚಕ್ರಧಾರಿಯಾದ ಮೂರ್ತಿಯ ಸುತ್ತ ಭಕ್ತ ಜನರಿದ್ದಾರೆ.

ಇದರ ಎದುರಿನಲ್ಲಿ ಅಂಗಳದ ಬಲಗಡೆ ಕಲ್ಲುಗೋಡೆಯ ಮೇಲೆ ತ್ರಿವಿಕ್ರಮಾವತಾರವನ್ನು ಬಿಡಿಸಿದ್ದಾರೆ. ಚಕ್ರ-ಶಂಖ-ಗದಾ-ಖಡ್ಗ ಮುಂತಾದ ಆಯುಧಗಳನ್ನು ಹಿಡಿದ ಅಷ್ಟ ಭುಜ ಮೂರ್ತಿ ಇದು. ಫಲಕದ ಉದ್ದಕ್ಕೂ ದೃಢವಾಗಿ ನಿಂತ ಈ ಮೂರ್ತಿ ಬಲಗಾಲನ್ನು ಭೂಮಿಯ ಮೇಲಿಟ್ಟು ಎಡಗಾಲನ್ನು ಮೇಲೆತ್ತಿದೆ. ಆಕಾಶವನ್ನು ಅಳೆಯುವ ಭಂಗಿ ಇದು. ತ್ರಿವಿಕ್ರಮ ದೇವರ ಪೂರ್ಣಾಕಾರದ ಸುತ್ತಲೂ ವಿವಿಧ ಭಂಗಿಗಳಲ್ಲಿ ಸಣ್ಣ ಪ್ರಮಾಣದ ಹತ್ತು ಪುರುಷ ಮೂರ್ತಿಗಳಿವೆ. ಇವುಗಳಲ್ಲಿ ದೇವರ ಕಾಲ ಬಳಿ ಕುಳಿತವನು ಬಲಿಚಕ್ರವರ್ತಿಯೆಂದೂ ಅವನ ಹಿಂದೆ ಕುಳಿತವನು ಅವನ ಪುರೋಹಿತ ಶುಕ್ರಾಚಾರ್ಯನೆಂದೂ ಹೇಳುತ್ತಾರೆ. ಆದರೆ ಈ ನಿರ್ದೇಶನಕ್ಕೆ ಆಧಾರ ಸಾಲದು.

ಇದೇ ಗೋತ್ರಕ್ಕೆ ಸೇರಿದ ಮತ್ತೊಂದು ಪ್ರಖ್ಯಾತ ಭಿತ್ತಿ ಶಿಲ್ಪವೆಂದರೆ ಮಹಿಷಾಸುರಮರ್ದಿನಿಯದು. ಇದನ್ನು ಕಡೆದಿಟ್ಟಿರುವ ಮಂಟಪವನ್ನು ಮಹಿಷ ಮಂಟಪವೆನ್ನುತ್ತಾರೆ. ಹಳ್ಳಿಯವರು ಇದನ್ನು ಯಮಪುರಿ ಮಂಟಪವೆಂದೂ ಕರೆಯುತ್ತಾರೆ. ಈ ಮಂಟಪದಲ್ಲಿ ಪಾರ್ವತೀ ಪರಮೇಶ್ವರರ ಚಿತ್ರಣ, ದ್ವಿಭುಜ–ಅನಂತಶಯನ–ವಿಷ್ಣುವಿನ ಚಿತ್ರಣಗಳಲ್ಲದೆ ದುರ್ಗೆಯ ದೊಡ್ಡ ಶಿಲಾಫಲಕವಿದೆ. ಇದು ನಮ್ಮ ನಾಡಿನಲ್ಲೇ ಉಜ್ವಲವಾದ ಕಲಾಕೃತಿಯೆಂದು

ತಜ್ಞರ ಅಭಿಪ್ರಾಯ. ನಮ್ಮ ದೇಶದ ಎಲ್ಲೆಡೆ ಮಹಿಷಾಸುರಮರ್ದಿನಿಯ ಚಿತ್ರಣಗಳಿವೆ. ಆದರೆ ಇಷ್ಟು ಭವ್ಯವಾದ ಚಿತ್ರಣ ಬೇರೆಲ್ಲೂ ಕಾಣಸಿಗದು. ಸಿಂಹದ ಮೇಲೆ ಪಟ್ಟಭದ್ರೆಯಾಗಿ ಕುಳಿತು ಧನುಸ್ಸನ್ನು ಹೆದೆಯೇರಿಸಿ ಕತ್ತಿಯನ್ನು ಹಿರಿದು, ಮುಂದೆ ನಿಂತ ಮಹಿಷ-ದೈತ್ಯನ ಮೇಲೆ ಎರಗಿ ಹೋಗುತ್ತಿರುವ ಅಷ್ಟ ಭುಜ ದುರ್ಗೆ ವೀರ ಭಂಗಿಯಲ್ಲಿದ್ದರೂ ಲಾವಣ್ಯಮಯಿ. ಶಕ್ತಿಮಯಿ ಯೆಂಬುದು ಸ್ಪಷ್ಟವಾದರೂ ಚಂಡಿಯ ಭಾಸವಿಲ್ಲ. ಎಲ್ಲೋರದ ಕೈಲಾಸನಾಥ ಮಂದಿರದಲ್ಲಿರುವ ಶಿವ-ತ್ರಿಪುರಾಂತ ನನ್ನ ನೆನಪಿಗೆ ತರುವ ದುರ್ಗೆಯ ಎತ್ತರ ಐದಡಿ; ಮನುಷ್ಯನ ಮೈ, ಕೋಣನ ಮುಖದ ಮಹಿಷಾಸುರ ಏಳೂಮುಕ್ಕಾಲಡಿ ಎತ್ತರದ ಚಂಡ ದೈತ್ಯ. ಅವನು ಗದೆಯೆತ್ತಿ ನಿಂತಿರುವ ಭಂಗಿಯು ಭೀಕರ ವಾಗಿದೆ; ದುರ್ಗೆಯ ಭಂಗಿ ಧೀರ ಗಂಭೀರ, ಅದರಲ್ಲಿ ಲಾಲಿತ್ಯವು ಇಲ್ಲದೆ ಇಲ್ಲ. ಆಕೆಯನ್ನು ಹೊತ್ತ ಸಿಂಹವೂ ರುದ್ರ-ನಾಟಕದಲ್ಲಿ ಪಾಲ್ಗೊಂಡಿದೆ. ಶಕ್ತಿಯ ಪರಿವಾರ, ಮಹಿಷನ ಭಟರು ಉತ್ಸಾಹಿಗಳಾಗಿ ನೆರೆದಿದ್ದಾರೆ. ಸರ್ವ ಸುಂದರ ವಾದ ಕೃತಿಯಿದು.

ಮಾಮಲ್ಲಪುರದಲ್ಲಿ ಪಾಂಡವರಿಗೆ ಸಂಬಂಧಿಸಿದಂತೆ ಅವಶೇಷಗಳನ್ನು ನಿರ್ದೇಶಿಸುತ್ತಾರೆ. ಇದು ಎಷ್ಟರ ಮಟ್ಟಿಗೆ ಸಾಧಾರವೆಂಬುದು ತಿಳಿಯುವುದಿಲ್ಲ. ಈಗ ಹದಿನೇಳು ಕಂಬಗಳಿರುವ ಒಂದು ಶಿಲಾ ಮಂಟಪವನ್ನು 'ಪಂಚ ಪಾಂಡವರ ಗುಹೆ'ಯೆನ್ನುತ್ತಾರೆ. ಹಳ್ಳಿಯ ಗುಡ್ಡದ ದಕ್ಷಿಣದಲ್ಲಿ ಇರುವ ದೊಡ್ಡದೊಂದು ಕಲ್ಲು ಗುಂಡನ್ನು ದ್ರೌಪದಿ ಮಾಡಿಟ್ಟ ಬೆಣ್ಣೆಯ ಮುದ್ದೆಯೆಂದು ತೋರಿಸುತ್ತಾರೆ. ಗುಡ್ಡದ ನಡುವೆ ದ್ರೌಪದಿ ಉಪಯೋಗಿಸಿದ್ದೆಂದು ಅರಶಿನ ತೊಟ್ಟಿಯನ್ನು ತೋರಿಸುತ್ತಾರೆ. ಅರ್ಜುನನ ತಪಶ್ಚರ್ಯೆಯ ದೃಶ್ಯ ದೊಡ್ಡದೊಂದು ಬಂಡೆಯ ಮೇಲೆ ಮೂಡಿ ಬಂದಿದೆ. ಪಾಂಡವರ ರಥಗಳೆಂದು ಅಖಂಡ ಬಂಡೆಯಲ್ಲಿ ಕೊರೆದು ಮಾಡಿದ ಮಂಟಪಗಳಿವೆ. ಪಾಂಡವರು ಈ ಕ್ಷೇತ್ರದಲ್ಲಿದ್ದರೆಂಬುದಕ್ಕೆ ಯಾವ ಗಮಕವೂ ಇಲ್ಲ.

ಕಡಲೂರು ದಾರಿಯ ಮಗ್ಗುಲಲ್ಲಿ ದೊಡ್ಡದೊಂದು ಬಂಡೆ. ಎಂಬತ್ತೆಂಟೂವರೆ ಅಡಿ ಅಗಲ, ಮೂವತ್ತು ಅಡಿ ಎತ್ತರದ ಈ ಬಂಡೆ ಏನು ಕಾರಣ ದಿಂದಲೋ ನಡುವೆ ಬಿರುಕು ಬಿಟ್ಟಿದೆ. ಬಹುಶಃ ಭಾರಿ ಭೂಕಂಪವೊಂದರಿಂದ

ಭೂಮಿ ಬಲವಾಗಿ ಅಲ್ಲಾಡಿ ಬಂಡೆ ಒಡೆದಿರಬೇಕೆಂದು ಕೆಲವರ ಊಹೆ. ಅಂತೂ ಈ ಬಿರುಕು ಬಂಡೆಯ ಮೇಲು ಮೈಯನ್ನು ಇಬ್ಭಾಗ ಮಾಡಿದೆ. ಈ ಬಂಡೆಯ ಎರಡು ಸಾವಿರ ನಾನ್ನೂರು ಚದರ ಅಡಿಗಳಷ್ಟು ಮುಖ ಭಾಗವನ್ನು ಸುಂದರವಾದ ರಸಭರಿತವಾದ ಶಿಲ್ಪಗಳಿಂದ ತುಂಬಿಸಿದ್ದಾರೆ. ಇಡೀ ಫಲಕವು ಮಹಾಭಾರತದ ವನ ಫರ್ವದಲ್ಲಿ ಬರುವ ಕಿರಾತಾರ್ಜುನೀಯದ ಕಥೆಯನ್ನು ಅವಲಂಬಿಸಿದೆಯೆಂದು ಹೇಳುತ್ತಾರೆ. ಅರ್ಜುನನು ಹಿಮಾಲಯದ ಪರಿಸರದಲ್ಲಿ ಉಗ್ರವಾದ ತಪಸ್ಸನ್ನು ಮಾಡಿ ಶಿವನನ್ನು ಒಲಿಸಿ ಅವನಿಂದ ಪಾಶುಪತಾಸ್ತ್ರವನ್ನು ಪಡೆದದ್ದು ಈ ಕಥೆಯ ವಸ್ತು. ಈ ಬಂಡೆಯ ಬಲಭಾಗದಲ್ಲಿ ಬಿರುಕಿನ ಪಕ್ಕದಲ್ಲೇ ಊರ್ಧ್ವಬಾಹುವಾಗಿ ಒಂದೇ ಕಾಲ ಮೇಲೆ ನಿಂತ ತಪಸ್ವಿಯ ಮೂರ್ತಿಯನ್ನು ಅರ್ಜುನನೆಂದು ನಿರ್ದೇಶಿಸುತ್ತಾರೆ. ಅವನ ಮುಂದೆ ಚತುರ್ಭುಜ ಶಿವ ಪಾಶುಪತಾಸ್ತ್ರವನ್ನು ಹಿಡಿದು ವರದಾನ ಭಂಗಿಯಲ್ಲಿ ನಿಂತಿದ್ದಾನೆ. ಅರ್ಜುನನಿಗಿಂತ ಶಿವನ ಮೂರ್ತಿ ದೊಡ್ಡದು. ಇಬ್ಬರ ನಡುವೆ ಇರುವ ಗಿಡ್ಡ ಮೂರ್ತಿಯನ್ನು ದೇವತೆಗಳ ಶಿಲ್ಪಿ ವಿಶ್ವಕರ್ಮನೆಂದು ಅಲ್ಲಿನ ಜನ ಹೇಳುತ್ತಾರೆ.

ನಾಲ್ಕು ವಿಮಾನಗಳ ಒಂದು ಸಾಲಿನಲ್ಲಿ ಮತ್ತೊಂದು ಬದಿಗೆ ಇವೆ. ಬದಿಗಿರುವ ವಿಮಾನ ನಕುಲ ಸಹದೇವರದಂತೆ. ಹದಿನೆಂಟು ಅಡಿ ಉದ್ದ, ಹನ್ನೊಂದು ಅಡಿ ಅಗಲ. ಹದಿನಾರು ಅಡಿ ಎತ್ತರದ ಈ ಬಂಡೆಯನ್ನು ಸುಂದರವಾಗಿ ಕಡೆದು ನಿಲ್ಲಿಸಿದ್ದಾರೆ. ಉಳಿದ ನಾಲ್ಕರಲ್ಲಿ ಒಂದು ಕಡೆ ದ್ರೌಪದಿಯ ವಿಮಾನ. ಪಕ್ಕದಲ್ಲಿ ಅರ್ಜುನನ ವಿಮಾನ, ನಂತರ ಭೀಮನ ವಿಮಾನ, ಇನ್ನೊಂದು ಕಡೆ ಧರ್ಮರಾಯನ ವಿಮಾನಗಳಿವೆ.

ಇವುಗಳನ್ನು ರಥಗಳೆಂದು ಕರೆಯುವುದು ಬಹುಶಃ ವಿಮಾನಗಳೆಂಬ ಅರ್ಥದಲ್ಲೇ ರಥವೆಂದೂ. ವಿಮಾನವೆಂದೂ ದೇಗುಲವನ್ನು ಮೊದಲು ಕರೆಯುತ್ತಿದ್ದರು. ಮುಂದೆ ದೇವಾಲಯಗಳ ಒಂದು ಶೈಲಿ ರಥವೆನಿಸಿಕೊಂಡಿತು.

ಆಲೋಕನಾಮೃತ ಅಜಂಟಾ

ಈಗೇನೋ ಅಜಂಟಾ ಗುಹಾದೇಗುಲಗಳು ಜಗತ್ಪ್ರಸಿದ್ಧವಾಗಿವೆ. ಆದರೆ ನೂರಐವತ್ತು ವರ್ಷಗಳ ಹಿಂದೆ ಅಜಂಟಾದ ಹೆಸರನ್ನೇ ಯಾರೂ ಕೇಳಿರಲಿಲ್ಲ.! ಕ್ರಿಸ್ತಪೂರ್ವ ಎರಡು ನೂರು ವರ್ಷಗಳಿಂದ ಕ್ರಿಸ್ತಾಬ್ದ ಐದಾರನೆಯ ಶತಮಾನಗಳವರೆಗೆ ನಾಡಿನ ಕಲಾ ಪರಿಣತರು ತಮ್ಮ ತಪಸ್ಸಿನ ಫಲವನ್ನೆಲ್ಲ ಇಲ್ಲಿ ಧಾರೆಯೆರೆದು ಅದ್ಭುತವಾದ ಕಲಾ ಸಂಸಾರವೊಂದನ್ನೇ ಸೃಷ್ಟಿ ಮಾಡಿದ್ದರು. ಯಾವ ದುರ್ದೈವದಿಂದಲೋ ಜನರ ಆಸಕ್ತಿಯನ್ನು ಕಳೆದುಕೊಂಡು ಇದು ಕಾಡುಪಾಲಾಯಿತು. ಸಾವಿರಾರು ವರ್ಷಕಾಲ. ಈ ಕಲಾಕೃತಿಗಳು ಇದ್ದುದೂ ಜನರ ನೆನಪಿನಲ್ಲಿ ಉಳಿಯಲಿಲ್ಲ.

ಈಗ್ಗೆ 169 ವರ್ಷಗಳ ಹಿಂದೆ, 1819ರಲ್ಲಿ, ಆಂಗ್ಲ ಸೈನಿಕರ ತುಣುಕೊಂದು ಹೈದರಾಬಾದು ಪ್ರಾಂತ್ಯದಲ್ಲಿ ಕಾಲ್ನಡಿಗೆಯ ಪ್ರವಾಸದಲ್ಲಿದ್ದಿತು. ಮಾರ್ಗ ಮಧ್ಯದಲ್ಲಿ ಔರಂಗಾಬಾದಿಗೆ ನಲವತ್ತು ಮೈಲಿ ದೂರದ ಕಾಡಿನಲ್ಲೊಂದೆಡೆ ಅವರು ಬೀಡು ಬಿಟ್ಟಿದ್ದಾಗ ಕೆಲವರು ಸಾಹಸಿ ಸೈನಿಕರು ಪಕ್ಕದಲ್ಲಿದ್ದ ಬೆಟ್ಟವೊಂದನ್ನು ಹತ್ತಲು ಹೊರಟರು. ವಾಘೋರ್ ಎನಿಸಿಕೊಳ್ಳುವ ನದಿಯು ಅರ್ಧ ವರ್ತುಲಾಕಾರವಾಗಿ ಮೈಚಾಚಿ ನಿಂತಿದ್ದ ಬೆಟ್ಟಸಾಲೊಂದರ ಕೆಳಗೆ ಆಳದಲ್ಲಿ ಹರಿಯುತ್ತಿದ್ದಿತು. ಸೈನಿಕರು ನದಿಯನ್ನು ದಾಟಿ ದುರ್ಗಮವಾದ ಬೆಟ್ಟವನ್ನು ಹತ್ತಿ ಮೇಲೆ ಓಡಾಡತೊಡಗಿದರು. ಹಬ್ಬಿ ಹಂದರವಾಗಿ ಬೆಳೆದಿದ್ದ ಮುಳ್ಳು ಪೊದೆಗಳ ನಡುವೆ ಇಣಿಕಿ ನೋಡಿದಾಗ ಅವರ ಮೈ ಜುಮ್ಮೆಂದಿತು. ಬೆಟ್ಟದ ಮುಖದಲ್ಲಿ ಅದ್ಭುತವಾದ ಶಿಲ್ಪಕೃತಿಗಳು ಕಾಣಿಸಿಕೊಂಡವು. ಸೊಗಸಾಗಿ ಕಡೆದ ಕಂಬಗಳು, ನಯವಾಗಿ ಕಂಡರಿಸಿದ ಗವಾಕ್ಷಿಗಳು, ನಿಪುಣನಾದ ಶಿಲ್ಪಿಯು ಸಿದ್ಧ

ಪಡಿಸಿದ ಗುಹಾದ್ವಾರಗಳು ಅವರನ್ನು ಬೆಚ್ಚುಗೊಳಿಸಿದುವು.

ತಮಗಿಂತ ಮುಂಚೆ ಯಾವ ಮನುಷ್ಯನಾಗಲಿ ಇಲ್ಲಿಗೆ ಬಂದಿರಬಹುದೆಂಬ ಕಲ್ಪನೆ ಅವರಿಗಿರಲಿಲ್ಲ. ಕಾಡು ಅಷ್ಟು ದಟ್ಟವಾಗಿದ್ದಿತು. ಆದರೆ ಈ ಗೊಂಡಾರಣ್ಯದ ನಟ್ಟನಡುವೆ ಇಂಥ ಅದ್ಭುತ ಶಿಲ್ಪಕೃತಿಗಳಿರುವುದನ್ನು ಕಂಡು ತಮ್ಮನ್ನೇ ತಾವು ನಂಬದಾದರು. ಅವರು ಆಕಸ್ಮಿಕವಾಗಿ ಕಂಡ ದೃಶ್ಯದ ವಾರ್ತೆಯು ಕಾಲ ಕ್ರಮೇಣ ಇಂಗ್ಲೆಂಡ್ ದೇಶವನ್ನು ಮುಟ್ಟಿತು. 1823ರಲ್ಲಿ ಲಂಡನ್ನಿನ ರಾಯಲ್ ಏಷಿಯಾಟಿಕ್ ಸೊಸೈಟಿಯ ಪತ್ರಿಕೆಯು ಇದನ್ನು ವರದಿಮಾಡಿತು. 1843ರಲ್ಲಿ ಫರ್ಗುಸನ್ ಎಂಬ ಕಲಾಭಿಜ್ಞನು ಸೈನಿಕರು ನಿರ್ದೇಶಿಸಿದ ಸ್ಥಳಕ್ಕೆ, ಎಂದರೆ ಅಜಂಟಾಕ್ಕೆ ಬಂದು ಅಲ್ಲಿನ ವಾಸ್ತು ಶಿಲ್ಪಗಳನ್ನು ಪರಿಶೀಲಿಸಿದನು. ಗುಹೆಗಳ ಒಳಗೆ ಗೋಡೆಗಳ ಮೇಲೆ ಬಿಡಿಸಿದ್ದ ಚಿತ್ರಗಳ ಸೊಬಗನ್ನು ಲೋಕಕ್ಕೆ ತಿಳಿಸಿದನು

ಮರುವರ್ಷ ಮೇಜರ್ ಗಿಲ್ ಎಂಬ ಉತ್ಸಾಹಿಯು ಅಜಂಟಾಕ್ಕೆ ಬಂದು ಅಲ್ಲಿನ ವರ್ಣಚಿತ್ರಗಳ ಪ್ರತಿಕೃತಿಗಳನ್ನು ತುಂಬ ಪ್ರಯಾಸದಿಂದ ಸಿದ್ಧಗೊಳಿಸಲು ಆರಂಭಿಸಿದನು. ಒಟ್ಟು ಇಪ್ಪತ್ತು ವರ್ಷಗಳ ಕಾಲ ಅವನು ಪಟ್ಟ ಶ್ರಮದ ಫಲವಾಗಿ ನೂರಾರು ಅದ್ಭುತ ಕಲಾಕೃತಿಗಳು ಮೈದಳೆದುವು. ಇವೆಲ್ಲವನ್ನೂ ಲಂಡನ್ನಿಗೆ ಸಾಗಿಸಿ ಅಲ್ಲಿನ ಸಂಗ್ರಹಾಲಯದಲ್ಲಿ ಇರಿಸಿದ್ದರು. ಆದರೆ ಈ ಅವಧಿಯಲ್ಲಿ ನಡೆದ ಲಂಡನ್ ನಗರದ ಅಗ್ನಿ ಅನಾಹುತದಲ್ಲಿ ಇವೆಲ್ಲವೂ ಸುಟ್ಟು ಬೂದಿಯಾದುವು; ಐದಾರು ಮಾತ್ರ ಉಳಿದುಕೊಂಡವು. 1875ರಲ್ಲಿ ಗ್ರಿಫಿತ್ ಎಂಬಾತನು ಮುಂಬಯಿಯ ಕಲಾಶಾಲೆಯ ಪಂಡಿತರ ನೆರವಿನಿಂದ ಅಜಂಟಾ ಗುಹಾ ಚಿತ್ರಗಳ ಪ ತಿಕೃತಿಗಳನ್ನು ಮತ್ತೆ ಸಿದ್ಧಪಡಿಸಿದನು. 1896ರಲ್ಲಿ ಆಗಿನ ಭಾರತ ಸರ್ಕಾರದವರು ಆಸಕ್ತಿವಹಿಸಿ ಈ ಪ್ರತಿಕೃತಿಗಳನ್ನು ಪ್ರಚುರಪಡಿಸಿದರು. 1915ರಲ್ಲಿ ಶ್ರೀಮತಿ ಹೆರಿಂಗ್‌ಹ್ಯಾಮ್ ಎಂಬಾಕೆ ಮತ್ತೊಂದು ಬಾರಿ ಪ್ರತಿಕೃತಿಗಳನ್ನು ಸಿದ್ಧಪಡಿಸಿದಳು. ಈಕೆ ಅಜಂಟಾಕ್ಕೆ ತನ್ನೊಂದಿಗೆ ಕರೆದುಕೊಂಡು ಹೋದ ಕಲಾವಿದರಲ್ಲಿ ಮೈಸೂರಿನ ಕೆ. ವೆಂಕಟಪ್ಪನವರೂ ಇದ್ದರು.

ಹೀಗೆ ಅಜಂಟಾದ ಚಿತ್ರಗಳೂ, ಶಿಲ್ಪಗಳೂ ಜಗತ್ತಿನ ಗಮನವನ್ನು ಸೆಳೆದುವು. ಯಾತ್ರಿಕರು, ಉತ್ಸುಕರು, ರಸಿಕರು ಅಜಂಟಾ ಯಾತ್ರೆಯನ್ನು ಕೈಗೊಳ್ಳ

ಲಾರಂಭಿಸಿದರು. ಈ ಪ್ರದೇಶದ ಆಗಿನ ಒಡೆಯರಾಗಿದ್ದ ನಿಜಾಂ ಸರ್ಕಾರದವರು ಅಜಂಟಾ ಗುಹೆಗಳನ್ನು ನಿರ್ಮಲಗೊಳಿಸಿ, ಮಾರ್ಗವನ್ನು ಸರಿಪಡಿಸಿ ಯಾತ್ರಿಕರಿಗೆ ಸೌಲಭ್ಯಗಳನ್ನು ಒದಗಿಸಿಕೊಟ್ಟರು. ತಮ್ಮ ಪ್ರಾಕ್ತನ ಕರ್ಮಶಾಖೆಯ ಮುಖ್ಯಾಧಿಕಾರಿಯಾಗಿದ್ದ ಗುಲಾಂಯಾಜ್ದಾನಿಯನ್ನು ವಾಟಿಕಾನ್‌ನ ಪುರಾತನ ವರ್ಣಚಿತ್ರಗಳನ್ನು ಸಂರಕ್ಷಣೆ ಮಾಡುವ ಕಲೆಯಲ್ಲಿ ಪರಿಣತರಾದವರ ಸಲಹೆಯನ್ನು ಪಡೆದು ಬರಲು ರೋಮ್ ನಗರಕ್ಕೆ ಕಳುಹಿಸಿದರು. ಇವರ ನೆರವಿನಿಂದ ಅಜಂಟಾದ ಚಿತ್ರಗಳು ಉಳಿದುಕೊಂಡವು. ಯಾಜ್ದಾನಿ 1930–1946ರಲ್ಲಿ ಅಜಂಟಾದ ಚಿತ್ರಪ್ರತಿಕೃತಿಗಳನ್ನು ಆರು ಸಂಪುಟಗಳಲ್ಲಿ ಸಂಗ್ರಹಿಸಿ ಪ್ರಕಟಿಸಿದರು. ಇವು ಅಚ್ಚಾದದ್ದು, ಪ್ರಕಟವಾದದ್ದು ಆಕ್ಸ್‌ಫರ್ಡ್‌ನಲ್ಲಿ.

ಅಜಂಟಾ ಬೆಟ್ಟಸಾಲಿನ ಎತ್ತರ ಇನ್ನೂರ ಐವತ್ತು ಅಡಿಗಳು. ಬೆಟ್ಟವು ಅರ್ಧ ವರ್ತುಲಾಕಾರವಾಗಿದ್ದು, ಮುಂದೆ ಮೈಚಾಚಿದ ಬಂಡೆಗಳನ್ನು ಕಂಡರಿಸಿ ಗುಹೆಗಳನ್ನು ಕೊರೆದಿದ್ದಾರೆ. ಅಜಂಟಾದಲ್ಲಿ ಇಂಥ ಇಪ್ಪತ್ತೊಂಬತ್ತು ಗುಹೆಗಳಿವೆ. ನಮ್ಮ ದೇಶದಲ್ಲಿ ಒಟ್ಟು ಸಾವಿರದ ಇನ್ನೂರಕ್ಕೂ ಮೀರಿ ಗುಹಾಂತರ ದೇವಾಲಯಗಳಿವೆ. ಇವು ಬಹುಮಟ್ಟಿಗೆ ದಕ್ಷಿಣ ಘಟ್ಟದಲ್ಲಿಯೇ ಭಾಜಾ, ಕೊಂಡನೆ, ಬೇದ್ಸಾ, ನಾಸಿಕ, ಕಾರ್ಲಿ ಮುಂತಾದೆಡೆ ಇವೆ. ಅಜಂಟಾ ಈ ಗುಂಪಿಗೇ ಸೇರಿದುದು. ಅದಕ್ಕೆ ಎಪ್ಪತ್ತು ಮೈಲಿ ಉತ್ತರಕ್ಕೆ ಇರುವ ಎಲೂರ [ಎಲ್ಲೋರ] ಗುಹಾಂತರ್ದೇವಾಲಯಗಳು ಕೂಡ ತುಂಬ ಪ್ರಸಿದ್ಧವಾದುವು. ಮುಂಬಯಿಯ ಸಾಲ್‌ಸೆಟ್ ದ್ವೀಪದಲ್ಲಿರುವ ಕನ್ಹೇರಿಯಲ್ಲಿ ನೂರ ಒಂಬತ್ತು ಗುಹಾ ದೇಗುಲಗಳಿವೆ.

ಅಜಂಟಾ ಗುಹಾ ದೇಗುಲಗಳು ಮೊಟ್ಟಮೊದಲು ಮೈದಳೆದದ್ದು ಕ್ರಿಸ್ತಪೂರ್ವ ಎರಡನೆಯ ಶತಮಾನದಲ್ಲಿ. ಆಂಧ್ರ ಸಾತವಾಹನ ರಾಜರು ದಕ್ಷಿಣಾಪಥಪತಿಗಳಾಗಿದ್ದಾಗ ಮೂಡಿದ ಕಲಾಕಲ್ಪನೆ ಇದು. ಅವರ ನೆರವಿನಿಂದಲೇ ಆರಂಭವಾದ ಶಿಲ್ಪಗಳೂ ಚಿತ್ರಗಳೂ ಮುಂದೆ ವಾಕಾಟಕ ರಾಜರ, ಬಾದಾಮಿ ಚಾಳುಕ್ಯ ಅರಸರ, ಗುಪ್ತ ಚಕ್ರವರ್ತಿಗಳ ಪ್ರೋತ್ಸಾಹದಿಂದ ಉಜ್ವಲವಾದುವು. ಬಾದಾಮಿ ಚಾಳುಕ್ಯ ರಾಜರಲ್ಲಿ ವಿಖ್ಯಾತನಾದ ಸತ್ಯಾಶ್ರಯ ಪರಮೇಶ್ವರ

ಇಮ್ಮಡಿ ಪುಲಿಕೇಶಿ (ಕ್ರಿ. 609-642)ಯ ಚಿತ್ರ ಅಜಂಟಾದ ಮೊದಲನೆಯ ಗುಹೆಯಲ್ಲಿಯೇ ಇದೆ. ಪರ್ಶಿಯಾ ದೇಶದ ದೊರೆ ಖುಸ್ರು ತನ್ನ ರಾಯಭಾರಿಗಳನ್ನು ಪುಲಿಕೇಶಿಯ ಆಸ್ಥಾನಕ್ಕೆ ಕಳುಹಿಸಿದ ಚಿತ್ರ ಇದು. ಕನ್ನಡ-ಆಂಧ್ರ ಜನರಿಗೆ ಹೆಮ್ಮೆಯನ್ನು ತರುವ ವಿವರವಿದು. ಗಂಗರನ್ನೂ, ಕದಂಬರನ್ನೂ, ಪಲ್ಲವರನ್ನೂ, ಕೋಸಲ-ಕಳಿಂಗ-ಮೌರ್ಯರನ್ನೂ ಸದೆ ಬಡಿದು, ಪುರಿಯನ್ನು ಮುತ್ತಿ, ವೆಂಗಿಯನ್ನು ಗೆದ್ದು, ನರ್ಮದಾ ತೀರದಲ್ಲಿ ಹರ್ಷವರ್ಧನನನ್ನು ಸೋಲಿಸಿ, ಕನ್ನಡದ ಜನರಿಗೂ ತೆಲುಗರಿಗೂ ಕೀರ್ತಿಯನ್ನು ತಂದುಕೊಟ್ಟ ವೀರ ಇವನು.

ಇವನು ಅಜಂಟಾ ಗುಹೆಗಳಲ್ಲಿ ಕೆಲಸ ಮಾಡಲು ಕನ್ನಡ ನಾಡಿನ ಕಲಾವಿದರನ್ನು ನಿಯಮಿಸಿದ್ದನೆಂದು ಹೇಳುತ್ತಾರೆ. ಇದು ಹೇಗಿದ್ದರೂ, ಪುಲಿಕೇಶಿಯಿಂದಾಗಿ ಅಜಂಟಾದ ಕಲೆ ಮತ್ತಷ್ಟು ಹಿಗ್ಗಿತು. ರಾಷ್ಟ್ರಕೂಟ ರಾಜನಾದ ಕೃಷ್ಣ (ಕ್ರಿ.700ಕ್ಕೆ ಮುಂಚೆ) ಕೂಡ ಅಜಂಟಾ ಮತ್ತು ಎಲ್ಲೋರಾ ಗುಹಾಂತ-ರ್ದೇವಾಲಯಗಳ ಕಲಾ ಪ್ರಪಂಚವನ್ನು ಬೆಳಗಿಸಿದನು. ಕವಿರಾಜಮಾರ್ಗವನ್ನು ಬರೆದ ನೃಪತುಂಗ-ರಾಜನ ಮುತ್ತಜ್ಜ ಇವನು. ಅಂತೂ ಕನ್ನಡಿಗರಿಗೂ ಅಜಂಟಾಕ್ಕೂ ಪೂರ್ವದ ಸಂಬಂಧವಿರುವುದು ನಿರ್ವಿವಾದ.

ಅಜಂಟಾದ ಗುಹಾ ದೇಗುಲಗಳಲ್ಲಿ ಅಪೂರ್ಣವಾದುವೂ ಕೆಲವಿವೆ. ಇವನ್ನು ಪರಿಶೀಲಿಸಿದರೆ ಗುಹೆಗಳನ್ನು ಕಡೆದ ರೀತಿ ಸ್ಪಷ್ಟವಾಗುತ್ತದೆ. ದೊಡ್ಡ ಬಂಡೆಯ ಮುಖವನ್ನು ನೇರವಾಗಿ ಕಡೆದು ಮುಂಭಾಗದಲ್ಲಿ ಹಜಾರಕ್ಕೆ ಜಾಗ ಬಿಟ್ಟು, ಅನಂತರ ಮೇಲಿನಿಂದ ಅರ್ಧ ವರ್ತುಲಾಕಾರದ ಗವಾಕ್ಷಿಯ ಕೆಲಸವನ್ನು ಆರಂಭಿಸಿ, ಅದು ಮುಗಿದ ಮೇಲೆ ಆಧಾರ ಸ್ತಂಭಗಳನ್ನು ಸ್ಥೂಲವಾಗಿ ಕಂಡರಿಸಿ, ಒಳಗೆ ಭುವನಾಸಿ ಮುಂತಾದ ವಿವರಗಳನ್ನು ಮುಗಿಸಿ, ಅನಂತರ ಹಜಾರದ ಕಂಬಗಳಲ್ಲಿ ಶಿಲ್ಪ ವಿನ್ಯಾಸವನ್ನು ಬಿಡಿಸುತ್ತಿದ್ದರು. ಗವಾಕ್ಷಿಯಿಂದ ಗುಹೆಯ ಒಳಗೆ ಗಾಳಿ, ಬೆಳಕು ಬರುತ್ತಿದ್ದುದು ಮಾತ್ರವಲ್ಲದೆ ಒಳಗೆ ಕೆಲಸ ಮಾಡುತ್ತಿದ್ದಾಗ ಕಲ್ಲುಚೂರುಗಳನ್ನೂ ಧೂಳನ್ನೂ ಹೊರಗೆ ಬಿಸಾಡುವ ಪ್ರಯೋಜನವೂ ಗವಾಕ್ಷಿಗಿದ್ದಿತು.

ಶಿಲ್ಪಿಯು ಕೆಲಸ ಪೂರೈಸಿದ ಮೇಲೆ ಗೋಡೆಗಳ ಮೇಲೂ, ಭುವನಾಸಿಯ ಮೇಲೂ, ಕಂಬಗಳ ಮೇಲೂ ವರ್ಣಚಿತ್ರಗಳನ್ನು ಮೂಡಿಸುತ್ತಿದ್ದರು. ಶಿಲ್ಪಿಯೇ ಚಿತ್ರಕಾರನೂ ಆಗಿ ಕೆಲಸಮಾಡುತ್ತಿದ್ದ ಕಾಲ ಅದು. ಟಿಬೆಟ್ ದೇಶದ ಇತಿಹಾಸಕಾರನಾದ ತಾರಾನಾಥನು ಆಗ ಶಿಲ್ಪಿಯು ವಿಗ್ರಹಕಾರನೂ ಚಿತ್ರಕಾರನೂ ಆಗಿದ್ದನೆಂದು ಬರೆದಿದ್ದಾನೆ. ಅಜಂಟಾದ ಭಿತ್ತಿಚಿತ್ರಗಳನ್ನು ಸಿದ್ಧಪಡಿಸಿದ ಶೈಲಿಯೂ ಸ್ವಾರಸ್ಯವಾದುದು. ಗುಹೆಯ ಕಲ್ಲುಗೋಡೆಯ ಮೇಲೆ ಭತ್ತದ ಹೊಟ್ಟನ್ನೂ ಅಂಟನ್ನೂ ಕಲೆಸಿದ ಮಣ್ಣಿನಿಂದ ದಪ್ಪನೆಯ ಲೇಪನವನ್ನು ಮಾಡಿ, ಅದರ ಮೇಲೆ ಸುಣ್ಣದ ಪದರವನ್ನು ಹರಡಿ, ಅದು ಒಣಗುವ ಮುನ್ನವೇ ಬಣ್ಣಗಳನ್ನು ಮೂಡಿಸಿಬಿಡುತ್ತಿದ್ದರಂತೆ; ಅನಂತರ ಹೊರಮೈ ರೇಖೆಗಳನ್ನು ಸ್ಪಷ್ಟವಾಗಿ ಬರೆಯುತ್ತಿದ್ದರೆಂದೂ. ವಿವರಗಳನ್ನು ಗೆರೆಗಳಿಂದಲೂ ಚುಕ್ಕಿಗಳಿಂದಲೂ ರೂಪಿಸುತ್ತಿದ್ದರೆಂದೂ ಹೇಳುತ್ತಾರೆ. ಸಾವಿರಾರು ವರ್ಷಗಳಾದರೂ ಕಳೆಗುಂದದಿರುವ ಬಣ್ಣಗಳನ್ನು ಅವರು ಹೇಗೆ ಸಿದ್ಧಪಡಿಸಿದರೆಂಬುದು ಬಿಡಿಸಲಾರದ ಒಗಟು. ಅವರ ಚಿತ್ರ ನಿರ್ಮಾಣ ರೀತಿಯೂ ಬಹುಮಟ್ಟಿಗೆ ಸಮಸ್ಯೆಯಾಗಿಯೇ ಉಳಿದಿದೆಯೆಂದರೆ ಉತ್ಪ್ರೇಕ್ಷೆಯಲ್ಲ.

ಹೀಗೆ ಶಿಲ್ಪಗಳಿಂದಲೂ ಚಿತ್ರಗಳಿಂದಲೂ ಸರ್ವಾಂಗ ಸುಂದರವಾದ ಈ ಗುಹೆಗಳು ವಿರಕ್ತರಾದ ಬೌದ್ಧ ಭಿಕ್ಷುಗಳ ನಿವಾಸವಾಗಿದ್ದುವೆಂದರೆ ಆಶ್ಚರ್ಯವಾದೀತಲ್ಲವೆ? ಈ ಗುಹೆಗಳಲ್ಲಿ ಕೆಲವು ಚೈತ್ಯಗಳು, ಹಲವು ವಿಹಾರಗಳು. ಚೈತ್ಯವೆಂದರೆ ಪೂಜಾಗೃಹ; ಬುದ್ಧನ ಮೂರ್ತಿಗಳಿದ್ದು ಕಾಲ ಕಾಲಕ್ಕೆ ಆರಾಧನೆ, ಧ್ಯಾನ, ಉಪವಸಥ, ಪ್ರಾತಿಮೋಕ್ಷ, ಪ್ರವಚನ ಮುಂತಾದ ಪ್ರಯೋಜನಗಳಿಗಾಗಿ ಮೀಸಲಾಗಿದ್ದ ಸ್ಥಳ. 9, 10, 19 ಮತ್ತು 26ನೆಯ ಗುಹೆಗಳು ಚೈತ್ಯಗಳು. ಇವುಗಳಲ್ಲಿ 19ನೆಯದು ತುಂಬ ಪ್ರಾಚೀನವಾದುದು. ವಿಹಾರವೆಂದರೆ ಭಿಕ್ಷುಗಳು ವಾಸ ಮಾಡುತ್ತಿದ್ದ ಸ್ಥಳ. ಇವುಗಳಲ್ಲಿಯೂ ಸೊಗಸಾದ ಶಿಲ್ಪಗಳೂ ಭಿತ್ತಿಚಿತ್ರಗಳೂ ಇವೆ. ಮೊದಮೊದಲಿಗೆ ಹೀನಯಾನ ಪಂಥದವರೇ ಇಲ್ಲಿದ್ದ ಭಿಕ್ಷುಗಳು. ಈ ಪಂಥದ ಪ್ರಕ್ರಿಯೆಗಳನ್ನೇ ಅಧಿಕರಿಸಿ ಚಿತ್ರಗಳೂ ಸಿದ್ಧವಾದುವು. ಮುಂದೆ ಮಹಾಯಾನವು ಮೈದಳೆದು ಬಲಗೊಂಡಾಗ

ಇಲ್ಲಿನ ಕಲಾಕೃತಿಯೂ ಮಹಾಯಾನ ಪ್ರಧಾನವಾಯಿತು. ಚೈತ್ಯಗಳೂ ವಿಹಾರ ಗಳೂ ಈ ಪರಿವರ್ತನೆಯನ್ನು ವ್ಯಕ್ತಪಡಿಸುತ್ತವೆ.

ಅಜಂಟಾದ ಗುಹೆಗಳಲ್ಲೆಲ್ಲ ಹತ್ತನೆಯ ಗುಹೆಯೇ ತುಂಬ ಪುರಾತನ ವಾದುದು; ಕ್ರಿಸ್ತಪೂರ್ವ ಎರಡನೆಯ ಶತಮಾನದ ಮಧ್ಯಭಾಗದಲ್ಲಿ ಇದು ರೂಪುಗೊಂಡಿತೆಂದು ಹೇಳುತ್ತಾರೆ. ಇದೇ ಗುಹೆಗಳಲ್ಲೆಲ್ಲ ದೊಡ್ಡದು, ಅತಿ ಸುಂದರವಾದುದು. ಇಲ್ಲಿರುವ ನಿರ್ವಿಕಲ್ಪ ಬುದ್ಧ ವಿಗ್ರಹವು ಜಗದ್ವಿಖ್ಯಾತ ವಾಗಿದೆ. ಅಜಂಟಾದ ನಿರ್ಮಾಣ ನೈಪುಣ್ಯವನ್ನು ನೋಡಬೇಕೆಂದರೆ 1, 2, 9, 10, 12, 16, 17, 19 ಮತ್ತು 26ನೆಯ ಗುಹೆಗಳನ್ನು ನೋಡಬೇಕು. ಅಜಂಟಾದಲ್ಲಿ ಶಿಲ್ಪಕ್ಕಿಂತ ಚಿತ್ರಕ್ಕೆ ಹೆಚ್ಚು ಪ್ರಾಧಾನ್ಯ ಕೊಟ್ಟಿರುವುದು ಕಾಣು ತ್ತದೆ. ದುರ್ದೈವದಿಂದ ಚಿತ್ರಗಳು ಬಹುಮಟ್ಟಿಗೆ ನಾಶವಾಗಿವೆ. ಒಮ್ಮೆ ಇದ್ದ ನೂರಾರು ಚಿತ್ರಗಳಲ್ಲಿ ಇಂದಿಗೆ ಉಳಿದಿರುವುವು ಹದಿಮೂರೇ ಎನ್ನಬಹುದು. 1, 2. 9, 10, 16 ಮತ್ತು 18ನೆಯ ಗುಹೆಗಳಲ್ಲಿರುವ ಚಿತ್ರಗಳು ಪ್ರಖ್ಯಾತ ವಾಗಿವೆ.

ಒಂಬತ್ತನೆಯ ಮತ್ತು ಹತ್ತನೆಯ ಗುಹೆಗಳಲ್ಲಿ ಎಡಗಡೆ ಗೋಡೆಗಳ ಮೇಲೆ ಇರುವ ಚಿತ್ರಗಳು ತುಂಬ ಪುರಾತನವಾದುವು ಎಂದು ಹೇಳುತ್ತಾರೆ; ಕ್ರಿಸ್ತ ಪೂರ್ವ ಎರಡನೆಯ ಶತಮಾನದಲ್ಲಿಯೇ ಸಿದ್ಧವಾದುವಂತೆ ಇವು. ಇಲ್ಲಿ ಹೀನಯಾನ ಪದ್ಧತಿಯ ಗುಹೆಗಳನ್ನು ಚಿತ್ರಿಸಿದ್ದಾರೆ; ಷಡ್ದಂತ ಜಾತಕದ ಚಿತ್ರಣ ಸ್ವಾರಸ್ಯವಾದುದು. ರಾಜನೊಬ್ಬನು ತನ್ನ ಪರಿವಾರದೊಂದಿಗೆ ಬೋಧಿ ವೃಕ್ಷದ ಪೂಜೆ ಮಾಡುತ್ತಿರುವ ದೃಶ್ಯ ಇಲ್ಲಿದೆ; ಇಲ್ಲಿಯೇ ಹದಿನೈದು ಜನ ರಸಿಕರ ನಾಟ್ಯ ಮೇಳವೂ ಚಿತ್ರಣಕ್ಕೆ ಬಂದಿದೆ. ಇಹ, ಪರಗಳೆರಡನ್ನೂ ಕಲೆ ಗಾರ ಕಾಣಿಸಿದ್ದಾನೆ.

ಹೀಗೆ ಆರಂಭವಾದ ಚಿತ್ರಕಲಾ ಶೈಲಿಯು ಕಾಲವುರುಳಿದಂತೆ ಬೆಳೆದು ಆರನೆಯ ಶತಮಾನದ ಸುಮಾರಿಗೆ ಪ್ರೌಢವಾಯಿತು. ಆಗ ಮೈದಳೆದ ಪದ್ಮ ಪಾಣಿ ಅವಲೋಕಿತೇಶ್ವರನ ಚಿತ್ರವು ಪ್ರಪಂಚದ ಶ್ರೇಷ್ಠ ಕಲಾಕೃತಿಗಳಲ್ಲಿ ಒಂದೆಂದು ಪರಿಗಣಿತವಾಗಿದೆ. ಒಂದನೆಯ ಗುಹೆಯಲ್ಲಿರುವ ಈ ಮಹಾಯಾನ

ದೇವತೆಯು ಅತಿಪ್ರಮಾಣದ್ದು. ಮಂಡಿಯಿಂದ ಕೆಳಗೆ ಚಿತ್ರ ಅಳಿಸಿಹೋಗಿದೆ. ಮಂಡಿಯಿಂದ ಕಿರೀಟದವರೆಗೆ ಐದು ಅಡಿ ಒಂಬತ್ತೂವರೆ ಅಂಗುಲಗಳಾಗುತ್ತವೆ. ಭುಜದಿಂದ ಭುಜಕ್ಕೆ ಎರಡು ಅಡಿ ಐದೂವರೆ ಅಂಗುಲಗಳು. ಇಷ್ಟು ಅತಿಪ್ರಮಾಣದ್ದಾದರೂ ಶಾಂತವಾದ, ಮನೋಹರವಾದ, ಭವ್ಯವಾದ ಭಂಗಿ. ಬೋಧಿಸತ್ವನ ಮುಖದಲ್ಲಿ ದಿವ್ಯವಾದ ತೇಜಸ್ಸು ಕಾಣುತ್ತದೆ. ಭೂತ ದಯೆಯೇ ಮುಖ್ಯ ರಸವಾಗಿ ವ್ಯಕ್ತವಾಗುತ್ತದೆ. ನಿಲುವಿನಲ್ಲಿರುವ ಗಾಂಭೀರ್ಯವೂ, ರೂಪದಲ್ಲಿರುವ ಲಾವಣ್ಯವೂ ಬೋಧಿಸತ್ವನಾದವನ ಮಹಾ ಪ್ರಣಿಧಿಯ ಪ್ರತೀಕಗಳಾಗಿವೆ. ಬೋಧಿಸತ್ವನ ಸುತ್ತಮುತ್ತ ಜನರಿದ್ದಾರೆ, ಪ್ರಾಣಿಗಳಿವೆ, ಪಕ್ಷಿಗಳಿವೆ, ನಿಸರ್ಗವಿದೆ. ಎಲ್ಲವನ್ನೂ ಮೀರಿ ಬೋಧಿಸತ್ವನ ಮೂರ್ತಿ ನಿಲ್ಲುತ್ತದೆ. ಭಾರತೀಯ ಕಲೆಗಾರಿಕೆಯ ಅದ್ಭುತ ನಿದರ್ಶನ ಇದೆಂಬುದು ನಿರ್ವಿವಾದ.

ಬೋಧಿಸತ್ವನ ಎಡ ಪಕ್ಕದಲ್ಲಿರುವ ಶ್ಯಾಮಲೆಯ ಚಿತ್ರವೂ ಸೊಗಸಾದ ಕೃತಿ. ಬೋಧಿಸತ್ವನ ಶಕ್ತಿಸ್ವರೂಪಿಣಿಯೋ ಎನ್ನುವಂತೆ ಕಲೆಗಾರನು ಈಕೆಯನ್ನು ಬಿಡಿಸಿದ್ದಾನೆ. ಅಷ್ಟೇ ಶ್ರದ್ಧೆಯಿಂದ, ಅದೇ ವಿವರಗಳನ್ನು ಮೂಡಿಸಿದ್ದಾನೆ. ಆದರೆ ಪ್ರಮಾಣ ಸಣ್ಣದು; ಎದ್ದು ಕಾಣುವ ಲಕ್ಷಣವಿಲ್ಲ. ಬೋಧಿಸತ್ವನ ಬಲ ಪಕ್ಕದಲ್ಲಿ ಗಂಧರ್ವರು, ಕಿಂಪುರುಷರು, ಕಂಠಾಶ್ಲೇಷ ಪ್ರಣಯಿಗಳು ಮೈದಳೆದಿದ್ದಾರೆ. ಬೋಧಿಸತ್ವನ ವಿರಕ್ತಿ, ಶಾಂತಿ, ಕರುಣೆಗಳ ಪಕ್ಕದಲ್ಲಿಯೇ ಮಧುಪಾನಾಸಕ್ತರಾದ ಪ್ರಣಯಿಗಳ ಸುಖಸಂರಂಭಗಳನ್ನೂ ಕಾಣಬಹುದು.

ಎರಡನೆಯ ಗುಹೆಯಲ್ಲಿರುವ ಹಾರೀತಿ ದೇವತೆಯ ಶಿಲಾ ಮೂರ್ತಿಯು ಮನೋಜ್ಞವಾಗಿದೆ. ಗರ್ಭಗೃಹದಲ್ಲಿರುವ ಧರ್ಮಚಕ್ರಪ್ರವರ್ತನ ಮುದ್ರೆಯಲ್ಲಿ ಧೀರ ಗಂಭೀರನಾಗಿ ಕುಳಿತಿರುವ ಬುದ್ಧನ ಶಿಲ್ಪಕೃತಿಯು ಅದ್ಭುತವಾದುದು. ಗರ್ಭಾಂಕಣದ ಒಳಗೂ ಹೊರಗೂ ಗೋಡೆಗಳ ಮೇಲೆ ಅಸಂಖ್ಯಾತ ಬುದ್ಧರ ಚಿತ್ರಗಳನ್ನು ಬಿಡಿಸಿರುವುದು ಸ್ವಾರಸ್ಯವಾಗಿದೆ. ಕೋಟಿಕಲ್ಪಗಳಲ್ಲಿ ಬುದ್ಧರು ಮೈದಳೆದು ಸಂಸಾರದಿಂದ ಜೀವಿಗಳನ್ನು ಪಾರುಗಾಣಿಸುವರೆಂದು ಮಹಾಯಾನದವರ ಶ್ರದ್ಧೆ.

ಹದಿನಾರನೆಯ ಗುಹೆಯಲ್ಲಿ ಬುದ್ಧನ ಬಾಳುವೆಗೆ ಸಂಬಂಧಿಸಿದ ವಿವರಗಳನ್ನೂ ಚಿತ್ರಿಸಿದ್ದಾರೆ. ಸಿದ್ಧಾರ್ಥನ ಜನನ, ಅಸಿತ ಋಷಿ ಬಂದು ಜಾತಕವನ್ನು ಪರಿಶೀಲಿಸಿ ಭವಿಷ್ಯ ನುಡಿಯುವುದು, ವಿದ್ಯಾರ್ಥಿ ದೆಶೆ, ಗೌತಮನು ಮನೆಬಿಟ್ಟು ಹೊರಟು ಧ್ಯಾನಮಗ್ನನಾಗಿರುವುದು, ರಾಜಗೃಹಕ್ಕೆ ಬರುವುದು ಮೊದಲಾದುವನ್ನೆಲ್ಲ ಇಲ್ಲಿ ಕಾಣಬಹುದು. ಎರಡನೆಯ ಗುಹೆಯಲ್ಲಿಯೂ ಮಾಯಾದೇವಿಯ ಸ್ವಪ್ನ, ಲುಂಬಿಣೀವನ ಸಂದರ್ಶನ, ಸಿದ್ಧಾರ್ಥನ ಜನನ, ಸಪ್ತಪದಿ, ತುಷಿತ ಸ್ವರ್ಗದಲ್ಲಿ ಬುದ್ಧನ ಅವತರಣಕ್ಕಾಗಿ ದೇಶ ನಿರ್ಣಯ ಮಾಡುವುದು ಮುಂತಾದ ಪ್ರಸಂಗಗಳು ರೂಪಿತವಾಗಿವೆ. ಹದಿನಾರನೆಯ ಗುಹೆಯಲ್ಲಿಯೇ ರಾಜಪುತ್ರಿಯೊಬ್ಬಳು ಮರಣೋನ್ಮುಖಿಯಾಗಿರುವ ಚಿತ್ರ ಕರುಣಾಮಯವಾಗಿದೆ. ದುರಂತ ಸನ್ನಿವೇಶದ ದುರ್ಭರತೆಯನ್ನು ಕಲೆಗಾರನು ಹೃದ್ಯವಾಗಿ ಹಿಡಿದಿದ್ದಾನೆ.

ಹದಿನೇಳನೆಯ ಗುಹೆ ಬೌದ್ಧ ಜಾತಕಗಳ ದೃಷ್ಟಿಯಿಂದ ಸ್ವಾರಸ್ಯವಾದುದು. ಷಡ್ದಂತ ಜಾತಕ, ಮಹಾಕಪಿ ಜಾತಕ, ವಿಶ್ವಂತರ ಜಾತಕ, ಶಿಬಿ ಜಾತಕ, ಮಾತೃ ಪೋಷಕ ಜಾತಕ, ಶ್ಯಾಮ ಜಾತಕ, ಮತ್ಸ್ಯ ಜಾತಕ ಮೊದಲಾದ ಹತ್ತಾರು ಜಾತಕಕಥೆಗಳಿಂದ ವಿಶಿಷ್ಟವಾದ ವೃತ್ತಗಳನ್ನು ಆಯ್ದುಕೊಂಡು ಚಿತ್ರಗಳಲ್ಲಿ ಬಿಡಿಸಿದ್ದಾರೆ. ಸಿಂಹಳಾವದಾನದಿಂದಲೂ ಚಿತ್ರಗಳಿವೆ. ದ್ವಾರದ ಮೇಲ್ಭಾಗದಲ್ಲಿ ಏಳು ಮಂದಿ ಮಾನುಷೀಬುದ್ಧರ ಮತ್ತು ಮುಂಬರುವ ಬುದ್ಧನಾದ ಮೈತ್ರೇಯನ ಚಿತ್ರಗಳಿರುವುದು ಸೊಗಸಾಗಿದೆ. ಇಲ್ಲಿಯೇ ಒಂದು ಮಗ್ಗುಲಲ್ಲಿ ಅತಿಪ್ರಮಾಣದ ಬುದ್ಧನು ಭಿಕ್ಷೆ ಬೇಡುತ್ತಿರುವ ದೃಶ್ಯವಿದೆ; ಅವನಿಗೆ ಭಿಕ್ಷೆ ಹಾಕಲು ಒಬ್ಬ ಹೆಂಗಸು ತನ್ನ ಮಗನನ್ನು ಮುಂದೆ ಮಾಡಿಕೊಂಡು ನಿಂತಿದ್ದಾಳೆ. ಭಕ್ತಿ ಭಾವದಲ್ಲಿ ನಿಂತಿರುವ ಇವರನ್ನು ಯಶೋಧರಾ-ರಾಹುಳರೆಂದು ನಿರ್ದೇಶಿಸುತ್ತಾರೆ. ಸಂದರ್ಭವಂತೂ ಸರಳ ಸುಂದರವಾಗಿದೆ.

ಹತ್ತೊಂಬತ್ತನೆಯ ಗುಹೆಯು ಆರನೆಯ ಶತಮಾನದ ಕೃತಿಯೆಂದು ಹೇಳುತ್ತಾರೆ. ಇಲ್ಲಿ ಹೊರ ಅಂಗಣದಲ್ಲಿ ಕುಳಿತಿರುವ ಮೈತ್ರೇಯ ಬುದ್ಧನ ಶಿಲ್ಪವು ಮಹಾಯಾನದ ಬೋಧಸತ್ವ ಕಲ್ಪನೆಯ ಪರಿಪಾಕವೇ. ಇಲ್ಲಿಯೇ

ಶಿಲೆಯಲ್ಲಿ ಕಡೆದಿರುವ ನಾಗರಾಜ, ರಾಣಿಯರ ಚಿತ್ರಗಳೂ ಭವ್ಯವಾಗಿವೆ.

ಅಂತೂ ಅಜಂಟಾ ಗುಹಾಂತರ್ದೇವಾಲಯಗಳ ವಾಸ್ತುಶಿಲ್ಪವೂ ಚಿತ್ರ ನಿರ್ಮಾಣ ವೈಶಿಷ್ಟ್ಯವೂ ಶ್ರೇಷ್ಠಮನೋಧರ್ಮವನ್ನು ಕಾಣಿಸುತ್ತವೆ. ಮಹಾಯಾನದ ಉದಾತ್ತ ಧ್ಯೇಯಗಳನ್ನೊಳಗೊಂಡ ಈ ಚೈತ್ರಗಳೂ ವಿಹಾರಗಳೂ ಆಲೋಚನಾಮೃತವಾದರೆ ಅಲ್ಲಿನ ಚಿತ್ರಗಳೂ ಶಿಲ್ಪಗಳೂ ಆಲೋಕನಾಮೃತ.

ಎಲ್ಲೋರದ ಗುಹಾಂತರ್ದೇವಾಲಯಗಳು

ಮುಂಬಯಿಗೆ 270 ಮೈಲಿ ದೂರದಲ್ಲಿ, ಔರಂಗಾಬಾದಿಗೆ 18 ಮೈಲಿ ದೂರದಲ್ಲಿರುವ ಎಲ್ಲೋರ (ಎಲೂರಾ, ವೆರೂಳ) ಶಿಲ್ಪಕಲೆಗೆ, ವಾಸ್ತುಶಿಲ್ಪಕ್ಕೆ ಹೆಸರಾದ ಕ್ಷೇತ್ರ. ಇಲ್ಲಿನ ಗುಹಾಂತರ್ದೇವಾಲಯಗಳು ಅಜಂಟಾ ದೇಗುಲಗಳಂತೆಯೇ ವಿಶ್ವವಿಖ್ಯಾತವಾಗಿವೆ. ಅಜಂಟಾದ ಕಲೆ ಕೇವಲ ಬೌದ್ಧ ಧರ್ಮಕ್ಕೆ ಸಂಬಂಧಿಸಿದುದಾದರೆ, ಎಲ್ಲೋರದಲ್ಲಿ ಬೌದ್ಧ, ಜೈನ, ಬ್ರಾಹ್ಮಣ ಕಲೆಗಳು ಮೂರೂ ಕಾಣಸಿಗುತ್ತವೆ.

ಈಗ ಎಲ್ಲೋರ ಸಣ್ಣದೊಂದು ಹಳ್ಳಿ. ನೆರೆಹೊರೆಯ ಔರಂಗಾಬಾದ್, ದೌಲತಾಬಾದ್‌ಗಳಲ್ಲಿಯೂ ಸ್ವಾರಸ್ಯವಾದ ಸ್ಮಾರಕಗಳಿವೆ. ಒಂದು ಕಾಲಕ್ಕೆ ದೌಲತಾಬಾದ್ ದಿಲ್ಲಿಯ ವೈಭವವನ್ನು ಮೀರಿಸುತ್ತಿದ್ದಿತಂತೆ. ಎಲ್ಲೋರ ಹಳ್ಳಿಯಲ್ಲಿ ಅಜಂಟಾದಲ್ಲಿದ್ದಂತೆಯೇ ಅರ್ಧ ವೃತ್ತಾಕಾರದಲ್ಲಿ ಬೆಟ್ಟಸಾಲಿದ್ದು ಅದನ್ನು ಗುಹಾದೇಗುಲಗಳಾಗಿ ಕಡೆದಿದ್ದಾರೆ. ಪಶ್ಚಿಮಾಭಿಮುಖವಾಗಿರುವ ಈ ಬೆಟ್ಟಸಾಲಿನ ಶಿಲ್ಪ ಸಂಜೆಯ ಸೂರ್ಯನ ಬೆಳಕಿನಲ್ಲಿ ಬೆಳಗುತ್ತದೆ. ಈ ಬೆಟ್ಟಗಳ ಎತ್ತರ ಸುಮಾರು 500 ಅಡಿಗಳು; ಸುತ್ತಲೂ ಬಯಲಿರುವುದರಿಂದ ಬೆಟ್ಟಸಾಲು ಎದ್ದು ಕಾಣುತ್ತದೆ.

ಇಲ್ಲಿರುವ ಗುಹಾದೇಗುಲಗಳೂ, ಚೈತ್ಯಗಳೂ, ವಿಹಾರಗಳೂ ಒಟ್ಟು 34 ಆಗುತ್ತವೆ. ಇವುಗಳಲ್ಲಿ ದಕ್ಷಿಣದ ಕೊನೆಯಿಂದ ಆರಂಭಿಸಿ ಹನ್ನೆರಡು ಬೌದ್ಧ ಧರ್ಮಕ್ಕೆ ಸಂಬಂಧಿಸಿದುವು. ಮುಂದಿನ ಹದಿನಾರು ಬ್ರಾಹ್ಮಣ ಧರ್ಮದವು; ಅದರಾಚೆ ಮೂವತ್ತರಿಂದ ಮೂವತ್ತನಾಲ್ಕರವರೆಗೆ ಜೈನ ಧರ್ಮಕ್ಕೆ ಸೇರಿ

ದುವು. ಇವುಗಳಲ್ಲೆಲ್ಲ ಬೌದ್ಧ ಧರ್ಮದವೇ ತುಂಬ ಹಳೆಯವು; ಇವುಗಳನ್ನು ಕ್ರಿಸ್ತಾಬ್ದ 500 ರಿಂದ 700ರ ಮಧ್ಯಭಾಗದಲ್ಲಿ ಕಡೆಯಲಾಯಿತೆಂದು ತಿಳಿದು ಬಂದಿದೆ.

ಬೌದ್ಧ ದೇಗುಲಗಳು

ಬೌದ್ಧ ದೇಗುಲಗಳು ಮಹಾಯಾನ ಸಂಪ್ರದಾಯಕ್ಕೆ ಸೇರಿದುವು. ಬುದ್ಧನನ್ನು ಮಾನುಷೀಮೂರ್ತಿಯಾಗಿ ಕಲ್ಪಿಸಿಕೊಂಡು ದೈವತ್ವದ ಲಾಂಛನಗಳನ್ನು ಅಳವಡಿಸಿದ್ದಾರೆ. ದ್ವಾರಪಾಲಕ ಮೂರ್ತಿಗಳ ಶಿರೋಭಾಗದಲ್ಲಿ ಅಮಿತಾಭ-ಬುದ್ಧನ ಪ್ರತೀಕವಿರುವುದು ಗಮನಾರ್ಹ. ಬೋಧಿಸತ್ವ ಅವಲೋಕಿತೇಶ್ವರ (ಪದ್ಮಪಾಣಿ), ಮುಂಬರುವ ಬುದ್ಧನಾದ ಮೈತ್ರೇಯ, ಧ್ಯಾನಮಗ್ನ ಬುದ್ಧ ಮೊದಲಾದ ವಿಗ್ರಹಗಳು ಸುಂದರವಾಗಿ ಮೂಡಿ ಬಂದಿವೆ.

ಮೊದಲ ಒಂಭತ್ತು ದೇಗುಲಗಳೇ ತುಂಬ ಪ್ರಾಚೀನವಾದುವೆಂದು ಹೇಳುತ್ತಾರೆ. ಇವುಗಳನ್ನು 'ಧೇರ್ವಾರ' ಎಂದು ಕರೆಯುವ ವಾಡಿಕೆಯಿದೆ. ಮೊದಲನೆಯದೂ ಐದನೆಯದೂ ವಿಹಾರಗಳು. ಎರಡನೆಯ, ಮೂರನೆಯ, ಹತ್ತನೆಯ ದೇಗುಲಗಳು ಚೈತ್ಯಗಳು. ಐದನೆಯದು ತುಂಬ ದೊಡ್ಡ ವಿಹಾರ. ಅದರ ಉದ್ದ 117 ಅಡಿ, ಅಗಲ 56 ಅಡಿ; ಇಪ್ಪತ್ತನಾಲ್ಕು ಕಂಬಗಳಿವೆ.

ಹತ್ತನೆಯ ಗುಹಾದೇಗುಲ ಸ್ವಾರಸ್ಯವಾದುದು. ಚೈತ್ಯ ಭವನವೆಂದು ನಿರ್ಮಿತವಾದ ಇದನ್ನು 'ವಿಶ್ವಕರ್ಮಗುಹೆ' ಎಂದು ವ್ಯವಹರಿಸುತ್ತಾರೆ. ಅದರ ಒಳ ಅಂಕಣ 86 ಅಡಿ ಉದ್ದ,43 ಅಡಿ ಅಗಲವಿದ್ದು, 28 ಕಂಬಗಳು ಮೇಲ್ಭಾಗವನ್ನು ಹೊತ್ತು ನಿಂತಿವೆ. ದ್ವಾರ ಪ್ರದೇಶದಲ್ಲಿ ಸೊಗಸಾದ ಅಟ್ಟವನ್ನೂ ಅಳವಡಿಸಿ, ಏರಿ ಹೋಗಲು ಮೆಟ್ಟಲುಗಳನ್ನು ಕಡೆದಿದ್ದಾರೆ. ಈ ಗುಹಾದೇಗುಲದ ಒಳಗೆ 15½ ಅಡಿ ವ್ಯಾಸವಿರುವ 27 ಅಡಿ ಎತ್ತರವಿರುವ ಸ್ತೂಪವೊಂದಿದೆ. ಅದರ ಮುಂಭಾಗದಲ್ಲಿ ವ್ಯಾಖ್ಯಾನ ಮುದ್ರೆಯ ಬುದ್ಧನ ವಿಗ್ರಹವನ್ನು ಕಡೆದಿದ್ದಾರೆ. ಹನ್ನೊಂದಡಿ ಎತ್ತರವಿರುವ ಈ ಬುದ್ಧನಿಗೆ ಮೀಸೆಗಳು ಇರುವುದು ಸ್ವಾರಸ್ಯವಾಗಿದೆ. ಈ ಬುದ್ಧನನ್ನೇ 'ವಿಶ್ವಕರ್ಮ' ಎಂದು ವ್ಯವಹರಿಸುತ್ತಾರೆ.

ಪದ್ಮಪಾಣಿ ಮತ್ತು ಮೈತ್ರೇಯ ಈ ಬುದ್ಧನ ಪರಿವಾರದಲ್ಲಿ ಸೇರಿದ್ದಾರೆ.

ಕೈಲಾಸ ದೇಗುಲ

ಕ್ರಿಸ್ತಾಬ್ದ 753ರ ಸುಮಾರಿಗೆ ರಾಷ್ಟ್ರಕೂಟರು ಪ್ರಬಲರಾಗಿ ಮಳಖೇಡದಲ್ಲಿ ಆಳತೊಡಗಿದರು. ಇವರ ಪ್ರಭಾವದಿಂದ ಬೌದ್ಧ ಧರ್ಮದ ಪ್ರಚಾರ ಕುಗ್ಗಿ ಬ್ರಾಹ್ಮಣ ಧರ್ಮ ಮತ್ತೆ ತಲೆಯೆತ್ತಿತು. ಇದನ್ನು ಎಲ್ಲೋರದಲ್ಲಿ ಕಾಣುತ್ತೇವೆ. ಈ ವಂಶಕ್ಕೆ ಸೇರಿದ ಇಮ್ಮಡಿ ಕೃಷ್ಣನು (757-783) ಕಡೆಯಿಸಿದ. ಕೈಲಾಸನಾಥ ದೇಗುಲ ಈ ಪರಿವರ್ತನೆಯಲ್ಲಿ ಸ್ಪಷ್ಟ, ದಿಟ್ಟ ಹೆಜ್ಜೆ. ಇದು ಹದಿನಾರನೆಯ ದೇಗುಲವೆಂದು ನಿರ್ದಿಷ್ಟವಾಗಿದೆ. ಇದು ನಿಜವಾಗಿಯೂ ಅದ್ಭುತವಾದ ಕಲಾಕೃತಿ. ಇಳಿಜಾರಿನ ಬಂಡೆಯಲ್ಲಿ 107 ಅಡಿ ಆಳ, 276 ಅಡಿ ಉದ್ದ ಮತ್ತು 154 ಅಡಿ ಅಗಲದ ಆವರಣವನ್ನು ಸಿದ್ಧಗೊಳಿಸಿಕೊಂಡು ಅದನ್ನೇ ಏಕಾಂಡ ದೇಗುಲವನ್ನಾಗಿ ಕಡೆದಿರುವ ಸಾಹಸ. ಮುಖ್ಯ ಗುಡಿಯೇ 150 ಅಡಿ ಉದ್ದ, 100 ಅಡಿ ಅಗಲವಿದೆ.

ಈ ದೇಗುಲದ ವಾಸ್ತುಶಿಲ್ಪ ದ್ರಾವಿಡ ಶೈಲಿಯನ್ನೇ ಅನುಸರಿಸಿದೆ; ತಳವಿನ್ಯಾಸವಂತೂ ಪಲ್ಲವ ರೀತಿಯದೇ. ಇಲ್ಲಿ ಶಿವ ಪಾರ್ವತಿಯರ ಲೀಲಾ ಮೂರ್ತಿಗಳು ತುಂಬ ಸೊಗಸಾದ ಸಾಲು ಶಿಲ್ಪ (gallery) ಗಳಾಗಿ ಕಾಣಿಸುತ್ತವೆ. ಸಮೀಪದಲ್ಲೇ ರಾವಣನು ಕೈಲಾಸವನ್ನು ಎತ್ತುತ್ತಿರುವ ದೃಶ್ಯವನ್ನು ಸುಂದರವಾಗಿ, ಮನೋಜ್ಞವಾಗಿ ಕಡೆದಿದ್ದಾರೆ. ಪಾರ್ವತಿ ಹೆದರಿ ಶಿವನನ್ನು ಅವಲಂಬಿಸಿರುವುದು, ಗಣಗಳು ಶ್ರದ್ಧೆಯ ಸ್ಥೈರ್ಯದಿಂದ ನಿಶ್ಚಲರಾಗಿ ಕುಳಿತಿರುವುದು, ಶಿವನು ಪ್ರಯಾಸವಿಲ್ಲದೆ ಕಾಲನ್ನು ಊರಿರುವುದು, ಭಾರದಿಂದ ರಾವಣ ಬಳಲುತ್ತಿರುವುದು ಕಥಾಚಿತ್ರಣ ಉಜ್ವಲವಾಗಿದೆ.

ಮುಂಭಾಗದಲ್ಲಿ 20 ಅಡಿ ಚಚ್ಚೌಕದ ನಂದಿಮಂಟಪವಿದೆ; ಅದರ ಇಕ್ಕೆಲಗಳಲ್ಲಿಯೂ ಸುಮಾರು 51 ಅಡಿ ಎತ್ತರವಿರುವ ಧ್ವಜಸ್ತಂಭಗಳಿವೆ. ಈ ಸ್ತಂಭಗಳ ಮೇಲೆ ಅಪೂರ್ವ ವಿನ್ಯಾಸದ ಉತ್ತಮ ಶಿಲ್ಪಕೃತಿಗಳಿವೆ. ಒಟ್ಟು ಈ ಕೈಲಾಸ ದೇಗುಲದ ಪ್ರಮಾಣ ಬೃಹತ್ತಾದರೂ ಸೌಂದರ್ಯದಲ್ಲಿಯೂ, ನಯವಾದ ಕೆಲಸದಲ್ಲಿಯೂ ಅದ್ವಿತೀಯವಾಗಿರುವುದು ಸ್ವಾರಸ್ಯವಾದ ವಿವರ. ಎಲ್ಲ ದೃಷ್ಟಿಗಳಿಂದಲೂ ಪರಿಪೂರ್ಣವಾದ, ಭವ್ಯವಾದ ದೇಗುಲ ಇದು. 107 ಅಡಿ

ಎತ್ತರದ ಬೋರು ಬಂಡೆಯಲ್ಲಿ ಆ ಶಿಲ್ಪಿಗಳು ಎಂಥ ಸೊಗಸಾದ ಕಲ್ಪನೆಯನ್ನು ಸೃಷ್ಟಿಸಿದ್ದಾರೆ ! ಚಾಳುಕ್ಯ-ರಾಷ್ಟ್ರಕೂಟರ ಸಾಹಸ ಇಲ್ಲಿ ಪ್ರತಿಬಿಂಬಿತವಾಗಿದೆ.

ಇತರ ಗುಹೆಗಳು

ಹಾಗೆಯೇ 29ನೆಯ ದೇಗುಲವೂ (ಧುಮರ್ ಲೇಣಾ) ಅದ್ಭುತ ಸುಂದರವಾದುದು; ಮೂರು ಬೇರೆ ಬೇರೆ ದ್ವಾರಗಳಿರುವ ಈ ಗುಹೆಯಲ್ಲಿ ಎಲ್ಲ ಮೂರ್ತಿಗಳೂ ಬೃಹದಾಕಾರದವೇ. ದ್ವಾರ ಪ್ರದೇಶದ ಹಜಾರದಲ್ಲಿ ಅಷ್ಟ ಭುಜಗಳ ಭೀಮಾಕಾರದ ಶಿವನಿದ್ದಾನೆ; ಹತ್ತಿರವೇ ಪ್ರಳಯಕಾಲದ ತಾಂಡವದಲ್ಲಿ ಮೈಮರೆತ ಇನ್ನೊಂದು ಶಿವಶಿಲ್ಪವಿದೆ. ಈ ಅದ್ಭುತ ರಸಕ್ಕೆ ಸರಿದೂಗಲು ಯಮುನೆಯ ಶಾಂತ ಗಂಭೀರ ವಿಗ್ರಹವೂ ಹೊರಭಾಗದಲ್ಲಿದೆ. ಇದೇ ಗುಹೆಯಲ್ಲಿರುವ ಶಿಲ್ಪಗಳಲ್ಲಿ ಪಾರ್ವತಿ ಪರಿಣಯವೊಂದು ವಿಶಿಷ್ಟವಾದುದು. ಪಾರ್ವತಿಯ ಮುಂದೆ ಶಿವನು ತಾಂಡವವಾಡುತ್ತಿರುವ ಶಿಲ್ಪವೂ ಒಂದಿದೆ. ಈ ಗುಹೆಯನ್ನು ನೋಡಿದರೆ ಎಲಿಫೆಂಟಾ ಗುಹೆಯ ನೆನಪಾಗುತ್ತದೆ; ಎರಡಕ್ಕೂ ಹೋಲಿಕೆ ಬಹಳ ಇದೆ.

ಹದಿನೈದನೆಯ 'ದಶಾವತಾರ ಗುಹೆ'ಯಲ್ಲಿ ಶೈವ-ವೈಷ್ಣವ ಎರಡೂ ಸಂಪ್ರದಾಯದ ಶಿಲ್ಪಗಳನ್ನು ಕಾಣಬಹುದು. ಆದರೆ ಇಲ್ಲಿರುವ ನರಸಿಂಹನನ್ನು ಒಮ್ಮೆ ನೋಡಿದವರು ಯಾರೂ ಮರೆಯುವ ಹಾಗಿಲ್ಲ. ಈ ಗುಹೆಯ ಗರ್ಭ ಪ್ರಾಂತ್ಯದಲ್ಲಿ ಶಿವಲಿಂಗವೂ, ವಿಶಾಲವಾದ ಮುಖಮಂಟಪದಲ್ಲಿ ನಂದಿಯೂ ಇವೆ. ಎರಡು ನೆಲೆಗಳ ಈ ಗುಹೆಯಲ್ಲಿ ಮೇಲಿನ ನೆಲೆಯಲ್ಲಿ ಹಲವಾರು ಸುಂದರ ಶಿಲ್ಪಗಳಿವೆ. ಶಿವನೂ ಪಾರ್ವತಿಯೂ ಪಗಡೆಯಾಡುತ್ತಿರುವುದು, ಲಿಂಗೋದ್ಭವ ಮೂರ್ತಿ, ತ್ರಿಪುರ ಸಂಹಾರ ಮೂರ್ತಿ, ಪ್ರಳಯ ತಾಂಡವ ಇವೆಲ್ಲ ನಿದರ್ಶನಗಳು.

ಹದಿನಾಲ್ಕನೆಯ ಗುಹೆಯಲ್ಲಿ ದುರ್ಗೆ ಪ್ರಧಾನ ದೇವತೆ. ಇಲ್ಲಿಂದಲೇ ಬ್ರಾಹ್ಮಣ ಧರ್ಮದ ಗುಹೆಗಳು ಆರಂಭವಾಗುತ್ತವೆ. ಇಲ್ಲಿ ವಿಷ್ಣು-ಲಕ್ಷ್ಮಿಯರ, ಶಿವ-ಪಾರ್ವತಿಯರ ಶಿಲ್ಪ ಚಿತ್ರಣಗಳು ಒದಗಿವೆ. ಅಜಂಟಾ ಕಂಬಗಳಂತೆ

ಇಲ್ಲಿನ ಕಂಬಗಳೂ ಸೊಗಸಾದ ಕೆತ್ತನೆ ಕೆಲಸದಿಂದ ಕಂಗೊಳಿಸುತ್ತವೆ. ಈ ಗುಹೆಯನ್ನು ರಾವಣನ ಹೆಸರಿನಿಂದ ಕರೆಯುವುದು ವಾಡಿಕೆ. ಇಲ್ಲಿ ರಾವಣನು ಗರ್ವದಿಂದ ಕೈಲಾಸ ಪರ್ವತವನ್ನು ಎತ್ತಿ ಒಗೆಯುವ ಸನ್ನಾಹದಲ್ಲಿರುವ ಶಿಲ್ಪವಿರುವುದು ಇದಕ್ಕೆ ಕಾರಣ.

ಜೈನ ಗುಹೆಗಳು

ಜೈನ ಸಂಪ್ರದಾಯಕ್ಕೆ ಸೇರಿದ ಐದು ಗುಹೆಗಳು (30–34), ಕ್ರಿಸ್ತಾಬ್ದ ಒಂಬತ್ತರಿಂದ ಹದಿಮೂರನೆಯ ಶತಮಾನದ ಮಧ್ಯಭಾಗದಲ್ಲಿ ಸಿದ್ಧವಾದುವು. ಇವುಗಳಲ್ಲಿ 32 ನೆಯ 'ಇಂದ್ರಸಭೆ' ಮುಖ್ಯವಾದುದು. ದ್ವಾರ ಭಾಗದಲ್ಲಿ ಶಿಲಾಮಯವಾದ ಆನೆಯ ಮೂರ್ತಿಯೊಂದು, 30 ಅಡಿ ಎತ್ತರವಾದ ಕಂಬವೊಂದು ಕಾಣಿಸುತ್ತವೆ. ಕಡೆಯ ತೀರ್ಥಂಕರನಾದ ವರ್ಧಮಾನ ಮಹಾವೀರನ ಮೂರ್ತಿ ಗರ್ಭಗುಡಿಯಲ್ಲಿದೆ. ಎಡಭಾಗದಲ್ಲಿ ಪಾರ್ಶ್ವನಾಥ ತೀರ್ಥಂಕರನ ಮೂರ್ತಿಯೂ ಇದೆ. 'ಇಂದ್ರ ಸಭಾ' ಗುಹೆಯಲ್ಲಿ ಕಾಣಬರುವ ಶಿಲ್ಪ ಕೆಲಸ ತುಂಬ ನಾಜೂಕಾದುದು, ದಂತ ಕೆತ್ತನೆಯಂತೆ ಸೂಕ್ಷ್ಮವಾದುದು. ಈ ಗುಹೆಯ ಹೆಸರಿಗೆ ಕಾರಣವಾಗಿ ದೇವರಾಜನಾದ ಇಂದ್ರ ಮತ್ತು ಅವನ ಒಡತಿ ಇಂದ್ರಾಣಿಯರ ವಿಗ್ರಹಗಳಿವೆ.

ಹಾಗೆಯೇ 'ಜಗನ್ನಾಥ ಸಭೆ'ಯೆನಿಸಿಕೊಳ್ಳುವ ಜೈನ ಗುಹೆಯೂ ನವುರಾದ ಶಿಲ್ಪಕ್ಕೆ ಪ್ರಸಿದ್ಧವಾದುದು. ಬೆಟ್ಟದ ಮೇಲೆ ಸಂಖ್ಯೆಯಿಂದ ನಿರ್ದೇಶಿಸಲ್ಪಡದ ಜೈನ ಗುಹೆಯೊಂದಿದೆ. ಇದರಲ್ಲಿ ವರ್ಣ ಚಿತ್ರಗಳನ್ನು ಮಹಾ ಭಿತ್ತಿಗಳ ಮೇಲೆ ಬಿಡಿಸಿದ್ದಾರೆ. ಅವುಗಳ ಬಣ್ಣ ಇಂದಿಗೂ ಮಾಸದೆ ಉಳಿದಿರುವುದು ಸೋಜಿಗ.

ಅಂತೂ ಎಲ್ಲೋರದ ಶಿಲ್ಪ–ವಾಸ್ತು ಎರಡೂ ಅದ್ಭುತಕ್ಕೆ ಅದ್ಭುತ, ಸುಂದರಕ್ಕೆ ಸುಂದರ. ಒಟ್ಟು ಎರಡು ಮೈಲಿಗಳಷ್ಟು ವಿಸ್ತಾರವಾಗುವ ಈ ದೇಗುಲಗಳ ಸಾಲು ಭಾರತೀಯ ಕಲೆಯಲ್ಲಿ ಒಂದು ಸುವರ್ಣ ಸಂಧಿ; ಧರ್ಮಗಳ ಸಹಜೀವನ ಆ ಕಾಲಕ್ಕೇ ಸಿದ್ಧವಾಗಿತ್ತೆನ್ನಲು ನಿದರ್ಶನ.

ಅನಂತರ ಶೈವರಾದರು. ಆದರೆ ಎಲ್ಲ ಧರ್ಮಗಳನ್ನೂ ಪುರಸ್ಕರಿಸುವ ಔದಾರ್ಯ ಅವರಿಗಿದ್ದಿತು. ಹೀಗಾಗಿ ಇಲ್ಲಿ ಶೈವ, ವೈಷ್ಣವ, ಜೈನ ಬೌದ್ಧ ಮಂದಿರಗಳೆಲ್ಲ ಇವೆ. ಈ ಅರಸರು ಕನೋಜಿನ ಗುರ್ಜರ ಪ್ರತೀಹಾರ ರಾಜರಿಗೆ ಸಾಮಂತ ರಾಗಿದ್ದವರು. ಹತ್ತನೇ ಶತಮಾನದ ಮೊದಲಲ್ಲಿ ಸ್ವತಂತ್ರರಾದರು; ಹರ್ಷ ಚಾಂದೇಲ, ಅವನ ಮಗ ಯಶೋವರ್ಮ. ಲಕ್ಷವರ್ಮ, ಅವನ ಮಗ ಧಂಗ (950-1002), ಅವನ ನಂತರ ಗಂಡ. ವಿದ್ಯಾಧರ ಮೊದಲಾದವರು ಈ ವಂಶದಲ್ಲಿ ಪ್ರಖ್ಯಾತ ಅರಸರು. 1182ರಲ್ಲಿ ಪೃಥ್ವೀರಾಜ ಚೌಹಾಣನು ಈ ವಂಶದ ಅರಸರನ್ನು ಸದೆಬಡೆದನು. 1202ರಲ್ಲಿ ಕುತ್ಬ್-ಉದ್-ದೀನನು ಈ ಸ್ಥಳಕ್ಕೆ ದಂಡೆತ್ತಿಬಂದು ಊರನ್ನು ಕೊಳ್ಳೆ ಹೊಡೆದನು. ಅಂದಿನಿಂದ ಖಜೂರಹೋ ಈಗಿರುವಂತೆಯೇ ಇದೆ. ಈಗ ಅಲ್ಲಿನ ಜನಸಂಖ್ಯೆ 2,000 ಅಷ್ಟೆ; ಹಳ್ಳಿಯ ವಿಸ್ತಾರ 3 ಚದರ ಮೈಲಿ.

ದೇಗುಲಗಳು

ಇಲ್ಲಿನ ದೇಗುಲಗಳನ್ನು ಮೂರು ಪಂಗಡಗಳಾಗಿ ವಿಂಗಡಿಸುವ ವಾಡಿಕೆ ಯಿದೆ. ಬಮಿತ-ರಾಜನಗರ ರಸ್ತೆಯ ಪಶ್ಚಿಮಕ್ಕೆ ಇರುವ ದೇಗುಲಗಳೇ ತುಂಬ ಪ್ರಸಿದ್ಧವಾದವು. ಕಂಡಾರಿಯ ಮಹಾದೇವ, ದೇವಿ ಜಗದಂಬ, ಚಿತ್ರಗುಪ್ತ, ಲಕ್ಷ್ಮಣ (ಚತುರ್ಭುಜ), ಮತಂಗೇಶ್ವರ, ವರಾಹ ಮೊದಲಾದ ದೇವಾಲಯ ಗಳೆಲ್ಲ ಈ ಗುಂಪಿಗೆ ಸೇರಿದುವೇ. ಖಜೂರಹೋ ಹಳ್ಳಿಗೆ ಸೇರಿದಂತೆಯೇ ಇರುವ ಬ್ರಹ್ಮ ವಾಮನ, ಜಾವೇರಿ ದೇವಾಲಯಗಳೂ ಆದಿನಾಥ, ಪಾರ್ಶ್ವನಾಥ, ಗಂಟಾಯಿ ಜೈನಮಂದಿರಗಳೂ ಪೂರ್ವಪಂಗಡಕ್ಕೆ ಸೇರಿದುವೆಂದು ವ್ಯವಹರಿಸು ತ್ತಾರೆ. ಹಳ್ಳಿಯಿಂದ ಮೂರು ಮೈಲು ದೂರ ದುಲದೇವ, ಚತುರ್ಭುಜ ದೇವಾಲಯಗಳು ದಕ್ಷಿಣ ಪಂಗಡದವು.

ಮಧ್ಯಕಾಲದ ವಾಸ್ತು, ಶಿಲ್ಪ ಎರಡಕ್ಕೂ ಈ ದೇಗುಲಗಳು ಅತ್ಯುತ್ತಮ ನಿದರ್ಶನಗಳು. ಬಹುಮಟ್ಟಿಗೆ ಬೂದು ಬಣ್ಣದ ಮರಳುಗಲ್ಲಿನಿಂದ ಮಾಡಿದ ಈ ದೇವಾಲಯಗಳ ಶೈಲಿಯೂ ಈ ಪ್ರಾಂತ್ಯಕ್ಕೆ ವಿಶಿಷ್ಟವಾದುವೇ. ಈ ದೇವಾ-ಲಯಗಳಿಗೆ ಪ್ರಾಕಾರವಿಲ್ಲ, ಎತ್ತರವಾದ ಜಗತಿಯ ಮೇಲೆ ದೇವಾಲಯವನ್ನು ಕಟ್ಟುವ ವಾಡಿಕೆ ಇಲ್ಲಿ ಕಾಣುತ್ತದೆ. ದೇವರಿರುವ ಗರ್ಭಗೃಹದ ಹೊರಗೆ

ಅಂತರಾಳ. ಅದರಾಚೆ ಮಂಡಪ; ಅದರ ಹೊರಗೆ ಅರ್ಧಮಂಟಪ ಇವು ಈ ದೇವಾಲಯಗಳ ಸಾಮಾನ್ಯ ಮತ್ತು ಮುಖ್ಯ ವಿವರಗಳು. ಕೆಲವಕ್ಕೆ ಮಹಾಮಂಡಪ ಮತ್ತು ಪ್ರದಕ್ಷಿಣಾಪಥಗಳಿರುವುದೂ ಉಂಟು. ಬೆಟ್ಟದ ಶಿಖರವಿರುವಂತೆ ಈ ದೇವಾಲಯಗಳ ಗೋಪುರವಿನ್ಯಾಸವಿರುವುದು ಗಮನಾರ್ಹವಾಗಿದೆ.

ಗರ್ಭಗುಡಿಯ ಮೇಲಿರುವ ಶಿಖರವೇ ಉತ್ತುಂಗವಾಗಿದ್ದು ಅರ್ಧ ಮಂಡಪ ಮತ್ತು ಅಂತರಾಳದ ಮೇಲೆ ವರಸೆಯಾಗಿ ಶಿಖರಗಳಿದ್ದು ಇಡೀ ದೇಗುಲದ ಮೇಲ್ಮೈ ತುಂಬ ಸೊಗಸಾಗಿ ಎದ್ದು ಕಾಣುತ್ತದೆ. ಸಂಜೆಯ ವೇಳೆ ದೂರದಿಂದ ನೋಡಿದಾಗ ಈ ದೇಗುಲಗಳ ಆಕಾರ ತುಂಬ ಸೊಗಯಿಸುತ್ತದೆ. ನೆಲದಿಂದ ಮೇಲೆದ್ದ ವೇದಿ. ಅದರ ಮೇಲೆ ಮೈಚಾಚಿ ನಿಂತ ದೇಗುಲ, ಆಕಾಶದ ಕಡೆ ಹರಡಿ ನಿಂತ ದೇಗುಲ. ಭವ್ಯವಾದುದು. ದೇವಾಲಯದ ಎಲ್ಲ ವಿವರಗಳೂ ಊರ್ಧ್ವ ಗಾಮಿಗಳೇ ಆಗಿರುವಂತೆ ತೋರುತ್ತದೆ.

ಮಿಥುನ ಶಿಲ್ಪ

ದೇವಾಲಯದ ಗೋಡೆಗಳ ಮೇಲೆ ಮೂಡಿಬಂದಿರುವ ಶಿಲ್ಪ ಸಂಪತ್ತು ಅಸಾಧಾರಣವಾದುದು. ಹಿಂದೂಧರ್ಮದ ದೇವ-ದೇವತೆಗಳು, ಅಪ್ಸರೆಯರು, ಸುರಸುಂದರಿಯರು, ನಾಗ-ಶಾರ್ದೂಲಗಳು ಸಾಲುಗಟ್ಟಿ ನಿಂತಿರುವಂತೆ ಕಡೆ ದಿರುತ್ತಾರೆ. ಈ ಶಿಲ್ಪಗಳಲ್ಲಿ ಜೀವಕಳೆ ತುಂಬಿ ರಸಾಭಿವ್ಯಕ್ತಿಯೂ ಸ್ಪಷ್ಟವಾಗಿ ಕಾಣುತ್ತದೆ. ಶಿಲ್ಪದಲ್ಲಿ ಮೂಡಿಬಂದ ಒಂದೊಂದು ಪ್ರಾಣಿಯೂ. ದೇವತೆಯೂ. ಮನುಷ್ಯನೂ. ಜೀವಂತವಾಗಿಯೇ ಇರುವಂತೆ ತೋರುತ್ತದೆ.

ಖಜೂರಹೋ ದೇವಾಲಯಗಳಿಗೂ ಒರಿಸ್ಸಾ ಪ್ರದೇಶದ ಹಲವು ದೇವಾಲಯಗಳಿಗೂ ಸಾಮಾನ್ಯವಾದ ಒಂದು ವಿವರವೆಂದರೆ ಮಿಥುನ ಶಿಲ್ಪ. ಸ್ತ್ರೀ ಪುರುಷರು ಕಾಮಕೇಳಿಯ ವಿವಿಧ ಭಂಗಿಗಳಲ್ಲಿ ತನ್ಮಯರಾಗಿರುವಂತೆ ಕಡೆದಿರುವ ಈ ಮಿಥುನ ಶಿಲ್ಪಗಳು ಖಜೂರಹೋ ದೇಗುಲದ ಹೊರಗೋಡೆ ಗಳ ಮೇಲೆ ಹೇರಳವಾಗಿವೆ. ಪವಿತ್ರವಾದ ದೇವಾಲಯದಲ್ಲಿ ಇಂಥ ಅಶ್ಲೀಲ

ಶಿಲ್ಪಗಳು ಏಕೆ ಮೂಡಿ ಬಂದಿವೆ ಎನ್ನುವುದು ಹಲವಾರು ಸಮಾಧಾನಗಳಿಗೆ ಎಡೆ ಮಾಡಿಕೊಟ್ಟಿದೆ.

ತಾಂತ್ರಿಕ ಪಂಥಗಳು ಪ್ರಬಲವಾಗಿದ್ದ ಆ ಯುಗದಲ್ಲಿ ಶಿವ-ಶಕ್ತಿಯರ ಸಂಯೋಗವೇ ಮುಕ್ತಿ ಎನ್ನುವ ಕಲ್ಪನೆಯಿಂದ ಸಂಭೋಗಕ್ಕೆ ವಿಶಿಷ್ಟವಾದ ಸ್ಥಾನ ದೊರೆತಿದ್ದಿತು. ಈ ತಾಂತ್ರಿಕ ಪಂಥದ ಪ್ರಭಾವ ಖಜೂರಹೋ ದೇಗುಲಗಳಲ್ಲಿ ವಿಶೇಷವಾಗಿದೆ, ಮಿಥುನಶಿಲ್ಪ ಕೇವಲ ಅಲಂಕರಣಕ್ಕಾಗಿ ಅಲ್ಲ, ಧಾರ್ಮಿಕವಾದ ಮತ್ತು ಗುಹ್ಯವಾದ ಪ್ರವೃತ್ತಿಯು ಭಕ್ತರ ಮತ್ತು ಭಾವುಕರ ಮನಸ್ಸಿನಲ್ಲಿ ಮೂಡುವುದಕ್ಕಾಗಿ. ಅದನ್ನು ಅಸಹ್ಯ, ಅಶ್ಲೀಲ ಎನ್ನುವುದಕ್ಕಿಂತ ಮಾರ್ಮಿಕ ಎನ್ನುವುದು ಸರಿ. ಇದರಿಂದ ಧ್ವನಿತವಾಗುವ ತಾತ್ಪರ್ಯ ಪಾರಮಾರ್ಥಿಕವಾದುದು. ಈ ಮಿಥುನ ಶಿಲ್ಪಗಳು ದೇವಾಲಯದ ಒಳ ಆವರಣದಲ್ಲಿಲ್ಲದೆ ಹೊರಗೋಡೆಗಳ ಮೇಲೆಯೇ ಇರುವುದು ಸ್ವಾರಸ್ಯವಾದುದು. ಸ್ಥೂಲವಾಗಿ ಸಂಭೋಗ, ಸೂಕ್ಷ್ಮವಾಗಿ ಸಂಯೋಗ; ಹೊರಗೆ ಕಾಮ, ಒಳಗೆ ಧರ್ಮ-ಇದು ಮಿಥುನ ಶಿಲ್ಪದ ತಾತ್ಪರ್ಯ.

ಕಂಡಾರಿಯ ಮಹಾದೇವ

ಖಜೂರಹೋ ದೇಗುಲಗಳಲ್ಲಿ ತುಂಬ ದೊಡ್ಡದೂ ಪ್ರಸಿದ್ಧವಾದುದೂ ಕಂಡಾರಿಯ ಮಹಾದೇವ ದೇವಾಲಯ. ಇಲ್ಲಿನ ಪಂಚಾಯತನ ವಾಸ್ತುವಿನ್ಯಾಸ ಸೊಗಸಾಗಿದೆ. ಈ ದೇವಾಲಯದ ಉದ್ದ 102 ಅಡಿ 3 ಅಂಗುಲ, ಅಗಲ 66 ಅಡಿ 10 ಅಂಗುಲ, ಎತ್ತರ 101 ಅಡಿ 9 ಅಂಗುಲ. ಒಂದು ಕಾಲಕ್ಕೆ ಈ ದೇವಾಲಯದ ನಾಲ್ಕೂ ಕಡೆ ನಾಲ್ಕು ಗುಡಿಗಳು ಇದಕ್ಕೆ ಸೇರಿದಂತೆಯೇ ಇದ್ದುವು; ಈಗ ಅವು ಉಳಿದಿಲ್ಲ. ನಡುವೆ ಇದ್ದ ದೇವಾಲಯ ಮಾತ್ರ ಭವ್ಯವಾಗಿ ಇಂದಿಗೂ ನಿಂತಿದೆ. ಈ ಗುಡಿಯ ಗೋಡೆಗಳ ಮೇಲೆ ಪ್ರತಿ ಅಂಗುಲದಲ್ಲೂ ಶಿಲ್ಪವಿದೆ. ಮಹಾಮಂಡಪದಲ್ಲಿನ ಶಿಲ್ಪಗಳೂ ಸುಖನಾಸಿಯೂ ಒಮ್ಮೆ ಕಂಡರೆ ಮತ್ತೆ ಮರೆಯುವ ಹಾಗಿಲ್ಲ; ಕಂಭಗಳ ಮೇಲಿನ ಕೆತ್ತನೆಯೂ ವಿವಿಧ ಭಂಗಿಗಳಲ್ಲಿ ನಿಂತ ಮದನಿಕೆಯರ (ಅಥವಾ ಶಾಲಭಂಜಿಕೆಯರ) ಆಕೃತಿಗಳೂ ಮನೋಹರವಾಗಿವೆ.

ಕನಿಂಗ್‌ಹ್ಯಾಮ್ ಎನ್ನುವ ಪಂಡಿತ ಇಲ್ಲಿನ ಮೂರ್ತಿಶಿಲ್ಪಗಳನ್ನು ಎಣಿಕೆ

ಮಾಡಿದ. ದೇಗುಲದ ಒಳಭಾಗದಲ್ಲಿ 226, ಹೊರಭಾಗದಲ್ಲಿ 646 ಇವೆಯಂತೆ! ಬಹುಮಟ್ಟಿಗೆ ಈ ವಿಗ್ರಹಗಳು ಎರಡೂವರೆಯಿಂದ ಮೂರು ಅಡಿ ಎತ್ತರ ಇರುವಂಥವು. ಗರ್ಭಗುಡಿಯಲ್ಲಿ 4–5 ಅಡಿ ಸುತ್ತಳತೆಯಿರುವ ಹಾಲುಗಲ್ಲಿನ ಲಿಂಗವಿದೆ; ಈ ಗುಡಿಯ ದ್ವಾರದ ಮೇಲೆ ಬ್ರಹ್ಮ, ವಿಷ್ಣು, ಇಕ್ಕೆಲಗಳಲ್ಲಿರುವಂತೆ ಶಿವನ ಮೂರ್ತಿಶಿಲ್ಪವಿರುವುದು ಸ್ವಾರಸ್ಯವಾಗಿದೆ.

ಈ ದೇಗುಲದ ಬಳಿಯೇ ಉತ್ತರಕ್ಕೆ ದೇವಿ ಜಗದಂಬ ದೇವಾಲಯವಿದೆ. ಮೊದಲಿಗೆ ಇದು ವಿಷ್ಣುವಿನ ಗುಡಿ, ಯಾವುದೋ ಕಾಲಕ್ಕೆ ಇಲ್ಲಿನ ವಿಷ್ಣು ವಿಗ್ರಹ ಮರೆಯಾಗಿ ಕಾಳಿಯ ವಿಗ್ರಹ ಬಂದುಬಿಟ್ಟಿದೆ. ಈ ಗುಡಿಯ ಬಳಿ ಚಿತ್ರ ಗುಪ್ತ ದೇವಾಲಯವಿದೆ. ಇದು ಸೂರ್ಯನ ಗುಡಿ; ಇದರಲ್ಲಿ ಐದಡಿ ಎತ್ತರದ ಸೂರ್ಯದೇವನ ವಿಗ್ರಹವಿದೆ. ಈ ಗುಡಿಯಲ್ಲಿ ಹನ್ನೊಂದು ತಲೆಗಳ ವಿಷ್ಣುವಿನ ವಿಗ್ರಹವಿದೆ; ಹತ್ತು ಅವತಾರಗಳನ್ನು ನಿರ್ದೇಶಿಸುವ ಈ ಶಿಲ್ಪ ಗಮನಾರ್ಹ ವಾದುದು.

ಜೈನ ದೇಗುಲಗಳು

ಪೂರ್ವ ಪಂಗಡಕ್ಕೆ ಸೇರಿದ ಆರು ಜೈನಮಂದಿರಗಳೂ ಪ್ರಸಿದ್ಧವಾಗಿವೆ. ಇವುಗಳಲ್ಲಿ ತುಂಬ ದೊಡ್ಡದಾದ ಪಾರ್ಶ್ವನಾಥನ ಗುಡಿ 68 ಅಡಿ 2 ಅಂಗುಲ ಉದ್ದ, 34 ಅಡಿ, 11 ಅಂಗುಲ ಅಗಲವಿದ್ದು ಭವ್ಯವಾಗಿದೆ. ಅದರ ಪಕ್ಕದಲ್ಲಿ ರುವ ಆದಿನಾಥ ದೇವಾಲಯದ ಶಿಖರ-ಗೋಪುರದ ಮೇಲೆ ಮೈದಳೆದು ಬಂದಿ ರುವ ಕೆತ್ತನೆ ಕೆಲಸ ನೋಡಬೇಕಾದದ್ದು. ಇದರ ಆಕಾರವೇ ಅದ್ಭುತ; ಒಂದು ನೆಲೆಯುವರೆಗೆ ಮೂರ್ತಿಶಿಲ್ಪಗಳು, ಅಲ್ಲಿಂದ ಮೇಲೆ ಅಲಂಕರಣ ವಿನ್ಯಾಸ. ಅದರ ಮೇಲೆ ಮಾಲಾಬಂಧ, ಪಟ್ಟಿಕಾ, ಮಹಾಪದ್ಮ, ಕುಂಭ (ಕಲಶ). ತುಂಬ ಸೊಗ ಸಾದ ಕಲ್ಪನೆ ಇದು.

ಈ ಜೈನ ದೇಗುಲಗಳಲ್ಲಿಯೂ ಸಾಂಪ್ರದಾಯಿಕ ಹಿಂದೂ ದೇವ-ದೇವತೆ ಯರ ಚಿತ್ರಣವಿದೆ. ಈ ದೇಗುಲಗಳಿಗೆ ಸ್ವಲ್ಪ ದೂರದಲ್ಲಿ ಹನ್ನೆರಡು ಸುಂದರ ಸ್ತಂಭಗಳ ಸಮೂಹ 40 ಅಡಿ ಉದ್ದ 10 ಅಡಿ ಅಗಲದಷ್ಟು ಪ್ರದೇಶವನ್ನು

ಆಕ್ರಮಿಸಿ ನಿಂತಿದೆ. ಇದನ್ನು ಈಗ ಘಂಟೆ-ದೇಗುಲ ಎಂದು ಕರೆಯುತ್ತಾರೆ. ಒಂದು ಕಾಲಕ್ಕೆ ನಿಂತಿದ್ದ ಜೈನಗುಡಿಯ ಅವಶೇಷವಷ್ಟೆ ಇದು. ಅವಶೇಷ ದಲ್ಲಿಯೂ ಸುಂದರವಾಗಿ ಕಾಣುವುದು ಈ ಗುಡಿಯ ಹೆಗ್ಗಳಿಕೆ.

ದೇವಾಲಯದ ರಚನೆಯಲ್ಲಿ ವಿಮಾನವೇ ಮುಖ್ಯವಾದ ವಿವರ; ಗರ್ಭ ಗೃಹ ಅದರಲ್ಲಿ ಸೇರಿಬಂದಿರುತ್ತದೆ. ಉಳಿದೆಲ್ಲ ವಿವರಗಳೂ ವಿಮಾನಕ್ಕೆ ಪೂರಕ ವಾಗಿರಬೇಕು; ವಿಮಾನವನ್ನು ಎತ್ತಿ ಹಿಡಿಯಬೇಕು. ಈ ಕಲ್ಪನೆಯನ್ನು ಖಜೂರಹೋ ದೇಗುಲಗಳು ಸ್ಪಷ್ಟವಾಗಿ ಪ್ರತಿಪಾದಿಸುತ್ತವೆ.

ಖಜೂರಹೋದಿಂದ 61 ಮೈಲಿ ದೂರವಿರುವ ಹರಪಾಲಪುರ ಸುಮಾ ರಾಗಿ ದೊಡ್ಡ ಪಟ್ಟಣ. ಅದನ್ನು ದಾಟಿದರೆ ನವಗ್ರಾಮ ಎನ್ನುವ ಪಟ್ಟಣದಲ್ಲಿ ಊರಹೊರಗಿನ ಗುಡ್ಡದ ಮೇಲೆ ಛತ ಸಾಲ ಮಹಾರಾಜನ ಕೋಟೆಕೊತ್ತಲ ಗಳಿವೆ. ಇವು ಹದಿನೆಂಟನೆಯ ಶತಮಾನದವು. ಈ ರಾಜ ಬುಂದೇಲಖಂಡ ವಂಶಕ್ಕೆ ಸೇರಿದವನು. ಅವನ ರಾಜ್ಯ ಯಮುನಾ ನದಿಯಿಂದ ನರ್ಮದಾ ನದಿಯ ವರೆಗೂ ಹರಡಿದ್ದಿತು. ಈ ಮಹಾರಾಜನ ಸಮಾಧಿಯೂ ಆ ಗುಡ್ಡದ ಬಳಿಯೇ ಇದೆ; ಈ ಕಟ್ಟಡ ಯಾವ ಕಾರಣದಿಂದಲೋ ಪೂರ್ಣವಾಗಲಿಲ್ಲ. ಅದರ ಸಮೀಪ ದಲ್ಲಿಯೇ ಇರುವ ಧುಬೇಲ ಅರಮನೆ ಪ್ರೇಕ್ಷಣೀಯವಾದುದು. ಇಲ್ಲಿ ಶಿಲ್ಪ ಗಳೂ, ಶಾಸನಗಳೂ ದಂತ ಮತ್ತು ಮರಗೆತ್ತನೆಯ ಕೃತಿಗಳೂ ವರ್ಣಚಿತ್ರ ಗಳೂ ಹಲವಾರು ಇವೆ.

ಮಂತ್ರಾಲಯ ಪ್ರಭು

ಕನ್ನಡನಾಡಿನ ಹರಿದಾಸರಿಗೂ ಅವರಿಂದ ಪ್ರಭಾವಿತರಾದ ಜನಸಮುದಾಯಕ್ಕೂ 'ಮಂಚಾಲೆಯ ರಾಘಪ್ಪ'ನೆಂದರೆ ಎಲ್ಲಿಲ್ಲದ ಉತ್ಸಾಹ, ಭಕ್ತಿ. 'ತಿರುಪತಿಯ ತಿಮ್ಮಪ್ಪನಂತೆ ಮಂಚಾಲೆಯ ರಾಘಪ್ಪ' ಅವರಿಗೆ. ಮಂತ್ರಾಲಯದ ರಾಘವೇಂದ್ರತೀರ್ಥ ಸ್ವಾಮಿಗಳಿಗೆ ಅವರ ಅಭಿಮಾನದ ಹೆಸರು ಅದು. ವಿಜಯದಾಸರ ತರುವಾಯ ಎಲ್ಲ ಹರಿದಾಸರೂ ಇವರನ್ನು ಹಾಡಿ ಹೊಗಳಿದ್ದಾರೆ, ಪವಾಡ ಪುರುಷರೆಂದು ಕಾಣಿಸಿದ್ದಾರೆ. 'ಕರೆದಲ್ಲಿಗೆ ಬರುವ', 'ಬೇಡಿದ ವರಗಳ ಕೊಡುವ,' 'ಕುಂದದೆ ವರಮಂತ್ರಾಲಯದಲ್ಲಿರುವ,' 'ಒಲಿದು ಭಕ್ತರ ಕಾಯ್ವ' ದೇವಸ್ವಭಾವದ ದಿವಿಜದ್ರುಮ (ಕಲ್ಪವೃಕ್ಷ), ಕಾಮಧೇನು, ಚಿಂತಾಮಣಿಯೆಂದು ದಾಸರೆಲ್ಲರೂ ಅವರ ಹಿರಿಮೆಯನ್ನು ತೋರಿಸಿದ್ದಾರೆ. ದಕ್ಷಿಣ ದೇಶದಲ್ಲಿ ಅವರ ಮಹಿಮೆ ಪ್ರಕಟವಾದುದು ಹರಿದಾಸರ ಪ್ರಯತ್ನದಿಂದಲೇ ಎಂದರೆ ಉತ್ಪ್ರೇಕ್ಷೆಯಲ್ಲ.

ಪಂಢರಪುರದಂತೆ, ತಿರುಪತಿಯಂತೆ, ಉಡುಪಿಯಂತೆ, ಹರಿದಾಸರಿಗೂ ನಾಡಿನ ಭಾವುಕ ಜನಕ್ಕೂ ಮಂತ್ರಾಲಯ ಜಾಗ್ರತ ಕ್ಷೇತ್ರ. ಆಂಧ್ರ ಪ್ರದೇಶದ ಕರ್ನೂಲು ಜಿಲ್ಲೆಗೂ ಮೈಸೂರು ರಾಜ್ಯದ ಬಳ್ಳಾರಿ ಜಿಲ್ಲೆಗೂ ಸಾಂಸ್ಕೃತಿಕವಾಗಿ ಸೇರಿರುವ ಆದವಾನಿ ತಾಲ್ಲೂಕಿನ ಉತ್ತರ ತುದಿಯಲ್ಲಿ ತುಂಗಭದ್ರಾ ನದಿಯ ದಂಡೆಯ ಮೇಲಿರುವ ಮಂತ್ರಾಲಯ ಮೊದಲಿಗೆ ಮಂಚಾಲೆಯೆನ್ನುವ ಸಣ್ಣ ಹಳ್ಳಿ. ಅಲ್ಲಿ ರಾಘವೇಂದ್ರಸ್ವಾಮಿಗಳ ಬೃಂದಾವನ ಮೂಡುವ ಮೊದಲು ಕುಗ್ರಾಮವೇ ಆಗಿದ್ದಿತು. ಊರದೇವತೆ ಮಂಚಾಲಮ್ಮನಿಗೆ ಪ್ರಖ್ಯಾತಿ ಅಷ್ಟಿಷ್ಟು ಇದ್ದಿರಬಹುದು. ಅಹೋಬಲ ಕ್ಷೇತ್ರದಲ್ಲಿ ಇರುತ್ತಿದ್ದ ಹಿರಣ್ಯಕಶಿಪು

ವಿಗೆ ಮಂಚಾಲಮ್ಮ ಕುಲದೇವತೆಯಂತೆ; ಹಿರಣ್ಯಕಶಿಪುವಿನ ಮಗ ಪ್ರಹ್ಲಾದ ಈ ಮಂಚಾಲಮ್ಮನ ಸನ್ನಿಧಿಯಲ್ಲಿಯೇ ಯಜ್ಞ ಮಾಡಿದ್ದನಂತೆ. ಇದು ಕೃತ ಯುಗದ ಮಾತಾಯಿತು.

ಪ್ರಹ್ಲಾದನ ಕಾರ್ಯಕ್ಷೇತ್ರ

ಮಂಚಾಲೆ ಮಂತ್ರಾಲಯವಾದುದು ರಾಘವೇಂದ್ರ ಸ್ವಾಮಿಗಳು ಇದನ್ನು ತಮ್ಮ ನಿರ್ಯಾಣ ಕ್ಷೇತ್ರವಾಗಿ ಆರಿಸಿಕೊಂಡ ನಂತರವೇ. ಕುಂಭಕೋಣದವ ರಾದ, ತಂಜಾವೂರಿನಲ್ಲಿ ಪ್ರಸಿದ್ಧರಾದ ಸ್ವಾಮಿಗಳು ಈ ಕಾಡುಕೊಂಪೆಯನ್ನು ತಮ್ಮ ಬೃಂದಾವನಕ್ಕೆ ಆರಿಸಿಕೊಂಡುದೇಕೆ? ಆದವಾನಿಯ ನವಾಬ (1662-1687) ಸೀದಿ ಮಸೂದ್‌ಖಾನ್‌ನಿಂದ ಇದನ್ನು ಅವರು ಪಡೆದುಕೊಂಡುದು; ಆ ವೇಳೆಗಾಗಲೇ ಅವನು ಅದನ್ನು ಮುಸಲ್ಮಾನ ಖಾಜಿಯೊಬ್ಬನಿಗೆ ಕೊಟ್ಟು ಬಿಟ್ಟಿದ್ದನೆಂದೂ, ಸ್ವಾಮಿಗಳ ಬಲವಂತದ ಮೇಲೆ ಖಾಜಿಗೆ ಬೇರೊಂದು ಗ್ರಾಮ ವನ್ನು ಕೊಟ್ಟು ಮಂಚಾಲೆಯನ್ನು ಇವರಿಗೆ ಕೊಟ್ಟನೆಂದೂ ಕಥೆಯಿದೆ. ಸ್ವಾಮಿ ಗಳು ಈ ಸ್ಥಳವನ್ನು ಇಷ್ಟೊಂದು ಮೆಚ್ಚಿಕೊಂಡುದೇಕೆ? ಸ್ವಾಮಿಗಳು ಹಿಂದಿನ ಜನ್ಮವೊಂದರಲ್ಲಿ ಪ್ರಹ್ಲಾದನೇ ಆಗಿದ್ದರೆಂದೂ, ಮಂಚಾಲೆ ಪ್ರಹ್ಲಾದನ ಕಾರ್ಯ ಕ್ಷೇತ್ರವಾಗಿದ್ದಿತೆಂದೂ ಸಂಪ್ರದಾಯದ ಸಮಾಧಾನವೇನೋ ಇದೆ.

ಬೃಂದಾವನಕ್ಕೆಂದು ಭೂಮಿಯನ್ನು ಅಗೆಯುತ್ತಿದ್ದಾಗ ರಾಶಿರಾಶಿಯಾಗಿ ಇದ್ದಿಲು ದೊರಕಿತೆಂದೂ, ಪ್ರಹ್ಲಾದನು ಯಾಗಮಾಡಿದ ಸ್ಥಳವೇ ಅದೆಂದೂ ನಂಬಿಕೆಯಿದೆ. ಅಂತೂ ಸ್ವಾಮಿಗಳ ಬೃಂದಾವನ ಅಲ್ಲಿ ಸಿದ್ಧವಾದನಂತರ ಸ್ಥಳವು ಮಂತ್ರಸಿದ್ಧಿಯ ಕ್ಷೇತ್ರವೆಂದು ಪ್ರಸಿದ್ಧವಾಯಿತು. ಜಗನ್ನಾಥದಾಸರ ಕಾಲ ದಿಂದಲೂ 'ಕೂಲದ ವರಮಂತ್ರಾಲಯ ನಿಲಯ,' 'ಮಂತ್ರ ನಿಲಯಮಂದಿರ,' ಎಂದು ಸ್ವಾಮಿಗಳಿಗೂ ಸ್ಥಳಕ್ಕೂ ಸಂಬಂಧವೊದಗಿಬಂದಿದೆ. ಆ ದಾಸರ ಕಾಂಬೋದಿರಾಗದ ಕೃತಿಯೊಂದು 'ಸುರಪನಾಲಯದಂತೆ ಮಂತ್ರಾಲಯ ಕರೆಸಿ ಕಂಗೊಳಿಪುದು ನೋಳ್ಪ ಸಜ್ಜನರಿಗೆ' ಎನ್ನುತ್ತದೆ. ಈ ಕೀರ್ತಿ ಇಂದಿಗೂ ಉಳಿದುಬಂದಿದೆ.

ಮಂಚಾಲಮ್ಮನ ಪ್ರಸಿದ್ಧಿ ಮರೆಯಾದುದು ಸಹಜವೇ. ಆಕೆ ಗ್ರಾಮೀಣ ಜನರ ಕ್ಷುದ್ರದೇವತೆ; ಶಕ್ತಿ. ಕುರಿಯ ಬಲಿ ಆಕೆಗೆ ಪ್ರೀತಿಯಾಗಿದ್ದಿತೆನ್ನುವ ಕಾರಣ ದಿಂದ ಬೃಂದಾವನದ ಮಹಾದ್ವಾರದ ಮೇಲೆ ಕುರಿಯ ತಲೆಯ (ಮೇಷ ಮಸ್ತಕ) ಲಾಂಛನವನ್ನು ಸಭ್ಯಧರ್ಮದವರು ಉಳಿಸಿಕೊಂಡಿದ್ದಾರೆ. ಈಗ ಬೃಂದಾವನ ವಿರುವ ಸ್ಥಳದಲ್ಲಿಯೇ ಮೊದಲಿಗೆ ಮಂಚಾಲಮ್ಮನ ಗುಡಿಯಿದ್ದಿತೆಂದೂ ಹೇಳು ತ್ತಾರೆ; ಈಗ ಮಠದ ಎಡಭಾಗದಲ್ಲಿ ಆಕೆಗೊಂದು ಸಣ್ಣ ಗುಡಿಯಿದೆ. ಬೃಂದಾ ವನದ ಶಿಲೆಯನ್ನು ಆರೇಳು ಮೈಲಿ ದೂರದಲ್ಲಿರುವ ಮಾಧವಾರ ಗ್ರಾಮದ ಹಳ್ಳದ ದಂಡೆಯ ಮೇಲಿದ್ದ ಬಂಡೆಯಿಂದ ಕಡೆದು ತಂದರೆಂದು ಐತಿಹ್ಯವಿದೆ. ಏಳುನೂರು (?) ಸಾಲಿಗ್ರಾಮಗಳನ್ನು ತರಿಸಿ ಅವುಗಳನ್ನು ಸ್ಥಾಪಿಸಿ, ಮೇಲೆ ಬೃಂದಾವನವನ್ನು ಕಟ್ಟಿದ್ದಾರೆಂದು ಪ್ರತೀತಿಯಿದೆ.

ಮನ್ರೋ ಸಾಕ್ಷ್ಯ

ರಾಘವೇಂದ್ರ ಸ್ವಾಮಿಗಳ ಬೃಂದಾವನವಲ್ಲದೆ ಇಲ್ಲಿ ಅವರ ಪರಂಪರೆ ಯಲ್ಲಿ ಬಂದ ವಾದೀಂದ್ರತೀರ್ಥರ (1728–1750) ವೃಂದಾವನವೂ ಇದೆ. ಸ್ಥಳದ ಪ್ರಖ್ಯಾತಿಯೇನೋ ರಾಘವೇಂದ್ರಸ್ವಾಮಿಗಳ ಸಾನ್ನಿಧ್ಯದಿಂದಲೇ. 1812ರಲ್ಲಿ ಈಸ್ಟ್ ಇಂಡಿಯ ಕಂಪೆನಿಯವರು ಧರ್ಮಸಾಧನ ಉಂಬಳಿಗಳನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಳ್ಳಬೇಕೆಂದು ಬಯಸಿ ಯೋಜನೆಯೊಂದನ್ನು ಸಿದ್ಧಪಡಿಸಿ ಇನಾಂ ಆಯೋಗವನ್ನು ರಚಿಸಿದರು. ಅದರಲ್ಲಿ ಸದಸ್ಯನೂ ಬಳ್ಳಾರಿ ಜಿಲ್ಲಾಧಿಕಾರಿಯೂ ಆಗಿದ್ದ ಸರ್ ಥಾಮಸ್ ಮನ್ರೋ (1771–1827) ಇಲ್ಲಿಗೆ ಬಂದು ಇಲ್ಲಿ ನಾಲ್ಕು ದಿನಗಳು ತಂಗಿದ್ದನಂತೆ. ಎಂದರೆ ಆ ವೇಳೆಗಾಗಲೇ ಮಂತ್ರಾಲಯದ ಮಹಿಮೆ ಪ್ರಚಲಿತವಾಗಿದ್ದಿತು. ಸ್ಥಳದಲ್ಲಿ ಅಪೂರ್ವವಾದ ಸಾನ್ನಿಧ್ಯವಿರುವುದನ್ನು ಆತ ಕಂಡುಕೊಂಡು ಅಲ್ಲಿನ ಉಂಬಳಿಗಳನ್ನು ಮೊದಲಿ ನಂತೆಯೇ ಉಳಿಸುವಂತೆ ವ್ಯವಸ್ಥೆ ಮಾಡಿಹೋದನಂತೆ.

ಮನ್ರೋ ಗ್ಲಾಸ್ಗೋದಲ್ಲಿ ಹುಟ್ಟಿ, ಈಸ್ಟ್ ಇಂಡಿಯ ಕಂಪೆನಿಯ ಸೇವೆ ಯನ್ನು ಸೇರಿ. 1800ರಿಂದ 1807ರವರೆಗೂ ತುಂಗಭದ್ರ ನದಿಯ ದಕ್ಷಿಣ ಕ್ಕಿರುವ ರಾಯಲಸೀಮೆ ಪ್ರದೇಶದ ಮೇಲಧಿಕಾರಿಯಾಗಿದ್ದವನು. 1820ರಲ್ಲಿ

ಅವನನ್ನು ಮದ್ರಾಸಿನ ಗೌರ್ನರ್ ಆಗಿ ನೇಮಿಸಿದರು. 1825ರಲ್ಲಿ ಆತ ಮೈಸೂರಿಗೂ ಬಂದಿದ್ದು ಮುಮ್ಮಡಿ ಕೃಷ್ಣರಾಜ ಒಡೆಯರನ್ನು ಕಂಡಿದ್ದನು. ಧರ್ಮಶ್ರದ್ಧಾಳುವಾದ ಮನ್ರೋ ರಾಯಲಸೀಮೆಯ ಪಟ್ಟಿಕೊಂಡ ಎಂಬೂರಿನಲ್ಲಿ ಪ್ರವಾಸ ಮಾಡುತ್ತಿದ್ದಾಗ ಕಾಲರಾ ತಗುಲಿ 1827ರಲ್ಲಿ ತೀರಿಕೊಂಡನು. ಆತ ಮಂಚಾಲೆಗೆ ಬಂದಿದ್ದುದು ಮದ್ರಾಸಿನ ಗೌರ್ನರ್ ಆಗುವ ಮೊದಲು. ಅಲ್ಲಿ ಬೃಂದಾವನದಿಂದ ಸ್ವಾಮಿಗಳು ಎದ್ದುಬಂದುದನ್ನು ಅವನು ಕಣ್ಣಾರೆ ಕಂಡನೆಂದು ಕಥೆಯಿಧೆ. ಅವರು ಬೇರೆ ಯಾರ ಕಣ್ಣಿಗೂ ಬೀಳದ ಕೌತುಕ ನಡೆಯಿತಂತೆ. ಇದರ ಪ್ರಸ್ತಾಪ 1916ರಲ್ಲಿ ವಿಲಿಯಂ ಫ್ರಾನ್ಸಿಸ್ ಎಂಬಾತ ಸಂಪಾದಿಸಿದ 'ಮದ್ರಾಸ್ ಡಿಸ್ಟ್ರಿಕ್ಟ್ ಗೆಜೆಟಿಯರ್' (ಸಂಪುಟ ಒಂದು, ಬಳ್ಳಾರಿ ಜಿಲ್ಲೆ, ಅಧ್ಯಾಯ ಹದಿನೈದು, ಆದೋನಿ ತಾಲ್ಲೂಕು, ಪು 213)ನಲ್ಲಿ ಬಂದಿರುವುದು ಸ್ವಾರಸ್ಯವಾಗಿದೆ.

ಬೃಂದಾವನ

ಮನ್ರೋ ಕಾಲದಲ್ಲಿ ಮಂತ್ರಾಲಯದ ಧರ್ಮಸಾಧನ ಉಂಬಳಿಗಳಿಗೆ ಬಂದಿದ್ದ ಕುತ್ತು ಎರಡನೆಯದು. ಅದಕ್ಕೆ ಮೊದಲೇ ವಸುಧೇಂದ್ರ ತೀರ್ಥ ಸ್ವಾಮಿಗಳ ಕಾಲದಲ್ಲಿ (1750–1761) ಉಂಬಳಿಗಳು ಕೈ ತಪ್ಪುವ ಪರಿಸ್ಥಿತಿ ಬಂದಿದ್ದಿತು. ಆಗ ಬೃಂದಾವನದಲ್ಲಿ ಸಾನ್ನಿಧ್ಯವನ್ನು ಕಂಡು ಉಂಬಳಿಗಳನ್ನು ಉಳಿಸಿದವನು ಆದವಾನಿಯ ನವಾಬ ಸಬ್ದರ್‌ಜಂಗ್ ಎಂಬಾತ. ಮಂತ್ರಾಲಯದ ಉಂಬಳಿಗಳನ್ನು ಹಾಕಿಕೊಟ್ಟವನು ರಾಘವೇಂದ್ರಸ್ವಾಮಿಗಳ ಶಿಷ್ಯನೂ, ಆದವಾನಿ ನವಾಬ ಸೀದಿ ಮಸೂದ್ ಖಾನನ ದಿವಾನನೂ ಆಗಿದ್ದ ವೆಂಕಣ್ಣಪಂತನೆಂಬುವನು.

ಬೃಂದಾವನವು ಸಿದ್ಧವಾಗಿ ಇಂದಿಗೆ ಮುನ್ನೂರು ವರ್ಷಗಳು ಕಳೆದಿವೆ. ರಾಘವೇಂದ್ರಸ್ವಾಮಿಗಳು ಬೃಂದಾವನ ಪ್ರವೇಶಮಾಡಿದುದು 1671 (ವಿರೋಧಿಕೃತ್ ಸಂವತ್ಸರ ಶ್ರಾವಣ ಬಹುಳ ಬಿದಿಗೆ)ರಲ್ಲಿ. ಜೀವಂತರಾಗಿದ್ದಾಗಲೇ ನಾರಾಯಣಸ್ಮರಣೆ ಮಾಡುತ್ತಾ ಯೋಗನಿದ್ರೆಯಲ್ಲಿ ಮುಳುಗಿ ಬೃಂದಾವನಸ್ಥರಾದರೆಂದು ಪ್ರತೀತಿಯಿದೆ. ಅವರು ದೇಹದಿಂದ ಬದುಕಿದ್ದುದು ಎಪ್ಪತ್ತು

ವರ್ಷಗಳು. ಬೃಂದಾವನದಲ್ಲಿ ಅವರ ಸನ್ನಿಧಾನವು ಏಳುನೂರು ವರ್ಷಗಳ ವರೆಗೆ ಇರುವುದೆಂಬ ನಂಬಿಕೆಯಿದೆ. ಈ ನಂಬಿಕೆಯೂ ಪ್ರಾಚೀನವಾದುದೇ. ಗೋಪಾಲದಾಸರ ಪದವೊಂದು 'ಒಂದಾರು ನೂರು ಸಂವತ್ಸರ ಬೃಂದಾವನದಲ್ಲಿ ಚೆಂದಾಗಿ ನಿಂದೂ ಮೆರೆವ ಕೃಪಾಸಿಂಧು' ಎಂದು ಉಲ್ಲೇಖಿಸುತ್ತದೆ. ಬೃಂದಾವನದಲ್ಲಿ ಅವರು ಇಂದಿಗೂ ಸಾಕ್ಷಾತ್ತಾಗಿ ಇದ್ದಾರೆಂಬ ಕಲ್ಪನೆ ಸ್ವಾರಸ್ಯವಾದುದು. ಜಗನ್ನಾಥದಾಸರು ತಮ್ಮ ಪದವೊಂದರಲ್ಲಿ 'ಎದ್ದು ಬರುತಾರೆ, ಮುದ್ದು ಬೃಂದಾವನ ಮಧ್ಯದೊಳಗಿಂದ' ಎಂದು ಹೇಳಿ ಕಲ್ಪನೆಗೆ ಸಮರ್ಥನೆಯನ್ನೊದಗಿಸಿದ್ದಾರೆ.

'ಪ್ರತಿದಿನ ಬೃಂದಾವನಕ್ಕೆ ಪ್ರದಕ್ಷಿಣೆ, ನಮನ, ಸ್ತುತಿ, ಮೃತ್ತಿಕಾತೀರ್ಥ ಪಾದೋದಕ ಸೇವನೆ' ಮಂತ್ರಾಲಯದಲ್ಲಿ ನಡೆಯುವ ಕಟ್ಟಳೆ. ಇದರಿಂದ ಇಷ್ಟಾರ್ಥಸಿದ್ಧಿ, ಆತಂಕ ಪರಿಹಾರ, ಅಭ್ಯುದಯ ಆಗುವುವೆಂದು ಭಾವುಕರೂ ಭಕ್ತರೂ ನಂಬಿ ನಡೆದುಕೊಳ್ಳುತ್ತಾರೆ. ಭೂತ ಪ್ರೇತ ಪಿಶಾಚಿ ಪೀಡೆಗಳ ಪರಿಹಾರ, ಸ್ವಪ್ನದಲ್ಲಿ ಮಂತ್ರಾಕ್ಷತೆ ದೊರಕುವುದು, ಭವಿಷ್ಯಸೂಚನೆ ಮೊದಲಾದ ಅಸಾಧಾರಣ ಪ್ರಸಂಗಗಳಿಂದ ಈ ಸ್ಥಳಕ್ಕೆ ವಿಶೇಷವಾದ ಆಕರ್ಷಣೆ ಒದಗಿ ಬಂದಿದೆ. ಮಂಚಾಲೆಯ ಮೂಲ ಬೃಂದಾವನದಿಂದ ಮೃತ್ತಿಕೆಯನ್ನು ಪಡೆದು ಅಥವಾ ಸ್ವಪ್ನದಲ್ಲಿ ಆದೇಶವನ್ನು ತಳೆದು ಊರು ಊರಿನಲ್ಲಿಯೂ ರಾಘವೇಂದ್ರಸ್ವಾಮಿಗಳ ಬೃಂದಾವನಗಳು ಮೂಡಿಬಂದಿವೆ. ಬೃಂದಾವನದ ಸಣ್ಣ ಪ್ರತಿಕೃತಿಗಳನ್ನು ಬೆಳ್ಳಿಯಲ್ಲಿ ಮಾಡಿಸಿ ದೇವರ ಮನೆಯಲ್ಲಿಟ್ಟು ಪೂಜಿಸುವುದು ಮಾಧ್ವ ಮನೆಗಳಲ್ಲಿ ಕಾಣಸಿಗುತ್ತದೆ.

ಸಾರ್ವಜನಿಕ ಆರಾಧನೆಗೆಂದು ರಾಘವೇಂದ್ರ ಸ್ವಾಮಿಗಳ ಬೃಂದಾವನದ ಪ್ರತಿಕೃತಿಗಳನ್ನು ಕಲ್ಲಿನಲ್ಲಿ ಮಾಡಿಸಿಡುತ್ತಾರೆ; ಇವುಗಳ ಪೂಜೆ ನಡೆಯುವ ಸ್ಥಳಗಳಿಗೆ ಮಠಗಳೆಂದು ಬಳಕೆಯ ಹೆಸರು. ರಾಘವೇಂದ್ರ ಸ್ವಾಮಿಗಳ ಸಾಕ್ಷಾತ್ ಭಕ್ತರಾಗಿದ್ದ ಬಿಚ್ಚಾಲೆಯ ಅಪ್ಪಣಾಚಾರ್ಯರು ರಚಿಸಿರುವ ಮೂವತ್ತೆರಡು ಶ್ಲೋಕಗಳ 'ರಾಘವೇಂದ್ರ ಸ್ತೋತ್ರ'ವನ್ನು ಈ ಮಠಗಳಲ್ಲಿ ವಿಶೇಷವಾಗಿ ಪಠಿಸುತ್ತಾರೆ.

ಪರಂಪರೆ

ಹೀಗೆ ದೇವರಂತೆ ಪೂಜೆಗೊಂಡು ಮೆರೆಯುತ್ತಿರುವ ರಾಘವೇಂದ್ರಸ್ವಾಮಿ

ಗಳು ಮಾಧ್ವ ಸಂಪ್ರದಾಯದ ಮಠವೊಂದರ ಗುರುಗಳಾಗಿದ್ದವರು. ವಿಬುಧೇಂದ್ರ ತೀರ್ಥರಿಂದ ಆರಂಭವಾದ ಈ ಮಠವನ್ನು 'ವಿಬುಧೇಂದ್ರ ಮಠ' ಎಂದೇ ವ್ಯವಹರಿಸುತ್ತಿದ್ದುದು ಆ ಪರಂಪರೆಯಲ್ಲಿ ಪ್ರಖ್ಯಾತರಾದ ಇವರಿಂದಾಗಿ 'ರಾಘವೇಂದ್ರಸ್ವಾಮಿಗಳ ಮಠ' ಎಂದೇ ಈಗ ಪ್ರಸಿದ್ಧವಾಗಿದೆ. ವಿಬುಧೇಂದ್ರರು ವಿಜಯನಗರದ ಕೃಷ್ಣದೇವರಾಯ ಮಹಾರಾಯನ ಕಾಲದಲ್ಲಿದ್ದವರು (ಸುಮಾರು 1490). ಮಧ್ವಾಚಾರ್ಯರಿಂದ ಹನ್ನೊಂದನೆಯ ತಲೆ. ಅವರ ಪರಂಪರೆಯಲ್ಲಿ ಬಂದ ಸುರೇಂದ್ರತೀರ್ಥರು ಇಮ್ಮಡಿ ಶ್ರೀರಂಗರಾಯನ ಕಾಲದವರು. ಅವರು ಮಠಾಧಿಪತಿಗಳಾಗಿದ್ದುದು 1504ರಿಂದ 1575ರವರೆಗೆ; ಇವರು ತೊಂಬತ್ತ ಮೂರುವರ್ಷಗಳು ಬದುಕಿದ್ದವರು. ವ್ಯಾಸತೀರ್ಥರ ಶಿಷ್ಯರಾಗಿ, ವಾದಿರಾಜರ ಸತೀರ್ಥರಾಗಿ, ಅಪ್ಪಯ್ಯದೀಕ್ಷಿತರ ಸಮಕಾಲಿಕರಾಗಿ, ತಂಜಾವೂರು, ಮಧುರೆ, ನಾಯಕರಿಂದಲೂ ವಿಜಯನಗರದ ಚಕ್ರವರ್ತಿಗಳಿಂದಲೂ ಸನ್ಮಾನಿತರಾಗಿ ಮೆರೆದ ವಿಜಯೀಂದ್ರತೀರ್ಥರು (1517-1614) ಸುರೇಂದ್ರತೀರ್ಥರ ಶಿಷ್ಯರು, ಅವರನಂತರ ಪಟ್ಟಕ್ಕೆ ಬಂದವರು. ನೂರುನಾಲ್ಕು ಪ್ರೌಢಗ್ರಂಥಗಳನ್ನು ರಚಿಸಿ ಕೀರ್ತಿವಂತರಾಗಿದ್ದಾರೆ. 'ಸರ್ವಶಾಸ್ತ್ರ ಪ್ರಸೂನಾರ್ಥ ಸೌರಭ್ಯ ಸರಸಾಳಿ' ಯೆಂದು ಚೆವ್ವಪ್ಪ ನಾಯಕನ ಶಾಸನ ಇವರನ್ನು ಬಣ್ಣಿಸುತ್ತದೆ.

ವಿಜಯೀಂದ್ರರ ನಂತರ ಸುಧೀಂದ್ರ ತೀರ್ಥರು (1561-1623) ಗುರುಗಳಾದರು. ವಿಜಯನಗರದ ವೆಂಕಟಪತಿರಾಯನೂ ತಂಜಾವೂರಿನ ರಘುನಾಥನಾಯಕನೂ ಇವರಿಗೆ ಕನಕಾಭಿಷೇಕ ಮಾಡಿದರಂತೆ. ಇವರೂ ಹಲವಾರು ಕಾವ್ಯಗ್ರಂಥಗಳನ್ನೂ ಶಾಸ್ತ್ರಗ್ರಂಥಗಳನ್ನೂ ರಚಿಸಿದ್ದಾರೆ. 'ದಿಗ್ವಿಜಯ ವಿದ್ಯಾ ಸಿಂಹಾಸನಾಧೀಶ್ವರ' ರೆಂದು ಪ್ರಖ್ಯಾತರಾದ ಇವರು ಪೀಠದಲ್ಲಿದ್ದುದು ಒಂಬತ್ತು ವರ್ಷಗಳಷ್ಟೆ (1614-1623); ಆನೆಗೊಂದಿಯ ಬಳಿ ನವಬೃಂದಾವನವೆನ್ನುವ ನಡುಗಡ್ಡೆಯ ಮೇಲೆ ಇವರ ಬೃಂದಾವನವಿದೆ. ಇವರನಂತರ ಮಠಾಧಿ ಪತಿಗಳಾದವರು ರಾಘವೇಂದ್ರರು.

ಆತಂಕ ಪರಿಸ್ಥಿತಿ

ವಿಜಯನಗರದ ಹಿಂದೂ ಸಾಮ್ರಾಜ್ಯ ಶಿಥಿಲವಾಗುತ್ತಿದ್ದ ಕಾಲ ಅದು.

ಅಲ್ಲಲ್ಲಿ ಮುಸಲ್ಮಾನ ನಾಯಕರು ತಂತಮ್ಮ ಪಾಳೆಯಪಟ್ಟುಗಳನ್ನು ಕಟ್ಟಿಕೊಂಡು ಆಳುತ್ತಿದ್ದರು. ಇಂಗ್ಲೀಷರೂ, ಫ್ರೆಂಚರೂ, ಡಚ್ಚರೂ ವ್ಯಾಪಾರದ ನೆಪದಿಂದ ಇಲ್ಲಿಗೆ ಬಂದು ರಾಜಕಾರಣದಲ್ಲಿ ಕೈಹಾಕುತ್ತಿದ್ದರು. ಅವರೊಂದಿಗೆ ಕ್ರೈಸ್ತ, ಜೆಸ್ಯೂಟ್ ಪಾದ್ರಿಗಳೂ ಬಂದು ತಮ್ಮ ಧರ್ಮ ಪ್ರಚಾರವನ್ನು ಬಿರುಸಾಗಿ ನಡೆಸುತ್ತಿದ್ದರು. ದುರ್ಬಲರಾದ ಹಿಂದೂರಾಜರು ತಮ್ಮ ಪ್ರಾಬಲ್ಯವನ್ನಾಗಲೀ, ಸತ್ತ್ವವನ್ನಾಗಲೀ ಉಳಿಸಿಕೊಳ್ಳಲಾರದೆ ಮುಸಲ್ಮಾನ ನಾಯಕರೊಂದಿಗೆ, ವಿದೇಶೀ ಅಧಿಕಾರಿಗಳೊಂದಿಗೆ ಒಳಸಂಚು ನಡೆಸುತ್ತಿದ್ದರು. ಧರ್ಮವನ್ನು ಕಾಪಾಡಬೇಕೆಂಬ ಕುತೂಹಲ ಅವರಿಗಿದ್ದುದು ಅಷ್ಟಕ್ಕಷ್ಟೆ. ಈ ಅಸ್ತವ್ಯಸ್ತ ಪರಿಸ್ಥಿತಿಯಿಂದಾಗಿ ಜನರಿಗೆ ಅಧೈರ್ಯವೂ, ಆತಂಕವೂ ಉಂಟಾಗಿದ್ದುದರಲ್ಲಿ ಆಶ್ಚರ್ಯವೇನಿಲ್ಲ.

ಧರ್ಮಪೀಠಗಳು ತಂತಮ್ಮ ಸಂಕುಚಿತ ವ್ಯಾಪ್ತಿಯಲ್ಲಿ ಸಾಧ್ಯವಾದಷ್ಟು ಲೋಕಸಂಗ್ರಹ ಮಾಡುತ್ತಿದ್ದವು, ನಿಜ. ಆದರೆ ಸಾಮಾನ್ಯ ಜನರಿಗೂ ಪೀಠಾಧಿಕಾರಿಗಳಿಗೂ ಸಂಬಂಧವಿದ್ದುದು ಕಡಮೆ; ಸಂಪ್ರದಾಯನಿಷ್ಠ ಪಂಡಿತರು ನಡುವೆ ಇರುತ್ತಿದ್ದರು. ಸಂದರ್ಭ ಹೀಗಿದ್ದಾಗ ಹಿಂದೂ ಧರ್ಮದ ಒಡಲಿನಿಂದ ಉಜ್ವಲನಾದ ಪ್ರಭಾವಶಾಲಿಯಾದ ಒಬ್ಬ ಮಹಾಪುರುಷ ಆವಿರ್ಭವಿಸುವ ಅಗತ್ಯವಿದ್ದಿತು. ರಾಘವೇಂದ್ರಸ್ವಾಮಿಗಳ ಹಿಂದಿನ ಮೂವರು ಗುರುಗಳೂ ಮಹಾಪುರುಷರೇ; ವಿದ್ಯೆಯಲ್ಲಿ, ಗ್ರಂಥರಚನೆಯಲ್ಲಿ, ಪ್ರವಚನದಲ್ಲಿ ಪ್ರಸಿದ್ಧರೇ. ಮಹಾಜನರಿಂದಲೂ ರಾಜರಿಂದಲೂ ಸನ್ಮಾನಿತರಾಗಿದ್ದವರು ಅವರು. ಹಿಂದೂ ಅರಸರು ಮಾತ್ರವಲ್ಲ, ಮುಸಲ್ಮಾನ ಮಂಡಲಾಧಿಕಾರಿಗಳೂ ಅವರನ್ನು ಗೌರವಿಸುತ್ತಿದ್ದರು. ಬಿಜಾಪುರದ ಇಮ್ಮಡಿ ಇಬ್ರಾಹಿಂ ಅದಿಲ್ ಷಾ ಸುಧೀಂದ್ರತೀರ್ಥರನ್ನು 'ಜಗದ್ಗುರು' ಗಳೆಂದು ಮರ್ಯಾದೆ ಮಾಡಿದ ಉಲ್ಲೇಖವಿದೆ. ರಾಘವೇಂದ್ರ ತೀರ್ಥರನ್ನು ಆದವಾನಿಯ ನವಾಬ ಸೀದಿ ಮಸೂದ್ ಖಾನನು ಮಾತ್ರವಲ್ಲದೆ ಬಿಜಾಪುರದ ಇಮ್ಮಡಿ ಇಬ್ರಾಹಿಂ ಅಧಿಲ್ ಶಾನೂ 'ಶ್ವೇತಚ್ಛತ್ರ'ವನ್ನು ಸಮರ್ಪಿಸಿ ಗೌರವಿಸಿದನು.

ವ್ಯಕ್ತಿತ್ವ

ಇಂಥ ಪರಂಪರೆಯಲ್ಲಿ ಬಂದ ರಾಘವೇಂದ್ರ ತೀರ್ಥರು ಸಾಮಾಜಿಕ

ಔನ್ನತ್ಯವನ್ನು ಪಡೆದುದು ಮಾತ್ರವಲ್ಲದೆ, ಶಾಪಾನುಗ್ರಹ ಶಕ್ತಿಯನ್ನೂ ಪಡೆದಿದ್ದು. ವಿದ್ವದಗ್ರಗಣ್ಯರೆಂದೂ ಪ್ರಸಿದ್ಧರಾದುದು ಅವರ ವ್ಯಕ್ತಿತ್ವದ ಹಿರಿಮೆ ಸುಮಾರು ಐವತ್ತು ವರ್ಷಗಳು ಅವರು ಪೀಠದ ಮೇಲಿದ್ದರು. ಇದ್ದಷ್ಟೂ ದಿನ ಅವರು ವಿಪುಲವಾದ ಆಧ್ಯಾತ್ಮ ಶಕ್ತಿಯ ಕೇಂದ್ರವಾಗಿ, ಸಾಮಾಜಿಕ ಶುದ್ಧಿಗೆ ಪ್ರಚೋದಕರಾಗಿ ಮೆರೆದರು. ಮಧುರೆಯ ತಿರುಮಲ ನಾಯಕ, ತಂಜಾವೂರಿನ ವಿಜಯರಾಘವ ನಾಯಕ, ವಿಜಯನಗರದ ವೆಂಕಟಪತಿರಾಯ, ಮೈಸೂರಿನ ದೊಡ್ಡದೇವರಾಜ ಒಡೆಯರು, ಕೊಲ್ಹಾಪುರದ ಶಿವಾಜಿ ಮಹಾರಾಜ, ಮೇಲೆ ಹೇಳಿದ ಇಬ್ಬರು ನವಾಬರು ಎಲ್ಲರೂ ಅವರನ್ನು ಭಕ್ತಿಯಿಂದ ಕಂಡುಕೊಂಡರು.

ಮಾಧ್ವಸಾರಸ್ವತ ಸಂಪ್ರದಾಯದಲ್ಲಂತೂ ಅವರು 'ಟಿಪ್ಪಣ್ಯಾಚಾರ್ಯ ಸಾರ್ವಭೌಮರು'. ಅವರವೇದು ನಲವತ್ತೇಳು ಪ್ರೌಢಗ್ರಂಥಗಳು ಉಳಿದಿವೆ. ವೇದತ್ರಯ ವಿವೃತ್ತಿ, ಪುರುಷ ಸೂಕ್ತವೇ ಮೊದಲಾದ ಐದು ವೈದಿಕ ಸೂಕ್ತಗಳಿಗೆ ವ್ಯಾಖ್ಯೆಗಳು, ಹತ್ತು ಉಪನಿಷತ್ತುಗಳಿಗೆ ಖಂಡಾರ್ಥ, ಮಧ್ವಾಚಾರ್ಯರ ದಶಪ್ರಕರಣಗಳಿಗೆ ವ್ಯಾಖ್ಯೆಗಳು, ಜಯತೀರ್ಥರ ಟೀಕಾಗ್ರಂಥಗಳಿಗೆ ಟಿಪ್ಪಣಿಗಳು ಮೊದಲಾದುವು ಇಂದಿಗೂ ಪ್ರಸಿದ್ಧವಾಗಿವೆ, ಜಯತೀರ್ಥರ 'ನ್ಯಾಯ ಸುಧಾ' ಎನ್ನುವ ಮಹಾಗ್ರಂಥಕ್ಕೆ ಅವರು ಸಿದ್ಧಪಡಿಸಿದ 'ಪರಿಮಳಾ' ಅವರಿಗೆ ಪರಿಮಳಾಚಾರ್ಯರೆನ್ನುವ ಪ್ರಶಸ್ತಿಯನ್ನು ಗಳಿಸಿಕೊಟ್ಟಿದೆ.

ಅವರು ಜೈಮಿನಿಯ ಪೂರ್ವಮೀಮಾಂಸಾದರ್ಶನವನ್ನು ಕುರಿತು ಬರೆದ 'ಭಾಟ್ಟ ಸಂಗ್ರಹ'ವನ್ನು ಆ ಕಾಲದ ಪಂಡಿತೋತ್ತಮರೆಂದು ಪ್ರಸಿದ್ಧರಾಗಿದ್ದ ಮಧುರೆಯ ತಿರುಮಲನಾಯಕನ ಮಹಾ ಮಂತ್ರಿಯಾಗಿದ್ದ ನೀಲಕಂಠ ದೀಕ್ಷಿತರು ಆನೆಯ ಮೇಲಿರಿಸಿ ಮೆರವಣಿಗೆ ಮಾಡಿಸಿದರಂತೆ! ಸಂನ್ಯಾಸಿಗಳಾಗುವ ಮೊದಲೆ ರಾಜಮನ್ನಾರುಗುಡಿಯಲ್ಲಿ ತಮ್ಮ ಗುರುಗಳಾದ ಸುಧೀಂದ್ರ ತೀರ್ಥರೊಂದಿಗೆ ಸಂಚಾರದಲ್ಲಿದ್ದಾಗ ವ್ಯಾಕರಣ ಶಾಸ್ತ್ರದಲ್ಲಿ ತಮ್ಮ ಪ್ರೌಢಿಮೆಯನ್ನು ಪ್ರದರ್ಶಿಸಿ ಗುರುಗಳಿಂದಲೇ 'ಮಹಾ ಭಾಷ್ಯಾಚಾರ್ಯ'ರೆಂದು ಮರ್ಯಾದೆ ಮಾಡಿಸಿಕೊಂಡರು. ಭಗವದ್ಗೀತೆಯ ಮೇಲೆ ಅವರು ಬರೆದಿರುವ 'ಗೀತಾರ್ಥ ಸಂಗ್ರಹ' (ಗೀತಾ ವಿವೃತ್ತಿ) ಮತ್ತು 'ಗೀತಾತಾತ್ಪರ್ಯ(ನ್ಯಾಯದೀಪ) ವಿವರಣ' ಇವು ಗೀತಾ ಸಾಹಿತ್ಯದಲ್ಲಿ ಮೈಲಿಗಲ್ಲುಗಳು.

ಕುಂಭಕೋಣದ ಪಾಷ್ಮಿಕ ವಂಶದಲ್ಲಿ ಯಜುಷಶಾಖೆ ಗೌತಮಗೋತ್ರದ ಬೀಗಮುದ್ರೆ ಮನೆತನದ ವೈಣಿಕ ತಿಮ್ಮಣ್ಣ ಭಟ್ಟರ ಮಗನಾಗಿ 1601 ಮನ್ಮಥ ಸಂವತ್ಸರದ ಫಾಲ್ಗುಣ ಶುಕ್ಲ ಸಪ್ತಮೀ ಗುರುವಾರ ಹುಟ್ಟಿದ ಇವರು ಬಡತನದಲ್ಲಿಯೇ ಬೆಳೆದು ಬವಣೆಬಟ್ಟರು. ಎಳೆತನದಲ್ಲಿಯೇ ತಂದೆ ತಾಯಿಯರನ್ನು ಕಳೆದುಕೊಂಡು, ಅಣ್ಣನ ಬಳಿ ಬೆಳೆದು, ಸುಧೀಂದ್ರತೀರ್ಥ ಸ್ವಾಮಿಗಳಲ್ಲಿ ವಿದ್ಯಾಭ್ಯಾಸಮಾಡಿ, ತಮ್ಮ ಪ್ರತಿಭೆಯಿಂದಲೂ ಗುರುಗಳ ಅನುಗ್ರಹದಿಂದಲೂ 'ಅಖಿಲಕಲಾಮೂರ್ತಿ' ಯಾದವರು. ಸಂನ್ಯಾಸಿಗಳಾಗಿ ಜಗದ್ಗುರುಗಳಾಗುವವರೆಗೂ ಅವರನ್ನು ಬಡತನ ಬಿಡಲಿಲ್ಲ.

ಸುಧೀಂದ್ರರು ಇವರ ಯೋಗ್ಯತೆಯನ್ನು ಅರಿತುಕೊಂಡು ಅವರೇ ತಮ್ಮ ಉತ್ತರಾಧಿಕಾರಿಯಾಗತಕ್ಕವರೆಂದು ನಿಶ್ಚಯಿಸಿ ಅವರಿಗೆ ಸಂನ್ಯಾಸ ದೀಕ್ಷೆಯನ್ನು ಕೊಟ್ಟುದು 1621ರಲ್ಲಿ; ಆಗ ವೆಂಕಟನಾಥ ಭಟ್ಟರಿಗೆ (ಇದು ರಾಘವೇಂದ್ರ ಸ್ವಾಮಿಗಳ ಮೊದಲ ಹೆಸರು) 20 ವರ್ಷವಷ್ಟೇ. ಆಗಲೇ ಅವರಿಗೆ ಮದುವೆಯಾಗಿದ್ದು ಒಂದು ಮಗುವೂ ಇದ್ದಿತು. ಅವರಿಗೆ ಸಂನ್ಯಾಸಿಯಾಗುವ ಬಯಕೆ ಇರಲಿಲ್ಲ. ಆದರೆ ಗುರುಗಳ ಒತ್ತಾಯಕ್ಕೆ ಮಣಿಯಬೇಕಾಯಿತು. ಸಂನ್ಯಾಸವನ್ನು ಸ್ವೀಕರಿಸಿದೊಡನೆ ಅವರ ಹೆಂಡತಿಯು ವಿಯೋಗವನ್ನು ತಡೆಯಲಾರದೆ ಬಾವಿಗೆ ಬಿದ್ದು ಪ್ರಾಣ ಕಳೆದುಕೊಂಡಳೆಂದು ಕಥೆಯಿದೆ. ಆಕೆಯು ರಾಘವೇಂದ್ರ ಸ್ವಾಮಿಗಳನ್ನು ಪಿಶಾಚಿಯಾಗಿ ಕಾಡಿದಳಂತೆ; ಅವರು ತಮ್ಮ ತಪಃಶಕ್ತಿಯಿಂದ ಆಕೆಯ ಪಿಶಾಚಿ ಜನ್ಮವನ್ನು ನೀಗಿಸಿದರಂತೆ.

ಮೂರು ವರ್ಷಗಳನಂತರ ಗುರುಗಳು ತೀರಿಕೊಳ್ಳಲು ರಾಘವೇಂದ್ರ ಸ್ವಾಮಿಗಳು ಪೀಠಾಧಿಪತಿಗಳಾದರು. ಅವರಿಗೆ ಮೊದಲೆ ಸುಧೀಂದ್ರತೀರ್ಥರಿಂದ ಸಂನ್ಯಾಸಾಶ್ರಮವನ್ನು ಪಡೆದಿದ್ದ ಯಾದವೇಂದ್ರರೆನ್ನುವ ಆಶ್ರಮಜ್ಯೇಷ್ಠ ಯತಿಗಳಿಗೂ, ಗುರುಗಳೊಂದಿಗೇ ಇದ್ದು ಅವರ ನಿರ್ಯಾಣ ಸಮಯದಲ್ಲಿ ಪೂಜಾಧಿಕಾರವನ್ನೂ ಪೀಠಾಧಿಕಾರವನ್ನೂ ಪಡೆದ ರಾಘವೇಂದ್ರರಿಗೂ ವಿರಸ ತಲೆದೋರಿ ತಂಜಾವೂರಿನ ರಘುನಾಥನಾಯಕನು ಅದನ್ನು ಪರಿಹರಿಸಿದನೆಂದು ಒಂದು ಕಥೆಯಿದೆ. ಇದರ ನಿಜಾಂಶವೆಷ್ಟೋ ಹೇಳಬರುವುದಿಲ್ಲ, ರಾಘವೇಂದ್ರಸ್ವಾಮಿಗಳ ಪಟ್ಟಕ್ಕೇನೂ ತೊಡಕುಂಟಾಗಲಿಲ್ಲವೆನ್ನುವುದಂತೂ ನಿಜ.

ಮುಂದೆ ಕೆಲವು ವರ್ಷಗಳಲ್ಲಿಯೇ ಯಾದವೇಂದ್ರರು ಆಂಧ್ರಪ್ರದೇಶದ ಕೃಷ್ಣಾ ನಿಲ್ದಾಣಕ್ಕೆ ಎಂಟು ಮೈಲಿ ದೂರ ಇರುವ ಮೂಡುಮಲೆ ಎನ್ನುವ ಹಳ್ಳಿಯಲ್ಲಿ ತೀರಿಕೊಂಡರು.

ಸಂಚಾರ–ನಿರ್ಯಾಣ

ಮಠದ ಆಧಿಪತ್ಯವನ್ನು ವಹಿಸಿಕೊಂಡನಂತರ ಸ್ವಾಮಿಗಳು ಸಂಚಾರಕ್ಕೆ ಹೊರಟು ಮಧುರೆ, ಶ್ರೀರಂಗ. ಕಾಂಚಿಪುರ, ರಾಮೇಶ್ವರ, ಉಡುಪಿ, ಕೊಡಗು, ಹರಿಹರ, ಹಂಪಿ, ನವವೃಂದಾವನ, ಮಳಖೇಡ. ಮೈಸೂರು ರಾಜ್ಯದಲ್ಲಿ ನಂಜನಗೂಡು, ಶ್ರೀರಂಗಪಟ್ಟಣ, ರಾಮನಾಥಪುರ, ಚಿತ್ರದುರ್ಗ, ಗದಗು, ಹುಬ್ಬಳ್ಳಿ ಮೊದಲಾದ ಕ್ಷೇತ್ರಗಳನ್ನು ಸಂದರ್ಶಿಸಿ ಉತ್ತರ ಭಾರತದ ಯಾತ್ರೆಯನ್ನು ಕೈಗೊಂಡರು. ಬದರಿಯವರೆಗೂ ಹೋಗಿ ಹಿಂದಿರುಗಿ ಬರುತ್ತ ಪಂಢರಪುರ. ಕೊಲ್ಲಾಪುರ ಮೊದಲಾದ ಕಡೆ ತಿರುಗಾಡಿದರು. ಹೀಗೆ ಆದವಾನಿಗೆ ಬಂದಾಗಲೇ ಕಂದನಾತಿಗ್ರಾಮದ ವೆಂಕಣ್ಣನನ್ನು ಆಶೀರ್ವದಿಸಿ ಆದವಾನಿಯ ನವಾಬನ ದಿವಾನನಾಗುವಂತೆ ಮಾಡಿದರು ; ಆತನು ಇವರ ಭಕ್ತನಾಗಿ ಉಳಿದನು.

ಮತ್ತೊಮ್ಮೆ ದಕ್ಷಿಣ ಭಾರತವನ್ನೆಲ್ಲ ಸುತ್ತಾಡಿ ಬಂದು ವೆಂಕಣ್ಣಪಂತನ ಪ್ರಭಾವವಿದ್ದ ಆದವಾನಿಯ ಸಮೀಪ ಮಂಚಾಲೆಯಲ್ಲಿ ಬೃಂದಾವನ ಪ್ರವೇಶ ಮಾಡಿದರು. 1671 ಇದು ನಡೆದ ವರ್ಷ. 'ಸುವಿರೋಧಿ ಸಂವತ್ಸರದ ಶ್ರಾವಣ ವರ ದ್ವಿತೀಯಾ ರವಿವಾರ ತುಂಗಭದ್ರಾ ತೀರದಾ ! ನವಸುಮಂತ್ರಾಲಯದಿ ದೇಹವನು ಬಿಟ್ಟು ಮಾಧವನ ಪುರವೈದಿದ ಮಹಾತ್ಮರಿವರೆ'ಂದು ಜಗನ್ನಾಥದಾಸರು ಬರೆದಿಟ್ಟಿದ್ದಾರೆ. ಅವರು ಬೃಂದಾವನಸ್ಥರಾದುದು ರವಿವಾರವಲ್ಲ, ಶುಕ್ರವಾರ ಎಂದು ಒಂದು ಎಣಿಕೆಯಿದೆ.

ರಾಘವೇಂದ್ರ ಮಠ

ಅವರನಂತರ ಪೀಠಾಧಿಪತಿಗಳಾದವರು ಅವರ ಶಿಷ್ಯರಾಗಿದ್ದ ಯೋಗೀಂದ್ರತೀರ್ಥರು. ಇವರು ಮುಂದೆ ಏಳು ವರ್ಷ ಮಾತ್ರ ಬದುಕಿದ್ದು, ಅನಂತರ ಸೂರೀಂದ್ರ ತೀರ್ಥರು ನಾಲ್ಕು ವರ್ಷ ಆಳಿದಮೇಲೆ, ಸುಮತೀಂದ್ರ ತೀರ್ಥರು ಪಟ್ಟಕ್ಕೆ ಬಂದರು. ಇವರ ಕಾಲ (1692-1725)ದಲ್ಲಿ ಮಠ

ಮತ್ತೆ ಪ್ರಸಿದ್ಧವಾಯಿತು; 'ಸುಮತೀಂದ್ರ ಮಠ' ಎನ್ನುವವರೆಗೂ ಪ್ರಭಾವ ಶಾಲಿಯಾಯಿತು.

ಈ ಮಠದ ಪರಂಪರೆಯಲ್ಲಿ ಹದಿನೇಳನೆಯ ಗುರುಗಳಾಗಿದ್ದ ಸುಜನೇಂದ್ರ ತೀರ್ಥ (1807-1836)ರನ್ನು ಮೈಸೂರಿನ ಮುಮ್ಮಡಿ ಕೃಷ್ಣರಾಜ ಒಡೆಯರು "ಮಂಚಾಲೆಯಿಂದ ಕರೆಸಿ ನಂಜನಗೂಡಿನಲ್ಲಿ ಮಠವನ್ನು ಕಟ್ಟಿಸಿಕೊಟ್ಟು, ಹಗಲು ದೀವಟಿಗೆ ಬಿರುದನ್ನು ನೂತನವಾಗಿ ಕೊಟ್ಟು, ಅನೇಕ ಗ್ರಾಮ ಭೂಮಿಗಳನ್ನೂ ಚಿನ್ನ ಬೆಳ್ಳಿಯ ಪಾತ್ರೆಗಳನ್ನೂ ವಸ್ತ್ರಾಭರಣ ಮುಂತಾದ ಪೂಜೋಪಕರಣ ಗಳನ್ನೂ ಒಪ್ಪಿಸಿದರು" (ಶ್ರೀಮನ್ಮಹಾರಾಜರವರ ವಂಶಾವಳಿ, ಭಾಗ ಎರಡು, 1922 ಮೈಸೂರು ಅರಮನೆಯ ಪ್ರಕಾಶನ). ಇದು ನಡೆದ ವರ್ಷ 1835.

ಅಲ್ಲಿಯವರೆಗೆ ರಾಘವೇಂದ್ರ ಮಠವು ತಮಿಳುನಾಡು, ಮಹಾರಾಷ್ಟ್ರ ಗಳಲ್ಲಿಯೇ ಬಹುಮಟ್ಟಿಗೆ ಸಂಚರಿಸುತ್ತಿದ್ದಿತು. ರಾಘವೇಂದ್ರಸ್ವಾಮಿಗಳ ಹಿಂದೆ ಸುಧೀಂದ್ರರೂ ವಿಜಯೀಂದ್ರರೂ ಕುಂಭಕೋಣದಲ್ಲಿಯೇ ನೆಲೆಸಿದ್ದರು; ರಾಘ ವೇಂದ್ರ ಸ್ವಾಮಿಗಳು ಕುಂಭಕೋಣದವರೇ ಆದರೂ ತಂಜಾವೂರಿನಲ್ಲಿ ಮುಖ ವಾಗಿ ಇದ್ದವರು. ಆದವಾನಿಯ ನವಾಬನಿಂದ ಮಂಚಾಲೆಯನ್ನು ಪಡೆದನಂತರ ಅಲ್ಲಿ ಬೃಂದಾವನಸ್ಥರಾದರಷ್ಟೆ. ಅಲ್ಲಿಂದ ಮುಂದೆ ಈ ಮಠದ ಸ್ವಾಮಿಗಳು ಆಂಧ್ರಪ್ರದೇಶ, ಮಹಾರಾಷ್ಟ್ರ, ಮೈಸೂರು ಕಡೆ ನೆಲೆಸಲಾರಂಭಿಸಿದರು. ವರ ದೇಂದ್ರರು (1761-1785) ಪೂನಾದಲ್ಲಿಯೂ, ಭುವನೇಂದ್ರರು (1785-1799) ಗದ್ವಾಲದಲ್ಲಿಯೂ, ಸುಜನೇಂದ್ರರು (1807-1836) ನಂಜನ ಗೂಡಿನಲ್ಲಿಯೂ ನೆಲೆಸಿದ್ದರು.

ಸುಜನೇಂದ್ರರೂ, ಆ ಕಾಲದ ಹಿರಿಯ ಸ್ವಾಮಿಗಳಾಗಿದ್ದ ಸುಬೋಧೇಂದ್ರ ರೂ (1799-1835) ಮುಮ್ಮಡಿ ಕೃಷ್ಣರಾಜ ಒಡೆಯರಿಂದ ಸನ್ಮಾನಿಸಲ್ಪಟ್ಟು ನಂಜನಗೂಡಿನಲ್ಲಿಯೇ ಇರಲಾರಂಭಿಸಿದರಾಗಿ ಮಠವು 'ನಂಜನಗೂಡು ರಾಘ ವೇಂದ್ರ ಮಠ'ವೆಂದೇ ವ್ಯವಹಾರವಾಗಿದೆ. ಇಂದಿಗೂ ಈ ಮಠದ ಸ್ವಾಮಿಗಳು ನಂಜನಗೂಡಿನವರೇ; ಹಿಂದಿನ ಸ್ವಾಮಿಗಳಲ್ಲಿ ಐದಾರು ಮಂದಿ ಬೃಂದಾವ ನವಾಗಿರುವುದು ಇಲ್ಲಿಯೇ. ಹೀಗೆ ನಂಜನಗೂಡು ಮಠಕ್ಕೂ ಮಂತ್ರಾಲಯದ ಬೃಂದಾವನಕ್ಕೂ ನಿಕಟಸಂಬಂಧ ಉಳಿದುಬಂದಿದೆ.

ಶೃಂಗೇರಿ

ಶಂಕರಾಚಾರ್ಯರಿಂದ ಪ್ರವರ್ತಿತವಾದುದೆಂಬ ಮಠಗಳಲ್ಲೆಲ್ಲ ಶೃಂಗೇರಿ ಮಠವೇ ಪ್ರಾಚೀನವಾದುದು; ಅಷ್ಟು ಮಾತ್ರವಲ್ಲ, ಇದೇ ಮಠವೇ ಪ್ರಮುಖ ವಾದುದು. ಇದಕ್ಕೆ ಕಾರಣವೂ ಇಲ್ಲದೆ ಇಲ್ಲ. ಮಠದ ಗುರುಪರಂಪರೆಯಲ್ಲಿ ಹಲವಾರು ಅತ್ಯಂತ ಮಹಿಮಾನ್ವಿತರಾದ ಸ್ವಾಮಿಗಳು ಬಂದಿದ್ದಾರೆ. ಇವರ ವೈದುಷ್ಯದಿಂದ ಮತ್ತು ತಪೋಬಲದಿಂದ ಮಠಕ್ಕೆ ರಾಜಾಶ್ರಯವೂ ಮಹಾಜನರ ಆದರವೂ ವಿಪುಲವಾಗಿ ಒದಗಿದುವು. ಮಠದಿಂದ ಧರ್ಮಪ್ರಸಾರ, ಸಮಾಜ ಸಂಘಟನೆಗಳೆ ರಡೂ ನಡೆದಿದ್ದುವು. ಅದ್ವೈತ ಸಿದ್ಧಾಂತವು ನಮ್ಮ ದೇಶದಲ್ಲಿ ಬೇರೂರಲು ಈ ಮಠದ ಸ್ವಾಮಿಗಳು ಬಹುವಾಗಿ ನೆರವಾಗಿದ್ದಾರೆ. ವೇದಾಂತದಲ್ಲಿ ಇಂದು ಪ್ರಚಾರದಲ್ಲಿರುವ ಕೆಲವು ಪ್ರಕರಣ ಗ್ರಂಥಗಳು ಈ ಮಠದಿಂದಲೇ ಬಂದುವು. ಕೆಲವರಂತೂ ನಿಸ್ಸೀಮ ತಪಸ್ವಿಗಳೆಂದು ಪ್ರಖ್ಯಾತರಾಗಿ ಮಠದ ಮರ್ಯಾದೆ ಯನ್ನು ಕಾಪಾಡಿದ್ದಾರೆ. ಪರಂಪರೆಯಲ್ಲಿ ಜೊಳ್ಳು ಇಲ್ಲವೆನ್ನಲಾಗದು; ಆದರೆ ಕಾಳೇ ಹೆಚ್ಚು ಎನ್ನುವುದು ಸಮಾಧಾನ. ವಿಜಯನಗರ ಸಾಮ್ರಾಜ್ಯವನ್ನು ಕಟ್ಟುವ ಕನಸನ್ನು ಕಂಡ ವಿದ್ಯಾತೀರ್ಥರೂ, ಆ ಕನಸನ್ನು ಕಾರ್ಯದಲ್ಲಿ ಇಳಿಸಿ ಕೃತಾರ್ಥರಾದ ವಿದ್ಯಾರಣ್ಯರೂ ಶೃಂಗೇರಿಪೀಠದವರೇ. ಇವರ ಕಾಲದಲ್ಲೇ ಶೃಂಗೇರಿಯು ಸಂಸ್ಥಾನವಾದದ್ದು.

ಕ್ರಿಸ್ತಾಬ್ದ ಏಳನೆಯ ಶತಮಾನದಲ್ಲಿ ಶಂಕರಾಚಾರ್ಯರು ಶೃಂಗೇರಿಗೆ ಬಂದಾಗಲೇ ಇದು ಶೋಭಾಯಮಾನವಾದ ಪುಣ್ಯಾಶ್ರಮವಾಗಿದ್ದಿತು; ವಿಭಾಂಡಕ ಋಷಿಯು ತಪಸ್ಸು ಮಾಡಿದ ಸ್ಥಳವೆಂದೂ, ಋಷ್ಯಶೃಂಗನ ತೌರೂ ರೆಂದೂ ಪುರಾಣ ಪ್ರಸಿದ್ಧಿಯಿದ್ದಿತು. ಋಷ್ಯಶೃಂಗಗಿರಿಯೇ ರೂಪಕೆಟ್ಟು ಶೃಂಗೇರಿಯಾಯಿತೆಂದು ಹೇಳುತ್ತಾರೆ. ಶ್ರವಣಬೆಳ್ಗೊಳದ ಬಳಿಯ ಶ್ರವಣ

ಗಿರಿಯು ಸ್ರವಣೇರಿಯಾದಂತೆ. . ಸಹ್ಯಾದ್ರಿಯ ಅಂಗವಾದ ವರಾಹಗಿರಿಯಿಂದ ತುಂಗೆಯು ನದಿಯಾಗಿ ಹರಿದು ಶೃಂಗೇರಿಯ ಪರಿಸರವನ್ನೆಲ್ಲ ಸೊಬಗಿನ ಬೀಡಾಗಿ ಮಾಡಿದ್ದಾಳೆ. ಇಲ್ಲಿನ ಕ್ಷೇತ್ರನಾಯಕ ಭೂವರಾಹ ಸ್ವಾಮಿ; ಪುರಾತನ ದೇವತೆ ಮಲಹಾನಿಕರೇಶ್ವರ. ಶಂಕರಾಚಾರ್ಯರು ಇಲ್ಲಿಗೆ ಬಂದು ಬಂಡೆಯೊಂದರ ಮೇಲೆ ಶ್ರೀಚಕ್ರವನ್ನು ರಚಿಸಿ ಚಕ್ರದುರ್ಗಾಯಂತ್ರದಿಂದ ಶಾರದೆಯನ್ನು ಇಲ್ಲಿ ನಿಲ್ಲಿಸಿದರೆಂದು ಪ್ರತೀತಿ. ಇಲ್ಲಿಯೇ ಹನ್ನೆರಡು ವರ್ಷಗಳ ಕಾಲ ಇದ್ದರೆಂದೂ ಅನಂತರ ಕೇರಳ ಪ್ರಾಂತ್ಯದಲ್ಲಿ ತಮ್ಮ ತಾಯಿ ರುಗ್ಣಾವಸ್ಥೆಯಲ್ಲಿರುವುದನ್ನು ಅರಿತು ಆಕೆಯ ಬಳಿಗೆ ಹೊರಡುವಾಗ ಶೃಂಗೇರಿಯಲ್ಲಿ ಕೂಡಿಕೊಂಡಿದ್ದ ಶಿಷ್ಯಕೋಟಿಯನ್ನು ನಿರ್ವಹಿಸಲು ತಮ್ಮ ಶಿಷ್ಯ ಸುರೇಶ್ವರರನ್ನು ನಿಯಮಿಸಿದರೆಂದೂ ಇದೇ ಶೃಂಗೇರಿ ಪೀಠದ ಉದಯವಾಯಿತೆಂದೂ ಐತಿಹ್ಯವಿದೆ. ಶಂಕರರ ಸಾಕ್ಷಾತ್ ಶಿಷ್ಯರಾದ ಸುರೇಶ್ವರರೇ ಶೃಂಗೇರಿ ಗುರು ಪರಂಪರೆಯ ಪ್ರವರ್ತಕರು. ಇವರ ಅಧಿಷ್ಠಾನ (ಸಮಾಧಿ) ಶೃಂಗೇರಿಯಲ್ಲೇ ಇದೆ.

ದಕ್ಷಿಣಾಮ್ನಾಯ

ಈ ಮಠದ ಪ್ರಾಚೀನ ಗುರುಗಳ ಕಾಲದಲ್ಲಿ ಮಠ ಎಂಬ ಸಂಸ್ಥೆ ಇದ್ದಿರಲಾರದು. ದಕ್ಷಿಣಾಮ್ನಾಯವೆಂದು ವೇದಾಂತ ವಿದ್ಯಾಪ್ರಸಾರದ ಕೇಂದ್ರವಾಗಿದ್ದಿರಬಹುದಷ್ಟೆ. ಶೃಂಗೇರಿ, ಕಿಗ್ಗ ಮುಂತಾದೆಡೆಗಳಲ್ಲಿ ಈ ಸ್ವಾಮಿಗಳು ಆಶ್ರಮಗಳನ್ನೂ ಕಟ್ಟಿಕೊಂಡಿದ್ದಂತೆ ತೋರುತ್ತದೆ. ಈ ಧರ್ಮಪೀಠವು ಶೃಂಗೇರಿಯಲ್ಲೇ ಮೂಡಿ ಮಠವಾದುದು ಕ್ರಿಸ್ತಾಬ್ದ 1346ರ ಸುಮಾರಿಗೆ. ಸಂಗಮನ ಮಗ ಹರಿಹರನು ವಿಜಯನಗರ ಸಾಮ್ರಾಜ್ಯದ ಪ್ರಥಮ ರಾಜನಾದ ಮೇಲೆ ಶೃಂಗೇರಿಯ ಅಗ್ರಹಾರವನ್ನೂ, ವಿದ್ಯಾರಣ್ಯ ಪುರವನ್ನೂ ನಿರ್ಮಿಸಿದನೆಂದು ಶಾಸನಗಳಿಂದ ಸ್ಪಷ್ಟವಾಗುತ್ತದೆ; ಆಗ ತಾನೇ ಶೃಂಗೇರಿಯಲ್ಲಿ ವಿದ್ಯಾತೀರ್ಥರೆಂಬುವರು ಸ್ವಾಮಿಗಳಾಗಿ ಹೋಗಿದ್ದರು. ಪರಂಪರೆಯಲ್ಲಿ ಹತ್ತನೆಯವರಾದ ಇವರು ತಪಸ್ವಿಗಳು, ಇವರ ಪ್ರೇರಣೆಯೇ ವಿಜಯನಗರ ಸಾಮ್ರಾಜ್ಯವಾಗಿ ರೂಪ ತಳೆಯಿತು. ಇವರ ನೆನಪಿಗೆಂದೇ ಅದನ್ನು ಮೊದಲು ವಿದ್ಯಾನಗರವೆಂದು ವ್ಯವಹರಿಸಿದರು. 1355ರ ಶಿಲಾಶಾಸನವೊಂದು "ವಿದ್ಯಾತೀರ್ಥ

ಯತೀಂದ್ರೋಯಮತಿಶೇತೇ ದಿವಾಕರಂ; ತಪೋ ಹರತಿ ಯತ್ಸುಂಸಾಂ ಅಂತರ್ಬಹಿರಹರ್ನಿಶಂ" ಎಂದು ಇವರನ್ನು ಬಣ್ಣಿಸುತ್ತದೆ. ಇವರು 1228 ರಂದು ಪಟ್ಟಕ್ಕೆ ಬಂದರೆಂದೂ 1333ರಲ್ಲಿ ಲಂಬಿಕಾಯೋಗ ತತ್ಪರರಾಗಿ ಮುಕ್ತರಾದರೆಂದೂ ತಿಳಿದು ಬರುತ್ತದೆ. ಶೃಂಗೇರಿಯ ಯಶಸ್ಸಿಗೆ ಇವರೇ ಮೂಲಕಾರಣರೆನ್ನಬಹುದು. ಇವರ ಪ್ರಭಾವವನ್ನು ಅಂಗೀಕರಿಸಿಯೇ ಅಂದಿನಿಂದ ಇಂದಿನವರೆಗೂ ಶೃಂಗೇರಿಯ ಸ್ವಾಮಿಗಳ ಪ್ರಶಸ್ತಿಯಲ್ಲಿ 'ವಿದ್ಯಾ ಶಂಕರ ಪಾದ ಪದ್ಮಾರಾಧಕ'ರೆಂಬ ಮಾತು ಸೇರಿರುವುದು : ಶೃಂಗೇರಿ ಮಠದ ವ್ಯವಹಾರವೆಲ್ಲ ಇಂದಿಗೂ ವಿದ್ಯಾಶಂಕರರ ಹೆಸರಿನಲ್ಲೇ ನಡೆಯುತ್ತದೆ. ಇವರು ಸಮಾಧಿಸ್ಥರಾದ ಸ್ಥಳದಲ್ಲಿ ಮೂರು ವರ್ಷಗಳನಂತರ ಅವರ ಶಿಷ್ಯ ಭಾರತೀ ತೀರ್ಥರು (ಸಂನ್ಯಾಸ 1328, ಸಮಾಧಿ 1380) ದೇವಾಲಯವೊಂದನ್ನು ಕಟ್ಟಿಸಿದರು.

ವಿದ್ಯಾಶಂಕರಾಲಯ

ಇದೇ ಶೃಂಗೇರಿಯಲ್ಲಿ ಅತಿ ಪ್ರಾಚೀನವೆನಿಸಿದ ಮಂದಿರ. ಅದಕ್ಕೆ ಮುಂಚೆ ಗುಡಿಗಳಿರಲಿಲ್ಲವೆಂದಲ್ಲ. ನಿದರ್ಶನಕ್ಕೆ ಊರಿನ ನಡುವೆ ಇರುವ ಬೆಟ್ಟದ ಮಲಹಾನಿಕರೇಶ್ವರನ ಗುಡಿಯೇ ತುಂಬಾ ಪ್ರಾಚೀನವಾದುದು. ಇದನ್ನು ಗಿರಿಮಲ್ಲಿಕಾರ್ಜುನನ ಗುಡಿಯೆಂದೂ ಕರೆಯುತ್ತಾರೆ. ವಿಭಾಂಡಕ ಋಷಿಯು ತೀರಿಕೊಂಡ ಸ್ಥಳದಲ್ಲೇ ಈ ಗುಡಿಯಾಯಿತೆಂದು ಪ್ರತೀತಿ. ಆದರೆ ಮೊದಲಿನ ಗುಡಿ ಹಲಗೆಗಳ ಕಟ್ಟಡವಾಗಿದ್ದಿತು; ಅದು ಶಿಲಾಮಯ ಮಂದಿರವಾದುದು ವಿಜಯನಗರದ ಅರಸರ ಕಾಲದಲ್ಲಿ. 1671 ರಲ್ಲಿ ಮಠದ ಪುಟ್ಟಪ್ಪಯ್ಯ ಎಂಬಾತನಿಗೆ ಈ ಕಟ್ಟಡವನ್ನು ದುರಸ್ತಿ ಮಾಡಿದ ಪುಣ್ಯ ಸೇರಬೇಕು. ಅದಕ್ಕೆ ಮುಂಚೆ 1621ರ ಸುಮಾರಿಗೆ ಕೆಳದಿಯ ಅರಸ ವೆಂಕಟಪ್ಪನಾಯಕನು ಶೃಂಗೇರಿ ಯನ್ನು 'ಪುನರ್ ಪ್ರತಿಷ್ಠೆಯಂ ಮಾಡಿ'ದ ಸಮಯದಲ್ಲಿ ಶಿಥಿಲವಾಗಿದ್ದ ಈ ದೇವಾಲಯವನ್ನೊಮ್ಮೆ ದುರಸ್ತಿ ಮಾಡಿಸಿದ್ದನಂತೆ. 1685 ರಲ್ಲಿ ಇಕ್ಕೇರಿಯ ರಾಜ ಶಿವಪ್ಪ ನಾಯಕನ ಮಗಳು ಸಿದ್ಧಮ್ಮಾಜಿಯೆಂಬಾಕೆಯೇ ಈಗಿರುವ ಕಟ್ಟ ಡವನ್ನು ಕಟ್ಟಿಸಿದಳು. ಈ ದೇವಾಲಯದ ರಥೋತ್ಸವ, ದೀಪೋತ್ಸವಗಳನ್ನು

ವ್ಯವಸ್ಥೆ ಮಾಡಿದವರು ಸಚ್ಚಿದಾನಂದ ಭಾರತಿಗಳೆಂಬ (1621ರ ಸುಮಾರಿಗೆ) ಸ್ವಾಮಿಗಳು. ಆದರೆ ಶಿಲ್ಪದಿಂದ, ವಾಸ್ತುವಿನಿಂದ ವಿಶಿಷ್ಟವಾಗಿ ಮೂಡಿಬಂದ ಸ್ವತಂತ್ರ ಮಂದಿರಗಳಲ್ಲಿ ವಿದ್ಯಾಶಂಕರಾಲಯವೇ ತುಂಬ ಪ್ರಾಚೀನವಾದುದು.

ಹೊಯ್ಸಳ-ದ್ರಾವಿಡ ವಾಸ್ತು ಶೈಲಿಗಳನ್ನು ಅಳವಡಿಸಿಕೊಂಡು ವಿದ್ಯಾಶಂಕರಾಲಯವನ್ನು ಕಟ್ಟಿದ್ದಾರೆ. ವಾಸ್ತು ವಿನ್ಯಾಸವನ್ನು ಅನುಸರಿಸಿ ನಿಂತ ಮೂರಡಿ ಎತ್ತರದ ಕಲ್ಲು ಜಗತಿಯ ಮೇಲೆ ಪೂರ್ವಾಭಿಮುಖವಾಗಿ ಇರುವ ಮಂಟಪಾಕಾರದ ಈ ಮಂದಿರಕ್ಕೆ ನಾಲ್ಕೂ ದಿಕ್ಕುಗಳಲ್ಲಿ ಬಾಗಿಲುಗಳಿವೆ. ಮುಂದೆ, ಹಿಂದೆ ಒಂದೊಂದು, ಪಕ್ಕಗಳಲ್ಲಿ ಎರಡೆರಡು, ಹೀಗೆ ಒಟ್ಟು ಆರು ದ್ವಾರಗಳ ಈ ದೇವಾಲಯದಲ್ಲಿ ಗರ್ಭಗುಡಿಯಲ್ಲದೆ ಸುಖನಾಸಿ, ಪ್ರದಕ್ಷಿಣಾ ಪಥ, ನವರಂಗಗಳಿವೆ. ಒಂದೊಂದು ಬಾಗಿಲಿನ ಇಕ್ಕೆಲಗಳಲ್ಲೂ ಸೊಗಸಾದ ದ್ವಾರಪಾಲಕ ವಿಗ್ರಹಗಳು, ಹೊಯ್ಸಳ ಶೈಲಿಯ ಪ್ರಾಕಾರ ಪಂಕ್ತಿ ಶಿಲ್ಪಗಳು, ನವರಂಗದಲ್ಲಿ ದೇವತಾಮೂರ್ತಿಗಳು, ಎಲ್ಲೆಲ್ಲೂ ಲತಾ ವಿನ್ಯಾಸ ಮುಂತಾದ ಅಲಂಕರಣ ಶಿಲ್ಪ ಹೀಗೆ ಸರ್ವ ಸುಂದರವಾದ ಮಂದಿರ ಇದು. ನವರಂಗದ ಹನ್ನೆರಡು ಕಂಬಗಳು ಉತ್ತಮ ಕಲಾಕೃತಿಗಳು. ದ್ವಾದಶಾದಿತ್ಯ ಸ್ತಂಭಗಳೆಂದು ಪ್ರಸಿದ್ಧವಾದ ಈ ಹನ್ನೆರಡು ಏಕಾಂಡ ಕಂಬಗಳಲ್ಲಿ ಒಂದೊಂದರ ಮೇಲೆ ಒಂದೊಂದು ರಾಶಿ ಸಂಕೇತವನ್ನೂ, ಎಲ್ಲದರಲ್ಲೂ ಮೇಲ್ಭಾಗದಲ್ಲಿ ಗ್ರಹಪತಿಯಾದ ಸೂರ್ಯನನ್ನೂ ಮೂಡಿಸಿದ್ದಾರೆ; ವರ್ಷದ ಹನ್ನೆರಡು ಮಾಸಗಳಲ್ಲಿ ಒಂದೊಂದು ಮಾಸದಲ್ಲೂ ಪ್ರತಿದಿನವೂ ಬೆಳಿಗ್ಗೆ ಸ್ವಲ್ಪ ಹೊತ್ತು ಸೂರ್ಯನ ಬೆಳಕು ಒಂದೊಂದು ಕಂಬದ ಮೇಲೆ ಸೂರ್ಯನ ಮೂರ್ತಿ ಇರುವೆಡೆ ಬೀಳುತ್ತದೆ. ಚಾತುರ್ಯದ ಕೃತಿಯಿದು. ಹದಿನೆಂಟಡಿ ಎತ್ತರದ ಈ ನವರಂಗದಲ್ಲಿ ಭವ್ಯವಾದ ಭುವನಾಸಿಯಿದೆ.

ಶಾರದಾ ವಿಗ್ರಹ

ಸುಖನಾಸಿಯಲ್ಲಿ ಶ್ರೀಗಂಧದ ಮರದಲ್ಲಿ ಕಡೆದ ಶಾರದೆಯ ವಿಗ್ರಹವೊಂದನ್ನಿಟ್ಟಿದ್ದಾರೆ. 1711ರಲ್ಲಿ ಮಹಮ್ಮದೀಯ ಅಥವಾ ಮರಾಠ ದರೋಡೆಕಾರರು ಶೃಂಗೇರಿಯನ್ನು ಮುತ್ತಿದಾಗ ಮೂಲ ಶಾರದಾ ಮೂರ್ತಿಯನು

ಉಳಿಸಲೆಂದು ಮಠದವರು ಗರ್ಭಗುಡಿಯ ದ್ವಾರವನ್ನು ಮುಚ್ಚಿ ಗೋಡೆಯೆ ಬ್ಬಿಸಿ ಮುಂದೆ ಈ ದಾರುಮಯ ಶಾರದೆಯನ್ನು ಸರ್ವಾಭರಣ ಭೂಷಿತೆಯ ನ್ನಾಗಿ ಮಾಡಿಟ್ಟರೆಂದೂ, ದರೋಡೆಕಾರರು ನುಗ್ಗಿ ಬಂದು ಆಭರಣಗಳನ್ನೆಲ್ಲ ದೋಚಿಕೊಂಡು ವಿಗ್ರಹವನ್ನು ನದಿಗೆ ಎಸೆದರೆಂದೂ, ಅನಂತರ ಈ ರಕ್ಷಕಿ ಶಾರದೆಯನ್ನು ಮಠದವರು ನೀರಿನಿಂದ ಉದ್ಧರಿಸಿ ತಂದು ಇಲ್ಲಿಟ್ಟರೆಂದೂ ಕತೆ ಯಿದೆ. ಆದರೆ ಈಗಿರುವ ಶೃಂಗೇರಿಯ ಶಾರದಾ ವಿಗ್ರಹ ವಿದ್ಯಾರಣ್ಯರ ಕಾಲ ದ್ದೆಂದು ಸ್ಪಷ್ಟವಾಗುತ್ತದೆ. ಶಂಕರಾಚಾರ್ಯರು ಬಂಡೆಯ ಮೇಲೆ ಶ್ರೀಚಕ್ರ ಯಂತ್ರವನ್ನಷ್ಟೆ ಮೂಡಿಸಿದ್ದರೆಂದು ಸಂಪ್ರದಾಯದವರೂ ಒಪ್ಪುತ್ತಾರೆ. ಮೊದ ಲಿಗೆ ಮರದಲ್ಲಿ ಕಡೆದ ಮೂರ್ತಿಯೇ ಇದ್ದಿತೆಂದೂ, ವಿದ್ಯಾತೀರ್ಥ ಸ್ವಾಮಿಗಳು ಸಣ್ಣದೊಂದು ಬಂಗಾರದ ಶಾರದಾ ವಿಗ್ರಹವನ್ನು ಮಾಡಿಸಿ, ಅದು ತೀರ ಸಣ್ಣ ದೆಂದು ಬಗೆದು ಮತ್ತೊಂದು ಸ್ವಲ್ಪ ದೊಡ್ಡದಾದ (ಮೂರಡಿ ಎತ್ತರದ) ಪಂಚಲೋಹದ ವಿಗ್ರಹವನ್ನು ಮಾಡಿಸಿ, ದಾರು ಶಾರದೆಯನ್ನು ತೆಗೆಸಿ ಅಲ್ಲಿ ಪ್ರತಿಷ್ಠೆ ಮಾಡಿದರೆಂದೂ ತಿಳಿದುಬರುತ್ತದೆ. ಇಂದಿಗೂ ಶೃಂಗೇರಿಯ ಶಾರದಾ ದೇವಾಲಯದಲ್ಲಿ ಮೂಲಬೇರವು ಶಿಲಾ ಮೂರ್ತಿಯಲ್ಲ. ಪೂಜೆ ತಪ್ಪಿದ ಮೂರ್ತಿಯನ್ನು ತಪ್ಪಿಸಿದ ವಿದ್ಯಾತೀರ್ಥರ ಸನ್ನಿಧಿಯಲ್ಲೇ ಇಟ್ಟಿರ ಬಹುದು. ಮುಂದೆ ಒದಗಿ ಬಂದ ದರೋಡೆಕಾರರ ದಾಳಿಗೆ ಇದನ್ನೇ ಒಡ್ಡಿರ ಬಹುದು. ಸುಖನಾಸಿಯಲ್ಲಿರುವ ಈ ಮೂರ್ತಿಯು ಭಿನ್ನವಾಗಿ ಪೂಜೆಗೆ ಅನರ್ಹ ವಾಗಿದೆ; ಆದರೂ ಇದು ಇಂದಿಗೂ ಪೂಜೆಗೊಳ್ಳುತ್ತಿರುವುದೊಂದು ವಿಶೇಷ.

ಅಂತೂ ಈ ದೇವಾಲಯಕ್ಕೆ ಸ್ಫೂರ್ತಿಯನ್ನಿತ್ತ ವಿದ್ಯಾತೀರ್ಥರು ಶೃಂಗೇ ರಿಯ ಗುರುಪರಂಪರೆಯಲ್ಲಿ ತುಂಬ ಪ್ರಭಾವಶಾಲಿಗಳಾದ ಸ್ವಾಮಿಗಳು. ವಿಜಯನಗರದ ಅರಸರಾದ ಒಂದನೆಯ ಹರಿಹರ (ಹಕ್ಕ) ಮತ್ತು ಇಮ್ಮಡಿ ಬುಕ್ಕ ಇಬ್ಬರೂ ಇವರ ವಿಚಾರದಲ್ಲಿ ತುಂಬ ಭಕ್ತಿಯಿಂದ ನಡೆದು ಕೊಳ್ಳುತ್ತಿ ದ್ದುದು ಶಾಸನಗಳಿಂದ ವ್ಯಕ್ತವಾಗುತ್ತದೆ. ಅವರು ವಿದ್ಯಾತೀರ್ಥರ ಸಂದರ್ಶನ ಕ್ಕೆಂದು ಶೃಂಗೇರಿಗೆ ಅಡಿಗಡಿಗೆ ಬಂದು ಹಲವಾರು ಜಹಗೀರುಗಳನ್ನೂ ಬಹು ವಾದ ಸಂಪತ್ತನ್ನು ಮಠದ ನಿರ್ವಹಣೆಗೆ ದಾನ ಮಾಡಿದರು. ಅವರ ಶಿಷ್ಯರಾದ ಭಾರತೀತೀರ್ಥರೂ ವಿದ್ಯಾರಣ್ಯರೂ ವಿಜಯನಗರ ಸಂಸ್ಥಾನವನ್ನು ರೂಢಿ

ಸಲು ಪ್ರೇರಕರೇ ವಿದ್ಯಾತೀರ್ಥರು. ಬುಕ್ಕರಾಯನು 1355 ರಲ್ಲಿ ಶೃಂಗೇರಿಗೆ ಯಾತ್ರಾರ್ಥಿಯಾಗಿ ಬಂದಿದ್ದಾಗ ಅವನು ಸಿದ್ಧಪಡಿಸಿದ ಶಾಸನವೊಂದರಲ್ಲಿ 'ವಿದ್ಯಾತೀರ್ಥಾಯ ಗುರುವೇ ಪರಸ್ಮೈ ತೇಜಸೇ ನಮಃ । ಯಸ್ಯ ನಾಂಗೀಕೃತ ಸ್ನೇಹ ದಶಾಹಾನಿಃ ಕದಾಚನ'' ಎಂಬ ಪ್ರಶಸ್ತಿಯಿದೆ. ವಿದ್ಯಾರಣ್ಯರೂ ತಮ್ಮ ಅನುಭೂತಿಪ್ರಕಾಶದ ಆರಂಭದಲ್ಲಿ- ''ಅಂತಃಪ್ರವಿಷ್ಟಃ ಶಾಸ್ತೇತಿ ಯೋಂತ ರ್ಯಾಮಿಾ ಶ್ರುತೀರಿತಃ ಸೋಸ್ಮಾನ್ ಮುಖ್ಯಗುರುಃ ಪಾತು ವಿದ್ಯಾತೀರ್ಥ ಮಹೇಶ್ವರಃ'' ಎಂದು ಸ್ತುತಿಸಿದ್ದಾರೆ. ಭಾರತೀ ತೀರ್ಥರು ಕೂಡ ತಮ್ಮ ವೈಯಾಸಿಕನ್ಯಾಯಮಾಲೆಯನ್ನು ''ಪ್ರಣಮ್ಯ ಪರಮಾತ್ಮಾನಂ ಶ್ರೀ ವಿದ್ಯಾ ತೀರ್ಥ ರೂಪಿಣಂ'' ಎಂದು ಆರಂಭಿಸುತ್ತಾರೆ.

ಇಷ್ಟು ಹಿರಿಯ ವ್ಯಕ್ತಿಯಾದ ವಿದ್ಯಾತೀರ್ಥರ ಮೂರ್ತಿಗಳನ್ನು ಅವರ ಪೀಳಿಗೆಯವರು ಶೃಂಗೇರಿಯ ಪರಿಸರದಲ್ಲೇ ಇನ್ನೆರಡು ಕಡೆ ಪ್ರತಿಷ್ಠೆ ಮಾಡಿಸಿ ಪೂಜೆ ಸಲ್ಲಿಸುತ್ತಿದ್ದಾರೆ. ಒಂದು ಹಳೇಶೃಂಗೇರಿಯೆನಿಸಿಕೊಳ್ಳುವ ಸಿಂಹಗಿರಿ ಯೆಂಬ ಹಳ್ಳಿಯಲ್ಲಿರುವ ಚತುರ್ವಿದ್ಯೇಶ್ವರ ದೇವಾಲಯದಲ್ಲಿದೆ. ಇನ್ನೊಂದು ಶೃಂಗೇರಿಗೆ ಒಂದು ಮೈಲಿ ದೂರದಲ್ಲಿರುವ ವಿದ್ಯಾರಣ್ಯಪುರವೆಂಬ ವಿಸ್ತರಣದ ಲ್ಲಿದೆ. ಚತುರ್ವಿದ್ಯೇಶ್ವರವೆಂಬುದು ಚತುರ್ಮೂರ್ತಿ–ಮಧ್ಯೇಶ್ವರ ಎಂಬುದರ ಅಪಭ್ರಂಶ. ಈ ದೇವಾಲಯದಲ್ಲಿ ಸೊಗಸಾದ ಕರಿಯಕಲ್ಲಿನಲ್ಲಿ ಲಿಂಗದ ಆಕಾರವನ್ನು ಮೂಡಿಸಿ ನಾಲ್ಕೂ ಕಡೆಗಳಲ್ಲಿ ಸುಂದರ ಶಿಲ್ಪಗಳನ್ನುಕಡೆದಿದ್ದಾರೆ. ಒಂದು ಕಡೆ ಚತುರ್ಮುಖ ಬ್ರಹ್ಮ, ಇನ್ನೊಂದು ಕಡೆ ಚಿನ್ಮುದ್ರಾ ಭಂಗಿಯಲ್ಲಿ ಸುಖಾಸೀನನಾದ ಪರವಾಸುದೇವ-ವಿಷ್ಣು, ಮತ್ತೊಂದು ಕಡೆ ಆಸೀನನಾದ ಪಂಚಾಸ್ಯ- ಸದಾಶಿವ, ನಾಲ್ಕನೆಯ ಕಡೆ ಪದ್ಮಾಸನಸ್ಥರಾದ ವಿದ್ಯಾತೀರ್ಥರ ಪ್ರತೀಕ; ಎಲ್ಲದರ ಮೇಲೆ ಮತ್ತೊಂದು ಲಿಂಗ ಇದೆ. ನಾಲ್ಕು ಮೂರ್ತಿಗಳ ಮಧ್ಯದಲ್ಲಿರುವ ಈಶ್ವರ (ಚತುರ್ಮೂರ್ತಿ ಮಧ್ಯೇಶ್ವರ). ವಿದ್ಯಾತೀರ್ಥರ ಸ್ವರೂಪವಾದುದರಿಂದ ವಿದ್ಯೇಶ್ವರನೆಂದು ಲಿಂಗದ ಹೆಸರು. ಈ ವಿದ್ಯಾತೀರ್ಥ ಮೂರ್ತಿಗೆ ಸಂಬಂಧಪಟ್ಟಂತೆ 1380 ರಲ್ಲೇ ಮಾಡಿದ ಶಾಸನವಿದೆ. ಎಂದರೆ ಈ ಮೂರ್ತಿ ಕಡೆಯು ಪಕ್ಷ ಅಷ್ಟಾದರೂ ಪ್ರಾಚೀನವಾದುದು. ಇದು ಲಂಬಿಕಾ ಯೋಗದಲ್ಲಿರುವ ಭಂಗಿಯೆಂದು ಹೇಳುತ್ತಾರೆ. ವಿದ್ಯಾರಣ್ಯಪುರದಲ್ಲಿರುವ

ಮೂರ್ತಿ ಎರಡಡಿ ಎತ್ತರವಾಗಿದ್ದು ರುದ್ರಾಕ್ಷ ಮಾಲೆಯನ್ನು ಹಿಡಿದು ವ್ಯಾಖ್ಯಾನ ಮುದ್ರೆಯಲ್ಲಿದೆ. ವಿದ್ಯಾತೀರ್ಥರು ತಪಶ್ಚರ್ಯೆ ಮಾಡಿದ ಸ್ಥಳವು ಇಲ್ಲಿನ ವಸಿಷ್ಠಾಶ್ರಮವೆಂಬ ಪ್ರದೇಶವೆಂದು ನಿರ್ದೇಶಿಸುತ್ತಾರೆ.

ಶಾರದಾ ಮಂದಿರ

ಶೃಂಗೇರಿಯಲ್ಲಿ ಶಾರದಾ ದೇವಾಲಯವೇ ಪ್ರಸಿದ್ಧವಾದುದು. ವಿದ್ಯಾಶಂಕರ ದೇವಾಲಯದ ಬಲಗಡೆ ಇರುವ ಈ ದೇವಾಲಯವು ವಿದ್ಯಾರಣ್ಯರ ಕಾಲದ್ದೇ ಎನ್ನಬಹುದು. ಶಂಕರಾಚಾರ್ಯರ ಕಾಲದಿಂದ ವಿದ್ಯಾತೀರ್ಥರ ಕಾಲದವರೆಗೂ ಈಗಿನಂತೆ ಈ ದೇವಾಲಯವಿದ್ದ ಉಲ್ಲೇಖವಿಲ್ಲ. ಬಹುಶಃ ಸಣ್ಣ ಗುಡಿಯಾಗಿದ್ದಿರಬಹುದು. ಇಲ್ಲಿ ಶಂಕರಾಚಾರ್ಯರು ನಿರ್ಮಿಸಿದ ಶ್ರೀಚಕ್ರ ಯಂತ್ರವೇ ಸ್ವಾಮಿಗಳಿಂದ ನಿತ್ಯ ಪೂಜೆಗೊಳ್ಳುತ್ತ ಇದ್ದಿರಬಹುದು. ಅನಂತರ ದಾರುಮಯ ಮೂರ್ತಿಯೊಂದು ಈ ಸ್ಥಳದಲ್ಲಿ ಪ್ರತಿಷ್ಠಿತವಾಗಿ ವಿದ್ಯಾತೀರ್ಥರ ವರೆಗೂ ಇದ್ದಂತೆ ತಿಳಿದುಬರುತ್ತದೆ. ವಿದ್ಯಾತೀರ್ಥರು ಪಂಚಲೋಹದ ಮತ್ತು ಸುವರ್ಣದ ವಿಗ್ರಹಗಳನ್ನು ಮಾಡಿಸಿಟ್ಟ ಪ್ರಸ್ತಾಪ ಆಗಲೇ ಬಂದಿದೆ. ಅವರ ಶಿಷ್ಯರಾದ ಭಾರತೀ ತೀರ್ಥರೂ (ಸಂನ್ಯಾಸ 1328-ಮುಕ್ತಿ 1380) ವಿದ್ಯಾರಣ್ಯರೂ (ಸಂನ್ಯಾಸ 1331-ಮುಕ್ತಿ 1386) ಮೊಟ್ಟಮೊದಲ ಬಾರಿಗೆ ಸುಮಾರಾದ ದೇವಾಲಯವನ್ನು ಮಲೆನಾಡಿನ ಮಂದಿರಗಳ ಶೈಲಿಯಲ್ಲೇ ನಿರ್ಮಿಸಿದರೆಂದು ತಿಳಿದುಬರುತ್ತದೆ. ಮುಂದೆ ಇಮ್ಮಡಿ ಸಚ್ಚಿದಾನಂದ ಭಾರತಿಗಳೆಂಬ ಇಪ್ಪತ್ತೇಳನೆಯ ಗುರುಗಳು ಸಂನ್ಯಾಸ 1705– ಮುಕ್ತಿ 1741) ಈ ದೇವಾಲಯದ ವಿಚಾರವಾಗಿ ವಿಶೇಷವಾಗಿ ಆಸಕ್ತಿಯನ್ನು ವಹಿಸಿದರು. ಈಗ ವೈಭವದಿಂದ ಇಲ್ಲಿ ನಡೆಯುವ ಶರನ್ನವರಾತ್ರಿ ಉತ್ಸವವನ್ನು ಮೊದಲಿಗೆ ವ್ಯವಸ್ಥೆ ಮಾಡಿದವರೇ ಇವರು. ಇವರ ಕಾಲದಲ್ಲೇ ಶಾರದಾ ದೇವಾಲಯವು ಶೃಂಗೇರಿಯಲ್ಲಿ ಮುಖ್ಯವೆನಿಸಿ ಬೆಳೆಯಲಾರಂಭಿಸಿತು.

ಮರಾಠರ ಲೂಟಿ

ಕ್ರಿಸ್ತಾಬ್ದ 1791ರ ಸುಮಾರಿಗೆ ಪರಶುರಾಮಭಾವು ಎಂಬ ಮರಾಠಾ

ಸರದಾರನು ದರೋಡೆಕಾರರ ದೊಡ್ಡ ತಂಡವೊಂದನ್ನು ಶೃಂಗೇರಿಗೆ ನುಗ್ಗಿಸಿ ದೇವಾಲಯಗಳನ್ನೆಲ್ಲ ಲೂಟಿ ಮಾಡಿದನು. ಆ ವೇಳೆಗೆ ಶೃಂಗೇರಿಯು ಆಶ್ರಮ ವಾಗಿದ್ದುದು ಧರ್ಮಪೀಠವಾಗಿ, ಮಠವಾಗಿ, ಸಂಸ್ಥಾನವಾಗಿ, ಪರಿವರ್ತಿತವಾಗಿ ದ್ದಿತು. ವಿಜಯನಗರ, ಕೆಳದಿ, ಇಕ್ಕೇರಿ, ಬೇದನೂರಿನ ಅರಸರಿಂದ ದತ್ತಿ ಧರ್ಮ ಉಂಬಳಿ ಸನ್ನದುಗಳನ್ನು ಪಡೆದು ಸಂಪದ್ಭರಿತವಾದ ಸ್ವತಂತ್ರ ಸಂಸ್ಥಾ ನವಾಗಿದ್ದಿತು. 1565ರ ಸುಮಾರಿಗೆ ವಿಜಯನಗರದ ಪತನವಾದನಂತರ ಈ ಮಠದ ಪ್ರಾಬಲ್ಯವೇನೋ ಬಹುಮಟ್ಟಿಗೆ ಕುಗ್ಗಿತು. ಆದರೆ ಉಳಿದಿದ್ದ ಸಂಪ ತ್ತಿನ ಲೋಭ ಈ ದರೋಡೆಕಾರರನ್ನು ಆಕರ್ಷಿಸಿತು. ಇವರು ಶಾರದಾ ದೇವಾ ಲಯವನ್ನು ಲೂಟಿ ಮಾಡಿ. ಮಂದಿರವನ್ನು ಹಾಳುಮಾಡಿ ಹೋದರು. ಹೀಗೆ ಹಿಂದಿನವರು ಅರ್ಜಿಸಿದ್ದ ವಿಪುಲವಾದ ಸಂಪತ್ತು ಮಠದ ಕೈ ಬಿಟ್ಟಿತು. ಆಗ ಮಠಕ್ಕೆ ಒದಗಿದ ನಷ್ಟ ಅರವತ್ತು ಲಕ್ಷ ರೂಪಾಯಿಗಳಿಗಿಂತ ಹೆಚ್ಚು. ಆಗ ಗುರುಗಳಾಗಿದ್ದ ಮುಮ್ಮಡಿ ಸಚ್ಚಿದಾನಂದ ಭಾರತಿಗಳು (ಸಂನ್ಯಾಸ 1770– ಮುಕ್ತಿ 1814) ಟೀಪೂ ಸುಲ್ತಾನನ ಉದಾರ ನೆರವಿನಿಂದ ಶಾರದಾ ಮಂದಿರ ವನ್ನು ಮತ್ತೆ ಕಟ್ಟಿಸಿದರು. ಪರಂಪರೆಯಲ್ಲಿ ಮೂವತ್ತಮೂರನೆಯ ಗುರುಗ ಳಾಗಿದ್ದ ಸಚ್ಚಿದಾನಂದ-ಶಿವಾಭಿನವ-ನೃಸಿಂಹ ಭಾರತಿಗಳು (ಸಂನ್ಯಾಸ 1866- ಮುಕ್ತಿ 1912) ಚೆಟ್ಟಿನಾಡಿನ ಶಿಲ್ಪಿಗಳನ್ನು ಕರೆಸಿ ಈ ದೇವಾಲಯವನ್ನು ಶಿಲಾಮಯವನ್ನಾಗಿಸಿ ಶಿಲ್ಪಕೃತಿಗಳಿಂದ ಅಲಂಕರಿಸಿದರು. ಅವರು ತೀರಿ ಕೊಳ್ಳುವ ವೇಳೆಗೆ ಕೆಲಸ ಮುಗಿದಿರಲಿಲ್ಲ. ಮುಂದೆ 1916ರ ಮೇ ತಿಂಗಳಲ್ಲಿ ಅವರನಂತರ ಗುರುಗಳಾದ ಚಂದ್ರಶೇಖರ ಭಾರತಿಗಳು (ಸಂನ್ಯಾಸ 1912– ಮುಕ್ತಿ 1954) ಈ ದೇವಾಲಯದ ನಿರ್ಮಾಣವನ್ನು ಮುಗಿಸಿ ಮಹಾಸಂಪ್ರೋ ಕ್ಷಣೆ ಮಾಡಿಸಿದರು.

ಈ ದೇವಾಲಯವು ಶುದ್ಧಾಂಗವಾಗಿ ದ್ರಾವಿಡ ಬಗೆಯದು. ಪೂರ್ವಾಭಿ ಮುಖವಾಗಿ ಇರುವ ಈ ದೇವಾಲಯಕ್ಕೆ ಪೂರ್ವ, ದಕ್ಷಿಣ, ಉತ್ತರ ದಿಕ್ಕು ಗಳಲ್ಲಿ ಮಹಾದ್ವಾರಗಳಿವೆ. ಪ್ರಾಕಾರದೊಳಗೆ ನವರಂಗ, ಸುಖನಾಸಿ, ಗರ್ಭ ಗೃಹಗಳಿವೆ. ಪೂಜೆಗೊಳ್ಳುತ್ತಿರುವ ಎರಡು ಲೋಹಮಯ ಶಾರದಾ ವಿಗ್ರಹ ಗಳ ಪ್ರಸ್ತಾಪ ಈಗಾಗಲೇ ಬಂದಿದೆ. ಮೂರ್ತಿಗಳು ಪದ್ಮಾಸನದಲ್ಲಿ ಕುಳಿತು

ಕೆಳ ಬಲಗೈ ಅಭಯ-ಚಿನ್ಮುದ್ರೆಯಲ್ಲಿದೆ. ಕೆಳ ಎಡಗೈ ಗ್ರಂಥವನ್ನು ಹಿಡಿದಿದೆ. ಮೇಲ್ಬಲಗೈ ಜಪಮಾಲೆಯನ್ನೂ, ಮೇಲೆಡಗೈ ಅಮೃತ ಕಲಶವನ್ನೂ ಹಿಡಿದಿದೆ. ಮೂರ್ತಿಗಳು ತುಂಬ ಸುಂದರವಾಗಿವೆ. ಉತ್ಸವಬೇರಗಳೆಂದು ಎರಡು ಸಣ್ಣ ಸಣ್ಣ ಮೂರ್ತಿಗಳಿವೆ. ಒಂದು ಒಂದಡಿ ಎತ್ತರವಾಗಿದೆ ಬೆಳ್ಳಿಯದು; ಇನ್ನೊಂದು ಎರಡಡಿ ಎತ್ತರ, ಹಿತ್ತಾಳೆಯದು; ಸ್ಥಾನಕ ಭಂಗಿಯಲ್ಲಿದೆ. ರಥೋತ್ಸವದ ಸಂದರ್ಭದಲ್ಲಿ ಎರಡೂ ಬಳಕೆಗೆ ಬರುತ್ತವೆ. ದೇವಾಲಯದ ಮುಂದೆ ಮೂವತ್ತೈದು ಅಡಿ ಎತ್ತರದ ಭವ್ಯವಾದ ದೀಪಸ್ತಂಭವೊಂದಿದೆ

ವಿದ್ಯಾಶಂಕರ ದೇವಾಲಯದ ಉತ್ತರ ಭಾಗದಲ್ಲಿ ಜನಾರ್ದನನ ಗುಡಿಯಿದೆ. ಒಂಬತ್ತನೆಯ ಶತಮಾನದಲ್ಲಿ ಜ್ಞಾನಘನಾಚಾರ್ಯರೆಂಬ ಗುರುಗಳು ಇದನ್ನು ಕಟ್ಟಿಸಿದರೆಂದು ಪ್ರತೀತಿ. ಮೊದಲಿಗೆ ಇದು ಜೈನ ಬಸದಿಯೆಂದೂ ಶಂಕರಾಚಾರ್ಯರ ಕಾಲದಲ್ಲಿ ಗುಡಿಯಾಯಿತೆಂದು ಹೇಳುತ್ತಾರೆ. ಇಮ್ಮಡಿ ಹರಿಹರನು 1386ರಲ್ಲೇ ಇದಕ್ಕೆ ಮಾಡಿದ ದಾನಶಾಸನವಿದೆ. ಜನಾರ್ದನ ಮೂರ್ತಿಯ ಮುಂದೆ ನವರಂಗದಲ್ಲಿ ವ್ಯಾಖ್ಯಾನ ಮುದ್ರೆಯಲ್ಲಿರುವ ಶಂಕರಾಚಾರ್ಯರ ಶಿಲಾ ವಿಗ್ರಹವಿದೆ. ಜನಾರ್ಧನನ ಗುಡಿಯ ಬಳಿಯೇ ಶಕ್ತಿಗಣಪತಿ ಮತ್ತು ವಾಗೀಶ್ವರೀ ಗುಡಿಗಳಿವೆ. ಇವು ವಿದ್ಯಾರಣ್ಯರ ಕಾಲದವು. ಈ ಮುಖ್ಯ ಗುಡಿಗಳಲ್ಲದೆ ಇನ್ನೂ ಮೂವತ್ತೈದು ಗುಡಿಗಳು ಶೃಂಗೇರಿಯಲ್ಲೇ ಇವೆ. ಇವಲ್ಲದೆ ಮುಕ್ತರಾದ ಗುರುಗಳ ಸಮಾಧಿಗೃಹಗಳೂ ಹಲವಾರು. ಇವುಗಳನ್ನು ಅಧಿಷ್ಠಾನಗಳೆನ್ನುತ್ತಾರೆ. ಇವುಗಳಲ್ಲಿ ಶಾರದಾ ದೇವಾಲಯದ ದಕ್ಷಿಣ ಮಹಾದ್ವಾರದ ಬಳಿ ಇರುವ ಸುರೇಶ್ವರಾಚಾರ್ಯರ ಅಧಿಷ್ಠಾನವೇ ತುಂಬ ಪ್ರಾಚೀನವಾದುದು; ತುಂಗಾ ನದಿಯ ಆಚೆ ದಡದ ನರಸಿಂಹ ವನದಲ್ಲಿರುವ ಚಂದ್ರಶೇಖರ ಭಾರತಿ ಸ್ವಾಮಿಗಳದ್ದು ಇತ್ತೀಚಿನದು. ಅವರ ಅಧಿಷ್ಠಾನದಲ್ಲೂ ಇನಗ ಹಿಂದಿನವರ ಅಧಿಷ್ಠಾನದಲ್ಲೂ ಅವರ ಸೊಗಸಾದ ಮೂರ್ತಿಗಳನ್ನು ವಾ[illegible]ಟ್ಟಿದ್ದಾರೆ. ಈ ದೇವಾಲಯಗಳಲ್ಲದೆ ಶೃಂಗೇರಿಯಲ್ಲಿ ಪ್ರಾಚೀನವಾದ ಪಾರ್ಶ್ವನಾಥ ಬಸದಿಯೊಂದಿದೆ. ಗರ್ಭಗೃಹ, ಸುಖನಾಸಿ, ನವರಂಗಗಳಿರುವ ಈ ಬಸದಿಯಲ್ಲಿ ಕ್ರಿಸ್ತಾಬ್ದ 1161ರ ಶಾಸನವೊಂದಿದೆ. ಈ ಪ್ರದೇಶದಲ್ಲಿ ಅತಿ ಪ್ರಾಚೀನವಾದ ಶಾಸನವೆಂದರೆ ಇದೇ ಇದೇ ಬಸದಿಯಲ್ಲಿ ಕ್ರಿಸ್ತಾಬ್ದ 1583ರಲ್ಲಿ

ಹಾಲ್ಮಿಡಿ ದೇವಣ್ಣ ಸೆಟ್ಟಿಯೂ ಬೊಮ್ಮರ ಸೆಟ್ಟಿಯೂ ಅನಂತನಾಥ ಮತ್ತು ಚಂದ್ರನಾಥ ತೀರ್ಥಂಕರರ ಮೂರ್ತಿಗಳನ್ನೂ ಪಾರ್ಶ್ವನಾಥ ತೀರ್ಥಂಕರನ ಬಳಿಯೇ ಪ್ರತಿಷ್ಠೆ ಮಾಡಿಸಿದರು.

ಗ್ರಂಥ ಭಂಡಾರ

ಮಠದ ಗ್ರಂಥಭಂಡಾರ ಅಮೂಲ್ಯವಾದುದು. ಇಲ್ಲಿ ಸಾವಿರಾರು ಪ್ರಕಟಿತ ಗ್ರಂಥಗಳಲ್ಲದೆ ಐನೂರಕ್ಕೂ ಮೀರಿ ತಾಳಪತ್ರ ಗ್ರಂಥಗಳಿವೆ. ಮಠದ ಇತಿಹಾಸವನ್ನು ಹೇಳುವ ಸಾವಿರಾರು ಕಡತಗಳವೆ. ಇನ್ನೂರು ವರ್ಷಗಳಷ್ಟು ಹಿಂದಿನ ಕಡತಗಳೂ ಇವೆ. ಇವುಗಳಲ್ಲಿ ಮಠದ ಆಯವ್ಯಯ, ದಾನ ಪತ್ರಗಳು, ಗುರು ಪರಂಪರೆ, ಶಾಸನಗಳ ನಕಲು ಮುಂತಾದುವು ನಮೂದಿಸಲ್ಪಟ್ಟಿವೆ.

ಧರ್ಮಸಾಮ್ರಾಜ್ಯಪರಿಪಾಲನೆಗೆಂದು ಶೃಂಗೇರಿಯಲ್ಲಿ ಸ್ಥಾಪಿತವಾದ ದಕ್ಷಿಣಾಮ್ನಾಯವು ಕಾಲಕ್ರಮದಲ್ಲಿ ಸಂಸ್ಥಾನವಾಗಿ ಪರಿಣಮಿಸಿತಷ್ಟೆ. ವಿಜಯನಗರದ ಅರಸರ ಔದಾರ್ಯ ಇದಕ್ಕೆ ಬುನಾದಿಯಾಯಿತೆಂದರೆ, ಕೆಳದಿಯ ವೆಂಕಟಪ್ಪ ನಾಯಕನ ಕಾಲದಲ್ಲಿ ಮಠಗಳ ಕಟ್ಟಡಗಳು ದುರಸ್ತಿಯಾಗಿ, ಕೈಬಿಟ್ಟು ಹೋಗಿದ್ದ ನೂರಾರು ಗ್ರಾಮಗಳು ಮಠದ ಆಡಳಿತಕ್ಕೆ ಮತ್ತೆ ಸೇರಿದುವು. ಮಠದ ಜಮೀನುಗಳನ್ನು ಸರಿಯಾಗಿ ವ್ಯವಸ್ಥೆ ಮಾಡಿಸಿದವನು ಶಿವಪ್ಪ ನಾಯಕ. ಹದಿನೆಂಟನೆಯ ಶತಮಾನದ ಆದಿಭಾಗದಿಂದ ಮಹಾರಾಷ್ಟ್ರ ರಾಜರುಗಳು ಶೃಂಗೇರಿ ಮಠದ ಶಿಷ್ಯರಾಗಿ ನೆರವಾದರು. ಪುಣೆಯ ಪೇಶ್ವೆಯೇ ಮಠದ ಮುಖ್ಯ ಶಿಷ್ಯನೆಂದು ಕರೆದುಕೊಂಡನು. ಇಂದೂರಿನ ಹೋಳ್ಕರ್, ಕೊಲ್ಲಾಪುರದ ರಾಜ ಸಿಂಧೆ ಮುಂತಾದ ಹಲವು ಅರಸೊತ್ತಿಗೆಯವರು ಶೃಂಗೇರಿಯ ಪೀಠಕ್ಕೆ ಬಹು ವಿಧದಲ್ಲಿ ನೆರವಾದರು. ಮೈಸೂರು ಅರಸರಂತೂ ಮಠದ ಅಭ್ಯುದಯವನ್ನು ಭಯ-ಭಕ್ತಿಗಳಿಂದ ಸಾಧಿಸಿದರು. ಮುಸಲ್ಮಾನರಾಗಿದ್ದರೂ ಹೈದರಾಲಿ ಮತ್ತು ಟೀಪು ಸುಲ್ತಾನ್ ಇಬ್ಬರೂ ಶೃಂಗೇರಿ ಗುರುಗಳನ್ನು ತುಂಬ ಮರ್ಯಾದೆಯಿಂದ ಕಂಡುಕೊಂಡರು. ಇವರ ಕಾಲದಲ್ಲಿ ಸ್ವಾಮಿಗಳಾಗಿದ್ದ ಮುಮ್ಮಡಿ ಸಚ್ಚಿದಾನಂದ ಭಾರತಿಗಳು ಭಾರತದಲ್ಲೆಲ್ಲ ಸಂಚರಿಸಿ ಶಿಷ್ಯ ಸಂಪತ್ತನ್ನು ವಿಪುಲವಾಗಿ ಗಳಿಸಿದರು. ಉಗ್ರನರಸಿಂಹ

ಭಾರತಿಗಳೆಂಬ ಸ್ವಾಮಿಗಳೂ (ಸಂನ್ಯಾಸ 1817-ಮುಕ್ತಿ 1869) ವಿಶೇಷವಾಗಿ
ಸಂಚರಿಸುತ್ತಿದ್ದರು. ಇವರ ಕಾಲದಲ್ಲಿ ಉತ್ತರ ಭಾರತದವರೂ ತಕ್ಕ ಮಟ್ಟಿಗೆ
ಶೃಂಗೇರಿ ಮಠದ ಶಿಷ್ಯರಾದರು. ಶಂಕರಾಚಾರ್ಯರ ಅವತಾರವೆಂದೇ ಪ್ರಸಿದ್ಧ
ರಾಗಿದ್ದ ಸಚ್ಚಿದಾನಂದ-ಶಿವಾಭಿನವ-ನೃಸಿಂಹಭಾರತಿಗಳು (ಸಂ. 1866. ಮು.
1912) ತಮಿಳುನಾಡು, ಕೇರಳ, ಆಂಧ್ರ ಪ್ರದೇಶಗಳಲ್ಲೆಲ್ಲ ಮಠದ ಪ್ರಭಾವ
ವನ್ನು ವಿಸ್ತರಿಸಿದರು. ಇವರನಂತರ ಗುರುಗಳಾಗಿದ್ದ ಚಂದ್ರಶೇಖರ ಭಾರತಿ
ಗಳು (ಸಂ. 191[illegible]-ಮು. 1954) ವಿಶೇಷವಾಗಿ ಸಂಚರಿಸದಿದ್ದರೂ ತಮ್ಮ
ವ್ಯಕ್ತಿತ್ವದ ಔನ್ನತ್ಯದಿಂದ ಮಠಕ್ಕೆ ಹೆಚ್ಚಿನ ಪುರಸ್ಕಾರವನ್ನು ಗಳಿಸಿದರು.

ಬೇಲೂರು ಚೆನ್ನಿಗರಾಯ

ಕರ್ನಾಟಕ ಸಂಸ್ಕೃತಿಗೆ ಹೊಯ್ಸಳರ ಕೊಡುಗೆ ಪ್ರಸಿದ್ಧವಾದುದು. ಬೇಲೂರು, ಹಳೇಬೀಡು ಮೊದಲಾಗಿ ನೂರಾರು ಕಡೆ ಅದ್ಭುತ ದೇಗುಲಗಳನ್ನೂ, ಬಸದಿಗಳನ್ನೂ ಕಟ್ಟಿಸಿ ತಮ್ಮ ವಂಶದ ಹೆಸರನ್ನು ಉಳಿಸಿದ್ದಾರೆ ಇವರು. ಈ ಕಡೆಯ ಇತಿಹಾಸದಲ್ಲಿಯೂ ಅವರ ಕೈವಾಡ ಸಾಕಷ್ಟಿದೆ. ಚೋಳರ ಪ್ರಭಾವವನ್ನು ಕುಗ್ಗಿಸಿ ಕನ್ನಡಿಗರ ಹಿರಿಮೆಯನ್ನು ಎತ್ತಿಹಿಡಿದವರು ಈ ಅರಸರೇ. ಇವರ ಮೂಲಪುರುಷನಾದ ಸಳ-ಪೊಯ್ಸಳ ದೇವನು ಸ್ವಾರಸ್ಯವಾದ ಕಥೆಯೊಂದಕ್ಕೆ ನಾಯಕನಾಗಿದ್ದಾನೆ. ಗುರುವಿನ ಆಣತಿಯಂತೆ ಏಕಾಂಗಿಯಾಗಿ ಹುಲಿಯೊಂದಿಗೆ ಹೋರಾಡಿ ಅದನ್ನು ಕೊಂದ ಸಂದರ್ಭ ಹೊಯ್ಸಳ ರಾಜರ ಪ್ರತೀಕವಾಗಿಯೇ ಪರಿಣಮಿಸಿತು. ಆದರೆ ಈ ಸಳ ಎಷ್ಟರಮಟ್ಟಿಗೆ ಚಾರಿತ್ರಕ ವ್ಯಕ್ತಿಯೋ ತಿಳಿಯದು. ಶಕವರ್ಷ 995ರಲ್ಲಿ ಉತ್ತರ ದೇಶದಿಂದ ಬಂದು ಶಶಕಪುರದಲ್ಲಿ (ಅಂಗಡಿ ಗ್ರಾಮ) ನೆಲೆಸಿದವನು ಸಳನೆಂದು ಪ್ರತೀತಿ ಏನೋ ಇದೆ. ಇವನ ವಿಚಾರ ಮತ್ತೇನೂ ತಿಳಿಯದು. ಆದರೆ ಇವನ ಸಂತತಿಯಲ್ಲಿ ಹದಿನಾಲ್ಕು ಮಂದಿ ಅರಸರು ಬಂದು 1345ರವರೆಗೂ ಈ ವಂಶದ ಹೆಸರನ್ನು ಉಳಿಸಿ ಯಶೋಭಾಜನರಾದರು. ಹೊಯ್ಸಳ ಅರಸರ ಶಾಸನಗಳು ಕರ್ಣಾಟಕದಲ್ಲಿ ಮಾತ್ರವಲ್ಲದೆ ಚೋಳಮಂಡಲದಲ್ಲಿಯೂ, ಮಹಾರಾಷ್ಟ್ರದಲ್ಲಿಯೂ, ಕೊಡಗು ಸೀಮೆಯಲ್ಲಿಯೂ ದೊರೆಯುತ್ತವೆ. ವಿಷ್ಣುವರ್ಧನನ ಕಾಲದಲ್ಲಿ ಇವರ ರಾಜ್ಯ ತುಂಬ ವಿಶಾಲವಾಗಿದ್ದಿತು.

ತ್ರಿಭುವನ ಮಲ್ಲ

ಇಮ್ಮಡಿ ವಿನಯಾದಿತ್ಯ (1047-1063) ಈ ವಂಶದಲ್ಲಿ ಮೊಟ್ಟ

ಬೇಲೂರು ಚೆನ್ನಿಗರಾಯ

ಕರ್ನಾಟಕ ಸಂಸ್ಕೃತಿಗೆ ಹೊಯ್ಸಳರ ಕೊಡುಗೆ ಪ್ರಸಿದ್ಧವಾದುದು. ಬೇಲೂರು, ಹಳೇಬೀಡು ಮೊದಲಾಗಿ ನೂರಾರು ಕಡೆ ಅದ್ಭುತ ದೇಗುಲಗಳನ್ನೂ, ಬಸದಿಗಳನ್ನೂ ಕಟ್ಟಿಸಿ ತಮ್ಮ ವಂಶದ ಹೆಸರನ್ನು ಉಳಿಸಿದ್ದಾರೆ ಇವರು. ಈ ಕಡೆಯ ಇತಿಹಾಸದಲ್ಲಿಯೂ ಅವರ ಕೈವಾಡ ಸಾಕಷ್ಟಿದೆ. ಚೋಳರ ಪ್ರಭಾವವನ್ನು ಕುಗ್ಗಿಸಿ ಕನ್ನಡಿಗರ ಹಿರಿಮೆಯನ್ನು ಎತ್ತಿಹಿಡಿದವರು ಈ ಅರಸರೇ. ಇವರ ಮೂಲಪುರುಷನಾದ ಸಳ-ಪೊಯ್ಸಳ ದೇವನು ಸ್ವಾರಸ್ಯವಾದ ಕಥೆಯೊಂದಕ್ಕೆ ನಾಯಕನಾಗಿದ್ದಾನೆ. ಗುರುವಿನ ಆಣತಿಯಂತೆ ಏಕಾಂಗಿಯಾಗಿ ಹುಲಿಯೊಂದಿಗೆ ಹೋರಾಡಿ ಅದನ್ನು ಕೊಂದ ಸಂದರ್ಭ ಹೊಯ್ಸಳ ರಾಜರ ಪ್ರತೀಕವಾಗಿಯೇ ಪರಿಣಮಿಸಿತು. ಆದರೆ ಈ ಸಳ ಎಷ್ಟರಮಟ್ಟಿಗೆ ಚಾರಿತ್ರಿಕ ವ್ಯಕ್ತಿಯೋ ತಿಳಿಯದು. ಶಕವರ್ಷ 995ರಲ್ಲಿ ಉತ್ತರ ದೇಶದಿಂದ ಬಂದು ಶಶಕಪುರದಲ್ಲಿ (ಅಂಗಡಿ ಗ್ರಾಮ) ನೆಲೆಸಿದವನು ಸಳನೆಂದು ಪ್ರತೀತಿ ಏನೋ ಇದೆ. ಇವನ ವಿಚಾರ ಮತ್ತೇನೂ ತಿಳಿಯದು. ಆದರೆ ಇವನ ಸಂತತಿಯಲ್ಲಿ ಹದಿನಾಲ್ಕು ಮಂದಿ ಅರಸರು ಬಂದು 1345ರವರೆಗೂ ಈ ವಂಶದ ಹೆಸರನ್ನು ಉಳಿಸಿ ಯಶೋಭಾಜನರಾದರು. ಹೊಯ್ಸಳ ಅರಸರ ಶಾಸನಗಳು ಕರ್ನಾಟಕದಲ್ಲಿ ಮಾತ್ರವಲ್ಲದೆ ಚೋಳಮಂಡಲದಲ್ಲಿಯೂ, ಮಹಾರಾಷ್ಟ್ರದಲ್ಲಿಯೂ, ಕೊಡಗು ಸೀಮೆಯಲ್ಲಿಯೂ ದೊರೆಯುತ್ತವೆ. ವಿಷ್ಣುವರ್ಧನನ ಕಾಲದಲ್ಲಿ ಇವರ ರಾಜ್ಯ ತುಂಬ ವಿಶಾಲವಾಗಿದ್ದಿತು.

ತ್ರಿಭುವನ ಮಲ್ಲ

ಇಮ್ಮಡಿ ವಿನಯಾದಿತ್ಯ (1047-1063) ಈ ವಂಶದಲ್ಲಿ ಮೊಟ್ಟ

ಮೊದಲ ಪ್ರಸಿದ್ಧ ರಾಜ. ಇವನಿಗೆ 'ತ್ರಿಭುವನ ಮಲ್ಲ' ಎಂಬ ಬಿರುದಿದ್ದಿತು. ಇವನ ಕಾಲದಲ್ಲಿ ಬೇಲೂರು ರಾಜಧಾನಿ. ಇವನ ಮಗ ಎರೆಯಂಗ "ಚಾಳುಕ್ಯ ಭೂಪಾಲನ ಬಲದ ಭುಜದಂಡ"ವಾಗಿ ಮೆರೆದು, ಚೋಳರ ಅರಸಗುವರಿ ಏಚಲ ದೇವಿಯನ್ನು ಮದುವೆಯಾಗಿ, ಗಂಗವಾಡಿಯ ಅಧಿಪತಿಯಾಗಿದ್ದ. ಇವನ ಮಗ ಬಿಟ್ಟಿದೇವ (1112–1152) ತುಂಬ ಪ್ರಸಿದ್ಧನಾದವನು. ಶಾಸನಗಳಲ್ಲಿ ಇವನನ್ನು "ತ್ರಿಭುವನ ಮಲ್ಲ, ತಳಕಾಡುಗೊಂಡ, ಭುಜಬಳವೀರ ಗಂಗ, ವಿಷ್ಣುವರ್ಧನ ಪೊಯ್ಸಳದೇವ"ರೆಂದು ಕರೆದಿದ್ದಾರೆ. ನಿಜವಾಗಿ ತುಂಬ ಸಾಹಸಿ ಇವನು; ಅವನ ವಿಜಯಯಾತ್ರೆಗೆ ಅಂತರಾಯವೇ ಇರಲಿಲ್ಲ. 'ಸಮರದುರಂಧರ'ನೂ 'ಸಾಹಸಭೀಮ'ನೂ ಆದ ಇವನ ಪ್ರಶಸ್ತಿಗಳು ಇವನು ಸಾಧಿಸಿದ ವಿಜಯವನ್ನು ಹೇಳುತ್ತವೆ – ತಳಕಾಡುಗೊಂಡ, ನೊಳಂಬವಾಡಿ ಗೊಂಡ, ನೀಲಗಿರಿ ಸಮುದ್ಧರಣ, ಉಚ್ಚಂಗಿಕೊಂಡ, ಪಾಂಡ್ಯನೆಂಬೆಂಕೊಂಡ, ಕೊಂಗರ ಮಾರಿ, ಪೊಂಬುಚ್ಚ ನಿರ್ಘಾಟಣ, ಘಟ್ಟವನಳಿವ, ತುಳುವರ ಶೆಳೆವ" ಇತ್ಯಾದಿ.

ಚೋಳರನ್ನು ಸೋಲಿಸಿ, ಪಾಂಡ್ಯರನ್ನು ಹಿಮ್ಮೆಟ್ಟಿಸಿ, ಗಂಗರಿಂದ ಕೋಲಾರವನ್ನು ಕಸಿದುಕೊಂಡು, ಮಲಯಾಳವನ್ನು ದಾಳಿಮಾಡಿ, ತುಳುನಾಡಿಗೆ ನುಗ್ಗಿ, ತೋಡರನ್ನು ಸದೆಬಡಿದು, ಗೋವೆಯ ಕದಂಬರನ್ನು ಕಾಡಿ, ಕೊಂಗು-ನಾಡು, ನೋಳಂಬವಾಡಿ ಗಂಗವಾಡಿ ಬನವಸೆ ಪುಲಿಗೆರೆ ನಂಗಲಿ ತಲಕಾಡು ಹಲಸಿಗೆ ಶಾಲ್ಯ (ಸೇಲಂ), ಕೊಯಮುತ್ತೂರು, ತಿರುವನಂತಪುರ ಮೊದಲಾದ ಪ್ರದೇಶಗಳ ಮೇಲೆಲ್ಲ ಪ್ರಭುತ್ವವನ್ನು ಮಾಡಿ ಪ್ರಸಿದ್ಧನಾದವನು ಈ ಬಿಟ್ಟಿ ದೇವ (ವಿಷ್ಣುವರ್ಧನ). ಇವನು ರಸಿಕನೂ, ವಿದ್ಯಾಪಕ್ಷಪಾತಿಯೂ ಹೌದು. ಅವನು 'ದಾನ ವಿನೋದ, ವಿವೇಕ ನಾರಾಯಣ, ಸಾಹಿತ್ಯ ವಿದ್ಯಾಧರ, ಕವಿ ಜನ ಕಾಮಧೇನು, ಸರಸ್ವತೀ ಕರ್ಣಾವಸಂತ.'

ಸರ್ವಧರ್ಮ ಸಮಭಾವ

ಹೊಯ್ಸಳ ರಾಜರು ಜೈನರು. ಕರ್ಣಾಟಕದಲ್ಲಿರುವ ನೂರಾರು ಬಸದಿಗಳೂ ಚೈತ್ಯಾಲಯಗಳೂ ಇವರ ಕಾಲದಲ್ಲಿಯೇ ಆದುವು. ಆದರೆ ಅವರು

ಶೈವ, ವೈಷ್ಣವ ಧರ್ಮಗಳನ್ನೂ ಪುರಸ್ಕರಿಸಿ ಪ್ರೋತ್ಸಾಹಿಸಿದರು. ಬಿಟ್ಟಿದೇವನು ರಾಮಾನುಜಾಚಾರ್ಯರ ಪ್ರಭಾವದಿಂದ ವೈಷ್ಣವ ಧರ್ಮಾನುಯಾಯಿಯಾದ ನೆಂದು ಬಲವಾದ ಪ್ರತೀತಿಯುಂಟು. ಅವರ ಪ್ರೇರಣೆಯಂತೆಯೇ ಬೇಲೂರಿನ ಸುಪ್ರಸಿದ್ಧ ವಿಜಯನಾರಾಯಣ ಅಥವಾ ಚೆನ್ನಕೇಶವ ದೇವಾಲಯವನ್ನು ಕಟ್ಟಿಸಿದನೆಂದೂ, ತನ್ನ ದೇಶದಲ್ಲಿ ಪಂಚ ನಾರಾಯಣ ಮೂರ್ತಿಗಳನ್ನು ಪ್ರತಿಷ್ಠೆ ಮಾಡಿಸಿದನೆಂದೂ ಐತಿಹ್ಯವಿದೆ. ಆದರೆ ರಾಮಾನುಜಾಚಾರ್ಯರು ಬಿಟ್ಟಿದೇವನ ಮೇಲೆ ಬೀರಿದ ಪ್ರಭಾವಕ್ಕೆ ಸ್ಪಷ್ಟವಾದ ಸಾಕ್ಷ್ಯಗಳಿಲ್ಲ. ಇದು ಹೇಗಾದರೂ ಇರಲಿ. ವೈಷ್ಣವ ದೇವಾಲಯಗಳೂ ಶಿವ ದೇವಾಲಯಗಳೂ ಜೈನ ಮಂದಿರಗಳೂ ನಾಡಿನಲ್ಲೆಲ್ಲ ಮೂಡಿಕೊಂಡುದು ಹೊಯ್ಸಳ ರಾಜರ ಆಶ್ರಯದಲ್ಲಿಯೇ. ಬೇಲೂರಿನ ಸುಂದರ ದೇಗುಲವು ಬಿಟ್ಟಿದೇವನು 1117 ರಲ್ಲಿ ಚೋಳರನ್ನು ತಲಕಾಡಿನಲ್ಲಿ ಸದೆಬಡಿದುದರ ಸ್ಮಾರಕವಾಗಿ ಕಟ್ಟಿಸಿದುದು.

ಬಿಟ್ಟಿದೇವ ವೈಷ್ಣವನಾದನೋ ಬಿಟ್ಟನೋ ಅವನ 'ಪಿರಿಯರಸಿ ಪಟ್ಟ ಮಹಾದೇವಿ' ಶಾಂತಳೆಯಂತೂ "ಜಿನ ಸಮಯ ಸಮುದಿತ ಪ್ರಕಾರೆ, ಜಿನ-ಧರ್ಮ ಕಥಾಕಥನ ಪ್ರಮೋದೆ, ಜಿನಧರ್ಮ ನಿರ್ಮಳೆ"ಯಾಗಿಯೇ ಉಳಿದಳು. ಶ್ರೀ ಮೂಲಸಂಘ ದೇಸಿಯ ಗಣ ಪುಸ್ತಕ ಗಚ್ಛದ ಮೇಘಚಂದ್ರ ತ್ರೈವಿದ್ಯ ದೇವರ ಶಿಷ್ಯ ಪ್ರಭಾಚಂದ್ರ ಸಿದ್ಧಾಂತದೇವರು ಈಕೆಯ ಗುರುವಾಗಿದ್ದರು. ಈಕೆಯ ತಾಯಿ 'ಗುಣನಿಧಿ' ಮಾಚಿಕಬ್ಬೆಯೂ ಜೈನ ಧರ್ಮದಲ್ಲಿ ಶ್ರದ್ಧಾಳು ವಾಗಿದ್ದವಳು; ಆಕೆ ಸಲ್ಲೇಖನ ವ್ರತವನ್ನು (ಉಪವಾಸವ್ರತ ಕೈಗೊಂಡು ಪ್ರಾಣತ್ಯಾಗ ಮಾಡುವುದು) ಕೈಗೊಂಡೇ ಪ್ರಾಣ ಬಿಟ್ಟಳು. ಆದರೆ ಈಕೆಯ ಗಂಡ, ಶಾಂತಳೆಯ ತಂದೆ, 'ಪಿರಿಯ ಪೇರ್ಗಡೆ' ಮಾರಸಿಂಗಯ್ಯ ಶೈವ, "ಹರ ಪಾದಾಬ್ಜ ಭಕ್ತಿಯೊಳು" ಇದ್ದವನು. ಹೀಗೆ ಹೊಯ್ಸಳರ ಅರಸುಮನೆತನ ದಲ್ಲಿ ಸರ್ವಧರ್ಮ ಸಮಭಾವವಿದ್ದುದು ವಿಶೇಷ.

ಶಾಂತಲೆ ಕಲಾವಿದೆಯೆಂದೂ, ಬೇಲೂರಿನ ಪುತ್ಥಳಿ-ಶಾಲಭಂಜಿಕೆ ಗೊಂಬೆ ಗಳಿಗೆ (ಶಿಲಾಬಾಲಿಕೆಯರಿಗೆ) ಈಕೆಯು ಹಿನ್ನೆಲೆ ಇದ್ದಿತೆಂದೂ ಹೇಳುತ್ತಾರೆ. ಈಕೆಗೆ 'ಗೀತವಾದ್ಯ ಸೂತ್ರಧಾರೆ'ಯೆನ್ನುವ ಪ್ರಶಸ್ತಿ ಇದ್ದುದು ಶಾಸನಗಳಿಂದ ತಿಳಿದುಬರುತ್ತದೆ. ಈಕೆಯು ತಾನೇ ನೃತ್ಯಗೋಷ್ಠಿಯೊಂದನ್ನು ನಡೆಸುತ್ತಿದ್ದ

ಳೆಂದೂ, ಶಿಲಾಬಾಲಿಕೆಯರ ಭಂಗಿಗಳೆಲ್ಲವೂ ವಾಸ್ತವಿಕ ವ್ಯಕ್ತಿಗಳ ಚಿತ್ರಣ ವೆಂದೂ ಐತಿಹ್ಯವೊಂದಿದೆ ಶ್ರವಣಬೆಳ್ಗೊಳದ ಗಂಧವಾರಣ ಬಸದಿಯನ್ನು ಈಕೆಯೇ ಕಟ್ಟಿಸಿದಳು. ಕ್ರಿಸ್ತಾಬ್ದ 1131ರಲ್ಲಿ ಶಾಂತಳೆ ಶಿವಗಂಗೆಯ ತೀರ್ಥ ದಲ್ಲಿ ತೀರಿಕೊಂಡಳೆಂದು ತಿಳಿದುಬರುತ್ತದೆ. ವಿಷ್ಣುವರ್ಧನನ ಇನ್ನೊಬ್ಬ ಅರಸಿ ಬೊಮ್ಮಲಾದೇವಿ ರಾಜಕಾರ್ಯವಿಚಕ್ಷಣೆಯಾಗಿದ್ದವಳು; ಪಲ್ಲವರ ಮನೆತನಕ್ಕೆ ಸೇರಿದ ಈಕೆ ರಾಜ್ಯದ ಕಾರುಬಾರಿನಲ್ಲಿ ದಿನವೂ ಭಾಗವಹಿಸುತ್ತಿದ್ದಳಂತೆ; ಕುದುರೆ ಸವಾರಿಯಲ್ಲಿ ಇವಳು ನಿಸ್ಸೀಮಳಾಗಿದ್ದಳೆಂದು ಕಥೆಯಿದೆ.

ಅಂತೂ ಬಿಟ್ಟಿದೇವ-ವಿಷ್ಣುವರ್ಧನನ ಕಾಲ ಹೊಯ್ಸಳರ ಆಳ್ವಿಕೆಯಲ್ಲಿ ತುಂಬ ವೈಭವದ ಕಾಲವೆಂದರೆ ಉತ್ಪ್ರೇಕ್ಷೆಯಲ್ಲ. ಅವನ ಕೀರ್ತಿಯನ್ನು ಆ ಕಾಲದ ಕವಿಗಳು ಮನಸಾರೆ ಹಾಡಿ ಹೊಗಳಿದ್ದಾರೆ. ಹೊಯಳರು ಸರ್ವ ಸ್ವತಂತ್ರರಾದ ರಾಜರಾಗಿದ್ದುದು ಇವನ ಕಾಲದಲ್ಲಿಯೇ; ಆಗಲೇ ದ್ವಾರಸಮು ದ್ರವು ಹೊಯ್ಸಳ ರಾಜಧಾನಿ ಆಯಿತು. ಇವನ ನಂತರ ಅರಸನಾದ ನರಸಿಂಹನು ಬಿಟ್ಟಿದೇವನ ಇನ್ನೊಬ್ಬಳು ಪತ್ನಿಯಾದ ಲಕ್ಷ್ಮೀದೇವಿಯ ಮಗ. ಇವನು ಹುಟ್ಟಿದ ವರ್ಷ 1133. ಪಟ್ಟಕ್ಕೆ ಬಂದುದು 1152ರಲ್ಲಿ. ಚಾಳುಕ್ಯ ರಾಜ ಜಗದೇಕ–ಮಲ್ಲ ಇವನು ರಾಜ್ಯವಾಳುತಿದ್ದಾಗ, 1143ರಲ್ಲಿ, ಹೊಯ್ಸಳ ಸೀಮೆಗೆ ದಂಡೆತ್ತಿ ಬಂದನು; 1160ರಲ್ಲಿ ಕಲಾಚುರಿ ಅರಸನೂ ಹೈಹಯ ರಾಜನೂ ಹೊಯ್ಸಳ ನರಸಿಂಹನನ್ನು ಯುದ್ಧದಲ್ಲಿ ಸೆಣಸಿ ಸೋಲಿಸಿದರು. ನರಸಿಂಹನ ಕಾಲದಲ್ಲಿ ಹೊಯ್ಸಳರಾಜ್ಯ ಸ್ವಲ್ಪ ಆತಂಕಕ್ಕೆ ಗುರಿಯಾಯಿತು. 1173ರಲ್ಲಿ ನರಸಿಂಹನು ಕಾಲವಾಗಿ ಅವನ ಮಗ ವೀರಬಲ್ಲಾಳನು ಪಟ್ಟಕ್ಕೆ ಬಂದನು.

ತುಂಬ ಸಮರ್ಥನಾದ ಇವನ ಕಾಲದಲ್ಲಿ ಹೊಯ್ಸಳರು ಮತ್ತೆ ತಲೆ ಎತ್ತಿದರು. ಕಲಾಚುರಿಯರನ್ನೂ, ಸೇವುಣರನ್ನೂ, ಚಾಳುಕ್ಯರನ್ನೂ ಸದೆಬಡಿದು ತನ್ನ ಪ್ರತಿಷ್ಠೆಯನ್ನು ಸ್ಥಾಪಿಸಿಕೊಂಡ ಈ ವೀರ ಬಲ್ಲಾಳನು ದಕ್ಷಿಣಾಪಥದ ಚಕ್ರವರ್ತಿ ಎನಿಸಿಕೊಂಡನು, ಪರಾಕ್ರಮದಿಂದಲೂ ರಾಜಕಾರ್ಯ ನೈಪುಣ್ಯ ದಿಂದಲೂ ಪ್ರಸಿದ್ಧನಾದನು. ಚೆಂಗಾಳ್ವರು ಹೊಯ್ಸಳರಿಗೆ ಸಾಮಂತರಾದರು.

ಗದಗಿನ ಕದನದಲ್ಲಿ ಸೇವುಣರು ಆಶ್ರಿತರಾದರು. ನೊಳಂಬವಾಡಿಯ ಪಾಂಡ್ಯರು ನಡುಗಿದರು, ಸೊರಟ್ಟೂರು ಯುದ್ಧದಲ್ಲಿ ಯಾದವರು ಸೋತು ಹಿಮ್ಮೆಟ್ಟಿದರು. ಬಿಟ್ಟಿದೇವನಂತೆ ವಿಖ್ಯಾತನಾದ ವೀರಬಲ್ಲಾಳನು 'ಗಿರಿದುರ್ಗಮಲ್ಲ'ನಾಗಿ, 'ವೈರಿ ಕಾಲಾನಲ'ನಾಗಿ, 'ಸಂಗ್ರಾಮ ವಿಜಯಧ್ವಜ'ನಾಗಿ, 'ಯಾದವ ನಾರಾಯಣ'ನಾಗಿ ಮೆರೆದನು. ಅವನ ಕಾಲದಲ್ಲಿ ಚೋಳಮಂಡಲದ ಬಹು ಭಾಗ ಕನ್ನಡ ರಾಜರ ಆಳ್ವಿಕೆಗೆ ಒಳಪಟ್ಟಿದ್ದಿತು. ತುಳುನಾಡೆಲ್ಲ ಸೇರಿದ್ದಿತು. ಉತ್ತರದಲ್ಲಿ ಗದಗಿನವರೆಗೆ ರಾಜ್ಯ ಹರಡಿದ್ದಿತು.

ಕವಿಜನ ಕಾಮಧೇನು

ಬಿಟ್ಟಿದೇವನಂತೆಯೇ ವೀರಬಲ್ಲಾಳನೂ 'ದಾನ ವಿನೋದ', 'ಕವಿಜನ ಕಾಮಧೇನು' ಜನ್ನನೂ, ರುದ್ರಭಟ್ಟನೂ ಇವನ ಆಸ್ಥಾನದಲ್ಲಿದ್ದ ಕವಿಗಳೇ. ಜನ್ನನ ತಂದೆ ಹೊಯ್ಸಳ ನಾರಸಿಂಹನೂ ಕವಿಯೇ. ಜನ್ನ ಅಥವಾ ಜನಾರ್ದನ ದೇವನು "ಯಶೋಧರ ಚರಿತೆ", "ಅನಂತನಾಥ ಪುರಾಣ" ಗಳನ್ನು ಬರೆದಿದ್ದಾರೆ. ಜನ್ನನು ಜೈನನಾದರೆ 'ಕವಿರಾಜ'ನೂ 'ಕೃತಿ ಶಾರದಾಭ್ರ ಚಂದ್ರಾತಪ'ನೂ ಆಗಿದ್ದ ರುದ್ರಭಟ್ಟನು ವೈದಿಕ ಶ್ರದ್ಧಾಳು. ಇವನ 'ಜಗನ್ನಾಥ ವಿಜಯ'ವು ಕೃಷ್ಣನ ಕಥೆ; "ವೈಷ್ಣವ ಕಾವ್ಯ ರಸಾರ್ಣವಂ." ರುದ್ರಭಟ್ಟನಿಗೆ ವೀರಬಲ್ಲಾಳನ ಮಂತ್ರಿ ಚಂದ್ರಮೌಳಿಯೆನ್ನುವವನು ಆಶ್ರಯ ದಾತನಾಗಿದ್ದನು. ಹಾಗೆಯೇ ಆ ಕಾಲದ ಮತ್ತೊಬ್ಬ ಶ್ರೇಷ್ಠಕವಿಯಾದ ನೇಮಿಚಂದ್ರನಿಗೆ ವೀರಬಲ್ಲಾಳನ ಇನ್ನೊಬ್ಬ ಮಂತ್ರಿ ಪದ್ಮನಾಭನು ಆಶ್ರಯ ದಾತ.

ವೀರಬಲ್ಲಾಳನು 1220ರಲ್ಲಿ ರಾಜ್ಯವನ್ನು ತನ್ನ ಮಗ ಇಮ್ಮಡಿ ನರಸಿಂಹನಿಗೆ ಒಪ್ಪಿಸಿ ವಿರಮಿಸಿದನು. ಈ ನರಸಿಂಹನು ರಾಮೇಶ್ವರದವರೆಗೂ ಜೈತ್ರಯಾತ್ರೆ ಹೋಗಿದ್ದನಂತೆ. ಹದಿಮೂರು ವರ್ಷಗಳ ನಂತರ ಇವನು ತೀರಿಕೊಳ್ಳಲು ಇವನ ಮಗ ಸೋಮೇಶ್ವರನಿಗೆ ಪಟ್ಟವಾಯಿತು. ಆ ಕಾಲಕ್ಕೆ ಹೊಯ್ಸಳ ರಾಜ್ಯ ಇನ್ನೂ ವಿಶಾಲವಾಗಿಯೇ ಇದ್ದಿತು. ಕಾಂಚೀಪುರದಿಂದ ಬೇಲೂರಿನವರೆಗೂ ಕೃಷ್ಣಾನದಿಯಿಂದ ಕೇರಳ ಬಯಲುನಾಡಿನವರೆಗೂ ಹೊಯ್ಸಳ ರಾಜರ ಪ್ರಭುತ್ವವಿದ್ದಿತು. ಸೋಮೇಶ್ವರನು ಇಷ್ಟು ವಿಶಾಲ

ವಾದ ರಾಜ್ಯವನ್ನು ತಾನೊಬ್ಬನೇ ನಿರ್ವಹಿಸಲು ಅಸಮರ್ಥನಾದುದರಿಂದ ಈ ರಾಜ್ಯದ ಕನ್ನಡ ಪ್ರದೇಶವನ್ನು ತನ್ನ ಹಿರಿಯ ಮಗ ಮುಮ್ಮಡಿ ನರಸಿಂಹ ನಿಗೂ ತಮಿಳು ಪ್ರದೇಶವನ್ನು ಎರಡನೆಯ ಮಗ ರಾಮನಾಥನಿಗೂ ಹಂಚಿ ಕೊಟ್ಟನು. ಕೆಲವು ವರ್ಷಗಳಲ್ಲಿ ಸೋದರರಿಬ್ಬರಿಗೂ ತಿಕ್ಕಾಟವಾಗಲು ಎರಡೂ ಪ್ರದೇಶಗಳ ಒಕ್ಕೂಟವಾಗಿ ತಿರುವಣ್ಣಾಮಲೆ ಹೊಯ್ಸಳ ರಾಜಧಾನಿ ಯಾಯಿತು. ವೀರಬಲ್ಲಾಳನಿಗೆ ಪಟ್ಟಾಭಿಷೇಕವಾದುದು ದ್ವಾರಸಮುದ್ರ ದಲ್ಲಿಯೇ. ಆದರೆ ಬರುಬರುತ್ತ ಅರಸರ ಕಾರ್ಯಕ್ಷೇತ್ರ ವಿಸ್ತರಿಸಿ ದ್ವಾರ ಸಮುದ್ರದ ಪ್ರಾಮುಖ್ಯ ತಗ್ಗಿತು. ಸೋಮೇಶ್ವರನ ಕಾಲಕ್ಕೆ ಶ್ರೀರಂಗದ ಪರಿಸರವಾದ ಕಣ್ಣನಪುರ ಅರಸರ ಕಾರ್ಯಕ್ಷೇತ್ರದ ಕೇಂದ್ರವಾಗಿದ್ದಿತು. ಈ ಅರಸನೂ ಆಗಾಗ ದ್ವಾರಸಮುದ್ರಕ್ಕೆ ಹೋಗಿಬರುತ್ತಿದ್ದ ಉಲ್ಲೇಖ ಉಂಟು ಆದರೆ ಆಗ ಅದು 'ಹಳೇಬೀಡು' ಆಗಿದ್ದಿತು.

ಇಮ್ಮಡಿ ನರಸಿಂಹನ ಮತ್ತು ಸೋಮೇಶ್ವರನ ನೆರವನ್ನು ಚೋಳರು ಬಯಸಿ, ಅವರಿಗೆ ಅನುಕೂಲರಾಗಿ ನಡೆದುಕೊಳ್ಳುತ್ತಿದ್ದರು. ಕಾಕತೀಯರೂ, ಪಾಂಡ್ಯರೂ ಚೋಳರನ್ನು ಸೆಣಸಲು ಹವಣಿಸುತ್ತಲೇ ಇದ್ದರು. ಹೊಯ್ಸಳ ರಾಜರು ಚೋಳರ ಪಕ್ಷವನ್ನು ಹಿಡಿದುದರಿಂದ ಇದು ಸಾಧ್ಯವಾಗಲಿಲ್ಲ. ಜನ್ನ ಕವಿಯು "ನರಸಿಂಹನ ಚೋಳಕುಲೋದ್ಧರಣನ ಸರ್ವಜ್ಞ ಭೂಪನೋಲಗ ದೊಳ್" ಎಂದು ಮುಂತಾಗಿ ಹೇಳಿರುವುದನ್ನು ಗಮನಿಸಬೇಕು. ಹೀಗೆ ದಕ್ಷಿಣ ದೇಶದಲ್ಲೆಲ್ಲ ಹೊಯ್ಸಳ ವಂಶದ ರಾಜರು ಪ್ರಭಾವಶಾಲಿಗಳಾಗಿದ್ದರು. ಮುಮ್ಮಡಿ ನರಸಿಂಹನ ಕಾಲದಲ್ಲಿಯೂ, ಎಂದರೆ 1254-1291ರವರೆಗೆ, ಈ ಮಾತು ನಿಜವಾಗಿದ್ದಿತು. ಹೊಯ್ಸಳ ರಾಜ್ಯ ಹಿರಿದಾಗಿ ಹಬ್ಬಿದುದು ಮಾತ್ರವಲ್ಲ. ಜನ ಸುಖವಾಗಿ ಬಾಳುತ್ತಿದ್ದು, ಕನ್ನಡ ಸಾಹಿತ್ಯವೂ ಕರ್ಣಾಟಕ ಕಲೆಯೂ ಊರ್ಜಿತವಾದುವು. ಮೊದಲಿಂದ ಹೊಯ್ಸಳರ ರಾಜಭಾಷೆ ಹಳಗನ್ನಡವೇ ಆಗಿದ್ದಿತು. ಇವರ ಆಶ್ರಯದಲ್ಲಿ ನೂರಾರು ಕವಿಗಳು ಕಾಣಿಸಿಕೊಂಡರು.

ಅವನತಿ

ಮುಮ್ಮಡಿ ನರಸಿಂಹನನಂತರ ದೊರೆಯಾದ ರಾಮನಾಥ (1254-

1295)ನ ಕಾಲದಿಂದ ಹೊಯ್ಸಳ ಸಾಮ್ರಾಜ್ಯದ ಅವನತಿ ಆರಂಭವಾಯಿತೆನ್ನಬಹುದು. ಅವನಾದ ಮೇಲೆ ರಾಜ್ಯವಾಳಿದ ಮುಮ್ಮಡಿಬಲ್ಲಾಳನ ಕಾಲದಲ್ಲಿ ಮುಸಲ್ಮಾನರು ಈ ಪ್ರದೇಶವನ್ನು ದಾಳಿ ಮಾಡಿದರು. ಮಲ್ಲಿಕ್ ಕಾಫುರನ ದಂಡೆಯಾತ್ರೆ ಇದೇ ಸಮಯದಲ್ಲಿ ಆದದ್ದು. ಮುಮ್ಮಡಿ ಬಲ್ಲಾಳನು ತಾನು ಡಿಲ್ಲಿ ಸುಲ್ತಾನನಾಗಿದ್ದ ಅಲಾವುದ್ದೀನನ ಆಶ್ರಿತನೆಂದು ಒಪ್ಪಿಕೊಳ್ಳುವ ಪರಿಸ್ಥಿತಿ ಬಂದಿತು. ಮೊದಲು ಶ್ರೀರಂಗಪಟ್ಟಣಕ್ಕೂ, ಅನಂತರ ತಿರುವಣ್ಣಾಮಲೆಗೂ ತಲೆತಪ್ಪಿಸಿಕೊಂಡು ಓಡಿಹೋದ ಈ ಹೊಯ್ಸಳ ರಾಜನು ತುಂಬ ಬವಣೆಪಟ್ಟು, ಕಡೆಗೆ ಮಧುರೆ ಸುಲ್ತಾನ ಗಿಯಾಸುದ್ದೀನನಿಂದ 1342ರಲ್ಲಿ ತಿರುಚಿರಪಳ್ಳಿ ಪ್ರಾಂತ್ಯದಲ್ಲಿ ಕೊಲ್ಲಲ್ಪಟ್ಟನು. ಇಲ್ಲಿಗೆ ಹೊಯ್ಸಳ ಸಾಮ್ರಾಜ್ಯದ ಇತಿಹಾಸ ಮುಕ್ತಾಯವಾಯಿತು.

ಮುಮ್ಮಡಿ ಬಲ್ಲಾಳನು ಕಡೆಯ ಕದನದಲ್ಲಿ ವೀರಾವೇಶದಿಂದ ಹೋರಾಡಿದನು. ಕದನದ ಮೊದಲ ದಿನ ಜಯವನ್ನೂ ಗಳಿಸಿದನು. ಆದರೆ ಎರಡನೆಯ ದಿನ ಕುದುರೆಯಿಂದ ಬಿದ್ದವನನ್ನು ಸೆರೆಹಿಡಿದು ಸುಲ್ತಾನನ ಬಳಿ ಗೊಯ್ದರು. ಸುಲ್ತಾನನ ಆಜ್ಞೆಯಂತೆ ಬಲ್ಲಾಳನನ್ನು ಕೊಂದು, ಅವನ ಚರ್ಮ ಸುಲಿಸಿ, ಶರೀರದ ಒಳಗೆ ಹುಲ್ಲನ್ನು ತುಂಬಿ, ಮಧುರೆಯ ಕೋಟೆ ಬಾಗಿಲಿನಿಂದ ನೇತುಹಾಕಿದ್ದರಂತೆ! ಇದನ್ನು ಕಣ್ಣಾರೆ ಕಂಡ ಇಬ್ನ್ ಬಟುಟ ಇದನ್ನು ಉಲ್ಲೇಖಿಸಿದ್ದಾನೆ.

ಬೇಲೂರು ಗುಡಿ

ಹಾಸನ ಜಿಲ್ಲೆಯಲ್ಲಿರುವ ಬೇಲೂರು ಅಲ್ಲಿನ ಚೆನ್ನಕೇಶವ ದೇವಾಲಯದಿಂದಾಗಿ ಜಗದ್ವಿಖ್ಯಾತವಾಗಿದೆಯಷ್ಟೆ. ಇದಕ್ಕೆ ಪುರಾಣಪ್ರಸಿದ್ಧಿಯೂ ಇದ್ದಿತು. ವೇಲಾಪುರ ಎನ್ನುವ ಹೆಸರಿನಿಂದ ದಕ್ಷಿಣಕಾಶಿ ಎನಿಸಿಕೊಂಡಿದ್ದಿತು. ಹಳೆಯ ಶಾಸನಗಳಲ್ಲಿ ಈ ಊರನ್ನು 'ಬೆಲುಹೊರು' ಎಂದು ಕರೆದಿದ್ದಾರೆ. ಹೊಯ್ಸಳ ರಾಜರ ಪ್ರಧಾನ ನಗರವಾಗಿದ್ದು ಒಂದು ಕಾಲಕ್ಕೆ ಇದು ವೈಭವದಿಂದ ಮೆರೆಯಿತು.

ಇಲ್ಲಿರುವ ಚನ್ನಕೇಶವ ದೇವಾಲಯ ಹೊಯ್ಸಳ ವಾಸ್ತುಶಿಲ್ಪ ರೀತಿಗೆ ಆತ್ಯುತ್ತಮ ನಿದರ್ಶನ; ಈ ದೇಗುಲದ ಕಲೆ ಅತ್ಯಂತ ಸುಂದರವಾದುದು,

ಅದ್ಭುತವಾದುದು ಎಂದು ಹೆಸರು ತಳೆದಿದೆ. ಇಲ್ಲಿನ ಶಿಲ್ಪಕಲಾ ನೈಪುಣ್ಯವು ಅಸದೃಶವೆಂದು ಪ್ರಸಿದ್ಧಿ. ಈ ದೇವಾಲಯವು ಕ್ರಿಸ್ತಾಬ್ದ 1117 ರಲ್ಲಿ ನಿರ್ಮಿತವಾಯಿತು. ಇದನ್ನು ಕಟ್ಟಿಸಿದ ಕೀರ್ತಿ ಹೊಯ್ಸಳರಾಜ ವಿಷ್ಣು ವರ್ಧನ-ಬಿಟ್ಟಿದೇವ (1112-1152)ನದು. ಈ ರಾಜನು ಮೊದಲಿಗೆ ಜೈನ ನಾಗಿದ್ದನೆಂದೂ, ಶ್ರೀವೈಷ್ಣವಧರ್ಮದ ಆಚಾರ್ಯರಾದ ರಾಮಾನುಜಾ ಚಾರ್ಯರ ಪ್ರಭಾವದಿಂದ ವೈಷ್ಣವನಾದನೆಂದೂ ಪ್ರತೀತಿಯಿದೆ. ತನ್ನ ಹೊಸ ಧರ್ಮಾನುರಾಗವನ್ನು ಸ್ಪಷ್ಟಪಡಿಸಲು ತನ್ನ ನಾಡಿನಲ್ಲಿ ಐದು ವಿಷ್ಣು ದೇವಾ ಲಯಗಳನ್ನು ಕಟ್ಟಿಸಿದನೆಂದೂ ಹೇಳುತ್ತಾರೆ. ಬೇಲೂರಿನ ವಿಜಯನಾರಾಯಣ, ತಲಕಾಡು ಕೀರ್ತಿನಾರಾಯಣ, ಮೇಲುಕೋಟೆಯ ಚೆಲುವನಾರಾಯಣ, ಗದುಗಿನ ವೀರನಾರಾಯಣ, ತೊಂಡನೂರಿನ ಲಕ್ಷ್ಮೀನಾರಾಯಣ, ಇವೇ ಪಂಚ ನಾರಾಯಣ ಗುಡಿಗಳೆಂದು ಪ್ರತೀತಿ.

ಬೇಲೂರಿನ ದೇವರನ್ನು ಚೆನ್ನಕೇಶವ ಅಥವಾ ಕೇಶವ ಎಂದು ವ್ಯವಹರಿ ಸುವುದು ವಾಡಿಕೆಯಾದರೂ ಶಾಸನದಲ್ಲಿ 'ವಿಜಯನಾರಾಯಣ'ನೆಂದೇ ಇದೆ. ಇಲ್ಲಿ ಈಗಲೂ ಪೂಜೆ ನಡೆಯುವುದು ಶ್ರೀ ವೈಷ್ಣವ ಸಂಪ್ರದಾಯದಲ್ಲಿಯೇ. ಗುಡಿಯ ಆವರಣದೊಳಗೆ ಆಳ್ವಾರುಗಳನ್ನೂ, ಭಾಷ್ಯಕಾರ (ರಾಮಾನುಜಾ ಚಾರ್ಯ)ರ ಸನ್ನಿಧಿಯನ್ನೂ, ವೇದಾಂತದೇಶಿಕರ ಮತ್ತು ಮಣವಾಳ ಮಹಾ ಮುನಿಗಳ ಸನ್ನಿಧಿಗಳನ್ನೂ ಕಾಣಬಹುದು. ಬಿಟ್ಟಿದೇವನು ತಾನು ಗಳಿಸಿದ ವಿಜಯಗಳ ಸ್ಮಾರಕವಾಗಿ ಈ ಗುಡಿಯನ್ನು ಕಟ್ಟಿಸಿದುದರಿಂದ ಇದು 'ವಿಜಯ ನಾರಾಯಣ' ಎನಿಸಿಕೊಂಡಿತು. ದೇವಾಲಯದಲ್ಲಿ ಈ ರಾಜನ ಒಡ್ಡೋಲಗದ ಚಿತ್ರಣವೂ, ತನ್ನ ರಾಣಿ ಶಾಂತಲೆಯೊಂದಿಗಿರುವ ಭಕ್ತವಿಗ್ರಹವೂ ಇವೆ.

ಈಗಿರುವ ದೇವಾಲಯವನ್ನೆಲ್ಲ ವಿಷ್ಣುವರ್ಧನನೇ ಕಟ್ಟಿಸಿದನೆಂದಲ್ಲ. ಅವನ ತರುವಾಯ ಅರಸರಾದ ಒಂದನೆಯ ನರಸಿಂಹ, ಎರಡನೆಯ ಬಲ್ಲಾಳ ಇವರೂ ಗುಡಿಯ ವಿಸ್ತರಣಕ್ಕೆ ಕಾರಣರಾದರು. ವಿಜಯನಗರದ ರಾಜರೂ ಮೈಸೂರು ಒಡೆಯರೂ ದಾನದತ್ತಿಗಳಿಂದ ದೇವಾಲಯದ ಉತ್ಕರ್ಷೆಯನ್ನು ಗಳಿಸಿಕೊಟ್ಟರು. ಗರ್ಭಗುಡಿಯ ಮುಂದಿರುವ ಬಲಿಮಂಟಪವನ್ನು ನಾಗ

ನಾಯಕನೆನ್ನುವ ಪಾಳೈಗಾರನೂ, ಕಲ್ಯಾಣ ಮಂಟಪವನ್ನು ಮೈಸೂರಿನ ಕಂಠೀರವ ನರಸರಾಜ ಒಡೆಯರೂ ಕಟ್ಟಿಸಿದರೆನ್ನುವ ಉಲ್ಲೇಖವಿದೆ.

ದೇವಾಲಯದ ಮುಖ್ಯದೇವರು ವಿಜಯನಾರಾಯಣನಾದರೂ ಆವರಣ ದಲ್ಲಿ ಕಪ್ಪಚೆನ್ನಿಗರಾಯ, ವೀರ ನಾರಾಯಣ, ಸೋಮನಾಯಕಿ, ನರಸಿಂಹ, ಆಂಡಾಳ್ ಇವರ ಗುಡಿಗಳೂ ಇವೆ. ಕಪ್ಪೆ ಚೆನ್ನಿಗರಾಯನ ಮೂರ್ತಿಯನ್ನು ವಿಷ್ಣುವರ್ಧನನ ಪಟ್ಟದರಸಿ ಶಾಂತಲಾದೇವಿ ಪ್ರತಿಷ್ಠೆ ಮಾಡಿಸಿದಳು; ದೇವರ ವಿಗ್ರಹವನ್ನು ಬಾಬಾಬುಡನ್ ಗಿರಿಯಿಂದ ತಂದರೆಂದು ಹೇಳುತ್ತಾರೆ. ಕಾರಣಾಂತರದಿಂದ ಅದರ ಜೊತೆಗಿದ್ದ ಲಕ್ಷ್ಮೀ ವಿಗ್ರಹವನ್ನು ಅಲ್ಲಿಯೇ ಬಿಟ್ಟರಂತೆ; ಅದಕ್ಕಾಗಿ ದೇವೀದರ್ಶನಕ್ಕೆಂದು ಈ ನಾರಾಯಣ ವಿಗ್ರಹವನ್ನು ಬಾಬಾಬುಡನ್ ಗಿರಿಗೆ ವರ್ಷಕ್ಕೊಮ್ಮೆ ಕೊಂಡೊಯ್ಯುವ ಪದ್ಧತಿ ಇದೆಯಂತೆ. ಏಪ್ರಿಲ್ ತಿಂಗಳಿನಲ್ಲಿ ಈ ದೇವರ ರಥೋತ್ಸವ ವಿಜೃಂಭಣೆಯಿಂದ ನಡೆಯುತ್ತದೆ. ಸುತ್ತ ಮುತ್ತಲ ಹಳ್ಳಿಗಳಿಂದ ಆರೇಳು ಸಾವಿರ ಜನ ಬಂದು ನೆರೆಯುತ್ತಾರೆ.

ಹೊಯ್ಸಳ ಶೈಲಿ

ಗುಡಿಯ ಆವರಣ 444 ಅಡಿ ಉದ್ದ, 396 ಅಡಿ ಅಗಲವಿದೆ; ವಿಜಯ ನಾರಾಯಣನ ಒಳಗುಡಿಯೇ 178 ಅಡಿ ಉದ್ದ, 156 ಅಡಿ ಅಗಲವಿದೆ. ಎತ್ತರವಾದ ಜಗತಿಯ ಮೇಲೆ ಗುಡಿಯನ್ನು ಕಟ್ಟುವುದು ಹೊಯ್ಸಳ ರೀತಿ. ವಿಸ್ತಾರವಾದ ಆವರಣದ ನಡುವೆ ಜಗತಿಯ ಮೇಲೆ ನಾರಾಯಣನ ಗುಡಿ ಎದ್ದಿದೆ. ಹೊರ ಮಹಾದ್ವಾರದ ಮೇಲೆ ದ್ರಾವಿಡಶೈಲಿಯ ಗೋಪುರವಿದೆ. ಒಳಗುಡಿಯ ದಕ್ಷಿಣಕ್ಕಿರುವ ಬಾಗಿಲನ್ನು 'ಶುಕ್ರವಾರದ ಬಾಗಿಲು' ಎಂದೂ ಉತ್ತರಕ್ಕಿರುವ ಬಾಗಿಲನ್ನು 'ಸ್ವರ್ಗದ ಬಾಗಿಲು' ಎಂದೂ ಕರೆಯುತ್ತಾರೆ. ಈ ಬಾಗಿಲುಗಳ ಕೆತ್ತನೆ ಕೆಲಸ ವಿಷ್ಣುವರ್ಧನನ ಮೊಮ್ಮಗ ಇಮ್ಮಡಿ ಬಲ್ಲಾಳ ಮಾಡಿಸಿದ್ದು. ಪೂರ್ವಾಭಿಮುಖವಾಗಿರುವ ಬಾಗಿಲ ದ್ವಾರದೇಶದಲ್ಲಿ ರತಿ–ಮನ್ಮಥರನ್ನೂ, ದಕ್ಷಿಣದ ಬಾಗಿಲ ಮೇಲೆ ಗರುಡ ಹನುಮಂತರನ್ನೂ, ಉತ್ತರದ ಬಾಗಿಲ ಮೇಲೆ ಚಾಮರಗ್ರಾಹಿಗಳಾದ ಹೆಂಗಸರನ್ನೂ ಕಡೆದಿರು ವುದು ಸ್ವಾರಸ್ಯವಾಗಿದೆ.

ಒಂದೊಂದು ಬಾಗಿಲ ಇಕ್ಕೆಲಗಳಲ್ಲಿಯೂ ಗೋಪುರದ ಆಕಾರಗಳಲ್ಲಿರುವ ಎರಡು ಗೂಡುಗಳನ್ನೂ ಅದಕ್ಕೆ ಸ್ವಲ್ಪ ದೂರ ಕೆಳನೆಲೆಯಲ್ಲಿ ಮತ್ತೆರಡು ಇಂಥವೇ ಗೂಡುಗಳನ್ನೂ ಕಾಣಬಹುದು. ಮೇಲಿನ ಗೂಡುಗಳಲ್ಲಿ ವಿಷ್ಣು ಮೂರ್ತಿಗಳಿವೆ ; ಕೆಳಗಿನವಲ್ಲಿ ವೀರಭದ್ರ, ಭೈರವ, ಮಹಿಷಮರ್ದಿನಿ ಮೊದ ಲಾದ ದೇವತೆಗಳಿವೆ. ದ್ವಾರದೇಶದ ಬಳಿಯೇ ಸಳನು ಹುಲಿಯನ್ನು ಕೊಲ್ಲು ತ್ತಿರುವ ಮುದ್ರಿಕಾ ಶಿಲ್ಪಗಳಿವೆ. ಹೊಯ್ಸಳ ವಂಶಕ್ಕೆ ಮೂಲ ಪುರುಷನಾದ ಸಳನು ತನ್ನ ಗುರುವಿನ ಬಳಿ ಇದ್ದಾಗ ಹುಲಿಯೊಂದು ಬಂದಿತಂತೆ. ಗುರುವು 'ಹೊಯ್ (ಹೊಡಿ), ಸಳ' ಎನ್ನಲು ಸಳನು ತನ್ನ ಬಳಿಯಿದ್ದ ಕಠಾರಿಯೊಂದ ರಿಂದಲೇ ಧೈರ್ಯದಿಂದ ಹುಲಿಯನ್ನು ಸೆಣಸಿದನಂತೆ, ಹೊಯ್ಸಳ ಶೈಲಿಯ ಗುಡಿಗಳಲ್ಲಿ ಈ ಶಿಲ್ಪವನ್ನು ಮುದ್ರಿಕೆಯಂತೆ ಬಳಸಿದ್ದಾರೆ. ಬೇಲೂರಿನ ಹೊಯ್ಸಳನ ಶಿಲ್ಪ ಭವ್ಯವಾಗಿದೆ.

ಜಗತಿಯ ಸುತ್ತಲೂ ಆನೆ ಸಾಲು, ಸಿಂಹಲಲಾಟಗಳ ಸಾಲು, ಲತಾ ವಿನ್ಯಾಸ, ಯಕ್ಷಯಕ್ಷಿಣಿಯರ ಸಾಲು ಮೊದಲಾದುವುಗಳನ್ನು ಕಡೆದಿದ್ದಾರೆ. ಜಗತಿಯ ಮೇಲೆ ಕೊರೆದ ಜಾಲಂದ್ರಗಳೂ ಹೊಯ್ಸಳ ಶೈಲಿಗೆ ವಿಶಿಷ್ಟ ವಾಗಿದ್ದು ರಮಣೀಯವಾಗಿವೆ. ಜಾಲಂದ್ರದ ಇಕ್ಕೆಲಗಳಲ್ಲೂ ನಯವಾದ ಕೆಲಸದ ಕಂಬಗಳನ್ನು ನಿಲ್ಲಿಸಿದ್ದಾರೆ. ಈ ಕಂಬಗಳ ಮೇಲ್ಭಾಗದಲ್ಲಿ ಬೋದಿಗೆಗೆ ಆನಿಸಿಕೊಂಡಿರುವಂತೆ ವಿವಿಧಭಂಗಿಗಳ 'ಮದನಿಕೆ' ವಿಗ್ರಹಗಳಿವೆ. ದೇವಾ ಲಯದ ಸುತ್ತಲೂ ಇಪ್ಪತ್ತು ಜಾಲಂದ್ರಗಳೂ ನಲವತ್ತು ಮದನಿಕೆ ವಿಗ್ರಹ ಗಳೂ ಇದ್ದುವು. ಈಗ ಮದನಿಕೆ ವಿಗ್ರಹಗಳಲ್ಲಿ ಎರಡಿಲ್ಲ.

ಶಿಲಾಬಾಲಿಕೆಯರು

ಈ ಬೇಲೂರಿನ ಶಿಲಾಬಾಲಿಕೆಯರು ಶಿಲ್ಪಸೌಂದರ್ಯಕ್ಕೆ ವಿಖ್ಯಾತ ವಾಗಿದ್ದಾರೆ. ಶಿಲ್ಪಿಯ ಕಲ್ಪನೆ, ಜಾಣ್ಮೆ ಎರಡೂ ಮೇಲ್ಮಟ್ಟದವು. ಇದನ್ನೇ ಸಾಲಭಂಜಿಕೆಯರು, ಪುತ್ಥಳಿಗಳು ಎಂದೂ ಕರೆಯುತ್ತಾರೆ. ಈ ವಿಗ್ರಹಗಳ ಪಾದಪೀಠಗಳಲ್ಲಿ ಅವನ್ನು ಕಡೆದ ರೂವಾರಿಗಳ ಹೆಸರುಗಳನ್ನೂ ಒಕ್ಕಣಿಸಿರು ವುದು ಈ ಶಿಲ್ಪಗಳ ವಿಶೇಷ. ದಾಸೋಜ, ಮಸಣೋಜ, ಮಲ್ಲಿತಮ್ಮ ಮೊದ

ಲಾದ ಹಲವು ರೂವಾರಿಗಳ ಹೆಸರುಗಳನ್ನು ಇಲ್ಲಿ ಕಾಣಬಹುದು. ಬಳ್ಳಿಗಾವೆ ಆ ಕಾಲಕ್ಕೆ ರೂವಾರಿಗಳ ಊರೆಂದು ಪ್ರಸಿದ್ಧವಾಗಿದ್ದಿತು. ಬಳ್ಳಿಗಾವೆಯ ದಾಸೋಜ 'ರೂವಾರಿಗಳ ಗಂಡ'ನಾಗಿದ್ದವನು.

ಈ ಶಿಲಾಬಾಲಿಕೆಯರ ಚಿತ್ರಣದಲ್ಲಿ ದುರ್ಗಿಯರೂ, ಬಿಲ್ಲುಗಾರ್ತಿಯರೂ ಬೇಡಿತಿಯರೂ, ನರ್ತಕಿಯರೂ, ಸಂಗೀತ ರಸಿಕೆಯರೂ, ಮುಗ್ಧೆಯರೂ ಇದ್ದಾರೆ. ಸೀರೆಯನ್ನು ಕೊಡವಿ ಚೇಳನ್ನು ಝಾಡಿಸುವ ಭೀರುವೂ ಒಬ್ಬಳಿದ್ದಾಳೆ. ಕಪಿಯನ್ನು ಓಡಿಸಲೆತ್ನಿಸಿ ಬವಣೆ ಪಡುತ್ತಿರುವ ಮುಗ್ಧೆಯೂ ಒಬ್ಬಳಿದ್ದಾಳೆ. ಬೇರೆ ಬೇರೆ ಭಂಗಿಗಳು, ಬೇರೆ ಬೇರೆ ಸಂದರ್ಭಗಳು, ಬೇರೆ ಬೇರೆ ಅಲಂಕರಣಗಳು ಇವೆಲ್ಲವೂ ಅದ್ಭುತ ಕೃತಿಗಳೇ.

ಜಾಲಂಧ್ರಗಳಲ್ಲಿ ಹಲವಾರು ಪುರಾಣ ಕಥೆಗಳನ್ನು ಕಡೆದಿದ್ದಾರೆ. ಇವುಗಳಲ್ಲಿ ಪ್ರಹ್ಲಾದ ಚರಿತ್ರೆ ಮುಖ್ಯವಾದುದು. ದೊಡ್ಡ ದೊಡ್ಡ ಎಂಬತ್ತು ಶಿಲ್ಪ ಕೃತಿಗಳನ್ನೂ ಇಲ್ಲಿಯೇ ಗೋಡೆಗಳ ಮೇಲೆ ಕಾಣಬಹುದು. ತಳಪಾದಿಯ ಮೇಲೆ ವಿಲಾಸೀಜನರ ಸಣ್ಣ ಪ್ರತಿಮೆಗಳು ಸಾಲು ಸಾಲಾಗಿವೆ; ಸೂಕ್ಷ್ಮವಾಗಿ ರಾಮಾಯಣ ಮತ್ತು ಮಹಾಭಾರತ ಕಥೆಗಳನ್ನೂ ಕಂಡರಿಸಿದ್ದಾರೆ.

ಗುಡಿಯ ರಂಗಮಂಟಪವು ಕೊಳದ ಆಕಾರದಲ್ಲಿದ್ದು, ಗರ್ಭಗುಡಿಯು ನಕ್ಷತ್ರಾಕೃತಿಯಲ್ಲಿದೆ. ಇಲ್ಲಿ ಶಿಲ್ಪಕ್ಕೆ ಬಳಸಿರುವದೆಲ್ಲ ಬಳಪದ ಕಲ್ಲು. ಈ ಕಲ್ಲಿನಲ್ಲಿ ಕೆತ್ತನೆ ಕೆಲಸ ಸುಲಭವೆನ್ನುವುದೇನೋ ದಿಟ ; ಆದರೆ ಕಲ್ಪನಾವೈವಿಧ್ಯಕ್ಕೆ ಸರಿಯಾಗಿ ಶಿಲ್ಪವೂ ಒದಗಿರುವುದು ಸ್ವಾರಸ್ಯವಾಗಿದೆ. ಅಲ್ಲಿ ಕಾಣಿಸಿರುವ ಸಂಗೀತ ವಾದ್ಯಗಳೇ ವಿಶೇಷವಾದ ಅಧ್ಯಯನಕ್ಕೆ ಅರ್ಹವಾಗಿವೆ. ಗರ್ಭಗೃಹದ ಹೊರಗೋಡೆಯ ಸುತ್ತಲೂ ಇರುವ ವೇದಿಯ ಮೇಲೆ ಸಾಲು ಸಾಲಾಗಿ ಆನೆಗಳು, ಸಿಂಹಗಳು, ಕುದುರೆ ಸವಾರರು ಇವುಗಳನ್ನು ತುಂಬ ಚಾತುರ್ಯದಿಂದ, ಕಲ್ಪನಾಶಕ್ತಿಯಿಂದ ಬಿಡಿಸಿದ್ದಾರೆ. ಇವುಗಳಲ್ಲಿ ಒಂದಿದ್ದಂತೆ ಇನ್ನೊಂದಿಲ್ಲ ; ಒಂದೊಂದೂ ಅಸದೃಶವೇ.

ಒಳಕೆಲಸ

ಬೇಲೂರು ದೇವಾಲಯದ ಒಳಕೆಲಸ ತುಂಬ ಚೆನ್ನಾಗಿದೆ; ಹೊರ ಕೆಲಸ

ಕ್ಕಿಂತಲೂ ಉತ್ತಮವಾದುದು ಎನ್ನಬಹುದು, ಈ ಕಾರಣದಿಂದ 'ಬೇಲೂರು ಒಳಗೆ ನೋಡು, ಹಳೇಬೀಡು ಹೊರಗೆ ನೋಡು' ಎನ್ನುವ ಗಾದೆ ಬಂದಿದೆ. ನವರಂಗದ ಕಂಬಗಳು ಸೊಗಸಾದ ಕಲಾಕೃತಿಗಳು; ಬೇರೆ ಬೇರೆ ವಿನ್ಯಾಸಗಳಲ್ಲಿದ್ದು ಅಚ್ಚರಿಯನ್ನುಂಟುಮಾಡುತ್ತವೆ. ಇವುಗಳಲ್ಲಿ 'ನರಸಿಂಹನ ಕಂಬ' ಮತ್ತು 'ಮೋಹಿನೀ ಕಂಬ' ಇವು ವಿಖ್ಯಾತವಾಗಿವೆ. ನವರಂಗದ ಚಾವಣಿಯಲ್ಲಿಯೂ ಶಿಲ್ಪದ ಹೊಳೆಯನ್ನೇ ಹರಿಸಿದ್ದಾರೆ, ಅದರಲ್ಲೂ ಮಧ್ಯದ ಭುವನೇಶ್ವರಿಯನ್ನು ಮಾತಿನಿಂದ ಬಣ್ಣಿಸುವುದು ಸಾಧ್ಯವಿಲ್ಲ. ಈ ಸೊಗಸನ್ನು ಬೇರೆ ಯಾವ ದೇವಾಲಯದಲ್ಲಿಯೂ ನೋಡಲಾರೆವು.

ಈ ನವರಂಗದ ನಾಲ್ಕು ಕಂಬಗಳಿಗೆ ಒರಗಿದಂತೆ ನಾಲ್ವರು ಮದನಿಕೆಯರ ಚಿತ್ರಣವಿದೆ: ಕೇಶಶೃಂಗಾರದಲ್ಲಿ ತನ್ಮಯಳಾದವಳು, ಶುಕಪಾಣಿಯಾಗಿ ಮುಗ್ಧೆಯಾದವಳು, ನೃತ್ಯತನ್ಮಯರಾದವರಿಬ್ಬರು. ಗಿಣಿಯನ್ನು ಹಿಡಿದವಳ ಕೈ ಬಳೆಯನ್ನು ಅತ್ತಿತ್ತ ಸರಿಸಬಹುದು! ಕಲ್ಲಿನ ಕೆಲಸ ಎಷ್ಟು ಸೂಕ್ಷ್ಮವಾಗಿರಬಲ್ಲುದು ಎನ್ನುವುದಕ್ಕೆ ಇದು ನಿದರ್ಶನ. ಸುಖನಾಸಿಯ ಮುಂಭಾಗದ ಪಟ್ಟಿಯ ಮೇಲೆ ವಿಷ್ಣುವಿನ 24 ಲೀಲಾಮೂರ್ತಿಗಳನ್ನು ಕಡೆದಿದ್ದಾರೆ.

ಗರ್ಭಗುಡಿಯಲ್ಲಿರುವ ಮೂರ್ತಿ ಆರಡಿ ಎತ್ತರವಿದೆ; ಪ್ರಭಾವಳಿಯ ಮೇಲೆ ದಶವತಾರಗಳನ್ನು ಬಿಡಿಸಿದ್ದಾರೆ. ಈ ಮೂರ್ತಿಯ ಲಾವಣ್ಯ ಸಜೀವವಾದುದು; ಮಾತಿನಿಂದ ಮೂಡಿಬರತಕ್ಕದ್ದಲ್ಲ. ಹಾಗೆಯೇ ನವರಂಗದ ಗೂಡುಗಳಲ್ಲಿ ಇಟ್ಟಿರುವ ವಿಗ್ರಹಗಳೂ ಸುಂದರವಾದವು. ಒಂದು ಗೂಡಿನಲ್ಲಿರುವ ಮಹಿಷಾಸುರಮರ್ದಿನಿ - ಚಾಮುಂಡೇಶ್ವರಿಯ ವಿಗ್ರಹದ ಸೌಂದರ್ಯವನ್ನು ನೋಡಿಯೇ ತಿಳಿಯಬೇಕು; ಕಣ್ಣಿಗೂ ಮನಸ್ಸಿಗೂ ಅದೊಂದು ಹಬ್ಬ.

ಇತರ ಗುಡಿಗಳು

ಇದೇ ಆವರಣದಲ್ಲಿರುವ ಕಪ್ಪೆಚೆನ್ನಿಗರಾಯನ ಗುಡಿಯೂ ಸರಳ ಸುಂದರವಾಗಿದೆ. ಈ ಗುಡಿಯಲ್ಲಿಯೇ ವೇಣುಗೋಪಾಲನ ಮೂರ್ತಿಯೂ ಇದೆ. ಸುಖನಾಸಿಯ ತೋರಣ ಪ್ರಾಂತ್ಯದಲ್ಲಿ ಕಡೆದಿರುವ ಲಕ್ಷ್ಮೀನಾರಾಯಣ ವಿಗ್ರ

ಹವೂ, ಅದರ ಎಡಬಲಗಳಲ್ಲಿರುವ ಮಕರಗಳೂ ಸೊಗಸಾದ ಶಿಲ್ಪಗಳು. ನವ ರಂಗದ ಕಂಬಗಳ ಮೇಲೆ ಮೂರು ಮದನಿಕೆ ಗೊಂಬೆಗಳಿವೆ. ವೀರನಾಯಣನ ಗುಡಿಯ ಹೊರಗೋಡೆಯ ಮೇಲೆ ಸುಮಾರು ಅರವತ್ತು ದೊಡ್ಡ ದೊಡ್ಡ ವಿಗ್ರಹಗಳಿವೆ. ಉತ್ತರ ಭಾಗದ ಗೋಡೆಯ ಮೇಲೆ ಭೀಮನು ಭಗದತ್ತ ನೊಂದಿಗೆ ಹೋರಾಡುತ್ತಿರುವ ದೃಶ್ಯವನ್ನು ಹೃದಯಂಗಮವಾಗಿ ಕಡೆದಿದ್ದಾರೆ.

ಬೇಲೂರಿನಲ್ಲಿ ಕೇಶವ ದೇವಾಲಯವಲ್ಲದೆ ನಂಜುಂಡೇಶ್ವರ, ಪಾತಾಳೇಶ್ವರ, ಶಂಕರೇಶ್ವರ, ಅಮೃತೇಶ್ವರ ದೇವಾಲಯಗಳೂ ಇವೆ.

ಮರಳಾಗಿರುವ ತಲಕಾಡು

ಕೌತುಕಗಳನ್ನೇ ಕಾಣಲೆಂದು ನಮ್ಮ ನಾಡಿನಲ್ಲಿ ಅಡ್ಡಾಡಿದರೆ ನೂರು ವರ್ಷಗಳ ಒಂದು ಬಾಳುವೆ ಸಾಲದು ಎನಿಸುತ್ತದೆ. ಜೀವವೈವಿಧ್ಯ, ಪ್ರಕೃತಿ ವೈಚಿತ್ರ್ಯ, ಶಿಲ್ಪ ಚಾತುರ್ಯ ಇವುಗಳಲ್ಲಿ ಈ ನಾಡನ್ನು ಸರಿದೂಗುವ ಇನ್ನೊಂದು ನಾಡು ಇರದು ಎನಿಸುತ್ತದೆ. ಇತಿಹಾಸದ ರಸವಾಹಿನಿಯಲ್ಲಿ ಮೂಡಿ ಬಂದ ಸ್ವಾರಸ್ಯಗಳು ಹಳ್ಳಿ ಹಳ್ಳಿಗಳಲ್ಲಿಯೂ ಕಾಣಬರುತ್ತವೆ. ನಿದರ್ಶನಕ್ಕೆ ತಲಕಾಡು.

ಇಲ್ಲಿ ಪ್ರಕೃತಿ ವೈಚಿತ್ರ್ಯದೊಂದಿಗೆ ಮನುಷ್ಯನ ಸಾಹಸವೂ ಬೆರೆತು ಸ್ವಾರಸ್ಯದ ರಸಘಟ್ಟಿ ಸಿದ್ಧವಾಗಿದೆ. ಕಾವೇರಿ ನದಿಯ ಎಡ ದಂಡೆಯ ಮೇಲೆ ಮೈಸೂರಿಗೆ ಸುಮಾರು ಮೂವತ್ತು ಮೈಲಿ ದೂರದಲ್ಲಿ ಇರುವ ಈ ಹಳ್ಳಿಯಲ್ಲಿ ಗಾಳಿಗೆ ತೂರಿಕೊಂಡು ಬಂದು ಮರಳು ರಾಶಿ ರಾಶಿಯಾಗಿ ಬೀಳುತ್ತದೆ. ಹಳ್ಳಿಯನ್ನು ಬಿಟ್ಟು ಹತ್ತು ಹೆಜ್ಜೆ ಇಟ್ಟರೆ ಇದೇ ಕಾವೇರಿ ತೀರದಲ್ಲಿಯೇ ಈ ಕೌತುಕವಿಲ್ಲ. ಮರಳಿನ ಹಾವಳಿಯೆಂದರೆ ಊರಿಗೆ ಊರೇ ಮುಚ್ಚಿ ಹೋಗುತ್ತದೆ. ತಲಕಾಡಿನಲ್ಲಿ ಮಾತ್ರ ಈ ವಿಚಿತ್ರ. ಬೇರೆ ಎಲ್ಲೂ ಕಾಣಸಿಗದು.

ಈ ವೈಚಿತ್ರ್ಯವು ಪ್ರಕೃತಿಯ ಮಾತಾದರೆ ಪ್ರತಿ ವರ್ಷವೂ ಭೂತಾಕಾರವಾಗಿ ಬೀಳುವ ಈ ಮರಳನ್ನೆಲ್ಲ ಅಲಸಿಕೆಯಿಲ್ಲದೆ ಅಗೆದು ಸೊಗಸಾದ ದೇಗುಲಗಳನ್ನು ನಿಲ್ಲಿಸಿದ ಮನುಷ್ಯನ ಸಾಹಸವನ್ನೂ, ಜಾಣ್ಮೆಯನ್ನೂ ಏನನ್ನೋಣ ? ತಲಕಾಡಿನ ಮರಳುದಿಣ್ಣೆಗಳಲ್ಲಿ ಹುದುಗಿಹೋಗಿರುವ ದೇವಾಲಯಗಳು ಮೂವತ್ತು ಇವೆಯಂತೆ ! ಪಂಚಲಿಂಗ ದರ್ಶನದ ಸಂದರ್ಭದಲ್ಲಿ ಕಷ್ಟಪಟ್ಟು ನಾಲ್ಕೈದು ದೇವಾಲಯಗಳನ್ನು ಅಷ್ಟೇ ಕಾಣಿಸುತ್ತಾರೆ. ನಿಸರ್ಗದ ಅಬ್ಬರಕ್ಕೆ

ಅಂಜದೆ, ಅಳುಕದೆ ದಿವ್ಯವಾದ ದೇವಾಲಯಗಳನ್ನೇ ಅಲ್ಲಿ ನಿಲ್ಲಿಸಿದುದೂ ಅದ್ಭುತವಲ್ಲವೆ ?

ಈಗ ತಲಕಾಡು ಕುಗ್ರಾಮ; ತಿರಮಕೂಡಲುನರಸೀಪುರ ತಾಲ್ಲೂಕಿಗೆ ಸೇರಿದ ಹೋಬಳಿ. ಆದರೆ ಒಂದು ಕಾಲಕ್ಕೆ ಇದು ಸುಪ್ರಸಿದ್ಧ ನಗರವಾಗಿದ್ದಿತು. ಗಂಗರು, ಚೋಳರು, ಹೊಯ್ಸಳರು, ವಿಜಯನಗರದ ಸಾಮಂತರು, ಮೈಸೂರು ಒಡೆಯರು–ಇವರಿಗೆಲ್ಲ ರಾಜಧಾನಿಯಾಗಿದ್ದಿತು. ಕ್ರಿಸ್ತಾಬ್ದ 250ರ ಸುಮಾರಿಗೆ ಸಿದ್ಧವಾದ ಒಂದು ಶಾಸನದಲ್ಲಿಯೇ ತಲಕಾಡು (ಕರ್ನಾಟಕ ದೇಶದ ದಲವನಪುರ) ಗಂಗರಾಜನಾದ ಹರಿವರ್ಮನ ರಾಜಧಾನಿಯಾಗಿದ್ದ ಪ್ರಸ್ತಾಪವಿದೆ. ಎಂದರೆ ಒಂದು ಸಾವಿರದ ಎಳುನೂರು ವರ್ಷಗಳಿಂದಲೂ ತಲಕಾಡು ಪ್ರಸಿದ್ಧವಾಗಿರುವುದು ನಮಗೆ ತಿಳಿದು ಬಂದಿದೆ. ಅದಕ್ಕೆ ಮುಂಚೆಯೂ ಇದ್ದಿರಬಹುದು.

ದೇವಾಲಯಗಳ ಬೀಡು

ಕ್ರಿಸ್ತಾಬ್ದ ಹನ್ನೊಂದನೆಯ ಶತಮಾನದವರೆಗೂ ಗಂಗರಾಜರು ತಲಕಾಡನ್ನೇ ರಾಜಧಾನಿಯನ್ನಾಗಿ ಮಾಡಿಕೊಂಡು ಈ ಪ್ರದೇಶವನ್ನೆಲ್ಲ ಆಳುತ್ತಿದ್ದರು. ಅನಂತರ ತಮಿಳುನಾಡಿನ ಚೋಳ ರಾಜರು ಇದನ್ನು ಆಕ್ರಮಿಸಿಕೊಂಡರು. ಅವರ ಕಾಲಕ್ಕೆ ತಲಕಾಡು ರಾಜರಾಜಪುರವೆನಿಸಿಕೊಂಡಿದ್ದಿತು. ರಾಜರಾಜ ಚೋಳನ ಪ್ರಶಸ್ತಿಗಾಗಿ ಇಟ್ಟ ಹೆಸರು ಇದು. ರಾಜರಾಜೇಶ್ವರನ ದೇವಸ್ಥಾನವು ಇದ್ದಿತಂತೆ. ಈಗ ಅದು ಕಾಣಿಸುವುದಿಲ್ಲ. ತಲಕಾಡಿನಲ್ಲಿರುವ ಹತ್ತಾರು ದೇವಾಲಯಗಳು ಇವರ ಕಾಲದಲ್ಲಿಯೇ ಆದುವು. ಮರಳಿನ ದಾಳಿಗೆ ತುತ್ತಾಗದೆ ಉಳಿದಿರುವ ವೈದ್ಯೇಶ್ವರ ದೇವಾಲಯವೂ ಚೋಳರ ಕಲಾಕೃತಿಯೇ. ದ್ರಾವಿಡ ಶೈಲಿಯ ಈ ದೇಗುಲವು ಸೊಗಸಾದ ಕಟ್ಟಡ. ಪೂರ್ವಕ್ಕೆ ಮುಖಮಾಡಿ ನಿಂತಿರುವ ಈ ದೇವಾಲಯದ ಹೊರ ಪ್ರಾಕಾರದಲ್ಲಿ ಸುಂದರವಾದ ಶಿಲ್ಪಗಳಿವೆ. ಇಲ್ಲಿರುವ ದಕ್ಷಿಣಾಮೂರ್ತಿ, ಶಕ್ತಿಸಹಿತ ಗಣಪತಿ, ಅಪೂರ್ಣ ಸುಬ್ರಮಣ್ಯ, ಸ್ಥಾನಕ ವಿಷ್ವಕ್ಸೇನ, ಮನೋನ್ಮಣಿ ಮೊದಲಾದ ಮೂರ್ತಿಗಳು ಶಿಲ್ಪಿಯ ಕೌಶಲಕ್ಕೆ ನಿದರ್ಶನಗಳು.

ಚೋಳರನ್ನು ಇಲ್ಲಿಂದ ಹೊಡೆದಟ್ಟಿ "ವೀರ ಭುಜಬಲ ವಿಷ್ಣುವರ್ಧನ ಹೊಯ್ಸಳದೇವ"ನು ತಲಕಾಡುಗೊಂಡ ಎಂಬ ಪ್ರಶಸ್ತಿಯನ್ನು ಪಡೆದನು. ಈ ಸಾಹಸದ ಸ್ಮಾರಕವಾಗಿಯೇ ಅಲ್ಲಿನ ಕೀರ್ತಿ ನಾರಾಯಣ ದೇವಸ್ಥಾನ ನಿಂತಿರುವುದು. ವಿಷ್ಣುವರ್ಧನನು ಇದನ್ನು ಕ್ರಿಸ್ತಾಬ್ದ 1117 ರಲ್ಲಿ ಕಟ್ಟಿಸಿದನೆಂದು ಅಲ್ಲಿನ ಗ್ರಂಥಾಕ್ಷರ ಶಾಸನ ಹೇಳುತ್ತದೆ. ಬೇಲೂರಿನ ಚೆನ್ನಕೇಶವ ದೇವಸ್ಥಾನವೂ ಇದೇ ಸುಮಾರಿನಲ್ಲಿಯೇ ಮೈದಳೆಯಿತಷ್ಟೆ. ಪಂಚಲಿಂಗಗಳಂತೆಯೇ ಪಂಚನಾರಾಯಣ ಮೂರ್ತಿಗಳೂ ಪ್ರಸಿದ್ಧವಾಗಿವೆ. ಚೋಳರು ಪಂಚಲಿಂಗ ದೇವಸ್ಥಾನಗಳನ್ನು ಕಟ್ಟಿಸಿದರೆ ಹೊಯ್ಸಳ ರಾಜರು ಪಂಚ ನಾರಾಯಣ ದೇವಸ್ಥಾನಗಳನ್ನು ಕಟ್ಟಿಸಿದನು. ಚೋಳರು ಶೈವರು, ವಿಷ್ಣುವರ್ಧನನು ವೈಷ್ಣವ. ತಲಕಾಡಿನ ಕೀರ್ತಿ ನಾರಾಯಣ, ಗದುಗಿನ ವೀರ ನಾರಾಯಣ ತೊಂಡನೂರಿನ ಲಕ್ಷ್ಮೀನಾರಾಯಣ, ಮೇಲುಕೋಟೆಯ ಚೆಲುವ ನಾರಾಯಣ ಇವು ಪಂಚ-ನಾರಾಯಣ ಮೂರ್ತಿಗಳು.

ಮರಳ ಗರ್ಭದಲ್ಲಿ......

ಕೀರ್ತಿ ನಾರಾಯಣ ದೇವಸ್ಥಾನವು ಹೊಯ್ಸಳ ಸಂಪ್ರದಾಯಕ್ಕೆ ಸೇರಿದ ಕೃತಿ. ಸಾಮಾನ್ಯವಾಗಿ ವಿಮಾನ ಗೋಪುರವೊಂದನ್ನು ಬಿಟ್ಟು ಉಳಿದೆಲ್ಲ ಭಾಗಗಳೂ ಮರಳಿನಿಂದ ಮುಚ್ಚಿ ಹೋಗಿರುತ್ತವೆ. ಆಗಾಗ ಕಷ್ಟಪಟ್ಟು ಮಹಾದ್ವಾರದ ಬಳಿ ಮರಳನ್ನು ಅಗೆದು ಒಳಗೆ ಹೋಗಲು ದಾರಿ ಮಾಡುತ್ತಾರೆ. ಶಂಖ, ಚಕ್ರ, ಗದಾ, ಪದ್ಮಧಾರಿಯಾದ ಕೀರ್ತಿ ನಾರಾಯಣನ ಎಂಟಡಿ ಸ್ಥಾನಕ ಮೂರ್ತಿ ತುಂಬ ಭವ್ಯವಾದ ಕಲಾಕೃತಿ. ಗರ್ಭಗೃಹ, ಸುಖನಾಸಿ, ನವರಂಗಗಳು ಅಚ್ಚುಕಟ್ಟಾಗಿ ಕಲಾಪೂರ್ಣವಾಗಿವೆ. ನವರಂಗದ ಕಂಬಗಳನ್ನೂ ಬೋದಿಗೆಗಳನ್ನೂ ನಾಜೂಕಾಗಿ ಬಿಡಿಸಿದ್ದಾರೆ. ದೇವಾಲಯದ ಹೊರ ಭಾಗವೆಲ್ಲ ಮರಳಿನಿಂದ ಮುಚ್ಚಿ ಏನೂ ಕಾಣುವುದಿಲ್ಲ. ಮರಳಿನ ಹಾವಳಿಗೆ ಅಂಜಿಯೇ ಕೀರ್ತಿ ನಾರಾಯಣನ ಉತ್ಸವ ಮೂರ್ತಿಯನ್ನು ದೇವಾಲಯದಲ್ಲಿಡದೆ, ದೂರದ ಮನೆಯೊಂದರಲ್ಲಿ ಇಟ್ಟಿರುತ್ತಾರೆ. ಲಕ್ಷ್ಮಿಗೆ ಪ್ರಾಕಾರದಲ್ಲಿ ಬೇರೊಂದು ಮಂದಿರ ಇದ್ದಿತು. ಈಗ ಇದು ಮರಳಿನಲ್ಲಿ ಹುದುಗಿಹೋಗಿದೆ. ಅಲ್ಲಿನ ಮೂರ್ತಿಯನ್ನು

ಕೀರ್ತಿ ನಾರಾಯಣನ ನವರಂಗಕ್ಕೆ ತಂದು ಅಲ್ಲಿಯೇ ಇರಿಸಿದ್ದಾರೆ. ಶಠಕೋಪ ಆಳ್ವಾರರ ಮತ್ತು ಪಿಳ್ಳೆ-ಲೋಕಾಚಾರ್ಯರ ವಿಗ್ರಹಗಳೂ ಈ ದೇವಾಲಯದ ಲ್ಲಿವೆ.

ಹೊಯ್ಸಳರ ಕಾಲದಲ್ಲಿ ತಲಕಾಡು ಏಳು ಊರುಗಳು ಸೇರಿದ ಪ್ರದೇಶ ವಾಗಿದ್ದಿತು; ಅಲ್ಲಿ ಐದು ಮಠಗಳೂ ಇದ್ದುವಂತೆ. ಈಗಲೂ ಸ್ಮಾರ್ತಭಾಗವತ ಸಂಪ್ರದಾಯಕ್ಕೆ ಸೇರಿದ ಕೊಪ್ಪಳ ಮಠ ಉಳಿದಿದೆ. ಈ ಮಠದ ಮೂಲ ಪುರು ಷರು ಶಂಕರಾಚಾರ್ಯರ ಸಾಕ್ಷಾಚ್ಛಿಷ್ಯರಾದ ಪದ್ಮಪಾದಾಚಾರ್ಯರಂತೆ. ತಲಕಾ ಡಿಗೆ ಸ್ವಲ್ಪ ದೂರದಲ್ಲಿರುವ ಕೊಪ್ಪಳ ಎನ್ನುವ ಗ್ರಾಮ ಈ ಮಠಕ್ಕೆ ಉಂಬಳಿ ಯಾಗಿದ್ದಿತು. 1868ರವರೆಗೂ ತಲಕಾಡು ತಾಲ್ಲೂಕಾಗಿಯೇ ಉಳಿದಿದ್ದಿತು; ಇದು ಹೊಯ್ಸಳರ ವ್ಯವಸ್ಥೆ. ಈಗ ಮಾಲಿಂಗಿ ಮಡುವು ಇರುವ ಸ್ಥಳವು ಮೊದಲಿಗೆ ದೊಡ್ಡ ಊರಾಗಿದ್ದಿತು. ಅದನ್ನು ಜನನಾಥಪುರ ಅಥವಾ ಮಾಯಿ ಲಿಂಗಿ ಎನ್ನುತ್ತಿದ್ದರು. ಪಂಚಲಿಂಗಗಳಲ್ಲಿ ಒಂದಾದ ಅರ್ಕೇಶ್ವರ ದೇವಾಲಯುವಿ ರುವ ವಿಜಯಪುರ ತಲಕಾಡಿಗೆ ಎರಡು ಮೈಲಿ ದೂರದಲ್ಲಿರುವ ಹಳ್ಳಿ. ಮೊದ ಲಿಗೆ ಇಲ್ಲಿದ್ದ ಕೋಟೆ ಕೊತ್ತಲಗಳ ಅವಶೇಷ ಇಂದಿಗೂ ಉಳಿದಿದೆ.

ಹದಿನಾಲ್ಕನೆಯ ಶತಮಾನದ ಮಧ್ಯ ಭಾಗದಲ್ಲಿ ಹೊಯ್ಸಳರ ಪ್ರಾಬಲ್ಯ ಕುಗ್ಗಿ, ವಿಜಯನಗರ ಅರಸರ ಸಾಮಂತರು ತಲಕಾಡು ಪ್ರದೇಶವನ್ನು ವಶಪಡಿ ಸಿಕೊಂಡರು. ಇವರ ರಾಜಧಾನಿ ಶ್ರೀರಂಗಪಟ್ಟಣವಾಗಿದ್ದರೂ ತಲಕಾಡಿನಲ್ಲಿ ಬಹುಮಟ್ಟಿಗೆ ಇರುತ್ತಿದ್ದರು. ಇವರ ಸಂತತಿಯಲ್ಲಿ ಬಂದ ತಿರುಮಲರಾಯ (ಶ್ರೀರಂಗರಾಯ)ನ ಕಾಲದಲ್ಲಿ ಮೈಸೂರಿನ ರಾಜ ಒಡೆಯರು ತಲಕಾಡನ್ನು ಗೆದ್ದು ವಶಪಡಿಸಿಕೊಂಡರು. ಇದು ನಡೆದದ್ದು 1634ರಲ್ಲಿ. ಅಲ್ಲಿಂದ ಮುಂದೆ ತಲಕಾಡು ಮೈಸೂರು ಅರಸರ ಆಳ್ವಿಕೆಗೆ ಒಳಪಟ್ಟಿತು.

ಮೂಗುತಿ ಹಗರಣ

ರಾಜ ಒಡೆಯರು ತಲಕಾಡನ್ನು ವಶಪಡಿಸಿಕೊಂಡ ಸಂದರ್ಭದಲ್ಲಿ ಜರು ಗಿತೆನ್ನುವ ಪ್ರಸಂಗವು ಪ್ರಸಿದ್ಧವಾಗಿದೆ. ಇದೊಂದು ಸ್ವಾರಸ್ಯವಾದ ಕಥೆ. ಇದ

ರಲ್ಲಿ ಸತ್ಯಾಂಶ ಎಷ್ಟಿದೆಯೋ ತಿಳಿಯದು. ಶ್ರೀರಂಗಪಟ್ಟಣದ ತಿರುಮಲ ರಾಯನು ಒಮ್ಮೆ ವೈದ್ಯೇಶ್ವರನ ಸೇವೆಗೆಂದು ತಲಕಾಡಿಗೆ ಹೋದನಂತೆ; ಅಲ್ಲಿ ಬಲವಾದ ಬೇನೆಗೆ ತುತ್ತಾಗಿ ಸಾಯುವ ಸ್ಥಿತಿಯನ್ನು ಮುಟ್ಟಿದನಂತೆ. ಈ ಸುದ್ದಿ ಯನ್ನು ಕೇಳಿದ ಆತನ ರಾಣಿ ರಂಗಮ್ಮನು ಶ್ರೀರಂಗಪಟ್ಟಣದ ಕಾರುಬಾರನ್ನು ತಮ್ಮ ಸಾಮಂತರಾಗಿದ್ದ ರಾಜ ಒಡೆಯರಿಗೆ ಬಿಟ್ಟು ತಲಕಾಡಿಗೆ ಹೋದಳಂತೆ. ರಂಗಮ್ಮನ ಮೂಗಿನಲ್ಲಿದ್ದ ಅನರ್ಘವಾದ ಮೂಗುತಿಯಲ್ಲಿ ಮುಗ್ಧರಾಗಿದ್ದ ರಾಜ ಒಡೆಯರು ಹೇಗಾದರೂ ಅದನ್ನು ಪಡೆಯಲು ಹವಣಿಸುತ್ತಿದ್ದರಂತೆ. ಅವರು ಈ ಸಮಯವನ್ನು ಸಾಧಿಸಿ ಸೈನ್ಯದೊಂದಿಗೆ ಹೊರಟು ತಲಕಾಡನ್ನು ಮುತ್ತಿ ಅಲ್ಲಿ ರೋಗಿಯಾಗಿದ್ದ ತಿರುಮಲರಾಯನನ್ನು ಕೊಂದರಂತೆ. ತನ್ನ ಮೂಗುತಿಯಿಂದ ಒದಗಿದ ಅನಾಹುತ, ರಾಜ ಒಡೆಯರ ದುರ್ವರ್ತನೆ ರಂಗ ಮ್ಮನನ್ನು ಸಿಟ್ಟಿಗೆಬ್ಬಿಸಿದುವಂತೆ. ಆಕೆ ಕಾವೇರಿ ನದಿಗೆ ನಡೆದು ಮಾಯಿಲಿಂಗಿಯ ಸ್ಥಳದಲ್ಲಿ ತನ್ನ ಮೂಗುತಿಯನ್ನು ಅಲ್ಲಿದ್ದ ಮಡುವಿಗೆ ಎಸೆದು ತಾನೂ ಧುಮುಕಿ ಸತ್ತಳಂತೆ. ಸಾಯುವ ಮುನ್ನ

ತಲಕಾಡು ಮರಳಾಗಿ
ಮಾಲಿಂಗಿ ಮಡುವಾಗಿ
ಮೈಸೂರು ದೊರೆಗೆ ಮಕ್ಕಳೇ ಬೇಡ !

ಎಂದು ಶಾಪ ಹಾಕಿದಳಂತೆ. ಹಿಂದಿನ ತಲಕಾಡೇನೋ ಮರಳಲ್ಲಿ ಮುಚ್ಚಿ ಹೋಯಿತು, ಮಾಲಿಂಗಿಯ ಮಡುವೂ ಭಯಾನಕವಾದುದೇ, ಇವಕ್ಕೆ ರಂಗಮ್ಮನ ಶಾಪವೇ ಕಾರಣವೆಂದು ಕವಿಸಮಯ. ತಲಕಾಡಿನ ವೀರಭದ್ರ ದೇವಾಸ್ಥಾನದ ಬಳಿ ಮಂಟಪವೊಂದಿದೆ; ರಂಗಮ್ಮನ ಕಳೇಬರವನ್ನು ದಹನ ಮಾಡಿದ ಸ್ಥಳದ ಮೇಲೆ ಕಟ್ಟಿದ ಮಂಟಪವಂತೆ ಇದು.

ತಲ-ಕಾಡ

ಇಂದಿಗೆ ತಲಕಾಡಿನ ಪ್ರಸಿದ್ಧಿಯಿರುವುದು ಅಲ್ಲಿನ ಪಂಚಲಿಂಗಗಳಿಂದ. ವೈದ್ಯೇಶ್ವರ ದೇವಾಲಯದ ಪ್ರಸ್ತಾಪ ಆಗಲೇ ಬಂದಿದೆ. ಸ್ಥಳ ಪುರಾಣದ ಪ್ರಕಾರ, ತಲ ಮತ್ತು ಕಾಡ ಎಂಬಿಬ್ಬರು ಬೇಡರು ಈ ಪ್ರದೇಶದಲ್ಲಿ ಅಲೆಯು

ತ್ತಿದ್ದಾಗ ಆನೆಯೊಂದು ನದಿಯಲ್ಲಿ ಮಿಂದು ಹೂವುಗಳನ್ನು ಸೊಂಡಿಲಿನಿಂದ ಕಿತ್ತುಕೊಂಡು ಬಂದು, ಶಾಲ್ಮಲೀ ಮರವೊಂದರ ಮೇಲೆ ಹಾಕಿ ಹೋಗುತ್ತಿದ್ದು ದನ್ನು ಕಂಡರಂತೆ. ಮರದಲ್ಲಿ ಏನಿದೆಯೋ ನೋಡಬೇಕೆಂದು ಬೇಡರು ಆ ಮರ ವನ್ನು ಕಡಿಯಲಾರಂಭಿಸಿದರಂತೆ. ಒಡನೆಯೇ ಮರದ ಬುಡದಿಂದ ರಕ್ತ ಸುರಿ ಯಲಾರಂಭಿಸಿತೆಂದೂ, ಅವರು ಬಗ್ಗಿ ನೋಡಲು ಅಲ್ಲಿ ಲಿಂಗವೊಂದಿದ್ದಿತೆಂದೂ ಆ ಮರದ ಎಲೆಗಳನ್ನೇ ಪೆಟ್ಟಿಗೆ ತಿಕ್ಕಲು ರಕ್ತ ಸೋರುವುದು ನಿಂತಿತೆಂದೂ ಕಥೆ. ಹೀಗೆ ತನಗೆ ತಾನೇ ವೈದ್ಯ ಮಾಡಿದ್ದರಿಂದ ಆ ಲಿಂಗಕ್ಕೆ ವೈದ್ಯೇಶ್ವರನೆಂದು ಹೆಸರಾಯಿತಂತೆ. ಕಾವೇರಿಯು ಉತ್ತರವಾಹಿನಿಯಾಗಿರುವ ಕಡೆ ಸೂರ್ಯನಿಂದ ಅರ್ಚಿಸಲ್ಪಟ್ಟ ಅರ್ಕೇಶ್ವರ, ಪೂರ್ವ ವಾಹಿನಿಯಾಗಿರುವ ಕಡೆ ವಾಸುಕಿಯಿಂದ ಪೂಜಿಸಲ್ಪಟ್ಟ ಪಾತಾಳೇಶ್ವರ (ಅಥವಾ ವಾಸುಕೀಶ್ವರ), ದಕ್ಷಿಣ ವಾಹಿನಿಯಾಗಿ ರುವ ಕಡೆ ಬ ಹ್ಮನು ಪೂಜೆ ಮಾಡಿದ ಮರಳೇಶ್ವರ (ಸೈಕತೇಶ್ವರ), ಪಶ್ಚಿಮ ವಾಹಿನಿಯಾಗಿರುವ ಕಡೆ ಕಾಮಧೇನು ಪೂಜೆ ಮಾಡಿದ ಮಲ್ಲಿಕಾರ್ಜುನ ಇವು ನಾಲ್ಕೂ ವೈದ್ಯೇಶ್ವರನೂ ಸೇರಿ ಪಂಚಲಿಂಗಗಳು; ಈಶ್ವರನ ಐದು ಮುಖ ಗಳಂತೆ.

ಪಾತಾಳೇಶ್ವರ, ಮರಳೇಶ್ವರ ದೇವಾಲಯಗಳೂ ಅಲ್ಲಿಯೇ ಇವೆ. ಅರ್ಕೇ ಶ್ವರ ಇರುವುದು ಎರಡು ಮೈಲಿ ದೂರದ ವಿಜಯಪುರದಲ್ಲಿ. ಮಲ್ಲಿಕಾರ್ಜುನ ಲಿಂಗ ಇರುವುದು ಮುದ್ದುಕುದೂರು ಬೆಟ್ಟದ (ಸೋಮಗಿರಿ) ಮೇಲೆ. ಈ ಪ್ರಖ್ಯಾತ ಪಂಚಲಿಂಗಗಳಲ್ಲದೆ ಆನಂದೇಶ್ವರಿ ಮತ್ತು ಗೌರೀಶಂಕರ ದೇವಾಲಯು ಗಳನ್ನೂ ತಲಕಾಡಿನಲ್ಲಿ ಕಾಣಬಹುದು. ಆನಂದೇಶ್ವರ ದೇವಾಲಯ ಹೈದರ್ ಆಲಿಯ ಕಾಲದ್ದು. ಗೌರೀಶಂಕರ ದೇವಾಲಯದ ನಿರ್ಮಾಣವಾದದ್ದು ಚಿಕ್ಕದೇವ ರಾಜ ಒಡೆಯರ್ (1672-1704) ಅವರ ಕಾಲದಲ್ಲಿ

ಸ್ಥಳ ಪುರಾಣವು ಇದನ್ನು ಗಜಾರಣ್ಯ ಕ್ಷೇತ್ರ, ಸಿದ್ಧಾರಣ್ಯ ಕ್ಷೇತ ವೆಂದು ವ್ಯವಹರಿಸುತ್ತದೆ. ಸೋಮದತ್ತ ಋಷಿಯು ಇಲ್ಲಿ ತಪಶ್ಚರ್ಯೆ ನಡೆಸಿದನಂತೆ. ಅವನ ಶಿಷ್ಯರು ಕಾಡಿನಲ್ಲಿ ಸಂಚರಿಸುತ್ತಿದ್ದಾಗ ಕಾಡಾನೆಗಳು ಅಟ್ಟಿಸಿಕೊಂಡು ಬಂದುವಂತೆ. ಭೀತಿಯಿಂದ ಅವರು ಪ್ರಾಣ ಬಿಟ್ಟಾಗ ಆನೆಗಳನ್ನೇ ಚಿಂತಿಸುತ್ತಿದ್ದ

ರಾಗಿ ಪುನರ್ಜನ್ಮದಲ್ಲಿ ಅವರೂ ಆನೆಗಳಾಗಿಬಿಟ್ಟರಂತೆ. ಆದರೂ ಶಿವಲಿಂಗಾರ್ಚನತತ್ಪರರೇ ಆಗಿದ್ದರೆಂದೂ, ಇವುಗಳಲ್ಲಿ ಒಂದು ಆನೆಯೇ ಮೇಲೆ ಹೇಳಿದ ವೈದ್ಯೇಶ್ವರ ಲಿಂಗವಿದ್ದ ಶಾಲ್ಮಲೀ ವೃಕ್ಷವನ್ನು ಅರ್ಚಿಸಿ ಹೋಗುತ್ತಿದ್ದುದೆಂದೂ ವಿವರಣೆ ಇದೆ. ತಲ ಮತ್ತು ಕಾಡ ಎಂಬಿಬ್ಬರು ಸೋದರರು ವೈದ್ಯೇಶ್ವರ ಲಿಂಗವನ್ನು ಮೇಲೆತ್ತಿ ಅದಕ್ಕೆ ಮಂದಿರವನ್ನು ನಿರ್ಮಾಣ ಮಾಡಿದುದರಿಂದ ಆ ಪ್ರದೇಶಕ್ಕೆ ತಲಕಾಡೆಂದು ಹೆಸರಾಯಿತೆಂದೂ ಕಥೆ ಹೇಳುತ್ತದೆ. ಇಲ್ಲಿನ ವೀರಭದ್ರ ದೇವಾಲಯದಲ್ಲಿ ಅಂಜಲಿಬದ್ಧರಾದ ಇಬ್ಬರು ಧನುರ್ಧಾರಿಗಳ ಮೂರ್ತಿಗಳಿವೆ. ಇವನ್ನು ತಲ ಮತ್ತು ಕಾಡ ಎಂದು ನಿರ್ದೇಶಿಸುತ್ತಾರೆ.

ಅಂತೂ ತಲಕಾಡು ಇತಿಹಾಸ ಪ್ರಸಿದ್ಧವಾದ, ರಮಣೀಯಾದ್ಭುತವಾದ ಸ್ಥಳ.

ಶ್ರವಣಬೆಳ್ಗೊಳ-ಚಂದ್ರಗಿರಿ

ಶ್ರವಣಬೆಳ್ಗೊಳದ ಕೀರ್ತಿ ಗೊಮ್ಮಟೇಶ್ವರನ ಅದ್ಭುತ ಮೂರ್ತಿಯಿಂದ ಪ್ರಸಕ್ತವಾಗಿದೆ. ಈ ಮೂರ್ತಿಯು ಮೈದಳೆದು ಒಂದು ಸಾವಿರ ವರ್ಷಗಳಷ್ಟಾಯಿತು. ಆದರೆ ಗೊಮ್ಮಟೇಶ್ವರ ಅಲ್ಲಿ ಇರದಿದ್ದಾಗಲೂ ಶ್ರವಣಬೆಳ್ಗೊಳವು ಜೈನರ ಪುಣ್ಯಸ್ಥಳವೆನಿಸಿದ್ದಿತು. ಇದರ ಖ್ಯಾತಿಯನ್ನು ಕೇಳಿಯೇ ಶ್ರುತಕೇವಲಿ-ಭದ್ರಬಾಹುಮುನಿಗಳು ಉತ್ತರಾಪಥವನ್ನು ಬಿಟ್ಟಂದು ಇಲ್ಲಿಗೆ ನೇರವಾಗಿ ನಡೆದು ಬಂದರು. ಇದು ಕ್ರಿಸ್ತಪೂರ್ವ 290ರ ಮಾತು. ಅಂದಿನಿಂದ ಇಂದಿನ ವರೆಗೂ ಇದು ಜೈನ ಧರ್ಮದ ಪ್ರಸಾರಕ್ಕೆ ಕೇಂದ್ರವಾಗಿ ಉಳಿದುಬಂದಿದೆ. ಶ್ರವಣಬೆಳ್ಗೊಳದ ಹಿರಿಮೆ ಎರಡು ಸಾವಿರದ ಇನ್ನೂರ ಐವತ್ತು ವರ್ಷಗಳ ಹಿಂದಿನದು, ಈಗ ಹೋಗುವವರೆಲ್ಲ ದೊಡ್ಡ ಬೆಟ್ಟಕ್ಕೇ ಹೋಗುತ್ತಾರೆ; ಗೊಮ್ಮಟಜಿನನ ಸನ್ನಿಧಾನವೇ ಇದಕ್ಕೆ ಕಾರಣ. ಆದರೆ ಚಿಕ್ಕ ಬೆಟ್ಟವೇ ಪ್ರಾಚೀನವಾದುದು, ಪುಣ್ಯಕರವಾದುದು, ಹೆಚ್ಚು ಸ್ವಾರಸ್ಯದಿಂದ ತುಂಬಿದ್ದು. ಕನ್ನಡ ನಾಡಿನ ಜೈನ ಧರ್ಮದ ಇತಿಹಾಸದ ಉಗಮ ಇಲ್ಲಿಯೇ ಆದದ್ದು.

ಚಿಕ್ಕಬೆಟ್ಟ, ದೊಡ್ಡಬೆಟ್ಟಗಳೆರಡೂ ನಡುವಣ ಕಲ್ಯಾಣಿಯನ್ನು (ಬೆಳ್ಕೊಳವನ್ನು) ಮುಟ್ಟುತ್ತವೆ. ಕಲ್ಯಾಣಿಯ ಬದಿಯಲ್ಲಿ ಬೆಳಗೊಳದ ಊರು ಬೆಳೆದಿದೆ. ಊರಿಗೆ ನೂರ ಎಪ್ಪತ್ತೈದು ಅಡಿ ಎತ್ತರವಿರುವ ಚಿಕ್ಕಬೆಟ್ಟವನ್ನು ಚಂದ್ರಗಿರಿಯೆಂದೂ ವ್ಯವಹರಿಸುತ್ತಾರೆ. ಹಿಂದಿನ ಕಾಲದಲ್ಲಿ ಚಿಕ್ಕಬೆಟ್ಟಕ್ಕೆ ಕಟವಪ್ರ (ಕಳ್ ಬಪ್ಪು) ಎಂಬ ಹೆಸರಿದ್ದಿತು. ಈ ಬೆಟ್ಟದ ಕಥೆಯೋ ಎರಡು ಸಾವಿರದ ಇನ್ನೂರ ಐವತ್ತು ವರ್ಷಗಳ ಹಿಂದೆ ಆರಂಭವಾದುದು.

ಕಳ್‌ಬಪ್ಪು-ಚಿಕ್ಕಬೆಟ್ಟ

ಇಲ್ಲಿರುವ ಪಾರ್ಶ್ವನಾಥ ಬಸದಿಯ ಪಕ್ಕದಲ್ಲಿ ದಕ್ಷಿಣಕ್ಕೆ ಬೋರು ಬಂಡೆಯ ಮೇಲೆ ಪೂರ್ವದ ಹಳಗನ್ನಡ ಲಿಪಿಯಲ್ಲಿ ಸಂಸ್ಕೃತ-ಕನ್ನಡ ಶಾಸನ ಗಳಿವೆ. ಈ ಶಾಸನಗಳ ಕಾಲ ಕ್ರಿಸ್ತಾಬ್ದ ಆರುನೂರು ಎಂದು ಹೇಳುತ್ತಾರೆ. ಈ ಶಾಸನವು ಚಿಕ್ಕಬೆಟ್ಟವನ್ನು "ಕಟವಪ್ರನಾಮೋಪಲಕ್ಷಿತೇ ವಿವಿಧ ತರುವರ ಕುಸುಮಾದಳಾವಳೀ ವಿಕಚನಾ ಶಬಲ-ವಿಪುಲ ಸಜಲ ಜಲದನಿವಹ ನೀಲೋಪಲತಲೇ ವರಾಹದ್ವಿಪಿವ್ಯಾಘ್ರರ್ಕ್ಷತರಕ್ಷುವ್ಯಾಳ" ಗಳಿಂದ ತುಂಬಿದ ಗೊಂಡಾರಣ್ಯವೆಂದು ಬಣ್ಣಿಸಿ ಉಜ್ಜಯಿನಿಯಿಂದ ಬಂದ ಭದ್ರಬಾಹು ಸ್ವಾಮಿ ಗಳು ಇಲ್ಲಿ ಮುಕ್ತರಾದುದನ್ನು ಹೇಳುತ್ತದೆ. ಮಹಾವೀರ-ತೀರ್ಥಂಕರನ ಗಣ ಧರ ಪರಂಪರೆಯಲ್ಲಿ ಆರನೆಯ ಆಚಾರ್ಯರಾದ, ಕಡೆಯ ಶ್ರುತಕೇವಲಿಯಾದ ಭದ್ರಬಾಹು ಮುನಿಗಳು ಆ ಕಾಲಕ್ಕೆ ಇಡೀ ನಾಡಿನಲ್ಲಿ ಜ್ಞಾನ, ಧ್ಯಾನ, ತಪಸ್ಸು, ಸಂಯಮಗಳಲ್ಲಿ ಅದ್ವಿತೀಯರೆಂದು ಖ್ಯಾತಿವೆತ್ತ ಮಹಾಪುರುಷರು. ಅವರ ನಿರ್ಯಾಣವು ಕ್ರಿಸ್ತಪೂರ್ವ 297ರಲ್ಲಿ ಆಯಿತೆಂದು ತಿಳಿದುಬರುತ್ತದೆ. ಪಾಟಲಿ ಪುತ್ರದ ವಿಖ್ಯಾತ ಚಕ್ರವರ್ತಿಯಾಗಿದ್ದ ಚಂದ್ರಗುಪ್ತಮೌರ್ಯನಿಗೆ ಇವರು ಗುರುಗಳು. ಒಮ್ಮೆ ಉತ್ತರಾಪಥದಲ್ಲಿ ಹನ್ನೆರಡು ವರ್ಷಗಳ ಕ್ಷಾಮ ತಲೆ ದೋರಲು ಅಲ್ಲಿದ್ದುಕೊಂಡು ಮುನಿಗಳ ನೋಂಪಿ ನಡೆಸುವುದು ಸಾಧ್ಯವಿಲ್ಲ ವೆಂದು ಬಗೆದು ಭದ್ರಬಾಹು ಸ್ವಾಮಿಗಳು ಹನ್ನೆರಡು ಸಾವಿರ ಮಂದಿ ಶಿಷ್ಯ ಪರಿವಾರದೊಂದಿಗೆ ದಕ್ಷಿಣಾಪಥಕ್ಕೆ ಬಂದರೆಂದೂ ಕಟವಪ್ರ (ಚಿಕ್ಕ ಬೆಟ್ಟ)ದ ಬಳಿ ಬಂದಾಗ ತಮ್ಮ ಅವಸಾನ ಕಾಲ ಸಮೀಪಿಸಿದುದನ್ನು ಅರಿತು ತಮ್ಮ ಶಿಷ್ಯರನ್ನೆಲ್ಲ ಚೋಳ ಪಾಂಡ್ಯ ದೇಶಗಳಿಗೆ ಕಳಿಸಿ ತಾವೊಬ್ಬರು ಮಾತ್ರ ಚಿಕ್ಕ ಬೆಟ್ಟದಲ್ಲೇ ನಿಂತರಂತೆ. ರಾಜ್ಯವನ್ನು ಮಗನಿಗೆ ಕೊಟ್ಟು ತಾನೂ ಮುನಿದೀಕ್ಷೆ ತೊಟ್ಟು ಅವರೊಡನೆ ಬಂದಿದ್ದ ಚಂದ್ರಗುಪ್ತನೊಬ್ಬನು ಮಾತ್ರ ಅವರ ಊಳಿಗಕ್ಕೆಂದು ಉಳಿದುಕೊಂಡನಂತೆ. ಅವರು ಸಲ್ಲೇಖನವ್ರತವನ್ನು ಕೈಗೊಂಡು ತೀರಿಸಿಕೊಂಡನಂತರ ಅವರ ಅಂತ್ಯಕ್ರಿಯೆಗಳನ್ನು ವಿಧಿವತ್ತಾಗಿ ಮಾಡಿ ಚಂದ್ರಗುಪ್ತನು ತಾನೂ ಸಲ್ಲೇಖನ ವ್ರತವನ್ನು ಹಿಡಿದು ಅಲ್ಲಿಯೇ ಮುಕ್ತ

ನಾದನಂತೆ. ಚಂದ್ರಗಿರಿಯ ಮೇಲಿರುವ ಭದ್ರಬಾಹು ಗುಹೆ ಮತ್ತು ಚಂದ್ರ ಗುಪ್ತ ಬಸದಿಗಳು ಈ ಕಥೆಯನ್ನು ಹೇಳುತ್ತವೆ.

ಭದ್ರಬಾಹು ಮುನಿ

ಭದ್ರಬಾಹು ಬಂಗಾಳಪ್ರಾಂತ್ಯದಲ್ಲಿದ್ದ ಕೋಟಿಕಪುರದ ಸೋಮಶರ್ಮನೆಂಬ ಬ್ರಾಹ್ಮಣನ ಮಗ; ತಂದೆ ಪದ್ಮರಥರಾಜನ ಪುರೋಹಿತ. ಮೇಧಾವಿಯಾದ ಭದ್ರಬಾಹುವು ಬಾಲ್ಯದಲ್ಲೇ ಗೋವರ್ಧನ ಮಹಾಮುನಿಯೆಂಬ ಶ್ರುತಕೇವಲಿಯ ವಿಶ್ವಾಸವನ್ನು ಗಳಿಸಿ, ಅವನ ಬಳಿಯೇ ಶಿಷ್ಯನಾಗಿ ನಿಂತು ಜಿನಸಮಯದಲ್ಲಿ ಪಾರಂಗತನೆನಿಸಿದನು, ಸಿದ್ಧಿಗಳನ್ನು ಪಡೆದು ಮುನಿಯಾದನು. ಇವನ ಕಥೆ ಬೃಹತ್ಕಥಾಕೋಶದಲ್ಲಿ, ಭದ್ರಬಾಹುಚರಿತ್ರೆಯಲ್ಲಿ, ಮುನಿವಂಶಾಭ್ಯುದಯಲ್ಲಿ, ರಾಜಾವಳೀ ಕಥೆಯಲ್ಲಿ ಬರುತ್ತದೆ. ಶ್ರವಣಬೆಳ್ಗೊಳದ ಹಲವಾರು ಶಾಸನಗಳು ಇವನ ಹಿರಿಮೆಯನ್ನು ಸಾರುತ್ತವೆ. ದೊಡ್ಡ ಬೆಟ್ಟದ ಮೇಲೆ ಸಿದ್ದರ ಬಸದಿಯಲ್ಲಿರುವ ಶಾಸನವೊಂದು "ಅಭೂದ್ಯತೀಂದ್ರೋ ಭುವಿ ಭದ್ರಬಾಹುಃ ಪಯಃ ಪಯೋಧಾವಿವ ಪೂರ್ಣಚಂದ್ರಃ" ಎಂದು ಬಣ್ಣಿಸುತ್ತದೆ. ಚಿಕ್ಕಬೆಟ್ಟದ ಮೇಲೆ ಮಾರನವಮಿ ಮಂಟಪದಲ್ಲಿರುವ ಇನ್ನೊಂದು ಶಾಸನ "ಶ್ರೀ ಭದ್ರಸ್ಸರ್ವತೋ ಯೋ ಹಿ ಭದ್ರಬಾಹುರಿತಿ ಶ್ರುತಃ ; ಶ್ರುತಕೇವಲಿನಾಥೇಷು ಚರಮಃ ಪರಮೋ ಮುನಿಃ" ಎಂದು ನಿರೂಪಿಸುತ್ತದೆ. ಅಲ್ಲೇ ಪಾರ್ಶ್ವನಾಥ ಬಸದಿಯ ಶಾಸನವೊಂದು "ವರ್ಣ್ಯಃ ಕಥಂ ನು ಮಹಿಮಾ ಭಣ ಭದ್ರಬಾಹೋರ್ಮೋಹೋರುಮಲ್ಲಮದಮರ್ದನವೃತ್ತಬಾಹೋಃ " ಎಂದು ಮೆಚ್ಚಿಕೊಳ್ಳುತ್ತದೆ. ಮತ್ತೊಂದು ಶಾಸನ ಸ್ಫೂರ್ತಿಗೊಂಡು–

ಭದ್ರಬಾಹುರಗ್ರಿಮಃ ಸಮಗ್ರ ಬುದ್ಧಿ ಸಂಪದಾ
ಶುದ್ಧ ಸಿದ್ಧಿ ಶಾಸನಂ ಸುಶಬ್ದ ಬಂಧ ಸುಂದರಂ।
ಇದ್ದವೃತ್ತ ಸಿದ್ಧಿರತ್ರ ಬದ್ಧಕರ್ಮಭಿತ್ತಪೋವೃದ್ಧಿ–
ವರ್ಧಿತ ಪ್ರಕೀರ್ತಿರುದ್ಧರದ್ಧಧೇ ಮಹರ್ಧಿಕಃ ॥

ಎಂದು ಭುಜಂಗ ಪ್ರಯಾತದಂತೆ ಹಾಡಿದೆ. ಶ್ರುತಕೇವಲಿಗಳಲ್ಲಿ ಕಡೆ

ಯುವನಾದರೂ ಆಚಾರ್ಯರಲ್ಲಿ ಅಗ್ರಗಣ್ಯನೆಂದು ವಿವರಿಸಿದೆ (ಯೋ ಭದ್ರಬಾಹುಃ ಶ್ರುತಕೇವಲಾನಾಂ ಮುನೀಶ್ವರಾಣಾಮಿಹ ಪಶ್ಚಿಮೋಪಿ, ಅಪಶ್ಚಿಮೋ ಭೂದ್ವಿದುಷಾಂ ವಿನೇತಾ ಸರ್ವಶ್ರುತಾರ್ಥ ಪ್ರತಿಪಾದನೇಷು) ಇವರು ಸಿದ್ಧಪಡಿಸಿದ ನಿರ್ಯುಕ್ತಿಗಳೂ ಕಲ್ಪಸೂತ್ರವೂ ಜೈನಾಗಮವನ್ನು ಬೆಳಗಿದವು.

ಭದ್ರಬಾಹು ಗುಹೆ

ಇಂಥ ಮಹಾತ್ಮರೊಬ್ಬರ ಸಾನ್ನಿಧ್ಯದಿಂದ ಕನ್ನಡನಾಡಿನಲ್ಲಿ ಚಿಕ್ಕಬೆಟ್ಟದ ಮೇಲೆ ಜೈನಧರ್ಮದ ನಂದಾದೀಪ ಹತ್ತಿಕೊಂಡಿತು. ಇವರು ತಪಸ್ಸುಮಾಡಿ, ತೀರಿಕೊಂಡ ಗುಹೆಯೇ ಭದ್ರಬಾಹು ಗುಹೆ. ಇಲ್ಲಿ ಅವರು ತೀರಿಕೊಂಡನಂತರ ಅವರ ಚರಣಚಿಹ್ನೆಗಳನ್ನು ಚಂದ್ರಗುಪ್ತನು ಪೂಜಿಸುತ್ತಿದ್ದನಂತೆ. ಅಲ್ಲಿ ಅವರ ಪಾದಗಳಿದ್ದುದು ಕ್ರಿಸ್ತಾಬ್ದ 1090ರ ಶಾಸನವೊಂದರಿಂದಲೇ ತಿಳಿದುಬರುತ್ತದೆ. ಗುಹೆಯ ಒಳಗೆ ಬಂಡೆಯ ಮೇಲೆ ನಾಗರಾಕ್ಷರಗಳಲ್ಲಿ "ಶ್ರೀ ಭದ್ರಬಾಹು ಸ್ವಾಮಿಯ ಪಾದಮಂ ಜಿನಚಂದ್ರಪ್ರಣಮತಾಂ" ಎಂಬ ಮಾತುಗಳನ್ನು ಮೂಡಿಸಿದ್ದಾರೆ. ಈ ಪುಣ್ಯಸ್ಥಳದಲ್ಲಿ ನೂರಾರು ಮಂದಿ ಮುನಿಗಳೂ ಗೃಹಸ್ಥರೂ ಸಲ್ಲೇಖನ ವ್ರತವನ್ನು ಮಾಡಿ ತೀರಿಕೊಂಡಂತೆ ಶಾಸನಗಳಿವೆ; ಶಾಸನವಿಡದೆ ಮುಡಿದವರು ಲೆಕ್ಕವಿಲ್ಲದಷ್ಟು ಮಂದಿ. ಕುಂಡಕುಂದಾನ್ವಯದ ದೇಶೀಗಣದ ಅಜಿತಕೀರ್ತಿದೇವರು "ಸೋಪವಾಸ ಸಂಪೂರ್ಣಮಾಡಿ ಈ ಗವಿಯಲ್ಲಿ ದೇವಗತರಾದರು"; ಚಲದಂಕರಾಯ ಹೊಯ್ಸಳ ಸೆಟ್ಟಿಯು "ತನ್ನ ವಸಾವನರಿದು ತನ್ನ ಬಂಧುಗಳಂ ಬಿಡಿಪೆ (ಎಂದರೆ ತನ್ನವರನ್ನು ಬೀಳ್ಕೊಟ್ಟು) ಸಮಚಿತ್ತದೊಳು ಮುಡಿಪಿ ಸ್ವರ್ಗಸ್ಥನಾದಂ"; 'ಚಿತ್ತೂರು ಮೌನಿಗುರುವಡಿಗಳ ಶಿಷಿತ್ತಿ'ಯರ್ ಆದ ನಾಗಮತಿ ಗಂತಿಯೆಂಬಾಕೆ "ಮೂರು ತಿಂಗಳ್ ನೋಂತು ಮುಡಿಪ್ಪಿದರ್"; ಕಳ್‌ಬಪ್ಪಿಯ ಚರಿತಶ್ರಿ ಎಂಬಾತನು "ಮುನಿನ್‌ದಗಳ್ ನೋನ್ತು ಸೌಖ್ಯಸ್ಥನಾಯ್ದನ್"; ಜಂಬೂನಾಯ್ಗಿಯೆಂಬಾಕೆ "ತಿಂಗಳ್ ನೋನ್ತು ಮುಡಿಪ್ಪಿದರ್"; "ನೋದುಬೊಂರೆಯ ಮೌನದ ಭಟ್ಟಾರರ್ ನೋನ್ತು ಮುಡಿಪ್ಪಿದರ್"; "ಶ್ರೀಕಾಲೋಚಿ ಗುರುವಡಿಗಳ ಶಿಷ್ಯರ್ ತಳಕಾಡ ಪೆಳ್ವಡೆಯ (ದೊಡ್ಡ ಜಡೆಯು) ದೆದೆಯ ಕಲಾಪಕದ ಗುರುವಡಿಗಳ್ (ಹೆದೆಯಿಂದ

ಬಿಗಿದ ನವಿಲಗರಿಗಳ ಕಟ್ಟಿನ ಸ್ವಾಮಿಗಳು) ಇಪ್ಪತ್ತೊಂದು ದಿವಸಂ ಸನ್ಯಾಸನಂ ನೋನ್ತು" ತೀರಿಕೊಂಡರು; ನವಿಲೂರ ಶ್ರೀ ಸಂಘದಳ್ಳಿಗುರುವಿನ ಶಿಷ್ಯನಾದ ವೃಷಭನಂದೀಶ ಮುನಿಯ ಅಜ್ಜಿಯೂ ಹೀಗೆಯೇ ತೀರಿಕೊಂಡಳು. ಇಂಥ ಶಾಸನಗಳು ನೂರಾರು ಚಂದ್ರಗಿರಿಯಲ್ಲಿವೆ. 'ಶ್ರೀಪೆರುಮಾಳ ಗುರುವಡಿಗಳ ಶಿಷ್ಯ ಧಣ್ಣೆಕುತ್ತಾರೇಚೀಗುರವಿ', ಶ್ರಿ ಋಷಭಸೇನ ಗುರುವಡಿಗಳ ಶಿಷ್ಯ ನಾಗ ಸೇನ ಗುರುವಡಿಗಳು, ಬಲದೇವ ಮುನಿ, ಸಿಂಗಣಂದಿಗುರುಗಳು, ಮಯೂರ ಗ್ರಾಮಸಂಘದ ಸೌಂದರ್ಯ ಆರ್ಯ ಇತ್ಯಾದಿ ಇತ್ಯಾದಿ. ಒಟ್ಟು ಏಳುನೂರು ಋಷಿಗಳು ಇಲ್ಲಿ ಸಮಾಧಿಗೊಂಡಿದ್ದಾರಂತೆ. ಇವರೆಲ್ಲ ನೋನ್ತು, ಎಂದರೆ ವ್ರತ ವನ್ನು ಹಿಡಿದು, ಮಡಿದವರು. ಈ ಸಲ್ಲೇಖನ ವ್ರತವೆಂದರೇನು? ಸಾವು ಸಮೀಪಿಸು ವುದನ್ನು ಕಂಡು ಸ್ಥೈರ್ಯದಿಂದ ಸಾವಿನೆಡೆ ನುಗ್ಗುವುದು ಈ ವ್ರತದ ತಾತ್ಪರ್ಯ. ಆಹಾರವನ್ನು ಕ್ರಮವಾಗಿ ಬಿಡುವುದು—ಮೊದಲು ಬರಿಯ ಹಾಲು ಅನ್ನ, ಅನಂತರ ಹಾಲನ್ನು ಬಿಟ್ಟು ಬರಿಯ ಅನ್ನ, ಅನಂತರ ಬೊಗಸೆ ನೀರು ಮಾತ್ರ, ಅನಂತರ ಅದನ್ನೂ ಬಿಟ್ಟು ಉಪವಾಸ. ಹೀಗೆ ಪಂಚನಮಸ್ಕಾರದಿಂದ ಶರೀರ ವನ್ನು ಇಡುವುದು ಸಲ್ಲೇಖನ. ಬಾಳಬೇಕೆಂಬ ಬಯಕೆ, ಸಾವನ್ನು ಕಂಡರೆ ತವಕ, ಭಯ, ಸ್ನೇಹ, ಸ್ಮೃತಿ (ಅಥವಾ ಕೆಲಸ) ಈ ಐದು ಸಲ್ಲೇಖನಕ್ಕೆ ಅಡ್ಡಿ ಬರು ವಂಥವೆಂದು ಜೈನರ ಶ್ರದ್ಧೆ. ಸಾಯುವಾಗ ಸಮಚಿತ್ತವಿರುವುದು ಮುಖ್ಯ.

ಚಂದ್ರಗುಪ್ತ ಬಸದಿ

ಭದ್ರಬಾಹು ಗುಹೆಯನ್ನು ಬಿಟ್ಟರೆ ಇಲ್ಲಿ ತುಂಬ ಪ್ರಾಚೀನವಾದ ಬಸದಿ ಯೆಂದರೆ ಚಂದ್ರಗುಪ್ತ ಬಸದಿ. ಇಲ್ಲಿಯೇ ಚಂದ್ರಗುಪ್ತನು ಧ್ಯಾನಮಾಡುತ್ತ ಇರುತ್ತಿದ್ದನೆಂದೂ ಅವನೇ ಇದನ್ನು ಕಟ್ಟಿಸಿದನೆಂದೂ ನಂಬಿಕೆ. ಈಗ ಇದು ಕತ್ತಲೆ ಬಸದಿಗೆ ಹೊಂದಿಕೊಂಡು ನಿಂತಿದೆ. ಮೂರು ಅಂಕಣಗಳ ಈ ಸಣ್ಣ ಗುಡಿ ಹತ್ತೊಂಭತ್ತು ಅಡಿ ಉದ್ದ, ಹದಿನೈದು ಅಡಿ ಅಗಲವಿದೆ. ಮಧ್ಯದ ಅಂಕ ಣದಲ್ಲಿ ಪಾರ್ಶ್ವನಾಥನ ಸಣ್ಣ ಮೂರ್ತಿಯಿದೆ. ಬಲಗಡೆಯ ಅಂಕಣದಲ್ಲಿ ಪದ್ಮಾ ವತಿ ಯಕ್ಷಿ, ಎಡಗಡೆಯ ಅಂಕಣದಲ್ಲಿ ಕೂಷ್ಮಾಂಡಿನಿ ಯಕ್ಷಿ ಇವರ ಸುಂದರ ಮೂರ್ತಿಗಳಿವೆ. ಸಾಲಾಗಿರುವ ಈ ಮೂರು ಅಂಕಣಗಳ ಮುಂದೆ ನಾಲ್ಕಡಿ ಅಗಲ

ವಾದ ವರಾಂಡವಿದ್ದು ಇಲ್ಲಿ ಬಲಕೊನೆಯಲ್ಲಿ ಧರಣೇಂದ್ರ ಯಕ್ಷ, ಎಡಕೊನೆಯಲ್ಲಿ ಮತ್ತೊಬ್ಬ ಯಕ್ಷನ ಮೂರ್ತಿಗಳಿವೆ. ಪಾರ್ಶ್ವನಾಥನ ಸ್ಥಾನಕ ವಿಗ್ರಹ ಭಿನ್ನವಾಗಿದೆ. ವರಾಂಡವನ್ನು ಮುಚ್ಚಿ ಸೊಗಸಾದ ದ್ವಾರದೇಶದ ಎರಡೂ ಕಡೆಗಳಲ್ಲಿ ಒಂದೊಂದು ಜಾಲಂದರಗಳನ್ನು ಕರಿ ಕಲ್ಲಿನಲ್ಲಿ ಕಡೆದಿದ್ದಾರೆ. ಭದ್ರಬಾಹು ಸ್ವಾಮಿಗಳು ಚಂದ್ರಗುಪ್ತರಾಜನ ಸ್ವಪ್ನದ ಅರ್ಥವನ್ನು ಹೇಳಿದ್ದು, ಭೀಕರ ಕ್ಷಾಮ ಬರುವುದೆಂದರಿತು ಅವರು ಶಿಷ್ಯರೊಂದಿಗೆ ಇಲ್ಲಿ ಬಂದುದು ಮುಂತಾದ ಪ್ರಸಂಗಗಳನ್ನು ಈ ಜಾಲಂದರ ಶಿಲ್ಪಗಳಲ್ಲಿ ಮೂಡಿಸಿದ್ದಾರೆ. ತುಂಬ ನೈಜವಾದ, ಸುಂದರವಾದ ಶಿಲ್ಪ ಇದು. ಒಂದೊಂದು ಜಾಲಂದರದಲ್ಲಿ ನಲವತ್ತೈದು ಪ್ರಸಂಗಗಳಿವೆ. ಒಟ್ಟು ತೊಂಭತ್ತು ಪ್ರಸಂಗಗಳು ಇಲ್ಲಿ ನಿರೂಪಿತವಾಗಿವೆ. ಎಡಪಾರ್ಶ್ವದ ಜಾಲಂದರದಲ್ಲಿ ಹಳಗನ್ನಡ ಲಿಪಿಯಲ್ಲಿ 'ದಾಸೋಜ' ಎಂಬ ಹೆಸರು ಕೆತ್ತಿರುವುದನ್ನು ಕಾಣಬಹುದು. ಬಹುಶಃ ಇವನೇ ಈ ಜಾಲಂದರಗಳನ್ನು ಕಡೆದ ರೂವಾರಿಯಿರಬಹುದು. ಸುಮಾರು ಹತ್ತು ಹನ್ನೊಂದನೆಯ ಶತಮಾನದ ಕೃತಿಗಳಿವು ಎನ್ನಬಹುದು.

ಹಿಂದಿನ ಕಾಲದಲ್ಲಿ ಇದು ಪ್ರತ್ಯೇಕವಾದ ಸಣ್ಣ ಬಸದಿಯಾಗಿದ್ದಿತು. ಆದರೆ ಈಗ ಇದು ಕತ್ತಲೆ ಬಸದಿಯ ಅಂಗವಾಗಿ ಹೋಗಿದೆ. ಚಂದ್ರಗುಪ್ತ ಬಸದಿಯ ಜಾಲಂದರಗಳನ್ನು ನೋಡಬೇಕೆಂದರೆ ಕತ್ತಲೆ ಬಸದಿಯ ಹಜಾರ (ಮುಖ ಮಂಟಪ)ದಲ್ಲಿಯೇ ನಿಲ್ಲಬೇಕು. ಕತ್ತಲೆ ಬಸದಿ ಎನ್ನುವುದು ಈ ಆದಿನಾಥ ಮಂದಿರದ ಒಳಗೆ ಬೆಳಕು ಬಾರದಿರುವುದರಿಂದ. ನಲವತ್ತಡಿ ಅಗಲ, ನೂರ ನಲವತ್ತಡಿ ಉದ್ದವಿರುವ ಈ ಬಸದಿಯು ಚಂದ್ರಗಿರಿಯ ಬಸದಿಗಳಲ್ಲೆಲ್ಲ ದೊಡ್ಡದು. ಗರ್ಭಗುಡಿಯಲ್ಲಿರುವ ಐದಡಿ ಎತ್ತರದ ಆದಿನಾಥ ತೀರ್ಥಂಕರರ ವಿಗ್ರಹದ ಸಿಂಹಪೀಠದ ಮೇಲೆ 'ಶುಭ ಚಂದ್ರಸಿದ್ಧಾಂತ ದೇವರ ಗುಡ್ಡಂ (ಎಂದರೆ ಶಿಷ್ಯ) ದಣ್ಡನಾಯಕ... ತಮ್ಮ ತಾಯಿ ಪೋಚವ್ವೆಗೆ ಮಾಡಿಸಿದೀ ಬಸದಿ' ಎಂಬ ಶಿಲಾಲೇಖವಿದೆ. ಹೊಯ್ಸಳ ರಾಜ ವಿಷ್ಣುವರ್ಧನನ ದಂಡನಾಯಕ ಗಂಗರಾಜನು ಈ ಬಸದಿಯನ್ನು ಕಟ್ಟಿಸಿದಂತೆ ತಿಳಿದು ಬರುತ್ತದೆ. ಗರ್ಭಗುಡಿಗೆ ಒಂದು ಕಾಲದಲ್ಲಿ ವಿಮಾನವಿದ್ದಿತು. ಈಗ ಇಲ್ಲ. ಗರ್ಭಗುಡಿಯ ಸುತ್ತ ಪ್ರದಕ್ಷಿಣ ಪಥವಿದೆ. ಮುಂದೆ ಸುಖನಾಸಿ, ಅದಕ್ಕೆ ಹೊಂದಿಕೊಂಡಂತೆ

ನವರಂಗ. ಅದರ ಮುಂದೆ ಮುಖಮಂಟಪ. ಮುಖಮಂಟಪವು ವಿಶಾಲವಾಗಿದ್ದು ಹಲವಾರು ಕಂಬಗಳಿವೆ. ಎಡಭಾಗದಲ್ಲಿ ಪಾರ್ಶ್ವನಾಥ ಬಸದಿಗೆ ಹೋಗುವ ಬಾಗಿಲು; ಬಲಭಾಗದಲ್ಲಿ ಈ ಬಾಗಿಲಿಗೆ ಸರಿಯಾಗಿ ಕ್ಷೇತ್ರಪಾಲನ ಮೂರ್ತಿಯಿದೆ. ಸುಖನಾಸಿಯಲ್ಲಿರುವ ಪದ್ಮಾವತಿಯ ವಿಗ್ರಹವೂ ಆರಾಧನೆಗೊಳ್ಳುತ್ತಿದೆ.

ಪಾರ್ಶ್ವನಾಥ ಬಸದಿ

ಕತ್ತಲೆ ಬಸದಿಯ ನವರಂಗಕ್ಕೆ ಹೊಂದಿಕೊಂಡಂತೆ ಬಲಭಾಗದಲ್ಲಿ ಪಾರ್ಶ್ವನಾಥ ಬಸದಿಯಿದೆ. ಐವತ್ತೊಂಬತ್ತು ಅಡಿ ಉದ್ದ ಇಪ್ಪತ್ತೊಂಬತ್ತು ಅಡಿ ಅಗಲವಿರುವ ಈ ಬಸದಿಯನ್ನು ಯಾರು ಯಾವಾಗ ಕಟ್ಟಿಸಿದರೆಂದು ತಿಳಿದು ಬರುವುದಿಲ್ಲ. ಗರ್ಭಗುಡಿಯಲ್ಲಿರುವ ಸ್ಥಾನಕ ಪಾರ್ಶ್ವನಾಥನ ಕರಿಕಲ್ಲಿನ ವಿಗ್ರಹವು ಹದಿನೈದು ಅಡಿ ಎತ್ತರವಿರುವ ಭವ್ಯಶಿಲ್ಪ : ತಲೆಯ ಮೇಲೆ ಏಳು ಹೆಡೆಗಳ ಹಾವು ಛತ್ರಪರಿಚರ್ಯೆ ಮಾಡುತ್ತಿರುವಂತೆ ಚಿತ್ರಿತವಾಗಿರುವ ಈ ಮೂರ್ತಿಯ ಮುಖವೂ ನಿಂತಿರುವ ಭಂಗಿಯೂ ಧೀರಗಂಭೀರವಾಗಿವೆ. ಸುಖನಾಸಿಯ ಮುಂದಿರುವ ನವರಂಗದಲ್ಲಿ ಗಂಗರಾಜನ ಕಾಲದ ಕಂಬಗಳಿವೆ. ದ್ವಾರಗಳು ಉತ್ತುಂಗವಾಗಿವೆ. ಇಲ್ಲಿರುವ ಶಾಸನವೊಂದು ಜೈನಾಗಮ ವಾಙ್ಮಯದಲ್ಲಿ ವಿಖ್ಯಾತನಾದ ಮಲ್ಲಿಷೇಣ–ಮಲಧಾರಿಯು ಸಲ್ಲೇಖನ ವ್ರತದಿಂದ ಇಲ್ಲಿ ತೀರಿಕೊಂಡುದನ್ನು ತಿಳಿಸುತ್ತದೆ. 'ಮಲಧಾರಿ ದೇವರ ಗುಡ್ಡಂ ಬಿರುದಲೇಖಕ ಮದನ-ಮಹೇಶ್ವರಂ ಮಲ್ಲಿನಾಥಂ' ಬರೆದನೆಂದೂ 'ಬಿರುದ ರೂವಾರಿ ಮುಖತಿಳಕ ನಾದ ಗಂಗಾಚಾರಿಯು ಕಂಡರಿಸಿದನೆಂದೂ ಹೇಳುವ ಈ ಶಾಸನದಲ್ಲಿ "ಶ್ರೀಮದಜಿತಸೇನ ಪಣ್ಡಿತದೇವ ದಿವ್ಯ ಶ್ರೀಪಾದ ಕಮಳ ಮಧುಕರೀ ಭೂತ ಭಾವೇನ ಮಹಾನುಭಾವೇನ ಜೈನಾಗಮ ಪ್ರಸಿದ್ಧ ಸಲ್ಲೇಖನಾ ವಿಧಿ ವಿಸೃಜ್ಯಮಾನದೇಹೇನ" ಎಂದು ಮಲ್ಲಿಷೇಣನನ್ನು ಬಣ್ಣಿಸಿ, ಶಾಸನದ ಉದ್ದೇಶವನ್ನು ಕುರಿತು "ಸಮಾಧಿವಿಧಿ ವಿಲೋಕನೋಚಿತಕರಣ ಕುತೂಹಳ ಮಿಳಿತ ಸಕಳ ಸಂಘ ಸನ್ತೋಷ ನಿಮಿತ್ತಮಾತ್ಮಾಂತಃಕರಣ ಪರಿಣತಿ ಪ್ರಕಾಶನಾಯ ನಿರವದ್ಯಂ ಪದ್ಯಮಿದಂ ಆಶುವಿರಚಿತಂ" ಎಂದು ಹೇಳಿದ್ದಾರೆ. ಈ ಮಹಾಪುರುಷನು ಮುಕ್ತನಾದ ವರ್ಷವು ಕ್ರಿಸ್ತಾಬ್ದ 1129 : ಎಂದರೆ ಈ ಕಾಲಕ್ಕೆ

ಮೊದಲೇ ಪಾರ್ಶ್ವನಾಥ ಬಸದಿಯು ಇದ್ದಿರಬೇಕೆಂದು ವ್ಯಕ್ತವಾಗುತ್ತದೆ.

ಪಾರ್ಶ್ವನಾಥ ಬಸದಿಯ ಮುಂದೆ ಇರುವ ಮಾನಸ್ತಂಭವನ್ನು ಮೈಸೂರು ದೊರೆ ಚಿಕ್ಕ ದೇವರಾಜ ಒಡೆಯರ ಕಾಲದಲ್ಲಿ, ಎಂದರೆ 1672–1704 ರ ಸುಮಾರಿನಲ್ಲಿ, ಪುಟ್ಟಯ್ಯನೆಂಬುವನು ಕಟ್ಟಿಸಿದನೆಂದು ತಿಳಿದು ಬರುತ್ತದೆ. ಈ ಮಾನಸ್ತಂಭದ ಮೇಲ್ಗಡೆ ಮಂಟಪವೊಂದಿದ್ದು ಅದರ ಮೇಲೆ ಶಿಖರವಿದೆ. ಸ್ತಂಭದ ಕೆಳಭಾಗದಲ್ಲಿ ನಾಲ್ಕೂ ಕಡೆ ನಾಲ್ಕು ಶಿಲ್ಪಗಳನ್ನು ಕಡೆದಿದ್ದಾರೆ. ದಕ್ಷಿಣ ದಿಕ್ಕಿಗೆ ಮುಖಮಾಡಿ ಪದ್ಮಾವತಿ, ಉತ್ತರ ದಿಕ್ಕಿಗೆ ಮುಖಮಾಡಿ ಕೂಷ್ಮಾಂಡಿನಿ, ಪೂರ್ವದಿಕ್ಕಿಗೆ ಮುಖಮಾಡಿ ಯಕ್ಷನೊಬ್ಬ, ಪಶ್ಚಿಮ ದಿಕ್ಕಿಗೆ ಮುಖಮಾಡಿ ಕುದುರೆ ಸವಾರನೊಬ್ಬ (ಇದು ಬ್ರಹ್ಮನ ಸಂಕೇತ) ಹೀಗೆ ಈ ಶಿಲ್ಪಗಳು.

ಪಾರ್ಶ್ವನಾಥ ಬಸದಿಯ ಪಕ್ಕದಲ್ಲೇ ಬಂಡೆಯ ಮೇಲೆ ದಪ್ಪದಪ್ಪ ಅಕ್ಷರಗಳ ಶಾಸನಗಳಿವೆ. ಇದರ ಪ್ರಸ್ತಾಪ ಮೊದಲೇ ಬಂದಿದೆ. ಇದರ ಪಕ್ಕದಲ್ಲಿರುವ ಕೂಗೆಬ್ರಹ್ಮದೇವರಕಂಬವನ್ನು ಕ್ರಿಸ್ತಾಬ್ದ 970ರ ಸುಮಾರಿಗೆ ನೆಟ್ಟಂತೆ ತಿಳಿದುಬರುತ್ತದೆ. ಕಂಬದ ಮೇಲ್ಗಡೆ ಪೂರ್ವಾಭಿಮುಖನಾಗಿ ಕುಳಿತ ಬ್ರಹ್ಮದೇವರ ಮೂರ್ತಿಯಿದೆ. ಕಂಬದ ಅಡಿಭಾಗದಲ್ಲಿ ಅಷ್ಟ ದಿಗ್ಗಜಗಳನ್ನು ಕಡೆದಿದ್ದರು. ಈ ಕಂಬಕ್ಕೆ ಪಶ್ಚಿಮದಲ್ಲಿ ಶಾಂತಿನಾಥ ಬಸದಿಯಿದೆ. ಹದಿನಾರನೆಯ ತೀರ್ಥಂಕರ ಶಾಂತಿನಾಥನೇ ಗರ್ಭಗುಡಿಯಲ್ಲಿರುವ ಮೂರ್ತಿ. ಈ ಬಸದಿಯ ಪಕ್ಕದಲ್ಲಿ, ಶಾಸನಗಳಿರುವ ಬಂಡೆಯ ಹಿಂದೆ, ಮಾರನವಮಿ ಮಂಟಪವೂ ಹನ್ನೊಂದಡಿ ಎತ್ತರದ ಬಳಪದ ಕಲ್ಲಿನ ಭರತೇಶ್ವರನ ಮೂರ್ತಿಯೂ ಇವೆ. ಕ್ರಿಸ್ತಾಬ್ದ 900 ರ ಸುಮಾರಿಗೆ ಅರಿಟ್ಟೋನೇಮಿ (ಅರಿಷ್ಟನೇಮಿ) ಎಂಬ ಶಿಲ್ಪಿಯು ಕಡೆದನೆನ್ನಲಾದ ಈ ಭರತೇಶ್ವರ ಮೂರ್ತಿಯು ಅಪೂರ್ಣವಾಗಿದೆ; ಮಂಡಿಯವರೆಗೆ ಮಾತ್ರ ಕಂಡರಿಸಿದ್ದಾರೆ.

ಇತರ ಬಸದಿಗಳು

ಕತ್ತಲೆ ಬಸದಿಯ ಪಕ್ಕದಲ್ಲಿ, ಚಂದ್ರಗುಪ್ತ ಬಸದಿಯ ಹಿಂದೆ, ಶಾಸನ ಬಸದಿ ಇದೆ. ಈ ಮಂದಿರವನ್ನು ಪ್ರವೇಶಿಸುವಾಗಲೇ ಪ್ರಮುಖವಾಗಿ ಕಾಣುವ ಶಾಸನವನ್ನಿಟ್ಟಿರುವುದರಿಂದ ಬಸದಿಗೆ ಈ ಹೆಸರು ಬಂದಿದೆ. ಇದು

ನಿರ್ಮಾಣವಾದದ್ದು ಕ್ರಿಸ್ತಾಬ್ದ 1117 ರಲ್ಲಿರಬಹುದು. ಬಸದಿಯ ಗರ್ಭಗೃಹದಲ್ಲಿ ಐದಡಿ ಎತ್ತರದ ಆದಿನಾಥ ತೀರ್ಥಂಕರ ಮೂರ್ತಿಯಿದೆ. ಅಂತರಾಳಕ್ಕೆ ಹೊಂದಿಕೊಂಡಿರುವ ನವರಂಗದಲ್ಲಿ ಗೋಮುಖ ಯಕ್ಷ, ಚಕ್ರೇಶ್ವರಿ ಯಕ್ಷಿಯರ ವಿಗ್ರಹಗಳನ್ನಿಟ್ಟಿದ್ದಾರೆ. 'ಜಿನಧರ್ಮನಿರ್ಮಳರುಚಿ' ಯಾದ ಗಂಗಸೇನಾಪತಿಯು 'ಸದ್ಭಕ್ತಿ' ಯಿಂದ ಈ 'ಜೈನಮಂದಿರಮಿಂದಿರಾಕುಳಗೃಹ'ವನ್ನು ಕಟ್ಟಿಸಿದನೆಂದು ಆದೀಶ್ವರ ಸ್ವಾಮಿಯ ಸಿಂಹಪೀಠದಲ್ಲಿರುವ ಶಾಸನ ತಿಳಿಸುತ್ತದೆ. ಅವನ ತಂದೆ ಬಂಧುಮಿತ್ರನಂತೆ, ತಾಯಿ ಪೋಚಾಂಬಿಕೆ, ಆಚಾರ್ಯನು ಶುಭಚಂದ್ರದೇವ. ತನ್ನೊಡೆಯ ವಿಷ್ಣುವರ್ಧನ ರಾಜನು ತನಗೆ ಬಹುಮಾನವಾಗಿ ಕೊಟ್ಟ ಪರಮವೆಂಬ ಗ್ರಾಮವನ್ನು ಈ ಬಸದಿಗೆ ಈತನು ದಾನ ಮಾಡಿದ್ದಾನೆ.

'ಇಂದಿರಾಕುಳಗೃಹ' ವೆನಿಸಿದ ಈ ಶಾಸನ ಬಸದಿಯ ಮುಂಭಾಗದಲ್ಲಿ, ಮಜ್ಜಿಗಣ್ಣ ಬಸದಿ ಹಿಂಭಾಗದಲ್ಲಿ, ಚಂದ್ರಪ್ರಭ ಬಸದಿಗಳಿವೆ. ಎರಡೂ ಶಾಸನ ಬಸದಿಗಿಂತ ಪ್ರಾಚೀನವಾದವು. ಮಜ್ಜಿಗಣ್ಣ ಬಸದಿಯನ್ನು ಕಟ್ಟಿದ ಕಾಲವು ನಿರ್ದಿಷ್ಟವಾಗಿ ತಿಳಿಯುವುದಿಲ್ಲವಾದರೂ ಬಳಿಯಿರುವ ಶಾಸನವು ಗಂಗರಾಜ ಶ್ರೀಪುರುಷನ ಮಗ ಇಮ್ಮಡಿ ಶಿವಮಾರನನ್ನು ಉಲ್ಲೇಖಿಸುತ್ತದೆ; ಎಂದರೆ ಕ್ರಿಸ್ತಾಬ್ದ 780–800 ಸುಮಾರಿಗೆ ಈ ಬಸದಿ ರೂಪ ತಳೆದಿರಬಹುದು. ಇದರ ಗರ್ಭಗುಡಿಯಲ್ಲಿ ಹದಿನಾಲ್ಕನೆಯ ತೀರ್ಥಂಕರನಾದ ಅನಂತನಾಥನ ಮೂರ್ತಿಯಿದೆ. ಚಂದ್ರಪ್ರಭ ಬಸದಿಯೂ ಇದೇ ಸುಮಾರಿನಲ್ಲಿ ಮೈದುಂಬಿ ಬಂದಿರಬಹುದು; ಅದೇ ಶಿವಮಾರನು ಕಟ್ಟಿಸಿದನೆನ್ನುವ ಸೂಚನೆ ನವರಂಗದ ಹೊರಗೋಡೆಯ ಮೇಲಿರುವ ಶಾಸನದಲ್ಲಿದೆ. ಗರ್ಭಗುಡಿಯಲ್ಲಿ ಎಂಟನೆಯ ತೀರ್ಥಂಕರನಾದ ಚಂದ್ರಪ್ರಭನ ಮೂರ್ತಿಯೂ, ಸುಖನಾಸಿಯಲ್ಲಿ ಶ್ಯಾಮಯಕ್ಷ, ಜ್ವಾಲಾಮಾಲಿನೀ ಯಕ್ಷಿಯರ ಮೂರ್ತಿಗಳೂ ಇವೆ. ಹೊಯ್ಸಳರ ಕಾಲಕ್ಕೆ ಮುಂಚಿನ ಶಿಲ್ಪಗಳಿವು ಎನ್ನುತ್ತಾರೆ. ಚಂದ್ರಗಿರಿಯ ಮೇಲೆ ಚಂದ್ರಪ್ರಭ ಬಸದಿಯೇ ಅತಿಪುರಾತನವಾದುದು ಎನ್ನುವವರೂ ಇದ್ದಾರೆ.

ಚಾವುಂಡರಾಯ ಬಸದಿ

ಶಾಸನ ಬಸದಿಯ ಎಡಗಡೆಯಿರುವ ಚಾವುಂಡರಾಯ ಬಸದಿಯು ಭವ್ಯ

ವಾದುದು, ಸ್ವಾರಸ್ಯವಾದು. ಇಪ್ಪತ್ತೆರಡನೆಯ ತೀರ್ಥಂಕರನಾದ ನೇಮಿನಾಥನ ಮೂರ್ತಿಯು ಗರ್ಭಗೃಹದಲ್ಲಿದೆ; ಸುಖನಾಸಿಯಲ್ಲಿ ಸರ್ವಾಹ್ಣಯಕ್ಷ ಕೂಷ್ಮಾಂಡಿನೀಯಕ್ಷಿಯರ ಮೂರ್ತಿಗಳಿವೆ. ನೇಮಿನಾಥ ಮೂರ್ತಿಯ ಪಾದಪೀಠದಲ್ಲಿ ಗಂಗ–ಸೇನಾಪತಿಯ ಮಗ ಏಚಣನೆಂಬುವನು ಈ 'ತ್ರೈಲೋಕ್ಯ ರಂಜನ ಚೈತ್ಯಾಲಯ'ವನ್ನು ಮಾಡಿಸಿದನೆಂಬ ಶಾಸನವಿದೆ. ಇದನ್ನು ಬೊಪ್ಪಣ ಚೈತ್ಯಾಲಯವೆಂದೂ ಕರೆಯುತ್ತಿದ್ದರಂತೆ (ಬೊಪ್ಪಣಾಪರ ನಾಮಕೋ). ಇದರ ಕಾಲ ಸುಮಾರು 1138. ಆದರೆ ಇದೇ ಬಸದಿಯ ಮೇಲುಪ್ಪರಿಗೆಯಲ್ಲಿರುವ ಪಾರ್ಶ್ವನಾಥ ಮೂರ್ತಿಯ ಪಾದಪೀಠದಲ್ಲಿ "ಮಂತ್ರಿ ಚಾಮುಂಡನ ನಂದನ ನೆಲೆ ಮಾಡಿಸಿದಂ ಜಿನಭವನಮನಜಿತಸೇನ ಮುನಿವರ ಗುಡ್ಡಂ", ಎಂದರೆ ಚಾವುಂಡ ರಾಯನ ಮಗನೂ ಅಜಿತಸೇನ ಮುನಿಗಳ ಶಿಷ್ಯನೂ ಆದ ಜಿನದೇವನು ಇದನ್ನು ಕಟ್ಟಿಸಿದಂತೆ ಶಾಸನವಿದೆ. ಈ ಬಸದಿಯು ಕ್ರಿಸ್ತಾಬ್ದ 982ರಲ್ಲಿ ಆರಂಭವಾಗಿ 995ರಲ್ಲಿ ಮುಗಿದಂತೆ ತಿಳಿದುಬರುತ್ತದೆ. ಎಂದರೆ ಒಂದು ಕಾಲಕ್ಕೆ ಇದ್ದು ನಂತರ ಇಲ್ಲವಾದ ಬೊಪ್ಪಣ ಚೈತ್ಯಾಲಯದಲ್ಲಿದ್ದ ನೇಮಿನಾಥ ವಿಗ್ರಹವನ್ನು ತಂದು ಈ ಚಾಮುಂಡರಾಯನ ಬಸದಿಯಲ್ಲಿಟ್ಟರೆಂದು ಊಹಿಸಬಹುದು.

ಚಾವುಂಡರಾಯ ಬಸದಿಯ ಮುಂದೆ ಉತ್ತರಾಭಿಮುಖವಾಗಿ ಎರಡು ಕಟ್ಟೆ ಬಸದಿ ಇದೆ. ಬಸದಿಯ ಜಗುಲಿಯನ್ನೇರಲು ಪೂರ್ವದ ಕಡೆಯಿಂದ ಒಂದು ಕಟ್ಟೆ, ಪಶ್ಚಿಮದ ಕಡೆಯಿಂದ ಇನ್ನೊಂದು ಕಟ್ಟೆಗಳಿರುವುದರಿಂದ ಇದು ಎರಡು ಕಟ್ಟೆ ಬಸದಿ ಎನ್ನಿಸಿಕೊಂಡಿದೆ. ಇಲ್ಲಿನ ದೇವರು ಮೊದಲನೆಯ ತೀರ್ಥಂ-ಕರನಾದ ಆದಿನಾಥ. ಇದನ್ನು ಶುಭಚಂದ ಮುನಿಯ ಶಿಷ್ಯನಾದ ಗಂಗರಾಜನ ಹೆಂಡತಿ ಲಕ್ಷ್ಮಿ (ಲಕ್ಕಲದೇವತಿ, ಲಕ್ಷ್ಮಲೆ)ಯೆಂಬಾಕೆ ಕ್ರಿಸ್ತಾಬ್ದ 118ರಂದು ಕಟ್ಟಿಸಿದಳೆಂದು ಶಾಸನವಿದೆ. ಈಕೆಯನ್ನು ಶಾಸನವು "ದೇವತಾಧಿಷ್ಠಿತೆಯಲ್ಲದೆ ಕೇವಳಂ ಮನುಷ್ಯಾಂಗನೆಯೆ ? ಇಭಗಮನೆ, ಹರಿಣಲೋಚನೆ, ಶುಭ ಲಕ್ಷ್ಮಣೆ ಗಂಗರಾಜನರ್ಧಾಂಗನೆ, ತಾನ್ ಅಭಿನವರುಕ್ಮಿಣಿಯೆನಲೀ ತ್ರಿಭುವನದೊಳ್ ಪೊಲ್ವರೊಳರೆ ಲಕ್ಷ್ಮೀಮತಿಯಂ..." ಎಂದೂ "ಚತುರತೆಯೊಳ್ ಲಾವಣ್ಯದೊಳ್ ಅತಿಶಯಮೆನೆಗಳ್ದ ದೇವಭಕ್ತಿಯೊಳ್" ಸಮರಿಲ್ಲದವಳೆಂದೂ ಬಣ್ಣಿಸುತ್ತದೆ. 'ಲಕ್ಷ್ಮೀದೇವಿ ಮಾಡಿಸಿದ ಜಿನಾಲಯ' ವೆಂದು ಬಲಭಾಗದ ಮಂಟಪ

ದಲ್ಲಿರುವ ಶಾಸನ ಸ್ಪಷ್ಟಪಡಿಸುತ್ತದೆ. ಆದರೆ ಈಕೆಯು ದಂಡನಾಯಕಿತಿ ಲಕ್ಕವ್ವೆಯು ಶಕ 1044 ಪ್ಲವಸಂವತ್ಸರದಲ್ಲಿ "ಸಂನ್ಯಸನಂ ಗೆಯ್ದು, ಸಮಾಧಿ ವೆರಸಿ, ಮುಡುಪಿ, ದೇವಲೋಕಕ್ಕೆ ಸಂದಳ್"ಂದೂ ಈಕೆಯ "ಪರೋಕ್ಷವಿನ ಯಕ್ಕೆ ನಿಷಿಧಿಗೆಯಂ ಶ್ರೀ ಮದ್ದಂಡನಾಯಕ ಗಂಗರಾಜಂ ನಿಲ್ಲಿಸಿ"ದನೆಂದೂ ಶಾಸನವಿದೆ. ಎಂದರೆ ತನ್ನ ಸತಿಯ ಸ್ಮಾರಕಕ್ಕೆ ಗಂಗರಾಜನು ಮಾಡಿಸಿದ ಬಸದಿಯೆಂದು ಅರ್ಥವಾಗುತ್ತದೆ. ಈಕೆಯ ಮಗ ಬೂಚಣನೆಂಬುವನು ಅಲ್ಲಿ ತೀರಿಕೊಂಡನೆಂದು ಇನ್ನೊಂದು ಶಾಸನವಿದೆ. ಈ 'ಜಿನಚರಣ ಶರಣನುಮೆನಿಸಿದ ಬೂಚಣಂ' ಎಂಬವನೂ 'ಶ್ರೀ ಮೂಲಸಂಘದ ದೇಸೀಗಣದ ಪುಸ್ತಕ ಗಚ್ಛದ ಶುಭಚಂದ್ರ ಸಿದ್ಧಾಂತ ದೇವರ ಗುಡ್ಡ'ನಾಗಿದ್ದು ಶಕ 1035ರ ವಿಜಯ ಸಂವತ್ಸರದ ವೈಶಾಖ ಶುದ್ಧ ದಶಮೀ ಭಾನುವಾರ "ಸರ್ವಸಂಗ ಪರಿತ್ಯಾಗ ಪೂರ್ವಕಂ ಮುಡಿಪಿದಂ". ಹೀಗೆ ತೀರಿಕೊಂಡ 'ಅಭಿನವ ದಧೀಚಿ'ಯೆನಿಸಿದ ಬೂಚಣನ ನಿಶಿದಿಗೆಯೇ ಈ ಬಸದಿಯೆಂದು ಭಾಸವಾಗುತ್ತದೆ. ಅಲ್ಲಿರುವ ಶಿಲಾಸ್ತಂಭವೊಂದು "ಬೂಚಣಗುಣ ಪ್ರಖ್ಯಾತಿವೃದ್ಧಿಂಪ್ರತಿ" ಎಂಬ ಮನೋ ರಥವನ್ನು ಶಾಸನದಲ್ಲಿ ಮೂಡಿಸಿಕೊಂಡಿದೆ. ಅಂತೂ ತಾಯಿಯೂ ಮಗನೂ ಸಲ್ಲೇಖನ ವ್ರತವನ್ನು ಹಿಡಿದು ಮಡಿದ ಕಥೆಯನ್ನು ಈ ಬಸದಿ ಹೇಳುತ್ತದೆ.

ಸವತಿ ಗಂಧವಾರಣೆ

ಈ ಎರಡು ಕಟ್ಟೆ ಬಸದಿಯ ಪಕ್ಕದಲ್ಲಿ ಇರುವ ಸವತಿಗಂಧವಾರಣ ಬಸದಿಯ ಗರ್ಭಗುಡಿಯಲ್ಲಿರುವ ಶಾಂತಿನಾಥ ತೀರ್ಥಂಕರರ ಮೂರ್ತಿಯ ಪಾದ ಪೀಠದಲ್ಲಿ "ಪ್ರಭಾಚಂದ್ರ ಮುನೀಂದ್ರಸ್ಯ ಪದಪಂಕಜಷಟ್ಪದಾ ಶಾನ್ತಲಾ ಶಾನ್ತಿಜೈನೇಂದ್ರ ಪ್ರತಿಬಿಂಬಮಕಾರಯೇತ್" ಎಂಬ ಲೇಖನವಿದೆ. ದೇವರ ಸಿಂಹ ಪೀಠದಲ್ಲಿ "ರಾಜತೇ ರಾಜಸಿಂಹೀವ ಪಾರ್ಶ್ವೇ ವಿಷ್ಣುಮಹೀಭೃತಃ ವಿಖ್ಯಾತಾ ಶಾಂತಲಾಖ್ಯಾ ಸಾಜಿನಾಗಾರಮಕಾರಯೇತ್" ಎಂಬ ಶಾಸನ ವಿದೆ. ಇದನ್ನು ಕಟ್ಟಿಸಿದ ವರ್ಷ ಕ್ರಿಸ್ತಾಬ್ದ 1123(ಶೋಭಕೃತು ಸಂವತ್ಸರದ ಚೈತ್ರ ಶುದ್ಧ ಪಾಡಿವ ಬೃಹಸ್ಪತಿವಾರ). ಇದನ್ನು ಕಟ್ಟಿಸಿದ ಶಾಂತಲೆ "ತ್ರಿಭುವನ ಮಲ್ಲ, ತಳಕಾಡುಗೊಂಡ, ಭುಜಬಳಿವೀರರಣಂಗ ವಿಷ್ಣುವರ್ಧನ ಪೊಯ್ಸಳದೇವ"ರ "ಪಾದಪದ್ಮೋಪಜೀವಿ, ಪಿರಿಯರಸಿ, ಪಟ್ಟಮಹಾದೇವಿ".

ಗಂಡನು 'ರಾಜಕಂಠೀರವ, ಸಂಗ್ರಾಮವಿಜಯಧ್ವಜ, ಗಂಡಪ್ರಚಂಡ, ಶರಣಾಗತವಜ ಪಂಜರ, ದುಷ್ಟರ್ಗೆ ಧೂರ್ತ, ಕಲಿಯುಗಪಾರ್ಥ, ಸಮರ ಧುರಂಧರ, ವೈರಿಕಾಲಾನಲ, ಸಾಹಸಭೀಮ''ನಾದರೂ "ಕವಿಜನ ಕಾಮಧೇನು, ಸಾಹಿತ್ಯ ವಿದ್ಯಾಧರ, ಸರಸ್ವತೀ ಕರ್ಣಾವತಂಸ, ಚತುಸ್ಸಮಯ ಸಮುದ್ಧರಣ, ದಾನ ವಿನೋದ." ಇಂಥವನ ಪಟ್ಟದ ರಾಣಿಯು "ಪತಿವ್ರತಾಪ್ರಭಾವ ಪ್ರಸಿದ್ಧ ಸೀತೆ, ಉದ್ವೃತ್ತ ಸವತಿ ಗಂಧವಾರಣೆ, ಪುಣ್ಯೋಪಾರ್ಜನ ಕರಣ ಕಾರಣೆ, ಜಿನಸಮಯ ಸಮುದಿತ ಪ್ರಾಕಾರೆ, ಜಿನಧರ್ಮನಿರ್ಮಳೆ, ಜಿನ ಗಂಧೋದಕ ಪವಿತ್ರೀಕೃತೋತ್ತಮಾಂಗೆ, ಜಿನಧರ್ಮ ಕಥಾಕಥನ ಪ್ರಮೋದೆ." ಗಂಡ ವೈಷ್ಣವನಾದರೂ ಈಕೆ ಜೈನಳು; ಈಕೆಯ ತಂದೆ ಪಿರಿಯ ಪೇರ್ಗಡೆ ಮಾರಸಿಂಗಯ್ಯನು 'ಹರಪಾದಾಬ್ಜ ಭಕ್ತ', ಶೈವ; ಈಕೆಯ ತಾಯಿ "ಗುಣನಿಧಿ" ಮಾಚಿಕಬ್ಬೆಯೂ ಜೈನಳು. ಶಾಂತಲೆಗೆ "ವಿಷ್ಣು ದೈವಂ" ಆದರೂ "ಜಿನನಾಥಂ ತನಗೆಂದು ಆಪ್ತನು". ಈಕೆಯ ಗುರು ಮೇಘಚಂದ್ರ ತ್ರೈವಿದ್ಯ ಮುನಿಯ ಶಿಷ್ಯ ಪ್ರಭಾಚಂದ್ರ ಸಿದ್ಧಾಂತದೇವ. ತಾನು ಕಟ್ಟಿಸಿದ ಈ ಬಸದಿಯನ್ನು ತನ್ನ ಬಿರುದುಗಳಲ್ಲೊಂದಾದ 'ಸವತಿಗಂಧವಾರಣೆ' (ಸವತಿಯರಿಗೆ ಮದದಾನೆ)ಯೆಂಬ ಹೆಸರಿಂದ ಕರೆದಿರುವುದು ಸೋಜಿಗವಾಗಿದೆ. ಶಾಸನದಲ್ಲಿ "ಶ್ರೀ ಬೆಳ್ಗೊಳದ ತೀರ್ಥದೊಳು ಸವತಿಗಂಧವಾರಣ ಜಿನಾಲಯಮಂ ಮಾಡಿಸಿ" ಎಂದೇ ಇದೆ.

ಈಕೆ ಕ್ರಿಸ್ತಾಬ್ದ 1131ರಲ್ಲಿ (ವಿರೋಧಿಕೃತ್ ಸಂವತ್ಸರದ ಚೈತ್ರ ಶುದ್ಧ ಪಂಚಮಿ ಸೋಮವಾರದಲಿ) ಶಿವಗಂಗೆಯ ತೀರ್ಥದಲ್ಲಿ ಬಿದ್ದು ಸ್ವರ್ಗಸ್ಥೆಯಾದಳು. ಈ ಸುದ್ದಿಯನ್ನು ಕೇಳಿದ ತಾಯಿ ಮಾಚಿಕಬ್ಬೆ ಒಡನೆಯೇ ಚಂದ್ರಗಿರಿಯ ಮೇಲೇರಿ ಸಲ್ಲೇಖನ ವ್ರತವನ್ನು ಹಿಡಿದು, ಒಂದು ತಿಂಗಳ ಕಾಲ ಉಪವಾಸ ಮಾಡಿ "ತಾಂ ಸುರಗತಿಗಯ್ದಳು ಸಕಲ ಭವರ ಸನ್ನಿಧಿಯೊಳ್ ಸಮಾಧಿಯಿಂ." ಶಾಸನವು "ಅರಸಿ ಸುರಗತಿಯನಯ್ದಿದಳಿರಲಾಗೆನಗೆಂದು ಬೆಂದು ಬೆಳುಗೊಳದಲು ದುರ್ದ್ಧರ ಸನ್ಯಾಸನದಿಂ ಪರಿಣತೆ ತಾಯಿ ಮಾಚಿಕಬ್ಬೆ ತಾನುಂ ತೊರೆದಳ್" ಎಂದು ಹೇಳುತ್ತದೆ.

ಸವತಿ ಗಂಧವಾರಣ ಬಸದಿಯ ಪಕ್ಕದಲ್ಲಿ ತೇರಿನ ಬಸದಿಯಿದೆ. ಮುಂದಿರುವ ಮಂದರದಿಂದ ಇದು ತೇರಿನ ಬಸದಿಯೆನಿಸಿಕೊಂಡಿದೆ. ನಿಜವಾಗಿ ಇದು

ಬಾಹುಬಲಿ ಬಸದಿ. ಗರ್ಭಗುಡಿಯಲ್ಲಿರುವ ಮೂರ್ತಿ ಬಾಹುಬಲಿಗೊಮ್ಮಟನದು. ಹೊಯ್ಸಳರಾಜ ವಿಷ್ಣುವರ್ಧನನ ರಾಜವರ್ತಕನೆನಿಸಿದ್ದ ಹೊಯ್ಸಳ ಸೆಟ್ಟಿಯೂ ನೇಮಿ ಸೆಟ್ಟಿಯೂ ತಮ್ಮ ತಾಯಂದಿರ ಹೆಸರಿನಲ್ಲಿ ಈ ಬಸದಿಯನ್ನೂ ಮುಂದಿರುವ ಮಂದರವನ್ನೂ ಕಟ್ಟಿಸಿದರು. ಪೊಯ್ಸಳ ಸೆಟ್ಟಿಯ ತಾಯಿಯ ಹೆಸರು ಮಾಚಿಕಬ್ಬೆ, ನೇಮಿ ಸೆಟ್ಟಿಯ ತಾಯಿ ಶಾಂತಿಕಬ್ಬೆ. ಈ ಬಸದಿಯ ಪಕ್ಕದಲ್ಲಿರುವ ಶಾಂತೀಶ್ವರ ಬಸದಿಯೂ ಹೊಯ್ಸಳರ ಕಾಲದ ಕೃತಿ. ಆದರೆ ಯಾರು, ಯಾವಾಗ ಕಟ್ಟಿಸಿದರೆಂಬುದು ತಿಳಿದುಬರುವುದಿಲ್ಲ. ಇದರ ಗರ್ಭಗುಡಿಯಲ್ಲಿ ಐದಡಿ ಎರಡಂಗುಲ ಎತ್ತರವಿರುವ ಶಾಂತಿನಾಥ ತೀರ್ಥಂಕರನ ಮೂರ್ತಿಯಿದೆ. ಒಂದು ಕಾಲಕ್ಕೆ ಈ ಬಸದಿಯ ಗೋಡೆಗಳ ಮೇಲೆ ವರ್ಣಚಿತ್ರಗಳಿದ್ದುವೆಂದು ಹೇಳುತ್ತಾರೆ.

ಈ ಎಲ್ಲ ಬಸದಿಗಳನ್ನೂ ಒಳಗೊಂಡ ವಿಸ್ತಾರವಾದ ಪ್ರಾಕಾರವೊಂದನ್ನು ನಿರ್ಮಿಸಿದ್ದಾರೆ. ಒಂದು ಕಡೆ ಗೋಡೆಯ ಉದ್ದವೇ ಐನೂರು ಅಡಿಗಳು. ಈ ಪ್ರಾಕಾರದ ಪ್ರವೇಶದ್ವಾರವು ಕೂಗೆ ಬ್ರಹ್ಮದೇವರ ಕಂಬಕ್ಕೆ ಎದುರಾಗಿದೆ. ಎಡಕ್ಕೆ ತಿರುಗಿದರೆ ಶಾಂತಿನಾಥ ಬಸದಿ, ಕೂಗೆ ಕಂಬದಿಂದಲೇ ಮುಂದೆ ಹೋದರೆ ಬಂಡೆ ಶಾಸನಗಳು, ಪಾರ್ಶ್ವನಾಥ ಬಸದಿ, ಮಾನಸ್ತಂಭ, ಕತ್ತಲೆ ಬಸದಿ, ಶಾಸನ ಬಸದಿ, ಮಜ್ಜಿಗಣ್ಣ ಬಸದಿ, ಚಾವುಂಡರಾಯ ಬಸದಿ; ಅಲ್ಲಿಂದ ಬಲಕ್ಕೆ ತಿರುಗಿದರೆ ಎರಡು ಕಟ್ಟೆ ಬಸದಿ, ಸವತಿಗಂಧವಾರಣ ಬಸದಿ, ತೇರಿನ ಬಸದಿ, ಶಾಂತೀಶ್ವರ ಬಸದಿ. ಶಾಂತೀಶ್ವರ ಬಸದಿಯೇ ಕೊಟ್ಟ ಕೊನೆಯ ಕಟ್ಟಡ, ಇದರ ಮುಂಭಾಗದಲ್ಲಿಯೂ ಪ್ರಾಕಾರಕ್ಕೆ ಒಂದು ಬಾಗಿಲು ಮಾಡಿದ್ದಾರೆ. ಹೀಗೆ ಈ ಪ್ರಾಕಾರದೊಳಗೆ ಹದಿಮೂರು ಬಸದಿಗಳಿವೆ,' ಒಂದು ಮಾನಸ್ತಂಭವಿದೆ. ಒಂದು ಬ್ರಹ್ಮದೇವರ ಕಂಬವಿದೆ, ಒಂದು ಮಾರನವಮಿ ಮಂಟಪವಿದೆ, ಒಂದು ಭರತೇಶ್ವರನ ಅದ್ಭುತ ಶಿಲಾಮೂರ್ತಿಯಿದೆ. ಪ್ರಾಕಾರದಾಚೆ ಭದ್ರಬಾಹು ಗುಹೆಯಿದೆ. ಇರುವೆಬ್ರಹ್ಮದೇವರ ದೇವಸ್ಥಾನವಿದೆ.

ಇಷ್ಟು ವಿಶಿಷ್ಟವಾದ ಚಿಕ್ಕಬೆಟ್ಟವನ್ನು ಹಿಂದಿನವರು 'ಋಷಿಗಿರಿ' ಎಂದು ಕರೆದದ್ದು ಸರಿಯೇ. ಶ್ರವಣಬೆಳ್ಗೊಳದ ಪ್ರಾಚೀನ ಪ್ರಶಸ್ತಿಗೆ ಈ ಚಂದ್ರಗಿರಿಯೇ ಕಾರಣ.

ಲೇಪಾಕ್ಷಿಯ ಕಲೆಗಾರಿಕೆ

ಈಗ ಆಂಧ್ರಪ್ರಾಂತ್ಯದ ಅನಂತಪುರ ಜಿಲ್ಲೆಯಲ್ಲಿ ಹಿಂದೂಪುರದ ಬಳಿ ಲೇಪಾಕ್ಷಿ ಎನ್ನುವ ಹಳ್ಳಿಯಿದೆ. ಮೊದಲಿಗೆ ಇದು ಕನ್ನಡ ಸಂಸ್ಕೃತಿಯ ಹರವಿನಲ್ಲೇ ಸೇರಿದ್ದ ಮುಖ್ಯ ಪಟ್ಟಣವಾಗಿದ್ದಿತು; ವಿಜಯನಗರದ ಅರಸರ ಕಾಲದಲ್ಲಿ ಇದು ಸುಪ್ರಸಿದ್ಧವಾದ ವ್ಯಾಪಾರ ಸ್ಥಳವಾಗಿದ್ದಿತು. ಇದಕ್ಕೆ ಪ್ರಾಚೀನ ಪ್ರಶಸ್ತಿಯೂ ಉಂಟು. ನೂರೆಂಟು ಶೈವಕ್ಷೇತ್ರಗಳಲ್ಲಿ ಇದೊಂದು ಎಂದು ಸ್ಕಾಂದ ಪುರಾಣ ಹೇಳುತ್ತದೆ.

ಇಲ್ಲಿರುವ ಪಾಪನಾಶೇಶ್ವರ ಲಿಂಗವನ್ನು ಅಗಸ್ತ್ಯ ಮಹರ್ಷಿಯು ಸ್ಥಾಪಿಸಿದನೆಂದು ಸ್ಥಳಪುರಾಣ ಹೇಳುತ್ತದೆ. ಈ ಲಿಂಗವನ್ನು ಕೂರ್ಮಶೈಲದ ಮೇಲೆ ಕಡೆದಿದ್ದಾರೆ. ಪಾಪನಾಶೇಶ್ವರ ದೇವಾಲಯದ ಇತಿಹಾಸ ಸ್ವಾರಸ್ಯವಾದುದು. ಅಗಸ್ತ್ಯ ಪ್ರತಿಷ್ಠೆಯಾದ ಈ ಲಿಂಗಕ್ಕೆ ಮೊದಲು ಸರಿಯಾದ ಗುಡಿಯಿರಲಿಲ್ಲವಂತೆ. ವಿಜಯನಗರದ ದೊರೆಯಾದ ಅಚ್ಯುತರಾಯನ ಬಳಿ ಕೋಶಾಧಿಕಾರಿಯಾಗಿದ್ದ ವಿರೂಪಣ್ಣ ಮತ್ತು ಅವನ ಅಣ್ಣ ವೀರಣ್ಣ ಈ ಇಬ್ಬರು ಸೋದರರು ಕ್ರಿಸ್ತಾಬ್ದ 1538ರ ಸುಮಾರಿನಲ್ಲಿ ಈ ದೇವಾಲಯವನ್ನು ಕಟ್ಟಿಸಲು ಆರಂಭಿಸಿದರಂತೆ. ಗುಡಿಗೆ ಪ್ರಾಕಾರ, ರಂಗಮಂಟಪ, ಕಲ್ಯಾಣ ಮಂಟಪಗಳನ್ನು ಕಟ್ಟಿಸಿ ತಮ್ಮ ಮನೆದೇವರಾದ ವೀರಭದ್ರಸ್ವಾಮಿಯನ್ನೂ ಪ್ರತಿಷ್ಠಿಸಿದರಂತೆ. ಇದಕ್ಕೆ ಶಾಸನವೂ ಇದೆಯೆನ್ನಿ. ಆದರೆ ದೇವಾಲಯ ಅಪೂರ್ಣವಾಗಿಯೇ ಉಳಿದಿದೆ.

ಕಥೆ–ಐತಿಹ್ಯ

ಇದಕ್ಕೊಂದು ಕಥೆಯೂ ಬಳಕೆಯಲ್ಲಿದೆ. ಈ ಸೋದರರು ಮಹಾ

ಶಿವಭಕ್ತರಾಗಿದ್ದು ಈ ಗುಡಿಯನ್ನು ಕಟ್ಟಿಸಲು ದೇಶ ದೇಶಗಳಿಂದ ಅತ್ಯುತ್ತಮ ಕಲಾವಿದರನ್ನೂ ಕೆಲಸಗಾರರನ್ನೂ ಕರೆಸಿ, ಅವರಿಂದ ಶಿಲ್ಪಗಳಲ್ಲದೆ ವರ್ಣಚಿತ್ರ ಗಳನ್ನೂ ನಿರ್ಮಿಸಲಾರಂಭಿಸಿದರು. ಕಲ್ಯಾಣಮಂಟಪದ ಕೆಲಸ ನಡೆಯು ತ್ತಿದ್ದಾಗ ಅದರ ಸ್ತಂಭಗಳನ್ನು ಅತಿ ಸುಂದರವಾಗಿ ಕಡೆಯುತ್ತಿದ್ದುದನ್ನು ಕಂಡು ಅರಮನೆಯ ದಾಸಿಯರು ಅಸೂಯೆಗೊಂಡರು. ಅವರ ಪ್ರೋತ್ಸಾಹದಿಂದ ಅಚ್ಯುತರಾಯ ಮಹಾರಾಯನ ವೇಶ್ಯೆಯರು ದೊರೆಗೆ "ಈ ಸೋದರರು ಅರ ಮನೆಯ ಖಜಾನೆಯ ಹಣವನ್ನು ದುರ್ವ್ಯಯ ಮಾಡುತ್ತಿದ್ದಾರೆ" ಎಂದು ದೂರಿತ್ತರು. ಸಿಟ್ಟಿಗೆದ್ದ ದೊರೆ ತನ್ನ ಕೋಶಾಧಿಕಾರಿಯಾಗಿದ್ದ ವಿರೂಪಣ್ಣನನ್ನು ಬಂಧಿಸಲೂ, ಅವನ ಕಣ್ಣು ಕೀಳಿಸಿಬಿಡಲೂ ಅಪ್ಪಣೆ ಮಾಡಿದನು.

ರಾಜನ ನಿಷ್ಕಾರಣವಾದ ಕೋಪಕ್ಕೆ ಮರುಗಿ, ತನಗಾದ ಅಪಮಾನವನ್ನು ಸಹಿಸಲಾರದೆ ವಿರೂಪಣ್ಣನು ತನ್ನ ಕಣ್ಣನ್ನು ತಾನೇ ಕಿತ್ತು ಗುಡಿಯ ಗೋಡೆಯ ಮೇಲೆ ಎಸೆದನು. ಈಗಲೂ ಗುಡಿಯ ಗೋಡೆಯ ಮೇಲೆ ಕಣ್ಣಿನಾಕಾರದ ಎರಡು ತೂತುಗಳನ್ನು ಕಾಣಬಹುದು. ಅಂತೂ ಆಗಿನಿಂದಲೂ ಎರಡು ಕಣ್ಣು ಗಳು ಗುಡಿಯಲ್ಲಿ ಸುತ್ತಾಡಲಾರಂಭಿಸಿದುವೆಂದು ಜನರ ನಂಬಿಕೆ. ಗುಡಿಯ ಕಟ್ಟಡ ವೇನೋ ಅಷ್ಟಕ್ಕೇ ನಿಂತುಹೋಯಿತು. ಕಣ್ಣು ಗುಡಿಗೆ ಅಂಟಿಕೊಂಡಿತು.

ಕುರುಡಾದ ಕಣ್ಣು

ಇದು ಕಥೆ. ಊರಿನ ಹೆಸರು 'ಕುರುಡಾದ ಕಣ್ಣು' ಎಂದೇ. ಲೇಪಾಕ್ಷಿ ಯೆಂದರೆ ಇದೇ ಅರ್ಥ. ಕಲ್ಯಾಣಮಂಟಪದ ಕೆಲಸದಲ್ಲೇ ಗುಡಿ ನಿಂತಿದೆ; ಕಂಬ ಗಳು ಹಾಗೆ ಹಾಗೆಯೇ ಉಳಿದಿವೆ. ಆದರೆ ದೇವಾಲಯದಲ್ಲಿರುವ ಕಲೆ ವಿಶಿಷ್ಟ ವಾಗಿ ಮೆರೆಯುತ್ತಿದೆ. ಇಲ್ಲಿನ ಶಿಲ್ಪಗಳು ಅದ್ಭುತವೆಂದರೂ ಉತ್ಪ್ರೇಕ್ಷೆಯಲ್ಲ. ಸಾಂಪ್ರದಾಯಿಕ ಶೈಲಿಯ ನಿದರ್ಶನವಾದ ಈ ಶಿಲ್ಪಸಂವಿಧಾನ ಅತ್ಯಂತ ಜಾಣ್ಮೆಯದು. ಕಲಾವಿದನು ಸ್ವತಂತ್ರ ವಿನ್ಯಾಸಗಳನ್ನೂ ಕಾಣಿಸಿದ್ದಾನೆ. ಸಂಪ್ರ ದಾಯದ ಚೌಕಟ್ಟಿನಲ್ಲಿ ಕಲೆಗೆ ಸ್ವಾತಂತ್ರ್ಯವಿರಬಹುದೆಂದು ಲೇಪಾಕ್ಷಿ ಸಾಧಿಸಿದೆ.

ಅರ್ಧಮರ್ಧ ಮುಗಿದಿರುವ ಕಲ್ಯಾಣಮಂಟಪದ ಕಂಬಗಳೂ ರಂಗಮಂಟ ಪದ ಅರವತ್ತುನಾಲ್ಕು ಕಂಬಗಳೂ ಅತಿ ಸುಂದರವಾದ ಶಿಲ್ಪಗಳು. ಮನುಷ್ಯ

ಪ್ರಮಾಣದಲ್ಲಿರುವ ರಾಜರ, ಋಷಿಗಳ ಪ್ರತಿಮೆಗಳು ಸ್ವಾರಸ್ಯವಾಗಿವೆ. ಋಷಿಯ ಮುಖದಲ್ಲಿಯೂ, ನಿಲುವಿನಲ್ಲಿಯೂ ಇರಬೇಕಾದ ಶಾಂತಿಯನ್ನು ಶಿಲೆಯಲ್ಲಿ ಶಿಲ್ಪಿ ಮೂಡಿಸಿದ್ದಾನೆ. ಇಲ್ಲಿ ಅಧ್ಯಾತ್ಮರಸ ಉಕ್ಕಿಬಂದರೆ, ರಾಜರ ಠೀವಿ, ಗತ್ತು, ಶ್ರೀಮಂತಿಕೆ ಇವನ್ನೂ ಶಿಲ್ಪಿ ಮೂಡಿಸಿದ್ದಾನೆ. ಕಲ್ಯಾಣಮಂಟಪದ ಶಿಲ್ಪಗಳೆಲ್ಲವೂ ಒಂದೇ ರಸಭಾವವನ್ನು ಪೋಷಿಸುವಂತೆ ನಿಂತಿರುವುದನ್ನು ಕಾಣಬಹುದು. ಇಲ್ಲಿನ ಪಾರ್ವತೀ ಪರಿಣಯದ ಚಿತ್ರಣ ಭವ್ಯವಾದುದು. ಇಲ್ಲಿನ ಚತುರ್ಮುಖ ಬ್ರಹ್ಮನೂ ದೇದೀಪ್ಯಮಾನವಾಗಿ ಕಂಗೊಳಿಸುತ್ತಿದ್ದಾನೆ.

ನಾಟ್ಯ ಮಂಟಪ

ರಂಗಮಂಟಪದಲ್ಲಿ ಶಿವತಾಂಡವ ಕೇಳಿಯ ಸಂದರ್ಭವನ್ನು ಉಜ್ವಲವಾಗಿಚಿತ್ರಿಸಿದ್ದಾರೆ. ಈ ಚಿತ್ರವೇ ಪ್ರಮುಖವಾದುದರಿಂದ ಇದನ್ನು ನಾಟ್ಯಮಂಟಪವೆಂದೂ ಕರೆಯುವ ವಾಡಿಕೆಯಿದೆ. ನಟನ ಮಾಡುತ್ತಿರುವ ಶಿವನ ಸಮ್ಮುಖದಲ್ಲಿ ಬ್ರಹ್ಮ ಮೃದಂಗವನ್ನೂ, ತುಂಬುರು ವೀಣೆಯನ್ನೂ, ನಂದಿಯು ಢಕ್ಕೆಯನ್ನೂ ನುಡಿಸುತ್ತಿದ್ದಾರೆ. ಶಿವನ ಕುಣಿತ ಆನಂದ ತಾಂಡವ ರೀತಿಯದು; ಈ ಮಂಟಪದ ಒಂದೊಂದು ಕಂಬದಲ್ಲೂ ಈ ಪರಿವಾರ ದೇವತೆಗಳನ್ನು ಕಾಣಬಹುದು. ಕಲ್ಲಿನಲ್ಲಿ ಸೂಕ್ಷ್ಮವಾದ ಅಂಗಭಂಗಿಗಳನ್ನೂ ಹಾವಭಾವಗಳನ್ನೂ, ರಸಾನುಭವವನ್ನೂ ತೋರಿಸಿ ಶಿಲ್ಪಿ ತನ್ನ ಜಾಣ್ಮೆಯನ್ನೂ, ರಸಾಭಿಜ್ಞತೆಯನ್ನೂ ಸ್ಪಷ್ಟಪಡಿಸಿದ್ದಾನೆ.

ಪಾರ್ವತಿಯಿಂದ ಭಿಕ್ಷೆ ಬೇಡುತ್ತಿರುವ ಕಂಕಾಳ ಮೂರ್ತಿಯ ಚಿತ್ರಣ ಒಂದು ಕಂಬದ ಮೇಲೆ ಮೂಡಿಬಂದಿದೆ. ಶಿವನ ಪೌರುಷ, ಪಾರ್ವತಿಯ ಸ್ತ್ರೀ ಸಹಜ ಗಾಂಭೀರ್ಯ ಇವನ್ನು ಶಿಲ್ಪಿ ನಯವಾಗಿ, ದೃಢವಾಗಿ ಇಲ್ಲಿ ಬಿಡಿಸಿದ್ದಾನೆ. ಮಾರ್ಕಂಡೇಯನನ್ನು ಕಾಪಾಡಲು ಸಿದ್ಧನಾಗಿ ಅವತರಿಸಿರುವ ಮೃತ್ಯುಂಜಯನ ಚಿತ್ರಣದಲ್ಲಿ ಭಯ-ಅಭಯಗಳ ತುಯ್ದಾಟವನ್ನು ರಮಣೀಯವಾಗಿ ಕಾಣಿಸಿದ್ದಾನೆ ಶಿಲ್ಪಿ. ಶಿವನ ಮುಖದಲ್ಲಿ ಕಾಣುವ ಕೋಪ, ಅವನ ಆಭರಣವಾದ ಹಾವೂ ಸಿಟ್ಟಿಗೆದ್ದು ಬುಸುಗುಟ್ಟುತ್ತಿರುವ ಭಂಗಿ ಇವು ಮನೋಜ್ಞವಾಗಿವೆ.

ವರ್ಣಚಿತ್ರ ವೈಭವ

ಹೀಗೆಯೇ ಕರಿಕಲ್ಲು ವೀರಭದ್ರ, ದುರ್ಗೆ, ಮೋಹಿನಿ, ಸ್ಥಾನಕ ಗಣಪತಿ, ಸರಸ್ವತಿ ಮೊದಲಾದ ವಿಗ್ರಹಗಳಲ್ಲಿಯೂ ಭಾವಪಾರವಶ್ಯವನ್ನು ಕಾಣಬಹುದು. ಸ್ತ್ರೀಜಾತಿಗೆ ವಿಶಿಷ್ಟವಾದ ಸೌಂದರ್ಯಕ್ಕೆ ಪ್ರತೀಕಗಳಾಗಿಯೂ, ಪುರುಷನಿಗೆ ಸಹಜವಾದ ಗಾಂಭೀರ್ಯ, ಧೀರೋದಾತ್ತ ಗುಣಗಳಿಗೆ ಪ್ರತೀಕಗಳಾಗಿಯೂ ಹಲವಾರು ವಿಗ್ರಹಗಳು ಲೇಪಾಕ್ಷಿ ಗುಡಿಯಲ್ಲಿವೆ. ಇವುಗಳಲ್ಲಿ ಪದ್ಮಿನೀ ಸ್ತ್ರೀ, ಪಾಂಚಾಲ ಪುರುಷ ಇವರ ಚಿತ್ರಣ ಉಲ್ಲೇಖಾರ್ಹವಾದುವು.

ಲೇಪಾಕ್ಷಿಯಲ್ಲಿ ಶಿಲ್ಪ ಮಾತ್ರವಲ್ಲ, ವರ್ಣಚಿತ್ರಣವೂ ವೈಭವದಿಂದ ಕೂಡಿದುದೇ. ಗುಡಿಯ ರಂಗಮಂಟಪದ ಗೋಡೆಗಳ ಮೇಲೂ ಭುವನಾಸಿಯಲ್ಲೂ ಬಣ್ಣ ಬಣ್ಣಗಳಿಂದ ಚಿತ್ರಗಳನ್ನು ಬರೆದಿದ್ದಾರೆ. ಬಿಳಿ, ಕಪ್ಪು, ಹಳದಿ, ಕೆಂಪು, ಈ ಬಣ್ಣಗಳನ್ನು ವಿಶೇಷವಾಗಿ ಬಳಸಿದ್ದಾರೆ. ಚಿತ್ರಗಳು ಸಾವಿರಾರು ಇವೆ. ಆದರೆ ಚಾವಣಿಯಿಂದ ಮಳೆ ನೀರು ಒಳನುಗ್ಗಿ ಸಾವಿರದಷ್ಟು ಚಿತ್ರಗಳು ಹಾಳಾಗಿಹೋಗಿವೆ. ಸುಮಾರು ಎರಡುನೂರು ಚಿತ್ರಗಳಷ್ಟು ಸುಮಾರಾಗಿ ಉಳಿದುಬಂದಿವೆ.

ಈ ಚಿತ್ರಗಳು ಸಾಮಾನ್ಯವಾಗಿ ಶಿವಪುರಾಣದಿಂದ ಎತ್ತಿಕೊಂಡ ಪ್ರಸಂಗಗಳನ್ನು ಅಧಿಕರಿಸಿದುವು. ಶಿವನ ಸುಪ್ರಸಿದ್ಧವಾದ ಲೀಲಾವತಾರಗಳನ್ನೂ ಚಿತ್ರಿಸಿದ್ದಾರೆ. ಮಹಾಭಾರತದ ಕೆಲವು ಕಥೆಗಳೂ ಚಿತ್ರಿತವಾಗಿವೆ. ಅರ್ಜುನನ್ನು ಮತ್ಸ್ಯಯಂತ್ರವನ್ನು ಭೇದಿಸುತ್ತಿರುವ ದೃಶ್ಯ ತುಂಬ ಸೊಗಸಾದ ವರ್ಣಚಿತ್ರ. ಅರ್ಜುನ ಬಿಲ್ಲಿನಲ್ಲಿ ಬಾಣವನ್ನು ಹೂಡುತ್ತಿರುವುದು, ಕೃಷ್ಣ ಅಭಿನಯದಿಂದ ಮತ್ಸ್ಯವನ್ನು ತೋರಿಸುತ್ತಿರುವುದು ಇವು ಹೃದ್ಯವಾಗಿವೆ. ಹಾಗೆಯೇ ಕಿರಾತಾರ್ಜುನೀಯ ಪ್ರಸಂಗವನ್ನೂ ಸ್ವಾರಸ್ಯವಾಗಿ ಚಿತ್ರಿಸಿದ್ದಾರೆ. ದಕ್ಷಯಜ್ಞವನ್ನು ಶಿವನು ಧ್ವಂಸಮಾಡಿದುದು ರೇಖೆಗಳಲ್ಲಿ ವರ್ಣಗಳಲ್ಲಿ ಮೂಡಿ ಬಂದಿದೆ. ಇಡೀ ಕಥೆ ಮಾರ್ಮಿಕವಾಗಿ ರಸವತ್ತಾಗಿ ಚಿತ್ರಿತವಾಗಿದೆ.

ಸಾಂಪ್ರದಾಯಿಕ

ಶಿಲ್ಪದಂತೆ ವರ್ಣಚಿತ್ರಣವೂ ಸಾಂಪ್ರದಾಯಿಕವಾದುದೇ. ಇಲ್ಲಿನ ಸ್ತ್ರೀ-

ಪುರುಷರ ಉಡುಗೆ-ತೊಡುಗೆ, ಆಭರಣ-ಅಲಂಕಾರ, ವೇಷ-ವಿನ್ಯಾಸ ಇವೆಲ್ಲವೂ ಒಂದೇ ಪದ್ಧತಿಗೆ ಸೇರಿದುವು. ವಿಜಯನಗರದ ಸಂಸ್ಕೃತಿಗೆ ಸೇರಿದುವೇ ಎನ್ನುವುದೇನೋ ನಿರ್ವಿವಾದವಾದುದು. ಹೆಂಗಸರನ್ನು ಎಲ್ಲಿಯೂ ಬೆತ್ತಲೆಯಾಗಿ ಚಿತ್ರಿಸಿಲ್ಲದಿರುವುದು ಈ ಶೈಲಿಯ ವೈಶಿಷ್ಟ್ಯ. ಪ್ರಸಂಗಗಳನ್ನು ಚಿತ್ರಿಸುವಾಗ ಕ್ರಿಯಾತ್ಮಕವಾದ ವಾತಾವರಣವನ್ನು ಒದಗಿಸುವ ಜಾಣ್ಮೆ ಈ ಕಲಾವಿದರಿಗಿದ್ದಿತು. ಯಾವ ಚಿತ್ರವೂ ಜಡವಾಗಿ ತೋರುವುದಿಲ್ಲ; ವ್ಯಕ್ತಿಗಳೆಲ್ಲ ಜೀವಂತರಾಗಿ ಕಾಣುತ್ತಾರೆ.

ಲೇಪಾಕ್ಷಿಯ ಶಿಲ್ಪಕೃತಿಗಳಲ್ಲಿ ಅತ್ಯಂತ ಪ್ರಸಿದ್ಧವಾದುದು ಊರ ಹೊರಗೆ ಒಂದೇ ಕಲ್ಲಿನಲ್ಲಿ ಕಡೆದಿರುವ ಬಸವಣ್ಣ. ಇಪ್ಪತ್ತು ಅಡಿ ಎತ್ತರ, ಮೂವತ್ತು ಅಡಿ ಉದ್ದ ಇರುವ ಈ ಬಸವಣ್ಣ ಕುಳಿತಿರುವ ರೀತಿ, ಮೈಮೇಲೆ ಮೂಡಿಸಿರುವ ಗೆಜ್ಜೆಸರಗಳ ಚೆಲುವು ನೋಡಿ ಆನಂದಿಸಬೇಕಾದ ವಿವರಗಳು ಇದನ್ನು ವಿಮರ್ಶಕರೊಬ್ಬರು 'ಶೃಂಗಾರ ಗಂಭೀರ ಮೂರ್ತಿ' ಎಂದು ಬಣ್ಣಿಸಿದ್ದಾರೆ. ಆದರೆ ಬಸವಣ್ಣನ ಸುತ್ತಲೂ ಅಡ್ಡಾದಿಡ್ಡಿಯಾಗಿ ಕಟ್ಟಿರುವ ಮೋಟುಗೋಡೆ ಮೂರ್ತಿಯ ಸೌಂದರ್ಯಾನುಭವಕ್ಕೆ ಅಡ್ಡಿ ತರುತ್ತದೆ.

ಕನ್ನಡ ಕಲಾಶೈಲಿ

ವೀರಭದ್ರಾಲಯದ ಆವರಣದಲ್ಲಿರುವ ನಾಗೇಂದ್ರ ವಿಗ್ರಹವೂ ಏಕಾಂಡ ಶಿಲೆಯಿಂದ ಕಡೆದ ಅದ್ಭುತ ಶಿಲ್ಪ. ಏಳು ಹೆಡೆಗಳ ಹಾವು ಲಿಂಗವನ್ನು ಬಳಸಿ ಛತ್ರದಂತೆ ಹೆಡೆಯೆತ್ತಿ ನಿಂತಿರುವ ಈ ಮೂರ್ತಿಯಲ್ಲಿ ಮನುಷ್ಯ ಚಿತ್ರಣವಿಲ್ಲದಿದ್ದರೂ ಅದರ ಗಾಂಭೀರ್ಯ, ಔನ್ನತ್ಯ ಸ್ಪಷ್ಟವಾಗಿವೆ.

ಅಂತೂ ಲೇಪಾಕ್ಷಿಯು ಕಲಾಭಿಜ್ಞರಿಗೆ ನೆಮ್ಮದಿಯನ್ನು ತರುವ ಸ್ಥಳ. ಪಾಪನಾಶೇಶ್ವರ, ವೀರಭದ್ರ, ರಘುನಾಥ ಈ ಮೂರು ದೇವತೆಗಳ ಸಾನ್ನಿಧ್ಯದಲ್ಲಿ ಶಿಲ್ಪಿಗಳು, ಚಿತ್ರಗಾರರು, ವಾಸ್ತುತಜ್ಞರು ರೂಪಿಸಿರುವ ದೇಗುಲ ಭಗ್ನವಾಗಿದ್ದರೂ, ಅಪೂರ್ಣವಾಗಿದ್ದರೂ ಮನೋಹರವಾಗಿದೆ; ಕನ್ನಡ ಕಲಾಶೈಲಿಯ ಉಜ್ವಲ ನಿದರ್ಶನವಾಗಿ ಮೆರೆಯುತ್ತಿದೆ.

ಲೇಪಾಕ್ಷಿಯ ದೇವಾಲಯ ಅಷ್ಟು ದೊಡ್ಡದಲ್ಲ. ರಂಗಮಂಟಪದ ಕಂಬಗಳು, ಭುವನಾಸಿ, ಬೋದಿಗೆಯ ಕಲ್ಲುತೊಲೆ ಇವುಗಳ ಮೇಲೆ ಕಡೆದಿರುವ ಶಿಲ್ಪಕೃತಿಗಳೂ, ಮೇಲ್ಭಾಗದಲ್ಲಿ ನಡುವಣ ಗೋಡೆಗಳ ಮೇಲೆ ಬಿಡಿಸಿರುವ ವರ್ಣ ಚಿತ್ರಗಳೂ ಉತ್ತಮ ಕಲೆಗಾರಿಕೆಯ ನಿದರ್ಶನಗಳು, ಪಕ್ಕದ ಕಲ್ಯಾಣ ಮಂಟಪ ಅಪೂರ್ಣವಾಗಿಯೇ ಉಳಿದಿದೆ. ಹಜಾರದ ಸುತ್ತ ಕಂಬಗಳನ್ನು ನಿಲ್ಲಿಸಿಯಾಗಿದೆ; ಆವರಣದ ಹೊದಿಕೆ ಸಿದ್ಧವಾಗಲಿಲ್ಲ. ಕಂಬಗಳ ಮೇಲೆ ಕಲ್ಲಿನ ತೊಲೆಗಳನ್ನು ತೂಗಿಸಿ ಇಟ್ಟಿದ್ದಾರೆ. ಕಂಬಗಳನ್ನು ಕಡೆದು ಶಿಲ್ಪ ವಿವರ ಗಳನ್ನೂ ಬಿಡಿಸಿದ್ದಾರೆ. ಏನು ಕಾರಣದಿಂದಲೋ ಮಂಟಪ ಮುಗಿಯಲಿಲ್ಲ. ನಿಲ್ಲಿಸಿದ ಹಲವಾರು ಮೂರ್ತಿಗಳು ಭಗ್ನವಾಗಿವೆ, ಮಳೆಗಾಳಿಗಳ ಹೊಡೆತಕ್ಕೆ ಸಿಕ್ಕಿ ಸೊರಗಿದ ಮೂರ್ತಿಗಳು ಹಲವಾರು. ಬ್ರಹ್ಮ ಮುಂತಾದ ದೇವತೆಗಳ ಸಾಂಪ್ರದಾಯಿಕ ಚಿತ್ರಣ, ಅಷ್ಟ ದಿಕ್ಪಾಲಕರ, ಋಷಿಗಳ, ರಾಜರ ಚಿತ್ರಣ ಇವು ನೈಜವಾಗಿ ಪುರುಷ ಪ್ರಮಾಣದಲ್ಲೇ ಮೂಡಿಬಂದಿವೆ. ಋಷಿಗಳಿಗೆ ಸಹಜ ಸಿದ್ಧವಾದ ಕಾಂತಿ, ರಾಜರ ರಾಜಸಿಕ ಸ್ವಭಾವದ ಕಳೆ ಇವುಗಳನ್ನು ಶಿಲ್ಪಿ ಚಾತುರ್ಯದಿಂದ ಅಭಿವ್ಯಕ್ತಿಗೊಳಿಸಿದ್ದಾನೆ. ಗಿರಿಜಾ ಕಲ್ಯಾಣವನ್ನು ನಿರೂಪಿಸುವ ಶಿಲ್ಪ ಅದ್ಭುತವಾಗಿದೆ.

ರಂಗಮಂಟಪ

ರಂಗಮಂಟಪ ವಿಸ್ತಾರವಾದ ಆವರಣ. ಇಲ್ಲಿ ಅರವತ್ತುನಾಲ್ಕು ಕಂಬ ಗಳಿವೆ. ಒಂದೊಂದೂ ಶಿಲ್ಪಿಯ ಪ್ರತಿಭೆಯಿಂದ ರಮಣೀಯವಾಗಿದೆ. ಈ ರಂಗಮಂಟಪವನ್ನು ನಾಟ್ಯಸಭಾ ಮಂಟಪವನ್ನಾಗಿ ಕಲ್ಪಿಸಿದ್ದಾರೆ. ನಟರಾಜ ನಾದ ಶಿವನು ತನ್ನ ತಾಂಡವವನ್ನು ಮಾಡುತ್ತಿದ್ದಾಗ ಉಳಿದ ದೇವತೆಗಳು ತಂತಮ್ಮ ಸೇವೆಯನ್ನು ಸಲ್ಲಿಸಿದರು. ಲೋಕ ಪಿತಾಮಹನಾದ ಬ್ರಹ್ಮನು ಮೃದಂಗವನ್ನೂ, ದೇವಗಾಯಕನಾದ ತುಂಬುರನು ಏಕದಂಡಿಯನ್ನೂ, ಪ್ರಮಥಗಣಗಳಿಗೆ ಪ್ರಧಾನಿಯಾದ ನಂದಿಕೇಶ್ವರನು ಢಕ್ಕೆಯನ್ನೂ ನುಡಿಸಿದ ರಂತೆ; ಲೋಕದ ಸ್ಥಿತಿಗೆ ಕಾರಣನಾದ ವಿಷ್ಣುವು ತಾಳವನ್ನು ಹಿಡಿದನಂತೆ. ಹೀಗೆ ದಿವ್ಯವಾದ ವಾದ್ಯಗೋಷ್ಠಿಯನ್ನು ಶಿಲ್ಪಿ ಇಲ್ಲಿ ಹೃದ್ಯವಾಗಿ ಚಿತ್ರಿಸಿ

ದ್ದಾನೆ. ಒಂದೊಂದು ಕಂಬದ ಮೇಲೆ ಒಂದೊಂದು ವಾದ್ಯ, ಒಬ್ಬೊಬ್ಬ ವಾದಕನೂ ವಾದ್ಯಕ್ಕೆ ವಿಶಿಷ್ಟವಾದ ಭಂಗಿಯಲ್ಲಿ ನಿಂತಿದ್ದಾನೆ ಸುರ ಸುಂದರಿಯರ ನೃತ್ಯಕೇಳಿಯ ಪ್ರಕಾರಗಳನ್ನೂ ಶಿಲ್ಪಿ ಇಲ್ಲಿ ನಿರ್ದೇಶಿಸಿದ್ದಾನೆ. ಇಡೀ ಸಂದರ್ಭದ ರಸಪೋಷಣೆ ಈ ಶಿಲ್ಪಗಳಿಂದ ನಡೆದಿದೆ.

ಈ ನೃತ್ಯಗೋಷ್ಠಿಯಲ್ಲದೆ ಇಲ್ಲಿನ ಸ್ತಂಭ ಶಿಲ್ಪಗಳಲ್ಲಿ ಸುಖಾಸೀನ ದಕ್ಷಿಣಾಮೂರ್ತಿ, ಗಜಾಸುರಸಂಹಾರಮೂರ್ತಿ ಮಾರ್ಕಂಡೇಯವರದ–ಮೃತ್ಯುಂಜಯ ಮೂರ್ತಿ, ಪಾಪಪುರುಷಸಂಹಾರ–ತಾಂಡವ ಮೂರ್ತಿ, ಮುಂತಾದ ಶಿವನ ಲೀಲಾ ಮೂರ್ತಿಗಳನ್ನು ಶಿಲ್ಪಿ ಕಡೆದಿದ್ದಾನೆ. ಕಂಬವೊಂದರ ಮುಖವನ್ನು ಪೂರ್ಣವಾಗಿ ಮುಚ್ಚಿ ಕಾಲುಗಳನ್ನು ಸುಖವಿನ್ಯಾಸದಲ್ಲಿಟ್ಟು ಅಜ್ಞಾನ ಪುರುಷನನ್ನು ಎಡಗಾಲಿನಿಂದ ಮೆಟ್ಟಿಪ್ರಶಾಂತ ಮುದ್ರೆಯ ವ್ಯಾಖ್ಯಾನ ಭಂಗಿಯಲ್ಲಿ ಕುಳಿತ ದಕ್ಷಿಣಾ ಮೂರ್ತಿಯನ್ನು ನೋಡಿದರೆ ನಿಃಶ್ರೇಯಸದ ಪ್ರತೀಕದಂತಿದೆ. ಕಂಬವೊಂದನ್ನು ಪಾದ ವರ್ತುಲಾಕಾರವಾಗಿ ಕಡೆದು ಶಿವನು ಗಜಾಸುರನನ್ನು ದಮನ ಮಾಡುತ್ತಿರುವ ದೃಶ್ಯವನ್ನು ಶಿಲ್ಪಿ ಕಡೆದಿದ್ದಾನೆ. ಅದ್ಭುತವಾದ ಶಿಲ್ಪ ಇದು. ಗಜಾಸುರನನ್ನು ಸೀಳಿ ಗಜಾಂಬರವನ್ನು ಎರಡು ಕೈಗಳಿಂದ ಮೈಸುತ್ತ ಹರಡಿಕೊಂಡು ಅದ್ಭುತ ತಾಂಡವದಲ್ಲಿ ಭಾವಪರವಶನಾಗಿ ನಿಂತ ನಟರಾಜನದು ತುಂಬ ಮನೋಜ್ಞವಾದ ಚಿತ್ರಣ. ಹೀಗೆ ಭಗವಂತನ ಲೀಲಾವತಾರಗಳ ತಾತ್ಪರ್ಯವನ್ನು ಮನದಟ್ಟುಮಾಡಿಕೊಂಡು ಒಂದೊಂದು ಅವತಾರದ ಸಂದರ್ಭ, ಭಾವ, ರಸಗಳನ್ನು ಶಿಲ್ಪದಲ್ಲಿ ಮೂಡಿಸಿರುವುದು ಈ ರಂಗಮಂಟಪದ ವಿಶೇಷ. ಒಂದು ಕಂಬದಲ್ಲಿ ಕಾಣಿಸಿರುವ ಕಂಕಾಳ ಮೂರ್ತಿಯನ್ನು ನೋಡಿ. ಭಿಕ್ಷಾಟನದಲ್ಲಿರುವ ಶಿವ ಕಪಾಲದ ಗೋಪಾಳೆಬುಟ್ಟಿಯನ್ನು ಹಿಡಿದು ಹಿಂದೆ ಬಂದ ಹರಿಣವನ್ನು ನೇವರಿಸುತ್ತ ನಡೆದು ಹೋಗುತ್ತಿರುವ ಭಂಗಿ ಎಷ್ಟು ಸ್ವಾರಸ್ಯವಾಗಿದೆ. ಮುಖಮುದ್ರೆ ಶಾಂತವಾಗಿದೆ. ಅದರಲ್ಲಿ ವೀರ ವೈರಾಗ್ಯದ ಆವೇಶವಿದೆ. ಹಾವುಗೆಗಳನ್ನು ಹೊತ್ತ ಪಾದಗಳು ಧೀರ ಗಂಭೀರ ಗತಿಯಲ್ಲಿವೆ. ಕಂಬದ ಬದಿಯ ಮುಖದಲ್ಲಿ ಭಿಕ್ಷೆಗೆ ಹೊರಟ ಗಂಡನ ಕಡೆ ಮುಖಮಾಡಿ ಲೋಕಮಾತೆಯಾದ ಪಾರ್ವತಿ ನಿಂತಿದ್ದಾಳೆ. ಅವಳ ಆಭರಣ ಸರಳವಾಗಿದೆ. ಭಂಗಿ ವಿನಮ್ರವಾಗಿದೆ. ವ್ಯವ

ಹಾರ ಕುಶಲನಾದ, ಇಂಗಿತಜ್ಞನಾದ ಶಿಲ್ಪಿಯ ಕೈ ಕೆಲಸ ಇದು. ಹೀಗೆಯೇ ಪಾಂಚಾಲ ಪುರುಷನ ವಾಮಕುಂಚಿತ ಭಂಗಿ. ಅದಕ್ಕೆ ಪೂರಕವಾಗಿ ಪದ್ಮಿನೀ ಸ್ತ್ರೀಯ ಶೃಂಗಾರ ಭಂಗಿ ಇವೂ ನೋಡಬೇಕಾದುವೇ.

ಭಿತ್ತಿ ಚಿತ್ರಗಳು

ರಂಗಮಂಟಪದಲ್ಲಿ ಸ್ತಂಭಗಳು ಉಪ್ಪರಿಗೆಯನ್ನು ಮುಟ್ಟುವ ಅಂತ ರಾಳಗಳಲ್ಲೂ, ಉಪ್ಪರಿಗೆಯ ತಳಭಾಗದಲ್ಲೂ, ಬಣ್ಣ ಬಣ್ಣದ ಚಿತ್ರಗಳನ್ನು ಬರೆದಿರುವುದು ಸ್ವಾರಸ್ಯವಾಗಿದೆ. ಈ ಚಿತ್ರ ಸಂಪತ್ತು ಲೇಪಾಕ್ಷಿಗೆ ವಿಶಿಷ್ಟ ವಾದುದು. ಕಪ್ಪು, ಕೆಂಪು, ಹಳದಿ, ಬಿಳಿ, ಬಣ್ಣಗಳನ್ನು ತುಂಬಿಸಿ ಕುಂಚ ವಿನ್ಯಾಸದಿಂದ ನವುರಾಗಿರೇಖಾಕೃತಿಗಳನ್ನುಬಿಡಿಸಿರುವ ಉಜ್ವಲವಾದ ಭಿತ್ತಿಚಿತ್ರ ಗಳು ನೂರಾರು ಇಲ್ಲಿವೆ. ಇವುಗಳಲ್ಲಿ ಹಲವಾರು ಬಿಸಿಲಿಗೆ, ಮಳೆಗೆ, ಗಾಳಿಗೆ, ತಡೆಯದೆ ಅಳಿಸಿ ಹೋಗಿವೆ. ಹಲವು ಅರ್ಧಮರ್ಧ ಕಲಸಿ ಊನವಾಗಿ ಹೋಗಿವೆ. ಸುಮಾರು ಇನ್ನೂರು ಚಿತ್ರಗಳು ಉಳಿದಿವೆ. ಈ ಚಿತ್ರಗಳೆಲ್ಲ ಪೌರಾಣಿಕ ವೃತ್ತಾಂತಗಳನ್ನು ಅಧಿಕರಿಸಿದುವು; ಬಹುವಾಗಿ ಶೈವ ಪುರಾಣವೇ. ಶಿರಿಯಾಳನ ಕಥೆ, ಕಿರಾತಾರ್ಜುನೀಯದ ಕಥೆ, ದಕ್ಷಾಧ್ವರ ಹರನ ಕಥೆ, ವೀರಭದ್ರಾವತಾರದ ಕಥೆ, ಗಿರಿಜಾ ಕಲ್ಯಾಣದ ಕಥೆ, ನಂದೀಶ್ವರ ಪ್ರಾದು ರ್ಭಾವದ ಕಥೆ ಇವೆಲ್ಲ ಇಲ್ಲಿ ಚಿತ್ರಿತವಾಗಿವೆ. ಮತ್ಸ್ಯ ಯಂತ್ರವನ್ನು ಅರ್ಜುನ ಭೇದಿಸಿದ ವೃತ್ತಾಂತ ಮಹಾಭಾರತದಲ್ಲಿ ಬರುವುದಷ್ಟೆ. ಈ ವೃತ್ತಾಂತವನ್ನು ಇಲ್ಲಿ ತುಂಬ ಸ್ವಾರಸ್ಯವಾಗಿ ಚಿತ್ರಿಸಿದ್ದಾರೆ. ಬಾಣಸಂಧಾನ ಮಾಡುವಾಗ ಅವಶ್ಯವಾದ ಏಕಾಗ್ರದೃಷ್ಟಿ, ಛದ್ಮವೇಷಧಾರಿಯಾದವನ ಧನುರ್ವಿದ್ಯಾ ಕೌಶಲ, ಪಾಂಡವಪ್ರಾಣನಾದ ಕೃಷ್ಣನ ಆಸಕ್ತಿ ಇವನ್ನು ಶಿಲ್ಪಿ ಮಾರ್ಮಿಕವಾಗಿ ಮೂಡಿಸಿ ಕೃತಾರ್ಥನಾಗಿದ್ದಾನೆ. ಇವಲ್ಲದೆ ಶಿವ-ಪಾರ್ವತಿಯರು ಚದುರಂಗವಾಡುತ್ತಿರುವ ದೃಶ್ಯ, ಯೋಗಾನರಸಿಂಹ ಮೂರ್ತಿ ಮುಂತಾದುವೂ ಸುಂದರ ಚಿತ್ರಗಳು.

ಕಥನವನ್ನು ನಿರೂಪಿಸಲು ಅಳವಡಿಸಿಕೊಂಡ ಈ ಭಿತ್ತಿಚಿತ್ರಗಳ ಸಂಗೋಪನ ಮಾಡಬೇಕು. ಇದರಲ್ಲಿ ಕಾಣಬರುವ ಚಿತ್ರಣಶೈಲಿ ಉತ್ತಮ

ರೀತಿಯದು. ವಸ್ತು ವಿನ್ಯಾಸದಲ್ಲಿ ಅಜಂತಾ ಗುಹಾಂತರ್ಗತ ಭಿತ್ತಿ ಚಿತ್ರಗಳ ಸ್ಥಿತಿಗಿಂತ ಮುಂದುವರೆದದ್ದು; ಶಿತ್ತನ್‌ವಾಸಲ್‌ನ ಚಿತ್ರಫಲಕಗಳನ್ನು ನೆನಪಿಗೆ ತರುತ್ತವೆ. ಮುಂದೆ ಒದಗಿದ ತಂಜಾವೂರು ಶೈಲಿಯಲ್ಲಿ ಅಲಂಕರಣದ ಹೊರೆಯಿದ್ದರೂ ಹೊತ್ತ ವ್ಯಕ್ತಿಗಳು ನಿಶ್ಚೇಷ್ಟರಂತೆ ತೋರುತ್ತಾರೆ. ಜಡ ಧರ್ಮ ಚಿತ್ರಣದಲ್ಲಿ ಎದ್ದು ಕಾಣುತ್ತದೆ. ಚಿತ್ರಾರ್ಪಿತರಾದ ವ್ಯಕ್ತಿಗಳು ಮೂಕರಾಗಿಯೇ ಉಳಿದರೆ ಕಲೆಯಲ್ಲಿ.ಸ್ವಾರಸ್ಯವಿಲ್ಲ. ಲೇಪಾಕ್ಷಿಯ ವ್ಯಕ್ತಿಗಳು ಈ ದೃಷ್ಟಿಯಿಂದ ಜೀವಂತರಾಗಿದ್ದಾರೆ. ಮುಖಮುದ್ರೆಯಲ್ಲಿ, ಅಂಗವಿನ್ಯಾಸ ದಲ್ಲಿ, ಸಂದರ್ಭದ ರಸದಲ್ಲಿ ಚೈತನ್ಯವಿದೆ. ಸಮಸಾಮಯಿಕ ಸ್ತ್ರೀ ಪುರುಷರ ವೇಷಭೂಷಗಳು, ಕೇಶಾಲಂಕರಣ ಪದ್ಧತಿ ಮುಂತಾದ ವಿವರಗಳು ಈ ಚಿತ್ರ ದಿಂದ ಸ್ಪಷ್ಟವಾಗುತ್ತವೆ. ಕಲೆಯ ದೃಷ್ಟಿಯಿಂದಲೂ ಇತಿಹಾಸದ ದೃಷ್ಟಿ ಯಿಂದಲೂ ಪ್ರಾಕ್ತನ ಸ್ಥಿತಿಗಳ ಅನ್ವೇಷಣೆಯ ದೃಷ್ಟಿಯಿಂದಲೂ ಅಮೌಲ್ಯ ವಾದ ಚಿತ್ರಸಂಗ್ರಹ ಇಲ್ಲಿದೆ. ನಮ್ಮವರು ಹೆಚ್ಚಿನ ಶ್ರದ್ಧೆ ವಹಿಸಿ ಇವುಗಳನ್ನು ಕಾಲ ಧರ್ಮದ ಶೈಥಿಲ್ಯದಿಂದ ಪಾರುಮಾಡಬೇಕು. ಉಳಿದಿರುವ ಚಿತ್ರ ಗಳಿಗೆಲ್ಲ ಪ್ರತಿಕೃತಿಗಳನ್ನು ಮಾಡಿಸಬೇಕು.

ನಾಗಲಿಂಗ

ದೇವಾಲಯದ ಪ್ರಾಕಾರದಲ್ಲಿ ಬೃಹದಾಕಾರದ ನಾಗಲಿಂಗವೊಂದನ್ನು ಅಖಂಡವಾದ ಬಂಡೆಯೊಂದರಲ್ಲಿ ಫಲಕದಂತೆ ಕಡೆದಿದ್ದಾರೆ. ಪುರುಷ ಪ್ರಮಾ ಣದ ಪೀಠದ ಮೇಲೆ ಏಳು ಹೆಡೆಗಳ ಸರ್ಪ, ನಾಲ್ಕಡಿ ಎತ್ತರದ ಲಿಂಗ, ಪಾಣಿ ವಟ್ಟದ ಅಡಿಯಲ್ಲಿ ಮೂರು ಸುತ್ತು ಬಂದಿರುವ ಹಾವಿನ ಮೈ. ಐದಡಿ ವೇದಿಕೆಯ ಮೇಲೆ ಸುಮಾರು ಹದಿನೈದು ಅಡಿ ಎತ್ತರವಿರುವ ಈ ಸರಳ ಶಿಲ್ಪ ಧೀರ ಗಂಭೀರವಾಗಿದೆ. ಹಿಂದೆ ಹಾಗೆಯೇ ಇರುವ ಬಂಡೆ ಚೌಕಟ್ಟಿನಂತೆ ಕಾಣುತ್ತದೆ. ಪ್ರಾಕಾರದಲ್ಲೇ ಇರುವ ಇನ್ನೊಂದು ಏಕಶಿಲಾಮೂರ್ತಿ ಸುಖಾ ಸೀನ-ಗಣೇಶನದು. ಏಕಾಂಡ ಬಂಡೆಯ ಮುಖದಲ್ಲೇ ಕಡೆದಿರುವ ಈ ಸುಂದರ ವಿಗ್ರಹವೂ ಹದಿನಾಲ್ಕು ಹದಿನೈದು ಅಡಿಗಳಷ್ಟು ಎತ್ತರವಿದೆ. ಊರಹೊರಗೆ ಮತ್ತೊಂದು ಒಂಟಿ ಬಂಡೆಯಲ್ಲಿ ಬಸವನನ್ನು ಕಡೆದು ಕೂರಿಸಿದ್ದಾರೆ. ಇದು

ತೆಲುಗು ದೇಶದಲ್ಲೆಲ್ಲ ಲೇಪಾಕ್ಷಿಬಸವಯ್ಯ ಎಂದು ಪ್ರಸಿದ್ಧವಾಗಿದೆ. ಹದಿನೈದು ಅಡಿಗಳಷ್ಟು ಎತ್ತರ, ಇಪ್ಪತ್ತೇಳು ಅಡಿಗಳಷ್ಟು ಮೈಯುದ್ದದ ಈ ಬಸವಣ್ಣ ಕುಳಿತಿರುವ ವೈಯಾರ ಮನೋಜ್ಞವಾಗಿದೆ. ಚಾಮುಂಡಿ ಬೆಟ್ಟದ ಬಸವನಷ್ಟು ಅಥವಾ ನಂಜನಗೂಡು ಶ್ರೀಕಂಠೇಶ್ವರ ದೇವಾಲಯದಲ್ಲಿರುವ ಬಸವನಷ್ಟು ಸುಂದರ ಕಲಾಕೃತಿಯಲ್ಲವಾದರೂ ನಿರಂಡಪಾದಪವಾದ ಆ ಪ್ರದೇಶದಲ್ಲಿರುವ ಬಸವ ಅದ್ಭುತವಾಗಿ ತೋರುತ್ತದೆ.

ವಿಜಯನಗರ ಕಾಲದ ಕಲೆಗಾರಿಕೆಯನ್ನು ಸಂಪೂರ್ಣವಾಗಿ ಮೈದುಂಬಿಸಿ ತೋರಿಸುವ ಲೇಪಾಕ್ಷಿ ನಾಡಿನ ಭವ್ಯ ಸ್ಮಾರಕಗಳಲ್ಲೊಂದು. ಅದರ ಪ್ರಖ್ಯಾತಿ ಅಷ್ಟಾಗಿ ವಿಸ್ತೃತವಾಗಿಲ್ಲದಿರುವುದು ಸೋಜಿಗ.

ಹಾಳು ಬಿದ್ದಿರುವ ಹಂಪಿ

ಈಗ ಹಾಳುಬಿದ್ದಿರುವ ಹಂಪಿಯನ್ನು ನೋಡಿಬಂದವರಿಗೆಲ್ಲ ಅದರ ವೈಭವ ಒಂದು ಕಾಲಕ್ಕೆ ಎಷ್ಟಿದ್ದಿತು ಎನ್ನುವ ಅರಿವೂ ಆಗುತ್ತದೆ. ಹಂಪಿಯ ಪ್ರಖ್ಯಾತಿ ರಾಮಾಯಣ ಕಾಲದಿಂದಲೂ ಇದೆ. ವಾಲಿ-ಸುಗ್ರೀವ ಇವರ ರಾಜ್ಯ ಋಷ್ಯಮೂಕ ಪರ್ವತ, ಮತಂಗ ಋಷಿಯ ಆಶ್ರಮ, ಪಂಪಾ ಸರೋವರ ಮೊದಲಾದುವೆಲ್ಲ ಇಲ್ಲಿಯೇ ಇರುವುದು. ಹಂಪಿ ಅಥವಾ ಹಂಪೆ ಎನ್ನುವುದು ಸಂಸ್ಕೃತದ 'ಪಂಪಾ' ಎನ್ನುವ ಮಾತಿನ ತದ್ಭವ. ಬ್ರಹ್ಮನ ಮಾನಸ ಕನ್ಯೆ ಪಂಪೆ ಎನ್ನುವವಳು ಇಲ್ಲಿಯೇ ಇದ್ದು ವಿರೂಪಾಕ್ಷನನ್ನು ಮದುವೆಯಾದಳಂತೆ. ಪಂಪಾಪತಿಯಾದ ವಿರೂಪಾಕ್ಷನ ಗುಡಿಯ ಸುತ್ತ ಬೆಳೆದ ಊರು ಇದು.

ವಿಜಯನಗರದ ಅರಸರ ಕಾಲದಲ್ಲಿ ಈ ಪ್ರದೇಶದ ವೈಭವ ಆರಂಭವಾಯಿತು. ಹೊಸಪೇಟೆಗೆ 20 ಮೈಲಿ ದೂರ ಇರುವ ಕಂಪಿಲಿ ಒಂದು ರಾಜ್ಯವಾಗಿದ್ದು, ಬಳಿಯೇ ಇದ್ದ ಆನೆಗೊಂದಿಯು ಇನ್ನೊಂದು ರಾಜ್ಯವಾಗಿದ್ದಿತು. ಕ್ರಿಸ್ತಾಬ್ದ ಎಂಟನೆಯ ಶತಮಾನದಿಂದಲೂ ಇಲ್ಲಿನ ಹಿಂದೂ ರಾಜ್ಯಗಳು ಪ್ರಸಿದ್ಧವಾಗಿದ್ದುವು; ಮುಸಲ್ಮಾನರು ಈ ರಾಜ್ಯಗಳನ್ನು ದಾಳಿ ಮಾಡಿ ಹಿಂದುಗಳನ್ನು ಹಿಂಸಿಸಲಾರಂಭಿಸಿದನಂತರ ಸಂಗಮ ಸೋದರರು ಹಂಪಿಯಲ್ಲಿ ಪ್ರಬಲವಾದ ಹಿಂದೂರಾಜ್ಯವೊಂದನ್ನು ಸ್ಥಾಪಿಸಿದರು. ಕ್ರಿಸ್ತಾಬ್ದ 1336ನೆಯ ಏಪ್ರಿಲ್ 18ರಂದು ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾಯಿತೆಂದು ಹೇಳುತ್ತಾರೆ.

ಈ ಸಾಮ್ರಾಜ್ಯವನ್ನು ಸಂಗಮವಂಶ (1336–1486), ಸಾಳುವ ವಂಶ (1486-1505), ತುಳುವವಂಶ (1505-1550) ಮತ್ತು ಅರವೀಡುವಂಶ (1550-1672) ಹೀಗೆ ನಾಲ್ಕು ವಂಶಗಳು ಆಳಿದುವು.

ಕೃಷ್ಣದೇವರಾಯನ ಆಳ್ವಿಕೆ (1509-1529) ಸುವರ್ಣಯುಗ; ಅವನ ಕಾಲದಲ್ಲಿ ವಿಜಯನಗರ ನಾಡಿನಲ್ಲೆಲ್ಲ ಪ್ರಸಿದ್ಧವಾಯಿತು. 1565ರ ಜನವರಿ ತಿಂಗಳಲ್ಲಿ ನಡೆದ ರಕ್ಕಸತಂಗಡಿ ಯುದ್ಧದಲ್ಲಿ ವಿಜಯನಗರದ ಅರಸನಾಗಿದ್ದ ಅಳಿಯ ರಾಮರಾಯನು ಮಡಿದು, ಮುಸಲ್ಮಾನರು ರಾಜಧಾನಿಯಾಗಿದ್ದ ಹಂಪಿಯನ್ನು ಹಾಳುಮಾಡಿದರು. ಅಲ್ಲಿಂದ ಮುಂದೆ ವಿಜಯನಗರದ ಅರಸರು ಪೆನುಗೊಂಡೆಯಲ್ಲಿ ರಾಜ್ಯವಾಳತೊಡಗಿದರು. ಹಂಪಿಯನ್ನು ದಾಳಿಕಾರರು ಆರು ತಿಂಗಳು ಲೂಟಿ ಮಾಡಿದರಂತೆ! ಅಂದಿನಿಂದಲೂ ಹಂಪಿ ಹಾಳುಬಿದ್ದಿದೆ.

ಈ ಕಾಲಕ್ಕೆ ಹಂಪಿಯನ್ನು ಹೊಸಕೋಟೆಯಿಂದ ಏಳು ಮೈಲಿ ದೂರದಲ್ಲಿದೆ ಎಂದು ನಿರ್ದೇಶಿಸಬೇಕು. ಹೊಸಪೇಟೆಗೆ ರೈಲು ಬರುತ್ತದೆ; ಅಲ್ಲಿ ಸಕ್ಕರೆ ಕಾರ್ಖಾನೆಗಳಿವೆ; ತುಂಗಭದ್ರಾ ಅಣೆಕಟ್ಟು ಹತ್ತಿರದಲ್ಲಿದೆ. ಹೀಗಾಗಿ ಹೊಸಪೇಟೆ ಸುಮಾರು ದೊಡ್ಡ ಊರು. ಹಂಪಿಯ ಅವಶೇಷಗಳನ್ನು ನೋಡಲು ಹೋಗುವವರು ಮೊದಲು ಹೊಸಪೇಟೆಗೇ ಬರಬೇಕು. ಅಲ್ಲಿಂದ ವಾಹನ ಸೌಕರ್ಯವಿದೆ.

ಹಂಪಿಯಲ್ಲಿ ಮುಖ್ಯವಾದುದು ಹಂಪಿಗುಡಿ; ಊರೂ, ಇತಿಹಾಸವೂ ಬೆಳೆದದ್ದು ಇದರಿಂದಲೇ. 1013ರಷ್ಟು ಹಿಂದೆಯೇ "ಪಂಪಾಪತಿಯಾದ ಮಹಾಕಾಲ"ನಿಗೆ ಭೂದಾನ ಮಾಡಿದ ಶಾಸನವಿದೆ. 1199 ರಲ್ಲಿ ನಾಗವಂಶದ ಕಲಿದೇವನ ಆಳ್ವಿಕೆಯಲ್ಲಿ ವಿರೂಪಾಕ್ಷನಿಗೂ ಹಂಪಾದೇವಿಗೂ ಭೂದಾನ ಮಾಡಿದ ಇನ್ನೊಂದು ಶಾಸನವಿದೆ. ಎಂದರೆ ವಿಜಯನಗರದ ಕಾಲಕ್ಕಿಂತಲೂ ನೂರಾರು ವರ್ಷ ಮೊದಲೆ ಈ ಗುಡಿ ಪ್ರಸಿದ್ಧವಾಗಿದ್ದಿತು. ವಿರೂಪಾಕ್ಷ ಗೃಹ. ಪಂಪಾತೀರ್ಥಗಳು ಹೆಸರಾಗಿದ್ದುವು.

ಪಂಪಾದೇವಿಯ ಗುಡಿಯೇ ಭುವನೇಶ್ವರೀ ಗುಡಿಯಾಗಿದ್ದಿರಬಹುದು. ಕನ್ನಡನಾಡಿಗೆ ಭುವನೇಶ್ವರೀ ಅಭಿಮಾನದೇವತೆಯಷ್ಟೆ. ಕಲ್ಯಾಣಿ ಚಾಳುಕ್ಯರ ಕಾಲದ ಈ ಗುಡಿಯೇ ತುಂಬ ಹಳೆಯದು; ಉಳಿದುದೆಲ್ಲ ಕಾಲಕ್ರಮದಲ್ಲಿ ಮೈದುಂಬಿ ಬಂದುವು.

ಹಂಪಿಗುಡಿ ಎಂದು ಪ್ರಸಿದ್ಧವಾಗಿರುವುದು ವಿರೂಪಾಕ್ಷ ದೇವಾಲಯ. ಮೊದಲಿಗೆ ಇದು 'ವಿರೂಪಾಕ್ಷ ಗೃಹ'ವಾಗಿದ್ದಿತಷ್ಟೆ: ಈಗ ಲಿಂಗವಿರುವ ಗರ್ಭ ಗುಡಿ, ಉಳಿದ ಕಟ್ಟಡವೆಲ್ಲ ವಿಜಯನಗರದ ರಾಜರ ಕಾಲದ್ದು. 165 ಅಡಿ ಎತ್ತರವಿರುವ ಮಹಾದ್ವಾರಗೋಪುರವನ್ನು ಬಿಷ್ಟಪ್ಪಯ್ಯ ಎಂಬಾತ ಕಟ್ಟಿಸಿದ್ದ. ಅದರ ಹಿಂದಿರುವ 'ರಾಯರ ಗೋಪುರ'ವನ್ನು ಕೃಷ್ಣದೇವರಾಯನು ಕ್ರಿ. ಶ. 1509ರಲ್ಲಿ ತನ್ನ ಪಟ್ಟಾಭಿಷೇಕ ಸಮಯದಲ್ಲಿ ಕಟ್ಟಿಸಿದನು. ಅದಕ್ಕೆ ಉತ್ತರ ದಿಕ್ಕಿನಲ್ಲಿರುವ 'ಕನಕಗಿರಿ ಗೋಪುರ' ಕನಕಗಿರಿಯ ರಾಜನು ಕಟ್ಟಿಸಿದ್ದು. 1513 ರಲ್ಲಿ ಪೋರ್ಚುಗೀಸ್ ರಾಯಭಾರಿಯಾಗಿ ಇಲ್ಲಿಗೆ ಬಂದಿದ್ದ ಪೇಯಿಸ್ ಈ ಗುಡಿಯನ್ನು ವಿಸ್ತಾರವಾಗಿ ವರ್ಣಿಸಿದ್ದಾನೆ. ಇಲ್ಲಿ ಸದಾಕಾಲವೂ ಮೂರು ಸಾವಿರ ನಂದಾದೀಪಗಳು ಉರಿಯುತ್ತಿದ್ದುವಂತೆ.

ಹಂಪಿ ಬಜಾರು

ಈ ಗುಡಿಯ ಮುಂದೆ ನಾಲ್ಕೈದು ಫರ್ಲಾಂಗು ಉದ್ದವಿರುವ ರಾಜ ಬೀದಿ ಇದೆ; ಇದನ್ನು 'ಹಂಪಿ ಬಜಾರು' ಎಂದು ಕರೆಯುತ್ತಾರೆ. ಪೇಯಿಸ್ ಬಂದ ಕಾಲದಲ್ಲಿ ಇಲ್ಲಿ ರಾಜನ ಅರಮನೆಯೂ ಧನಿಕರ ಪ್ರಾಸಾದಗಳೂ, ಯಾತ್ರಿಕರಿಗೆ ವಸತಿ ಮಂಟಪಗಳೂ ಇದ್ದುವು. ಈ ರಾಜ ಬೀದಿಯ ವೈಭವ ವನ್ನು ಅವನು ತುಂಬ ಬಣ್ಣಿಸಿದ್ದಾನೆ. ಗುಡಿಯ ದಕ್ಷಿಣ ಭಾಗಕ್ಕೆ ಗುಡ್ಡ-ದಿಣ್ಣೆ ಯಿದ್ದು ಅದನ್ನು 'ಹೇಮಕೂಟ' ಎಂದು ಕರೆಯುತ್ತಾರೆ. ಪುರಂದರದಾಸರ ಪಿಳ್ಳಾರಿ ಗೀತೆಯೊಂದರಲ್ಲಿ 'ಹೇಮಕೂಟ ಸಿಂಹಾಸನ'ದ ಮೇಲಿರುವ ವಿರೂ ಪಾಕ್ಷನ ಉಲ್ಲೇಖವಿದೆ; ಎಂದರೆ ಮೊದಲಿಗೆ ಈ ಪ್ರದೇಶವನ್ನೆಲ್ಲ ಹೇಮಕೂಟ ಎನ್ನುತ್ತಿದ್ದಿರಬಹುದು.

ಈಗ ಈ ಗುಡ್ಡದ ಮೇಲೆ ಜೈನಮಂದಿರಗಳಿವೆ; ಇಲ್ಲಿಯೇ ಇರುವ 16 ಅಡಿ ಎತ್ತರದ 'ಕಡಲೇಕಾಳು' ಗಣೇಶ, ಎಂಟಡಿ ಎತ್ತರದ 'ಸಾಸಿವೆಕಾಳು' ಗಣೇಶ ಇವು ನೋಡತಕ್ಕವು. ಈ ಹೇಮಕೂಟದ ಪೂರ್ವಕ್ಕೆ ರತ್ನಕೂಟ ಎನಿಸಿಕೊಳ್ಳುವ ಇನ್ನೊಂದು ಗುಡ್ಡವಿದೆ. ಬಜಾರಿಗೆ ತೀರ ಹಿಂದೆ ಮತಂಗ

ಪರ್ವತವಿದೆ; ವಿರೂಪಾಕ್ಷನ ಗುಡಿಗೆ ನೇರವಾಗಿ ಎದುರೇ ಇರುವ ಈ ಬೆಟ್ಟದ ಮೇಲೆ ಮತಂಗೇಶ್ವರ ದೇವಾಲಯವಿದೆ. ಬೆಟ್ಟವನ್ನೇರಿ ಹೋಗಲು ಮೆಟ್ಟಿಲುಗಳಿವೆ. ಈ ಬೆಟ್ಟದ ಮೇಲೆ ನಿಂತು ನೋಡಿದಾಗ ಕಾಣುವ ನಿಸರ್ಗಸೌಂದರ್ಯವನ್ನು ಲಾಂಗ್‌ಹರ್ಸ್ಟ್ ಎನ್ನುವ ಪಂಡಿತ ಸೊಗಸಾಗಿ ಬಣ್ಣಿಸಿದ್ದಾನೆ.

ಚಕ್ರತೀರ್ಥ

ಹಂಪಿಯಲ್ಲಿ ಐದು ಬೆಟ್ಟಗಳಿವೆಯೆಂದೂ ಅದರಲ್ಲಿ ಮತಂಗಗಿರಿ ಒಂದೆಂದೂ ಪುರಾಣ ಪ್ರಸಿದ್ಧಿಯಿದೆ; ಈ ಬೆಟ್ಟದಲ್ಲಿ ಹಲವಾರು ಗುಹೆಗಳಿವೆ. ಹಂಪಿ ಬಜಾರು ದಾಟಿ ಎಡಭಾಗಕ್ಕೆನದಿಯ ದಾರಿಯಲ್ಲಿ ತಿರುಗಿದರೆ ಚಕ್ರತೀರ್ಥ, ಕೋದಂಡರಾಮನ ಗುಡಿ, ಯಂತ್ರೋದ್ಧಾರಕ ಹನುಮಂತನ ಗುಡಿ ಮೊದಲಾದುವನ್ನು ಕಾಣಬಹುದು. ತುಂಗಭದ್ರೆ ಉತ್ತರಕ್ಕೆ ತಿರುಗುವಾಗ ಮೂಲೆಯಲ್ಲಿ ಒದಗಿದ ಮಡುವೇ ಚಕ್ರತೀರ್ಥ; ಇದನ್ನು 'ತಿರುಗಣೆ ಮಡವು' ಎಂದೂ ಕರೆಯುತ್ತಾರೆ. ಇದರ ದಡದ ಮೇಲೇ ಕೋದಂಡರಾಮನ ಗುಡಿ, ಯಂತ್ರೋದ್ಧಾರಕ ಹನುಮನ ಗುಡಿಗಳಿವೆ.

ಹನುಮಂತನ ಗುಡಿ ವ್ಯಾಸರಾಯರ ಕಾಲದ್ದು. ವ್ಯಾಸರಾಯರು ಕೃಷ್ಣದೇವರಾಯನ ಸಮಕಾಲಿಕರು. ಉತ್ತರವಾಹಿನಿಯಾದ ತುಂಗಭದ್ರೆ (ಮಲಪ್ರಹಾರಿಣಿ)ಯ ನಡುಗಡ್ಡೆಯಾದ 'ನವ ವೃಂದಾವನ' ಎಂಬಲ್ಲಿ ಇವರ ವೃಂದಾವನವಿದೆ. ವಿಜಯನಗರದ ಉಚ್ಛ್ರಾಯ ಸ್ಥಿತಿಯಲ್ಲಿ ಈ ಯತಿಗಳ ಪ್ರಭಾವ ಹೆಚ್ಚಾಗಿದ್ದಿತು.

ಚಕ್ರತೀರ್ಥಕ್ಕೆ ಎದುರಾಗಿ ಹಂಪಿಗೆ ಈಶಾನ್ಯ ದಿಕ್ಕಿನಲ್ಲಿ ಋಷ್ಯಮೂಕ ಪರ್ವತವಿದೆ. ರಾಮಾಯಣದಲ್ಲಿ ವಾನರರು ವಾಸ ಮಾಡುತ್ತಿದ್ದುದು ಇಲ್ಲಿಯೇ. ಅದರಾಚೆಯಿರುವ ಅಂಜನಾದ್ರಿಯಲ್ಲಿಯೇ ಹನುಮಂತ ಹುಟ್ಟಿದನೆಂದು ಪ್ರತೀತಿ. ಚಕ್ರತೀರ್ಥಕ್ಕೆ ಪೂರ್ವದಿಕ್ಕಿನಲ್ಲಿ 'ಸೀತಾ ಸರೋವರ'ವಿದೆ; ಸೀತೆಯನ್ನು ರಾವಣ ಎತ್ತಿಕೊಂಡು ಹೋಗುವಾಗ ಸೀತೆ ತನ್ನ ಆಭರಣಗಳನ್ನು ಕಳಚಿ ಇಲ್ಲಿಯೇ ಎಸೆದಳಂತೆ. ವಾಲಿ ಗವಿಯೂ ಇಲ್ಲಿ ಇದೆ.

ಅಚ್ಯುತರಾಯಾಲಯ

ಚಕ್ರತೀರ್ಥದ ದಡದಲ್ಲಿರುವ ಕೋದಂಡರಾಮನ ಗುಡಿಯ ಹಿಂದೆ ರಂಗನಾಥನ ಗುಡಿಯಿದೆ; ಸುಮಾರು ಅರ್ಧಮೈಲು ದೂರದಲ್ಲಿರುವ ಅಚ್ಯುತ ರಾಯಾಲಯ ಅದ್ಭುತವಾದ ಕಟ್ಟಡ. ವಿಜಯನಗರದ ಅರಸ ಅಚ್ಯುತ ರಾಯನು (1529-1542) 1539ರಲ್ಲಿ ಕಟ್ಟಿಸಿದ ಗುಡಿ ಇದು. ಈ ಗುಡಿಗೆ ಹೋಗುವ ದಾರಿಯನ್ನು 'ಸೂಳೆ ಬಜಾರ್' ಎಂದೂ ಕರೆಯುತ್ತಾರೆ. ರಾಯರ ಕಾಲದಲ್ಲಿ ಇಲ್ಲಿ ಸೂಳೆಯರು ವಾಸ ಮಾಡುತ್ತಿದ್ದರು: ಈ ಸೂಳೆಯರಿಂದ ರಾಜ್ಯಕ್ಕೆ ದಿನವೊಂದಕ್ಕೆ 21 ಸಾವಿರ ರೂಪಾಯಿನಷ್ಟು ತೆರಿಗೆ ಸಂದಾಯವಾಗು ತ್ತಿದ್ದಿತಂತೆ ! ಎಂದಮೇಲೆ 'ಸೂಳೆಬಜಾರಿ'ನ ವೈಭವವನ್ನು ಊಹಿಸಿಕೊಳ್ಳ ಬಹುದು. ಪರ್ಶಿಯಾ ದೇಶದ ರಾಯಭಾರಿ ಅಬ್ದುರ್ ರಸಾಕನೂ ಈ ವೇಶ್ಯೆಯರ ಸಂಪತ್ತನ್ನೂ ಶೃಂಗಾರವನ್ನೂ ಅವರ ಮನೆಗಳ ವೈಭವ, ಆಡಂ ಬರಗಳನ್ನೂ ಬರೆದಿಟ್ಟಿದ್ದಾನೆ.

ಹಂಪಿಯ ವಿಖ್ಯಾತ ಸ್ಮಾರಕಗಳಲ್ಲಿ ವಿಜಯವಿಠ್ಠಲಸ್ವಾಮಿ ದೇವಸ್ಥಾನ ವೊಂದು. ಹಂಪಿಯ ದೇವಾಲಯಗಳಲ್ಲೆಲ್ಲ ತುಂಬ ಸುಂದರವಾದುದೆಂದರೆ ಇದೇ. ಅಲ್ಲಿನ ವಾಸ್ತು-ಶಿಲ್ಪ ಎರಡೂ ಮೇಲ್ತರನಾದುವು; ಕೆತ್ತನೆ ಕೆಲಸ ವಂತೂ ಅಸದೃಶವಾಗಿದೆ. ಅಲ್ಲಿರುವ 'ಕಲ್ಲುತೇರು' ಸ್ವಾರಸ್ಯವಾದುದು. ಶಿಲೆ ಯಲ್ಲಿ ರಥದ ಪ್ರತಿಕೃತಿಯನ್ನು ವಿವರವಾಗಿ ಶಿಲ್ಪಿ ಕಂಡರಿಸಿದ್ದಾನೆ. ತುಂಬ ನಾಜೂಕಾದ, ನವುರಾದ ಶಿಲ್ಪಕೆಲಸವನ್ನು ಇಲ್ಲಿ ಕಾಣಬಹುದು. ವಿಠ್ಠಲನ ಗುಡಿ ಯನ್ನು ಕೃಷ್ಣದೇವರಾಯನು 1513ರಲ್ಲಿ ಆರಂಭಿಸಿದನು; ಅದು ಮುಗಿದದ್ದು 1565ರಲ್ಲಿಯೇ ! ಆ ಹೊತ್ತಿಗೆ ವಿಜಯನಗರ ಸಾಮ್ರಾಜ್ಯ ಮಣ್ಣುಗೂಡಿದ್ದಿತು.

ವಿಠ್ಠಲಾಲಯದ ಶಿಲ್ಪವು ಹಲವಾರು ಚಮತ್ಕಾರಗಳಿಂದ ಕೂಡಿದುದು. ಕಂಬಗಳಿಂದ ಸಪ್ತಸ್ವರಗಳು ಕೇಳಿಬರುವಂತೆ ಅಳವಡಿಸಿರುವುದು ಸ್ವಾರಸ್ಯ ವಾದುದು; ಕ್ರಿಯಾಪ್ರಧಾನವಾದ ಶಿಲ್ಪವಿನ್ಯಾಸ ಈ ದೇವಾಲಯದ ವೈಶಿಷ್ಟ್ಯ.

ಹೇಮಕೂಟವೆನಿಸಿಕೊಳ್ಳುವ ಗುಡ್ಡವನ್ನು ಪ್ರಸ್ತಾಪಿಸಿದೆವಲ್ಲ, ಅದರ ಸ್ಮಾರಕಗಳಲ್ಲಿ ಪ್ರಸಿದ್ಧವಾದುದು ಕೃಷ್ಣಸ್ವಾಮಿ ಗುಡಿ. ಕೃಷ್ಣದೇವರಾಯನು

ಕಳಿಂಗ ರಾಜ್ಯವನ್ನು ಗೆದ್ದನಂತರ ಉದಯಗಿರಿಯಲ್ಲಿರುತ್ತಿದ್ದ ಬಾಲಕೃಷ್ಣ ವಿಗ್ರಹವನ್ನು ಇಲ್ಲಿಗೆ ತಂದು 1514ರಲ್ಲಿ ಪ್ರತಿಷ್ಠೆ ಮಾಡಿಸಿದನು. ವಿಶಾಲ ವಾದ ಈ ದೇವಾಲಯವು ವಿಜಯನಗರದ ವೈಭವಗಳಲ್ಲೊಂದಾಗಿದ್ದಿತು. ಆದರೆ ವಿಠ್ಠಲಾಲಯದಷ್ಟು ಸುಂದರವಲ್ಲ.

ನರಸಿಂಹ

ಕೃಷ್ಣಸ್ವಾಮಿಯ ಗುಡಿಯನ್ನು ದಾಟಿದರೆ ಉಗ್ರನರಸಿಂಹನ 22 ಅಡಿ ಎತ್ತರದ ಶಿಲಾಮೂರ್ತಿ ಬಟ್ಟಬಯಲಿನಲ್ಲಿ ಭೀಮಾಕಾರವಾಗಿ, ಭಗ್ನವಾದರೂ ಅದ್ಭುತವಾಗಿ ನಿಂತಿರುವುದನ್ನು ಕಾಣಬಹುದು. ಏಕಾಂಡ ಶಿಲೆಯಲ್ಲಿ ಕಡೆದ ಈ ನರಸಿಂಹ ಸ್ವಾಮಿಯ ತೊಡೆಯ ಮೇಲೆ ಲಕ್ಷ್ಮಿಯಿದ್ದಳು; ಮೂರ್ತಿಯನ್ನು ಮುಚ್ಚಿ ಒಂದು ಗುಡಿಯೂ ಇದ್ದಿತು. ಆದರೆ 1565ರಲ್ಲಿ ಮೂರ್ತಿಭಂಜಕ ರಾದ ಮುಸಲ್ಮಾನರು ಇದನ್ನು ನಾಶಗೊಳಿಸಿದರು. ಅವರ ಹಾವಳಿಗೆ ತುತ್ತಾಗಿ ಸೌಂದರ್ಯ ಮರೆಯಾಗಿದ್ದರೂ ಅದ್ಭುತದ ಆವೇಶವನ್ನು ಇಂದಿಗೂ ಕಾಣಬಹುದು. ಇದನ್ನು ಕಡೆಯಿಸಿದವನೂ ಕೃಷ್ಣ ದೇವರಾಯನೇ; ಇದು ನಿರ್ಮಾಣವಾದದ್ದು 1529ರಲ್ಲಿ.

ನರಸಿಂಹನ ಬಳಿ 'ಬಡವಿಲಿಂಗ' ಎನಿಸಿಕೊಳ್ಳುವ 16 ಅಡಿ ಎತ್ತರದ ಒಂದು ಲಿಂಗವನ್ನು ನೋಡಬೇಕು. ಹಾಗೆಯೇ ಅದರ ಹತ್ತಿರ ಇರುವ 'ತುರತಕಾಲುವೆ'ಯೂ ಪ್ರೇಕ್ಷಣೀಯವಾದುದು. ತುಂಗಭದ್ರಾ ನದಿಗೆ ವಡ್ಡು ಹಾಕಿ ಕಟ್ಟಿರುವ ಈ ಕಾಲುವೆಯನ್ನು ಇಮ್ಮಡಿ ಬುಕ್ಕರಾಯನು 1405-1416 ರಲ್ಲಿ ಅಪಾರ ಧನವ್ಯಯದಿಂದ ಕಟ್ಟಿಸಿ ಹತ್ತಾರು ಮೈಲಿ ಫಾಸಲೆಯಲ್ಲಿರುವ ಭೂಮಿಗೆ ನೀರನ್ನು ಒದಗಿಸಿದ್ದಾನೆ. ವಿಜಯನಗರದಲ್ಲಿ ಬಹುವಾಗಿದ್ದ ನೀರಿನ ತೊಂದರೆಯನ್ನು ಈ ಕಾಲುವೆ ತಪ್ಪಿಸಿತು.

ಅರಮನೆಯ ಪರಿಸರ

ಇಷ್ಟೊಂದು ವೈಭವದಿಂದ ಇದ್ದ ಸಾಮ್ರಾಜ್ಯವನ್ನು ಆಳುತ್ತಿದ್ದ

ಅರಸರ ವಾಸಸ್ಥಾನ ಎಷ್ಟು ವೈಭವದಿಂದ ಇರಬೇಕು! ಪ್ರವಾಸಿಗಳ ಉಲ್ಲೇಖ ವೇನೋ ಸಾಕಾದಷ್ಟು ಇದ್ದರೂ ಈ ವೈಭವ ಈಗ ನೋಡಸಿಗುವುದಿಲ್ಲ. ಅವಶೇಷಗಳೇನೊ ಇವೆ. 42 ಅಡಿ ಉದ್ದ, 3 ಅಡಿ ಅಗಲ, 3 ಅಡಿ ಆಳ ಇರುವ ಕಲ್ಲಿನ ಗೋಡಲೆಯೊಂದರ ಮುಂದೆ ಸಭಾಮಂಟಪವಿದ್ದ ಕುರುಹಿದೆ. ಅರಮನೆಯ ಗುಡಿಯಾಗಿದ್ದ ಹಜಾರ ರಾಮಸ್ವಾಮಿ ಗುಡಿಯ ಹಿಂಭಾಗದಲ್ಲಿಯೇ ಈ ಗೋಡಲೆಯಿರುವುದು.

ಸಭಾಮಂಟಪವು ಅರಮನೆಯ ಮುಂಭಾಗದಲ್ಲಿದ್ದಿತು; ಅರಮನೆಯ ತಳಪಾಯವನ್ನೂ ನೆಲಮಾಳಿಗೆಯನ್ನೂ ಇಂದಿಗೂ ಕಾಣಬಹುದು. ಅರಮನೆಗೆ ನೀರನ್ನು ಒದಗಿಸುತ್ತಿದ್ದ ಕಲ್ಲಿನ ಕಾಲುವೆಗಳೂ ಉಳಿದಿವೆ. ಹತ್ತಿರದಲ್ಲಿಯೇ ಇರುವ 'ಮಾನವಮಿ ದಿಬ್ಬ'ದ ಮೇಲೆ ಅರಸರು ನವರಾತ್ರಿ ಕಾಲದ ದರ್ಬಾ ರನ್ನು ನಡೆಸುತ್ತಿದ್ದರು. ಇದನ್ನು 'ದಸರ ದಿಬ್ಬ' ಅಥವಾ ಸಿಂಹಾಸನ ಮಂಟಪ ಎಂದೂ ಕರೆಯುತ್ತಾರೆ. ಇಲ್ಲಿಯೂ ಉತ್ತಮವಾದ ಶಿಲ್ಪ ಸಾಲುಗಳಿವೆ. ಈ ದಿಬ್ಬಕ್ಕೆ ಪೂರ್ವದಿಕ್ಕಿನಲ್ಲಿ 'ಕಲ್ಲಿನ ದ್ವಾರ'ವಿದೆ: ಇದರ ಮೇಲೆ ಕಡೆದಿರುವ ಶಿಲ್ಪವೂ ಗಮನಾರ್ಹವಾದುದು.

ಸ್ವಲ್ಪ ಹಿಂದೆ ರಾಣೀವಾಸದವರಿಗಾಗಿ ಸ್ನಾನದ ತೊಟ್ಟಿಗಳಿವೆ. ಇದನ್ನು ಓಕಳಿಕುಂಡ ಎಂದು ಕರೆಯುತ್ತಿದ್ದರು. ಇಂಡೋಸಾರ್ಸನಿಕ್ ಶೈಲಿಯ ಈ ಗಾರೆಗಚ್ಚಿನ ಕಟ್ಟಡದ ಪಕ್ಕದಲ್ಲಿ 'ನೀರಿನ ದಾಸ್ತಾನು' ತೊಟ್ಟಿ, ಸ್ವಲ್ಪ ದೂರ ಒಂದು ಕೊಳ, ಕಲ್ಲಿನ ದೋಣಿ ಇವನ್ನು ನೋಡಬಹುದು. ಕಲ್ಲಿನ ದೋಣಿಯಲ್ಲಿ ಹಾಲು ತುಂಬಿ ಬಡಹುಡುಗರಿಗೆ ಕೊಡುತ್ತಿದ್ದರಂತೆ.

ಹಜಾರ ರಾಮಸ್ವಾಮಿ ಗುಡಿ ಎದುರಿಗೆ ರಾಣೀವಾಸದ ಕೋಟೆಯನ್ನು ಕಾಣಬಹುದು. ರಾಣಿಯರ ಅರಮನೆಯೂ ಈಗಿಲ್ಲ; ತರಪಾಯವಷ್ಟೇ ಇದೆ. ಈ ಪ್ರದೇಶದಲ್ಲಿರುವ 'ಕಮಲಮಹಲ್' ಎನ್ನುವ ಭವನ ಸುಂದರವಾದುದು. ಇಂಡೋ–ಸಾರ್ಸನಿಕ್ ಶೈಲಿಯಲ್ಲಿ ಗಾರೆಗಚ್ಚಿನಿಂದ ಮಾಡಿರುವ ಈ ಉಪ್ಪರಿಗೆ ಮನೆ ತಾವರೆಹೂವಿನ ಆಕಾರದಲ್ಲೇ ಇದ್ದು ಮಾಳಿಗೆಯ ಕಿಟಕಿಗಳಿಂದ ತಂಗಾಳಿ

ಬರಲು ಅನುಕೂಲವಾಗಿದೆ. ರಾಣೀವಾಸದ ಹೊರಗಡೆ ಇರುವ 'ಗಜಶಾಲೆ' ಯಲ್ಲಿ ಹನ್ನೊಂದು ಅಂಗಳಗಳಿವೆ; ಏಳು ಗೋಲಾಕಾರದ ವಿಮಾನಗಳಿವೆ. ಮೊದಲಿಗೆ ಇದು ಹಿಂದೂ ರಾಜರು ತಮ್ಮ ಮುಸಲ್ಮಾನ ಉದ್ಯೋಗಿಗಳ ಉಪಯೋಗಕ್ಕಾಗಿ ಕಟ್ಟಿಸಿದ ಮಸೀದಿಯೆಂದು ಹ್ಯಾವೆಲ್ ಅಭಿಪ್ರಾಯ ಪಟ್ಟಿದ್ದಾನೆ.

ರೋಮ್‌ನಂತೆ

ಅಂತೂ ಹಂಪಿಯ ಅವಶೇಷಗಳು ಒಂದು ಕಾಲಕ್ಕೆ ಶ್ರೀಮಂತವಾದ ಸಾಮ್ರಾಜ್ಯದ ವೈಶಿಷ್ಟ್ಯವನ್ನು ಸೂಚಿಸುವಂಥವು. ಸುಮಾರು ಹತ್ತು ಚದರ ಮೈಲಿಗಳಷ್ಟು ವಿಸ್ತಾರವಾದ ಈ ಪ್ರದೇಶದಲ್ಲಿರುವ ಅವಶೇಷಗಳನ್ನು ನೋಡಿ ಬರಲು ಉತ್ಸುಕರೂ ಪ್ರವಾಸಿಗಳೂ ನೆರೆಯುತ್ತಾರೆ. ರೋಮ್‌ನಗರದ ಅವಶೇಷಗಳಂತೆಯೇ ಇವೂ ತುಂಬ ಸ್ವಾರಸ್ಯವಾದುವು. ಸಾಮ್ರಾಜ್ಯದ ಉಚ್ಛ್ರಾಯ ಸ್ಥಿತಿಯಲ್ಲಿಯೇ ಇಲ್ಲಿಗೆ ಬಂದಿದ್ದ ಡೋಮಿಂಗೋ ಪೇಯಿಸ್ ಅಲ್ಲಿನ ಒಂದು ದಿಬ್ಬದ ಮೇಲೆ ನಿಂತು ನೋಡಿ "ರೋಮ್ ನಗರದಷ್ಟೇ ದೊಡ್ಡದು ಇದು; ಅಷ್ಟೇ ಸುಂದರವಾದುದು" ಎಂದು ಬರೆದಿದ್ದಾನೆ.

ಧರ್ಮದೇವತೆಗಳ ಬೀಡು ಧರ್ಮಸ್ಥಳ

ದಕ್ಷಿಣ ಕನ್ನಡ ಜಿಲ್ಲೆಯ ಪವಿತ್ರ ಕ್ಷೇತ್ರಗಳಲ್ಲಿ ಮುಖ್ಯವಾದುವು ಮೂರು-ಉಡುಪಿ, ಕೊಲ್ಲೂರು, ಧರ್ಮಸ್ಥಳ. ಉಡುಪಿ ಇಂದು ಪ್ರಖ್ಯಾತವಾಗಿರುವುದು ಅಲ್ಲಿನ ಕೃಷ್ಣನ ಗುಡಿಯಿಂದ, ಅಲ್ಲಿರುವ ಮಾಧ್ವ ಮಠಗಳಿಂದ; ಈ ಪ್ರಖ್ಯಾತಿ ಬಂದಿರುವುದು ಎಂಟು ನೂರು ವರ್ಷಗಳಿಂದ, ಮಧ್ವಾಚಾರ್ಯರ ಕಾಲದಿಂದ. ಕೊಲ್ಲೂರು ಮೂಕಾಂಬಿಕೆ ಇದಕ್ಕಿಂತ ಪುರಾತನವಾದ ಕ್ಷೇತ್ರ ದೇವತೆಯೆಂದು ತೋರುತ್ತದೆ. ಕ್ರಿಸ್ತಾಬ್ದ ಏಳೆಂಟನೆಯ ಶತಮಾನದಲ್ಲಿಯೇ ಶಂಕರಾಚಾರ್ಯರು ಇಲ್ಲಿಗೆ ಬಂದು ಶ್ರೀಚಕ್ರವನ್ನು ಸ್ಥಾಪಿಸಿದರೆಂದು ಪ್ರತೀತಿಯಿದೆ. ಅದಕ್ಕೂ ಮೊದಲು ಮುಕ್ಕಂಬೆ ಎನ್ನುವ ದೈವ ಅಲ್ಲಿನದಾಗಿದ್ದಿರಬಹುದು.

ಧರ್ಮಸ್ಥಳ ಇಂದು ಪ್ರಸಿದ್ಧವಾಗಿರುವುದು ಮಂಜುನಾಥನ ಗುಡಿಯಿಂದ. ಇದು ಸೋದೆಮಠದ ವಾದಿರಾಜತೀರ್ಥರ ಕಾಲಕ್ಕೆ (1480–1601) ಆಯಿತೆಂದು ಐತಿಹ್ಯವಿದೆ. ಆದರೆ ಅದಕ್ಕೆ ಮೊದಲೇ ಕುಡುಮದ ದೈವಗಳು ಆ ಸ್ಥಳಕ್ಕೊಂದು ವೈಶಿಷ್ಟ್ಯವನ್ನು ಒದಗಿಸಿಕೊಟ್ಟಿದ್ದವು. ಇದು ತುಂಬ ಪುರಾತನವಾದ ಕ್ಷೇತ್ರ ಎನ್ನುವುದು ನಿರ್ವಿವಾದ. ಆದರೆ ಅದಕ್ಕೆ ಒಂದು ಸ್ಥಳಪುರಾಣವಿಲ್ಲ. ಅದರ ಇತಿಹಾಸವನ್ನು ಸ್ಪಷ್ಟವಾಗಿ ನಿರ್ದೇಶಿಸುವುದು ಕಷ್ಟ. ಅಲ್ಲಿ ಹಳೆಯ ದೈವಗಳೊಂದಿಗೆ ಆರ್ಯ ಸಂಪ್ರದಾಯದ ಪೂಜಾ ಕಲ್ಪನೆಗಳೂ ಸೇರಿಬಂದು, ಶೈವ–ಜೈನ–ವೈದಿಕ ಧರ್ಮಗಳ ಸಂಗಮ ನಡೆದು, ಅಪೇಕ್ಷಣೀಯವಾದ ಸಮನ್ವಯದಲ್ಲಿ ವೈಚಾರಿಕವಾದ ಗೊಂದಲವೂ ಅಷ್ಟಿಷ್ಟು ಒದಗಿಹೋಗಿದೆ. ಇದರಿಂದಾಗಿ ಕ್ಷೇತ್ರದ ಸ್ವಾರಸ್ಯ ಇನ್ನಷ್ಟು ಹೆಚ್ಚಿದೆಯೆಂದರೆ ಉತ್ಪ್ರೇಕ್ಷೆಯಲ್ಲ.

ಉಪ್ಪಿನಂಗಡಿ ತಾಲ್ಲೂಕಿನ ಪಜ್ರಡ್ಕ ಮಾಗಣೆಗೆ ಸೇರಿದ್ದ ಧರ್ಮಸ್ಥಳ ಹಳ್ಳಿಗೆ ಮೊದಲು ಮಲ್ಲರ್ಮಾಡಿ ಎನ್ನುವ ಹೆಸರಿದ್ದಿತು; ಈಗ ಮಂಜುನಾಥ ದೇವಾಲಯವಿರುವ ಸ್ಥಳ ಮೊದಲಿಗೆ ಕುಡುಮ ಎನಿಸಿಕೊಳ್ಳುತ್ತಿದ್ದಿತು. ಬಹು ಮಟ್ಟಿಗೆ ಇದು ಗುಡ್ಡಗಾಡು; ಸುತ್ತಲೂ ಬೆಟ್ಟಸಾಲು. ದಟ್ಟವಾದ ಕಾಡುಗಳು ಹಳ್ಳಿಯ ಸುತ್ತಲೂ ನೇತ್ರಾವತೀ ನದಿ ಹರಿಯುತ್ತದೆ. ಗುಡಿ ಒಂದು ಕಣಿವೆಯಲ್ಲಿ ಇದ್ದಂತೆ ಕಾಣುತ್ತದೆ. ಒಂದು ಕಾಲಕ್ಕೆ ಇಲ್ಲಿಗೆ ಹೋಗುವುದೂ ಅಲ್ಲಿಂದ ಬರುವುದೂ ಕಷ್ಟವಾಗಿದ್ದಿರಬೇಕು. ಸಾಲದುದಕ್ಕೆ ಅಲ್ಲಿ ಮಲೇರಿಯಾ ರೋಗದ ಹಾವಳಿಯೂ ಹೆಚ್ಚಾಗಿದ್ದಿತು; ಜನಸಂಖ್ಯೆ ತೀರ ಕಡಮೆಯಿದ್ದುದು ಆಶ್ಚರ್ಯವೇನಲ್ಲ. ಹೀಗಾಗಿ ಈ ಹಳ್ಳಿಗೂ ಹೊರಗಿನ ಪ್ರಪಂಚಕ್ಕೂ ಸಂಪರ್ಕ ಕಠಿಣವಾಗಿದ್ದಿತು. ಊರೂ, ಊರಿನ ಸಂಸ್ಕೃತಿಯೂ ವಿವಿಕ್ತವಾಗಿ, ವಿಶಿಷ್ಟವಾಗಿ ಉಳಿಯುವುದು ಸಾಧ್ಯವಾಯಿತು. ಹೊರಗಿನ ಸಂಕರ ಅಷ್ಟಾಗಿ ಇಲ್ಲದಿರುವುದರಿಂದ ಒಳಗಿನ ವಾತಾವರಣದಲ್ಲಿ ಕಲ್ಪನೆಗಳು ಹಾಗೆ ಹಾಗೆಯೇ ಉಳಿದುಕೊಳ್ಳುತ್ತವೆ. ಜನರ ಧರ್ಮಶ್ರದ್ಧೆ, ಆಚಾರನಿಷ್ಠೆ ಮತ್ತು ಸಂಪ್ರದಾಯದ ಬಿಗಿ ಇವು ಧರ್ಮಸ್ಥಳದಲ್ಲಿ ಇಂದಿಗೂ ಕಾಣಬರುವ ವಿವರಗಳು.

ಈಗ ಧರ್ಮಸ್ಥಳದಲ್ಲಿ ಮಂಜುನಾಥ ದೇವಾಲಯವೇ ಮುಖ್ಯವಾದ ಸಂಸ್ಥೆ. ಅದು ಆರ್ಯ ಸಂಸ್ಕೃತಿಯ ಪ್ರಭಾವವನ್ನು ಚೆನ್ನಾಗಿ ಮೂಡಿಸಿಕೊಂಡು ನಿಂತಿರುವ ಶಿವ ದೇವಾಲಯ. ಅದರ ಮುಖ್ಯಸ್ಥರು 'ಹೆಗ್ಗಡೆ'ಯೆನಿಸಿಕೊಳ್ಳುವ ಜೈನ ಗೃಹಸ್ಥರು. ವೈದಿಕ ಸಂಪ್ರದಾಯದ ಗುಡಿಗಳ ಮೇಲ್ವಿಚಾರಣೆ, ನಿರ್ವಹಣೆಗಳೆಲ್ಲವೂ ಜೈನ ಧರ್ಮಕ್ಕೆ ಸೇರಿದ ಮನೆತನಗಳಿಂದ ನಡೆಯುವುದು ಸೋಜಿಗವೆನಿಸಿದರೂ ಈ ಕಡೆ ಅದು ಅಷ್ಟೇನೂ ಅಸಾಧಾರಣವಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾಂತಾವರದ ಕಾಂತೇಶ್ವರ, ಕಕ್ಕುಂದೂರಿನ ದುರ್ಗಾಪರಮೇಶ್ವರಿ, ಪಡುಬಿದ್ರಿಯ ಮಹಾಲಿಂಗೇಶ್ವರ, ನಂದಿಕೂರಿನ ದೇವಾಲಯ, ಪುತ್ತಿಗೆಯಲ್ಲಿ ಸೋಮನಾಥ, ಕಾರ್ಕಳದ ಅನಂತಶಯನ, ಧರಿಗುಡ್ಡೆ ಈಶ್ವರ ದೇವಾಲಯ ಮೊದಲಾದುವೆಲ್ಲ ಜೈನ ಅಧಿಕಾರಿಗಳ ಆಡಳಿತದಲ್ಲಿಯೇ ಇದ್ದುವು ಅಥವಾ ಇವೆ.

ಆಡಳಿತ ಅವರದ್ದಾದರೂ ಅರ್ಚನೆ, ಉತ್ಸವಗಳೆಲ್ಲ ಬ್ರಾಹ್ಮಣರಿಂದಲೇ ನಡೆಯುತ್ತವೆ. ಧರ್ಮವಿರೋಧಕ್ಕೆ ಯಾವ ರೀತಿಯಿಂದಲೂ ಕಾರಣವಿರುವುದಿಲ್ಲ.

ಆದರೆ ಧರ್ಮಸ್ಥಳದಲ್ಲಿ ಮಂಜುನಾಥಾಲಯವೇ ಎಲ್ಲ ಕಾಲದಲ್ಲಿಯೂ ಮುಖ್ಯವಾಗಿದ್ದಿತೆಂದು ಬಗೆಯಬಾರದು. ಈಗಲೂ ಧರ್ಮಸ್ಥಳದ ಧಾರ್ಮಿಕ ವ್ಯವಸ್ಥೆಯಲ್ಲಿ ಮಂಜುನಾಥನ ಗುಡಿ ಒಂದು ಅಂಗವಷ್ಟೆ. ಗುಡಿಗೆ ಹತ್ತಿರದಲ್ಲಿಯೇ ಚಂದ್ರನಾಥ ತೀರ್ಥಂಕರನ ಬಸದಿಯಿದೆ. ದೈವಗಳು ವಿಶ್ರಮಿಸಿಕೊಂಡ ಬದಿನಡೆ ಇದೆ. ದೈವಗಳು ಮನೆ ಮಾಡಿಕೊಂಡು ಇರುವ ನೆಲ್ಯಾಡಿ ಬೀಡಿದೆ. ಸ್ವಲ್ಪ ದೂರದಲ್ಲಿ ಉಳ್ಳಾಳ್ತಿ ಗುಡಿಯಿದೆ. ಮಂಜುನಾಥ ದೇವಾಲಯದಎದುರಿಗೆ ಹೆಗ್ಗಡೆಯ ಅರಮನೆಯಿದೆ. ಇವೆಲ್ಲವೂ ಸೇರಿಯೇ ಧರ್ಮಸ್ಥಳ ಎನ್ನುವುದನ್ನು ಮರೆಯಬಾರದು. ಇವೆಲ್ಲವೂ ಹೆಗ್ಗಡೆಯ ವಶದಲ್ಲಿಯೇ ಇವೆ. ಎಲ್ಲವನ್ನೂ ನಿರ್ವಹಣೆಯಲ್ಲಿ ಮಾತ್ರವಲ್ಲದೆ ವ್ಯವಸ್ಥೆಯಲ್ಲಿಯೂ ಒಂದುಗೂಡಿಸುವವರು ಹೆಗ್ಗಡೆಯೇ ಧರ್ಮಸ್ಥಳದ ಈ ಎಲ್ಲ ಗುಡಿ-ಬೀಡುಗಳೂ ಹೆಗ್ಗಡೆಯ ಸ್ವಂತ ಜಮೀನಿನ ಮೇಲೆಯೇ ನಿಂತಿವೆ. ಊರಿನ ಬೀದಿಗಳೂ ಒಳಗೂ, ಹೊರಗೂ ಎಲ್ಲವೂ ಹೆಗ್ಗಡೆಗೆ ಸೇರಿದ್ದು. ಅಲ್ಲಿರುವ ಭೂಮಿಯೆಲ್ಲ ಹೆಗ್ಗಡೆಯ ಹೆಸರಿನಲ್ಲೇ ಇರುವುದು. ಮಂಜುನಾಥದೇವರ ಅಥವಾ ಇನ್ನಾವ ದೇವರ, ದೈವದ ಹೆಸರಿನಲ್ಲಿ ಒಂದು ಅಂಗುಲ ಭೂಮಿಯೂ ಅಲ್ಲಿಲ್ಲ. ಧರ್ಮಸ್ಥಳದ ಮಂಜುನಾಥಾಲಯವೂ ಇತರ ಗುಡಿ-ಬೀಡುಗಳೂ ಹೆಗ್ಗಡೆಯ ಸ್ವಂತ ಸಂಸ್ಥೆಗಳು. ಅವರೇ ಅಲ್ಲಿ ಸರ್ವಾಧಿಕಾರಿ. ಇದು ಹಿಂದಿನಿಂದ ನಡೆದುಕೊಂಡುಬಂದಿರುವ ವಿವರ. ಯಾರನ್ನು ಬೇಕೆಂದರೂ ಗುಡಿಗೆ ಹೋಗದಂತೆ ತಡೆಯುವ ಹಕ್ಕು ಹೆಗ್ಗಡೆಗಿರುವುದಾದರೂ ಈ ಸ್ಥಳ ತುಂಬ ಜನಪ್ರಿಯವಾಗಿರುವುದು ಗಮನಾರ್ಹ. ಪ್ರತಿ ವರ್ಷ ಒಂದು ಲಕ್ಷಕ್ಕೆ ಮೀರಿ ಜನ ಅಲ್ಲಿಗೆ ಬರುತ್ತಾರೆ. ಆದಾಯವೂ ವಿಪುಲವಾಗಿದೆ. ಆದಾಯವೆಲ್ಲ ಹೆಗ್ಗಡೆಯದೇ ; ವೆಚ್ಚವೂ ಅವರದೇ.

ಧರ್ಮ ದೇವತೆಗಳು

ಈ ನಡುಗಡ್ಡೆಯಲ್ಲಿ ಧರ್ಮ ಮೈದಳೆದು ಬಂದುದರ ವಿಚಾರವಾಗಿ ಒಂದು ಐತಿಹ್ಯವಿದೆ. ತುಂಬ ಹಿಂದೆ ಪೇರ್ಗಡೆ (ಹೆಗ್ಗಡೆ) ಮನೆತನದವರೊಬ್ಬರು

ಈಗ ನೆಲ್ಯಾಡಿ ಬೀಡು ಎನ್ನುವ ಮನೆಯಲ್ಲಿ ವಾಸವಾಗಿದ್ದರು. ಅವರು ಗಂಡಸು ಹೆಗ್ಗಡೆಯೆಂದೂ, ಅಮ್ಮುದೇವಿ ಬಲ್ಲಾಳ್ತಿ ಎನ್ನುವ ಹೆಂಗಸೆಂದೂ ಬೇರೆ ಬೇರೆ ನಿರ್ದೇಶನವಿದೆ. ಆ ಕಾಲಕ್ಕೆ ಬಳಕೆಯಲ್ಲಿ ಇದ್ದುದು ಅಳಿಯ ಸಂತಾನ ಕಟ್ಟಿನ ಪದ್ಧತಿ. ಅದು ಸ್ತ್ರೀ ಪ್ರಮುಖವಾಗಿದ್ದ ಸಮಾಜ. ಬಲ್ಲಾಳ್ತಿಯೇ ಇರಬಹುದು. ಇದು ಹೇಗಾದರೂ ಇರಲಿ, ಒಂದು ದಿನ ನೆಲ್ಯಾಡಿ ಬೀಡಿಗೆ ಇಬ್ಬರು ದಾರಿ ಹೋಕರು ಬಂದರು. ತಾವು ತುಂಬ ಬಳಲಿರುವೆವೆಂದೂ, ಕುಡಿಯಲು ನೀರು ಬೇಕೆಂದೂ, ತಂಗಲು ಹೊರಗೆ ಕಟ್ಟೆಯ ಮೇಲೆ ಸ್ಥಳಬೇಕೆಂದೂ ಕೇಳಿಕೊಂಡರು. ಬಲ್ಲಾಳ್ತಿ (ಅಥವಾ ಹೆಗ್ಗಡೆ) ಅವರನ್ನು ಆದರದಿಂದ ಒಳಗೆ ಕರೆದು ಅವರು ಬಯಸಿದ ನೀರಿಗೆ ಬದಲು ಬಿಸಿ ಹಾಲನ್ನು ಕುಡಿಯಲು ಕೊಟ್ಟಳು. ಹೊರ ಕಟ್ಟೆಯ ಮೇಲೆ ಸ್ಥಳಕ್ಕೆ ಬದಲು ಒಳಗಡೆ ಕೋಣೆಯೊಂದನ್ನೇ ತೆರವು ಮಾಡಿ ಕೊಟ್ಟಳು. ರಾತ್ರಿ ಅತಿಥಿಗಳು ಅಲ್ಲಿಯೇ ತಂಗಿದರು.

ಆ ರಾತ್ರಿ ಬಲ್ಲಾಳ್ತಿ ಮಲಗಿರುವಾಗ ಒಂದು ಕನಸನ್ನು ಕಂಡಳು. ಕನಸಿನಲ್ಲಿ ಧರ್ಮ ದೇವತೆಗಳು ಕಾಣಿಸಿಕೊಂಡು, ಆಕೆ ನೀಡಿದ ಆದರಾತಿಥ್ಯದಿಂದ ತಾವು ತೃಪ್ತರಾದರೆಂದೂ, ಆ ಮನೆಯನ್ನು ಅವರ ವಾಸಕ್ಕೇ ಬಿಟ್ಟು ಹತ್ತಿರದಲ್ಲಿ ತನಗಾಗಿ ಬೇರೊಂದು ಮನೆಯನ್ನು ಕಟ್ಟಿಸಿಕೊಳ್ಳಬೇಕೆಂದೂ ಆಕೆಯ ಸಂಪದಭ್ಯುದಯಗಳಿಗೆ ತಾವೇ ಹೊಣೆಯನ್ನು ಹೊರುವೆವೆಂದೂ ತಿಳಿಸಿದರು. ಬೆಳಗಾಗುತ್ತಲೇ ಬಲ್ಲಾಳ್ತಿ, ಎದ್ದು ನೋಡಲು ಅತಿಥಿಗಳಿಬ್ಬರೂ ಮಾಯವಾಗಿದ್ದರು. ಆಕೆಗೆ ಕನಸಿನ ಬಗ್ಗೆ ಶ್ರದ್ಧೆ ಮೂಡಿ ನೆಲ್ಯಾಡಿ ಬೀಡನ್ನು ಒಡನೆಯೇ ಅವರಿಗೆ ಬಿಟ್ಟುಕೊಟ್ಟು, ಹತ್ತಿರದಲ್ಲಿ ತಾನು ಬೇರೆ ಬೀಡನ್ನು ಕಟ್ಟಿಸಿಕೊಂಡಳು. ಆಕೆ ಕಟ್ಟಿಸಿಕೊಂಡ ಹೊಸ ಬೀಡಿನ ಅವಶೇಷಗಳು ಇಂದಿಗೂ ಉಳಿದಿವೆ. ಕಾಲಕ್ರಮದಲ್ಲಿ ಹೆಗ್ಗಡೆಯ ಬೀಡು ಮಂಜುನಾಥಾಲಯದ ಹೊರ ಪ್ರಾಕಾರದಿಂದ ಸುಮಾರು ಮೂವತ್ತು ಗಜ ದೂರದಲ್ಲಿ ಕಟ್ಟಲ್ಪಟ್ಟಿತು. ನೆಲ್ಯಾಡಿ ಬೀಡಿನಲ್ಲಿ ಮಾತ್ರ ಇಂದಿಗೂ ಮನುಷ್ಯರು ಯಾರೂ ವಾಸ ಮಾಡುವುದಿಲ್ಲ. ಅಲ್ಲಿ ದೈವಗಳೇ ಇರುವುದೆಂದು ನಂಬಿಕೆ.

ಅಂದಿನಿಂದ ಆ ಮನೆತನದ ಸಂಪತ್ತೂ ಹೆಚ್ಚಿತು, ವೈಭವವೂ ಹೆಚ್ಚಿತು.

ಅತಿಥಿಗಳನ್ನು ಆದರದಿಂದ ನೋಡಿಕೊಳ್ಳುವ ಧರ್ಮವನ್ನು ನೆಲ್ಯಾಡಿ ಬೀಡಿನ ಯಜಮಾನರು ಇಂದಿಗೂ ನಡೆಸಿಕೊಂಡು ಬರುತ್ತಿದ್ದಾರೆ. ಧರ್ಮಸ್ಥಳವೆಂದರೆ ದಾನ-ಧರ್ಮಗಳಿಗೆ ಹೆಸರಾದ ಕ್ಷೇತ್ರವೇ. ಹೆಗ್ಗಡೆಗಳು ಅದನ್ನು ಶ್ರದ್ಧೆಯಿಂದ ನಿರ್ವಹಿಸಿಕೊಂಡು ಬಂದಿದ್ದಾರೆ. ಬಲ್ಲಾಳ್ತಿಯ ಆತಿಥ್ಯವನ್ನು ಪಡೆದು ತೃಪ್ತ ರಾದ ದೈವಗಳು ಹೆಗ್ಗಡೆಯನ್ನು ತಮ್ಮ ಪ್ರತಿನಿಧಿಯನ್ನಾಗಿ ನೇಮಿಸಿಕೊಂಡು, ಅವನ ಮೂಲಕ ಜನರ ಹಿತಸಾಧನೆ ಮಾಡುತ್ತಾರೆಂದು ಇಲ್ಲಿನ ನಂಬಿಕೆ.

ಅಂತೂ ಈ ಸ್ಥಳದ ಹೆಗ್ಗಳಿಕೆಗೆ ಕಾರಣರಾದವರು ದೈವಗಳು. ಇವರನ್ನು ಕುಡುಮದ ದೈವಗಳೆಂದು ವ್ಯವಹರಿಸುತ್ತಾರೆ. ಕನ್ಯಾಕುಮಾರಿ, ಕುಮಾರಸ್ವಾಮಿ ಕಾಳರ್ಕಾಯಿ, ಕಾಳರಾಹು ಇವರೇ ಆ ದೈವಗಳು. ಕನ್ಯಾಕುಮಾರಿ, ಕಾಳರ್ಕಾಯಿ ಇಬ್ಬರೂ ಹೆಣ್ಣು ದೈವಗಳು. ಕುಮಾರಸ್ವಾಮಿ ಮತ್ತು ಕಾಳರಾಹು ಇವರು ಗಂಡು ದೈವಗಳು. ಇವರಲ್ಲಿ ಕುಮಾರಸ್ವಾಮಿ ಮತ್ತು ಕನ್ಯಾಕುಮಾರಿ ಇವರ ಹೆಸರುಗಳನ್ನು ನೋಡಿದರೆ ಹೊರಗಿನಿಂದ ತುಳುನಾಡಿಗೆ ಬಂದ ದೈವಗಳೆಂದು ತೋರುತ್ತದೆ. ಕುಮಾರಸ್ವಾಮಿಯನ್ನು ಕುದುರೆಯ ಮೇಲೆ ಕೂತಂತೆಯೂ ಕಾಳ ರಾಹುವನ್ನು ಆನೆಯ ಮೇಲೆ ಕೂತಂತೆಯೂ ಚಿತ್ರಿಸುತ್ತಾರೆ. ಕನ್ಯಾಕುಮಾರಿ ಯನ್ನು ಅಮ್ಮನವರು ಎಂದು ವ್ಯವಹರಿಸುವ ವಾಡಿಕೆ ಇದೆ. ಈಕೆ ಕುಮಾರ ಸ್ವಾಮಿಯ ಹೆಂಡತಿ ಎಂದು ಪ್ರತೀತಿ. ಈ ಧರ್ಮದೇವತೆಗಳ ವಾಸಕ್ಕೆಂದು ಬಿಟ್ಟುಕೊಟ್ಟ ನೆಲ್ಯಾಡಿ ಬೀಡಿನಲ್ಲಿಇವರ ಮೂರ್ತಿಗಳಿಲ್ಲ. ಇವರ ಮೂರ್ತಿಗಳಿ ರುವುದು ಮಂಜುನಾಥ ದೇವಾಲಯದ ಅಮ್ಮನವರ ಗುಡಿಯಲ್ಲಿ. ದೇವಾಲಯ ದಿಂದ ಎರಡು ಫರ್ಲಾಂಗು ದೂರದಲ್ಲಿ ಇರುವ ಬದಿನಡೆಯಲ್ಲಿ ಈ ದೈವಗಳಿಗೆ ಬೇರೆ ಬೇರೆ ಗುಡಿಗಳಿವೆ ವರ್ಷಕ್ಕೆರಡು ಬಾರಿ ಇಲ್ಲಿ ನಡಾವಳಿಯೂ ನಡೆಯು ತ್ತದೆ. ನೆಲ್ಯಾಡಿ ಬೀಡಿನಲ್ಲಿ ಎರಡು ತೂಗುಮಂಚಗಳನ್ನಿರಿಸಿ ಅದರಿಂದಲೇ ದೈವ ಗಳನ್ನು ನಿರ್ದೇಶಿಸುತ್ತಾರೆ. ಒಂದು ಮಂಚ ನಾಲ್ಕು ದೇವತೆಗಳಿಗಾಗಿ; ಇನ್ನೊಂದು ಮಂಚ ಕನ್ಯಾಕುಮಾರಿ ಮಾತ್ರ.

ವಾದಿರಾಜರು

ಹೀಗೆ ಧರ್ಮ ದೇವತೆಗಳು ನೆಲ್ಯಾಡಿ ಬೀಡಿನಲ್ಲಿ ನೆಲೆಸಿ ಆ ಬೀಡಿನ

ಹೆಗ್ಗಡೆಯಿಂದ ಸ್ಥಳದ ದಾನಧರ್ಮಗಳನ್ನು ನಡೆಸುತ್ತಿದ್ದಾಗ ಒಂದು ಬಾರಿ ಉಡುಪಿ ಸೋದೆ ಮಠದ ವಾದಿರಾಜ ತೀರ್ಥರು ಅಲ್ಲಿಗೆ ಬಂದರಂತೆ. ವಾದಿ ರಾಜರು ಮಧ್ವಾಚಾರ್ಯರ (1238-1317) ಪರಂಪರೆಯಲ್ಲಿ ಬಂದು• ಉಡುಪಿ ಅಷ್ಟ ಮಠಗಳಲ್ಲಿ ಒಂದಾದ ಸೋದೆಮಠದ ಸ್ವಾಮಿಗಳಾಗಿದ್ದವರು. ದೊಡ್ಡ ವಿದ್ವಾಂಸರೆಂದೂ. ತಪಸ್ವಿಗಳೆಂದೂ ಪ್ರಖ್ಯಾತರಾದ ಇವರು ರಾಜ ರಿಂದಲೂ, ಜನರಿಂದಲೂ ಬಹುವಾಗಿ ಸನ್ಮಾನಿಸಲ್ಪಟ್ಟು, ಉಡುಪಿಯ ಯಶ ಸ್ಸಿಗೆ ಕಾರಣರಾದವರು. ಅಲ್ಲಿನ ಪರ್ಯಾಯ ವ್ಯವಸ್ಥೆ ಮೊದಲಾದುವನ್ನು ಏರ್ಪಡಿಸಿದವರೇ ಅವರು. ಇಂಥ ಮಹಿಮಾನ್ವಿತರು ಕುಡುಮಕ್ಕೆ ದಯಮಾಡಿ ಸಿದರೆ ನೆಲ್ಯಾಡಿ ಬೀಡಿನ ಹೆಗ್ಗಡೆ ಕರೆದು ಸನ್ಮಾನಿಸದೆ ಇರುತ್ತಾನೆಯೇ ? ವಾದಿ ರಾಜರು ಆತನ ಆಹ್ವಾನವನ್ನು ಮನ್ನಿಸಿ ಹೆಗ್ಗಡೆಯ ಬೀಡಿಗೆ ಬಂದರು. ಆದರೆ ಊರಿನಲ್ಲೆಲ್ಲೂ ದೇವಾಲಯವಿಲ್ಲ. ಇರುವುದು ದೈವಗಳ ಗುಡಿಯಷ್ಟೆ. ಅವರು ಇಂಥ ಸ್ಥಳದಲ್ಲಿ ಊಟ ಮಾಡುವುದು ತಕ್ಕುದಲ್ಲವೆಂದು ನಿಶ್ಚಯಿಸಿ ಉಪವಾಸ ದಿಂದಲೇ ಇದ್ದರು.

ವಾದಿರಾಜರು ತುಳುನಾಡಿನವರೇ ಆದರೂ ಆರ್ಯ ಧರ್ಮದ ಪ್ರಭಾ ವಕ್ಕೆ ಒಳಪಟ್ಟವರು. ಅವರು 'ಭೂತರಾಜ'ನನ್ನು ಒಲಿಸಿಕೊಂಡು ಅವನಿಂದ ಕೆಲಸ ಮಾಡಿಸಿಕೊಳ್ಳುತ್ತಿದ್ದರು, ನಿಜ ಆದರೆ ಅವರು ಆರ್ಯ ದೇವತೆಗಳಾದ ವಿಷ್ಣು, ಶಿವ ಇವರನ್ನೇ ಪೂಜೆ ಮಾಡುವ ಪದ್ಧತಿ ಇದ್ದವರು, ಆರ್ಯಧರ್ಮದ ಪ್ರಸಾರಕ್ಕೆ ಬದ್ಧಕಂಕಣರಾಗಿದ್ದವರು. ತಮ್ಮ ತೊಂದರೆಯನ್ನು ಹೆಗ್ಗಡೆಗೆ ತಿಳಿಸಿ ದಾಗ, ಆತನು ಪೇಚಾಡಿಕೊಂಡ. ವಾದಿರಾಜರಂಥ ಹಿರಿಯರು ತನ್ನ ಮನೆಯಲ್ಲಿ ಅನ್ನಾಹಾರವಿಲ್ಲದೆ ಇರುವುದೇನು ಚೆನ್ನು? ಅದೂ ದೈವಗಳ ನೆರವಿನಿಂದ ದಾನ ಧರ್ಮಗಳು ಅಷ್ಟೊಂದು ನಡೆಯುತ್ತಿರುವಾಗ? ಹೆಗ್ಗಡೆ ದಿಕ್ಕು ತೋಚದೆ ತಾನೂ ಉಪವಾಸವಿದ್ದು ಮಲಗಿದ.

ಆದರೆ ಆ ರಾತ್ರಿ ಧರ್ಮ ದೇವತೆಗಳು ಆತನ ಕನಸಿನಲ್ಲಿ ಕಾಣಿಸಿಕೊಂಡು ತಾವು ಶಿವಲಿಂಗವನ್ನು ಆ ಸ್ಥಳಕ್ಕೆ ತರಿಸಿ ಕೊಡುವುದಾಗಿಯೂ, ರಾತ್ರಿಯೇ ಗುಡಿಯನ್ನು ಕಟ್ಟಲು ಆರಂಭಿಸಬೇಕೆಂದೂ ತಿಳಿಸಿದರು. ಹೆಗ್ಗಡೆ ಎದ್ದು ರಾತ್ರಿ

ಯಲ್ಲಿಯೇ ಸಣ್ಣದೊಂದು ಗುಡಿಯನ್ನು ಕಟ್ಟಿಸಿದ. ಬೆಳಕು ಹರಿಯುವ ವೇಳೆಗೆ ಮಂಗಳೂರಿನ ಕದರಿ ಮಂಜುನಾಥನ ಗುಡಿಯಿಂದ ಲಿಂಗವನ್ನು ದೈವಗಳು (ಅಣ್ಣಪ್ಪ ಭೂತನ ಮೂಲಕ) ತರಿಸಿಟ್ಟವು. ಬೆಳಗಾದನಂತರ ಇದನ್ನೆಲ್ಲ ತಿಳಿದ ವಾದಿರಾಜ ಸ್ವಾಮಿಗಳು ಸಂತೋಷಪಟ್ಟು ಶಾಸ್ತ್ರೋಕ್ತವಾಗಿ ಶಿವಲಿಂಗದ ಪ್ರತಿಷ್ಠೆಯನ್ನು ನೆರವೇರಿಸಿ, ಪೂಜೆ ನಡೆಸಿ, ಅನಂತರ ಊಟ ಮಾಡಿದರು. ಹೆಗ್ಗಡೆಯನ್ನು ಮನಸಾರೆ ಹರಸಿ, ಕುಡುಮವನ್ನು 'ಧರ್ಮಸ್ಥಳ'ವೆಂದು ಕರೆದು, ಮುಂದಕ್ಕೆ ಬಿಜಯ ಮಾಡಿದರು.

ಇದೊಂದು ಐತಿಹ್ಯ. ವಾದಿರಾಜರು 1480 ರಿಂದ 1601 ರವರೆಗೆ ನೂರಿಪ್ಪತ್ತು ವರ್ಷ ಕಾಲ ಬದುಕಿ ತುಳುನಾಡಿನಲ್ಲಿ ಪ್ರಗತಿಯನ್ನು ಸಾಧಿಸಿದ ಪ್ರತಿಭಾಶಾಲಿಗಳು; ಅವರ ಕಾಲದಲ್ಲಿ, ಅವರ ಮಾರ್ಗದರ್ಶನದಿಂದ ನೆಲ್ಯಾಡಿ ಬೀಡಿನ ಹೆಗ್ಗಡೆ ಧರ್ಮಸ್ಥಳದ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ನಡೆಸಿದ್ದರೆ ಆಶ್ಚರ್ಯವೇನಿಲ್ಲ. ಆದರೆ ಧರ್ಮಸ್ಥಳದ ಧಾರ್ಮಿಕ ಸ್ವರೂಪವನ್ನು ವಾದಿರಾಜರು ಎಷ್ಟರಮಟ್ಟಿಗೆ ನಿರ್ಧರಿಸಿದರು ಎನ್ನುವುದು ಮಾತ್ರ ಸಮಸ್ಯೆಯಾಗಿಯೇ ಉಳಿದಿದೆ.

ವಾದಿರಾಜರು ಕುಡುಮಕ್ಕೆ ಬರುವ ಮೊದಲೇ ಅಲ್ಲಿ ಶಿವ ದೇವಾಲಯ ವಿದ್ದಿತೆಂದೂ ವಾದಿರಾಜರು ಬಂದು ಸಂದರ್ಶನ ಮಾಡಿ ಹೋದರೆಂದೂ ಒಂದು ಅಭಿಪ್ರಾಯ. ಗುಡಿಯ ವ್ಯವಸ್ಥೆಗೂ ವಾದಿರಾಜರಿಗೂ ಏನೂ ಸಂಬಂಧವಿಲ್ಲವೆಂದು ಈ ಅಭಿಪ್ರಾಯದ ಗಮಕ. ಆದರೆ ಮೇಲೆ ಹೇಳಿದ ಕಥೆ ಪ್ರಬಲವಾಗಿ ಹರಡಿದೆ. ಸೋದೆ ಮಠದಲ್ಲಿ ಮಾತ್ರವಲ್ಲ, ಧರ್ಮಸ್ಥಳದಲ್ಲಿ ಕೂಡ ಅದು ಬಳಕೆಯಲ್ಲಿದೆ. ಸೋದೆ ಮಠದ ಸ್ವಾಮಿಗಳು ಉಡುಪಿ ಕೃಷ್ಣ ಮಠದಲ್ಲಿ ಪರ್ಯಾಯ ವಹಿಸಿಕೊಳ್ಳಬೇಕಾದಾಗ ಪೂರ್ವಭಾವಿಯಾಗಿ ಧರ್ಮಸ್ಥಳಕ್ಕೆ ಬಂದು ಅಲ್ಲಿ ಮಂಜುನಾಥನನ್ನು ಗರ್ಭಗುಡಿಯಲ್ಲಿ ತಾವೇ ಪೂಜೆ ಮಾಡಿ ಹೋಗುವ ಸಂಪ್ರದಾಯ ಇಂದಿನವರೆಗೂ ನಡೆದು ಬಂದಿದೆ. ಮಂಜುನಾಥನನ್ನು ಪೂಜೆ ಮಾಡುವ ಅರ್ಚಕರು ಇಂದಿಗೂ ಶಿವಳ್ಳಿ ಮಾಧ್ವ ಬ್ರಾಹ್ಮಣರು. ಸೋದೆ ಮಠಕ್ಕೆ ಸೇರಿದ ದವರೇ.

ಉಡುಪಿಯ ಎಂಟು ಮಠಗಳಲ್ಲಿ ಸೋದೆ ಮಠವೊಂದೇ ಹೀಗೆ ಧರ್ಮಸ್ಥಳದೊಂದಿಗೆ ನೆಂಟನ್ನು ಉಳಿಸಿಕೊಂಡು ಬಂದಿರುವ ಮಠ. ಅಲ್ಲಿನ ಉಳಿದ ಮಠಾಧೀಶರು ಧರ್ಮಸ್ಥಳಕ್ಕೆ ಹೆಚ್ಚಾಗಿ ಹೋಗುವುದೂ ಇಲ್ಲ. ಹೋದರೂ ಗರ್ಭಗುಡಿಯನ್ನು ಹೊಕ್ಕು ತಾವೇ ಕೈಯಾರೆ ಪೂಜೆ ಮಾಡುವ ಪದ್ಧತಿಯೂ ಇಲ್ಲ. ಮೇಲೆ ಹೇಳಿದ ಪ್ರತೀತಿಯನ್ನು ಈ ಪದ್ಧತಿಯೊಂದಿಗೆ ಪರಿಶೀಲಿಸಿದರೆ ವಾದಿರಾಜರು ಧರ್ಮಸ್ಥಳದಲ್ಲಿ ಯಾವುದೋ ಮುಖ್ಯವಾದ ಕೆಲಸವನ್ನೇ ಮಾಡಿದರೆಂದು ಸ್ಪಷ್ಟವಾಗುತ್ತದೆ.

ವಾದಿರಾಜರು ಮಾಧ್ವ ಸಂಪ್ರದಾಯದವರಾದುದರಿಂದ, ಅವರ ಇಷ್ಟ ದೇವತೆ ತ್ರಿವಿಕ್ರಮ, ಉಪಾಸ್ಯ ದೇವತೆ ಹಯವದನ ಆದುದರಿಂದ ವಿಷ್ಣುವಲ್ಲದ ಮಂಜುನಾಥನ ಶಿವಲಿಂಗವನ್ನು ಅವರು ಪ್ರತಿಷ್ಠೆ ಮಾಡಿದುದು ಅಸಂಭವವೆಂದು ತೋರುವುದಲ್ಲವೆ? ಸಹಜ. ಆದರೆ ತುಳು ನಾಡಿನಲ್ಲಿ ಮಾಧ್ವರು ಶಿವಪೂಜೆಯನ್ನು ಮಾಡುವುದು ಅಸಾಧಾರಣವಾದುದಲ್ಲ. ಉಡುಪಿಯಲ್ಲಿಯೇ ಅನಂತೇ-ಶ್ವರನ ಗುಡಿಯಲ್ಲಿ ಮಾಧ್ವರೇ ಅರ್ಚಕರು. ಪರ್ಯಾಯ ಸ್ವಾಮಿಗಳು ಈ ದೇವಾಲಯದಲ್ಲಿ ಶಿವಪೂಜೆ ನಡೆಸಿಯೇ ಕೃಷ್ಣಮಠಕ್ಕೆ ಬರುತ್ತಾರೆ. ಮಧ್ವಾಚಾರ್ಯರು ಕೃಷ್ಣಗುಡಿಯನ್ನು ತಾವೇ ಸ್ಥಾಪಿಸಿದರಾದರೂ ಅವರು ತೀರಿಕೊಳ್ಳುವವರೆಗೂ ಪಾಠ ಪ್ರವಚನಾದಿಗಳನ್ನು ನಡೆಸುತ್ತಿದ್ದುದು ಅನಂತೇಶ್ವರನ ಗುಡಿಯಲ್ಲಿಯೇ. ಮಾಧ್ವರು ವಿಷ್ಣು ಸರ್ವೋತ್ತಮನೆನ್ನುವ ನಿಲುವನ್ನು ಪಡೆದವರಾದರೂ ಶಿವಾರ್ಚನ ವಿರೋಧಿಗಳೇನಲ್ಲ. ಅಷ್ಟು ಮಾತ್ರವಲ್ಲದೆ ಮಂಜುನಾಥನ ಗರ್ಭಗುಡಿಯಲ್ಲಿ ಲಿಂಗದ ಬಳಿ ವಿಷ್ಣು ಪ್ರತೀಕವಾದ ನೃಸಿಂಹ ಸಾಲಿಗ್ರಾಮವನ್ನೂ ವಾದಿರಾಜರು ಇಟ್ಟರೆಂದು ಪ್ರತೀತಿಯಿದೆ. ಈ ಸಾಲಿಗ್ರಾಮವನ್ನು ಇಂದಿಗೂ ಕಾಣಬಹುದು.

ಇಷ್ಟಾಗಿ ವಾದಿರಾಜರೇ ಶಿವಲಿಂಗವನ್ನು ತಂದರೆಂದಾಗಲೀ ತರಿಸಿದರೆಂದಾಗಲಿ ಐತಿಹ್ಯ ಹೇಳುವುದಿಲ್ಲ. ಶಿವಲಿಂಗ ಅಲ್ಲಿಗೆ ಬಂದುದು ದೈವಗಳಸಾಹಸದಿಂದ. ದೂರದ ಮಂಗಳೂರಿನಿಂದ ಅದನ್ನು ಹೊತ್ತು ತಂದವನು ಅಣ್ಣಪ್ಪ ಭೂತ. ಅಣ್ಣಪ್ಪ ಭೂತ ಕುಡುಮದ ದೈವಗಳ ಬಂಟ; ನೆಲ್ಯಾಡಿ ಬೀಡಿನ ಹೆಗ್ಗಡೆಯೇ

ತರಿಸಿದನೆಂದರೆ ತಪ್ಪಾಗುವುದಿಲ್ಲ. ದೈವಗಳೇನು ಅವನೇನು ಬೇರೆಯಲ್ಲವಷ್ಟೆ. ಗುಡಿಯನ್ನು ಕಟ್ಟಿಸಿದವನೂ ಹೆಗ್ಗಡೆಯೇ. ವಾದಿರಾಜರು ನಿದ್ರೆಯಿಂದ ಏಳುವ ವೇಳೆಗೆ ಗುಡಿಯೂ ಸಿದ್ಧವಾಗಿದ್ದಿತು, ಶಿವಲಿಂಗವೂ ಬಂದಿದ್ದಿತು. ಪ್ರತಿಷ್ಠೆ ಮಾಡುವುದಷ್ಟೇ ಅವರಿಗೆ ಉಳಿದಿದ್ದ ಕೆಲಸ. ಈ ಪ್ರತೀತಿಯಲ್ಲಿ ಅಸಂಭವವಾದುದು ಏನೂ ಕಾಣುವುದಿಲ್ಲ. ವಾದಿರಾಜರ ಕಾಲದಲ್ಲಿಯೇ ಅವರ ನೇತೃತ್ವದಲ್ಲಿಯೇ ಧರ್ಮಸ್ಥಳದ ಮಂಜುನಾಥ ದೇವಾಲಯ ಮೈದಳೆಯಿತೆಂದು ಹೇಳಬಹುದು.

ಮಂಜುನಾಥ

ಧರ್ಮಸ್ಥಳದ ದೇವರಿಗೆ ಮಂಜುನಾಥ ಎಂಬ ಹೆಸರು ಹೇಗೆ ಬಂದಿತೆಂದು ಮಂಜೇಶ್ವರದ ಗೋವಿಂದ ಪೈಗಳು ಸಾಕಷ್ಟು ಕೂಲಂಕಷವಾಗಿ ಸಮಾಲೋಚನೆ ನಡೆಸಿದ್ದಾರೆ. ಶಿವನಿಗೆ ಮಂಜುನಾಥನೆನ್ನುವ ಹೆಸರೇನೋ ವಿಚಿತ್ರವಾದುದೇ. ಆ ಹೆಸರು ಬಳಕೆಯಲ್ಲಿರುವ ಶಿವನಾಮಾವಳಿಯಲ್ಲಿ ಸೇರುವುದಿಲ್ಲ; ನಮ್ಮ ದೇಶದಲ್ಲಿರುವ ಮಂಜುನಾಥ ಕ್ಷೇತ್ರಗಳು ಎರಡೇ. ಒಂದು ಧರ್ಮಸ್ಥಳ ಇನ್ನೊಂದು ಮಂಗಳೂರು ಕದರಿ. ಧರ್ಮಸ್ಥಳಕ್ಕೆ ಕದರಿಯೇ ಮೂಲ ಎಂದು ಪ್ರತೀತಿ ಒಪ್ಪಿಕೊಳ್ಳುತ್ತದೆ. ಇಲ್ಲಿನ ಲಿಂಗ ಅಲ್ಲಿಂದಲೇ ಬಂದುದು. ಕದರಿ ಒಂದು ಕಾಲಕ್ಕೆ ಮಹಾಯಾನ ಪಂಥದ ಬೌದ್ಧ ವಿಹಾರವಾಗಿದ್ದಿತು. ಇದರಲ್ಲಿ ಏನು ಸಂದೇಹವೂ ಇಲ್ಲ. ಅಲ್ಲಿ ಪೂಜೆ ಪಡೆಯುತ್ತಿದ್ದ ಬೋಧಿಸತ್ತ್ವನ ಹೆಸರು ಮಂಜುಶ್ರೀ. ಈ ಬೋಧಿಸತ್ತ್ವನ ಪ್ರತೀಕವೂ ಉಳಿದು ಬಂದಿದೆ. ಕ್ರಿಸ್ತಾಬ್ದ ಏಳನೆಯ ಶತಮಾನದ ಸುಮಾರಿಗೆ ಈ ಕಡೆ ಬೌದ್ಧ ಧರ್ಮ ಬಳಕೆಯಿಂದ ಜಾರಿದಾಗ ಈ ವಿಹಾರವೂ ಪಾಳುಬಿದ್ದಿತು ಎಂದೂ ಮುಂದೆ ನಾಥಪಂಥದ ಮತ್ಸ್ಯೇಂದ್ರನಾಥನು ಇಲ್ಲಿಗೆ ಬಂದು ಮಂಜುಶ್ರೀ ಬೋಧಿಸತ್ತ್ವನಿದ್ದೆಡೆ ಶಿವಲಿಂಗವೊಂದನ್ನು ಸ್ಥಾಪಿಸಿ ಅದನ್ನು ಮಂಜುನಾಥನೆಂದೇ ಕರೆದನೆಂದೂ ಗೋವಿಂದ ಪೈಗಳ ಎಣಿಕೆ. ಇದನ್ನು ಅವರು ಸಂಶಯಕ್ಕೆ ಎಡೆಯಿಲ್ಲದಂತೆ ಸಮರ್ಥಿಸಿದ್ದಾರೆ.

ಮಂಜುನಾಥನ ದೇವಾಲಯದಲ್ಲಿ ಎರಡು ಗರ್ಭಗುಡಿಗಳಿವೆ. ಒಂದರಲ್ಲಿ ಮಂಜುನಾಥನ ಶಿವಲಿಂಗವಷ್ಟೇ ಇದೆ. ಇನ್ನೊಂದರಲ್ಲಿ ಮೇಲೆ ಕಾಣಿಸಿದ

ನಾಲ್ಕು ದೈವಗಳ ಲೋಹ ಮೂರ್ತಿಗಳಿವೆ; ಇವಲ್ಲದೆ ಒಂದು ಉತ್ಸವ ಮೂರ್ತಿಯೂ ಇದೆ. ಈ ಗರ್ಭಗುಡಿಯನ್ನು 'ಅಮ್ಮನವರ ಗುಡಿ' ಎಂದು ಕರೆಯುವುದು ವಾಡಿಕೆ. ಇಲ್ಲಿ ಅಮ್ಮನವರೆಂದರೆ ಕನ್ಯಾಕುಮಾರಿ ದೈವ ಈ ಕನ್ಯಾಕುಮಾರಿಗೂ ಮಂಜುನಾಥನಿಗೂ ಏನೂ ಸಂಬಂಧವಿರುವಂತೆ ಕಾಣುವುದಿಲ್ಲ. ಇದೇನು ಪಾರ್ವತಿಯ ರೂಪ ಇದ್ದಂತಿಲ್ಲ. ಸಾಮಾನ್ಯವಾಗಿ ಶಿವಾಲಯಗಳಲ್ಲಿ ಅಮ್ಮನವರ ಸನ್ನಿಧಿಯೆಂದರೆ ಪಾರ್ವತಿಯ ಗುಡಿ. ಇಲ್ಲಿ ಹಾಗಿಲ್ಲದಿರುವುದು ಸ್ವಾರಸ್ಯ.

ಕೆಲವರು, ಮಂಜುನಾಥನೆನಿಸಿಕೊಳ್ಳುವ ಶಿವ ಸಾಮಾನ್ಯವಾಗಿ ಆರ್ಯ-ಸಂಸ್ಕೃತಿಯ ಪ್ರಭಾವವನ್ನು ತಳೆದ ಶಿವಾಲಯಗಳ ಶಿವನಲ್ಲವೆಂದೂ, ಇಲ್ಲಿಯ ಶಿವನು ಜೈನರ ಹನ್ನೊಂದನೆಯ ತೀರ್ಥಂಕರನಾದ, ಶ್ರೇಯಾಂಸನ ಯಕ್ಷನಾದ ಈಶ್ವರನೆಂದೂ ಅಮ್ಮನವರು ಅದೇ ತೀರ್ಥಂಕರನ ಯಕ್ಷಿಣಿಯಾದ ಗೌರಿಯೆಂದೂ ವಿವರಿಸಿದ್ದಾರೆ. ಈ ವಿವರಣೆಯಲ್ಲಿ ಹುರುಳಿಲ್ಲ. ತೀರ್ಥಂಕರರ ಯಕ್ಷ–ಯಕ್ಷಿಣಿಯರಿಗೆ ಪ್ರತ್ಯೇಕವಾದ, ಇಷ್ಟು ವಿಶಿಷ್ಟವಾದ ಪೂಜೆ ನಡೆಯುವ ನಿದರ್ಶನ ಎಲ್ಲಿಯೂ ಇಲ್ಲ. ಜೈನರು ಶಿವ-ಗೌರಿಯರನ್ನು ಈ ಹಿನ್ನೆಲೆಯಲ್ಲಿ ಆರಾಧಿಸುವ ವಾಡಿಕೆಯೂ ಇಲ್ಲ. ಅದೂ ಅಲ್ಲದೆ ಧರ್ಮಸ್ಥಳದ ಬಸದಿಯಲ್ಲಿರುವ ತೀರ್ಥಂಕರ ಚಂದ್ರನಾಥ; ಶ್ರೇಯಾಂಸನಿಗೂ ಧರ್ಮಸ್ಥಳಕ್ಕೂ ಯಾವ ಸಂಬಂಧವೂ ಕಾಣುವುದಿಲ್ಲ.

ಪ್ರಭಾವಶಾಲಿ ದೇವತೆ

ಮಂಜುನಾಥ ದೇವಾಲಯದಿಂದ ಒಂದು ಮೈಲಿ ದೂರದಲ್ಲಿ ಉಳ್ಳಾಳ್ತಿ ಗುಡಿಯೊಂದಿದೆ. ನಾಲ್ಕು ದೈವಗಳಲ್ಲಿ ಈಕೆಯೊಂದು ಎಂದು ಹೇಳುತ್ತಾರೆ. ಈ ಉಳ್ಳಾಳ್ತಿಯನ್ನೇ ಮಂಜುನಾಥಾಲಯದ ಅಮ್ಮನವರ ಗುಡಿಯಲ್ಲಿ ಪೂಜೆ ಮಾಡುತ್ತಾರೆಂದೂ, ಉಳ್ಳಾಳ್ತಿಯೇ ಅಮ್ಮನವರೆಂದೂ ಒಂದು ಅಭಿಪ್ರಾಯವಿದೆ. ಚಂದ್ರನಾಥ ಬಸದಿಯಲ್ಲಿ ಚಂದ್ರನಾಥ ತೀರ್ಥಂಕರನನ್ನಲ್ಲದೆ ದೈವಗಳ ಕುಂಭವೊಂದನ್ನೂ ಇರಿಸಿ ಪೂಜೆ ಮಾಡುತ್ತಾರೆ. ಇದರಲ್ಲಿ ಅಮ್ಮನವರ ಸನ್ನಿಧಿಯೂ ಇದೆಯೆಂದು ನಂಬಿಕೆ. ಅಮ್ಮನವರು ದೈವಗಳ ನುಡಿಕಟ್ಟಿನಲ್ಲಿ ಕೂಡ ಕನ್ಯಾಕುಮಾರಿಯೆಂದೇ ಕಾಣಿಸಿಕೊಳ್ಳುತ್ತಾರೆ.

ಮಂಜುನಾಥಾಲಯದ ಅಮ್ಮನವರು ತುಂಬ ಪುರಾತನವಾದ, ಒಂದು ಕಾಲಕ್ಕೆ ತುಂಬ ಪ್ರಭಾವಶಾಲಿಯಾಗಿದ್ದ ದೇವತೆಯೆಂದು ತೋರುತ್ತದೆ. ಮಂಜುನಾಥನು ಕುಡುಮಕ್ಕೆ ಬರುವ ಮೊದಲೇ ಆಕೆ ಅಲ್ಲಿ ನೆಲೆಸಿದ್ದಳೆಂದು ಹೇಳಬಹುದು. ತುಳುನಾಡಿನ ಹೆಣ್ಣುದೈವಗಳಲ್ಲಿ ಉಳ್ಳಾಳ್ತಿ ಒಬ್ಬಳು; ಮುಖ್ಯಳಾದವಳೇ. ಧರ್ಮಸ್ಥಳದಲ್ಲಿ ಈ ದೈವಕ್ಕೂ ನೆಲ್ಯಾಡಿ ಬೀಡಿನ ಮನೆತನದ ಹಿರಿಯಳಾದ ಅಮ್ಮು ಬಲ್ಲಾಳ್ತಿಗೆ ಏನಾದರೂ ಸಂಬಂಧವಿದ್ದಿತೋ ತಿಳಿಯದು. ಈ ಉಳ್ಳಾಳ್ತಿಯ ಮುಂದಿನ ರೂಪವೇ ಕನ್ಯಾಕುಮಾರಿಯೋ ಏನೋ ?

ಹೆಗ್ಗಡೆಗೆ ಪಟ್ಟಾಭಿಷೇಕವಾಗುವಾಗ ನೆಲ್ಯಾಡಿ ಬೀಡಿನಲ್ಲಿ ಪಾತ್ರಿಗಳಿಬ್ಬರೂ (ಕಾಳರಾಹು, ಕುಮಾರಸ್ವಾಮಿ ದೈವಗಳನ್ನು ಪ್ರತಿನಿಧಿಸಿ) ಹೆಗ್ಗಡೆಯವರ ಕೈ ಹಿಡಿದು ಅವರನ್ನು ಅಮ್ಮನವರ (ಎಂದರೆ ಕನ್ಯಾಕುಮಾರಿಯ) ಮಂಚದ ಮೇಲೆ ಕೂರಿಸುತ್ತಾರೆ. ಅಲ್ಲಿನ ವಿಧಿಗಳೆಲ್ಲ ಮುಗಿದನಂತರ ಹೆಗ್ಗಡೆಯವರನ್ನು ಉತ್ಸವದಲ್ಲಿ ಮಂಜುನಾಥನ ಗುಡಿಗೆ ಕರೆತಂದಾಗ, ಅವರು ಮೊದಲು ಬರುವುದು ಅಮ್ಮನವರ ಗುಡಿಗೆ; ಅಮ್ಮನವರನ್ನು ತಾವೇ ಹೂಗಳಿಂದ ಪೂಜೆ ಮಾಡಿದ ಮೇಲೆ ಮಂಜುನಾಥ ಸ್ವಾಮಿಯ ದರ್ಶನಕ್ಕೆ ಹೋಗುತ್ತಾರೆ. ನಾಲ್ವಿಕರು, ಅರ್ಚಕರು, ಪರಿಚಾರಕರು ಮೊದಲಾದವರು ಹೆಗ್ಗಡೆಯವರ ಸಮ್ಮುಖದಲ್ಲಿ "ತಮ್ಮ ಅನುಜ್ಞೆ ಮೇರೆಗೆ ಶುದ್ಧ ಮುದ್ರಿಕೆಯಲ್ಲಿ ತಾವು ಆಜ್ಞಾಪಿಸುವ ದೇವತಾ ಕೆಲಸಗಳನ್ನು ಸರಿಯಾಗಿ ಮಾಡಿಕೊಂಡು ಬಂದೇವು" ಎಂದು ಪ್ರತಿಜ್ಞೆ ಮಾಡುವ ಪದ್ಧತಿಯಿದೆ. ಇದು ನಡೆಯುವುದು ಅಮ್ಮನವರ ಗುಡಿಯ ಮುಂದೆ. ಆಗ ಹೆಗ್ಗಡೆಯವರು ಅಮ್ಮನವರ ಸನ್ನಿಧಿಯಲ್ಲಿ ನಿಂತಿರುತ್ತಾರೆ. ಪ್ರತಿಜ್ಞೆ ಮಾಡಿದವರು ಅಡ್ಡಬಿದ್ದು ನಮಸ್ಕಾರ ಮಾಡುತ್ತಾರೆ. ಒಂದೇ ಬಾರಿಗೆ ಹೆಗ್ಗಡೆಗೂ ಅಮ್ಮನವರಿಗೂ ಈ ನಮಸ್ಕಾರ ಸಲ್ಲುವಂತೆ ಮಾಡುವ ವಾಡಿಕೆಯಿದೆ.

ಹೆಗ್ಗಡೆಯ ಪಾತ್ರ

ಈ ವಿಧಿಗಳಿಂದ ಸ್ಪಷ್ಟವಾಗುವ ಅಂಶವೆಂದರೆ ಹೆಗ್ಗಡೆಗೂ, ದೈವಗಳಿಗೂ ಅದರಲ್ಲಿಯೂ ಅಮ್ಮನವರಿಗೂ ಇರುವ ವಿಶೇಷ ಸಂಬಂಧ; ತಾದಾತ್ಮ್ಯವೂ ಇದರಲ್ಲಿ ಧ್ವನಿತವಾಗಬಹುದು. ಹೆಗ್ಗಡೆಗೆ ಹೆತ್ತ ತಾಯಿ ಬೇರೆ ಇದ್ದರೂ ಸಾಕುವ ತಾಯಿ ದೈವಗಳೇ ಎಂದು ಇಲ್ಲಿನ ನಂಬಿಕೆ. ಹೆಗ್ಗಡೆಯು ಪಟ್ಟ

ವನ್ನೇರಿದ ನಂತರ ತನ್ನ ಮೊದಲಿನ ಮನೆಯೊಂದಿಗೆ ಸಾಮಾನ್ಯವಾದ ಸಂಬಂಧ ವನ್ನು ಇರಿಸಿಕೊಳ್ಳುವುದಿಲ್ಲ; ದೈವಗಳ ಪ್ರತಿನಿಧಿಯೆಂದೂ, ಮೂರ್ತರೂಪ ವೆಂದೂ ಸಿದ್ಧವಾದ ಬಳಿಕ ಹೆಗ್ಗಡೆಯ ವ್ಯಕ್ತಿತ್ವದಲ್ಲಿ ಮಾರ್ಪಾಟಾಗುವುದು ಸಹಜ ತಾನೆ? ತನ್ನ ಮೊದಲಿನ ಮನೆತನದ ಅಥವಾ ನಂತರ ಆಸ್ತಿಪಾಸ್ತಿಯ ಮೇಲೆ ಪಟ್ಟವಾದ ಹೆಗ್ಗಡೆಗೆ ಹಕ್ಕಿರುವುದಿಲ್ಲ. ತನ್ನದೇ ಆದ ಸ್ವಂತ ಆಸ್ತಿ ಹೆಗ್ಗಡೆಗಿರದೆ ಧರ್ಮಸ್ಥಳದ ಎಲ್ಲ ಆಸ್ತಿಯೂ ಅವರದೇ ಆಗಿರುತ್ತದೆ ; ಈ ವಿಚಾರದಲ್ಲಿ ಹೆಗ್ಗಡೆ ಸರ್ವತಂತ್ರ ಸ್ವತಂತ್ರ. ಹೆಗ್ಗಡೆಯ ಆಸ್ತಿಯೆಲ್ಲ ದೈವದ ಸೊತ್ತೇ. ದೈವದ ಸೊತ್ತೆಲ್ಲ ಹೆಗ್ಗಡೆಯದೇ. ಇಬ್ಬರ ನಡುವೆ ಭೇದವೇನೂ ವ್ಯವಹಾರದಲ್ಲಿ ಕಾಣಬರುವುದಿಲ್ಲ.

ನಡಾವಳಿಯ ಸಂದರ್ಭದಲ್ಲಿ ದೈವಗಳ ಜಾಗದಲ್ಲಿ ಹೆಗ್ಗಡೆಯೇ ಕೂರ ಬೇಕೆನ್ನುವ ನಿಯಮವಿದೆ. ಮಹಾಲಯದಂದು ನೆಲ್ಯಾಡಿ ಬೀಡಿನಲ್ಲಿ ಹೆಗ್ಗಡೆಯು ತಾನೇ ಕೈಯಾರೆ ಪರಮಾನ್ನವನ್ನು ಮಾಡಿ ದೈವಗಳಿಗೂ ತನ್ನ ಪಿತೃದೇವತೆ ಗಳಿಗೂ ಎಡೆಯಿಡಬೇಕೆನ್ನುವ ನಿಯಮವೂ ಇದೆ. ಅದನ್ನು ಬೇರೆ ಯಾರೂ ಮಾಡುವ ಹಾಗಿಲ್ಲ. ಯಾವುದಾದರೂ ಕಾರಣದಿಂದ ಹೆಗ್ಗಡೆಗೆ ಇದನ್ನು ಮಾಡುವುದಾಗದಿದ್ದರೆ, ಅವನು ಮಾಡುವವರೆಗೆ ಇದು ನಡೆಯುವುದೇ ಇಲ್ಲ. ಹೆಗ್ಗಡೆಗೆ ಆಶೌಚ ಒದಗಿದಾಗ ಅದು ನಿವೃತ್ತಿಯಾಗುವವರೆಗೂ ಮಂಜುನಾಥನ ಗುಡಿಯಲ್ಲಿ ಪೂಜೆ ನಡೆಯುವುದಿಲ್ಲ. ಹೆಗ್ಗಡೆ ತೀರಿಕೊಂಡಾಗಕೂಡ ಶವ ಸಂಸ್ಕಾರವಾಗುವವರೆಗೂ ಧರ್ಮಸ್ಥಳದ ಎಲ್ಲ ಗುಡಿಗಳಲ್ಲಿಯೂ ಪೂಜೆ ನಿಲ್ಲು ತ್ತದೆ. ಹನ್ನೆರಡನೆಯ ದಿನದಂದು ಗುಡಿಗಳಲ್ಲಿ ಶುದ್ಧಿಯ ವಿಧಿಯನ್ನೂ ನಡೆ ಸುವ ವಾಡಿಕೆಯಿದೆ.

ಧರ್ಮಸ್ಥಳದ ಸಂಸ್ಥೆಗಳಲ್ಲಿ ಹೆಗ್ಗಡೆ ಬರಿಯ ಧರ್ಮದರ್ಶಿಯಂತೆ ಅಥವಾ ವಿಚಾರಣಕರ್ತನಂತೆ ಕೆಲಸ ಮಾಡುವುದಿಲ್ಲ ಎನ್ನುವುದು ಈ ವಿವರ ಗಳಿಂದ ಸ್ಪಷ್ಟವಾಗುತ್ತದೆ. ಅಲ್ಲಿ ಹೆಗ್ಗಡೆಯದು ವಿಶೇಷವಾದ ಪಾತ್ರ. ದೇವಾ ಲಯದ ವ್ಯವಸ್ಥೆಯಲ್ಲಿ ನಾಲ್ವಿಕರೆನಿಸಿಕೊಳ್ಳುವ ಇತರ ನಾಲ್ವರು ಅಧಿಕಾರಿಗಳಿರು ವುದು ನಿಜ. ದೈವಗಳ ನುಡಿಕಟ್ಟಿನಲ್ಲಿ "ಪೇರ್ಗಡೆಯೂ ನಾಲ್ವರೂ ಒಮ್ಮನ

ದಿಂದ..." ಎಂಬರ್ಥದ ಮಾತೂ ಬರುತ್ತದೆ. ದೇಲಂಪಾಡಿ (ಶಿವಳ್ಳಿ ಬ್ರಾಹ್ಮಣ), ಕೋಟ್ಯಣ್ಣ (ಜೈನ) ಎಂಬಿಬ್ಬರು ಪಾತ್ರಿಗಳು, ಅಜ್ರಿ (ಬಂಟ), ಮನೋಳಿತ್ತಾಯ (ಶಿವಳ್ಳಿ) ಎಂಬ ಪರಿಚಾರಕರಿಬ್ಬರು, ಇವರೇ ಈ ನಾಲ್ವರು; ಇವರೊಂದಿಗೆ ಕಂಬ್ಳಿ ಬಂಟ ಎನ್ನುವ ಪರಿಚಾರಕನನ್ನೂ ಸೇರಿಸುವುದುಂಟು. ಆದರೆ ಇವರೆಲ್ಲ ಸೇವಕರು. ಹೆಗ್ಗಡೆಯೇ ಯಜಮಾನ.

ಮೊದಲ ಇಬ್ಬರು ದೈವಗಳ ಪಾತ್ರಿಗಳಾದುದರಿಂದ ಅವರಿಗೆ ಅಲ್ಲಿ ಸ್ವಲ್ಪ ಪ್ರಾಶಾಸ್ತ್ಯವಿದೆ. ಹೆಗ್ಗಡೆ ಊರಲ್ಲಿಲ್ಲದಾಗ, ಮನೋಳಿತ್ತಾಯನಾಗಲೀ, ಇನ್ನೊಬ್ಬನಾಗಲೀ, ಭಕ್ತರು ಸಲ್ಲಿಸುವ ಕಾಣಿಕೆಗಳನ್ನು ನೋಡಿಕೊಳ್ಳುತ್ತಾರೆ. ಗುಡಿಯಲ್ಲಿ ದೀಪ ಹಚ್ಚುವುದು, ಅಣ್ಣಪ್ಪನ ಪೂಜೆ ನೋಡಿಕೊಳ್ಳುವುದು ಈ ಮೊದಲಾದ ಕೆಲಸಗಳೇ ಇವರ ಪಾಲಿಗೆ ಬರುವುದು. ಮೊದಲಿಗೆ ಈ ನಾಲ್ವರೂ ತಲೆಮಾರುಗಳಿಂದ ತಂತಮ್ಮ ಕೆಲಸಗಳನ್ನು ನಿರ್ವಹಿಸುತ್ತಿದ್ದರು; ಅವರ ಹುದ್ದೆ ಆನುವಂಶಿಕವಾಗಿ ಬರುತ್ತಿದ್ದಿತು. ಈಚೆಗೆ ಅವರನ್ನು ಹೆಗ್ಗಡೆಯೇ ನೇಮಕ ಮಾಡುತ್ತಾರೆ; ಅವರ ಆಜ್ಞಾನುವರ್ತಿಗಳಾಗಿಯೇ ಈ ನಾಲ್ವರೂ ಕೆಲಸ ಮಾಡಬೇಕೆಂಬ ಕಟ್ಟಳೆ ಹಿಂದಿನಿಂದ ಬಂದಿದೆ. ಈ ಹುದ್ದೆಗಳು ಇದ್ದೇ ತೀರ ಬೇಕೆಂಬ ನಿಯಮವೂ ಇಲ್ಲ. ಎಂದ ಮೇಲೆ, ಧರ್ಮಸ್ಥಳದಲ್ಲಿ ಹೆಗ್ಗಡೆಯೇ ಸರ್ವಾಧಿಕಾರಿ; ಅವರಿಗೆ ಸಮನಾದ ಅಥವಾ ಎದುರಾದ ಅಧಿಕಾರ ಅಲ್ಲಿ ಯಾರಿಗೂ ಇಲ್ಲ. ಅವರೇ ಮಾತನಾಡುವ ದೈವವೆಂದು ಪ್ರತೀತಿಯಿದೆ.

ಇದು ಧರ್ಮಸ್ಥಳಕ್ಕೆ ವಿಶೇಷವಾದ ವಿವರ. ಪ್ರಖ್ಯಾತವಾದ ಬೇರೆ ಯಾವ ದೇವಾಲಯದಲ್ಲೂ ಮನುಷ್ಯನೊಬ್ಬನನ್ನು ದೈವಗಳ ಪ್ರತಿನಿಧಿಯೆಂದು ಬಗೆದು ಅವನಲ್ಲಿ ಇಷ್ಟೊಂದು ಅಧಿಕಾರವನ್ನು ಬಿಟ್ಟಿರುವ ನಿದರ್ಶನವಿಲ್ಲ ಇದಕ್ಕೆ ವಿವರಣೆ ಬೇಕೆಂದರೆ ಆ ಪ್ರದೇಶದಲ್ಲಿ ಒಂದು ಕಾಲಕ್ಕೆ ಬಳಕೆಯಲ್ಲಿದ್ದ ಸಾಮಾಜಿಕ ಪದ್ಧತಿಗಳನ್ನೂ ಧಾರ್ಮಿಕ ಕಲ್ಪನೆಗಳನ್ನೂ ಪರಿಶೀಲಿಸಬೇಕು ಹೆಗ್ಗಡೆಯ ಹುದ್ದೆ ಬೆಳೆದು ಬಂದ ಬಗೆಯನ್ನೂ ನೋಡಬೇಕು. ಇಷ್ಟು ಮಾತ ಸ್ಪಷ್ಟವಾಗಿದೆ. ಧರ್ಮಸ್ಥಳದಲ್ಲಿ ಮೊದಲಿದ್ದುದು ದೈವಗಳೇ. ಅವುಗಳಲ್ಲಿ ಹೆಣ್ಣು ದೈವದ ಅಮ್ಮನವರ) ಅಗ್ಗಳಿಕೆಯೇ ಇದ್ದಿತು. ಕಾಲಕ್ರಮದಲ್ಲಿ

ಆರ್ಯ ಸಂಸ್ಕೃತಿಯ ಸಂಪರ್ಕದಿಂದಾಗಿ ಜೈನ ಧರ್ಮ ಬೇರೂರಿತು. ಶಿವಪೂಜೆ ಮೂಡಿಕೊಂಡಿತು; ಈಗ ಈ ಶಿವಲಿಂಗದ ಪೂಜೆಯೇ ಮುಖ್ಯವಾಗಿ ಜೈನರ ಧರ್ಮವೂ ದೈವಗಳ ಪೂಜೆಯೂ ಸ್ವಲ್ಪ ಹಿಂದಕ್ಕೆ ಬಿದ್ದಿವೆ. ಈ ಪರಿವರ್ತನೆಗಳಲ್ಲೆಲ್ಲ ಹೆಗ್ಗಡೆಯೇ ಮುಖ್ಯ ಪಾತ್ರ ವಹಿಸಿದ್ದಾರೆ. ಅವರ ಹಿಡಿತವೇನೂ ಸಡಿಲವಾಗಲಿಲ್ಲ.

ಅವರ ಆಡಳಿತ

ಧರ್ಮಸ್ಥಳದ ಯಜಮಾನ್ಯವನ್ನು ನೆಲ್ಯಾಡಿ ಬೀಡಿನ ಹೆಗ್ಗಡೆಯವರು ಎಂದಿನಿಂದ ವಹಿಸಿಕೊಂಡಿದ್ದಾರೆ? ಐತಿಹ್ಯವೇನೋ ಕುಡುಮ ಧರ್ಮಸ್ಥಳವಾದುದು ಅವರಿಂದಲೇ, ಮೊಟ್ಟಮೊದಲಿನಿಂದ ಅವರೇ ಯಜಮಾನರು ಎಂದು ಹೇಳುತ್ತದೆ. ನೆಲ್ಯಾಡಿ ಬೀಡಿನ ಯಜಮಾನರು ದೈವಗಳಿಗೆ ಆಶ್ರಯ ಕೊಟ್ಟಂದಿನಿಂದಲೇ ಅವರ ಮಾತು ಅಲ್ಲಿ ನಡೆಯುತ್ತ ಬಂದಿದೆ ಎಂದು ನಂಬಿಕೆ. ಆದರೆ ಈ ಮನೆತನ ಎಷ್ಟು ಹಳೆಯದು? ಜೈನಹೆಗ್ಗಡೆಗಳಲ್ಲಿ ಒಂದು ಪದ್ಧತಿ ಇದೆಯಂತೆ. ಮನೆಯ ಯಜಮಾನ ತೀರಿಕೊಂಡಾಗ ಒಂದು ತುಂಡು ಬಟ್ಟೆಯನ್ನು ಮನೆಯವರು ಉಳಿಸಿಕೊಂಡು ಕಾಪಾಡಿಕೊಂಡು ಬರುತ್ತಾರಂತೆ. ಈಗಿನ ಹೆಗ್ಗಡೆಯ ಹಿಂದೆ ಹೆಗ್ಗಡೆಯಾಗಿದ್ದ ಮಂಜಯ್ಯನವರ ಕಾಲದಲ್ಲಿ ಇಂಥ ತುಂಡುಗಳು ಅರವತ್ತು ಇದ್ದುವಂತೆ. ಒಬ್ಬ ಹೆಗ್ಗಡೆಯ ಪಟ್ಟ ಸರಾಸರಿ ಹದಿನೈದು ವರ್ಷಗಳು ಎಂದಿಟ್ಟುಕೊಂಡರೂ ಈ ಮನೆತನ 900 ವರ್ಷಗಳಷ್ಟು ಹಳೆಯದು ಎಂದಾಯಿತು. ಮನೆತನದ ಮೂಲ ವ್ಯಕ್ತಿಯ ಹೆಸರು ಅಮ್ಮು ಬಲ್ಲಾಳ್ತಿಯೆಂದು ಹೇಳುತ್ತಾರೆ. ಈಕೆ ಯಾವ ಕಾಲದವರೋ ತಿಳಿಯದು. ವಾದಿರಾಜ ತೀರ್ಥರ ಕಾಲದಲ್ಲಿದ್ದ ಯಜಮಾನರ ಹೆಸರೂ ಉಳಿದು ಬಂದಿಲ್ಲ; ಅವರೇ ಧರ್ಮಸ್ಥಳದ ಸಂಸ್ಥೆಗಳನ್ನು ಮಾಡಿದವರಷ್ಟೆ.

ಆದರೆ ಹೆಗ್ಗಡೆಗಳ ಇತಿಹಾಸದಲ್ಲಿ ಮೊಟ್ಟಮೊದಲು ಪ್ರಖ್ಯಾತಿಗೆ ಬಂದ ವ್ಯಕ್ತಿ ಕುಮಾರಯ್ಯ ಹೆಗ್ಗಡೆ. ಇವರ ಪಟ್ಟದ ಕಾಲ 1790 – 1830. ಮೊದಲು ಕೊಲೂರು ಬೀಡಿನವರೆಂದು, ಅನಂತರ ನೆಲ್ಯಾಡಿ ಬೀಡಿಗೆ ಸೇರಿದರೆಂದೂ ಹೇಳುತ್ತಾರೆ. ಇವರು ಮೈಸೂರು ಮಹಾರಾಜರಾಗಿದ್ದ ಮುಮ್ಮಡಿ

ಕೃಷ್ಣರಾಜ ಒಡೆಯರ ಸಮಕಾಲಿಕರೆಂದೂ, ಸ್ನೇಹಿತರೆಂದೂ, ಅವರ ಆಹ್ವಾನದ ಮೇಲೆ ಶ್ರೀರಂಗಪಟ್ಟಣಕ್ಕೆ ಬಂದಿದ್ದರೆಂದೂ ತಮ್ಮೊಂದಿಗೆ ದಶಾವತಾರ ಮೇಳಗಳನ್ನು ತಂದರೆಂದೂ ಪ್ರತೀತಿಗಳಿವೆ.

ಇವರ ಹಿಂದಿನ ಹೆಗ್ಗಡೆಯನ್ನು ಬಳ್ಳದ ಕೃಷ್ಣಪ್ಪ ನಾಯಕನೆಂಬ ಪಾಳ್ಯೇಗಾರನು ಕೊಂದು, ಧರ್ಮಸ್ಥಳದ ಆಸ್ತಿಯನ್ನೆಲ್ಲ ಲೂಟಿ ಮಾಡಿ, ಕಿನ್ನಿಂಪಾಡು ಎನ್ನುವ ಜೈನನನ್ನು ಹೆಗ್ಗಡೆಯಾಗಿ ನೇಮಿಸಿ ಹೋದನು. ಕೆಲವು ಕಾಲವಾದ ನಂತರ ಈ ಹಿಂದಿನ ಹೆಗ್ಗಡೆಯ ಸೋದರ ಮಾವ, ಸೂಳ್ಯದ ಬಲ್ಲಾಳ, ಟೀಪೂ ಸುಲ್ತಾನನಿಗೆ ಇದನ್ನು ಅರಿಕೆ ಮಾಡಿಕೊಂಡು ತನ್ನ ಇನ್ನೊಬ್ಬ ಸೋದರ ಅಳಿಯನಿಗೆ (ಕುಮಾರಯ್ಯನಿಗೆ) ಹೆಗ್ಗಡೆ ಪಟ್ಟವಾಗಲು ನೆರವಾಗಬೇಕೆಂದು ಬೇಡಿದ. ಆ ಕಾಲಕ್ಕೆ ಮೈಸೂರಿನ ಒಡೆತನವೆಲ್ಲ ಟೀಪೂಸುಲ್ತಾನನದಾಗಿದ್ದಿತು. ಮಂಗಳೂರು ಅವನ ರಾಜ್ಯದ ಮುಖ್ಯ ಪಟ್ಟಣವಾಗಿ ಇದ್ದಿತು; ಇಲ್ಲಿ ಟೀಪೂವಿನ ಆಜ್ಞಾಧಾರಕನಾದ ಒಬ್ಬ ಮುಸಲ್ಮಾನ ಅಮಲ್ದಾರನಿರುತ್ತಿದ್ದ. ಉಜ್ರೆಯ ಬಳಿ ಜಮಾಲಾಬಾದ್ ಎಂಬಲ್ಲಿ ಒಂದು ಕೋಟೆಯೂ ಟೀಪುವಿನ ವಶದಲ್ಲಿದ್ದಿತು. ಅಲ್ಲಿದ್ದ ಅಮಲ್ದಾರನ ಹೆಸರು ಲಾಲ್‌ಬೇಗ್ ಎಂದು. ಆ ಕಾಲದಲ್ಲಿ ಧರ್ಮಸ್ಥಳದ ಹೆಗ್ಗಡೆಗೂ ದೇಲಂಪಾಡಿ. ಅಜ್ರಿಬಂಟ, ಕಂಬ್ಳಿಬಂಟ ಈ ಮೂವರು ಅಧಿಕಾರಿಗಳಿಗೂ ನಡುವೆ ದೇವಾಲಯ ನಿರ್ವಹಣೆಯ ವಿಚಾರವಾಗಿ ವೈಮನಸ್ಯ ಒದಗಿದಾಗ ಈ ಲಾಲ್‌ಬೇಗ್ ತಾನೇ ಹೆಗ್ಗಡೆಯನ್ನು ಕರೆಸಿಕೊಂಡ. ಅವನಿಗೆ ಬುದ್ಧಿ ಹೇಳಿ, ದೇವಾಲಯುದ ನಿರ್ವಹಣೆಗಾಗಿ ಕೆಲವು ಕಟ್ಟಳೆಗಳನ್ನು ಹಾಕಿದ್ದನಂತೆ.

ಟೀಪೂಸುಲ್ತಾನನು ಮಂಗಳೂರಿಗೆ ಬಂದಿದ್ದಾಗಲೇ ಸೂಳ್ಯದ ಬಲ್ಲಾಳನು ಧರ್ಮಸ್ಥಳದ ಹೆಗ್ಗಡೆಯಾಗಿದ್ದ ಕಿನ್ನಿಂಪಾಡುವಿನ ಮೇಲೆ ದೂರು ತಂದುದು. ಆಗ ಟೀಪುವು ಕಿನ್ನಿಂಪಾಡುವನ್ನೂ, ಆಗಿನ ಮನೋಳಿತ್ತಾಯನನ್ನೂ ಸೂಳ್ಯದ ಬಲ್ಲಾಳನ ಸೋದರಳಿಯ ಕುಮಾರಯ್ಯ ಹೆಗ್ಗಡೆಯುನ್ನೂ ಶ್ರೀರಂಗಪಟ್ಟಣಕ್ಕೆ ಕರೆದುಕೊಂಡು ಹೋಗಿ ವಿಚಾರಣೆ ನಡೆಸಿದನು. ತನ್ನ ಸೋದರಳಿಯನನ್ನು ಹೆಗ್ಗಡೆಯ ಪಟ್ಟದಲ್ಲಿ ಕೂರಿಸಲು ಟೀಪು ನೆರವಾಗುವುದಾದರೆ ಅವನ ಸರ್ಕಾರಕ್ಕೆ ಹತ್ತು ಸಾವಿರ (ಆಗಿನ) ರೂಪಾಯಿಗಳನ್ನು ಕೊಡುವುದಾಗಿ ಸೂಳ್ಯದ ಬಲ್ಲಾಳ

ಹೇಳಿದನು. ಟೀಪು ಒಪ್ಪಿಕೊಂಡು ಮಂಗಳೂರಿನ ಅಮಲ್ದಾರನಿಗೆ ಒಂದು ಪರವಾನಿಗೆಯನ್ನು ಕಳುಹಿಸಿ, ಹತ್ತು ಸಾವಿರ ರೂಪಾಯಿಗಳು ಸಂದನಂತರ ಬಲ್ಲಾಳನ ಸೋದರಳಿಯನಿಗೆ ಹೆಗ್ಗಡೆ ಪಟ್ಟ ಕಟ್ಟತಕ್ಕದ್ದೆಂದೂ, ಅಕ್ರಮದಿಂದ ಹೆಗ್ಗಡೆಯಾಗಿದ್ದ ಕಿನ್ನುಂಪಾಡುವನ್ನು ಬಲ್ಲಾಳನ ವಶಕ್ಕೆ ಒಪ್ಪಿಸತಕ್ಕದೆಂದೂ ಅಪ್ಪಣೆ ಮಾಡಿದನು.

ಕಿನ್ನುಂಪಾಡು ತನ್ನ ವಶಕ್ಕೆ ಬಂದೊಡನೆಯೇ ಬಲ್ಲಾಳನು ಅವನನ್ನು ಸೆರೆಯಲ್ಲಿ ಇರಿಸಿದನು. ಆದರೆ ಕಿನ್ನುಂಪಾಡು ಸೆರೆಯಿಂದ ತಪ್ಪಿಸಿಕೊಂಡು ಓಡಿಹೋಗಲು, ಬಲ್ಲಾಳನು ಬೀರು ಎಂಬಾತನನ್ನು ಕಿನ್ನುಂಪಾಡುವನ್ನು ಹಿಡಿದು ತರಲು ಕಳುಹಿಸಿದನು. ಬೀರುವು ಕಿನ್ನುಂಪಾಡುವನ್ನೂ ಅವನ ಸೋದರಳಿಯನನ್ನೂ ಹಿಡಿದು ತಂದು ಬಲ್ಲಾಳನಿಗೆ ಒಪ್ಪಿಸಿದಾಗ, ಬಲ್ಲಾಳನು ಕಿನ್ನುಂಪಾಡುವಿಗೆ ಉಗ್ರವಾದ ಶಿಕ್ಷೆಯನ್ನು ವಿಧಿಸಿದನು. ಕಿನ್ನುಂಪಾಡು ಮಂಜುನಾಥಾಲಯವನ್ನು ನೋಡಿಕೊಳ್ಳುತ್ತಿದ್ದಾಗ ದೇವರ ಚಂದ್ರಪ್ರಭಾ ಎಂಬ ತುಂಬ ಬೆಲೆ ಬಾಳುವ ವಜ್ರಾಭರಣವೊಂದು ಕಣ್ಮರೆಯಾಗಿದ್ದಿತು. ಬಲ್ಲಾಳನ ಮುಂದೆ ಕಿನ್ನಂಪಾಡು ತಾನು ಇದನ್ನು ಒಯ್ದು ಗಟ್ಟದ ಮೇಲೆ ನಲವತ್ತು ಪಗೋಡ ಹಣಕ್ಕೆ ಮಾರಿದನೆಂದು ಒಪ್ಪಿಕೊಂಡನು.

ಬಲ್ಲಾಳನು ಅರವತ್ತು ಪಗೋಡ ಹಣವನ್ನು ಅವನ ಕೈಗೆ ಕೊಟ್ಟು ಅವನೊಂದಿಗೆ ಇಬ್ಬರ ಪಹರೆಯನ್ನೂ ಇಟ್ಟು ಆ ಚಂದ್ರಪ್ರಭಾ ಆಭರಣವನ್ನು ಹಿಂದಕ್ಕೆ ತರಲು ಕಳುಹಿಸಿದನು. ಆಭರಣವನ್ನೇನೋ ಹಿಂದಕ್ಕೆ ಪಡೆದು ಕಿನ್ನುಂಪಾಡು ತನ್ನ ಸೋದರಳಿಯನನ್ನು ಟೀಪುವಿನ ಬಳಿ ಕಳುಹಿಸಿ ಬಲ್ಲಾಳನು ಅನ್ಯಾಯವಾಗಿ ತನ್ನನ್ನು ಶಿಕ್ಷಿಸಿದನೆಂದು ದೂರಿಟ್ಟನು. ಈ ಸೋದರಳಿಯನು ಕಿನ್ನುಂಪಾಡುವನ್ನೇ ಹೆಗ್ಗಡೆಯಾಗಿ ಮಾಡುವುದಾದರೆ ಇಪ್ಪತ್ತು ಸಾವಿರ ರೂಪಾಯಿಗಳನ್ನು ಟೀಪುವಿಗೆ ಸಲ್ಲಿಸುವುದಾಗಿ ವಾಗ್ದಾನ ಮಾಡಿದನು.

ಹಣಕ್ಕೆ ಆಸೆಪಟ್ಟ ಸುಲ್ತಾನನು ಬಲ್ಲಾಳನನ್ನೂ, ಅವನ ಸೋದರಳಿಯ ಕುಮಾರಯ್ಯ ಹೆಗ್ಗಡೆಯನ್ನೂ, ಕಿನ್ನುಂಪಾಡುವನ್ನೂ, ಗುಡಿಯ ನಾಲ್ವಿಕರನ್ನೂ ಶ್ರೀರಂಗಪಟ್ಟಣಕ್ಕೆ ಕರೆಸಿಕೊಂಡು ಇವರೆಲ್ಲರನ್ನೂ ಆರು ತಿಂಗಳು ಸೆರೆಯಲ್ಲಿಡಿಸಿ

ಅನಂತರ ವಿಚಾರಣೆ ಆರಂಭಿಸಿದನು. ಬಲ್ಲಾಳನು ತಾನೇ ಇಪ್ಪತ್ತು ಸಾವಿರ ರೂಪಾಯಿಗಳನ್ನು ಸಲ್ಲಿಸುವುದಾಗಿ ಒಪ್ಪಿಕೊಂಡನು. ಆದರೆ ಕಿನ್ನುಂಪಾಡು ತಾನು ಹೆಗ್ಗಡೆಯಾದರೆ ಮೂವತ್ತು ಸಾವಿರ ಕೊಡುವುದಾಗಿ ಮುಂದೆ ಬಂದನು. ಚಾಣಾಕ್ಷನಾದ ಟೀಪು ಇಬ್ಬರನ್ನೂ ಇಷ್ಟು ಹಣವನ್ನು ಹೇಗೆ ಪಡೆಯುತ್ತೀರೆಂದು ಕೇಳಿ, ಅವರಿಗೆ ಹಣ ತೆರಬೇಕಾಗಿದ್ದ ವ್ಯಕ್ತಿಗಳ ಪಟ್ಟಿಯನ್ನು ಪಡೆದುಕೊಂಡು ಅದನ್ನು ಮಂಗಳೂರಿನ ಅಮಲ್ದಾರನಾಗಿದ್ದ ಮುಹಮ್ಮದ್ ಸಾಹೇಬನಿಗೆ ಕಳುಹಿಸಿ, ಈ ವ್ಯಕ್ತಿಗಳಿಂದ ಬರಬೇಕಾದ ಹಣವನ್ನೆಲ್ಲ ಪಡೆದುಕೊಳ್ಳತಕ್ಕದ್ದೆಂದೂ, ಮಾಮೂಲನ್ನು ತಿಳಿದುಕೊಂಡು, ಬಲ್ಲಾಳನ ಸೋದರ ಅಳಿಯನಿಗೆ ಹೆಗ್ಗಡೆ ಪಟ್ಟ ಕಟ್ಟತಕ್ಕದ್ದು ಎಂದೂ ನಿರೂಪ ಕಳುಹಿಸಿದನು.

ತಾನು ಧರ್ಮಸ್ಥಳದಿಂದ ಶ್ರೀರಂಗಪಟ್ಟಣಕ್ಕೆ ಕರೆಸಿಕೊಂಡವರನ್ನೆಲ್ಲ ಪಹರೆಯೊಂದಿಗೆ ಹಿಂದಕ್ಕೆ ಕಳುಹಿಸಿದನು. ದಾರಿಯಲ್ಲಿ ಬಲ್ಲಾಳನೂ, ಕಿನ್ನುಂಪಾಡುವೂ ಗುಡಿಯ ನಾಲ್ವಿಕರೂ ಶಿವಮೊಗ್ಗೆಯ ಬಳಿ ಸಿಡುಬು ಬೇನೆಗೆ ತುತ್ತಾಗಿ ತೀರಿಕೊಂಡರು. ಬಲ್ಲಾಳನ ಸೋದರಅಳಿಯ ಕುಮಾರಯ್ಯ ಹೆಗ್ಗಡೆಯೂ, ದೇಲಂಪಾಡಿಯೆಂಬ ಅಧಿಕಾರಿಯೂ ಇದರಿಂದ ಪಾರಾಗಿ ಬೇಗ ಬೇಗ ಮಂಗಳೂರನ್ನು ಮುಟ್ಟಿ ಟೀಪುವಿನ ನಿರೂಪವನ್ನು ಅಮಲ್ದಾರನಿಗೆ ಒಪ್ಪಿಸಿದರು. ಪಟ್ಟಿ ಮಾಡಿದ ವ್ಯಕ್ತಿಗಳಿಂದ ಅಮಲ್ದಾರನು ಹಣ ಪಡೆಯಬೇಕಾದರೆ ಒಂದು ವರ್ಷ ಹಿಡಿಯಿತು. ಹಣವೆಲ್ಲ ಬಂದನಂತರ ಕುಮಾರಯ್ಯನಿಗೆ ಧರ್ಮಸ್ಥಳದ ಹೆಗ್ಗಡೆ ಪಟ್ಟವಾಯಿತು.

ಕುಮಾರಯ್ಯ ಹೆಗ್ಗಡೆ ತುಂಬ ಸಾಹಸಿ, ರಸಿಕ, ವ್ಯವಹಾರಕುಶಲ, ಸಮರಶೂರ. ಆಂಗ್ಲರು ಆ ಪ್ರಾಂತ್ಯದಲ್ಲಿ ಬೇರೂರಲು ಈತ ನೆರವಾದನಂತೆ. ಈಸ್ಟ್ ಇಂಡಿಯಾ ಕಂಪೆನಿಯ ಅಧಿಕಾರಿಯಾಗಿದ್ದ ಗ್ರಾಮ್ ಎಂಬಾತ ಕುಮಾರಯ್ಯನ ವ್ಯಕ್ತಿತ್ವವನ್ನು ಬಾಯಿತುಂಬ ಹೊಗಳಿದ್ದಾನೆ. ಧರ್ಮಸ್ಥಳದ ಪ್ರಖ್ಯಾತಿ ಪ್ರಚಲಿತವಾದುದು ಅವನ ಕಾಲದಲ್ಲಿಯೇ ಎಂದರೆ ತಪ್ಪಲ್ಲ. ಆದರೆ ಕಾರಣಾಂತರದಿಂದ ಈತನು 1814 ರಿಂದ 1819ರವರೆಗೆ ಸೆರೆಮನೆಯಲ್ಲಿರಬೇಕಾಯಿತು. ಆ ಕಾಲದಲ್ಲಿ ಬಂಟ್ವಾಳದ ತಹಸಿಲ್ದಾರನೇ ಧರ್ಮಸ್ಥಳದ ಆದಾಯವನ್ನು ನೋಡಿಕೊಳ್ಳುತ್ತಿದ್ದನು.

ಕುಮಾರಯ್ಯ ಹೆಗ್ಗಡೆಗೆ ಮಕ್ಕಳಿಲ್ಲದೆ ಚಂದ್ರಯ್ಯ, ಮಂಜಯ್ಯ ಎಂಬಿಬ್ಬರು ಹುಡುಗರನ್ನು ನೆಲ್ಯಾಡಿ ಬೀಡಿಗೆ ದತ್ತು ತೆಗೆದುಕೊಂಡನು. ಕುಮಾರಯ್ಯನ ತರುವಾಯ 1830ರಲ್ಲಿ ಚಂದ್ರಯ್ಯನೇ ಪಟ್ಟಕ್ಕೆ ಬಂದನು. ಅವನು 1849 ರಲ್ಲಿ ತೀರಿಕೊಳ್ಳಲು ಮಂಜಯ್ಯನೇ ಪಟ್ಟಕ್ಕೆ ಬಂದು 1895 ರವರೆಗೂ ಧರ್ಮಸ್ಥಳವನ್ನು ಆಳಿದನು. ಚಂದ್ರಯ್ಯನಿಗೆ ಇಬ್ಬರು ಮಕ್ಕಳಿದ್ದರು. ಕುಮಾರಯ್ಯ, ಮಂಜಪ್ಪಯ್ಯ; ಮಂಜಯ್ಯ ಹೆಗ್ಗಡೆಯಾಗಿದ್ದಾಗ ಇವರಿಬ್ಬರೂ ಬದುಕಿದ್ದರು. ಆದರೆ ಮಂಜಯ್ಯ ತೀರಿಕೊಳ್ಳುವ ವೇಳೆಗೆ ಇವರೂ ತೀರಿಕೊಂಡಿದ್ದರು. ಕುಮಾರಯ್ಯನಿಗೆ ಲಕ್ಷ್ಮೀಮತಿಯೆಂಬ ಹೆಂಡತಿಯಿದ್ದಳು. ಇವರಿಗೆ ಧರ್ಮಪಾಲನೆಂಬ ಮಗನೂ ಇದ್ದನು. ಮಂಜಯ್ಯ ತೀರಿಕೊಂಡ ನಂತರ ಈ ಧರ್ಮಪಾಲನೇ ಹೆಗ್ಗಡೆ ಪಟ್ಟಕ್ಕೆ ಬಂದನು. ಆಗ ಅವನಿಗೆ ಮೂವತ್ತು ವರ್ಷವಷ್ಟೆ. ಆದರೆ ಧರ್ಮಪಾಲ ಬಹುಕಾಲ ಬದುಕಲಿಲ್ಲ. ಮರುವರ್ಷವೇ ತೀರಿಕೊಂಡನು; ತೀರಿಕೊಳ್ಳುವ ಮೊದಲು ಲಕ್ಷ್ಮೀಮತಿಯು ಪದ್ಧತಿಯಂತೆ ದತ್ತು ತೆಗೆದು ಕೊಳ್ಳಬೇಕೆಂದು ಸೂಚಿಸಿದನು. ಲಕ್ಷ್ಮೀಮತಿಯು ಚಂದ್ರಯ್ಯ, ಮಂಜಯ್ಯ ಎಂಬ ಇಬ್ಬರು ಹುಡುಗರನ್ನು ನೆಲ್ಯಾಡಿ ಬೀಡಿಗೆ ತಂದುಕೊಂಡಳು. ದತ್ತುಮಗನಾದ ಚಂದ್ರಯ್ಯ (ಆಗ ಹದಿಮೂರು ವರ್ಷ) ವಿಟ್ಲದ ಪದ್ಮಶೆಟ್ಟಿಯ ತಂಗಿ ಯೆಲಿಯಪ್ಪೆ ಎಂಬಾಕೆಯ ಮಗ; ಸಾಕಣೆ ಮಗನಾದ ಮಂಜಯ್ಯ (ಆಗ ಏಳೆಂಟು ವರ್ಷ) ವಿಟ್ಲದ ಅಣ್ಣ (ಪದ್ಮಶೆಟ್ಟಿ)ಯ ಮಗ.

ಧರ್ಮಪಾಲ ಹೆಗ್ಗಡೆಯ ತರುವಾಯ ಚಂದ್ರಯ್ಯ ಹೆಗ್ಗಡೆಯೂ, 1918 ರಲ್ಲಿ ಚಂದ್ರಯ್ಯ ತೀರಿಕೊಳ್ಳಲು ಮಂಜಯ್ಯ ಹೆಗ್ಗಡೆಯೂ ಪಟ್ಟಕ್ಕೆ ಬಂದರು. ಮಂಜಯ್ಯ ಹೆಗ್ಗಡೆ 1955 ರಲ್ಲಿ ತೀರಿಕೊಂಡ ನಂತರ ಚಂದ್ರಯ್ಯ ಹೆಗ್ಗಡೆಯ ಮಗ ರತ್ನವರ್ಮ ಹೆಗ್ಗಡೆ ಪಟ್ಟಕ್ಕೆ ಬಂದು 1968 ರವರೆಗೂ ಆಳಿದರು. ಅವರ ನಂತರ ಅವರ ಹಿರಿಯ ಮಗ ವೀರೇಂದ್ರ ಹೆಗ್ಗಡೆ ಈಗ ಧರ್ಮಸ್ಥಳದ ಹೆಗ್ಗಡೆಯಾಗಿದ್ದಾರೆ.

ಹೆಗ್ಗಡೆಯ ಧರ್ಮ

ಹೆಗ್ಗಡೆಯ ಪಟ್ಟವು ಒಂದು ಅಧಿಕಾರದ, ಒಂದು ಹೊಣೆಯ, ಒಂದು ವೃತ್ತಿಯ ಸಂಕೇತವಾದರೆ, ಇದಕ್ಕೆ ಸಂಬಂಧಪಟ್ಟ ಧರ್ಮ ಯಾವುದು ?

ಧರ್ಮಸ್ಥಳದಲ್ಲಿ ಧರ್ಮ ಎಂಬ ಮಾತಿಗೆ ದಾನ ಎಂದಷ್ಟೇ ಅರ್ಥ ಸಂಕುಚಿತ ವಾಗಿದೆ. ನೆಲ್ಯಾಡಿ ಬೀಡಿನ ಯಜಮಾನರು ದೈವಗಳಿಗೆ ಆಶ್ರಯ ಕೊಟ್ಟಾಗ ಅವರು ಮಾಡಿದುದು ಅತಿಥಿ ಸತ್ಕಾರವಷ್ಟೆ ? ಅದರಿಂದ ಸಂತೃಪ್ತರಾದ ದೈವ ಗಳು ಈ ಸ್ಥಳದಲ್ಲಿ ಧರ್ಮವು ನಿರಂತರವಾಗಿ ನಡೆಯಲಿ ಎಂದು ಹರಸಿದಾಗ ಅಲ್ಲಿಗೆ ಬಂದವರಿಗೆಲ್ಲ ದಾನ ಧರ್ಮಗಳು ನಡೆಯಲಿ ಎಂಬುದೇ ಆದೇಶವಾಗಿ ದ್ದಿತು. ದಾನಗಳಲ್ಲಿ ಮುಖ್ಯವಾದುದು ಅನ್ನದಾನ; ಇದನ್ನು ಹೆಗ್ಗಡೆ ಮನೆತನ ದವರು ಒಂದಿಷ್ಟೂ ಕುಂದಿಲ್ಲದೆ ನಡೆಸಿಕೊಂಡು ಬರುತ್ತಿದ್ದಾರೆ. ಧರ್ಮಸ್ಥಳಕ್ಕೆ ಹೋದ ಯಾತ್ರಿಕರು ಯಾವುದೇ ಜಾತಿಯವರಾಗಿರಲಿ, ಯಾವುದೇ ಧರ್ಮ ದವರಾಗಿರಲಿ, ಆಹಾರಕ್ಕಾಗಿ ಅಥವಾ ವಸತಿಗಾಗಿ ತೊಂದರೆ ಪಡಬೇಕಾಗಿಲ್ಲ: ಇವು ಉಚಿತವಾಗಿಯೇ ದೊರೆಯುತ್ತವೆ.

ದಾನಗಳಲ್ಲಿ ನಾಲ್ಕು ಬಗೆ; ಅನ್ನದಾನ, ಅಭಯದಾನ, ಭೈಷಜ್ಯದಾನ, ಶಾಸ್ತ್ರದಾನ ಎಂದು. ಇವುಗಳಲ್ಲಿ ಅನ್ನದಾನವೂ ಅಭಯದಾನವೂ (ತೊಂದರೆಗ ಳಿಂದ, ಆಧಿವ್ಯಾಧಿಗಳಿಂದ, ಆಣೆ ಮಾತಿನಿಂದ ಬಿಡುಗಡೆ) ಹಿಂದಿನಿಂದ ನಡೆಯು ತ್ತಲೇ ಬಂದಿವೆ. ರೋಗಿಗಳಿಗೆ, ಆರ್ತರಿಗೆ ಅವಶ್ಯವಾಗಿ ಬೇಕಾದ ಭೈಷಜ್ಯ ದಾನವನ್ನೂ ಹಿಂದಿನ ಮೂವರು ಹೆಗ್ಗಡೆಗಳು ನಡೆಸುತ್ತ ಬಂದಿದ್ದಾರೆ. ಶಾಸ್ತ್ರ ದಾನ ಅಥವಾ ವಿದ್ಯಾದಾನವನ್ನು ಮಂಜಯ್ಯ ಹೆಗ್ಗಡೆಯವರು ಆರಂಭಿಸಿ ದರು. ಉಜ್ರೆಯ ಬಳಿ ಸಿದ್ಧವನ ಗುರುಕುಲವನ್ನು ವ್ಯವಸ್ಥೆಗೊಳಿಸಿದವರು ಅವರೇ. ರತ್ನವರ್ಮ ಹೆಗ್ಗಡೆಯವರು ಈ ಬುನಾದಿಯ ಮೇಲೆ ಕಾಲೇ ಜೊಂದನ್ನು ಸ್ಥಾಪಿಸಿದ್ದಾರೆ.

ಧರ್ಮಸ್ಥಳದ ವಾರ್ಷಿಕ ವರಮಾನ ಎರಡು ಲಕ್ಷ ರೂಪಾಯಿಗಳಿ ಗಿಂತಲೂ ಹೆಚ್ಚೆಂದೂ. ಅದರಲ್ಲಿ ಅರ್ಧಕ್ಕಿಂತಲೂ ಹೆಚ್ಚು ಹಣವನ್ನು ಈ ನಾಲ್ಕು ದಾನಗಳಿಗಾಗಿ ವಿನಿಯೋಗ ಮಾಡುತ್ತಾರೆ ಎಂದೂ ಹೇಳುತ್ತಾರೆ. ಅಂತೂ ಧರ್ಮಸ್ಥಳದ ಹೆಗ್ಗಡೆಗಳ ದಾನ ಕೊಡುಗೈದಾನ. ಅವರ ಔದಾರ್ಯ ಉಪಚಾರ ಲೋಕಪ್ರಸಿದ್ಧವಾದುವು. ಈ ಪ್ರವೃತ್ತಿಯೇ ದೈವಗಳ ವಿಶ್ವಾಸ ವನ್ನು ಮಾತ್ರವಲ್ಲದೆ ವಾದಿರಾಜ ತೀರ್ಥರ ಮೆಚ್ಚಿಕೆಯನ್ನೂ ಗಳಿಸಿತು.

ಆ ಪ್ರದೇಶದಲ್ಲಿ ಹೆಗ್ಗಡೆಗಳು ಲೋಕಹಿತದ ಕೆಲಸಗಳನ್ನು ನಡೆಸುತ್ತ ಬಂದಿದ್ದಾರೆ. ಪ್ರವಾಸಿಗಳ ಅನುಕೂಲಕ್ಕೆಂದು ಯಾತ್ರಿಕರ ಸೌಕರ್ಯಕ್ಕೆಂದು ಧರ್ಮ ಶಾಲೆಗಳಿವೆ, ವಸತಿ ಗೃಹಗಳಿವೆ, ಭೋಜನ ಶಾಲೆಗಳಿವೆ. ಹಾದಿ ಬೀದಿಗಳನ್ನು ಚೆನ್ನಾಗಿ ಮಾಡಿದ್ದಾರೆ. ನೇತ್ರಾವತಿ ನದಿಗೆ ತಮ್ಮ ಹಣದಿಂದಲೇ ಸೇತುವೆಯನ್ನು ಕಟ್ಟಿಸಿದ್ದಾರೆ. ಹೆಗ್ಗಡೆಯು ಇಂಥ ಕೆಲಸಗಳನ್ನು ಮಾಡುವಾಗ ಗುಡಿಯ ಬೊಕ್ಕಸದಿಂದ ಬೇಕಾದಷ್ಟು ಹಣವನ್ನು ತೆಗೆಯಬಹುದು ಎಂದೂ, ಆದರೆ ಎಷ್ಟು ಉಳಿದಿದೆ ಎನ್ನುವುದನ್ನು ನೋಡಬಾರದೆಂದೂ ಕಟ್ಟಳೆಯಿದೆಯಂತೆ. ದೈವಗಳು ಭಂಡಾರವನ್ನು ಅಕ್ಷಯವಾಗಿಸುತ್ತವೆ ಎಂದು ವಿಶ್ವಾಸ. ಒಳ್ಳೆಯ ಕೆಲಸಕ್ಕೆ ವೆಚ್ಚವಾದ ಹಣ ದ್ವಿಗುಣಿತವಾಗಿ ಬರುತ್ತದೆ ಎಂದು ಸಮಾಧಾನ.

ಪಟ್ಟಾಭಿಷೇಕ

ಧರ್ಮಸ್ಥಳದ ವ್ಯವಸ್ಥೆಯಲ್ಲಿಯೂ ಆಡಳಿತದಲ್ಲಿಯೂ ಹೆಗ್ಗಡೆಯದೇ ಪ್ರಧಾನಪಾತ್ರ ಎಂದಾಯಿತಲ್ಲ? ಹೆಗ್ಗಡೆಯನ್ನು ಆಡಳಿತದಲ್ಲಿ, ಅಧಿಕಾರದಲ್ಲಿ ಕೂರಿಸುವುದು ಒಂದು ವಿಶೇಷ ವಿಧಿ. ಇದನ್ನು ಪಟ್ಟಾಭಿಷೇಕ ಎಂದು ವ್ಯವಹರಿಸುತ್ತಾರೆ. ರಾಜ್ಯಗಳಲ್ಲಿ ರಾಜರಿದ್ದಂತೆ ಇಲ್ಲಿ ಹೆಗ್ಗಡೆ; ಉಳಿದ ಜನ ಅವರನ್ನು 'ಒಡೆಯರು', 'ದಣಿಗಳು', 'ಖಾವಂದರು' ಎಂದು ಕರೆಯುವ ವಾಡಿಕೆಯಿದೆ. ಊರಿನ ಲೌಕಿಕ, ಧಾರ್ಮಿಕ ಹೊಣೆಯೆಲ್ಲ ಹೆಗ್ಗಡೆಯದೇ. ಈ ದೃಷ್ಟಿಯಿಂದ ಪಟ್ಟಕ್ಕೆ ಕೂರುವ ವಿಧಿಯನ್ನೂ ಸಂಪ್ರದಾಯ ಖಚಿತಗೊಳಿಸಿದೆ. ನೆಲ್ಯಾಡಿ ಬೀಡಿಗೆ ಸೇರಿದವರೇ ಧರ್ಮಸ್ಥಳದ ಹೆಗ್ಗಡೆಯಾಗಬಹುದು. ಇತರರಿಗೆ ಈ ಅಧಿಕಾರವಿರದು. ಹೆಗ್ಗಡೆ ತಾನು ತೀರಿಕೊಳ್ಳುವ ಮೊದಲು ಮುಂದಿನ ಹೆಗ್ಗಡೆಯನ್ನು ನೇಮಕ ಮಾಡಬೇಕು. ಸ್ವಂತ ಮಕ್ಕಳು ಇಲ್ಲದಿದ್ದರೆ ದತ್ತು ತೆಗೆದುಕೊಳ್ಳಬೇಕು. ಅದಕ್ಕೂ ಅವಕಾಶವಿಲ್ಲದಿದ್ದರೆ ಉಯಿಲಿನಲ್ಲಾದರೂ ಮುಂದಿನ ಹೆಗ್ಗಡೆಯ ಹೆಸರನ್ನು ಸೂಚಿಸಿ, ತನ್ನ ಹತ್ತಿರದ ನೆಂಟರು ದತ್ತು ತೆಗೆದುಕೊಳ್ಳುವಂತೆ ಮಾಡಬೇಕು. ಸ್ವಂತ ಮಕ್ಕಳು ಎಷ್ಟು ಜನರಿದ್ದರೂ ಹಿರಿಯ ಮಗನನ್ನು ಪಟ್ಟಕ್ಕೆ ಆರಿಸುವ ಪದ್ಧತಿಯಿದೆ. ಮಗನೆಂದ ಮಾತ್ರಕ್ಕೆ ವಿಧ್ಯುಕ್ತವಾಗಿ ಪಟ್ಟವಾಗದೆ ಅವನು ಹೆಗ್ಗಡೆಯಾಗುವ ಹಾಗಿಲ್ಲ. ಹೆಗ್ಗಡೆಯ

ಹುದ್ದೆ ಆನುವಂಶಿಕವಾಗಿ ಬರತಕ್ಕದ್ದೇ ಆದರೂ ಪ್ರತಿ ಹೆಗ್ಗಡೆಯನ್ನೂ ನೇಮಕ ಮಾಡಬೇಕಾದ, ಅವನಿಗೆ ಪಟ್ಟ ಕಟ್ಟಬೇಕಾದ ಅಗತ್ಯವಿದೆ. ಇದು ಸ್ವಾರಸ್ಯವಾದ ವಿವರ.

ಸ್ತ್ರೀ ಪ್ರಧಾನವಾದ ಸಮಾಜದ ಕಟ್ಟುಪಾಡಿನೊಳಗೇ ಬೆಳೆದ ಮನೆತನ ನೆಲ್ಯಾಡಿ ಬೀಡಿನದು. ವಂಶದ ಮೂಲ ವ್ಯಕ್ತಿ ಹೆಂಗಸೇ (ಅಮ್ಮು ಬಲ್ಲಾಳ್ತಿ). ಆದರೆ ಹೆಂಗಸರು ಯಾವ ಕಾಲದಲ್ಲಿಯೂ ಹೆಗ್ಗಡೆ ಪಟ್ಟಕ್ಕೆ ಬಂದಂತೆ ತೋರುವುದಿಲ್ಲ. ಐತಿಹಾಸಿಕ ವ್ಯಕ್ತಿಯಾದ ಕುಮಾರಯ್ಯ ಹೆಗ್ಗಡೆಯ ಕಾಲದವರೆಗೆ ಅಳಿಯ ಸಂತಾನ ಕಟ್ಟು ಬಳಕೆಯಲ್ಲಿದ್ದಂತೆ ಕಾಣುತ್ತದೆ. ಆತನು ಇದನ್ನು ಬದಲಾಯಿಸಿ ಮಕ್ಕಳ ಕಟ್ಟನ್ನು ಜಾರಿಗೆ ತಂದನೆಂದು ಹೇಳುತ್ತಾರೆ.

ಹೆಗ್ಗಡೆಯು ತೀರಿಕೊಂಡಾಗ ಸಂಸ್ಕಾರಗಳೆಲ್ಲ ನಡೆದು ಹದಿನಾರನೆಯ ದಿನದ ನಂತರ ಉತ್ತರಾಧಿಕಾರಿಗೆ ಪಟ್ಟವಾಗುತ್ತದೆ. ಪಟ್ಟಕ್ಕೆಂದು ನಿಶ್ಚಯಿಸಿದ ದಿನ ಹೆಗ್ಗಡೆಯಾಗಬೇಕಾದ ವ್ಯಕ್ತಿಯು ನೆಲ್ಯಾಡಿ ಬೀಡಿನ ಬಳಿಯಿರುವ ಚಂದ್ರನಾಥ ಬಸದಿಯಲ್ಲಿ ಮಂಗಳಸ್ನಾನವನ್ನು ಮುಗಿಸಿ ಹೊರಡುತ್ತಾನೆ. ಆ ದಿನ ಆ ಬಸದಿಯಲ್ಲಿ ಅರ್ಚಕರಿಂದ ವಿಶೇಷ ಪೂಜೆ ನಡೆಯುತ್ತದೆ. ಇಲ್ಲಿನ ಅರ್ಚಕರು ಜೈನರು; ಅವರನ್ನು 'ಇಂದ್ರ' ಎಂದು ಕರೆಯುತ್ತಾರೆ. ಸ್ನಾನದನಂತರ ಹೊಸ ಬಟ್ಟೆಗಳನ್ನುಟ್ಟು ನೆಲ್ಯಾಡಿ ಬೀಡಿಗೆ ಬಂದ ಉತ್ತರಾಧಿಕಾರಿಯನ್ನು ಪರಿಜನರೂ ಪುರಜನರೂ ಸ್ವಾಗತಿಸುತ್ತಾರೆ. ಪಟ್ಟಾಭಿಷೇಕದ ವಿಧಿಗಳೆಲ್ಲ ಜರುಗುವುದು ನೆಲ್ಯಾಡಿ ಬೀಡಿನಲ್ಲಿಯೇ.

ಅಲ್ಲಿಗೆ ಬಂದನಂತರ ಆತನು ಅಲ್ಲಿ ಇರುವ ಹಳೆಯ ಬಾವಿಯೊಂದರಲ್ಲಿ ಮತ್ತೆ ಸ್ನಾನ ಮಾಡಬೇಕು. ಆಮೇಲೆ ಮಂಜುನಾಥನ ಗುಡಿಯಿಂದ ಪಲ್ಲಕ್ಕಿಯಲ್ಲಿ ಮೇಳದೊಂದಿಗೆ ಹೊತ್ತುತಂದ ಕಲಶದ ನೀರಿನಿಂದ ಬ್ರಾಹ್ಮಣರು ಆತನಿಗೆ ಅಭಿಷೇಕ ಮಾಡುತ್ತಾರೆ. ಬಳಿಕ ದೈವಗಳ ಸನ್ನಿಧಿಗೆ ಈತನು ತೆರಳುತ್ತಾನೆ. ನೆಲ್ಯಾಡಿ ಬೀಡಿನಲ್ಲಿ ದೈವಗಳಿರುವ ಕೋಣೆಯನ್ನು ಈತನು ಪ್ರವೇಶ ಮಾಡುವಾಗ ಇಬ್ಬರು ಪಾತ್ರಿಗಳು ಜೊತೆಯಲ್ಲಿರುತ್ತಾರೆ. ದೇಲಂಪಾಡಿ ಮತ್ತು ಕೋಟ್ಯಣ್ಣ ಎಂಬ ಈ ಪಾತ್ರಿಗಳು ಧರ್ಮಸ್ಥಳದ ನಾಲ್ವಿಕರಲ್ಲಿ ಇಬ್ಬರು.

ಅವರು ಇಬ್ಬರೂ ದೇವಾಲಯದ ಅಧಿಕಾರಿಗಳು. ದೇಲಂಪಾಡಿಯೆನ್ನುವಾತ ಶಿವಳ್ಳಿ ಬ್ರಾಹ್ಮಣ. ಅವನು ಕಾಳರಾಹು ದೈವವನ್ನು ಪ್ರತಿನಿಧಿಸುವ ಪಾತ್ರಿ. ಕೋಟ್ಯಣ್ಣ ಜೈನ. ಈ ಪಾತ್ರಿ ಪ್ರತಿನಿಧಿಸುವುದು ಕುಮಾರಸ್ವಾಮಿ ದೈವವನ್ನು. ನೆಲ್ಯಾಡಿ ಬೀಡಿಗೆ ಬಂದ ನಾಲ್ವರು ದೈವಗಳಲ್ಲಿ ಇವರಿಬ್ಬರೇ ಗಂಡು ದೈವಗಳು. ಈ ಇಬ್ಬರು ಪಾತ್ರಿಗಳು ಹೆಗ್ಗಡೆಯಾಗಲಿರುವವನನ್ನು ಕೈಹಿಡಿದು ಒಳಗೆ ಕರೆದೊಯ್ಯುತ್ತಾರೆ. ಆತನು ನಾಲ್ಕೂ ದೈವಗಳಿಗೆ ಒಟ್ಟಾರೆ ಮೀಸಲಾಗಿರುವ ಮಂಚದ ಮುಂದೆ ತಲೆ ಬಾಗಿಸಿ ನಮಸ್ಕಾರ ಮಾಡುತ್ತಾನೆ. ಅಲ್ಲಿ ಕೆಲವು ವಿಧಿಗಳು ನಡೆಯುತ್ತವೆ. ಆಗ ಪಾತ್ರಿಗಳು ಅವನ ಕೈ ಹಿಡಿದು ಹೆಣ್ಣು ದೈವಗಳಿಗೆ ಮಾತ್ರ ಮೀಸಲಾದ ಉಯ್ಯಾಲೆ ಮಂಚದ ಮೇಲೆ ಕೂರಿಸುತ್ತಾರೆ. ಗಂಡು ದೈವಗಳೇ ಹೆಗ್ಗಡೆಯನ್ನು ಅಲ್ಲಿ ಕೂರಿಸುತ್ತವೆ ಎಂದು ನಂಬಿಕೆ. ಹೆಣ್ಣು ದೈವಗಳಲ್ಲಿ ಪ್ರಧಾನವಾದುದು ಕನ್ಯಾಕುಮಾರಿ. ಈ ತೂಗು ಮಂಚದ ಮೇಲೆ ಹೆಗ್ಗಡೆಯಾಗುವವನು ಕೂರುವುದು ಆ ದೈವದೊಂದಿಗೆ ತಾದಾತ್ಮ್ಯವನ್ನು ಸಂಕೇತಿಸುತ್ತದೆ.

ಈ ಮಂಚದ ಮೇಲೆ ಕೂತನಂತರ ಅಜ್ರಿಬಂಟ ಮೊದಲಾದ ಅಧಿಕಾರಿಗಳ ಎದುರಿನಲ್ಲಿ ಪಾತ್ರಿಗಳು ಈತನಿಗೆ ಪಟ್ಟದ ಕತ್ತಿಯನ್ನೂ ಮುದ್ರೆಯುಂಗರವನ್ನೂ ಕೊಡುತ್ತಾರೆ. ಮುಂದೆ ಹೆಗ್ಗಡೆ ಎಲ್ಲಿ ಹೋಗಬೇಕಾದರೂ, ಒಬ್ಬ ಸೇವಕನು ಈ ಪಟ್ಟದ ಕತ್ತಿಯನ್ನು ಹಿಡಿದು ಮುಂದುಗಡೆ ಹೋಗಬೇಕು. ಕತ್ತಿಯೂ ಮುದ್ರೆಯೂ ಅಧಿಕಾರದ ಚಿಹ್ನೆಗಳು. ಇಷ್ಟು ನಡೆದ ಮೇಲೆ ಪಾತ್ರಿಗಳಿಗೆ ದೈವಗಳ ಆವೇಶ ಬರುತ್ತದೆ; ದರ್ಶನವಾಗುತ್ತದೆ. ಈ ಸ್ಥಿತಿಯಲ್ಲಿ, ಅವರು ಪಟ್ಟದ ಮಂಚದ ಮೇಲೆ ಕೂತವನನ್ನು ಮೊಟ್ಟಮೊದಲ ಬಾರಿಗೆ 'ಪೇರ್ಗಡೆ' (ಹೆಗ್ಗಡೆ) ಎಂದು ಸಂಬೋಧಿಸುತ್ತಾರೆ. ಅಲ್ಲಿಂದ ಮುಂದೆ ಆತನು ಹೆಗ್ಗಡೆ; ಅವನ ಪಟ್ಟ ಅಲ್ಲಿಂದ ಆರಂಭವಾಗುತ್ತದೆ.

ಅನಂತರ ಪಟ್ಟದ ಮಂಚದ ಮೇಲೆ ಕುಳಿತ ಹೆಗ್ಗಡೆಗೆ ಭಂಡಾರದ ಕೀಲಿಕೈಗಳನ್ನು ಒಪ್ಪಿಸಲಾಗುತ್ತದೆ. ಪರಿಜನರೂ, ಊರ ಹಿರಿಯರೂ ಕಾಣಿಕೆಗಳನ್ನು ಒಪ್ಪಿಸಿ ನಮಸ್ಕಾರ ಮಾಡುತ್ತಾರೆ. ಈ ಸಂಪ್ರದಾಯ ಮುಗಿದ ಮೇಲೆ ಹೆಗ್ಗಡೆಯನ್ನು ಪಲ್ಲಕ್ಕಿಯಲ್ಲಿ ಕೂರಿಸಿ ಉತ್ಸವದೊಂದಿಗೆ ಮಂಜುನಾಥ ದೇವಾಲಯಕ್ಕೆ

ಕರೆತರುತ್ತಾರೆ. ಅಲ್ಲಿ ಹೆಗ್ಗಡೆ ಮೊದಲು ಅಮ್ಮನವರ ಗುಡಿಗೆ ಬಂದು, ಅಲ್ಲಿರುವ ಅಮ್ಮನವರನ್ನೂ, ದೈವಗಳನ್ನೂ ತಾವೇ ಹೂಗಳಿಂದ ಪೂಜಿಸಿ, ಪ್ರಸಾದವನ್ನು ಪಡೆದು, ಮಂಜುನಾಥನ ಗುಡಿಗೆ ಬರುತ್ತಾರೆ. ಅಲ್ಲಿ ಅರ್ಚಕರು ದೇವರಿಗೆ ಪೂಜೆ ನಡೆಸಿ ಪ್ರಸಾದವನ್ನು ಹೆಗ್ಗಡೆಗೆ ಕೊಡುತ್ತಾರೆ. ಅಲ್ಲಿಂದ ಹೆಗ್ಗಡೆಯು ಬಸದಿಗೆ ಬಂದು, ತಮ್ಮ ಬೀಡಿಗೆ ಹಿಂದಿರುಗುತ್ತಾರೆ. ಹೀಗೆ ಹೆಗ್ಗಡೆಯು ಪಟ್ಟವನ್ನು ಏರುವ ವಿಧಿಯಲ್ಲಿ ಪ್ರಾಚೀನತೆಯೂ, ಸರಳತೆಯೂ ಕಾಣಬರುತ್ತದೆ. ಈ ಸಂದರ್ಭದಲ್ಲಿ ದೈವಗಳು ಪಾತ್ರಿಗಳ ಮೂಲಕ ಹೆಗ್ಗಡೆಗೆ ವಿಧಿಸುವ ಒಂದೇ ಕರ್ತವ್ಯವೆಂದರೆ ಧರ್ಮಸ್ಥಳದಲ್ಲಿ ದಾನ ಧರ್ಮಗಳನ್ನು ತಪ್ಪದೆ ನಡೆಯಿಸುವುದು. ಹಾಗೆ ನಡೆಯಿಸಿದರೆ ಮಾತ್ರ ದೈವಗಳು ಹೆಗ್ಗಡೆಗೆ ಎಲ್ಲ ವಿಧದಿಂದಲೂ ನೆರವಾಗುವುವೆಂಬ ಭರವಸೆಯೂ ಈ ನುಡಿಕಟ್ಟಿನಲ್ಲಿ ಸೇರಿರುತ್ತದೆ. ಪದ್ಧತಿಯಂತೆ ಮಂಜುನಾಥನಿಗೆ, ಚಂದ್ರನಾಥ ಸ್ವಾಮಿಗೆ ನೆಲ್ಯಾಡಿ ಬೀಡಿನಲ್ಲಿ ಮತ್ತು ಕನ್ಯಾಕುಮಾರಿಗೆ ಪೂಜೆ. ನಮಸ್ಕಾರ ಅಮೃತಪಡಿ. ನಂದಾದೀಪ ಸೇವೆ, ಪಂಚ ಪರ್ವ, ಕಟ್ಟುಕಟ್ಟಳೆಗಳು ಸರಿಯಾಗಿ ನಡೆಯುವುದು ಹೆಗ್ಗಡೆಯ ಹೊಣೆ.

ಹೊಯಿಲು

ದೇವಾಲಯಗಳಲ್ಲಿ ಹೆಗ್ಗಡೆ ಹಲವಾರು ಇತರ ಕರ್ತವ್ಯಗಳನ್ನು ನಿರ್ವಹಿಸಬೇಕಾಗುತ್ತವೆ. ಹರಕೆ, ಆಣೆ-ಭಾಷೆ, ತುಲಾಭಾರ, ಪ್ರಮಾಣ, ಹೊಯಿಲು ಮೊದಲಾದುವೆಲ್ಲ ಹೆಗ್ಗಡೆಯ ನೇತೃತ್ವದಲ್ಲಿಯೇ ನಡೆಯಬೇಕು. ಇವುಗಳಲ್ಲಿ ಹೊಯಿಲು ಸ್ವಾರಸ್ಯವಾದ ವಿಧಿ. ಸಾಲ ಕೊಟ್ಟು ಹಿಂದಕ್ಕೆ ಪಡೆಯದವರು, ವೈಮನಸ್ಯ ಇರುವವರು, ವ್ಯಾಜ್ಯದಲ್ಲಿ ಸಿಕ್ಕು ಬಿದ್ದವರು, ನ್ಯಾಯ ಪಡೆಯಬೇಕಾದವರು ನ್ಯಾಯಾಲಯಕ್ಕೆ ಹೋಗುವ ಬದಲು ಧರ್ಮಸ್ಥಳಕ್ಕೆ ಬರುವ ಪದ್ಧತಿ ಇದೆ. ಇಲ್ಲಿಗೆ ಬಂದು ತಮಗೆ ನಡೆದ ಅನ್ಯಾಯದ ಬಗ್ಗೆ, ತಾವು ಬಯಸುವ ನ್ಯಾಯದ ಬಗ್ಗೆ ಹೆಗ್ಗಡೆಗೆ ದೂರೊಂದನ್ನು ಸಲ್ಲಿಸುತ್ತಾರೆ. ಆಗ ಹೆಗ್ಗಡೆ ಆವರ ಎದುರು ಪಕ್ಷದವರನ್ನು ಪ್ರತಿಕಕ್ಷಿಯನ್ನು ಕರೆಕಳುಹಿಸಿ, ಇಬ್ಬರ ಎದುರಿನಲ್ಲಿ ವಿಚಾರಣೆ ನಡೆಸಿ, ತಮ್ಮ ತೀರ್ಪನ್ನು ಹೇಳುತ್ತಾರೆ. ಎದುರು ಮಾತಿಲ್ಲದೆ, ಯಾವ ದುಗುಡವೂ ಇಲ್ಲದೆ ಎರಡೂ ಕಡೆಯವರು ಹೆಗ್ಗಡೆಯ ತೀರ್ಪನ್ನು

ಒಪ್ಪಿಕೊಂಡು ಅದರಂತೆ ನಡೆದುಕೊಳ್ಳುತ್ತಾರೆ. ಎಷ್ಟು ದೀರ್ಘಕಾಲದ ವೈಮನಸ್ಯವಿದ್ದರೂ ಮಂಜುನಾಥನ ಗುಡಿಯಲ್ಲಿ, ಹೆಗ್ಗಡೆಯ ಸನ್ನಿಧಿಯಲ್ಲಿ ಇದು ಬಗೆಹರಿದು ಹೋಗುತ್ತದೆ. ಅಲ್ಲಿಂದ ಮುಂದೆ ವಾದಿ ಪ್ರತಿವಾದಿಗಳಿಬ್ಬರೂ ಸ್ನೇಹಿತರೇ. ಹೀಗೆ ಹೆಗ್ಗಡೆಯಿಂದ ಒದಗುವ ನ್ಯಾಯಕ್ಕೆ ಹೊಯಿಲು ಎಂದು ಹೆಸರು.

ಒಂದು ಕಾಲಕ್ಕೆ ಆ ಪ್ರದೇಶದ ಎಲ್ಲ ಸಂದಿಗ್ಧ ವ್ಯವಹಾರಗಳೂ ಹೆಗ್ಗಡೆಯ ಮುಂದೆ ಹೀಗೆ ಪರಿಹಾರವಾಗುತ್ತಿದ್ದವು. ಹಿಂದುಗಳು ಮಾತ್ರವಲ್ಲದೆ ಮುಸಲ್ಮಾನರೂ ಕ್ರೈಸ್ತರೂ ಮಂಜುನಾಥನ ಗುಡಿಗೆ ಬಂದು ಹೆಗ್ಗಡೆಯ ನ್ಯಾಯವನ್ನು ಪಡೆದ ನಿದರ್ಶನಗಳೂ ಹಲವಿದೆ. ಹೆಗ್ಗಡೆಯು ತೀರ್ಪನ್ನು ಹೇಳಿದ ನಂತರ ಅವರು ವಿಧಿಸಿದಷ್ಟು ಕಾಣಿಕೆಯ ಹಣವನ್ನು ಅವರ ಸಮ್ಮುಖದಲ್ಲಿಟ್ಟ ಹರಿವಾಣದಲ್ಲಿ ಹಾಕಿ, ಅವರು ಕೊಟ್ಟ ಪ್ರಸಾದ ಮತ್ತು ತಾಂಬೂಲವನ್ನು ಸ್ವೀಕರಿಸಿ ಹೋಗುತ್ತಾರೆ. ಈ ಸಂದರ್ಭದಲ್ಲಿ ವಾದಿ–ಪ್ರತಿವಾದಿಗಳಿಗೆ ದೊರೆಯುವುದು ಅಮ್ಮನವರ ಪ್ರಸಾದ ಎನ್ನುವುದು ಗಮನಾರ್ಹವಾದ ವಿವರ. ಮಂಜುನಾಥನ ಮುಂದುಗಡೆ ಮಂಟಪದಲ್ಲಿ ಈ ನ್ಯಾಯ ನಿರ್ವಹಣೆ ನಡೆದರೂ ಪ್ರಸಾದ ಮಾತ್ರ ಅಮ್ಮನವರ ಗುಡಿಯಿಂದ ಬರುತ್ತದೆ. ಪದ್ಧತಿಯ ಪ್ರಾಚೀನತೆಗೆ ಇದೊಂದು ನಿದರ್ಶನ.

ಮಂಜುನಾಥ ಅಲ್ಲಿಗೆ ಬರುವ ಮೊದಲೇ ಹೆಗ್ಗಡೆಯು ಈ ಕೆಲಸವನ್ನು ನಿರ್ವಹಿಸುತ್ತಿದ್ದರು; ಹೆಗ್ಗಡೆಗೆ ಈ ಅಧಿಕಾರವನ್ನು ಕೊಟ್ಟವರು ದೈವಗಳೇ; ಹೆಗ್ಗಡೆಯು ಅಮ್ಮನವರನ್ನು ಪ್ರತಿನಿಧಿಸುವವರೇ ಎನ್ನುವ ಕಾರಣದಿಂದ ಇಷ್ಟು ಬೆಲೆ. ಈ ಹೊಯಿಲು ಪದ್ಧತಿ ದಕ್ಷಿಣ ಕನ್ನಡ ಜಿಲ್ಲೆಯ ಕೆಲವು ಇತರ ದೇವಾಲಯಗಳಲ್ಲಿಯೂ ಕಾಣಬರುತ್ತದೆ. ನಿದರ್ಶನಕ್ಕೆ ಹಿರಿಯಡ್ಕದ ವೀರಭದ್ರನ ಗುಡಿಯಲ್ಲಿ ಕೊರ್ಲ ಹೆಗ್ಗಡೆ ಎನ್ನುವವರು ನ್ಯಾಯವನ್ನು ನಡೆಸುತ್ತಾರೆ. ಆದರೆ ಅಲ್ಲಿ ನಿರ್ಣಯವನ್ನು ಹೇಳುವವರು ಹೆಗ್ಗಡೆಯಲ್ಲ. ದೈವದ ದರ್ಶನವನ್ನು ಪಡೆದ ಪಾತ್ರಿ. ಹಾಗೆಯೇ ಕುಂದಾಪುರ ತಾಲ್ಲೂಕಿನ ಮರ್ಣಿಂಕಟ್ಟೆಯ ಬ್ರಹ್ಮಲಿಂಗೇಶ್ವರ ದೇವಾಲಯ, ಮಂದರ್ತಿಯ ದುರ್ಗಾಪರಮೇಶ್ವರಿ ಗುಡಿ ಇವೂ ಹೊಯಿಲಿಗೆ ಹೆಸರಾದ ಸ್ಥಳಗಳು.

ಧರ್ಮಸ್ಥಳದಲ್ಲಿ ಈ ಹೊಯಿಲುಗಳನ್ನು ವಿವರವಾಗಿ 'ರಿಜಿಸ್ಟರ್'ನಲ್ಲಿ ದಾಖಲೆ ಮಾಡಿಟ್ಟುಕೊಳ್ಳುವ ಪದ್ಧತಿಯಿದೆ. ಇಂಥ ಹೊಯಿಲುಗಳಿಂದ ಧರ್ಮಸ್ಥಳದಲ್ಲಿ ವರ್ಷಕ್ಕೆ ಸರಾಸರಿ ಸಾವಿರದ ಐನೂರು ರೂಪಾಯಿಗಳ ಆದಾಯವಿದೆಯೆಂದು ಹೇಳುತ್ತಾರೆ. ಜನರಿಗೆ ಧರ್ಮಸ್ಥಳದಲ್ಲಿ ನಡೆಯುವ ನ್ಯಾಯದ ವಿಚಾರವಾಗಿ ತುಂಬ ನಂಬಿಕೆಯಿದೆ. ಹೆಗ್ಗಡೆಯು ಹೊಯಿಲುಗಳನ್ನು ನಡೆಸುವಾಗ ಸ್ವತಃ ಮಂಜುನಾಥನೇ ಮಾತನಾಡುತ್ತಾನೆಂದೂ, ಲೌಕಿಕ ನ್ಯಾಯಕ್ಕೆ ಮೀರಿದುದರಿಂದ ಧರ್ಮಸ್ಥಳದ ನಿರ್ಣಯ ಸರ್ವಸಮರ್ಪಕವೆಂದೂ ಜನ ನಂಬುತ್ತಾರೆ.

ಹೊಯಿಲನ್ನು ಸಲ್ಲಿಸುವವರ ಸಲುವಾಗಿ ಅಚ್ಚಾದ ಅಹವಾಲೊಂದು ಇರುತ್ತದೆ. ಅವರು ದೇವಾಲಯದ ಪಾರುಪತ್ತೇಗಾರರ ನೆರವನ್ನು ಪಡೆದು ಈ ಅಹವಾಲನ್ನು ಭರ್ತಿ ಮಾಡಿದನಂತರ ಮಂಜುನಾಥನಿಗೆ ಮಹಾಪೂಜೆ ನಡೆದು ಕಾಣಿಕೆ ಸಲ್ಲಿಸುವ ಸಮಯದಲ್ಲಿ ಈ ಅಹವಾಲನ್ನು ಅವರ ಕೈಗೆ ಕೊಡುತ್ತಾರೆ. ಆಗ ಅವರು ಹೆಗ್ಗಡೆಯ ಸಮ್ಮುಖದಲ್ಲಿ ತಾವು ಹೊಯಿಲನ್ನು ಸಲ್ಲಿಸುವೆವೆಂದು ಅರಿಕೆ ಮಾಡಿಕೊಳ್ಳುತ್ತಾರೆ. ಅವರು ತಮ್ಮ ಕೈಯಲ್ಲಿ ಹೊಯಿಲನ್ನು ಹಿಡಿದಿರುವಂತೆಯೇ ಹೆಗ್ಗಡೆಯು ಅದರಲ್ಲಿರುವ ವಿವರ ಸತ್ಯವಾದುದೇ ಎಂದು ಕೇಳುತ್ತಾರೆ. ಅವರು ಸತ್ಯ ಎಂದು ಒಪ್ಪಿಕೊಂಡನಂತರ ಹೆಗ್ಗಡೆಯು ಅವರಿಗೆ ಇಷ್ಟು ಕಾಣಿಕೆ ಸಲ್ಲಿಸಿ ಎಂದು ಹೇಳುತ್ತಾರೆ. ಅವರು ದೇವರ ಮುಂದೆ ಮಂಟಪದಲ್ಲಿ ಇಟ್ಟಿರುವ ಬೆಳ್ಳಿಯ ಹರಿವಾಣದಲ್ಲಿ ಕಾಣಿಕೆ ಹಾಕಿ ಪ್ರಸಾದವನ್ನು ಸ್ವೀಕರಿಸಿದ ನಂತರ ಅವರ ಹೊಯಿಲನ್ನು ದೇವಾಲಯದ ಕಛೇರಿಗೆ ಕಳುಹಿಸುತ್ತಾರೆ.

ಅಲ್ಲಿ ಆ ಹೊಯಿಲನ್ನು ರಿಜಿಸ್ಟರ್‌ನಲ್ಲಿ ದಾಖಲೆ ಮಾಡಿಕೊಂಡು ಕಕ್ಷಿ ಪ್ರತಿಕಕ್ಷಿಗಳಿಬ್ಬರಿಗೂ "ವ್ಯವಹಾರವನ್ನು ಒಂದು ತಿಂಗಳೊಗೇ ಪರಿಹರಿಸಿಕೊಂಡರೆ ಒಳ್ಳೆಯದು" ಎಂದು ಬರೆಯುತ್ತಾರೆ. ಎರಡೂ ಕಡೆಯವರೂ ತಾವಾಗಿ ಧರ್ಮಸ್ಥಳಕ್ಕೆ ಬಂದು ತಮ್ಮ ವ್ಯಾಜ್ಯವನ್ನು ಹೆಗ್ಗಡೆಯ ಎದುರಿನಲ್ಲಿ ಬಗೆಹರಿಸಿಕೊಂಡು ಹೋಗುವುದು ವಾಡಿಕೆ. ತಾವು ತಾವೇ ವ್ಯಾಜ್ಯ ಬಗೆಹರಿಸಿ

ಕೊಳ್ಳುವುದೂ ಉಂಟು. ತಮ್ಮ ವಾದ-ಪ್ರತಿವಾದಗಳನ್ನು ಹೆಗ್ಗಡೆಗೆ ಹೇಳಿ ಅವರಿಂದ ನಿರ್ಣಯ ಪಡೆಯುವುದೂ ಉಂಟು.

ದೇವಾಲಯದ ಕಡೆಯಿಂದ ಕಕ್ಷಿ–ಪ್ರತಿಕಕ್ಷಿಗಳಿಗೆ ಪತ್ರ ಹೋದಾಗ ಅವರು ದೇವಾಲಯಕ್ಕೆಬಂದೇ ಬರಬೇಕೆಂಬ ನಿರ್ಬಂಧವೇನಿಲ್ಲ. ಪತ್ರದಲ್ಲಿ ಆ ವಿಚಾರವೂ ಇರುವುದಿಲ್ಲ. ಕಕ್ಷಿ-ಪ್ರತಿಕಕ್ಷಿಗಳು ಅಲ್ಲಿಗೆ ಬರುವುದು ತಮ್ಮ ಸ್ವಂತ ಇಚ್ಛೆಯ ಮೇರೆಯೇ. ದೇವಾಲಯದಿಂದ ಪತ್ರ ಬಂದು ಹತ್ತಾರು ವರ್ಷಗಳು ಕಳೆದ ನಂತರವೂ ದೇವಾಲಯಕ್ಕೆ ಬಂದು ತಮ್ಮ ವ್ಯಾಜ್ಯಗಳನ್ನು ಪರಿಹರಿಸಿಕೊಂಡು ಹೋದವರಿದ್ದಾರೆ. ಬರದೆ ಇರುವವರೂ ಇರುತ್ತಾರೆ. ಆದರೆ ಪತ್ರಕ್ಕೆ ಉತ್ತರ ಕೊಡುವುದು ಮತ್ತು ಅಲ್ಲಿಗೆ ಬಂದು ಹೋಗುವುದು ಸಾಮಾನ್ಯವಾಗಿ ನಡೆಯುತ್ತದೆ.

ಬಾದಾಮಿ ಚಾಳುಕ್ಯರ ಸ್ಮಾರಕಗಳು

ಮೈಸೂರು ರಾಜ್ಯದ ಉತ್ತರ ಭಾಗದಲ್ಲಿರುವ ಬಿಜಾಪುರ ಜಿಲ್ಲೆ ಇತಿಹಾಸ ಪ್ರಸಿದ್ಧವಾದುದು. ಮೊದಲಿಗೆ 'ವಿಜಯಪುರ'ವಾಗಿದ್ದುದು ಆದಿಲ್ ಷಾಹೀ ಅರಸರ ಕಾಲದಲ್ಲಿ 'ಬಿಜಾಪುರ'ವಾಯಿತು. ಅಲ್ಲಿ ಹಿಂದೂಸಂಸ್ಕೃತಿಯ ಮೊದಲ ಸ್ತರದ ಮೇಲೆ ಮುಸಲ್ಮಾನ ಸಂಸ್ಕೃತಿಯ ಪದರವೂ ಒದಗಿಬಂದಿದ್ದು ಇಲ್ಲಿನ ಜನಜೀವನದಲ್ಲಿಯೂ ಮತ್ತು ಕಲೆಯಲ್ಲಿಯೂ ಎರಡೂ ಸಂಸ್ಕೃತಿಗಳ ಪ್ರಭಾವ ಕಾಣಿಸುತ್ತದೆ. ಆದರೆ ಒಂದು ಕಾಲದಲ್ಲಿ ಈ ಪ್ರಾಂತ್ಯವು ಬಾದಾಮಿ ಚಾಳುಕ್ಯ ಸಾಮ್ರಾಜ್ಯದ ಕೇಂದ್ರವಾಗಿದ್ದಿತು, ಈ ಜಿಲ್ಲೆಯಲ್ಲಿರುವ ಬಾದಾಮಿ, ಐಹೊಳೆ ಮತ್ತು ಪಟ್ಟದ ಕಲ್ಲು ಇವುಗಳು ಆ ಕಾಲದ ದೇಗುಲಗಳಿಗೆ ಇಂದಿಗೂ ಪ್ರಸಿದ್ಧವಾಗಿವೆ.

ಇತಿಹಾಸ

ಬಾದಾಮಿ ಚಾಳುಕ್ಯರು ಚಂದ್ರವಂಶದವರು. ಮಾನವ್ಯಗೋತ್ರದ ಕ್ಷತ್ರಿಯರು. ಮೊದಲಿಗೆ ಶಾತವಾಹನ ಅರಸರಿಗೆ ಸಾಮಂತರಾಗಿದ್ದು, ಕ್ರಮೇಣ ಪ್ರಬಲರಾಗಿ ಸ್ವತಂತ್ರರಾದರು. ನರ್ಮದಾನದಿಯನ್ನು ದಾಟಿ ದಕ್ಷಿಣದೇಶಕ್ಕೆ ಬಂದು ಇಲ್ಲಿ ತಮ್ಮ ಸಾಮ್ರಾಜ್ಯವೊಂದನ್ನು ಕಟ್ಟಿದರು. ಕ್ರಿಸ್ತಾಬ್ದ 550 ರಿಂದ 750ರವರೆಗೆ ಇನ್ನೂರು ವರ್ಷಗಳು ಇವರು ವೈಭವದಿಂದ ದಕ್ಷಿಣ ಭಾರತವನ್ನು ಆಳಿದರು. ಈ ಅವಧಿಯಲ್ಲಿ ಒಂಬತ್ತು ಮಂದಿ ಅರಸರು ಆಗಿ ಹೋದರು ಇವರ ಶಾಸನಗಳು ಹೈದರಾಬಾದು, ರಾಯಗಡ, ಬಾದಾಮಿ, ಐಹೊಳೆ, ಪಟ್ಟದ ಕಲ್ಲು, ಅದೂರು, ಮಹಾಕೂಟ ಇಲ್ಲೆಲ್ಲ ದೊರೆಯುತ್ತವೆ. ಇಲ್ಲಿ ಪ್ರಬಲ

ರಾಗಿದ್ದ ರಾಷ್ಟ್ರಕೂಟರನ್ನೂ ಪಲ್ಲವರನ್ನೂ ಗೆದ್ದು ಚಾಳುಕ್ಯರು ರಾಜ್ಯ ವಾಳತೊಡಗಿದರು.

ಚಾಳುಕ್ಯ ವಂಶದ ಮೂಲಪುರುಷನು ಜಯಸಿಂಹನೆಂಬಾತ. ಇವನ ಮಗ ಸತ್ಯಾಶ್ರಯ ಪುಲಿಕೇಶಿ (ಮೊದಲನೆಯ ಪುಲಿಕೇಶಿ) ಕ್ರಿಸ್ತಾಬ್ದ 550ರ ಸುಮಾರಿಗಿದ್ದ ರಾಜ. ಇವನ ಕಾಲದಲ್ಲಿಯೇ ಚಾಳುಕ್ಯರ ವಂಶ ಇಲ್ಲಿ ನೆಲೆಯೂರಿತು. ಬಾದಾಮಿಯು ಚಾಳುಕ್ಯರ ರಾಜಧಾನಿಯಾದುದು ಇವನ ಕಾಲದಲ್ಲಿಯೇ ; ಇವನ ಹಿರಿಯ ಮಗ ಕೀರ್ತಿವರ್ಮನು ಕ್ರಿಸ್ತಾಬ್ದ 566 ರಿಂದ 597ರವರೆಗೂ, ಅವನ ತಮ್ಮ ಮಂಗಳೇಶನು 597 ರಿಂದ 608ರವರೆಗೂ ರಾಜ್ಯವಾಳಿದರು.

ಮಂಗಳೇಶನ ಇಬ್ಬರು ಮಕ್ಕಳು ಇಮ್ಮಡಿ ಪುಲಿಕೇಶಿಯೂ ಕುಬ್ಜ ವಿಷ್ಣುವರ್ಧನನೂ ಪ್ರಖ್ಯಾತರು. ಇಮ್ಮಡಿ ಪುಲಿಕೇಶಿಯು ಕ್ರಿಸ್ತಾಬ್ದ 609 ರಿಂದ 642ರವರೆಗೂ ಆಳಿದಂತೆ ತಿಳಿದುಬರುತ್ತದೆ. ಇವನ ಕಾಲದಲ್ಲಿ ಚಾಳುಕ್ಯ ಸಾಮ್ರಾಜ್ಯವು ನರ್ಮದಾನದಿಯಿಂದ ಕೆಳಗೆ ಇಡೀ ದಕ್ಷಿಣದೇಶವನ್ನೆಲ್ಲ ಒಳಗೊಂಡಿದ್ದಿತು. ಇವನು ಗಂಗರನ್ನೂ, ಕದಂಬರನ್ನೂ ಪಲ್ಲವರನ್ನೂ ಗೆದ್ದುದಲ್ಲದೆ ನರ್ಮದಾನದಿಯ ದಂಡೆಯ ಮೇಲೆ ಹರ್ಷರಾಜನನ್ನೂ ಸೋಲಿಸಿ ವಿಖ್ಯಾತನಾದನು. ಇವನ ಕಾಲದಲ್ಲಿಯೇ ಚೀಣೀ ಯಾತ್ರಿಕನಾದ ಹ್ಯುಎನ್ ತ್ಸಾಂಗನು ಭಾರತ ದೇಶಕ್ಕೆ ಬಂದಿದ್ದನು. ಪರ್ಶಿಯ ದೇಶದ ಚಕ್ರವರ್ತಿಯು ಇವನ ಆಸ್ಥಾನಕ್ಕೆ ರಾಯಭಾರಿಗಳನ್ನು ಕಳುಹಿಸಿದ್ದನು ; ಇದರ ಸೊಗಸಾದ ವರ್ಣಚಿತ್ರವು ಅಜಂಟಾ ಗುಹಾಂತರ್ದೇವಾಲಯವೊಂದರಲ್ಲಿ ಕಾಣಸಿಗುತ್ತದೆ. ಕನ್ನಡ ಕಲಾವಿದನೊಬ್ಬನ ಹೆಮ್ಮೆಯ ಚಿತ್ರವಿದೆಂದು ತೋರುತ್ತದೆ.

ಬಾದಾಮಿ

ಇವನಾದ ತರುವಾಯ ಚಾಳುಕ್ಯ ಸಾಮ್ರಾಜ್ಯವು ದುರ್ಬಲವಾಗಿ ಕ್ರಿಸ್ತಾಬ 757ರವೇಳೆಗೆ ಸಂಪೂರ್ಣವಾಗಿ ಮರೆಯಾಯಿತು, ಆದರೆ ಚಾಳುಕ್ಯರು ಆಳಿದ ಇನ್ನೂರು ವರ್ಷಗಳು ಕಲೆಗೂ, ಸಂಸ್ಕೃತಿಗೂ ಸ್ವರ್ಣಯುಗವೆನ್ನಬಹುದು ;

ಕನ್ನಡ ನಾಡಿನ ಇತಿಹಾಸದಲ್ಲಿ ತುಂಬ ಸ್ವಾರಸ್ಯವಾದ, ಫಲಕಾರಿಯಾದ ಪರಿಚ್ಛೇದ ಅದು.

ಚಾಳುಕ್ಯರ ರಾಜಧಾನಿಯಾಗಿ ಮೆರೆದ ಊರು ಬಾದಾಮಿ; ಹಳೆಯ ಕಾಲದಲ್ಲಿ ವಾತಾಪಿಯೆಂದು ಪ್ರಸಿದ್ಧವಾಗಿದ್ದಿತು. ಪುರಾಣ ಪ್ರಸಿದ್ಧರಾದ ಇಲ್ವಲ-ವಾತಾಪಿಯರು ಇಲ್ಲಿದ್ದವರಂತೆ. ಗ್ರೀಕ್ ಇತಿಹಾಸಕಾರನಾದ ಟಾಲೆಮಿಯು ಈ ಊರಿನ ಹೆಸರನ್ನು 'ಬಡಿಯಾಮಯೆ' ಎಂದು ಕರೆದು ಅದರ ಯಶಸ್ಸನ್ನು ಉಲ್ಲೇಖಿಸಿದ್ದಾನೆ. ಎರಡು ಬಂಡೆಗಲ್ಲು ಗುಡ್ಡಗಳ ನಡುವೆ ಇರುವ ಈ ಊರು ನಿಸರ್ಗರಮಣೀಯವಾಗಿದೆ ; ಇದು ಕಲೆಗೆ ಸ್ಫೂರ್ತಿಯನ್ನು ಕೊಟ್ಟುದು ಆಶ್ಚರ್ಯವೇನಲ್ಲ.

ದ್ರಾವಿಡ ವಾಸ್ತುಶಿಲ್ಪದ ಅತ್ಯಂತ ಪ್ರಾಚೀನ ನಿದರ್ಶನವೆನ್ನಲಾದ ಮೂಲಗಿತ್ತಿ ಶಿವಾಲಯ ಇಲ್ಲಿನದೇ; ಇದರಲ್ಲಿ ಪಲ್ಲವ ಶೈಲಿಯ ಪ್ರಭಾವವನ್ನು ಕಾಣಬಹುದು. ಇದು ಕ್ರಿಸ್ತಾಬ್ದ 625ರ ಸುಮಾರಿಗೆ ಸಿದ್ಧವಾಯಿತೆಂದು ತಿಳಿದುಬರುತ್ತದೆ.

ಬಾದಾಮಿ ಪ್ರಸಿದ್ಧವಾಗಿರುವುದು ಅಲ್ಲಿನ ಗುಹಾಂತರ್ದೇಗುಲಗಳಿಂದ. ಚಾಳುಕ್ಯರ ಮೊದಲ ಯುಗದಲ್ಲಿಯೇ ಕಾಣಿಸಿಕೊಂಡ ನಾಲ್ಕು ಗುಹಾಂತರ್ದೇಗುಲಗಳು ಇಂದಿಗೂ ನಿಂತಿವೆ. ಇವುಗಳಲ್ಲಿ ವಿಶ್ವವಿಖ್ಯಾತವಾದುದು 'ಮೂರನೆಯ ಗುಹೆ'. ಇಲ್ಲಿ ಶೈವ ಮತ್ತು ವೈಷ್ಣವ ಎರಡೂ ಸಂಪ್ರದಾಯಗಳ ಪ್ರಭಾವ ಕಾಣಬರುತ್ತದೆ. ಇದು ಚಾಳುಕ್ಯರ ರಾಜನಾಗಿದ್ದ ಮಂಗಳೇಶನ ಕಾಲದಲ್ಲಿ ಅವನಿಂದಲೇ ಕಟ್ಟಿಸಲ್ಪಟ್ಟಿತು. ನಾಲ್ಕು ಗುಹೆಗಳಲ್ಲಿ ಇದೇ ತುಂಬ ಪ್ರಾಚೀನವಾದುದು. ಇದು ನಿರ್ಮಾಣವಾದ ವರ್ಷ ಕ್ರಿಸ್ತಾಬ್ದ 578 ಎಂದು ಖಚಿತವಾಗಿ ಉಲ್ಲೇಖವಿದೆ. ತುಂಬ ಸೊಗಸಾದ ಶಿಲ್ಪವಿನ್ಯಾಸಗಳೂ ಶಿಲಾಪುತ್ಥಳಿಗಳೂ ಇಲ್ಲಿವೆ. ಸುಮಾರು ಅದೇ ಕಾಲದಲ್ಲಿ ನಿರ್ಮಾಣವಾದ ಎರಡನೇ ಗುಹೆಯಲ್ಲಿ ವೈಷ್ಣವ ಧರ್ಮದ ಪ್ರಭಾವ ಹೆಚ್ಚಿದಂತೆ ತೋರುತ್ತದೆ. ಇಲ್ಲಿ ಆದಿವರಾಹನ ಅವತಾರವನ್ನು ತಳೆದ ವಿಷ್ಣುವಿನ ಶಿಲ್ಪಚಿತ್ರಣವಿರುವುದು ಅದ್ಭುತವಾಗಿದೆ. ನಾಲ್ಕನೆಯ ಗುಹೆ ಜೈನರದ್ದು ; ದಿಟವಾಗಿ ಅದೊಂದು ಬಸದಿಯೇ. ತೀರ್ಥಂ

ಕರರಲ್ಲಿ ಮೊದಲನೆಯವನಾದ ವೃಷಭನಾಥನ ಪೂಜೆಗಾಗಿ ಕಟ್ಟಿಸಿದ ಜೈನ ಮಂದಿರ ಅದು.

ಹೀಗೆ ಬಾದಾಮಿಯ ಸ್ಮಾರಕಗಳು ಅತ್ಯುತ್ತಮ ಶಿಲ್ಪಶೈಲಿಗೆ ನಿದರ್ಶನಗಳಾಗಿರುವುದು ಮಾತ್ರವಲ್ಲ; ಇಲ್ಲಿ ಆಳರಸರ ಔದಾರ್ಯದ ಫಲವಾಗಿ ಶೈವ, ವೈಷ್ಣವ, ಜೈನ ಮೂರು ಧರ್ಮಗಳೂ ಬೆಳೆದುಬಂದುವೆಂದು ಸ್ಪಷ್ಟವಾಗುತ್ತದೆ. ಶಿಲ್ಪಶೈಲಿಯ ವೈಶಿಷ್ಟ್ಯದ ಜೊತೆಗೆ ಈ ಗುಹಾಂತರ್ದೇಗುಲಗಳಲ್ಲಿರುವ ವರ್ಣ ಚಿತ್ರಗಳೂ ಅದ್ಭುತ - ಸುಂದರವಾಗಿವೆ. ಅಜಂಟಾ ಚಿತ್ರಗಳನ್ನು ಬಿಟ್ಟರೆ ಬಾದಾಮಿ ಚಿತ್ರಗಳೇ ವಿಶ್ವವಿಖ್ಯಾತವಾದುವು.

ಪಟ್ಟದಕಲ್ಲು

ಬಾದಾಮಿಗೆ ಹತ್ತು ಮೈಲಿ ದೂರದಲ್ಲಿರುವ ಪಟ್ಟದಕಲ್ಲು ಚಾಳುಕ್ಯರಾಜರಿಗೆ ಎರಡನೆಯ ರಾಜಧಾನಿಯಾಗಿದ್ದಿತು. ಬಾದಾಮಿಯು ರಾಜಕಾರಣದ ಕೇಂದ್ರವಾಗಿದ್ದರೆ ಪಟ್ಟದಕಲ್ಲು ಧಾರ್ಮಿಕ ಕೇಂದ್ರವೆನಿಸಿದ್ದಿತು. ಏಳು, ಎಂಟು, ಒಂಬತ್ತನೆಯ ಶತಮಾನಗಳಲ್ಲಿ ಪಟ್ಟದಕಲ್ಲು ಪ್ರಭಾವಶಾಲಿಯಾದ ಕೇಂದ್ರವೇ ಆಗಿದ್ದಿತು. ಮಲಪ್ರಭಾ ನದಿಯ ದಂಡೆಯ ಮೇಲಿರುವ ಈ ಊರು ಇಷ್ಟು ಪ್ರಮುಖವಾದುದು ಸಹಜವೇ.

ಇಲ್ಲಿ ಚಾಲುಕ್ಯ ಶೈಲಿಯ ವೈಶಿಷ್ಟ್ಯವನ್ನು ಸ್ಪಷ್ಟಪಡಿಸುವ ಹಲವಾರು ದೇವಾಲಯಗಳಿವೆ. ವಿರೂಪಾಕ್ಷ ದೇವಾಲಯ, ಪಾಪನಾಥ ದೇವಾಲಯ, ಮಲ್ಲಿಕಾರ್ಜುನ ದೇವಾಲಯ, ಜಂಬುಲಿಂಗ ದೇವಾಲಯ ಇವು ಪಟ್ಟದಕಲ್ಲಿನ ಕೀರ್ತಿಯನ್ನು ಉಳಿಸಿದುವು, ಬೆಳೆಸಿದುವು. ಇವುಗಳಲ್ಲಿ ತುಂಬ ಸೊಗಸಾದ ಮಂದಿರವೆಂದರೆ ವಿರೂಪಾಕ್ಷನ ಗುಡಿ; ಇಲ್ಲಿನ ಶಿಲ್ಪಗಳಂತೂ ಬೆರಗುಗೊಳಿಸುವಂಥವು. ಆ ಕಾಲದ ಜನಜೀವನವನ್ನು ಚೆನ್ನಾಗಿ ಪ್ರತಿಬಿಂಬಿಸುವ ಶಿಲ್ಪಫಲಕಗಳು ಇಲ್ಲಿರುವುದು ಸ್ವಾರಸ್ಯವಾಗಿದೆ; ಅಧ್ಯಯನ ಮಾಡುವವರಿಗೆ ಉಪಯುಕ್ತವಾಗುತ್ತವೆ.

ವಿರೂಪಾಕ್ಷ ದೇವಾಲಯವನ್ನು ಲೋಕಮಹಾದೇವಿ ಎಂಬ ರಾಣಿಯು ತನ್ನ ಗಂಡ ಇಮ್ಮಡಿ ವಿಕ್ರಮಾದಿತ್ಯನ ನೆನಪಿನಲ್ಲಿ ಕಟ್ಟಿಸಿದಳು. ಕ್ರಿಸ್ತಾಬ್ದ 733

ರಿಂದ 747 ರವರೆಗೆ ಆಳಿದ ಈ ರಾಜನು ಪಲ್ಲವರನ್ನು ಸದೆಬಡೆದನು; ಈ ವಿಜಯದ ಸ್ಮಾರಕವೇ ವಿರೂಪಾಕ್ಷನ ಗುಡಿ. ಈ ಗುಡಿಯ ಮೇಲೂ, ಮಲ್ಲಿಕಾರ್ಜುನನ ಗುಡಿಯ ಮೇಲೂ ದ್ರಾವಿಡ ಶೈಲಿಯ ಗೋಪುರಗಳಿವೆ. ಉತ್ತರಾದಿ ಮತ್ತು ದಕ್ಷಿಣಾದಿ ಪದ್ಧತಿಗಳ ಶಿಖರಗಳು ಪಕ್ಕ ಪಕ್ಕದಲ್ಲಿಯೇ ಇರುವುದು ಪಟ್ಟದಕಲ್ಲಿನ ವಾಸ್ತುಶಿಲ್ಪದ ಸ್ವಾರಸ್ಯ.

ಐಹೊಳೆ

ಬಾದಾಮಿಯಿಂದ ಕೆಲವು ಮೈಲಿಗಳ ದೂರವಿರುವ ಈಗಿನ ಹಳ್ಳಿ ಐಹೊಳೆಯೂ ಚಾಳುಕ್ಯ ಸಂಸ್ಕೃತಿಯ ಕೇಂದ್ರವಾಗಿದ್ದಿತು. ಇದೂ ಮಲಪ್ರಭಾ ನದಿಯ ದಂಡೆಯ ಮೇಲೇ ಇರುವ ನಗರವಾಗಿದ್ದಿತು. ಊರಿನ ಹೆಸರು ಬಂದುದಕ್ಕೆ ಸ್ವಾರಸ್ಯವಾದ ಒಂದು ಕಥೆಯನ್ನು ಹೇಳುತ್ತಾರೆ. ಜಮದಗ್ನಿಯ ಮಗನಾದ ಪರಶುರಾಮನು ತನ್ನ ತಂದೆಯ ಅಪ್ಪಣೆಯಂತೆ ತಾಯಿ ರೇಣುಕೆಯ ತಲೆ ಕಡಿದ ದನಷ್ಟೆ? ಆಕೆಯ ರಕ್ತ ಅವನ ಕೊಡಲಿಗೆ ಅಂಟಿದ್ದು ಅದನ್ನು ಹೋಗಲಾಡಿಸಲು ತುಂಬ ಪ್ರಯತ್ನಪಟ್ಟು ವಿಫಲನಾಗಿದ್ದಾಗ, ಈ ಸ್ಥಳದಲ್ಲಿ ಮಲಪ್ರಭಾ ನದಿಯನ್ನು ಕಂಡೊಡನೆ 'ಐ ಐ ಹೊಳೆ !' ಎಂದು ಸಂತೋಷದಿಂದ ಕೂಗಿಕೊಂಡನಂತೆ. ಅಂದಿನಿಂದ ಈ ಪ್ರದೇಶ ಐಹೊಳೆ ಎನಿಸಿಕೊಂಡಿತಂತೆ. ಕೊಡಲಿಯಾಕಾರದ ಬಂಡೆಯೊಂದು ಅಲ್ಲಿದೆ; ಪರಶುರಾಮನ ಪದಚಿಹ್ನೆಗಳಿರುವ ಬಂಡೆಯೂ ಇದೆ. ಊರ ಪುರಾಣದಲ್ಲಿ ಪರಶುರಾಮನಿಗೆ ಪ್ರಾಶಸ್ತ್ಯವಿದೆ. ಲಕುಲೀಶನೆಂಬ ಮುನಿಯು ಇಲ್ಲಿದ್ದನೆಂದೂ ಹೇಳುತ್ತಾರೆ.

ಇಲ್ಲಿನ ದುರ್ಗೆ ಗುಡಿ ಪ್ರಸಿದ್ಧವಾದುದು. ಕ್ರಿಸ್ತಾಬ್ದ 600ರ ಸುಮಾರಿಗೆ ಕಟ್ಟಿದ ಗುಡಿ ಇದು. ಚಾಳುಕ್ಯ ಶೈಲಿಯ ನೀಚೋಚ್ಚವೆನ್ನಬಹುದಾದ ಆಕಾರದ ಗುಡಿಗೆ ಇದು ಸ್ಪಷ್ಟ ನಿದರ್ಶನ. ಅಂತರಾಳ, ಗರ್ಭಗೃಹ, ಪ್ರಾಕಾರ, ಮೊದಲಾದ ವಿವರಗಳು ಇಲ್ಲಿ ಮೈದಳೆದಿವೆ. ವಾಸ್ತುಶಿಲ್ಪದ ವಿಕಾಸದಲ್ಲಿ ಇದೊಂದು ಹೆಜ್ಜೆ. ಹೀಗೆಯೇ ಲಾಡ್‌ಖಾನ್ ಗುಡಿಯೂ ಸ್ವಾರಸ್ಯವಾದುದು; ದುರ್ಗೆ ಗುಡಿಗಿಂತ ಪ್ರಾಚೀನವಾದ ಈ ಗುಡಿಯನ್ನು ಕ್ರಿ. 450 ರಲ್ಲಿಯೇ ಕಟ್ಟಲಾಯಿತೆಂದು ಹೇಳುತ್ತಾರೆ. ಇವೆರಡೂ ಗುಡಿಗಳು ಚಾಳುಕ್ಯ ವಾಸ್ತುಶಿಲ್ಪಕ್ಕೆ ಪ್ರಮಾಣಭೂತ

ವಾದುವು. ಗಂಧರ್ವರ, ಅಪ್ಸರೆಯರ ಚಿತ್ರಣ ಇಲ್ಲಿ ಕಾಣಸಿಕೊಳ್ಳುತ್ತದೆ. ದೇವಾಲಯವು ದೇವತೆಗಳ ವಿಹಾರ ಭೂಮಿಯೆಂದು ಸೂಚಿಸಲು ಗಂಧರ್ವ ಮುಖಿಗಳನ್ನು ರೂಪಿಸುವ ಪದ್ಧತಿಯನ್ನು ಇಲ್ಲಿ ನೋಡಬಹುದು. ಚಿತ್ರಣ ದಲ್ಲಿಯೂ ಸೌಂದರ್ಯದೃಷ್ಟಿ ಸ್ಪಷ್ಟವಾಗಿದೆ.

ಐಹೊಳೆಯ ಹೆಸರುವಾಸಿಯಾದ ಗುಡಿಯೆಂದರೆ ಹುಚ್ಚಿಮಲ್ಲಿ ಗುಡಿ. ಇದನ್ನು ಅಧ್ಯಯನ ಮಾಡಿದ ಡಾ॥ ಆನಂದ ಕುಮಾರ ಸ್ವಾಮಿಗಳು ಇದು ಭುವನೇಶ್ವರದ ಪರಶುರಾಮೇಶ್ವರ ದೇವಾಲಯ (ಕ್ರಿ. 750ರ ಸುಮಾರಿನದು) ವನ್ನು ನೆನಪಿಗೆ ತರುವುದೆಂದು ಹೇಳಿದ್ದಾರೆ. ಗುಪ್ತಶೈಲಿಯ ಆ ದೇವಾಲ ಯಕ್ಕೂ ಚಾಲುಕ್ಯ ಶೈಲಿಯ ಈ ಗುಡಿಗೂ ಸಂಬಂಧವಿರುವುದು ಗಮನಾರ್ಹ ವಾದುದು. ಗುಡ್ಡವೊಂದರ ಮೇಲಿರುವ ಮೇಗುಟಿ ದೇವಾಲಯವು ತ್ರಿಕೂಟವಾ ಗಿದ್ದು ಪ್ರದಕ್ಷಿಣಾ ಪಥವನ್ನೊಳಗೊಂಡಿದೆ; ಇಲ್ಲಿ ಶಾಸನವೊಂದೂ ಇದೆ.

ಈ ಊರಿನ ಸುತ್ತ ಮುತ್ತ ಒಟ್ಟು ಎಪ್ಪತ್ತು ದೇವಾಲಯಗಳಿದ್ದು ಬಹು ಮಟ್ಟಿಗೆ ಅವು ಉತ್ತಮ ಸ್ಥಿತಿಯಲ್ಲಿಯೇ ಇವೆ.

ಅಂತೂ ಚಾಳುಕ್ಯ ರಾಜರ ಕಾಲದಲ್ಲಿ ಪ್ರಬಲವೂ ಪ್ರಸಿದ್ಧವೂ ಆಗಿದ್ದ ಈ ಪ್ರದೇಶವು ವಿಜಯಪುರವೆಂದು ಕರೆಸಿಕೊಂಡುದು ಆಶ್ಚರ್ಯವೇನಲ್ಲ. ದಕ್ಷಿಣ ದಲ್ಲಿ 1347ರ ಸುಮಾರಿಗೆ ತಲೆಯೆತ್ತಿಕೊಂಡ ಬಹಮನೀ ಸಾಮ್ರಾಜ್ಯವು ಐದು ಭಾಗಗಳಾಗಿ ಒಡೆಯಿತಷ್ಟೆ? ಬಿರಾರಿನ ಇಮದ್ ಶಾಹಿ, ಅಹ್ಮದ್ ನಗ ರದ ನಿಜಾಂಶಾಹಿ, ಬಿದರ್‌ನ ಬರೀದ್‌ಶಾಹಿ, ಗೋಲ್ಕೊಂಡದ ಕುತುಬ್‌ಶಾಹಿಗ ಳಂತೆ ಬಿಜಾಪುರದ ಅದಿಲ್‌ಶಾಹಿಗಳೂ ಸ್ವತಂತ್ರರಾದ ಅರಸರಾದರು. ಇವ ರಲ್ಲಿ ಮೊದಲನೆಯವನಾದ ಯೂಸುಫ್ (1489-1510) ಬಿದರ್ ಅರಸನ ಆಸ್ಥಾನದಲ್ಲಿದ್ದವನು. ಬಿಜಾಪುರದ ರಾಜ್ಯಪಾಲನಾಗಿ ನೇಮಕಗೊಂಡನಂತರ ಸ್ವತಂತ್ರನಾಗಿ ಅದಿಲ್‌ಶಾಹಿ ವಂಶವನ್ನು ಆರಂಭಿಸಿದನು. ಇವನ ವಂಶದಲ್ಲಿ ಎಂಟು ಮಂದಿ ಅರಸರು ಬಿಜಾಪುರ ಪ್ರಾಂತ್ಯವನ್ನು ಆಳಿದರು. ಕಡೆಯವನು ಸಿಕಂದರ್ (1772-1788).

ಇವನ ಆಳ್ವಿಕೆಯಲ್ಲಿ ಮುಸಲ್ಮಾನರ ಪ್ರಭಾವ ಇಲ್ಲಿ ಮೂಡಿತು. ಅವರ ಸ್ಮಾರಕಗಳನ್ನು ಇಂದೂ ಬಿಜಾಪುರ ನಗರದಲ್ಲಿ ಕಾಣಬಹುದು. ಸುಲ್ತಾನ್ ಮುಹಮ್ಮದ್ (1626-1696) ಕಟ್ಟಿಸಿದ ಗೋಲ್‌ಗುಂಬಜ್ ವಿಶ್ವವಿಖ್ಯಾತ ವಾದ ಕಟ್ಟಡ. ಚಚ್ಚೌಕವಾದ ಬುನಾದಿಯ ಮೇಲೆ ಅಂಡಾಕಾರವಾಗಿ ಎದ್ದಿರುವ ಈ ಸಮಾಧಿಯ ಒಟ್ಟು ವಿಸ್ತಾರ 18,225 ಚದರ ಅಡಿಗಳು !

1786 ರಿಂದ 1818ರವರೆಗೂ ಬಿಜಾಪುರವು ಮಹಾರಾಷ್ಟ್ರದ ಪೇಶ್ವೆಯರ ಆಡಳಿತದಲ್ಲಿದ್ದಿತು. 1818 ರಲ್ಲಿ ಸರ್ ಥಾಮಸ್ ಮನ್ರೋ ಎಂಬುವವನ ನೇತೃತ್ವದಲ್ಲಿ ಇಂಗ್ಲೀಷರ ಸೇನೆ ಇದನ್ನು ದಾಳಿಮಾಡಿ ವಶಪಡಿಸಿಕೊಂಡಿತು. ಆತನ ಸಲಹೆಯಂತೆ ಈ ರಾಜ್ಯವು ಬೊಂಬಾಯಿ ಪ್ರಾಂತ್ಯಕ್ಕೆ ಸೇರಿಸಲ್ಪಟ್ಟಿತು. ಮುಂದೆ 1824 ರಲ್ಲಿ ದಿವಾಕರ ಎಂಬುವವನ ನಾಯಕತ್ವದಲ್ಲಿಯೂ 1840 ರಲ್ಲಿ ನರಸಿಂಹ ಎಂಬುವವನ ನಾಯಕತ್ವದಲ್ಲಿಯೂ ಇಂಗ್ಲೀಷರ ವಿರುದ್ಧ ಬಂಡಾಯಗಳು ನಡೆದವು, ಇವು ವಿಫಲವಾದರೂ ಸ್ವಾತಂತ್ರ್ಯ ಪ್ರೀತಿಯು ಈ ಪ್ರಾಂತ್ಯದಲ್ಲಿ ಉಳಿದುಬಂದಿತೆನ್ನಲು ಸಾಕ್ಷಿಗಳಾಗಿವೆ.

ಕಾರ್ಕಳದ ಗೊಮ್ಮಟಸ್ವಾಮಿ

ದಕ್ಷಿಣ ಕನ್ನಡನಾಡು ನಿಸರ್ಗ ರಮಣೀಯ. ಆಕಾಶದಲ್ಲಿ ಕೈ ಬೀಸುವ ದೊಡ್ಡದೊಡ್ಡ, ಬಗೆಬಗೆಯ ಮರಗಳು, ಹಚ್ಚ ಹಸುರಾಗಿ ಹರಡುವ ಗಿಡ-ಬಳ್ಳಿಗಳು, ಪಾತಾಳಕ್ಕೆ ಜಾರುವ ಕಮರಿಗಳು, ಜಗ್ಗೆಂದು ಎದ್ದು ನಿಲ್ಲುವ ಬಂಡೆ ಗುಡ್ಡಗಳು. ಪ್ರಕೃತಿಯಲ್ಲಿ ಮಾರ್ದವಕ್ಕಿಂತ ಸಂಭ್ರಮವನ್ನು ಎಬ್ಬಿಸಿ ಮೋಹಕವಾಗಿ ನಿಲ್ಲುವ ಭವ್ಯತೆ ಕಾಣುತ್ತದೆ. ಮಾನವನ ವ್ಯವಸಾಯದ ಕಾರ್ಪಣ್ಯ ಕಾಣದೆ ಸ್ವಚ್ಛಂದವಾಗಿ, ಕಠೋರವಾಗಿ, ನಿಷ್ಠುರವಾಗಿ ಬೆಳೆದ ಪ್ರಕೃತಿ ಅದು. ಮಂಗಳೂರಿನಿಂದ ಉಡುಪಿಗೆ ಹೋಗುವ ದಾರಿಯಲ್ಲಿ ಕಾರ್ಕಳ ಇಂಥ ಸೊಬಗಿನ ಸಣ್ಣ ಹಳ್ಳಿ. ಬಳಿಯಲ್ಲಿ ಗುಂಡು ಬಂಡೆಗಳ ಗುಡ್ಡ. ಸುಮಾರು ಮುನ್ನೂರು-ನಾನ್ನೂರು ಅಡಿ ಎತ್ತರವಿರಬಹುದು. ಗುಡ್ಡದ ಶಿರೋಭಾಗದಲ್ಲಿ ಶಿಲಾಮಯ ವೇದಿ. ವೇದಿಯ ಮೇಲೆ ಪೂರ್ವಕ್ಕೆ ಮುಖಮಾಡಿ, ಆಕಾಶದಲ್ಲಿ ಎದ್ದು, ಮೋಡಗಳನ್ನು ಮುಟ್ಟಿ ನೆಟ್ಟಗೆ ನಿಂತ ಮಹಾಮೂರ್ತಿ ಗೊಮ್ಮಟಸ್ವಾಮಿಯದು.

ಅಖಂಡ ಶಿಲೆಯಲ್ಲಿ ಕಡೆದ ಈ ಪ್ರತಿಮೆಯ ಎತ್ತರ ಆಪಾದಮಸ್ತಕ ನಲವತ್ತೊಂದು ಅಡಿ ಐದು ಅಂಗುಲ. ಬಾಗದೆ ಬಳುಕದೆ ನಿಗಿನೆಟ್ಟಗೆ ನಿಂತ ದಿಗಂಬರ ಮೂರ್ತಿ ಕಾಯೋತ್ಸರ್ಗ ಅಥವ ಪ್ರತಿಮಾಯೋಗವೆಂಬ ಭಂಗಿಯಲ್ಲಿದೆ. ಬಾಹುಬಲಿಯೆಂಬ ಹೆಸರಿಗೆ ಅನ್ವರ್ಥವಾಗಿ ವಿಶಾಲವಾದ ವಕ್ಷಸ್ಥಲ, ಪುಷ್ಕಲವಾಗಿ ಪಾರ್ಶ್ವದಲ್ಲಿ ಇಳಿಬಿದ್ದ ತೋಳುಗಳು, ತೆಳುವಾದ ಕಟಿಪ್ರದೇಶ, ವೀತರಾಗನಾದ ಮುನಿಗೆ ಸಹಜವಾದ ನಿಶ್ಚಲ ಶಾಂತ ಮುಖಮುದ್ರೆ, ಮಹಾಪುರುಷ ಲಕ್ಷಣವಾದ ದೀರ್ಘಕರ್ಣ, ಸಣ್ಣದಾಗಿ ಗುಂಗುರಿಗೆ ತಿರುಗಿದ ಕೂದಲು.

ಒಟ್ಟಿನಲ್ಲಿ ಅದ್ಭುತವಾದ, ಸುಂದರವಾದ, ಶಿಲ್ಪಕಲೆ. ಮೂರ್ತಿಯ ನೆಟ್ಟ ದೃಷ್ಟಿ ದೂರದ ಗಿರಿಕಂದರದ ವನರಾಜಿಯಮೇಲೆ, ಮೈಲುಗಳಗಟ್ಟಲೆ ಉತ್ತರ-ದಕ್ಷಿಣ ಹರಡಿರುವ ಅರಣ್ಯದ ಚೇತನದತ್ತ. ನೂರಾರು ವರ್ಷಗಳು ಮಳೆ ಗಾಳಿ ಬಿಸಿಲುಗಳ ಮಧ್ಯೆನಿಂತ ಮೂರ್ತಿ ನಡುಗದಿದ್ದರೂ ವಿವರ್ಣವಾಗಿದೆ, ಶಿಲೆ ಕರಿಬಣ್ಣಕ್ಕೆ ತಿರುಗಿದೆ. ದೂರದಿಂದಲೇ ಎದ್ದು ಕಾಣುವ ಗೊಮ್ಮಟ ಸ್ವಾಮಿಯ ಲಾವಣ್ಯ ಇದರಿಂದ ಹೆಚ್ಚಿದೆ. ಸೊಂಟದಿಂದ ಮೇಲೆ ಪ್ರತಿಮೆ ಪೂರ್ಣವಾಗಿ ನಿರುಪಾಧಿಕ; ಇಡೀ ಗಾತ್ರಕ್ಕೆ ಆಧಾರವಾಗಿ, ಕಾಲುಗಳ ಹಿಂಭಾಗ ದಲ್ಲಿ ಆಸರೆಯಾಗಿ ಹಾವಿನ ಹುತ್ತಗಳನ್ನು ಬಿಡಿಸಿರುವ ಶಿಲಾ ಫಲಕ ಇದೆ. ಇವುಗಳಿಂದ ಅಲ್ಲಲ್ಲಿ ಪುರಾಣಪರಿಚಿತವಾದ ಕುಕ್ಕುಟಸರ್ಪಗಳು ಕಾಣಿಸಿ ಕೊಳ್ಳುತ್ತವೆ. ಕುಕ್ಕುಟಸರ್ಪಗಳು ಪಕ್ಷಿದೇಹದ ಸರ್ಪಮುಖದ ವಿಚಿತ್ರ, ಘಾತಕ ಪ್ರಾಣಿಗಳು. ಮೂರ್ತಿಯ ಎರಡೂ ಕಾಲುಗಳ ಮೇಲೆ ಮಾಧವೀ ಲತೆಗಳು ಹರಡಿ ತೋಳುಗಳಿಗೆ ಹಬ್ಬಿ ಫಲಗುಚ್ಛದಲ್ಲಿ ಮುಗಿಯುವಂತೆ ಚಿತ್ರಿತ ವಾಗಿವೆ. ಮಾಧವೀಲತೆ ಬೇಸಿಗೆಯಲ್ಲಿ ಸುವಾಸನೆಯ ಬಿಳಿ ಹೂಗಳನ್ನು ಬಿಡುವ ಬಳ್ಳಿ; ಕಾಡು ಗುಲಗಂಜಿಯ ಜಾತಿಗೆ ಸೇರಿದ್ದು. ನಿಂತ ಕಡೆ ಹುತ್ತ ಬೆಳೆದು ಬಳ್ಳಿ ಮೈಮೇಲೆ ಹರಡುವುದು ದೀರ್ಘಕಾಲದ ತಪಶ್ಚರ್ಯೆಯಲ್ಲಿ ನಿಶ್ಚಲನಾಗಿ ಮಗ್ನನಾದ ತಾಪಸಿಯನ್ನು ಸೂಚಿಸುತ್ತದೆ. ಗೊಮ್ಮಟನೆಂದು ವಿಖ್ಯಾತನಾದ ಬಾಹುಬಲಿ ಹೀಗೆ ತಪಸ್ಸುಮಾಡಿ ಕೇವಲಿಯಾದ ಜೈನಮುನಿ.

ದಿಗಂಬರ ಪಂಥದ ವೈಶಿಷ್ಟ್ಯ

ದಕ್ಷಿಣ ಕನ್ನಡ ಜಿಲ್ಲೆಗೆ ಮುಂಚೆ ತೌಲವದೇಶ ಎಂಬ ಹೆಸರಿದ್ದಿತು. ಈಗ ಉಡುಪಿ ತಾಲ್ಲೂಕಿಗೆ ಸೇರಿದ ಕಾರ್ಕಳ ಒಂದು ಕಾಲಕ್ಕೆ ಭೈರರಸ ಒಡೆಯರ ರಾಜಧಾನಿಯೆಂದು ಪ್ರಸಿದ್ಧವಾದ ನಗರವಾಗಿತ್ತು. ಹಿರಿಯಂಗಡಿ, ಬೆಟ್ಟದಂಗಡಿ ಕೆರೆಯಕೋಡಿ ಎಂಬ ಮೂರು ಮುಖ್ಯ ವಿಭಾಗಗಳಾಗಿ ಹಿರಿಯಂಗಡಿ ಒಂದು ಮೈಲು ವಿಸ್ತೀರ್ಣ ಇದ್ದು 770 ಅಂಗಡಿಗಳಿಂದ ಕೂಡಿತ್ತು; ಬೆಟ್ಟದಂಗಡಿ ಪಾಂಡ್ಯನಗರಿಯೆಂದು ವಿಶ್ರುತವಾಗಿದ್ದಿತು. ಸುಂದರವಾದ ಕೆರೆ ಇಂದಿಗೂ ಇದೆ. ಸುಮಾರು ಹತ್ತನೆಯ ಶತಮಾನದ ಹೊತ್ತಿಗೆ ಕಾರ್ಕಳ, ಮತ್ತು ಅದರ

ಹತ್ತಿರದ ವೇಣೂರು, ಮೂಡುಬಿದ್ರಿ ಈ ಮೂರು ಊರುಗಳನ್ನೊಳಗೊಂಡ ಪ್ರದೇಶ ದಕ್ಷಿಣ ಜೈನಧರ್ಮದ ಕೇಂದ್ರವಾಗಿದ್ದಿತು. ಮೂಡುಬಿದ್ರಿಯಲ್ಲಿ ಜೈನಮಠ, ಇಪ್ಪತ್ತೆರಡು ಬಸದಿಗಳು, ಅನೇಕಾನೇಕ ಪ್ರತಿಮೆಗಳು ಇನ್ನೂ ಇವೆ. ವೇಣೂರಿನಲ್ಲಿ 1603ರಲ್ಲಿ ಪ್ರತಿಷ್ಠಿತವಾದ 35 ಅಡಿ ಎತ್ತರದ ಗೊಮ್ಮಟ ಸ್ವಾಮಿಯ ಮೂರ್ತಿ ಇದೆ. ಜೈನಧರ್ಮದ ಅವಶೇಷಗಳು ಅಲ್ಲೆಲ್ಲ ವಿಸ್ತೃತ. ದಕ್ಷಿಣಕ್ಕೆ ಬಂದ ಜೈನಧರ್ಮ ದಿಗಂಬರಪಂಥದ್ದು. ಭಾರತದಲ್ಲೇ ಖ್ಯಾತಿ ವಂತರಾದ ದಿಗಂಬರ ಜೈನಾಚಾರ್ಯರು ಕನ್ನಡನಾಡಿನಲ್ಲಿ ನೆಲೆಸಿದ್ದುದು ಮಾತ್ರ ವಲ್ಲ, ಸಂಸ್ಕೃತ-ಪ್ರಾಕೃತ ಗ್ರಂಥಗಳ ಜತೆಯಲ್ಲಿ ಕನ್ನಡ ಗ್ರಂಥಗಳನ್ನೂ ರಚಿಸಿ ದ್ದಾರೆ. ಸಮಂತಭದ್ರ, ಪೂಜ್ಯಪಾದ, ವೀರಸೇನ, ಜಿನಸೇನ, ಅಕಲಂಕಭಟ್ಟ, ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿ, ಪುಷ್ಪದಂತ ಮುಂತಾದವರು. ಹೀಗೆ, ವಲಸೆ ಯಾಗಿ ಬಂದ ಧರ್ಮ ನೆಲೆಸಲು ಅನುಕೂಲವಾಯಿತು. ದಕ್ಷಿಣ ದಿಗಂಬರ ಪಂಥದ ವೈಶಿಷ್ಟ್ಯವೆಂದರೆ ಅತಿಪ್ರಮಾಣದ ಗೊಮ್ಮಟ ಮೂರ್ತಿಗಳು.

ಕಾರ್ಕಳದ ಮೂರ್ತಿಯ ರೀತಿಯಲ್ಲೇ ಪ್ರಸಿದ್ಧವಾದ ಮೂರ್ತಿಗಳು ಕನ್ನಡನಾಡಿನಲ್ಲಿ ಇನ್ನೆರಡು ಕಡೆ ಕಾಣಬರುತ್ತವೆ. ಶ್ರವಣಬೆಳಗೊಳದ ಗೊಮ್ಮಟೇಶ್ವರ ಜಗತ್ಪ್ರಸಿದ್ಧವಾದ ಶಿಲಾಮೂರ್ತಿ. ಇರುವ ಗೊಮ್ಮಟ ಮೂರ್ತಿಗಳಲ್ಲೆಲ್ಲ ಇದೇ ಶ್ರೇಷ್ಠವಾದ ಕಲಾಕೃತಿ, ಇದೇ ಪ್ರಪ್ರಥಮ. ಇದರ ಸ್ಫೂರ್ತಿಯಿಂದಲೇ ಉಳಿದವು ಬಂದವು. ಗಂಗಕುಲಚಂದ್ರನೆಂದು ಕೀರ್ತಿತ ನಾದ ದೊರೆ ರಾಚಮಲ್ಲನ ಮಂತ್ರಿಯಾಗಿದ್ದ ಚಾವುಂಡರಾಯ ಕ್ರಿಸ್ತಾಬ್ದ 981ರಲ್ಲಿ ಪ್ರತಿಷ್ಠಾಪಿಸಿದ ಮೂರ್ತಿ ಇದು. ದೊಡ್ಡ ಬೆಟ್ಟದ ತುದಿಯಲ್ಲಿ ನಿಂತ ಈ ಸುಂದರಸುಭಗವಾದ ಪ್ರತಿಮೆ 57 ಅಡಿ ಎತ್ತರ ಇದ್ದು, ಮುಖ ಮುದ್ರೆಯ ಲಾವಣ್ಯದಿಂದ ಜಗತ್ತನ್ನು ಬೆರಗು ಮಾಡಿದೆ. ಈ ಚಾವುಂಡ ರಾಯನ ವಂಶೀಕನಾದ ನಾಲ್ಕನೆಯ ವೀರ ತಿಮ್ಮಣ್ಣಾಜಿ 1604ರಲ್ಲಿ ವೇಣೂ ರಿನ ಗುಡ್ಡದ ಮೇಲೆ 35 ಅಡಿ ಎತ್ತರದ ಗೊಮ್ಮಟಮೂರ್ತಿಯನ್ನು ಶ್ರವಣ ಬೆಳಗೊಳದ ಚಾರರುಕೀರ್ತಿಪಂಡಿತರ ಸಲಹೆಯಂತೆ ನಿಲ್ಲಿಸಿದ. ಮೈಸೂರು ತಾಲ್ಲೂಕಿನ ಇಲವಾಲದ ಬಳಿಯ ಶ್ರವಣಗುಟ್ಟದ ಮೇಲೆ 20 ಅಡಿ ಎತ್ತರದ ಗೊಮ್ಮಟಮೂರ್ತಿಯೊಂದಿದೆ; ಇದು ಹದಿನಾಲ್ಕನೆಯ ಶತಮಾನದ ಕೃತಿ.

ಹೀಗೆಯೇ ಅಲ್ಲಲ್ಲಿ ಕಡಮೆ ಪ್ರಮಾಣದ ಪ್ರತಿಮೆಗಳು ಸಿಗುತ್ತವೆ. ಇವುಗಳ ಭಂಗಿ-ವೈಶಿಷ್ಟ್ಯಗಳು ಸರ್ವಸಾಮಾನ್ಯವಾಗಿದ್ದರೂ ವ್ಯತ್ಯಾಸಗಳಿಲ್ಲದೆ ಇಲ್ಲ. ಆದರೆ ಈ ಎಲ್ಲ ಮೂರ್ತಿಗಳ ಹಿಂದಿನ ಕಲ್ಪನೆ ಬಾಹುಬಲಿಯ ಕಥೆ.

ಮೂರ್ತಿಯ ಮೂಲ

ಆದಿ ತೀರ್ಥಂಕರನಾದ ಋಷಭದೇವ ರಾಜನಾಗಿದ್ದ; ಅವನಿಗೆ ಇಬ್ಬರು ಪತ್ನಿಯರು: ಯಶೋವತೀ, ಸುನಂದಾ. ಯಶೋವತಿಗೆ ಭರತನೆಂಬ ಮಗ. ಸುನಂದೆಗೆ ಭುಜಬಲಿ (ಬಾಹುಬಲಿ, ದೋರ್ಬಲಿ, ಸೌನಂದಿ ಈ ಹೆಸರುಗಳೂ ಉಂಟು) ಯೆಂಬ ಮಗ ಆದರು. ಋಷಭ ಬಹುಕಾಲ ರಾಜ್ಯ ಆಳಿದ ಮೇಲೆ ತನ್ನ ರಾಜ್ಯವನ್ನು ಇಬ್ಬರು ಮಕ್ಕಳಿಗೆ ವಿಭಾಗಮಾಡಿ ವಾನಪ್ರಸ್ಥನಾದ. ಭುಜಬಲಿ, ಇಚ್ಛಾದೇವಿಯೆಂಬಾಕೆಯನ್ನು ಮದುವೆಯಾಗಿ ಪೌದನಪುರದಲ್ಲಿ ತನ್ನ ರಾಜ್ಯಭಾರ ನಡೆಸುತ್ತಿದ್ದ. ಒಮ್ಮೆ ಯಾವುದೋ ಕಾರಣದಿಂದ ಅಣ್ಣ-ತಮ್ಮಂದಿರಲ್ಲಿ ಮನಸ್ತಾಪ ಹುಟ್ಟಿ ದೊಡ್ಡ ಸಮರವೇ ನಡೆದು ಅಣ್ಣನಾದ ಭರತ ಸೋತ. ಆದರೆ ಈ ಪ್ರಸಂಗದಿಂದ ಭುಜಬಲಿಗೆ ವೈರಾಗ್ಯ ಹುಟ್ಟಿ ರಾಜ್ಯವನ್ನೆಲ್ಲ ಅಣ್ಣನಿಗೇ ಸಮರ್ಪಿಸಿ, ನಿಂತಾಗ ತನ್ನ ಕಾಲು ಹಿಡಿಸುವಷ್ಟು ಭೂಮಿಯನ್ನು ದಾನವಾಗಿ ಪಡೆದು, ಅಲ್ಲೇ ದೀರ್ಘಕಾಲ ಪ್ರತಿಮಾಯೋಗ ರಲ್ಲಿ ನಿಂತು, ಕ್ಲೇಶಗಳನ್ನು ಕಳೆದು, ಕರ್ಮವನ್ನು ಗೆದ್ದು 'ಕೇವಲ'ವೆಂಬ ಯೋಗದ ಪರಾಕಾಷ್ಠತೆಯನ್ನು ಮುಟ್ಟಿದ. ಹೀಗೆ ಮಹಾನುಭಾವನಾದ ತಮ್ಮನನ್ನು, ಭರತೇಶ ಬಂದು ಪೂಜಿಸಿ, ಅವನ ಸನ್ಮಾನಕ್ಕೆಂದು 525ಅಡಿ ಎತ್ತರದ ಪ್ರತಿಕೃತಿಯನ್ನು ಸುವರ್ಣದಲ್ಲಿ ಮಾಡಿಸಿದ. ಪೌದನಪುರದ ಈ ಮೂರ್ತಿಯನ್ನು ದೇವತೆಗಳೂ ಬಂದು ಆರಾಧಿಸುತ್ತಿದ್ದರು. ಕಾಲಕ್ರಮದಲ್ಲಿ ಪೌದನಪುರ ನಿರ್ಜನವಾಗಿ, ಪ್ರದೇಶದಲ್ಲಿ ಭಯಂಕರವಾದ ಕುಕ್ಕುಟ ಸರ್ಪಗಳ ಹಾವಳಿ ಹೆಚ್ಚಾಗಿ, ಸಾಮಾನ್ಯ ಮನುಷ್ಯರಿಗೆ ಅಗಮ್ಯವಾಯಿತು; ಬಾಹುಬಲಿಯ ಮೂರ್ತಿ ಜನರ ಸ್ಮೃತಿಪಥದಿಂದಲೂ ಜಾರಿತು.

ಗಂಗರಸನ ಅಮಾತ್ಯ ಚಾವುಂಡರಾಯನ ಗುರುವಾದ ಜಿನಸೇನನೆಂಬ ಮುನಿ ಒಮ್ಮೆ ದಕ್ಷಿಣದ ಯಾತ್ರೆ ಹೋಗಿದ್ದವನು ಈ ಮೂರ್ತಿಯನ್ನು ಸಂದ

ರ್ಶಿಸಿ ಬಂದು ರಾಯನ ತಾಯಿ ಕಾಳಲಾದೇವಿಯ ಮುಂದೆ ಬಾಹುಬಲಿಯ ಮೂರ್ತಿಯ ವೈಭವವನ್ನು ವರ್ಣಿಸಿದ. ಕಾಳಲಾದೇವಿಗೆ ಮೂರ್ತಿಯನ್ನು ನೋಡುವ ಕಾತರತೆ ಹುಟ್ಟಿ ಮೂರ್ತಿ ಸಂದರ್ಶನವಾಗದೆ ಹಾಲನ್ನೂ ಮುಟ್ಟೆನೆಂದು ಹಟಹಿಡಿದಳು. ಚಾವುಂಡರಾಯನು ತನ್ನ ತಾಯಿ, ಹೆಂಡತಿ, ಗುರು ಪರಿವಾರಜನ ಸಹಿತನಾಗಿ ಪೌದನಪುರಕ್ಕೆ ಹೊರಟ. ದಾರಿಯಲ್ಲಿ ಈಗ ಶ್ರವಣಬೆಳಗೊಳವಿರುವ ಕಡೆ ಯಾತ್ರಿಕರು ಬಿಡಾರ ಬಿಟ್ಟರು. ಅಲ್ಲಿ ರಾತ್ರಿ ತಂಗಿದ್ದಾಗ 'ಪೌದನಪುರಕ್ಕೆ ಹೋಗುವುದು ಅಸಾಧ್ಯ. ಆದರೆ ಭುಜಬಲಿ ಸ್ವಾಮಿ ನಿನ್ನ ಭಕ್ತಿಗೆ ಮೆಚ್ಚಿ ಇಲ್ಲಿಯೇ ಕಾಣಿಸಿಕೊಳ್ಳುತ್ತಾನೆ. ನಾಳೆ ಶುಚಿರ್ಭೂತನಾಗಿ ಚಿಕ್ಕಬೆಟ್ಟದ ಮೇಲೆ ನಿಂತು ದೊಡ್ಡಬೆಟ್ಟದ ಕಡೆ ಬಾಣ ಪ್ರಯೋಗ ಮಾಡು' ಎಂದು ಅವನ ಅಭಿಮಾನದೇವತೆ ಯಕ್ಷಿಣಿ ಪದ್ಮಾವತಿ ಹೇಳಿದ ಹಾಗೆ ಕನಸಾಯಿತು. ಅಂತೆಯೇ ಮರುದಿನ ಚಾವುಂಡರಾಯ ಸ್ನಾನ ಮಾಡಿ ಶುದ್ಧ ಹೃದಯನಾಗಿ ಚಂದ್ರಗಿರಿಯ ಮೇಲೆ ನಿಂತು ಇಂದ್ರಗಿರಿಯ ಕಡೆ ಬಂಗಾರದ ಬಾಣವನ್ನು ಬಿಡಲು ಅದು ಬೋರುಬಂಡೆಯ ತುದಿಗೆ ತಾಕಿ ಭುಜಬಲಿಸ್ವಾಮಿಯ ದಿವ್ಯ ಮುಖ ಕಾಣಿಸಿಕೊಂಡಿತು. ಅನಂತರ ಚತುರರಾದ ಶಿಲ್ಪಿಗಳುವಜ್ರದ ಉಳಿ, ರತ್ನಗಳ ಸುತ್ತಿಗೆಯಿಂದ ಸ್ವಾಮಿಯ ಉಳಿದ ಭಾಗವನ್ನು ಬಿಡಿಸಿದರು. ವಿಧ್ಯುಕ್ತವಾಗಿ ಚಾವುಂಡರಾಯನು ಮೂರ್ತಿಯನ್ನು ಪ್ರತಿಷ್ಠೆ ಮಾಡಿಸಿದ.

"ಗೊಮ್ಮಟದ" ಕಥೆ

ಈ ಕಥೆ ಶ್ರವಣಬೆಳಗೊಳದ ಪಂಚಬಾಣ ಕವಿ ಬರೆದ 'ಭುಜಬಲಿ ಚರಿತೆ' ಯಲ್ಲಿ ಬರುತ್ತದೆ. ಚಾವುಂಡರಾಯ ಶ್ರವಣಬೆಳಗೊಳದ ಮೂರ್ತಿಯನ್ನು ಇಡಿಸಿದ ದಿನ ಕ್ರಿಸ್ತಾಬ್ದ 1028ನೆಯ ಮಾರ್ಚ್ ತಿಂಗಳ ಮೂರನೆಯ ತಾರೀಖು ರವಿವಾರ ಎಂದು ರುದ್ರಪಟ್ಟಣದ ಡಾ॥ ಶ್ಯಾಮಶಾಸ್ತ್ರಿಗಳ ಎಣಿಕೆ. ಚಾವುಂಡರಾಯನಿಗೆ 'ಗೊಮ್ಮಟ' ಎಂಬ ಮನೆ ಹೆಸರು ಇದ್ದಿತಾದ ಕಾರಣ ಅವನು ಮಾಡಿಸಿದ ಬಾಹುಬಲಿ ಮೂರ್ತಿಗೆ 'ಗೊಮ್ಮಟೇಶ್ವರ ಸ್ವಾಮಿ' ಎಂದು ಹೆಸರಾಯಿತೆಂದು ಪ್ರೊ॥ ಎ. ಎನ್. ಉಪಾಧ್ಯೆ ವಾದಿಸಿದ್ದಾರೆ. 'ಗೊಮ್ಮಟ

ಪದದ ಉತ್ಪತ್ತಿಯ ವಿಚಾರ ವಾದವಿವಾದಗಳು ವಿಪುಲವಾಗಿ ನಡೆದು, ಸಮಸ್ಯೆ ಸಂದಿಗ್ಧವಾಗಿಯೇ ಇದೆ. ನಮ್ಮ ನಾಡ ಹಿರಿಯರಾದ ಮಂಜೇಶ್ವರದ ಶ್ರೀ ಗೋವಿಂದ ಪೈಗಳು 'ಗೊಮ್ಮಟ' ಎಂಬುದು ಸಂಸ್ಕೃತದ 'ಮನ್ಮಥ' ಎಂಬುದರ ಪ್ರಾಕೃತ ತದ್ಭವವಾದ 'ಗವ್ಮಹ' ಎಂಬುದರ ಕನ್ನಡ ರೂಪಾಂತರ ಎಂದು ಹೇಳಿದ್ದಾರೆ. ಹೀಗೆ ಬಾಹುಬಲಿಗೇ ಕಾಮದೇವ ಎಂಬುದಕ್ಕೆ ಮನ್ಮಥ ಎಂಬ ಹೆಸರಿದ್ದು ಅವನ ಮೂರ್ತಿಯನ್ನು ಮಾಡಿಸಿ ಪ್ರಸಿದ್ಧನಾದ ಚಾವುಂಡರಾಯನಿಗೆ 'ಗೊಮ್ಮಟರಾಯ' ಎಂಬ ಹೆಸರು ಬಂದಿತೆಂದು ವಾದ. ಈ ಸಮಸ್ಯೆ ಹೇಗೂ ಇರಲಿ, ಶ್ರವಣಬೆಳಗೊಳದ ಮೂರ್ತಿಗೆ ಗೊಮ್ಮಟನೆಂಬ ಹೆಸರು ಬಂದಿತು. ಕಾರ್ಕಳ-ವೇಣೂರುಗಳ ಮೂರ್ತಿಗಳಿಗೂ ಗೊಮ್ಮಟದೇವರೆಂದೇ ಹೆಸರು. ಕಾರಣ ಅವುಗಳ ಸ್ಫೂರ್ತಿ ಶ್ರವಣಬೆಳಗೊಳದ ಪ್ರತಿಮೆಯೇ.

ಪಾಂಡ್ಯದೇಶದಲ್ಲಿ ಉತ್ತರ ಮಥುರೆಯ ರಾಜವಂಶೀಯ ವೀರನರಸಿಂಹ ನೆಂಬುವನು ಬಂಗವಾಡಿಗೆ ಬಂದು ದೊರೆತನ ಮಾಡುತ್ತಿದ್ದ. ಅವನ ಪಟ್ಟ ಮಹಿಷಿ ಗುಮ್ಮಟಾಂಬೆ ಇವರಿಗೆ ಭೈರವರಾಯನೆಂಬ ಮಗ; ಕಾರ್ಕಳದ ಅರಸು ಇವನೇ. ಇವನ ಮಗ ವೀರಪಾಂಡ್ಯ ಬಹುವಿಶ್ರುತ; ಅವನಿಗೆ 'ಅರಿರಾಯ ಗಂಡಭೇರುಂಡ', 'ಗರ್ವಿತಪರಗಿರಿ ವಜ್ರದಂಡ' ಮುಂತಾದ ಬಿರುದುಗಳಿದ್ದುವು. ಅವನಿಗೊಮ್ಮೆ ಗೊಮ್ಮಟಮೂರ್ತಿಯನ್ನು ಕಾರ್ಕಳದಲ್ಲಿ ಪ್ರತಿಷ್ಠೆ ಮಾಡಿಸುವ ಆಶೆ ಮೂಡಿತು. ಅವನ ಗುರು ಪನಶೋಕದ (ಈಗಿನ ಹನಸೋಗೆಯ) ಲಲಿತ ಕೀರ್ತಿ ಭಟ್ಟಾರಕರೊಂದಿಗೆ ಕಾರ್ಕಳದ ಗುಡ್ಡದ ಕಡೆ ನಡೆದ. ಅಲ್ಲಿ ದಿವ್ಯ ದೃಷ್ಟಿಯ ಲಲಿತಕೀರ್ತಿಗಳು ಗುಡ್ಡದ ಪಶ್ಚಿಮಪ್ರಾಂತದ ದೊಡ್ಡ ಬಂಡೆ ಯೊಂದನ್ನು ಮೂರ್ತಿನಿರ್ಮಾಣಕ್ಕೆ ಆರಿಸಿಕೊಟ್ಟರು. ಆ ಶಿಲೆಗೆ ಪ್ರಾರಂಭಿಕ ಪೂಜೆ ಪುನಸ್ಕಾರಗಳನ್ನು ನಡೆಸಿ, ನಾಡಿನ ಶ್ರೇಷ್ಠ ಶಿಲ್ಪಿಗಳನ್ನು ಕರೆಸಿ ಅವರನ್ನು ಯಥಾವಿಧಿ ಸತ್ಕರಿಸಿ ಗೊಮ್ಮಟ ಮೂರ್ತಿಯನ್ನು ಕಡೆಯಲು ಆಜ್ಞೆ ಮಾಡಿದ. ಶುಭಮುಹೂರ್ತದಲ್ಲಿ ಅವರು ಕಾರ್ಯದಲ್ಲಿ ಉದ್ಯುಕ್ತರಾಗಿ ಬಹುಕಾಲ ಕಷ್ಟ ಪಟ್ಟು ಗೊಮ್ಮಟ ಮೂರ್ತಿಯ ಆಕಾರವನ್ನು ಬಂಡೆಯಲ್ಲಿ ತಂದರು. ಇಷ್ಟು ಅದ್ಭುತವಾದ ಶಿಲಾಮೂರ್ತಿಯನ್ನು ಗುಡ್ಡದ ಮೇಲೆ ಸಾಗಿಸಲು ಇಪ್ಪತ್ತು ಉಕ್ಕಿನ ಚಕ್ರಗಳಿದ್ದ ಕಬ್ಬಿಣದ ಗಾಡಿಯನ್ನು ಮಾಡಿಸಿ ಶಿಲಾಪ್ರತಿಮೆಯನ್ನು

ಅದರ ಮೇಲೆ ಮಲಗಿಸಿ ಹತ್ತು ಸಾವಿರ ಜನರು ಸೇರಿ ಅದನ್ನು ಗುಡ್ಡದ ತುದಿಗೆ ಎಳೆದೊಯ್ದರು. ರಾಜ, ಮಂತ್ರಿ, ಪುರೋಹಿತರು, ಪರಿವಾರ ಎಲ್ಲರೂ ಸೇರಿ ದಾರಿಯುದ್ದಕ್ಕೂ ಮಂಗಳವಾದ್ಯ ಜಯಘೋಷಗಳನ್ನು ಮಾಡುತ್ತಿದ್ದರು. ಮೂರ್ತಿಯನ್ನು ಕಡೆದ ಬಂಡೆಯಿದ್ದ ಸ್ಥಳ ಈಗ ಗುಡ್ಡದ ಪಶ್ಚಿಮದಲ್ಲಿ, ಗಿಡ-ಬಳ್ಳಿ, ಮುಳ್ಳು ಪೊದೆ ಬೆಳೆದು ಗಹನವಾದ ಕಮರಿಯಾಗಿದೆ.

ಎಂಭತ್ತು ಟನ್ನು ತೂಕ !

ಮೂರ್ತಿಯನ್ನು ಮೇಲೊಯ್ಯಲು ಒಂದು ತಿಂಗಳು ಹಿಡಿಯಿತು. ಸಂಜೆಯಾಯಿತೆಂದರೆ ಸಾವಿರ ಆಧಾರ ಸ್ತಂಭಗಳನ್ನು ನೆಟ್ಟು ಗಾಡಿಯನ್ನು ನಿಲ್ಲಿಸುವುದು, ಬೆಳಗಾಯಿತೆಂದರೆ ಮತ್ತೆ ಮೇಲೆಳೆಯಲು ಆರಂಭಿಸುವುದು, ಹೀಗೆ. ಆ ಗುಡ್ಡವನ್ನು ನೋಡಿದವರಿಗೆ ಈ ಕಷ್ಟದ ಅರಿವಾಗುತ್ತದೆ. ಗುಡ್ಡ ಗುಂಡಗಿದ್ದು ಓಟ ಕಡಿದಾಗಿದೆ; ಹೀಗಿರುವಲ್ಲಿ ಸುಮಾರು 80 ಟನ್ ತೂಗುವ ಶಿಲಾಮೂರ್ತಿಯನ್ನು ಮೇಲೊಯ್ದುದು ನಿಜವಾಗಿ ಸಾಹಸಕಾರ್ಯ. ಮೂರ್ತಿಯನ್ನು ಹೀಗೆ ಸಾಗಿಸಿದ ನಂತರ ದೇಹದ ಮೇಲೆ ಮಾಧವೀಲತೆಯನ್ನು ಬಿಡಿಸುವುದು. ದೃಷ್ಟಿ ಕೊಡಿಸುವುದು ಮುಂತಾದ ಶಿಲ್ಪ ಕಾರ್ಯಗಳು ನಡೆದವು. ಶಿಲಾವೇದಿಯೊಂದನ್ನು ವಿಧ್ಯುಕ್ತವಾಗಿ ಹಾಕಿ, ಅದರ ಮೇಲೆ ಗೊಮ್ಮಟಸ್ವಾಮಿಯನ್ನು ಇಪ್ಪತ್ತು ಸಾವಿರ ಜನರು ಹಿಡಿದು ಎತ್ತಿ ನಿಲ್ಲಿಸಿದರು. ಇದೊಂದು ವೈಭವದ ಸಮಯ; ಸಂಭ್ರಮದ ಪರಮಾವಧಿ ಮುಟ್ಟಿತು. ರಾಜನ ನಿಮಂತ್ರಣವನ್ನು ಮನ್ನಿಸಿ ವಿಜಯನಗರದ ಆಗಿನ ದೊರೆ ಎರಡನೆಯ ದೇವರಾಯನೂ ಬಂದಿದ್ದ. ಮೂರ್ತಿಯ ಪ್ರತಿಷ್ಠೆ ಶಾಲಿವಾಹನ ಶಕ 1353 ವಿರೋಧಿಕೃತ್ ಸಂವತ್ಸರದ ಫಾಲ್ಗುಣ ಶುದ್ಧ ದ್ವಾದಶೀ ಬುಧವಾರ ಸಂದ ಸ್ಥಿರಲಗ್ನದಲ್ಲಿ (ಅಂದರೆ ಪೂರ್ವಾಹ್ನ 10-52ರಿಂದ ಉಪರಾಂತ 12-49ರ ನಡುವಣ ವೃಷಭ ಲಗ್ನವೆಂದು ಶ್ರೀ ಗೋವಿಂದ ಪೈಗಳು ಎಣಿಸಿದ್ದಾರೆ) ನಡೆಯಿತು. ಇದು ನಮ್ಮ ಗಣನೆಯಲ್ಲಿ 1432ನೇ ಫೆಬ್ರುವರಿ 13ನೇ ತಾರೀಖು ಬುಧವಾರ. ಗೊಮ್ಮಟ ಮೂರ್ತಿಯ ಬಲಭಾಗದಲ್ಲಿ ಹಳಗನ್ನಡಲಿಪಿಯಲ್ಲಿ ಈ ರೀತಿ ಶಾಸನ ಇದೆ.

'ಶ್ರೀಮದ್ದೇಶೀಗಣೇ ಖ್ಯಾತೇ ಪನಸೋಗೇವಲೀಶ್ವರಃ ।

ಯೋಭೂಲ್ಲಲಿತಕೀರ್ತ್ಯಾಖ್ಯಸ್ತನ್ಮುನೀಂದ್ರೋಪದೇಶತಃ ।

ಸ್ವಸ್ತಿಶ್ರೀ ಶಕಭೂಪತೇಸ್ತಿಶರವಹ್ನೀನ್ದ್ವೇರ್ವಿರೋಧ್ಯಾದಿಕೃದ್ವರ್ಷೇ ।

ಫಾಲ್ಗುಣಸೌಮ್ಯವಾರಧವಲ ಶ್ರೀದ್ವಾದಶೀಸತ್ತಿಥೌ ।

ಶ್ರೀಸೋಮಾನ್ವಯ ಭೈರವೇಂದ್ರ ತನುಜ ಶ್ರೀ ವೀರಪಾಂಡ್ಯೇಶಿನಾ !

ನಿರ್ಮಾಪ್ಯ ಪ್ರತಿಮಾತ್ರ ಬಾಹುಬಲಿನೋ ಜೀಯಾತ್ ಪ್ರತಿಷ್ಠಾಪಿತಾ ॥'

ಈ ಪ್ರತಿಷ್ಠೆಯ ವಿವರ ಕವಿಚಂದ್ರಮನೆಂಬುವನು ಬರೆದ 'ಗೊಮ್ಮಟೇಶ್ವರ ಚರಿತೆ' ಎಂಬ ಗ್ರಂಥದಲ್ಲಿ ವಿಸ್ತಾರವಾಗಿ ವರ್ಣಿತವಾಗಿದೆ. 'ಅನುಪಮ ವಿಬುಧ ಚಕೋರ ಚಂದ್ರಮ'ನೆಂದು ಖ್ಯಾತನಾದ ಚಂದ್ರಮ ದಕ್ಷಿಣ ಕನ್ನಡದವನು, ಇಮ್ಮಡಿ ಭೈರವರಾಯನ ಆಶ್ರಿತ; ಅವನ ವಿದ್ಯಾಗುರು ಶ್ರುತಸಾಗರ, ವ್ರತಗುರು ಮಹೇಂದ್ರಕೀರ್ತಿ. ಈ ಗ್ರಂಥದ ರಚನೆಯ ಕಾಲ 1646, ಅಂದರೆ ಮೂರ್ತಿ ಪ್ರತಿಷ್ಠೆಯಾಗಿ ಇನ್ನೂರು ವರ್ಷಗಳಿಗೂ ಮೇಲೆ. ಆದರೆ ಕೃತಿರಚನೆಯ ಅವಸರ ನೋಡಿದರೆ ಗೊಮ್ಮಟ ಮೂರ್ತಿಯ ಪ್ರತಿಷ್ಠೆ ಎರಡನೆಯ ಬಾರಿ ಆದಂತೆ ತೋರುತ್ತದೆ.

ಮಹಾಯಕ್ಷನೊಬ್ಬ ನಿಂತಂತೆ

ಮೂರ್ತಿಯ ಸುತ್ತ ನಡುವಿನವರೆಗೆ ಆವರಣ ಇದೆ. ದೂರದಿಂದ ನೋಡಿದರೆ ಯಾವುದೋ ಪುರಾತನ ಭವನದ ಮಹಾಯಕ್ಷ ನಿಂತಂತೆ ಭಾಸವಾಗುತ್ತದೆ. ಆವರಣದ ನಾಲ್ಕೂ ಕಡೆ ನಾಲ್ಕು ದ್ವಾರಗಳಿವೆ; ಒಂದೊಂದರಲ್ಲೂ ಒಂದೊಂದು ಜಿನಮೂರ್ತಿ. ಅವುಗಳ ಲಾಂಛನ ಬಿಟ್ಟರೆ, ಎಲ್ಲ ಮೂರ್ತಿಗಳೂ ಏಕ ಪ್ರಕಾರ, ಮೂರ್ತಿಯ ಎದುರಿನ ಮಹಾದ್ವಾರದಲ್ಲಿ ಸಣ್ಣ ಕಂಬವೊಂದಿದೆ; ಅದರ ಮೇಲ್ಭಾಗದಲ್ಲಿ ಬಿಳಿಕಲ್ಲಿನಲ್ಲಿ ಕಡೆದ ಕೂತ ಬ್ರಹ್ಮನ ಸುಂದರ ಮೂರ್ತಿಯಿದೆ. ಗೊಮ್ಮಟಸ್ವಾಮಿಯ ಮುಂದೆ ಚಚ್ಚೌಕವಾದ, ಸುಂದರವಾದ, ದರ್ಶನೀಯವಾದ ಬಸದಿಯೊಂದಿದೆ; ಈ 'ಚತುರ್ಮುಖ ಬಸದಿ' ಅಥವಾ 'ತ್ರಿಭುವನ ತಿಲಕ ಚೈತ್ಯಾಲಯ'ವನ್ನು ಇಮ್ಮಡಿ ಭೈರವರಾಯ 1586 ರಲ್ಲಿ

ಕಟ್ಟಿಸಿದ. ಅದರ ಪಶ್ಚಿಮ ದ್ವಾರದಲ್ಲಿ ಇಪ್ಪತ್ತು ನಾಲ್ಕು ತೀರ್ಥಂಕರ ಮೂರ್ತಿಗಳು, ದಕ್ಷಿಣಪಾರ್ಶ್ವದಲ್ಲಿ ಬ್ರಹ್ಮಯಕ್ಷ, ಪದ್ಮಾವತೀ ಯಕ್ಷಿಣಿಯರ ಮನೋಹರವಾದ ಪ್ರತಿಮೆಗಳೂ ಇವೆ. ಪಶ್ಚಿಮ ದ್ವಾರದಲ್ಲಿ ಶಾಸನವೊಂದಿದೆ. ಇದರಲ್ಲಿ ಭೈರವರಾಯನೇ 'ಚತುರ್ವಿಂಶತ್ಯಕ್ಷರ ಲಿಖಿತ ಪಂಚಾಕ್ಷರ ರೂಪ ಸರ್ವತೋಭದ್ರ ಚಿತ್ರ ಪ್ರಬಂಧದಿಂದ ರಚಿಸಿದ ಚಿತ್ರಶ್ಲೋಕ' ವೊಂದಿದೆ. ಅದರ ಅರ್ಥ ಇನ್ನೂ ಗೊತ್ತಾಗಿಲ್ಲ. ಆದರೆ ಚಮತ್ಕಾರ ಕಾಣಿಸುತ್ತದೆ.

"ಶ್ರೀವೀತವಿರಗಾಕವಿಗವಿತಂ
ಶ್ರೀರಾಗವೀತಂಗತರಾಗಂ
ಶ್ರೀಗಂತತಂರಾಗತರಾಂಗರಂಗಂ
ಶ್ರೀವೀತರಾಗಂತತಃವಿರಗಂತಂ"

(ಇಂದ್ರವಜ್ರಾವೃತ್ತ)

ಆ ಮೂರ್ತಿ - ಈ ಮೂರ್ತಿ

ಇದಲ್ಲದೆ ಹಿರಿಯಂಗಡಿಗೆ ಹೋಗುವ ದಾರಿಯಲ್ಲಿ ಶ್ರವಣ ಬಸದಿ, ಆನೇಕೆರೆ ಬಸದಿ, ಅರಮನೆಬಸದಿ, ಒಳಗೆ ಆದಿನಾಥಬಸದಿ. ಅನಂತನಾಥ ಬಸದಿ, ಧರ್ಮಶಾಂತಿ ಬಸದಿಗಳೂ, ಸುಂದರವಾದ ಮಾನಸ್ತಂಭಗಳೂ ಇವೆ.

ಕಾರ್ಕಳದ ಮೂರ್ತಿ ಶ್ರವಣಬೆಳಗೊಳದ ಮೂರ್ತಿಯಷ್ಟು ಸುಂದರವಾಗಿಲ್ಲ; ಅಷ್ಟು ಉತ್ತಮ ಕಲಾಕೃತಿಯಲ್ಲ. ಆದರೆ ವಿಭವದಲ್ಲಿ ಊನ ಇಲ್ಲ. ಶ್ರವಣಬೆಳಗೊಳದ ಸ್ವಾಮಿಯ ದ್ವಾರಪಾಲಕರ ಬಾಗಿಲ ಎಡಗಡೆ ನಿಲ್ಲಿಸಿರುವ ಶಾಸನದ ಮಾತು ಕಾರ್ಕಳದ ದೇವರಿಗೂ ಅನ್ವಯಿಸುತ್ತದೆ–

'ಅತಿ ತುಂಗಾಕೃತಿಯಾದೊಡಾಗದದರೊಳ್
ಸೌಂದರ್ಯಮೌನ್ನತ್ಯಮುಂ

ನುತ ಸೌಂದರ್ಯ ಮುಮಾಗೆ ಮತ್ತತಿಶಯಂ
ತಾನಾಗದೌನ್ನತ್ಯಮುಂ ನುತಸೌಂದರ್ಯಮು
ಮೂರ್ಜಿತಾತಿಶಯಮುಂ
ತನ್ನಲ್ಲಿ ನಿಂದಿರ್ದುವೇಂ ಕ್ಷಿತಿಸಂಪೂಜ್ಯಮೋ
ಗೊಮ್ಮಟೇಶ್ವರಜಿನ ಶ್ರೀರೂಪಮಾತ್ಮೋಪಮಂ'

ಕಟೀಲದ ದ್ವೀಪ ದೇವಸ್ಥಾನ

ಕಟೀಲ ಎನಿಸಿಕೊಳ್ಳುವ ಊರು ಉಡುಪಿ-ಮಂಗಳೂರು ಹೆದ್ದಾರಿಯ ಬದಿಯಲ್ಲಿಯೇ ಇದೆ. ಮಂಗಳೂರಿಗೆ ಉತ್ತರ ದಿಗ್ಭಾಗದಲ್ಲಿ ಹದಿನಾರು ಮೈಲಿ ದೂರವಾಗುತ್ತದೆ; ಬಜಪೆ ವಿಮಾನ ನಿಲ್ದಾಣದಿಂದ ಆರೇ ಮೈಲಿಗಳಾಗುತ್ತವೆ. ಬಜಪೆಯಿಂದ ಉಡುಪಿಯ ಕಡೆ ಹೋಗುವಾಗ ಮಾರ್ಗದ ಬಲಭಾಗದಲ್ಲಿರುವ ಈ ಗುಡಿಯನ್ನು ಪರ ಊರವರು ಸುಲಭವಾಗಿ ಸೇರುವ ಸೌಕರ್ಯವಿರುವುದ ರಿಂದ ಯಾತ್ರಿಕರು ಇಲ್ಲಿ ಸದಾ ನೆರೆದಿರುತ್ತಾರೆ. ಶ್ರೀಮಂತ ಭಕ್ತರ ಔದಾರ್ಯ ದಿಂದ ಬಂದವರಿಗೆಲ್ಲ ಅಶನ-ವಸತಿಗಳ ಉಚಿತ ವ್ಯವಸ್ಥೆಯನ್ನು ಗುಡಿಯವರೇ ಮಾಡಿದ್ದಾರೆ. ಗುಡಿಗೇ ಹೊಂದಿಕೊಂಡಂತೆ ವಿಶಾಲವಾದ ಅಂಕಣಗಳು, ಭೋಜನಶಾಲೆ ಮುಂತಾದುವನ್ನು ಈಚೆಗೆ ಕಟ್ಟಿಸಿದ್ದಾರೆ.

ನಿತಾಂತ ರಮಣೀಯ

ಗುಡಿಯಿರುವ ಸ್ಥಳ ನಿತಾಂತ ರಮಣೀಯವಾಗಿದೆ. ಪಡುಗಡೆಗೆ ಭೋರ್ಗರೆಯುತ್ತ ಹರಿದು ಬರುವ ನಂದಿನೀ ನದಿಯು ಈ ಸ್ಥಳದಲ್ಲಿ ಗುಡಿಯ ಹಿಂದೆ ಇಬ್ಭಾಗವಾಗಿ ಒಡೆದು ಗುಡಿಯ ಮುಂದೆ ಮತ್ತೆ ಕೂಡಿಕೊಂಡು ಹರಿದು ಹೋಗುತ್ತದೆ. ಬಂಡೆಗಳ ಮೇಲೆ ನೆರೆನೆರೆಯಾಗಿ ಹರವಿಕೊಂಡು ಹರಿಯುವ ಈ ನದಿಯ ಮೊರೆತ ಗುಡಿಯ ಸುತ್ತಮುತ್ತಲೆಲ್ಲ ಎಡೆಬಿಡದೆ ಕೇಳಿಸುತ್ತದೆ. ದ್ವೀಪ ದಂತೆ ಎದ್ದು ನಿಂತ ವಿಶಾಲವಾದ ಬೋರುಬಂಡೆಯ ಮೇಲೆ ಗುಡಿ ನಿಂತಿದೆ. ಗುಡಿಯ ಬಲಭಾಗದಲ್ಲಿ ಹೆದ್ದಾರಿಯಿಂದ ಗುಡಿಯೊಳಗೆ ಬರಲು ನದಿಯ ಮೇಲೆ ಸುಭದ್ರವಾದ ಕಾಲುದಾರಿಯನ್ನು ಮಾಡಿಸಿದ್ದಾರೆ. ಈ ಕಡೆ ಹೊಳೆಯ ಸೀಳು

ಸಣ್ಣದು. ಗುಡಿಯ ಎಡಪಕ್ಕದಲ್ಲಿ ನದಿಯ ಪಾತ್ರ ಸುಮಾರು ದೊಡ್ಡದಾಗಿದೆ. ನದಿಯಾಚೆ ಪರ್ವತಶ್ರೇಣಿಯಂತೆ ಗುಡ್ಡಗಳು ಕಾಣುತ್ತವೆ; ಸಸ್ಯಶ್ಯಾಮಲವಾದ ಈ ಪಾರ್ಶ್ವದ ದೃಶ್ಯ ಮನೋಹಾರಿಯಾಗಿದೆ.

ಬೆಟ್ಟಗಳ ನಡುವೆ ಆಳವಾದ ಕಮರಿ ; ಕಮರಿಯಲ್ಲಿ ಸಡಗರದಿಂದ ಹರಿಯುವ ನದಿ; ನದಿಯ ನಡುವೆ ನಿಂತಿರುವ ಗುಡಿ. ಇಲ್ಲಿಯಪ್ರಕೃತಿ ಸೌಂದರ್ಯವು ಅನ್ಯಾದೃಶವಾಗಿದೆ. ಮುಂಚೆ ನದಿಯಲ್ಲಿ ಪ್ರವಾಹ ಬಂದರೆ ಗರ್ಭಗುಡಿಯ ಗೋಡೆಯಿಡೀ ನೀರಿನೊಳಗೆ ಮುಳುಗಿರುತ್ತಿದ್ದಿತಂತೆ, ಆದರೆ ಈಗ ಗುಡಿಯ ಹಿಂಭಾಗದಲ್ಲಿ ಎತ್ತರದ ಗೋಡೆಗಳನ್ನು ಎಬ್ಬಿಸಿದ್ದಾರೆ; ಎಷ್ಟು ಪ್ರವಾಹ ಬಂದರೂ ನೀರು ಗುಡಿಯೊಳಗೆ ಬರಲಾರದು. ಮೂವತ್ತು ವರ್ಷಗಳಷ್ಟು ಹಿಂದೆ ಪ್ರವಾಹ ಬಂದು ಪಶ್ಚಿಮ ಭಾಗದ ಪೌಳಿಯನ್ನು ಬಿಟ್ಟು ಉಳಿದೆಲ್ಲ ಪೌಳಿಗಳೂ ಕೊಚ್ಚಿಹೋದುವಂತೆ. ಮುಂದೆ ಹತ್ತು ವರ್ಷಗಳಲ್ಲಿ ಈ ಪೌಳಿಗಳ ಪುನರ್ನಿರ್ಮಾಣವಾಯಿತು. ಗುಡಿಯ ಮುಂಭಾಗದಲ್ಲಿ ನದಿಗಿಳಿಯಲ ಸೋಪಾನವಿದೆ; ಪಕ್ಕದಲ್ಲಿ ಗುಡಿಯ ಹೂದೋಟವಿದೆ.

ಸ್ಥಳ ಮಾಹಾತ್ಮ್ಯ

ಇಲ್ಲಿನ ದೇವರು ದುರ್ಗಾಪರಮೇಶ್ವರಿ ಎನಿಸಿಕೊಳ್ಳುವ ಶಕ್ತಿ. ಗರ್ಭಗುಡಿಯೊಳಗೆ ಇರುವ ಧ್ರುವ ಮೂರ್ತಿಯು ಲಿಂಗಾಕಾರದ ಪ್ರತೀಕವಷ್ಟೆ. ಇದನ್ನು ಮೂಲಸ್ಥಾನ ಎನ್ನುತ್ತಾರೆ. ಅದರ ಹಿಂಬದಿಯಲ್ಲಿ ಶಂಖ ಚಕ್ರಧಾರಿಣಿಯಾಗಿ, ವರದಾಭಯ ಮುದ್ರೆಗಳಲ್ಲಿರುವ ಚತುರ್ಭುಜೆಯಾದ ದೇವಿಯ ಲೋಹಮಯ ಬಿಂಬವನ್ನು ಮಾಡಿಸಿ ಇಟ್ಟಿದ್ದಾರೆ; ಆದರೆ ಇದು ಲಿಂಗದಷ್ಟು ಪ್ರಾಚೀನವಾದ ಮೂರ್ತಿಯಲ್ಲ. ಇಲ್ಲಿ ಪ್ರಮುಖವಾಗಿ ಪೂಜೆ ನಡೆಯುವುದು ಲಿಂಗಕ್ಕೇ. ಪೂಜೆ ಮಾಡುವವರು ವೈಷ್ಣವರಾದರೂ ಪೂಜಾಪದ್ಧತಿಯೇನೋ ಶಾಕ್ತ-ತಂತ್ರ ಮಾರ್ಗದ್ದೇ.

ಇಲ್ಲಿನ ಸ್ಥಳಮಹಾತ್ಮ್ಯೆಯೂ ಸ್ವಾರಸ್ಯವಾಗಿದೆ. ಭೂಮಿಯ ಮೇಲೆ ಒಮ್ಮೆ ದುರ್ಭರವಾದ ಬರಗಾಲ ಬಂದಾಗ ಅದನ್ನು ನೀಗಿಸಲು ಜಾಬಾಲಿ ಋಷಿಯು

ತಪಸ್ಸು ಮಾಡಿ ಕಾಮಧೇನುವಿನ ಮಗಳಾದ ನಂದಿನಿಯನ್ನು ಇಳೆಗೆ ಇಳಿಸಿದ ನಂತೆ. ನದಿಯಾಗಿ ಹರಿದು ಬಂದ ನಂದಿನಿಯ ಪರಿಸರದಲ್ಲಿಯೇ ಅರುಣನೆಂಬ ಅಸುರನು ಲೋಕಕಂಟಕನಾಗಿ ಮೆರೆಯುತ್ತ ಇದ್ದನಂತೆ. ಲೋಕಾನುಗ್ರಹ ದೀಕ್ಷೆಯಿಂದ ಆದಿಶಕ್ತಿಯು ನಂದಿನಿಯ ಕಟಿ ಪ್ರದೇಶದಿಂದಲೇ ಉದ್ಭವಿಸಿ ಅಸುರನನ್ನು ನಿಗ್ರಹಿಸಿದಳಂತೆ. ಶಕ್ತಿಯ ಉಗಮಸ್ಥಾನವಾದ ಕಟಿಯಿಂದಾಗಿ ಈ ಕ್ಷೇತ್ರವು ಕಟಿಸ್ಥಲವೆನಿಸಿಕೊಂಡಿತೆಂದೂ, ಇದು ಮುಂದೆ ಕಟೀಲವಾಯಿತೆಂದೂ ಇಲ್ಲಿನವರು ಹೇಳುತ್ತಾರೆ.

ಅರುಣಾಸುರ ಸಂಹಾರದ ಸಂದರ್ಭವನ್ನು ಸ್ಥಳಪುರಾಣ ಹೀಗೆ ವಿವರಿಸುತ್ತದೆ. ಅರುಣಾಸುರನು ದುರ್ಗೆಯನ್ನೇ ಸೆಣಸಿದ ಶುಂಭ ನಿಶುಂಭರೆಂಬ ದೈತ್ಯರ ಸಚಿವನಾಗಿದ್ದವನು. ದುರ್ಗೆಯು ಅವರನ್ನು ಸಂಹರಿಸಿದಾಗ ಇವನು ತಲೆತಪ್ಪಿಸಿಕೊಂಡು ಓಡಿ ಏಕವೀರಾರಣ್ಯವೆಂಬ ಕಾಡಿನ ನಡುವೆ ಗವಿಯೊಂದರಲ್ಲಿ ಅವಿತು ಕುಳಿತು ಗಾಯತ್ರೀ ಮಂತ್ರದ ಪುರಶ್ಚರಣದಿಂದ ಬ್ರಹ್ಮನನ್ನು ಪ್ರಸನ್ನಗೊಳಿಸಿದನು; ದೇವದಾನವ ಮಾನವರಿಂದಾಗಲೀ, ದ್ವಿಪಾದ–ಚತುಷ್ಪಾದ ಪ್ರಾಣಿಗಳಿಂದಾಗಲೀ ತನಗೆ ಸಾವು ಬರದಿರುವಂತೆ ವರವನ್ನು ಪಡೆದನು. ಹೀಗೆ ವರದಿಂದ ಉದ್ಧತನಾಗಿ ಮೂರು ಲೋಕಗಳಿಗೆ ಪೀಡೆಯನ್ನುಂಟುಮಾಡತೊಡಗಿದನು.

ಅಸುರನ ಸಂಹಾರ

ಆಗ ದೇವತೆಗಳಿಂದ ಪ್ರಾರ್ಥಿತಳಾಗಿ ಆದಿಶಕ್ತಿಯಾದ ಮಹಾಲಕ್ಷ್ಮಿಯು ಅರುಣಾಸುರನ ಅರಮನೆಯ ಉದ್ಯಾನದಲ್ಲಿ ಕನ್ನಿಕೆಯ ರೂಪ ತಳೆದು ಓಡಾಡತೊಡಗಿದಳು. ಅವಳನ್ನು ನೋಡಿದೊಡನೆ ಮೋಹಗೊಂಡ ಅರುಣಾಸುರನು ಅವಳ ಬೆನ್ನು ಹತ್ತಿ ಹೊರಟನು. ಶಕ್ತಿಯು ಲೀಲೆಯಿಂದ ಓಡಿ ನಂದಿನೀನದಿಯ ನಡುವೆ ಇದ್ದ ಬಂಡೆಯೊಂದರ ಮೇಲೆ ಕುಳಿತು, ರಾಕ್ಷಸನು ತನ್ನ ಬಳಿ ಬಂದೊಡನೆಯೇ ಅಂತರ್ಧಾನಳಾದಳು. ಅವಳಿದ್ದ ಸ್ಥಳದಲ್ಲಿ ಲಿಂಗವೊಂದು ಕಾಣಿಸಿಕೊಂಡಿತು. ಇದೇ ಲಿಂಗವೇ ಇಂದು ಗರ್ಭಗುಡಿಯೊಳಗೆ ಪೂಜೆಗೊಳ್ಳುತ್ತಿರುವ ದುರ್ಗಾಪರಮೇಶ್ವರೀ ಬಿಂಬ. ಮೋಹಪರವಶನಾಗಿ ಆಶಯಭಂಗದಿಂದ ಕ್ರುದ್ಧ

ನಾದ ಅರುಣಾಸುರನು ಕತ್ತಿಯೆತ್ತಿ ಆ ಶಿಲಾಲಿಂಗದ ಮೇಲೆ ಹೊಡೆದನು. ಒಡನೆಯೇ ದೇವಿಯು ಲಿಂಗದ ಒಡಲಿನಿಂದ ಭಯಂಕರ ಭ್ರಮರವಾಗಿ ಹೊರಹೊರಟುಬಂದು ಭೂಮಿಯಿಂದ ಆಕಾಶದವರೆಗೂ ಬೆಳೆದು ಅರುಣಾಸುರನನ್ನು ಕಚ್ಚಿ ಕೊಂದಳು. ದ್ವಿಪಾದ, ಚತುಷ್ಪಾದ ಪ್ರಾಣಿಗಳಿಂದಾಗಲೀ, ದೇವ ದೈತ್ಯ ಮನುಷ್ಯರಿಂದಾಗಲೀ ಅವನಿಗೆ ಸಾವು ಬರದಂತೆ ವರವಿದ್ದಿತಷ್ಟೆ. ಅದಕ್ಕಾಗಿ ದೇವಿಯು ಷಟ್ಪದವಾದ ಭ್ರಮರ (ದುಂಬಿ)ದಂತೆ ಬಂದು ಅವನನ್ನು ಸಂಹರಿಸಬೇಕಾಯಿತು.

ನೃತ್ಯಗಾನಪ್ರಿಯೆ

ಹೀಗೆ ಭ್ರಮರಾಂಬೆಯು ಅರುಣಾಸುರನನ್ನು ಕಚ್ಚಲು, ಧಾರೆ ಧಾರೆಯಾಗಿ ಹರಿದು ಬಂದ ಅವನ ಮೈ ರಕ್ತವನ್ನು ಕುಡಿಯಲು ರಕ್ತೇಶ್ವರಿಯೂ ಅಲ್ಲಿ ಕಾಣಿಸಿಕೊಂಡಳಂತೆ. ಗುಡಿಯ ಹೊರಗಡೆ ಎದೆ ಚಾಚಿ ನಿಂತಿರುವ ಬಂಡೆಯೊಂದಿದೆ; ಇದನ್ನು ರಕ್ತೇಶ್ವರೀ ಶಿಲೆಯೆಂದು ನಿರ್ದೇಶಿಸುತ್ತಾರೆ. ಇಲ್ಲಿ ಲೆಕ್ಕೇಸಿರಿ ದೈವದ ಆವಾಹನೆ ನಡೆಯುತ್ತದೆ. ಈ ಬಂಡೆಯ ಮೇಲೆ ಆಗಾಗ ದೇವಿಯು ಬಂದು ಕೂಡುತ್ತಾಳೆಂಬ ಕಲ್ಪನೆಯಿದೆ. ಇದೇ ಕಾರಣದಿಂದ ಬಂಡೆಯ ಮೇಲೆ ದೇವಿಯ ಪಾದಗಳು ಮುದ್ರಿತವಾಗಿವೆಯೆಂದು ತೋರಿಸುತ್ತಾರೆ.

ನೃತ್ಯಗಾನಪ್ರಿಯೆಯಾದ ದುರ್ಗಾಪರಮೇಶ್ವರಿಯ ಆರಾಧನೆಗೆಂದು ಗುಡಿಯ ಕಡೆಯಿಂದ ಯಕ್ಷಗಾನ–ದಶಾವತಾರ ಮೇಳವೊಂದು ವ್ಯವಸ್ಥಿತವಾಗಿದೆ. ಇಡೀ ದಕ್ಷಿಣ ಕನ್ನಡ ಪ್ರಾಂತ್ಯದಲ್ಲಿ ಈ ಮೇಳವು ಪ್ರಸಿದ್ಧವಾಗಿದೆ. ಗುಡಿಯ ಆವರಣದಲ್ಲಿ ಯಕ್ಷಗಾನ-ಬಯಲಾಟ ನಡೆಯುತ್ತಿರುವಾಗ ದೇವಿಯು ರಕ್ತೇಶ್ವರೀ ಶಿಲೆಯ ಮೇಲೆ ಕುಳಿತು ನೋಡುತ್ತಾಳೆ ಎಂದು ಇಲ್ಲಿನವರ ನಂಬಿಕೆ.

ಈ ಊರಿನ ಒಂದು ವಿಶೇಷವೆಂದರೆ ಪೂಜೆಗೆ ತಂದ ಎಳನೀರನ್ನು ಕುಡಿಯಬಾರದೆಂಬ ನಿಷೇಧವಿರುವುದು. ಅರುಣಾಸುರನ ಸಂಹಾರವಾಗುವಾಗ ದೇವಿಗೆ ಬಂದ ಸಿಟ್ಟು ಅವನ ಸಂಹಾರವಾದ ಮೇಲೂ ಇಳಿಯಲಿಲ್ಲವಂತೆ. ಆಗ ಇಂದ್ರನು ಸ್ವರ್ಗಲೋಕದ ಕಲ್ಪವೃಕ್ಷದಿಂದ ತೆಂಗಿನಕಾಯನ್ನು ತಂದು ಅದನ್ನು ದೇವಿಯ ಮುಂದೆ ಒಡೆದು ಅದರ ಎಳನೀರಿನಿಂದ ದೇವಿಪ್ರತೀಕವಾದ ಲಿಂಗಕ್ಕೆ ಅಭಿಷೇಕ ಮಾಡಿದನಂತೆ. ಆಗ ಆಕೆಯ ಉದ್ವೇಗವು ಶಮನವಾಯಿತಂತೆ. ಇದರ

ನೆನಪಿಗೆಂದು ಕಟೀಲ ಗುಡಿಯಲ್ಲಿ ಎಳೆನೀರು (ಸೀಯಾಳ) ಅಭಿಷೇಕವು ವಿಶಿಷ್ಟ ವಾದ ಸಂಪ್ರದಾಯ. ಎಳೆನೀರು ದೇವಿಯ ಅಭಿಷೇಕಕ್ಕೆ ವಿನಾ ಮನುಷ್ಯರು ಕುಡಿಯುವುದಕ್ಕೆ ಅಲ್ಲ ಎಂದು ಇಲ್ಲಿನವರ ಎಣಿಕೆ.

ಸಂಕ್ರಮಣ–ಉತ್ಸವ

ಕಟೀಲ ಗುಡಿಯಲ್ಲಿ ವಿಶೇಷವಾದ ಸಂದರ್ಭವೆಂದರೆ ಮೇಷ ಸಂಕ್ರಮಣ ದಿಂದ ಎಂಟು ದಿನಗಳವರೆಗೆ ನಡೆಯುವ ಉತ್ಸವಗಳು. ಪ್ರಾಂತ್ಯದಲ್ಲೆಲ್ಲ ಪ್ರಸಿದ್ಧವಾದ ಈ ಉತ್ಸವಕಾಲದಲ್ಲಿ ಸಹಸ್ರಾರು ಜನರು ಬಂದು ಇಲ್ಲಿ ನೆರೆಯು ತ್ತಾರೆ. ಮೇಷ ಸಂಕ್ರಮಣದಂದೇ ಧ್ವಜಾರೋಹಣವು ನಡೆದು ಎಂಟನೆಯ ದಿನ ಅವಭೃಥ ಸ್ನಾನದಲ್ಲಿ ಈ ಸಂಭ್ರಮವು ಮುಗಿಯುತ್ತದೆ. ಅವಭೃಥವನ್ನು ಇಲ್ಲಿನವರು ಆರಾಟವೆನ್ನುತ್ತಾರೆ. ಈ ದಿನದಲ್ಲಿ ದೇವರ ಇಕ್ಕೆಲಗಳಲ್ಲಿಯೂ ಉರಿಯುವ ಕೊಳ್ಳಿಗಳನ್ನು ಎಸೆದಾಡಿ ಹಿಡಿದುಕೊಳ್ಳುತ್ತ ಭಯಾನಕ ಕೈಚಳಕ ವನ್ನು ತೋರಿಸುತ್ತಾರೆ. ಈ ಆಟವನ್ನು ತುಳು ಭಾಷೆಯಲ್ಲಿ 'ಸೂಟೆದಾರ' ಎಂದು ಕರೆಯುತ್ತಾರೆ. ನವರಾತ್ರಿಯ ಸಂದರ್ಭದಲ್ಲಿಯೂ ಇಲ್ಲಿ ವಿಶೇಷವಾದ ಉತ್ಸವಗಳು ನಡೆಯುತ್ತವೆ. ದೇವಿಯ ಆವಿರ್ಭಾವವಾದ ದಿನವೆಂದು ಸೌರ ಮಾನ ಪಂಚಾಂಗದ ಸಿಂಹ ಶುಕ್ರವಾರವು ಕಟೀಲ ದೇವಾಲಯದಲ್ಲಿ ಪವಿತ್ರ ವಾದ ದಿನವೆಂದು ಪರಿಗಣಿಸಲ್ಪಡುತ್ತದೆ.

ಕಟೀಲ ದೇವಾಲಯದ ಉತ್ಪತ್ತಿ ಹೆಚ್ಚಿನದು. ಆ ಕಡೆಯವರಿಗೆ ಇದು ಜಾಗ್ರತವಾದ ಕ್ಷೇತ್ರವೆಂಬ ನಂಬಿಕೆ ಇರುವುದರಿಂದ ಭಕ್ತರು ಅಸಂಖ್ಯಾತರಾಗಿ ದ್ದಾರೆ. ಅಧಿಕಾರಿವರ್ಗದವರೂ ಆಸ್ಥೆಯಿಂದ ಗುಡಿಯ ಕರ್ತವ್ಯವನ್ನು ನಿರ್ವ ಹಿಸುತ್ತಿದ್ದಾರೆ. ಯಾತ್ರಿಕರಿಗೆ ಅಗತ್ಯವಾದ ಎಲ್ಲ ಸೌಕರ್ಯಗಳನ್ನೂ ಇಲ್ಲಿ ಉಚಿತವಾಗಿ ಒದಗಿಸುತ್ತಾರೆ. ಗುಡಿಯವರೇ ಊರಿನಲ್ಲಿ ಶಾಲೆಯೊಂದನ್ನು ನಡೆಸುತ್ತಿದ್ದಾರೆ; ಶುಲ್ಕವಿಲ್ಲದೆ ವಿದ್ಯಾದಾನ ನಡೆಯುವ ಪ್ರಯೋಗವನ್ನು ಮಾಡುತ್ತಿದ್ದಾರೆ. ನದಿಯ ನಡುಗಡ್ಡೆಯ ಮೇಲಿದ್ದರೂ ವಿಶಾಲವಾದ ಈ ದೇವಾಲಯವು, ಎಷ್ಟೇ ಜನಸಂದಣಿ ಇದ್ದರೂ, ಯಾವಾಗಲೂ ಶುಚಿಯಾಗಿ ಇರುತ್ತದೆ. ನಮ್ಮ ದೇಶದ ನೂರಾರು ದೇವಾಲಯಗಳಿಗೆ ಇಂಥ ಆದರ್ಶ ಅಗತ್ಯವಾಗಿದೆ.

ಕೆಳದಿ ನೃಪ ವಿಜಯ

ಒಂದೊಂದು ಕಡೆ ಪ್ರಕೃತಿದೇವಿ 'ಬಯಸಿ ಬಿಮ್ಮನೆ ನಿಲ್ಲುವುದು'ಂಟು. ಮಲೆನಾಡಿನಲ್ಲಿ ಹೀಗೆ ನಿಂತಿದ್ದಾಳೆ ಎನಿಸುತ್ತದೆ. ಅಲ್ಲಿನ ನಿಸರ್ಗದ ಸೊಬಗು ಅಷ್ಟು ದಟ್ಟವಾಗಿ ಬೆಳೆದಿದೆ. ದಾಳಿಗೆಂದು ಬಂದ ಮುಸಲ್ಮಾನರೂ, ಆಕ್ರಮಣ ಮಾಡಲು ಬಂದ ಪೋರ್ಚುಗೀಸರೂ ಈ ಚೆಲುವಿಗೆ ಮುಗ್ಧರಾಗಿ ಹಾಡಿದ್ದಾರೆ. ಇವರು ಮಲೆನಾಡನ್ನು ಕಾಣುವ ಸಂದರ್ಭ ಒದಗಿದುದು ಕೆಳದಿ–ಇಕ್ಕೇರಿ ನಾಯಕರ ಕಾಲದಲ್ಲಿ. ನಿಸರ್ಗದ ಸೊಬಗಿಗೆ ಸಮನಾಗಿ ದೃಢವಾದ ಸಾಮ್ರಾಜ್ಯ ವೊಂದನ್ನು ಈ ನಾಯಕರು ಕಟ್ಟಿ ಇನ್ನೂರಕ್ಕೂ ಮೀರಿದ ವರ್ಷಗಳ ಕಾಲ (265 ವರ್ಷ, ಒಂದು ತಿಂಗಳು, 25 ದಿನಗಳು) ಉಳಿಸಿಕೊಂಡು ಬಂದರು.

ಮಲೆನಾಡಿನ ಪ್ರಕೃತಿಸೌಂದರ್ಯದ ಮಡಿಲಿನಲ್ಲೇ ಇರುವ ಕೆಳದಿ, ಇಕ್ಕೇರಿ ಮತ್ತು ಬೇದನೂರು ಈ ಕಾಲಕ್ಕೆ ಕುಗ್ರಾಮಗಳಾದರೂ ಹಿಂದೆ, ಹದಿನಾರು ಹದಿನೇಳನೆಯ ಶತಮಾನಗಳಲ್ಲಿ, ಇತಿಹಾಸದ ಹಂದರವನ್ನು ಹಬ್ಬಿಸಿದ ನಗರಗಳು. ಕೆಳದಿಯ ನಾಯಕರ ಪಾಳೆಯಪಟ್ಟು ಶಿವಮೊಗ್ಗ, ಚಿಕ್ಕಮಗಳೂರು ಕಾರವಾರ, ತುಳುರಾಜ್ಯ, ಧಾರವಾಡ ಸೀಮೆ ಇಷ್ಟೂ ಪ್ರದೇಶಗಳ ಮೇಲೆ ಪ್ರಭುತ್ವವನ್ನು ಪಡೆದಿದ್ದಿತು. ವಿಜಯನಗರದ ಮಹಾರಾಯರಿಗೆ ಸಾಮಂತರಾಗಿ ಆರಂಭವಾದರೂ ಈ ನಾಯಕರು ಸರ್ವಸ್ವತಂತ್ರರಾಗಿ ಮೆರೆದರು; ವಿಜಯನಗರದ ಅರಸರಿಗೇ ಎದೆಗೊಟ್ಟು ನಿಂತರು; ಮೈಸೂರು ಒಡೆಯರನ್ನು ಸಮರದಲ್ಲಿ ಸೆಣಿಸಿದರು; ಪೋರ್ಚುಗೀಸರಿಗೆ ಸಿಂಹಸ್ವಪ್ನವಾಗಿದ್ದರು. ಹೀಗೆ ಶ್ರೀಮಂತವಾದ, ಬಲಾಢ್ಯವಾದ, ಪ್ರಭಾವಶಾಲಿಯಾದ ನಾಯಕ ಪರಂಪರೆ

ಯಲ್ಲಿ ಬಂದ ಶಿವಪ್ಪ, ವೆಂಕಟಪ್ಪ, ಚೆನ್ನಮ್ಮಾಜಿ, ವೀರಮ್ಮಾಜಿ ಇವರು ನಾಡಿನಲ್ಲೇ ಕೀರ್ತಿವೆತ್ತವರು.

ಪಾಳೆಯ ಪಟ್ಟು

ಕೆಳದಿ ಶಿವಮೊಗ್ಗಜಿಲ್ಲೆಯ ಸಾಗರ ತಾಲ್ಲೂಕಿಗೆ ಸೇರಿದ ಹಳ್ಳಿ. ಈಗ ಅದರ ಜನಸಂಖ್ಯೆ ಎರಡು ಸಾವಿರದಷ್ಟು ಇದ್ದೀತಷ್ಟೆ. ಸಾಗರದಿಂದ ಕೆಳದಿ ನಾಲ್ಕು ಮೈಲು ದೂರವಿದ್ದರೆ ಇಕ್ಕೇರಿ ಮೂರೇ ಮೈಲು ದೂರ. ಅದು ಈಗ ಇನ್ನೂ ಸಣ್ಣ ಹಳ್ಳಿ; ಅಲ್ಲಿ ಮುನ್ನೂರು ಜನರೂ ಇಲ್ಲ. ಮೊದಲು ಬೇದನೂರು (ಬಿದರೂರು) ಎನಿಸಿಕೊಳ್ಳುತ್ತಿದ್ದುದು ಈಗ ನಗರವೆಂಬ ಹಳ್ಳಿ; ಕಲ್ಲೂರು ಕಟ್ಟೆಯ ಬಳಿ ಇದೆ. ಈಗ ಇದೂ ಸುಮಾರು ಸಾವಿರದಷ್ಟು ಜನಸಂಖ್ಯೆಯಿರುವ ಹೋಬಳಿ. ಪಾಳೆಯಪಟ್ಟಿನ ರಾಜಧಾನಿಯು ಮೊದಲು ಕೆಳದಿಯಾಗಿದ್ದು, ಅನಂತರ ಇಕ್ಕೇರಿಯಾಗಿ, ಕಡೆಯಲ್ಲಿ 1639ರ ಸುಮಾರಿಗೆ ಬೇದನೂರು ಆಯಿತು. ಈ ಮೂರೂ ಕಡೆ ಮಹತ್ವದ ಪ್ರಸಂಗಗಳು ನಡೆದಿವೆ.

ಪಾಳೆಯಪಟ್ಟಿನ ಪ್ರತಿಷ್ಠಾಪನೆ ಆದದ್ದು ಒಂದು ಸ್ವಾರಸ್ಯವಾದ ಕಥೆ. ಕೆಳದಿ ತಾಲ್ಲೂಕು ಹಿಂದೆ ಚಂದ್ರಗುತ್ತಿ ಪರಗಣಕ್ಕೆ ಸೇರಿದ್ದಾಗ ಅದರಲ್ಲಿ ಹುಳಿಬಯಲು ಎಂಬ ಹಳ್ಳಿಯಿದ್ದಿತು. ಇಲ್ಲಿನ ಬಸಪ್ಪ ಎಂಬ ಮಾಳವಗೌಡನಿಗೆ ಇಬ್ಬರು ಮಕ್ಕಳು-ಚೌಡಪ್ಪ, ಭದ್ರಯ್ಯ. ಇಬ್ಬರೂ ಭೂಮಿಕಾಣಿ ನೋಡಿಕೊಳ್ಳುತ್ತ ಇದ್ದರು; ಅವರಿಗೆ ಯಾದವ ಮತ್ತು ಮುರಾರಿ ಎಂಬಿಬ್ಬರು ಊಳಿಗದವರು. ಈ ಗೌಡರ ಕಾಲ 1506ರ ಸುಮಾರಿಗೆ ಎಂದು ಹೇಳುತ್ತಾರೆ. ಒಂದು ಸಂಜೆ ಅವರು ತಮ್ಮ ಹಸುವೊಂದು ಹಳ್ಳಿಯ ಹೊರಗಡೆ ಹಾವಿನ ಹುತ್ತವೊಂದರ ಮೇಲೆ ತಾನಾಗಿ ಹಾಲನ್ನು ಸೂಸುತ್ತಿರುವುದನ್ನು ಕಂಡು, ಆ ಹುತ್ತವನ್ನು ಅಗೆದು ನೋಡಲು ಲಿಂಗವೊಂದು ಕೈಗೆ ಸಿಕ್ಕಿತು. ಚೌಡಪ್ಪಗೌಡನು ಈ ಲಿಂಗವನ್ನು ಹೊರತೆಗೆದು ಅದಕ್ಕೆ ಒಪ್ಪಾದ ಗುಡಿಯನ್ನು ಕಟ್ಟಿಸಿದನು. ಈ ಗುಡಿ ಈಗಲೂ ನಿಂತಿದೆ. ಸ್ವಲ್ಪ ದಿನಗಳು ಕಳೆದಮೇಲೆ ಯಾದವ ಮುರಾರಿರೆ ಇಬ್ಬರೂ ಭೂಮಿಯನ್ನು ಅಗೆಯುತ್ತಿದ್ದಾಗ ಕತ್ತಿಯೊಂದು ದೊರ

ಕಿತು. ಅದನ್ನು ಅವರು ಒಡೆಯ ಚೌಡಪ್ಪನಿಗೆ ಕೊಟ್ಟರು. ಮನೆಯ ಮೇಲೆ ಅದನ್ನು ಇಟ್ಟಿದ್ದಾಗ ಕಾಗೆ ಬಂದು ಕುಳಿತರೆ ಕತ್ತಿಯು ಹಾವಾಗಿ ಅದನ್ನು ಕಚ್ಚುತ್ತಿದ್ದುದನ್ನು ಕಂಡು ಚೌಡಪ್ಪನು ಅದನ್ನು 'ನಾಗಮುರಾರಿ'ಯೆಂದು ಕರೆದು ಮನೆಯ ಒಳಗಿಟ್ಟು ಪೂಜೆ ಮಾಡಲು ಆರಂಭಿಸಿದನು.

ಇನ್ನು ಸ್ವಲ್ಪಕಾಲ ಕಳೆದಂದು ಊಳಿಗದವರಿಬ್ಬರೂ ಭೂಮಿಯನ್ನು ಉಳುತ್ತಿದ್ದಾಗ ನೇಗಿಲು ಹಣದ ಕೊಪ್ಪರಿಗೆಯನ್ನು ತಾಕಿತು. ಆ ರಾತ್ರಿ ಚೌಡಪ್ಪಗೌಡನಿಗೆ ಕನಸು ಬಿದ್ದು ಕೊಪ್ಪರಿಗೆಗೆ ನರಬಲಿಯನ್ನು ಕೊಟ್ಟು ಮೇಲೆತ್ತಿಕೊಂಡು ಅನುಭವಿಸಬಹುದೆಂದು ಯಾರೋ ಹೇಳಿದಂತೆ ಆಯಿತು. ಈ ಸುದ್ದಿ ತಿಳಿದೊಡನೆ ನೆಚ್ಚಿನ ಬಂಟರಾದ ಯಾದವ, ಮುರಾರಿ ಇಬ್ಬರೂ ತಾವೇ ಬಲಿಗೆ ಸಿದ್ಧರಾದರು. ಚೌಡಪ್ಪನು ನಾಗಮುರಾರಿ ಕತ್ತಿಯಿಂದ ಇಬ್ಬರನ್ನೂ ಕೊಂದು ಬಲಿಗೊಟ್ಟು, ಹಣದ ಗಡಿಗೆಯನ್ನು ಎತ್ತಿಕೊಂಡು, ಅದರ ನೆರವಿನಿಂದ ಸಣ್ಣ ದಂಡೊಂದನ್ನು ಕಟ್ಟಿ ಅಕ್ಕಪಕ್ಕದ ಹಳ್ಳಿಗಳ ಮೇಲೆ ಬಿದ್ದು ವಶಪಡಿಸಿಕೊಂಡು ಪಾಳೆಯಗಾರನಾದನು.

ಆದರೆ ಆ ಕಾಲಕ್ಕೆ ಆ ಪ್ರದೇಶವೆಲ್ಲ ವಿಜಯನಗರದ ಅರಸರ ಆಳ್ವಿಕೆಯಲ್ಲಿ ಇದ್ದಿತು. ಚೌಡಪ್ಪನ ಉದ್ದಂಡ ವೃತ್ತಿ ಅವರನ್ನು ಸಿಟ್ಟಿಗೆಬ್ಬಿಸಿ ಚೌಡಪ್ಪ ವಿಜಯನಗರದಲ್ಲಿ ಕಾರಾಗೃಹವನ್ನು ಸೇರಬೇಕಾಯಿತು. ಆದರೆ ಕೆಲವೇ ದಿನಗಳಲ್ಲಿ ಅಹಮದ್‌ನಗರದ ಕಡೆ ಮತ್ತೊಬ್ಬ ಪಾಳೆಯಗಾರ ದಂಗೆಯೆದ್ದಾಗ ಅವನನ್ನು ನಿಗ್ರಹಿಸಲು ಚೌಡಪ್ಪಗೌಡನನ್ನೇ ಅರಸರು ಕಳುಹಿಸಿದರು. ಅಲ್ಲಿ ಅವನು ಸಾಧಿಸಿದ ವಿಜಯಕ್ಕೆ ಮೆಚ್ಚಿಕೊಂಡು, ಅವನು ಕೆಳದಿಯಲ್ಲಿಯೇ ಪಾಳೆಯಗಾರನಾಗಿ ಇರತಕ್ಕದ್ದೆಂದು ತಮ್ಮ ಶಿಖಾಮೊಹರನ್ನು ದಯಪಾಲಿಸಿ ಕಳುಹಿಸಿದರು. ಚೌಡಪ್ಪಗೌಡನು ಕೆಳದಿಗೆ ಬಂದು ಕೋಟೆ ಕೊತ್ತಲಗಳನು ಕಟ್ಟಿಸಿ ಆಳತೊಡಗಿದನು. ರಾಮೇಶ್ವರನ ಗುಡಿಯನ್ನೂ ಅವನೇ ದುರಸ್ತಿ ಮಾಡಿಸಿ ಮತ್ತೆ ಕಟ್ಟಿಸಿದನು.

ಅಘೋರ–ವೀರಭದ್ರ

ಇದು ಕೆಳದಿ ನಾಯಕರ ಸಾಮ್ರಾಜ್ಯಸ್ಥಾಪನೆಯಾದ ಕಥೆ. ಆದರೆ

ಕೆಳದಿ ಪಾಳೆಯಪಟ್ಟನ್ನು ರೂಪಿಸಿದವನು ಚೌಡಪ್ಪನ ಮಗ ಸದಾಶಿವ ನಾಯಕ (1540–1565)ನೆಂದು ಇತಿಹಾಸ ಹೇಳುತ್ತದೆ. ಇವನು ವಿಜಯನಗರದ ಸದಾಶಿವರಾಯ ಮಹಾರಾಯನ ಸಾಮಂತನಾಗಿದ್ದನೆಂದು ತಿಳಿದುಬರುತ್ತದೆ. ಇವನ ವಶದಲ್ಲಿ ಬಾರಕೂರು, ಮಂಗಳೂರು, ಚಂದ್ರಗುತ್ತಿ ಇವು ಇದ್ದುವು. ರಾಜಧಾನಿಯನ್ನು ಕೆಳದಿಯಿಂದ ಇಕ್ಕೇರಿಗೆ ವರ್ಗಾಯಿಸಿದವನು ಇವನೇ. ಇಕ್ಕೇರಿಯನ್ನು ಚೆನ್ನಾಗಿ ಕಟ್ಟಿದವನು ಇವನ ಮಗ ಸಂಕಣ್ಣ. ಇವನು ಭಾರತ ಯಾತ್ರೆ ಕೈಗೊಂಡು ತಿರುಗಾಡುತ್ತಿದ್ದಾಗ ಪೈದಣದಲ್ಲಿ ಅಘೋರೇಶ್ವರನೂ ಅವಳಿಯಲ್ಲಿ ವೀರಭದ್ರನೂ ಪ್ರತ್ಯಕ್ಷವಾದರೆಂದೂ, ಇದರ ಗುರುತಾಗಿ ಅಘೋರೇಶ್ವರ ಮೂರ್ತಿಯನ್ನು ಇಕ್ಕೇರಿಯಲ್ಲಿಯೂ ವೀರಭದ್ರ ಮೂರ್ತಿಯನ್ನು ಕೆಳದಿಯಲ್ಲಿಯೂ ಪ್ರತಿಷ್ಠೆ ಮಾಡಿದನಂತೆ. ಇಕ್ಕೇರಿಯ ಅಘೋರೇಶ್ವರ ದೇವಾಲಯವು ಭವ್ಯವಾದ, ವಿಶಾಲವಾದ ಕಟ್ಟಡ. ಇಲ್ಲಿನ ಜಾಲಂದರಗಳೂ, ಬೋದಿಗೆಗಳು, ನಂದಿ ಮಂಟಪ, ಸುಕನಾಸಿಯ ಶಿಲ್ಪಗಳೂ ಚೆನ್ನಾಗಿವೆ. ಸುಕನಾಸಿಯಲ್ಲಿ ಸದಾಶಿವನಾಯಕ, ಭದ್ರಯ್ಯ, ಹುಚ್ಚ ಸಂಕಣ್ಣ ಈ ಮೂವರು ನಾಯಕರು ದೇವರಿಗೆ ನಮಸ್ಕಾರ ಮಾಡುತ್ತಿರುವಂತೆ ಬಿಡಿಸಿದ್ದಾರೆ. ಈ ಗುಡಿಯಲ್ಲಿರುವ ಮೂವತ್ತೆರಡು ಕೈಗಳ ವೀರಭದ್ರನ ಲೋಹಮೂರ್ತಿ ಸ್ವಾರಸ್ಯವಾದುದು. ಕೆಳದಿಯಲ್ಲಿ ವೀರಭದ್ರನ ಗುಡಿ ಪ್ರಾಚೀನವಾದ ರಾಮೇಶ್ವರ ದೇವಾಲಯಕ್ಕೆ ಹೊಂದಿಕೊಂಡಂತೆ ಇದೆ.

ಇವನ ತರುವಾಯ ಬಂದ ವೆಂಕಟಪ್ಪ ನಾಯಕನು (1586-1629) ವೀರ. ವಿಜಯನಗರದ ಅರಸರಿಂದ ಸ್ವತಂತ್ರನಾಗಿ ಬಿಜಾಪುರದ ಮುಸಲ್ಮಾನರ ಆಕ್ರಮಣವನ್ನು ಇದುರಿಸಿ, ಗೇರುಸೊಪ್ಪೆಯ ಬೈರಾ ರಾಣಿಯನ್ನು ಸೋಲಿಸಿ ಪೋರ್ಚುಗೀಸರನ್ನು ಹಿಮ್ಮೆಟ್ಟಿಸಿ ಪಾಳೆಯಪಟ್ಟನ್ನು ವಿಸ್ತರಿಸಿಕೊಂಡನು. ಅವನ ರಾಜ್ಯವು ಪಶ್ಚಿಮಕ್ಕೆ ಮಲಬಾರಿನವರೆಗೂ ಪೂರ್ವಕ್ಕೆ ಹೊನ್ನಾವರದ ವರೆಗೂ ಹಬ್ಬಿದ್ದಿತು. ತಾನು ವೀರಶೈವನಾದರೂ ಎಲ್ಲ ಧರ್ಮಗಳ ಅಭ್ಯುದಯಕ್ಕೂ ನೆರವಾದವನೆಂಬ ಕೀರ್ತಿ ನಿಂತಿದೆ. ಶೃಂಗೇರಿಯ ಶ್ರೀಮಠವನ್ನು ಕಟ್ಟಿಸಿಕೊಟ್ಟವನು ಇವನೇ; 1627ರಲ್ಲಿ ಭುವನಗಿರಿದುರ್ಗವೆಂಬಲ್ಲಿ ಮಸೀದಿಯನ್ನು ಇವನೇ ಕಟ್ಟಿಸಿದನು.

ಇಕ್ಕೇರಿಯು ಪಿಂಡ

ಇವನ ಮಗ ಶಿವಪ್ಪನಾಯಕನು (1645-1660) ವೀರ್ಯದಲ್ಲಿಯೂ ವೈಭವದಲ್ಲಿಯೂ ತಂದೆಯನ್ನು ಮೀರಿಸಿದ್ದವನು; ವಿಜಯನಗರದ ಅರಸನಾಗಿದ್ದ ಶ್ರೀರಂಗರಾಯನು ಮಧುರೆ, ಜಿಂಜಿ, ತಂಜಾವೂರು ಸಾಮಂತರಿಂದ ವಂಚಿತನಾಗಿ ಅಸಹಾಯನಾಗಿ ತತ್ತರಿಸುತ್ತಿದ್ದಾಗ ಶಿವಪ್ಪನೇ ಅವನಿಗೆ ಆಶ್ರಯಕೊಟ್ಟು 1656 ರಿಂದ 1659 ರವರೆಗೂ ಅವನನ್ನು ಬೇದನೂರಿನಲ್ಲಿ ಇರಿಸಿಕೊಂಡು ಕಾಪಾಡಿದನು. ಮೈಸೂರಿನ ದೇವರಾಜ ಒಡೆಯರ ಕಾಲದಲ್ಲಿ ಇವನು ಶ್ರೀರಂಗಪಟ್ಟಣವನ್ನು ಮುತ್ತಿ ದಳವಾಯಿ ಕುಮಾರಯ್ಯನನ್ನು ಸೋಲಿಸಿದನು. 'ಇಕ್ಕೇರಿಯ ಪಿಂಡ ಮೈಸೂರಿನ ಮಿಂಡ' ಎಂಬ ಮಾತು ಇವನ ಕಾಲದಲ್ಲಿ ಬಳಕೆಗೆ ಬಂದಿತು. ಡಚ್‌ಜನರ ನೆರವನ್ನು ಪಡೆದು ಪೋರ್ಚುಗೀಸರನ್ನು ಹೊನ್ನಾವರ, ಮಂಗಳೂರು, ಕುಂದಾಪುರಗಳಿಂದ ಓಡಿಸಿದನು. ಇವನ ಕೈಕೆಳಗೇ ಹತ್ತಾರು ಪಾಳೆಯಗಾರರಿದ್ದರೆಂದು ತಿಳಿದುಬರುತ್ತದೆ; ಕುಂಬಳೆಯ ರಾಜನೂ ಇವನಿಗೆ ಸಾಮಂತನಾಗಿದ್ದನು. ಕೆಳದಿ-ಇಕ್ಕೇರಿ ನಾಯಕರ ವೈಭವ, ಸಂಪತ್ತು, ಪ್ರಭಾವ, ಇವನ ಕಾಲದಲ್ಲಿ ಮುಗಿಲು ಮುಟ್ಟಿದುವು. ಆಡಳಿತದಲ್ಲಿಯೂ ದಕ್ಷ. ಮಣ್ಣುಗೂಡಿದ್ದ ವಿಜಯನಗರ ಸಾಮ್ರಾಜ್ಯದ ಪುನರುತ್ಥಾನದ ಹಂಬಲ ಇವನನ್ನು ಕಾಡುತ್ತಿದ್ದಿತು.

ಚೆನ್ನಮ್ಮಾಜಿ

ಇವನನಂತರ ಬಂದ ನಾಯಕರು ಅಷ್ಟು ಶಕ್ತರಾಗಿರಲಿಲ್ಲ. ಶಿವಪ್ಪನ ಮೂರನೆಯ ಮಗ ಸೋಮಶೇಖರ (1663-1671) ರಾಜನಾದಾಗ ಅವನ ಬುದ್ಧಿಯೂ ನೆಟ್ಟಗಿರಲಿಲ್ಲ; ಅವನು ಲಂಪಟ, ದುರ್ಮಾರ್ಗಿ, ಉನ್ಮತ್ತ. ಪ್ರಜೆಗಳು ಅವನ ಕಿರುಕುಳ ತಡೆಯಲಾರದೆ ರೋಸಿ ಅವನನ್ನು ಕೊಲೆ ಮಾಡಿದರು. ಅದೇ ವರ್ಷ ಅವನು ಮದುವೆಯಾಗಿದ್ದ ಚೆನ್ನಮ್ಮಾಜಿಯು ತಿಮ್ಮಣ್ಣನಾಯಕನೆಂಬ ಸೇನಾಧಿಪತಿಯು ನೆರವಿನಿಂದ ನಾಯಕ ಗದ್ದುಗೆಯನ್ನೇರಿ 1696ರವರೆಗೂ ದಕ್ಷತೆಯಿಂದ ಅಧಿಕಾರವನ್ನು ನಿರ್ವಹಿಸಿದಳು.

ಆಕೆ ತುಂಬ ಸಾಹಸಿ. ಯುದ್ಧದಲ್ಲೂ ಶಾಂತಿಯಲ್ಲೂ ಪ್ರಜೆಗಳ ಹಿತವನ್ನು ಸಾಧಿಸಿದವಳು. ಛತ್ರಪತಿ ಶಿವಾಜಿಯ ಮಗ ರಾಮರಾಜನನ್ನು ಸೆರೆಹಿಡಿಯಲು ಮುಗಲ್ ಸಾಮ್ರಾಟ ಅವರಂಗಜೇಬನು ಹವಣಿಸಿದ್ದನು. ಅವನು ತಲೆ ತಪ್ಪಿಸಿಕೊಂಡು ಅಲೆದಾಡುತ್ತಿದ್ದಾಗ ಚೆನ್ನಮ್ಮಾಜಿ ಅವನನ್ನು ಇಕ್ಕೇರಿಗೆ ಬರಮಾಡಿಕೊಂಡು ಅಲ್ಲಿ ಇರಿಸಿಕೊಂಡಿದ್ದಳು. ಈ ಕಾರಣದಿಂದ ಅವರಂಗಜೇಬನು ಸಿಟ್ಟಿಗೆದ್ದು ಅವಳ ಮೇಲೆ ದಂಡೊಂದನ್ನು ಕಳುಹಿಸಿದನು. ಚೆನ್ನಮ್ಮಾಜಿ ಧೈರ್ಯಗೆಡದೆ ಆ ದಂಡನ್ನು ಎದುರಿಸಿ ಹೊಡೆದೋಡಿಸಿದಳು. ಇದು 1691ರ ಮಾತು.

ಅವನತಿ

ಸೋಮಶೇಖರನಿಗೆ ಮಕ್ಕಳಿರಲಿಲ್ಲವಾಗಿ ಚೆನ್ನಮ್ಮಾಜಿಯು ಬಸಪ್ಪನಾಯಕನೆಂಬ ಹುಡುಗನನ್ನು ದತ್ತು ತೆಗೆದುಕೊಂಡು ಅವನಿಗೆ ಕ್ಷಾತ್ರವಿದ್ಯೆ, ರಾಜಕಾರಣಗಳಲ್ಲಿ ಸರಿಯಾದ ಶಿಕ್ಷಣ ಕೊಡಿಸಿ, ಮದುವೆ ಮಾಡಿ, ಅವನಿಗೆ ಅಧಿಕಾರವನ್ನು ವಹಿಸಿ ಗೋಕರ್ಣಕ್ಕೆ ತೆರಳಿ ಅಲ್ಲಿ ವಿರಕ್ತಳಾಗಿ ಉಳಿದಳು. ಬಸವಪ್ಪನು ವಿದ್ವಾಂಸ; ಅವನ 'ಶಿವತತ್ವರತ್ನಾಕರ' ಪ್ರಸಿದ್ಧವಾಗಿದೆ. ದಾನಧರ್ಮಗಳೆಂದರೆ ಅವನಿಗೆ ತುಂಬ ಆಸ್ಥೆ. ಆದರೆ ರಾಜಕಾರಣದಲ್ಲಿ ದುರ್ಬಲ. 1696 ರಿಂದ 1714 ರವರೆಗೂ ನಡೆದ ಇವನ ನಾಯಕತನದಲ್ಲಿ ಪೋರ್ಚುಗೀಸರೂ ಮರಾಠರೂ ಮೈಸೂರಿನ ಒಡೆಯರೂ ಬೇದನೂರಿನ ಸಾಮರ್ಥ್ಯವನ್ನು ಮುರಿದರು. ಇವನ ಕಾಲದಲ್ಲಿಯೇ ಕೆಳದಿಯ ಪಾಳೆಯಪಟ್ಟಿನ ಅವನತಿ ಆರಂಭವಾಯಿತು.

ಅವನ ತರುವಾಯ ಇಮ್ಮಡಿ ಸೋಮಶೇಖರನೂ 1714-1737), ಅವನನಂತರ ಬಸಪ್ಪನಾಯಕನೂ (1739-1754) ರಾಜ್ಯವಾಳಿದರು. ರಾಜ್ಯದ ವೈಭವವೇನೋ ಉಳಿದುಕೊಂಡಿದ್ದಿತು. ಆದರೆ ಇವರಿಗೂ ಚಿತ್ರ-ದುರ್ಗದ ನಾಯಕರಿಗೂ ಒದಗಿದ ವಿರಸ ಪರಕೀಯರ ಪಿತೂರಿಗಳಿಗೆ ಕಾರಣವಾಯಿತು. ಫ್ರೆಂಚರೂ, ಇಂಗ್ಲೀಷರೂ, ಮಹಮ್ಮದೀಯರೂ ತಂತಮ್ಮ ಸ್ವಾರ್ಥವನ್ನು ಸಾಧಿಸಲಾರಂಭಿಸಿದರು. ಬಸಪ್ಪನಾಯಕನು ಕಾಲವಾದನಂತರ

ಅವನ ಹೆಂಡತಿ ವೀರಮ್ಮಾಜಿ (1757-1763) ಗದ್ದುಗೆಯನ್ನೇರಿ ರಾಜ್ಯಭಾರವನ್ನು ನಡೆಸಿದಳು. ತನ್ನ ಗಂಡ 1754 ರಲ್ಲಿ ದತ್ತು ತೆಗೆದುಕೊಂಡಿದ್ದ ಮಗನನ್ನು ನಿರ್ಲಕ್ಷಿಸಿ 1758 ರಲ್ಲಿ ಮುಮ್ಮಡಿ ಸೋಮಶೇಖರನೆಂಬ ಇನ್ನೊಬ್ಬನನ್ನು ದತ್ತು ತೆಗೆದುಕೊಂಡಳು. ಇದರಿಂದಾಗಿ ಹಿರಿಯ ಅಧಿಕಾರಿಗಳ ವಿರೋಧವನ್ನು ಈಕೆ ಎದುರಿಸಬೇಕಾಯಿತು. ಅವಳ ಶೀಲವೂ ಸಂಶಯಾಸ್ಪದವಾಗಿದ್ದಿತು.

ಈ ಸಮಯವನ್ನು ಸಾಧಿಸಿ ಮೈಸೂರಿನ ಹೈದರ್-ಆಲಿಯು 1763ರ ಮಾರ್ಚ್ ತಿಂಗಳಲ್ಲಿ ಬೇದನೂರಿಗೆ ಮುತ್ತಿಗೆ ಹಾಕಿ ನಗರವನ್ನೂ ರಾಜ್ಯವನ್ನೂ ವಶಪಡಿಸಿಕೊಂಡನು. ವೀರಮ್ಮಾಜಿ ನಿರುಪಾಯಳಾಗಿ ಅರಮನೆಗೆ ಬೆಂಕಿಯಿಟ್ಟು ತನ್ನ ದತ್ತು ಮಗನೊಂದಿಗೆ ಬಲ್ಲಾಳರಾಯನ ದುರ್ಗಕ್ಕೆ ಓಡಿಹೋದಳು. ಹೈದರನು ಅವರನ್ನು ಹಿಡಿಸಿ ತುಮಕೂರು ಜಿಲ್ಲೆಯ ಮಧುಗಿರಿಯಲ್ಲಿ ಸೆರೆಯಲ್ಲಿಡಿಸಿದನು. ಮುಂದೆ ಮರಾಠರು ಮಧುಗಿರಿಯನ್ನು ಮುತ್ತಿ ವಶಪಡಿಸಿಕೊಂಡಾಗ ವೀರಮ್ಮಾಜಿಯ ಬಿಡುಗಡೆಯೂ ಆಯಿತು. ಪುಣೆಗೆ ಹೋಗುವ ದಾರಿಯಲ್ಲಿ ಆಕೆ ತೀರಿಕೊಂಡಳು.

ಗುಣಗ್ರಹಣ

ಹೈದರ್ ಆಲಿಯ ಬೇದನೂರು ವಿಜಯದಿಂದಾಗಿ ಕೆಳದಿ ರಾಜ್ಯವು ಮೈಸೂರಿಗೆ ಸೇರಿತು. ಹೀಗೆ ಪ್ರತಿಭಾಶಾಲಿಗಳಾದ, ಸಾಹಸಿಗಳಾದ ನಾಯಕರ ಪರಂಪರೆ ಕೊನೆಗೊಂಡಿತು. ಈ ಮನೆತನದಲ್ಲಿ ಒಟ್ಟು ಹದಿನೆಂಟು ನಾಯಕರು ರಾಜ್ಯವಾಳಿದರು. ಇವರಲ್ಲಿ ಬಹು ಮಂದಿ ವಿದ್ಯಾಪಕ್ಷಪಾತಿಗಳು, ಸುಸಂಸ್ಕೃತರು, ವೀರರು, ವಿಚಕ್ಷಣರು. ಇವರಲ್ಲಿ ಸ್ವತಃ ಗ್ರಂಥಗಳನ್ನು ಬರೆದವರೂ ಉಂಟು. ವೆಂಕಟಪ್ಪನಾಯಕನು ಪದ್ಮಪುರಾಣದ ಮೇಲೆ ಟೀಕೆಯೊಂದನ್ನು ಬರೆದಿದ್ದಾನೆ. ಆಡಳಿತ ನಿರ್ವಹಣೆಯಲ್ಲಿಯೂ ಸಿದ್ಧಹಸ್ತರು. ಭೂಗಂದಾಯದ ವಿಚಾರವಾಗಿ ಶಿವಪ್ಪನಾಯಕನ ಗೊತ್ತುವಳಿಯು 'ಶಿವಪ್ಪನಾಯಕನ ಶಿಸ್ತು' ಎಂದೇ ಪ್ರಸಿದ್ಧವಾಗಿದೆ. ಇವನ ಆರ್ಥಿಕ ಯೋಜನೆಗಳೂ ಪ್ರೌಢವಾಗಿದ್ದುವು. ಇವರೆಲ್ಲರೂ ಸುಭದ್ರವಾದ, ಸುಸಜ್ಜಿತವಾದ ಸೈನ್ಯವನ್ನು ವ್ಯವಸ್ಥೆ ಮಾಡಿದ್ದರು. ಇದೇ ಎಂಥ ಕಷ್ಟ ಪರಿಸ್ಥಿತಿಯಲ್ಲಿಯೂ ಅವರ ಕೈಕಾಯಿತು. ಸೈನ್ಯದ ವಿಶ್ವಾಸ

ವನ್ನು ಕಳೆದುಕೊಂಡ ವೀರಮ್ಮಾಜಿಯೊಬ್ಬಳು ದಿಕ್ಕುಕೆಟ್ಟು ಓಡಬೇಕಾಯಿತು.

ಈ ನಾಯಕರು ಕಂದಾಯ, ತೆರಿಗೆ ಮುಂತಾದ ವಿಚಾರಗಳಲ್ಲಿ ಸಮರ್ಪಕವಾದ ವ್ಯವಸ್ಥೆಯನ್ನು ಮಾಡಿದ್ದರು. ಗೌಡ, ಸೇನಬೋವ, ಪಾರುಪತ್ತೇದಾರ ಮುಂತಾದ ಅಧಿಕಾರಿಗಳು ನಾಯಕರ ಪರವಾಗಿ ನ್ಯಾಯದಿಂದ ವಸೂಲಿ ಮಾಡುತ್ತಿದ್ದರು. ತೆರಿಗೆಯನ್ನು ಹೇರುವಾಗ ಹಳೆಯ ಸಂಪ್ರದಾಯವನ್ನು ಮೀರುತ್ತಿರಲಿಲ್ಲ. ಎಲ್ಲ ವಿಚಾರಗಳಲ್ಲಿಯೂ ನಾಯಕರು ಸಚಿವ ಮಂಡಲಿಯ ಸಲಹೆಗಳನ್ನು ಪಡೆದು ಶಾಸನ ಮಾಡುತ್ತಿದ್ದರು. ತಾವು ವೀರಶೈವರಾದರೂ ಎಲ್ಲ ಮತಗಳ ಉದ್ಧಾರಕ್ಕೆ ಶ್ರಮಿಸಿದರು. ಅಂತೂ ಇಷ್ಟು ಉತ್ತಮವಾದ ಪಾಳೆಯಪಟ್ಟು ನಮ್ಮ ದೇಶದ ಇತಿಹಾಸದಲ್ಲಿ ವಿರಳ.

ಮೇಲುಕೋಟೆಯ ಚೆಲುವ

ಮಂಡ್ಯ ಜಿಲ್ಲೆಯಲ್ಲಿರುವ ಮೇಲುಕೋಟೆ ಕನ್ನಡನಾಡಿನ ಶ್ರೀ ವೈಷ್ಣವ ಜನಕ್ಕೆ ತುಂಬ ಪ್ರಿಯವಾದ ಪುಣ್ಯಕ್ಷೇತ್ರ. ಇದನ್ನು ತಿರುನಾರಾಯಣಪುರ, ಯದುಗಿರಿ, ಯಾದವಾದ್ರಿಯೆಂದೂ ಅವರು ವ್ಯವಹರಿಸುತ್ತಾರೆ. ಪ್ರಾಚೀನವಾದ ಕ್ಷೇತ್ರವೆಂಬುದು ನಿರ್ವಿವಾದವಾದರೂ ಅದರ ಪ್ರಖ್ಯಾತಿ ರಾಮಾನುಜಾಚಾರ್ಯರ ಕಾಲದಿಂದ ಮುಂದಕ್ಕೆ ಒದಗಿದುದು. ಹನ್ನೆರಡನೆಯ ಶತಮಾನದ ಆದಿಭಾಗದಲ್ಲಿ ಶೈವಪಕ್ಷಪಾತಿಗಳಾದ ಚೋಳರಾಜರ ಉಪದ್ರವದಿಂದ ಪಾರಾಗಲು ರಾಮಾನುಜಾಚಾರ್ಯರು ಇತ್ತಕಡೆ, ಕನ್ನಡ ನಾಡಿಗೆ ಬಂದಾಗ, ಮೇಲುಕೋಟೆಯಲ್ಲಿ ಹದಿನಾಲ್ಕು ವರ್ಷಗಳು ಇದ್ದರೆಂಬುದೇ ಈ ಕ್ಷೇತ್ರದ ಪ್ರಾಶಸ್ತ್ಯ. ಅದಕ್ಕೆ ಮುಂಚೆಯೂ ಇದು ವೈಷ್ಣವ ಕ್ಷೇತ್ರವಾಗಿದ್ದಿತೆಂದು ಪುರಾಣಗಳಿಂದ ತಿಳಿದುಬರುತ್ತದೆ. ಕನ್ನಡನಾಡಿನಲ್ಲಿ ವಿಶಿಷ್ಟಾದ್ವೈತ ಸಂಪ್ರದಾಯದ ವಿಸ್ತಾರಕ್ಕೆ ಮೇಲುಕೋಟೆ ಕೇಂದ್ರಸ್ಥಾನವಾಯಿತಾಗಿ ಇದು ಬೆಳೆಯಿತು; ರಾಮಾನುಜಾಚಾರ್ಯರ ದಿವ್ಯಾಜ್ಞೆ ಇಲ್ಲಿಂದಲೇ ಹೊರಟಿತಾಗಿ, ಹರಡಿತಾಗಿ ಅವರ ಅನುಯಾಯಿಗಳಿಗೆಲ್ಲ ಇದು ಪವಿತ್ರ ಭೂಮಿಯಾಯಿತು. ದಕ್ಷಿಣದವರಿಗೆ ಶ್ರೀರಂಗ ಇದ್ದ ಹಾಗೆ. ಹಾಗೆಂದೇ ಇದನ್ನು "ಸಂಯಮಿ ಸಾರ್ವಭೌಮ ವಿಜಯಸ್ಥಾನ" ವೆಂದು ಬಣ್ಣಿಸುತ್ತಾರೆ.

ಹೊಯ್ಸಳ ರಾಜರಿಂದ, ವಿಜಯನಗರ ಸಂಸ್ಥಾನದ ಮಹಾರಾಯರಿಂದ ಮೈಸೂರು ಅರಸರಿಂದು ಪ್ರವರ್ಧಮಾನಕ್ಕೆ ಬಂದ ಮೇಲುಕೋಟೆಯ ವೈಭವ ಕಾಲಕ್ರಮದಲ್ಲಿ ಶಿಥಿಲವಾಯಿತು. ಹಲವು ಕಾರಣಗಳಿಂದ ಈಚೆಗೆ ಭಕ್ತಾದಿಗಳ ಆಸಕ್ತಿ ಕುಗ್ಗಿ ದೇವಾಲಯದ ಆದಾಯ ಬಹುಮಟ್ಟಿಗೆ ಕಡಮೆಯಾಗಿದೆ. ನಿತ್ಯ

ನೈಮಿತ್ತಿಕ ಸೇವೆಗಳೂ ಸರಿಯಾಗಿ ನಡೆಯುವುದು ಕಷ್ಟವಾಗಿದೆಯೆಂದೂ, ಬಹು ಕಾಲದಿಂದ ದೇವಾಲಯವು ದುರಸ್ತಿಯಿಲ್ಲದೆ ನಿಂತಿದೆಯೆಂದೂ, ಉತ್ಸವ ಸಮಯಗಳಲ್ಲಿ ಉತ್ಸವಗಳನ್ನು ಒಯ್ಯಲು ಹತ್ತಾರು ಬಂಡಿಕಾರರನ್ನು ಸೇರಿಸುವುದೂ ದುಸ್ತರವಾಗುತ್ತಿದೆಯೆಂದೂ ಮೂವತ್ತು ವರ್ಷಗಳ ಹಿಂದೆಯೇ ಮೈಸೂರು ಸರಕಾರದವರು ನೇಮಿಸಿದ ಸಮಿತಿಯೊಂದು ತಿಳಿಸಿತ್ತು.

ಕಾವೇರಿ ನದಿಗೆ ಉತ್ತರದಲ್ಲಿ ಸಹ್ಯಾದ್ರಿ ಸಾಲಿನ ಪೂರ್ವಭಾಗದಲ್ಲಿ ಹಲವಾರು ಬೆಟ್ಟಗಳ ಒಕ್ಕೂಟವೇ ಮೇಲುಕೋಟೆ. ಮೈಸೂರು ರಾಜವಂಶದ ಮೂಲಪುರುಷರಾದ ಯದುರಾಯರು 1399ರ ಸುಮಾರಿಗೆ ಇಲ್ಲಿನ ದೇವಾ-ಲಯಕ್ಕೆ ಬಂದು ಸೇವೆ ಸಲ್ಲಿಸಿ ತಮಗೆ ಪುತ್ರೋತ್ಸವವಾದ ನೆನಪಿಗೆ ಬೆಟ್ಟದ ಮೇಲೆ 1408ರಲ್ಲಿ ಕೋಟೆ ಕೊತ್ತಲಗಳನ್ನು ಕಟ್ಟಿಸಿದರು. ಇದರಿಂದ ಇದಕ್ಕೆ ಮೇಲುಕೋಟೆಯೆಂದು ಹೆಸರಾಯಿತು. ಇದು ಈಚಿನ ಹೆಸರು. ಪುರಾಣಗಳಲ್ಲಿ ಇದನ್ನು ವೇದಾದ್ರಿ, ನಾರಾಯಣಾದ್ರಿ, ಗೋಮಂತ ಪರ್ವತ, ಯದುಶೈಲ ಎಂದೂ ಕರೆದಿದ್ದಾರೆ. ಅಷ್ಟತೀರ್ಥಗಳಿಂದಲೂ, ಸಪ್ತಕ್ಷೇತ್ರಗಳಿಂದಲೂ ವಿಶಿಷ್ಟವಾದ ಈ ಪ್ರದೇಶದ ಎರಡು ಯೋಜನಗಳಷ್ಟು ವಿಸ್ತೀರ್ಣವನ್ನು ವೈಕುಂಠವರ್ಧನ ಕ್ಷೇತ್ರವೆಂದು ಪುರಾಣ ಹೊಗಳುತ್ತದೆ. ಬ್ರಹ್ಮನೇ ಪೂಜೆ ಮಾಡುತ್ತಿದ್ದ ನಾರಾಯಣ ಮೂರ್ತಿಯನ್ನು ಸನತ್ಕುಮಾರನು ಸತ್ಯಲೋಕದಿಂದ ಮೇರುಪರ್ವತಕ್ಕೂ ಅಲ್ಲಿಂದ ಕೈಲಾಸ-ಹಿಮವಂತ ಪರ್ವತಗಳಿಗೂ ತಂದು ಅನಂತರ ದಕ್ಷಿಣದ ಯಾದವಗಿರಿಯಲ್ಲಿ ಪ್ರತಿಷ್ಠೆ ಮಾಡಿದನಂತೆ.

ತರುವಾಯ ಬ್ರಹ್ಮನು ಈ ಮೂರ್ತಿಯ ವಿರಹವನ್ನು ತಾಳಲಾರದೆ ಬೇಗುದಿಗೊಂಡಾಗ ವಿಷ್ಣುವು ತನ್ನ ಹೃದಯದಿಂದಲೇ ಚೆಲುವರಾಯಸ್ವಾಮಿಯ ಮೂರ್ತಿಯನ್ನು ಉಭಯ ದೇವಿಯರೊಂದಿಗೆ ಮಾಡಿಕೊಟ್ಟನಂತೆ. ಮುಂದೆ ರಾಮನು ತನ್ನ ಮನೆದೇವರಾದ ರಂಗನಾಥನನ್ನು ವಿಭೀಷಣನಿಗೆ ಕೊಟ್ಟು ಬಿಟ್ಟಾಗ ಬ್ರಹ್ಮನು ರಾಮನಿಗೆ ಚೆಲುವರಾಯ ಸ್ವಾಮಿಯನ್ನು ಕೊಟ್ಟನಂತೆ. ರಾಮನು ಅಂತರ್ಧಾನನಾಗುವ ಕಾಲದಲ್ಲಿ ಈ ಮೂರ್ತಿಯನ್ನು ಹನುಮಂತನಿಗೆ

ಕೊಟ್ಟನೆಂದೂ, ಹನುಮಂತನು ಕುಶಮಹಾರಾಜನಿಗೆ ಕೊಟ್ಟನೆಂದೂ, ಕುಶನು ತನ್ನ ಮಗಳಾದ ಕನಕಮಾಲಿನಿಗೆ ಬಳುವಳಿಯಾಗಿ ಕೊಟ್ಟನೆಂದೂ, ಆಕೆಯ ಗಂಡ ಯದುಕುಲದ ಯದುಶೇಖರನ ಸಂತತಿಯಲ್ಲಿ ಇದು ಪೂಜೆಗೊಳ್ಳುತ್ತಿದ್ದಿತೆಂದೂ, ಕಡೆಗೆ ಯಾದವ ಕೃಷ್ಣನ ಕಾಲಕ್ಕೆ ನಾರಾಯಣಾದ್ರಿಗೆ ಬಂದಿತೆಂದೂ • ಪುರಾಣದ ಕಥೆ. ಬಲರಾಮನು ಅಲ್ಲಲ್ಲಿ ಪರ್ಯಟನ ಮಾಡುತ್ತಾ ಯಾದವಾದ್ರಿಗೆ ಬಂದು ಅಲ್ಲಿ ಸನತ್ಕುಮಾರನಿಂದ ಪ್ರತಿಷ್ಠಿತವಾಗಿದ್ದ ನಾರಾಯಣನನ್ನು ಕಂಡಾಗ ತನ್ನ ಮನೆ ದೇವರಾಗಿದ್ದ ಚೆಲುವರಾಯಸ್ವಾಮಿಗೂ ಈ ಮೂರ್ತಿಗೂ ಇದ್ದ ಸಾದೃಶ್ಯವನ್ನು ಗ್ರಹಿಸಿ ದ್ವಾರಕೆಯಲ್ಲಿದ್ದ ತನ್ನವರಿಗೆ ಸುದ್ದಿ ಮುಟ್ಟಿಸಿದನಂತೆ. ಕೃಷ್ಣನೇ ಮೊದಲಾಗಿ ಯಾದವರು ಚೆಲುವರಾಯನನ್ನು ತಂದು ನಾರಾಯಣನ ಮುಂದಿಟ್ಟು ನೋಡಲು ಅದು ಪ್ರತಿಕೃತಿಯಂತೆ ಇದ್ದಿತಂತೆ. ಅನಂತರ ಅವರು ಚೆಲುವರಾಯಸ್ವಾಮಿಯ ವಿಗ್ರಹವನ್ನು ನಾರಾಯಣ ಮೂರ್ತಿಯ ಬಳಿಯೇ ಪ್ರತಿಷ್ಠೆ ಮಾಡಿ ಹೋದರಂತೆ. ಈ ಕಾರಣದಿಂದ ಮೇಲುಕೋಟೆಯ ಮೂಲ ಮೂರ್ತಿ ನಾರಾಯಣನೆನಿಸಿಕೊಳ್ಳುತ್ತದೆ. ಉತ್ಸವ ಮೂರ್ತಿಯನ್ನು ಚೆಲುವ ರಾಯನೆನ್ನುತ್ತಾರೆ. ರಾಮಪ್ರಿಯನೆಂಬ ಹೆಸರೂ ಉತ್ಸವಮೂರ್ತಿಗೆ ಇದ್ದಂತೆ ತಿಳಿದು ಬರುತ್ತದೆ.

ಆಚಾರ್ಯರು ಬಂದಾಗ

ಆದರೆ ರಾಮಾನುಜಾಚಾರ್ಯರು ಮೇಲುಕೋಟೆಗೆ ಬಂದಾಗ ಈ ಆದಿ ನಾರಾಯಣ ಮೂರ್ತಿಯು ಹುತ್ತದಲ್ಲಿ ಅಡಗಿ ಕಾಣದಾಗಿದ್ದಿತೆಂದೂ, ಗುಡಿ ಗೋಪುರಗಳೂ ಬಿದ್ದುಹೋಗಿದ್ದುವೆಂದೂ ಚೆಲುವರಾಯಸ್ವಾಮಿಯ ವಿಗ್ರಹ ಅಲ್ಲಿ ಇರಲೇ ಇಲ್ಲವೆಂದೂ ಮೇಲುಕೋಟೆಯ ಯತಿರಾಜ ಮಠದಲ್ಲಿರುವ ಪ್ರಾಚೀನ ತಾಳಪತ್ರ ಗ್ರಂಥವೊಂದು ತಿಳಿಸುತ್ತದೆ. ಬಹುಧಾನ್ಯ ಸಂವತ್ಸರದ (ಎಂದರೆ ಕ್ರಿಸ್ತಾಬ್ದ 1010ರ) ಮಾಘ ಶುದ್ಧ ಸ್ಥಿರವಾರ ರೇವತೀ ನಕ್ಷತ್ರದಲ್ಲಿ ರಾಮಾನುಜಾಚಾರ್ಯರು ಆದಿನಾರಾಯಣಮೂರ್ತಿಯನ್ನು ಹುತ್ತದಿಂದ ಹೊರತೆಗೆದು ಮೊಟ್ಟಮೊದಲು ಆರಾಧನೆಯನ್ನು ಮಾಡಿದರೆಂದು ಈ ಗ್ರಂಥ ಸ್ಪಷ್ಟಪಡಿಸುತ್ತದೆ. ಅನಂತರ ತಮ್ಮ ಶಿಷ್ಯನಾಗಿದ್ದ ಹೊಯ್ಸಳರಾಜ–ಬಿಟ್ಟಿ

ದೇವ (ವಿಷ್ಣುವರ್ಧನ)ನನ್ನು ತೊಂಡನೂರಿನಿಂದ ಕರೆಯಿಸಿ ಗುಡಿ ಗೋಪುರ ಪ್ರಾಕಾರಗಳನ್ನು ಕಟ್ಟಿಸಿದರೆಂದೂ ಇಲ್ಲಿ ಪ್ರಸ್ತಾಪವಿದೆ. ಇತಿಹಾಸದ ದೃಷ್ಟಿಯಿಂದ ಆಗಲೇ ರಾಮಾನುಜಾಚಾರ್ಯರು ನಾರಾಯಣ ಮೂರ್ತಿಯನ್ನು ಪ್ರತಿಷ್ಠೆ ಮಾಡಿದರೆನ್ನಲು ಅಡ್ಡಿಯಿಲ್ಲ. ಬಹುಶಃ ವಿಷ್ಣುವರ್ಧನನು ಕಟ್ಟಿಸಿದ ನೆನ್ನುವ ಪಂಚನಾರಾಯಣ ದೇವಾಲಯಗಳಲ್ಲಿ ಈ ಸುಂದರ ನಾರಾಯಣನೂ ಒಂದಾಗಿರಬಹುದು.

ಆದರೆ ಮೇಲುಕೋಟೆಯ ಶಿಖರಗಳಲ್ಲಿ ತುಂಬ ಎತ್ತರವಾಗಿರುವ, ಸಮುದ್ರ ಮಟ್ಟದಿಂದ 3,589 ಅಡಿ ಮೇಲಿರುವ. ಯೋಗಾನರಸಿಂಹನ ಆಲಯ ಆ ಕಾಲಕ್ಕೇ ಇದ್ದಂತೆ ತೋರುತ್ತದೆ. ಈ ನರಸಿಂಹನ ಮೂರ್ತಿ ಭವ್ಯ ವಾಗಿದೆ, ಅದ್ಭುತವಾಗಿದೆ. ತಿರುಮಲೆಯ ಮೇಲೆಯೂ ಪುರಾತನವಾದ ಯೋಗಾ ನರಸಿಂಹನ ಮೂರ್ತಿಯೊಂದು ಇದ್ದಿತೆಂದೂ, ರಾಮಾನುಜಾಚಾರ್ಯರು ಅದನ್ನು ತರಿಸಿ ವೆಂಕಟೇಶ್ವರನ ಆಲಯದೊಳಗೇ ಇರಿಸಿದರೆಂದೂ ಅಲ್ಲಿನ ಚರಿತ್ರೆ ಹೇಳುತ್ತದೆ. ಸಾಮಾನ್ಯವಾಗಿ ಬೆಟ್ಟಗಳ ಮೇಲೆ, ಕಾಡುಗಳ ನಡುವೆ ನರಸಿಂಹನ ಆಲಯಗಳಿರುತ್ತವೆ. ಆದರೆ ರಾಮಾನುಜಾಚಾರ್ಯರಿಗೆ ನರಸಿಂಹನ ಉಗ್ರಮೂರ್ತಿಗಿಂತ ಸೌಮ್ಯಮೂರ್ತಿಗಳ ಮೇಲೆ ಹೆಚ್ಚು ಒಲವು ಇದ್ದಂತೆ ಕಾಣುತ್ತದೆ. ಈ ದೃಷ್ಟಿಯಿಂದ ಮೇಲುಕೋಟೆಯ ನರಸಿಂಹನು ಪ್ರಾಚೀನ ನಾದರೂ ಗೌಣನಾಗಿ, ನಾರಾಯಣನು ಮುಖ್ಯನಾಗಿರಬಹುದು.

ರಾಮಾನುಜ ಸಾನ್ನಿಧ್ಯ

ಅಂತೂ ಮೇಲುಕೋಟೆಯ ಕೀರ್ತಿಗೂ ರಾಮಾನುಜಾಚಾರ್ಯರ ಕೈಂಕ ರ್ಯಕ್ಕೂ ಸ್ಪಷ್ಟವಾದ ನೆಂಟಿದೆ. ರಾಮಾನುಜರು ಶ್ರೀರಂಗದಲ್ಲಿರುತ್ತಿದ್ದಾಗ ಅಧಿರಾಜೇಂದ್ರ ಚೋಳನೆಂಬ ರಾಜನು ಪರಮಶೈವನಾಗಿ ವೈಷ್ಣವ ಮತವನ್ನು ನಿರ್ಮೂಲ ಮಾಡಲು ಉದ್ಯುಕ್ತನಾದನಂತೆ. ರಾಮಾನುಜರನ್ನೇ ಹಿಡಿದು ಶ್ರೀರಂಗವನ್ನು ಸದೆಬಡಿದರೆ ಇದು ಸಿದ್ಧಿಯಾದೀತೆಂದು ಬಗೆದು ರಾಮಾನುಜ ರನ್ನು ಸೆರೆ ಹಿಡಿಯಲು ಪಡೆಯೊಂದನ್ನು ಶ್ರೀರಂಗಕ್ಕೆ ಕಳುಹಿಸಿದನಂತೆ. ಆಗ ಆಚಾರ್ಯರು ವೇಷ ಮರೆಸಿಕೊಂಡು ಮೊದಲಿಯಾಂಡಾನ್‌ನೊಂದಿಗೆ ಶ್ರೀರಂಗ

ದಿಂದ ಹೊರಟು ಅಲ್ಲಲ್ಲಿ ಸುತ್ತಾಡುತ್ತ ಮೈಸೂರು ಸೀಮೆಗೆ ಬಂದರಂತೆ. ಎಡ ತೊರೆ ತಾಲ್ಲೂಕಿನ ಸಾಲಿಗ್ರಾಮದ ಮಾರ್ಗವಾಗಿ ತೊಂಡನೂರಿಗೆ ಬಂದು ಅಲ್ಲಿ ಜೈನರಾಜನಾಗಿದ್ದ ಹೊಯ್ಸಳ ಬಿಟ್ಟಿದೇವನನ್ನು ವೈಷ್ಣವ ದೀಕ್ಷೆಗೆ ಒಲಿಸಿ ಕೊಂಡು ಯದುಗಿರಿ (ಮೇಲುಕೋಟೆ) ಬೆಟ್ಟವನ್ನು ಹತ್ತಿ ಹೋದರಂತೆ. ಅಲ್ಲಿ ನಾರಾಯಣಮೂರ್ತಿಯನ್ನು ಹುತ್ತದಿಂದ ತೆಗೆದು ಬಿಟ್ಟಿದೇವ (ವಿಷ್ಣುವರ್ಧನ) ನನ್ನು ಕರೆಯಿಸಿ ಪ್ರತಿಷ್ಠೆ, ದೇವಾಲಯ ನಿರ್ಮಾಣ ಮುಂತಾದವನ್ನು ಮಾಡಿದ ರಂತೆ. ದೇವಾಲಯುವನ್ನು ಕಟ್ಟಲು ನಾಲ್ಕು ವರ್ಷ, ಎರಡು ತಿಂಗಳು, ಹನ್ನೊಂದು ದಿನಗಳು ಹಿಡಿಸಿದುವೆಂದು ಪ್ರತೀತಿ. ದೇವಾಲಯ ನಿರ್ಮಾಣಕಾರ್ಯ ಆರಂಭವಾದದ್ದು ಬಹುಧಾನ್ಯದ ಫಾಲ್ಗುಣ ಶುದ್ಧ ಶುಕ್ರವಾರ, ಹಸ್ತಾನಕ್ಷತ್ರ, ವೃಷಭ ಲಗ್ನದಲ್ಲಿ. ಈ ಸ್ಥಳಕ್ಕೆ ತಿರುನಾರಾಯಣಪುರವೆಂಬುದು ಆಗ ರಾಮಾ ನುಜಾಚಾರ್ಯರೇ ಇಟ್ಟ ಹೆಸರು.

ಕಾವೇರಿಯ ಇಕ್ಕೆಲಗಳಲ್ಲಿ ಇದ್ದ ಅಷ್ಟಗ್ರಾಮ ಮುಂತಾದ ಭೂಮಿ ಯನ್ನೆಲ್ಲ ಮೇಲುಕೋಟೆಯ ಹೊಸ ದೇವಾಲಯಕ್ಕೆ ರಾಜನು ದಾನಮಾಡಿ, ದೇವಾಲಯದ ನಿರ್ಮಾಣ, ಪೂಜಾವ್ಯವಸ್ಥೆಗಳಲ್ಲಿ ಆಚಾರ್ಯರಿಗೆ ನೆರವಾಗಲು ತನ್ನ ಅಧಿಕಾರಿಯಾಗಿದ್ದ ವೆಂಕಟಾದ್ರಿ ನಾಯಕನನ್ನು ಅಲ್ಲಿ ಬಿಟ್ಟು ತಾನು ತೊಂಡ ನೂರಿಗೆ ಹಿಂದಿರುಗಿದನಂತೆ. ಇಲ್ಲಿನ ಕಟ್ಟಳೆಗಳು, ಸೇವೆಗಳು, ಅರ್ಚನಾ ಸಂಪ್ರದಾಯ ಎಲ್ಲವನ್ನೂ ಶ್ರೀರಂಗದ ಮಾದರಿಯಲ್ಲಿ ರಾಮಾನುಜಾ ಚಾರ್ಯರೇ ಸಿದ್ಧಪಡಿಸಿದರೆಂದೂ, ತಾವೇ ಹದಿನಾಲ್ಕು ವರ್ಷಗಳು ನಿಂತು ಸೇವೆ ಮಾಡಿದರೆಂದೂ ಶ್ರೀವೈಷ್ಣವರ ಶ್ರದ್ಧೆ. ಇಲ್ಲಿನ ಪೂಜಾಕ್ರಮ 'ಉಡೈ ಯವರ್ ನಿಯಮನ ಪದ್ಧತಿ'ಯಂತೆ ನಡೆಯುತ್ತದೆ. ಉಡೈಯವರ್ (ಒಡೆ ಯರು) ಎಂಬುದು ರಾಮಾನುಜಾಚಾರ್ಯರನ್ನು ಶಿಷ್ಯರು ಕರೆಯುತ್ತಿದ್ದ ಹೆಸರು. ಹೊಯ್ಸಳ ರಾಜನು ಇವರಿಗಾಗಿ ಮೇಲೊಂದು ಮಠವನ್ನೂ ಕಟ್ಟಿಸಿ ಕೊಟ್ಟನು. ಇದು ಯತಿರಾಜ ಮಠವೆಂದು ಪ್ರಸಿದ್ಧವಾಗಿದೆ.

ಬೆಟ್ಟದ ಕೆಳಗೆ ತೊಂಡನೂರಿನಲ್ಲಿ ದೊಡ್ಡ ಕೆರೆಯೊಂದನ್ನು ಕಟ್ಟಿಸಲು ರಾಮಾನುಜಾಚಾರ್ಯರು ಸೂಚಿಸಿದರೆಂದೂ ಅದನ್ನು ರಾಜನು ತೋಡಿಸಿ

ಮುಗಿಸಿದಂದು ಅದಕ್ಕೆ ತಿರುಮಲಸಾಗರವೆಂದು ಅವರೇ ಹೆಸರಿಟ್ಟರೆಂದೂ ಹೇಳುತ್ತಾರೆ. 1746ರಲ್ಲಿ ದಕ್ಕನ್ ಸುಬೇದಾರನ ಮಗ ನಾಸಿರ್ ಜಂಗ್ ಎಂಬ ತರುಣ ಇಲ್ಲಿಗೆ ಬಂದು ಕೆರೆಯ ಸೌಂದರ್ಯವನ್ನು ನೋಡಿ ಮೆಚ್ಚಿ ಅದನ್ನು "ಮೋತಿ ತಲಾಬ್" ಎಂದು ಕರೆದನಂತೆ. ಇಂದಿಗೂ ಆ ಹೆಸರೇ ಉಳಿದಿದೆ. 1799ರಲ್ಲಿ ಶ್ರೀರಂಗಪಟ್ಟಣವನ್ನು ಮುತ್ತಲು ಹವಣಿಸುತ್ತಿದ್ದ ಶತ್ರುಗಳಿಗೆ ಅನನುಕೂಲ ಮಾಡಲು ಟೀಪುಸುಲ್ತಾನನು ಈ ಕೆರೆಯ ದಂಡೆಯನ್ನು ಒಡೆಸಿ ನೀರನ್ನು ಹರಿಸಿದನಂತೆ.

ಮುದ್ದಿನ ಮಗ

ನಾರಾಯಣ ದೇವಾಲಯದಲ್ಲಿ ಆಚಾರ್ಯರು ಇರುತ್ತಿದ್ದಾಗ ಉತ್ಸವ ಮೂರ್ತಿ ಇಲ್ಲದಿದ್ದುದನ್ನು ಕಂಡು ಕಾತರರಾಗಿದ್ದರಂತೆ. ಆಗ ಕನಸಿನಲ್ಲಿ ದೇವರು ಕಾಣಿಸಿಕೊಂಡು ತನ್ನ ಉತ್ಸವ ಮೂರ್ತಿಯಾದ ರಾಮಪ್ರಿಯನು ದಿಲ್ಲಿಯಲ್ಲಿ ಸುಲ್ತಾನನ ಮಗಳ ಬಳಿ ಇದ್ದಾನೆಂದು ತಿಳಿಸಿದನಂತೆ. ಒಡನೆಯೇ ಅದನ್ನು ತರಲು ಆಚಾರ್ಯರು ದಿಲ್ಲಿಗೆ ಹೊರಟು ಸುಲ್ತಾನನನ್ನು ಕಂಡು ವಿಗ್ರಹವನ್ನು ಕೊಡುವಂತೆ ಕೇಳಿದರೆಂದೂ, ಅವನು ಒಪ್ಪಿಕೊಂಡನೆಂದೂ, ಆಚಾರ್ಯರು ಅಂತಃಪುರದ ಬಳಿ ಬಂದು ಕೇಳಿದಾಗ ಅವರ ಕೈಯಲ್ಲಿ ಹಾರಿಬಂದು ಕುಳಿತಿತೆಂದೂ, ಅವರು ಅದರೊಡನೆ ಹಿಂದಿರುಗಿದಾಗ ಅದನ್ನು ತುಂಬ ಪ್ರೀತಿಸುತ್ತಿದ್ದ ಸುಲ್ತಾನನ ಮಗಳೂ ಜೊತೆಗೆ ಬಂದಳೆಂದೂ, ಮೇಲುಕೋಟೆಯ ಮೇಲೆ ಬಂದು ದೇವಾಲಯವನ್ನು ಹೊಕ್ಕು ಆ ತರುಣಿ ಮತ್ತೆ ಕಾಣದಾದಳೆಂದೂ ಕಥೆ.

ಈ ಕಥೆಯಲ್ಲಿ ಎಷ್ಟು ಸತ್ಯವಿದೆಯೆಂದು ಹೇಳುವುದು ಕಷ್ಟ. ಇದೇ ಕಥೆಯನ್ನು ಶ್ರೀರಂಗದ ಉತ್ಸವ ಮೂರ್ತಿ ಅಳಗಿಯ ಮನವಾಳನ ವಿಚಾರವಾಗಿಯೂ ಹೇಳುತ್ತಾರೆ. "ಕೋಯಿಲ್ ಒಳುಗು" ಎಂಬ ಶ್ರೀರಂಗ ದೇವಾಲಯದ ಇತಿಹಾಸದಲ್ಲಿ ಹನ್ನೆರಡನೆಯ ಶತಮಾನದ ಸುಮಾರಿಗೆ ಮುಸಲ್ಮಾನರು ಶ್ರೀರಂಗವನ್ನು ದಾಳಿ ಮಾಡಿ ಅಲ್ಲಿನ ಮೂರ್ತಿಗಳನ್ನು ಕೊಂಡೊಯ್ದಾಗ ಕರಂಬೂರಿನ ಹೆಂಗಸೊಬ್ಬಳು ಮೂರ್ತಿಗಳನ್ನು ಅವರು ಎಲ್ಲಿಗೆ ಒಯ್ಯುತ್ತಾರೆಂಬುದನ್ನು ತಿಳಿಯಲು ಉಪಾಯದಿಂದ ಅವರೊಂದಿಗೆ ಹೋದಳೆಂದೂ,

ದಾಳಿಕಾರರು ಆಗ ಯದುಗಿರಿಗೂ ಹೋಗಿ ಅಲ್ಲಿನ ರಾಮಪ್ರಿಯ ಮೂರ್ತಿ ಯನ್ನು ಒಯ್ದುದನ್ನು ಆಕೆ (ಪಿನ್ ತೊಡರ್‌ನ್ದವಲ್ಲಿ) ನೋಡಿದಳೆಂದೂ ಹೇಳು ತ್ತದೆ. ಮೇಲುಕೋಟೆಯ ಮಠದಲ್ಲಿರುವ ತಾಳಪತ್ರ ಗ್ರಂಥದಲ್ಲಿ ಸುಲ್ತಾನನ ಮಗಳ ಹೆಸರು ವರನಂದಿನಿಯೆಂದೂ, ಆಕೆ ಆಚಾರ್ಯರೊಂದಿಗೆ ಹೊರಟಾಗ ಸುಲ್ತಾನನು ಆಕೆಗೆ ಬಂಕೀಪುರವನ್ನು ಬಳುವಳಿಯಾಗಿ ಕೊಟ್ಟನೆಂದೂ ಅವರು ಮೇಲುಕೋಟೆ ಮುಟ್ಟುವ ವೇಳೆಗೆ ನಾಲ್ಕು ವರ್ಷ, ಐದು ತಿಂಗಳು, ನಾಲ್ಕು ದಿನಗಳು ಆಗಿದ್ದುವೆಂದೂ ಹೇಳಿದೆಯಂತೆ. ನಾರಾಯಣ ಸ್ವಾಮಿಯ ವಿಗ್ರಹದ ಪಾದಗಳ ಬಳಿ ಈಗಲೂ ಈ ಸುಲ್ತಾನನ ಮಗಳೆಂದು ಹೇಳುವ ಸಣ್ಣ ಪ್ರತಿಮೆ ಯನ್ನಿಟ್ಟಿದ್ದಾರೆ. ಆಕೆಗಾಗಿ ಬೆಟ್ಟದ ಕೆಳಗೆ ಆಲಯವೊಂದೂ ಇದೆ. ಬೀಬಿ ನಾಚ್ಚಿ ಯಾರ್ ಎಂದು ಕರೆಸಿಕೊಳ್ಳುವ ಈಕೆಗಾಗಿ ಸೇವಾರ್ಥವೂ ನಡೆಯುತ್ತದೆ.

ರಾಮಾನುಜರು ದಿಲ್ಲಿಗೆ ಹೋಗಿ ರಾಣೀವಾಸದಿಂದ ರಾಮಪ್ರಿಯಮೂರ್ತಿ ಯನ್ನು ಕರೆಯಲು ಅದು ಮುದ್ದಿನ ಮಗನಂತೆ ಓಡಿ ಬಂದಿತಂತೆ. ಆಗ ಅವರಿಗೆ, ತುಂಬ ಕಾಲದ ಮೇಲೆ ಮಗನನ್ನು ಕಂಡ ತಂದೆಗೆ ಆಗುವಂತೆ, ಸಂತೋಷ ಆಯಿತಂತೆ. ಆ ಆನಂದದ ಭರದಲ್ಲಿ ಮೂರ್ತಿಯನ್ನು ಚೆಲುವ ಮಗು (ತಮಿಳಿನಲ್ಲಿ ಶೆಲ್ವಪುಳ್ಳೈ) ಎಂದು ಸಂಬೋಧಿಸಿದರಂತೆ. ಅಂದಿನಿಂದ ಈ ಮೂರ್ತಿಗೆ ಚೆಲುವರಾಯನೆಂದೂ, ಸಂಪತ್ಕುಮಾರನೆಂದೂ ಹೆಸರು ಬಿದ್ದಿದೆ. ದೇವಸ್ಥಾನದ ಮಂಗಳಾಶಾಸನ ಪದ್ಧತಿಯಲ್ಲಿ "ನಾರಾಯಣಾಚಲೋತ್ತುಂಗ ಶೃಂಗಶೃಂಗಾರ ಮೂರ್ತಯೆ । ರಾಮಾನುಜಾಚಾರ್ಯ ಪುತ್ರಾಯ ಸಂಪತ್‌ಪುತ್ರಾಯ ಮಂಗಳಂ ॥" ಎಂಬ ಶ್ಲೋಕ ಸೇರಿ ಬಂದಿದೆ. ಈ ವಿಗ್ರಹವನ್ನು ಮೇಲು ಕೋಟೆಯ ಮೇಲೆ ಸಾಗಿಸಲು ಆಚಾರ್ಯರಿಗೆ ಆದಿ ಕರ್ನಾಟಕರಾದ ಜಾಂಬವ ಕುಲದ ಜನ ನೆರವಾದರೆಂದೂ ಅದಕ್ಕಾಗಿ ವರ್ಷದಲ್ಲೊಂದು ದಿನ ಬ್ರಹ್ಮೋತ್ಸ ವದ ಸಮಯದಲ್ಲಿ ಇವರಿಗೆ ದೇವಾಲಯ ಪ್ರವೇಶದ, ತೀರ್ಥ ಪ್ರಸಾದ ಸ್ವೀಕಾ ರದ ಅಧಿಕಾರವನ್ನು ಆಚಾರ್ಯರೇ ವ್ಯವಸ್ಥೆ ಮಾಡಿದರೆಂದೂ ಹೇಳುತ್ತಾರೆ. ಇತರರು ನಿಕೃಷ್ಟವಾಗಿ ಕಾಣುತ್ತಿದ್ದ ಈ ಜನರನ್ನು ಆಚಾರ್ಯರು ತಿರು- ಕ್ಕುಲತ್ತಾರ್ (ದೊಡ್ಡ ಕುಲದವರು) ಎಂದು ಕರೆದು ಮರ್ಯಾದೆ ಮಾಡಿದರು.

ಇತಿಹಾಸದ ವಿಕಟ

ಹದಿನಾಲ್ಕು ವರ್ಷಗಳ ನಂತರ ಅಧಿರಾಜೇಂದ್ರ ಚೋಳನು ಸತ್ತ ಮೇಲೆ ಕುಲೋತ್ತುಂಗ ಚೋಳರಾಜನು ಆಹ್ವಾನಿಸಲು ಆಚಾರ್ಯರು ನಾರಾಯಣ ದೇವಾಲಯದಲ್ಲಿ ನಿರಂತರ ಪೂಜಾಕ್ರಮದ ವ್ಯವಸ್ಥೆಯನ್ನು ಮಾಡಿ ತಿರುಮಲೆ ತಿರುಪತಿಯ ಮಾರ್ಗವಾಗಿ ಶ್ರೀರಂಗಕ್ಕೆ ಮರಳಿದರು. ಮೇಲುಕೋಟೆಯ ದೇವಾಲಯದ ಅರ್ಚನೆಗೆಂದು ತಮ್ಮ ಶಿಷ್ಯರಲ್ಲಿ ತಿರುಪುರದಾಸರು, ತಿರುಕ್ಕಿಗುಡಿ ದಾಸರು, ಯತಿರಾಜದಾಸರು, ರಂಗರಾಜಭಟ್ಟರು ಮುಂತಾದ 52 ಮಂದಿಯನ್ನು ಅವರು ನೇಮಿಸಿದ್ದರು. ತಮ್ಮ ಶಿಷ್ಯ ರಾಮಾನುಜಜೀಯರ್ ಎಂಬುವರನ್ನು ಮಠದಲ್ಲಿ ತಮ್ಮ ಉತ್ತರಾಧಿಕಾರಿಯನ್ನಾಗಿ ನೇಮಿಸಿದರು. ಈ ಪರಂಪರೆಯಲ್ಲಿ ನಾರಾಯಣಜೀಯರ್, ಯತಿರಾಜಜೀಯರ್, ಯದುಗಿರಿ–ನಾರಾಯಣ ಜೀಯರ್ ಇವರು ಪ್ರಮುಖರು.

ಹದಿನಾಲ್ಕನೆಯ ಶತಮಾನದಲ್ಲಿ ಮುಸಲ್ಮಾನರು ನಮ್ಮ ನಾಡನ್ನು ದಾಳಿ ಮಾಡಿ ಹೊಯ್ಸಳ ರಾಜಧಾನಿಯಾಗಿದ್ದ ದ್ವಾರಸಮುದ್ರವನ್ನು ನಾಶ ಮಾಡಿದಾಗ ಹೊಯ್ಸಳ ರಾಜನು ತೊಂಡನೂರಿಗೆ ಓಡಿದನು. ಅವನನ್ನು ಹಿಂಬಾಲಿಸಿದ ದಾಳಿಕಾರರು ತೊಂಡನೂರಿಗೂ ನುಗ್ಗಿ ಅದನ್ನು ನಾಶ ಮಾಡಿ ಪಕ್ಕದ ಮೇಲುಕೋಟೆಯ ಬೆಟ್ಟದ ಮೇಲೇರಿ ನಾರಾಯಣನ ಗುಡಿಯನ್ನೂ ಹಾಳು ಮಾಡಿದರು. 1460 ರಲ್ಲಿ ವಿಜಯನಗರದ ಅರಸು ಇಮ್ಮಡಿ ಪ್ರೌಢ ದೇವರಾಯ (ಮಲ್ಲಿಕಾರ್ಜುನ)ನ ಸಾಮಂತನಾಗಿದ್ದ ನಾಗಮಂಗಲಸೀಮೆಯ ಪ್ರಭು ತಿಂಮಂಣ ದಂಡನಾಯಕನೆಂಬುವನು ಹಾಳು ಬಿದ್ದ ಗುಡಿಯನ್ನು ಮತ್ತೆ ಕಟ್ಟಿಸಿದನು. ವಿಜಯನಗರದ ಅರಸರಿಗೆ ಈ ಕ್ಷೇತ್ರದಲ್ಲಿ ನೇರವಾದ ಆಸಕ್ತಿ ಇರಲಿಲ್ಲವಾದರೂ ಸ್ಥಳದ ಅಧಿಕಾರಿಗಳ ಕೈಂಕರ್ಯಕ್ಕೆ ನೆರವಾದರು. ಮುಂದೆ ಆಳಿದ ಮೈಸೂರು ಅರಸರು ಮೇಲುಕೋಟೆಯ ವಿಚಾರದಲ್ಲಿ ವಿಶೇಷವಾದ ಆಸಕ್ತಿಯನ್ನು ತಳೆದರು.

ಮೂರು ಮುಡಿ

1614 ರಲ್ಲಿ ರಾಜ ಒಡೆಯರು (1578-1617) ಶ್ರೀರಂಗಪಟ್ಟಣ

ದಲ್ಲಿ ರಾಜ್ಯಭಾರ ಮಾಡುತ್ತಿದ್ದಾಗ ವೈಷ್ಣವ ದೀಕ್ಷೆಯನ್ನು ತಳೆದು ಮೇಲು-ಕೋಟೆಯ ಮಂದಿರಕ್ಕೆ ಮುತ್ತಿಗೆರೆ ಮೊದಲಾದ ಐವತ್ತು ಗ್ರಾಮಗಳನ್ನು ಉಂಬಳಿ ಕೊಟ್ಟರು. ಶಿಥಿಲವಾಗಿದ್ದ ನರಸಿಂಹ ದೇವಾಲಯವನ್ನು ಮತ್ತೆ ಕಟ್ಟಿಸಿದರು. ಅಷ್ಟಲ್ಲದೆ ದೇವರಿಗೆ ಉತ್ಸವ ಕಾಲದಲ್ಲಿಡಲು ನವರತ್ನ ಖಚಿತವಾದ ಕಿರೀಟವೊಂದನ್ನು ಮಾಡಿಸಿಕೊಟ್ಟರು. ಇದಕ್ಕೆ ರಾಜಮುಡಿಯೆಂದು ಹೆಸರು. ಇದಕ್ಕೆ ಮುಂಚೆ ವಿಶೇಷ ಉತ್ಸವ ಸಂದರ್ಭಗಳಲ್ಲಿ ದೇವರಿಗೆ ಇಡುತ್ತಿದ್ದ ಕಿರೀಟ (ವಯಿರ) ವಜ್ರಮುಡಿಯೆಂಬುದು. ಈ ಕಿರೀಟ ಹೇಗೆ ಇಲ್ಲಿಗೆ ಬಂದಿತೆಂಬುದು ತಿಳಿದುಬಂದಿಲ್ಲ. ಬಹುಶಃ ವಿಷ್ಣುವರ್ಧನನೇ ಮಾಡಿಸಿಕೊಟ್ಟಿರಬಹುದು. ಈ ಕಿರೀಟದ ತಳದಲ್ಲಿ ಹಳಗನ್ನಡ ಲಿಪಿಯಲ್ಲಿ 'ಶ್ರೀ ಬಲ್ಲಾಳರಾಯ' ಸೇವೆ ಎಂಬ ಶಾಸನವಿದೆಯಂತೆ. ಪ್ರಹ್ಲಾದನ ಮಗ ವಿರೋಚನನು ಯೋಗ ನಿದ್ರೆಯಲ್ಲಿದ್ದ ನಾರಾಯಣನ ತಲೆಯಿಂದ ಕಿರೀಟವನ್ನು ಕದ್ದು ಪಾತಾಳ ಲೋಕಕ್ಕೆ ಒಯ್ದನೆಂದೂ, ಗರುಡನು ಇದನ್ನು ತಿಳಿದು ಪಾತಾಳ ಲೋಕಕ್ಕೆ ಹೋಗಿ ವಿರೋಚನನೊಂದಿಗೆ ಕಾದು ಕಿರೀಟವನ್ನು ಪಡೆದು ಹಿಂದಿರುಗುವ ದಾರಿಯಲ್ಲಿ ಕೃಷ್ಣನನ್ನು ಕಂಡಾಗ ಅವನಿಗೆ ಒಪ್ಪಿಸಿದನೆಂದೂ, ಕೃಷ್ಣನು ಅದನ್ನು ಮನೆಗೆ ತಂದು ತಾನು ಪೂಜೆ ಮಾಡುತ್ತಿದ್ದ ಚೆಲುವರಾಯಸ್ವಾಮಿಯ ತಲೆಯ ಮೇಲಿಡಲು ಅದು ಅಳತೆಗೆ ಮಾಡಿದಂತೆ ಇದ್ದಿತೆಂದೂ ಪುರಾಣದ ಕಥೆ. ಈ ಪ್ರಾಚೀನ ಕಿರೀಟ ಅನರ್ಘ್ಯ ರತ್ನಗಳಿಂದ ಕೂಡಿ ಬಹು ಸುಂದರವಾಗಿದೆ. ಇಷ್ಟೇ ಅಪಾರವಾದ ಬೆಲೆಯಲ್ಲಿ ರಾಜಮುಡಿಯನ್ನೂ ಮಾಡಿಸಿದ್ದಾರೆ. ಇದು ಸಾಮಾನ್ಯವಾಗಿ ಮೈಸೂರು ಅರಮನೆಯಲ್ಲಿದ್ದು ವರ್ಷಕ್ಕೊಮ್ಮೆ ಅಷ್ಟತೀರ್ಥೋತ್ಸವದ ಸಮಯದಲ್ಲಿ ಮೇಲುಕೋಟೆಗೆ ಬರುತ್ತದೆ. ಮುಂದೆ ಮುಮ್ಮಡಿ ಕೃಷ್ಣರಾಜ ಒಡೆಯರು ಮತ್ತೊಂದು ನವರತ್ನ ಕಿರೀಟವನ್ನು ಮಾಡಿಸಿಕೊಟ್ಟರು. ಕೃಷ್ಣರಾಜ ಮುಡಿಯೆನಿಸಿಕೊಳ್ಳುವ ಈ ಕಿರೀಟವೂ ತುಂಬ ಬೆಲೆ ಬಾಳುತ್ತದೆ.

ಅಂತೂ ರಾಜ ಒಡೆಯರ ಸೇವೆ ಮೇಲುಕೋಟೆಯಲ್ಲಿ ಬಹುಮುಖವಾಗಿ ಸಂದಿತು. ದೇವಾಲಯದ ವಿಸ್ತಾರ, ಆಭರಣ-ಅಲಂಕರಣಗಳು, ಅಗ್ರಹಾರಗಳ ನಿರ್ಮಾಣ, ನಿತ್ಯ ನೈಮಿತ್ತಿಕ ಕೈಂಕರ್ಯಗಳ ವ್ಯವಸ್ಥೆ ಇವೆಲ್ಲವನ್ನೂ ಇವರು ಮಾಡಿಸಿದರು. ನಾರಾಯಣ ದೇವಾಲಯದಲ್ಲಿ ನವರಂಗದ ಕಂಬವೊಂದರ

ಮೇಲೆ ಒಂದೂವರೆ ಅಡಿ ಎತ್ತರದ ಭಕ್ತ ವಿಗ್ರಹವಿದೆ. ಇದು ರಾಜ ಒಡೆಯರ ಪ್ರತಿಕೃತಿಯೆಂದು ಅಲ್ಲೇ ಉಲ್ಲೇಖವಿದೆ. ರಾಜಒಡೆಯರು ತೀರಿಕೊಳ್ಳುವ ಸಮಯದಲ್ಲಿ ಮೇಲುಕೋಟೆಯಲ್ಲಿದ್ದ ಜನ ಅವರು ದೇವಾಲಯಕ್ಕೆ ಬಂದು ಗರ್ಭಗುಡಿಯೊಳಗೆ ಹೋದುದನ್ನು ಕಂಡರಂತೆ; ಅವರು ಹಿಂದಿರುಗಿ ಬರಲಿಲ್ಲವಂತೆ.

ರಾಜ ಒಡೆಯರು ಮೇಲುಕೋಟೆಯ ವಿಚಾರದಲ್ಲಿ ಆಸಕ್ತಿ ವಹಿಸುವ ಮುಂಚೆ ದೇವಾಲಯದ ನಿರ್ವಹಣೆ ಸಮರ್ಪಕವಾಗಿರಲಿಲ್ಲ. ಕ್ಷೇತ್ರದ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ದ್ವಾರಗಳನ್ನು ಕಟ್ಟಿಸಿದ್ದರೂ ವರ್ಷದಲ್ಲಿ ಮೂರು ತಿಂಗಳ ಕಾಲ ಮೂರು ದ್ವಾರಗಳನ್ನು ಮುಚ್ಚಿಸಿ ಒಂದನ್ನು ಮಾತ್ರ ತೆಗೆಯುತ್ತಿದ್ದರೆಂದೂ, ಯಾತ್ರಾರ್ಥಿಗಳೆಲ್ಲ ಈ ದ್ವಾರದಲ್ಲಿರುತ್ತಿದ್ದ ಸ್ಥಾನಿಕನಿಗೆ ಹಣ ತೆತ್ತು ಒಳಗೆ ಬರಬೇಕಾಗಿದ್ದಿತೆಂದೂ, ಹೀಗೆ ನಾಲ್ಕು ಸ್ಥಾನಿಕರು ತಮ್ಮ ತಮ್ಮಲ್ಲಿ ವ್ಯವಸ್ಥೆ ಮಾಡಿಕೊಂಡು ಭಕ್ತರನ್ನು ಸುಲಿಯುತ್ತಿದ್ದರೆಂದೂ ಹಳೆಯ ಪ್ರತೀತಿಯಿದೆ. ರಾಜಒಡೆಯರು ಇದನ್ನು ತಪ್ಪಿಸಿ ನಾಲ್ಕು ದ್ವಾರಗಳನ್ನು ಎಲ್ಲ ಕಾಲಗಳಲ್ಲಿಯೂ ತೆಗೆದಿರುವಂತೆ ಅಪ್ಪಣೆ ಮಾಡಿ, ದುರಾಶೆಯ ಸ್ಥಾನಿಕರನ್ನು ವೃತ್ತಿಯಿಂದ ತೆಗೆದು ಹಾಕಿದರು. ದೇವಾಲಯದ ಒಳಗೂ ಅರ್ಚನಾ ವಿಧಿಯನ್ನು ಆಗಮದಂತೆ ಮಾಡುತ್ತಿರಲಿಲ್ಲವಂತೆ. ರಾಜಒಡೆಯರು ತಾವೇ ಈ ವಿಚಾರವನ್ನು ವಹಿಸಿಕೊಂಡು ಸೇವೆಗಳ ಕಟ್ಟಳೆ, ಆರಾಧನಾ ವಿಧಿಗಳನ್ನು ನಿಷ್ಕರ್ಷೆ ಮಾಡಿದರಂತೆ. ರಾಜಒಡೆಯರಿಂದಾಗಿ ದೇವಾಲಯದ ಆಡಳಿತ ಸುಭದ್ರವಾಯಿತು; ಆದಾಯ ಹೆಚ್ಚಿತು.

ಕೆಳಮುಖ

ಆದರೆ 1771 ರಲ್ಲಿ ದೇವಾಲಯದ ಭಾಗ್ಯ ಮತ್ತೆ ಬದಲಾಯಿತು. ಚಿನಕುರುಳಿಯಲ್ಲಿ ಮೈಸೂರಿನ ಹೈದರಾಲಿ ಖಾನನನ್ನು ಸೋಲಿಸಿದ ಮರಾಠರು ಮೇಲುಕೋಟೆಯನ್ನೂ ದಾಳಿ ಮಾಡಿದರು. ಮರಾಠರ ಹಾವಳಿಗೆ ಹೆದರಿ ಮೇಲುಕೋಟೆಯ ಮಂದಿಯೆಲ್ಲ ಬೆಟ್ಟವನ್ನು ಬಿಟ್ಟು ಓಡಿಹೋದರು. ಮರಾಠರು ದೇವಾಲಯದ ಸಂಪತ್ತನ್ನೆಲ್ಲ ದೋಚಿಕೊಂಡರು. ಕಬ್ಬಿಣದ ಆಸೆಯಿಂದ

ರಥಗಳಿಗೆ ಬೆಂಕಿ ಹಚ್ಚಿ ಸುಟ್ಟರು; ಬೆಂಕಿ ದೇವಾಲಯಕ್ಕೂ, ಮಠಕ್ಕೂ ಹರಡಿ ಹಾಳು ಮಾಡಿತು. ಇದು ದೇವಾಲಯಕ್ಕೆ ಅಪಾರವಾದ ನಷ್ಟದಲ್ಲಿ ಪರ್ಯವಸಾನ ವಾಯಿತು. ನಮ್ಮವರಾದ ಮರಾಠರು ಮಾಡಿದ ಈ ಅನ್ಯಾಯಕ್ಕೆ ಮರುಗಿದ ವನು ಟೀಪುಸುಲ್ತಾನ್. ಹೀಗೆ ಬರಿದಾದ ದೇವಾಲಯಕ್ಕೆ 1785 ರಲ್ಲಿ ಹೊಸ ದಾಗಿ ಬೆಳ್ಳಿಯ, ಬಂಗಾರದ ಪಾತ್ರೆಗಳನ್ನು ಮಾಡಿಸಿಕೊಟ್ಟು, ನರಸಿಂಹ ದೇವಾ ಲಯದ ಉತ್ಸವ ಸಂದರ್ಭದಲ್ಲಿ ಉಪಯೋಗಿಸಲು ಹದಿನೇಳು ಆನೆಗಳನ್ನು ದಾನ ಮಾಡಿದನು. ನಾರಾಯಣಸ್ವಾಮಿಯ ದೇವಾಲಯದಲ್ಲೂ ಯೋಗಾನರ- ಸಿಂಹನ ದೇವಾಲಯದಲ್ಲೂ ಟೀಪುಸುಲ್ತಾನನು ಕೊಟ್ಟ ಪಾತ್ರೆಗಳು ಇಂದಿಗೂ ಉಪಯೋಗದಲ್ಲಿವೆ. ದೇವಾಲಯಕ್ಕೆ ಇದ್ದ ಇನಾಮು ಗ್ರಾಮಗಳು, ವೃತ್ತಿಗಳು ಭೂಮಿಗಳು ಕಾರಣಾಂತರದಿಂದ ಕೈಬಿಟ್ಟು ಹೋಗಿದ್ದವು. ಟೀಪುಸುಲ್ತಾನನು ಇದೆಲ್ಲವನ್ನೂ ಸರಿಪಡಿಸಿದನು. ದೇವಾಲಯದ ವಾರ್ಷಿಕ ಆದಾಯ ಆ ಕಾಲಕ್ಕೆ 16200 ಕಂಠೀರಾಯ ವರಹಗಳಷ್ಟು ಇದ್ದಿತೆಂದು ಹಳೆಯ ಕಡತವೊಂದರಿಂದ ತಿಳಿದು ಬರುತ್ತದೆ.

ಮುಂದೆ ಯದುಗಿರಿಯ ತಿರುನಾರಾಯಣನ ಸೇವೆ ಮಾಡಿದವರಲ್ಲಿ ಪ್ರಮುಖರೆಂದರೆ ಮುಮ್ಮಡಿ ಕೃಷ್ಣರಾಜ ಒಡೆಯರು. ಅವರಿಂದ ಮೇಲು ಕೋಟೆಯ ದೇವಾಲಯಗಳಿಗೆ ಬೆಲೆ ಬಾಳುವ ಹಲವಾರು ಆಭರಣಗಳೂ ಭಟ್ಟ ಮಾನ್ಯಭೂಮಿಗಳೂ ಅನ್ನಛತ್ರಗಳೂ ಸಂದುವು. 1820ರ ಸುಮಾರಿಗೆ ಇವರು ಒಂದು ತಸದೀಕು ಪಟ್ಟಿಯನ್ನು ಸಿದ್ಧಪಡಿಸಿ ಈ ದೇವಾಲಯಗಳಿಗಾಗಿ 8710 ವರಹಗಳಷ್ಟು ರಾಜಧನವನ್ನು ನಿಗದಿ ಮಾಡಿದರು. ತಿರುನಾರಾಯಣನಿಗೆ ಕೃಷ್ಣ ರಾಜ ಮುಡಿಯನ್ನೂ ಯೋಗಾನರಸಿಂಹನಿಗೆ ಬಂಗಾರದ ಕಿರೀಟವನ್ನೂ ಮಾಡಿಸಿಕೊಟ್ಟರು. 1842 ರಲ್ಲಿ ಒಮ್ಮೆ ಈ ರಾಜರು ಕೃಷ್ಣವಿಲಾಸ ಸನ್ನಿಧಾ ನದ ಲಿಂಗಾಜಮ್ಮಣ್ಣಿಯವರೊಂದಿಗೆ ಮೇಲುಕೋಟೆಗೆ ಬಂದಿದ್ದರಂತೆ. ಆಗ ಲಿಂಗಾಜಮ್ಮಣ್ಣಿ ಗರ್ಭಿಣಿಯಾಗಿದ್ದುದರಿಂದ ಆಕೆಯನ್ನು ಬೆಟ್ಟದ ಕೆಳಗೇ ಬಿಟ್ಟು ರಾಜ ಪರಿವಾರ ಮೇಲೆ ಹೋಯಿತಂತೆ. ನರಸಿಂಹ ಗಿರಿಯನ್ನು ಹತ್ತಿ ಹೋಗು ತ್ತಿದ್ದ ಇವರನ್ನು ನೋಡುತ್ತ ತಿರುಗಾಡುತ್ತಿದ್ದ ಲಿಂಗಾಜಮ್ಮಣ್ಣಿ ಆಯತಪ್ಪಿ ಅರವತ್ತು ಅಡಿ ಆಳದ ಕಮರಿಯೊಂದರಲ್ಲಿ ಜಾರಿದರಂತೆ. ಆದರೂ ಏನೊಂದು

ಗಾಯವೂ ಅವರಿಗೆ ಆಗದೆ ಸುರಕ್ಷಿತರಾಗಿ ಎದ್ದರಂತೆ. ಈ ಅದ್ಭುತವು ನರಸಿಂಹನ ಅನುಗ್ರಹದಿಂದ ಆದುದೆಂದು ಗ್ರಹಿಸಿ ಆಕೆ ನರಸಿಂಹಸ್ವಾಮಿಗೆ ತುಂಬ ಬೆಲೆ ಬಾಳುವ ಬಂಗಾರದ ಕಿರೀಟವನ್ನು ಮಾಡಿಸಿ ಸಲ್ಲಿಸಿದರಂತೆ.

ಹೀಗೆ ರಾಮಾನುಜಾಚಾರ್ಯರ ಪ್ರಭಾವದಿಂದ ಮೂಡಿಬಂದ ಮೇಲುಕೋಟೆಯ ಪ್ರಾಶಸ್ತ್ಯ ರಾಜಮಹಾರಾಜರ ಆಸಕ್ತಿಯಿಂದ, ಔದಾರ್ಯದಿಂದ, ಕೈಂಕರ್ಯದಿಂದ ಹಿಗ್ಗಿತು.

ಉಡುಪಿಯಲ್ಲಿ ಪರ್ಯಾಯ

ತುಳುನಾಡಿನ ಪುಣ್ಯಕ್ಷೇತ್ರಗಳಲ್ಲಿ ಉಡುಪಿ ಪ್ರಸಿದ್ಧವಾದುದು. ಮೊದಲಿಗೆ ಇದು ಶಿವಬೆಳ್ಳಿ (ಶಿವಳ್ಳಿ)ಯೆನಿಸಿಕೊಂಡ ಗ್ರಾಮವಾಗಿದ್ದಿತು. ತುಳುವಿನ ಶಿವಬೆಳ್ಳಿಯನ್ನು ಸಂಸ್ಕೃತ ಮಾಡಿ ಶಿವರೂಪ್ಯವೆಂದು ಕರೆಯುತ್ತಾರೆ. ವಾದಿರಾಜ ಸ್ವಾಮಿಗಳು ಮಹೇಶರಜತ ಗ್ರಾಮವೆಂದು ವ್ಯವಹರಿಸಿದ್ದಾರೆ. ರಜತಪೀಠವೆಂದೂ ಕರೆಯುವ ವಾಡಿಕೆಯಿದೆ. ಪರಶುರಾಮನು ಸಮುದ್ರದಿಂದ ತಾನುಸೆಳೆದುಕೊಂಡಷ್ಟು ಭೂಭಾಗವನ್ನು ರಾಮಭೋಜನೆಂಬ ರಾಜನ ವಶಕ್ಕೆ ವಹಿಸಿದನಂತೆ. ಈ ರಾಜನು ಒಮ್ಮೆ ಅಶ್ವಮೇಧಯಾಗವನ್ನು ಮಾಡಲು ನಿಶ್ಚಯಿಸಿ ಪರಶುರಾಮನನ್ನೇ ಅಧ್ವರ್ಯುವಾಗಿ ಆಹ್ವಾನಿಸಿದನಂತೆ; ಋಷಿಯು ಕೂಡಲು ವಿಶಾಲವಾದ ಬೆಳ್ಳಿಯ ಮಣೆಯನ್ನು (ರಜತಪೀಠ) ಮಾಡಿಸಿದ್ದನಂತೆ. ಯಾಗವು ಮುಗಿದನಂತರ ಪೀಠವು ಪಾತಾಳಕ್ಕೆ ಇಳಿದು ಮರೆಯಾಯಿತಂತೆ. ಆದ ಆ ಸ್ಥಳದಲ್ಲಿ ಲಿಂಗಾಕಾರದ ಶಿಲೆಯೊಂದು ಆವಿರ್ಭೂತವಾಯಿತೆಂದೂ ಅದರಲ್ಲಿ ಅದ್ಯಾಪಿ ಪರಶುರಾಮನ ಸಾನ್ನಿಧ್ಯವಿದೆ ಎಂದೂ ಪ್ರತೀತಿ. ಇದೇ ಇಂದಿನ ಅನಂತಾಸನ (ರಜತಪೀಠದ ನಡುವೆ ಇದ್ದ ಸರ್ಪಾಸನ) ಅಥವಾ ಅನಂತೇಶ್ವರ ಎಂಬ ದೇವರು, ಉಡುಪಿಯ ಪ್ರಾಚೀನ ದೈವ.

ಆದಿ ಉಡುಪಿ

ಹಳೆಯ ಶಾಸನಗಳಲ್ಲಿ ಉಡುಪು ಎಂಬ ಪ್ರಯೋಗವಿದೆ. ''ಶಿವಳಿಯ ಮೂಡಲ ನಿಡಂಬೂರು ಗ್ರಾಮದ ಮಧ್ಯದ ಉಡುಪಿನ ಸ್ಥಾನದ ಶ್ರೀಕೃಷ್ಣ ದೇವರಿಗೆ..." ಎಂಬ ಒಕ್ಕಣೆ ಹಲವಾರು ಶಾಸನಗಳಲ್ಲಿ ಕಾಣಬರುತ್ತದೆ. ಮಧ್ವವಿಜಯ ಕಾವ್ಯವನ್ನು ಬರೆದ ನಾರಾಯಣ ಪಂಡಿತಾಚಾರ್ಯರು ''ರಜತ

ಪೀಠಪುರಂ ಒಡಿಪು 'ಇತ್ಯಪ ಭ್ರಷ್ಟ ಭಾಷಾಯಾಂ" ಎಂದು ತಮ್ಮ ಭಾವ ಪ್ರಕಾಶಿಕೆಯಲ್ಲಿ ಕಾಣಿಸಿದ್ದಾರೆ. ತುಳುವಿನಲ್ಲಿ ಈ ಊರಿಗೆ ಒಡ್ಪು ಎಂಬ ಹೆಸರಿದ್ದಂತೆ ಸ್ಪಷ್ಟವಾಗುತ್ತದೆ. 'ಒಡ್ಪು' ಎಂಬ ಪದವು 'ಒಡೆ' ಧಾತುವಿನ ಭಾವನಾಮ; ಒಡ್ಪು ಎಂದರೆ ಒಡೆಯುವುದು ಎಂದರ್ಥ.

ಮಧ್ವಾಚಾರ್ಯರು ಸಮುದ್ರ ತೀರದಿಂದ ಗೋಪೀಚಂದನದ ಗೆಡ್ಡೆಗಳನ್ನು ಹೊತ್ತು ತರುತ್ತಿದ್ದಾಗ ಅದು ಒಡೆದು ಅದರೊಳಗಿಂದ ಕೃಷ್ಣವಿಗ್ರಹವು ಹೊರಗೆ ಬಂದಿತೆಂದು ಕಥೆಯಿದೆಯಷ್ಟೆ. ಮಲ್ಪಿಯ ಬಳಿಯಿಂದ ಊರಿಗೆ ಅವರು ತರುತ್ತಿದ್ದಾಗ ಕೃಷ್ಣನ ಮೂರ್ತಿಯಿದ್ದ ಗೆಡ್ಡೆಯು ದಾರಿಯಲ್ಲಿ ಕೇಕುಣ್ಣಾಯದ ದೇಗುಲದ ಬಳಿಯೇ ಒಡೆಯಿತಂತೆ; ಆದುದರಿಂದಲೇ ಈ ಮಾರ್ಗ ಮಧ್ಯದ ದೇವಾಲಯವನ್ನು 'ಆದಿ ಉಡುಪಿ' ಎಂದು ಇಂದಿಗೂ ವ್ಯವಹರಿಸುತ್ತಾರೆ. ಅಲ್ಲಿ ಒಡೆದು ಕಾಣಿಸಿಕೊಂಡ ಕೃಷ್ಣನನ್ನು ತಂದು ಈಗ ಉಡುಪಿ ಎನಿಸಿಕೊಳ್ಳುವಲ್ಲಿ ಆಚಾರ್ಯರು ಪ್ರತಿಷ್ಠೆ ಮಾಡಿದರೆಂದು ಪ್ರತೀತಿ.

ಮಧ್ವಾಚಾರ್ಯರು ಕೃಷ್ಣವಿಗ್ರಹವನ್ನು ಪ್ರತಿಷ್ಠೆ ಮಾಡಿದ ನಂತರವೇ, ಎಂದರೆ 1270ರ ಸುಮಾರಿಗೆ, ಈ ಊರಿಗೆ ಉಡುಪು ಅಥವಾ ಉಡುಪಿ ಎಂಬ ಹೆಸರು ಪ್ರಚಲಿತವಾಯಿತೆನ್ನಬಹುದು. ಆ ಮುಂಚೆ ಅನಂತೇಶ್ವರನ ಗುಡಿಯೇ ಶಿವಬೆಳ್ಳಿ ಗ್ರಾಮದ ಜೀವನಾಡಿಯಾಗಿದ್ದಿತು. ಮಧ್ವಾಚಾರ್ಯರು ಕೃಷ್ಣಮಂದಿರವನ್ನು ನಿರ್ಮಿಸಿದನಂತರವೂ ಅವರು ತಮ್ಮ ಪಾಠ ಪ್ರವಚನಗಳನ್ನೆಲ್ಲ ಅನಂತೇಶ್ವರನ ಗುಡಿಯಲ್ಲಿಯೇ ನಡೆಸುತ್ತಿದ್ದರೆಂಬ ವಿವರವಿದೆ. ಕಡೆಗೆ ಅವರು ಮರೆಯಾದುದೂ ಈ ಗುಡಿಯ ಒಳಕಟ್ಟೆಯ ಮೇಲೆಯೇ. ಮಧ್ವನವಮಿಯಂದು ಈ ಕಟ್ಟೆಗೇ ಪೂಜೆ ನಡೆಯುತ್ತದೆ. ಇಂದಿಗೂ ಪರ್ಯಾಯದ ಸ್ವಾಮಿಗಳು ಮೊದಲು ಅನಂತೇಶ್ವರನ ದರ್ಶನಮಾಡಿ ಅನಂತರ ಕೃಷ್ಣನ ಗುಡಿಗೆ ಬರಬೇಕೆಂಬ ನಿಯಮವಿದೆ. ಈಗ ಕೃಷ್ಣಮಠಕ್ಕೆ ಸೇರಿರುವ ಮಧ್ವ ಸರೋವರವೂ ಮೊದಲು ಅನಂತ ಸರಸ್ಸೆಂದೇ ಪ್ರಸಿದ್ಧವಾಗಿದ್ದಿತು.

ಇದು ಹೇಗಾದರೂ ಇರಲಿ. ಉಡುಪಿಯ ಸುತ್ತ ನಾಲ್ಕು ದುರ್ಗಾ ಮಂದಿರಗಳೂ ನಾಲ್ಕು ನಾಗಾಯತನಗಳೂ ಇವೆ. ಇವನ್ನು ರಜತಪೀಠದ

ಅಷ್ಟಬಂಧಗಳೆನ್ನುತ್ತಾರೆ. ಪುತ್ತೂರು. ಕುಂಜಾರು. ಕಣ್ಣರಪಾಡಿ ಮತ್ತು ಇಂದ್ರಾಣಿ ಈ ಸ್ಥಳಗಳಲ್ಲಿರುವ ದುರ್ಗಾಲಯಗಳನ್ನು ಪರಶುರಾಮನೇ ನಿರ್ಮಿಸಿದನೆಂದು ಪ್ರತೀತಿ. ಅರಿಕೊಡು, ಮಾಂಗೋಡು, ತಾಂಗೋಡು, ಮುಚ್ಚಲಗೋಡು ಈ ಸ್ಥಳಗಳಲ್ಲಿ ನಾಗಾಲಯಗಳಿವೆ. ಈ ದುರ್ಗಾಲಯ, ನಾಗಾಲಯಗಳ ನಡುವೆ ಇದ್ದ ಶಿವಬೆಳ್ಳಿ ಗ್ರಾಮವು ಮೂಡೆಲ (ಮೂದಿಲ್ಲವರು) ನಿಡಂಬೂರು ಗ್ರಾಮದ ಬಲ್ಲಾಳರ ಆಡಳಿತದಲ್ಲಿದ್ದಿತು. ನಿಡಂಬೂರು (ಅಂಬಲಪಾಡಿ) ಬಲ್ಲಾಳರ ನೆರವಿನಿಂದಲೇ ಮಧ್ವಾಚಾರ್ಯರು ಕೃಷ್ಣನ ಗುಡಿಯನ್ನು ಕಟ್ಟಿಸಿದರು. ವಾದಿರಾಜ ಸ್ವಾಮಿಗಳ ಕಾಲದಲ್ಲಿಯೂ ಈ ಬಲ್ಲಾಳರೇ ಪ್ರಮುಖರಾಗಿದ್ದರು.

ಅಷ್ಟಮಠದ ಯತಿಗಳು

ಆಚಾರ್ಯರು ಕೃಷ್ಣನ ಅರ್ಚನೆಯನ್ನು ಬಹುಕಾಲ ತಾವೇ ನಿರ್ವಹಿಸುತ್ತಿದ್ದರು. ಮುಂದಿನ ವ್ಯವಸ್ಥೆಗೆಂದು ಎಂಟು ಮಂದಿ ಬಾಲ ಸಂನ್ಯಾಸಿಗಳಿಗೆ ದೀಕ್ಷೆ ಕೊಟ್ಟು ಅವರು ಎರಡೆರಡು ತಿಂಗಳು ಒಬ್ಬೊಬ್ಬರಂತೆ ಸರದಿಯಿಂದ ಕೃಷ್ಣನ ಗುಡಿಯಲ್ಲೇ ಇದ್ದುಕೊಂಡು ಪೂಜಾವಸರಗಳನ್ನು ನೋಡಿಕೊಳ್ಳುವಂತೆ ವಿಧಿಸಿದರು; ಉಳಿದ ಯತಿಗಳು ಪೂಜೆಗೆ ನಿಂತವರಿಗೆ ನೆರವಾಗುತ್ತಿದ್ದರು. ಕಣ್ವತೀರ್ಥದ ಬಳಿಯಿರುವ ಅಶ್ವತ್ಥಕಟ್ಟೆಯು ನಾಲ್ಕೂ ಕಡೆ ನಾಲ್ಕು ದ್ವಾರಗಳನ್ನು ಕಟ್ಟಿಸಿದ್ದರಂತೆ; ಮಧ್ವಾಚಾರ್ಯರು ಒಮ್ಮೆ ಅಲ್ಲಿ ತಂಗಿದ್ದಾಗ ಮರದ ಕೆಳಗೆ ಎಂಟು ಮಂದಿ ಬಾಲಕರಿಗೆ ಯತ್ಯಾಶ್ರಮ ದೀಕ್ಷೆ ಕೊಟ್ಟು ಇಬ್ಬಿಬ್ಬರು ಒಂದೊಂದು ಬಾಗಿಲಿನಿಂದ ಹೊರಗೆ ಬರುವಂತೆ ಮಾಡಿದರಂತೆ. ಹೀಗೆ ದ್ವಂದ್ವ ಯತಿಗಳಾದವರು ಪರಸ್ಪರ ಸಹಕಾರಿಗಳಾಗಿರಬೇಕೆಂದು ನಿಯಮ. ವಿಷ್ಣುತೀರ್ಥರು (ಸೋದೆಮಠ) ಮತ್ತು ವಾಮನತೀರ್ಥರು (ಶೀರೂರು ಮಠ; ರಾಮತೀರ್ಥರು (ಕಾಣೂರು ಮಠ) ಮತ್ತು ಅಧೋಕ್ಷಜ ತೀರ್ಥರು (ಪೇಜಾವರ ಮಠ); ಹೃಷೀಕೇಶ ತೀರ್ಥರು (ಫಲಿಮಾರು ಮಠ) ಮತ್ತು ನರಸಿಂಹ ತೀರ್ಥರು (ಅದಮಾರು ಮಠ); ಜನಾರ್ದನ ತೀರ್ಥರು (ಕೃಷ್ಣಾಪುರ ಮಠ) ಮತ್ತು ಉಪೇಂದ್ರ ತೀರ್ಥರು (ಪುತ್ತಿಗೆ ಮಠ) ಇವರೇ ಅಷ್ಟಮಠದ ದ್ವಂದ್ವ ಯತಿಗಳಾದವರು.

ಪರ್ಯಾಯ

ಎರಡು ತಿಂಗಳು ಮಾತ್ರ ಕೃಷ್ಣನ ಪೂಜೆಯಲ್ಲಿದ್ದುಕೊಂಡು ಹದಿನಾಲ್ಕು ತಿಂಗಳ ನಂತರ ತಮ್ಮ ಸರದಿ ಮತ್ತೆ ಬರುವವರೆಗೆ ಪ್ರತಿಯೊಬ್ಬ ಯತಿಯೂ ಸಂಚಾರ ಕ್ರಮದಲ್ಲಿದ್ದು ಪೂಜೆಗೆ ಕುಳಿತ ಯತಿಗೆ ಧನಧಾನ್ಯಾದಿಗಳನ್ನು ತಂದು ಕೊಡುವ ಈ ವ್ಯವಸ್ಥೆಗೆ ಪರ್ಯಾಯವೆಂದು ಹೆಸರಾಯಿತು. ಮಧ್ವಾಚಾರ್ಯರ ನಂತರ ತುಂಬ ಪ್ರಸಿದ್ಧರಾದ ಸೋದೆ ಮಠದ ವಾದಿರಾಜ ಸ್ವಾಮಿಗಳು (1480-1600) ಈ ಎರಡು ತಿಂಗಳ ಪರ್ಯಾಯವನ್ನು ಎರಡು ವರ್ಷಗಳ ಪರ್ಯಾಯವನ್ನಾಗಿ ಮಾರ್ಪಡಿಸಿದರು. ಅಂದಿನಿಂದ ಇಂದಿನವರೆಗೆ ಅಷ್ಟಮಠದ ಯತಿಗಳು ಒಬ್ಬೊಬ್ಬರೂ ಎರಡೆರಡು ವರ್ಷಗಳ ಕಾಲ ಉಡುಪಿಯಲ್ಲಿಯೇ, ಕೃಷ್ಣಮಠದಲ್ಲಿಯೇ. ಇದ್ದು ನಿತ್ಯ ನೈಮಿತ್ತಿಕ ಪೂಜೆಗಳನ್ನು ನಿರ್ವಹಿಸುತ್ತಾರೆ.

ಒಬ್ಬ ಯತಿಯು ಎರಡು ವರ್ಷಗಳ ತಮ್ಮ ಅವಧಿಯನ್ನು ಪೂರೈಸಿ ಇನ್ನೊಬ್ಬ ಯತಿಗೆ ಪೂಜೆಯ ಅಧಿಕಾರವನ್ನು ಬಿಟ್ಟುಕೊಡುವುದು ಮಕರ ಮಾಸದ ನಾಲ್ಕನೆಯ ದಿನ (ಜನವರಿ 14ನೆಯ ದಿನ) ನಡೆಯುತ್ತದೆ. ಇದೇ ಪರ್ಯಾಯೋತ್ಸವವೆಂದು ಪ್ರಸಿದ್ಧವಾಗಿದೆ. ಈ ವರ್ಷ (1966) ನಡೆಯುವ ಉತ್ಸವದಲ್ಲಿ ಸೋದೆ ಮಠದ ಸ್ವಾಮಿಗಳು ಕಾಣೂರು ಮಠದ ಸ್ವಾಮಿಗಳಿಗೆ ಅಧಿಕಾರವನ್ನು ವಹಿಸಿಕೊಡುತ್ತಾರೆ, ಮೊದಲನೆಯವರು ಪರ್ಯಾಯದಿಂದ ಏಳುವವರು; ಎರಡನೆಯವರು ಪರ್ಯಾಯಕ್ಕೆ ಕೂಡುವವರು.

ವೈಭವದ ಉತ್ಸವ

ಉಡುಪಿ ಕೃಷ್ಣಮಠದ ಪರ್ಯಾಯವು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಂಭ್ರಮದ ಜಾತ್ರೆ, ಮಧ್ವರಿಗೆ ದೊಡ್ಡ ಉತ್ಸವ. ಎರಡು ವರ್ಷಗಳ ತಮ್ಮ ಆಡಳಿತವನ್ನು ತೀರಿಸಿ ಕೃತಾರ್ಥರಾಗಿ ಏಳುವ ಸ್ವಾಮಿಗಳೂ ಹದಿನಾಲ್ಕು ವರ್ಷಗಳ ನಂತರ ತಮ್ಮ ಮಠಕ್ಕೆ ಪೂಜಾಪ್ರಾಪ್ತಿ ಒದಗಿತೆಂಬ ಉತ್ಸಾಹದಿಂದ ಕೂಡುವ ಸ್ವಾಮಿಗಳೂ ಉತ್ಸವವನ್ನು ಸಾಧ್ಯವಾದಷ್ಟು ವೈಭವದಿಂದ ನಡೆಸು

ತ್ತಾರೆ. ಈ ಪರ್ಯಾಯ ಸಮಾರಂಭದಲ್ಲಿ ಹಲವಾರು ವಿಶಿಷ್ಟ ಅಂಗಗಳಿವೆ. ಕೊಡುವ ಸ್ವಾಮಿಗಳು ಪರ್ಯಾಯಕ್ಕೆಂದು ನಿರ್ದಿಷ್ಟವಾದ ದಿನಕ್ಕೆ ನಾಲ್ಕಾರು ತಿಂಗಳ ಮೊದಲೇ ತಮ್ಮ ಪರ್ಯಾಯ ನಿರ್ವಹಣೆಗೆ ಅಗತ್ಯವಾದ ಸಿದ್ಧತೆಗಳನ್ನು ಮಾಡಿಕೊಳ್ಳಲು ಮೊದಲುಮಾಡುತ್ತಾರೆ. ಕೃಷ್ಣಮಠಗಳಲ್ಲಿ ಅನ್ನದಾನ ಅನವರತವಾಗಿ, ವಿಪುಲವಾಗಿ ನಡೆಯಬೇಕೆಂಬ ಕಟ್ಟಳೆ ಇರುವುದರಿಂದ ಎರಡು ವರ್ಷಗಳಷ್ಟು ಕಾಲಕ್ಕೆ ಬೇಕಾದ ದವಸಧಾನ್ಯಗಳನ್ನೂ, ಕಟ್ಟಿಗೆಯನ್ನೂ ಸಂಗ್ರಹಮಾಡಿಕೊಳ್ಳುವುದು ಕೊಡುವವರ ಪಾಲಿಗೆ ಬಂದ ಭಾರ.

ಪರ್ಯಾಯಕ್ಕೆ ಹದಿಮೂರು ತಿಂಗಳ ಮುಂಚೆ ನಡೆಯುವ ಬಾಳೆ ಮುಹೂರ್ತದಲ್ಲಿ ಬಾಳೆ, ಕಬ್ಬು, ತುಳಸಿ, ಹೂವು ಮುಂತಾದ ಪೂಜಾ ಸಾಮಾಗ್ರಿಗಳ ಸಂಗ್ರಹ ಆರಂಭವಾಗುತ್ತದೆ. ಅದಾದ ಎರಡು ತಿಂಗಳಿಗೆ ಅಕ್ಕಿ ಮುಹೂರ್ತ ನಡೆದು, ಸಾವಿರಾರು ಮುಡಿ ಅಕ್ಕಿ ಸಂಗ್ರಹವು ಶುರುವಾಗುತ್ತದೆ. ಹೀಗೆಯೇ ತಮ್ಮ ಪರ್ಯಾಯ ಕಾಲದಲ್ಲಿ ಅಡಿಗೆಗೆ ಅಗತ್ಯವಾದಷ್ಟು ಕಟ್ಟಿಗೆ ತುಂಡುಗಳನ್ನು ಜಾಣ್ಮೆಯಿಂದ ಪ್ರಯಾಸದಿಂದ ರಥದ ಆಕಾರದಲ್ಲಿ ಜೋಡಿಸಿ ಪರ್ಯಾಯಕ್ಕೆ ಒಂದು ತಿಂಗಳ ಮುಂಚೆ ಅದರ ಮೇಲೆ ಶಿಖರವನ್ನು ವಿಧಿವತ್ತಾಗಿ ಮೂಡಿಸುತ್ತಾರೆ. ಇದು ಕಟ್ಟಿಗೆ ತೇರೆಂದು ಪ್ರಸಿದ್ಧವಾಗಿದೆ.

ಪರ್ಯಾಯ ಮುಹೂರ್ತಕ್ಕೆ ಪೂರ್ವಭಾವಿಗಾಗಿ ಒಂಬತ್ತು ದಿನಗಳ ಮುಂಚೆ, ಎಂದರೆ ಮಕರ ಸಂಕ್ರಾಂತಿಗೆ ಐದು ದಿನಗಳ ಮೊದಲು, ಕೃಷ್ಣದೇವರಿಗೆ ಸಪ್ತೋತ್ಸವ ನಡೆಯುತ್ತದೆ. ಈ ಸಂದರ್ಭದಲ್ಲಿ ದೇವರಿಗೆ ರಥೋತ್ಸವ ಚೂರ್ಣೋತ್ಸವ, ಅವಭೃತೋತ್ಸವಗಳು ವೈಭವದಿಂದ ಜರುಗುತ್ತವೆ. ಪರ್ಯಾಯಕ್ಕೆ ಕೊಡುವ ಸ್ವಾಮಿಗಳು ಇಷ್ಟು ವರ್ಷ ಸಂಚಾರದಲ್ಲಿದ್ದುಕೊಂಡು ಈ ಸಪ್ತೋತ್ಸವದ ಸುಮಾರಿಗೆ ಉಡುಪಿಗೆಹಿಂದಿರುಗಬೇಕೆಂಬ ಸಂಪ್ರದಾಯವಿದ್ದಿತು. ಸಂಚಾರದಲ್ಲಿಲ್ಲದ ಸ್ವಾಮಿಗಳು ಎರಡು ತಿಂಗಳ ಮುಂಚೆ ಉಡುಪಿಯನ್ನು ಬಿಟ್ಟು ಕ್ಷೇತ್ರಾಟನೆ ಮಾಡುತ್ತಿದ್ದು, ಸಪ್ತೋತ್ಸವಕ್ಕೆ ಸರಿಯಾಗಿ ಉಡುಪಿಗೆ ಹಿಂದಿರುಗುವ ಪದ್ಧತಿಯಿದೆ.

ಸರ್ವಜ್ಞ ಸಿಂಹಾಸನ

ಪರ್ಯಾಯದ ಹಿಂದಿನ ದಿನ ಈ ಸ್ವಾಮಿಗಳು ಉಡುಪಿಗೆ ಎಂಟೊಂಬತ್ತು

ಮೈಲಿ ದೂರದಲ್ಲಿರುವ ದಂಡತೀರ್ಥವೆಂಬಲ್ಲಿಗೆ ಸಾಗಿ, ರಾತ್ರಿ ಅಲ್ಲಿ ತಂಗಿದ್ದು ಮರುದಿನ ಉಷಃಕಾಲದಲ್ಲಿ ತಮ್ಮ ಮಠದ ದೇವರನ್ನು (ಪಟ್ಟದ ದೇವರನ್ನು) ಮುಂದೆ ಮಾಡಿಕೊಂಡು ಉಡುಪಿಗೆ ಒಂದು ಮೈಲಿ ದೂರದ ಜೋಡು ಕಟ್ಟೆ ಎಂಬಲ್ಲಿಗೆ ಬಂದು ಸೇರುತ್ತಾರೆ. ಆ ವೇಳೆಗೆ ಪರ್ಯಾಯದಿಂದ ಏಳು ವವರನ್ನು ಬಿಟ್ಟು ಉಳಿದ ಆರು ಮಠಗಳ ಸ್ವಾಮಿಗಳೂ ಅಲ್ಲಿಗೆ ಬಂದು ನೆರೆ ದಿರುತ್ತಾರೆ. ಇವರೆಲ್ಲರೂ ಪರ್ಯಾಯಕ್ಕೆ ಕೂಡುವ ಸ್ವಾಮಿಗಳನ್ನು ಸಂಪ್ರ ದಾಯದಂತೆ ಬರಮಾಡಿಕೊಂಡು ಉತ್ಸವದಿಂದ ಅವರನ್ನು ಊರೊಳಗೆ ಕರೆ ತರುತ್ತಾರೆ. ಈ ಮೆರವಣಿಗೆಯು ಪರ್ಯಾಯ ಸಮಾರಂಭದಲ್ಲೆಲ್ಲ ಅತಿ ಮನೋಹರವಾದ ಪ್ರಸಂಗ.

ಎಲ್ಲ ಸ್ವಾಮಿಗಳೂ ರಥಬೀದಿಗೆ ಬಂದನಂತರ ಕನಕನ ಕಿಂಡಿಯಿಂದ ಕೃಷ್ಣನನ್ನು ಕಂಡು ಅನಂತರ ಅನಂತೇಶ್ವರ, ಚಂದ್ರೇಶ್ವರ ದೇವಾಲಯಗಳ ಒಳ ಹೊಕ್ಕು ಕೃಷ್ಣ ಮಠದ ದಕ್ಷಿಣ ಮಹಾದ್ವಾರವನ್ನು ಮುಟ್ಟುತ್ತಾರೆ. ಅಲ್ಲಿ ಪರ್ಯಾಯದಿಂದ ಏಳುವ ಸ್ವಾಮಿಗಳು ಇವರನ್ನು ಸ್ವಾಗತಿಸಿ ಒಳಗೊಯ್ಯು ತ್ತಾರೆ. ಮಧ್ವಸರೋವರದಲ್ಲಿ ಕೈಕಾಲು ತೊಳೆದುಕೊಂಡು, ಕೃಷ್ಣಮಂದಿರದ ಮುಖಮಂಟಪದಲ್ಲಿ ಪರ್ಯಾಯಕ್ಕೆ ಕೂಡುವ ಸ್ವಾಮಿಗಳು ತಮ್ಮ ನಿತ್ಯಾರ್ಚನೆ ಯಲ್ಲಿರುವ ಪಟ್ಟದ ದೇವರನ್ನು ಬಿಜಯ ಮಾಡಿಸಿ, ಪೂಜೆ ನಡೆದನಂತರ ವಿಧಿ ವತ್ತಾಗಿ ಸರ್ವಜ್ಞ ಸಿಂಹಾಸನವೆನಿಸಿಕೊಳ್ಳುವ ಗದ್ದುಗೆಯನ್ನು ಏರಿ ಕುಳಿತು ಕೊಳ್ಳುತ್ತಾರೆ. ಕೃಷ್ಣನ ಗುಡಿಗೆ ಬಡಗು ದಿಕ್ಕಿನಲ್ಲಿ ಮಠದ ಆವರಣದಲ್ಲಿಯೇ ಇರುವ ಸಭಾಮಂಟಪದಲ್ಲಿ ಈ ಪರ್ಯಾಯ ಗದ್ದುಗೆ ಇದೆ. ಮಧ್ವಾಚಾರ್ಯರು ಒಂದಂಶದಿಂದ ಈ ಸ್ಥಳದಲ್ಲಿ ಸನ್ನಿಹಿತರಾಗಿದ್ದಾರೆಂಬ ಶ್ರದ್ಧೆಯಿದೆ, ಈ ಕಾರಣದಿಂದಲೇ ಪರ್ಯಾಯ ಪೀಠಾರೂಢರಾದ ಸ್ವಾಮಿಗಳು ಮಧ್ವಾಚಾರ್ಯ ರನ್ನು ಪ್ರತಿನಿಧಿಸುತ್ತಾರೆನ್ನುವುದು. ಗದ್ದುಗೆಯ ಮೇಲೆ ಅರಳು ರಾಶಿಯನ್ನು ಹರಡಿ ಅದರ ಮೇಲೆ ಶಾಲನ್ನು ಹಾಸಿ ಸ್ವಾಮಿಗಳು ಕೂಡುತ್ತಾರೆ.

ಅಕ್ಷಯ ಪಾತ್ರೆ

ಈ ಗದ್ದುಗೆಯನ್ನೇರುವ ಮೊದಲು ಪರ್ಯಾಯ ಸ್ವಾಮಿಗಳು ಕೃಷ್ಣನ ಗುಡಿಯಲ್ಲಿ ಗರ್ಭಾಂಕಣದ ಬಡಗು ಬಾಗಿಲ ಬಳಿಯಿರುವ ಮಧ್ವಾಚಾರ್ಯರ

ಶಿಲಾ ಮೂರ್ತಿಯ ಮುಂದೆ ನಿಂತು, ಏಳುವ ಸ್ವಾಮಿಗಳಿಂದ ಮಠದ ಬೀಗದ ಕೈಯನ್ನೂ, ಅಕ್ಷಯ ಪಾತ್ರೆಯನ್ನೂ ಸ್ವೀಕರಿಸಿಕೊಳ್ಳುವುದೇ ಪರ್ಯಾಯ ವಿಧಿಯ ಮುಖ್ಯವಾದ ಅಂಗ. ಅಲ್ಲಿಗೆ ಹಿಂದಿನವರ ಆಡಳಿತ ಮುಗಿದು ಮುಂದಿನವರ ಅವಧಿ ಆರಂಭ ಆಯಿತೆಂದು ಕಲ್ಪನೆ. ಮುಂದೆ ಅರಳು ಗದ್ದುಗೆಯನ್ನೇರಿ ದರ್ಬಾರನ್ನು ನಡೆಸುವವರು ಪರ್ಯಾಯಕ್ಕೆ ಕೂಡುವ ಸ್ವಾಮಿಗಳೇ. ಈ ಸಭೆಯಲ್ಲಿ ಮುಂದಿನೆರಡು ವರ್ಷಗಳ ಆಡಳಿತವನ್ನು ನಡೆಸಲು ನಿಯಮಿತರಾದ ಅಧಿಕಾರಿಗಳ ಹೆಸರನ್ನು ಪ್ರಕಟಿಸುತ್ತಾರೆ.

ಈ ಸಭೆಯು ಮುಗಿದನಂತರ ಪರ್ಯಾಯ ಸ್ವಾಮಿಗಳನ್ನು ಬಿಟ್ಟು ಉಳಿದ ಆರು ಮಠಗಳ ಸ್ವಾಮಿಗಳೂ ಪರ್ಯಾಯದಿಂದ ಎದ್ದ ಸ್ವಾಮಿಗಳನ್ನು ಉತ್ಸವದಲ್ಲಿ ಕೃಷ್ಣಮಠದಿಂದ ಒಯ್ದು ಅವರ ಸ್ವಂತ ಮಠದವರೆಗೂ ಬಿಟ್ಟು ಬರುವುದು ವಾಡಿಕೆ. ಅಲ್ಲಿ ಈ ಎಲ್ಲ ಸ್ವಾಮಿಗಳಿಗೂ ಉಪಚಾರ ನಡೆಯುತ್ತದೆ. ಪರ್ಯಾಯ ಪದ್ಧತಿಯಲ್ಲಿ ಕೃಷ್ಣಮಠದ ನಿರ್ವಹಣೆಯ ಭಾರವನ್ನು ವಹಿಸಿಕೊಂಡ ಸ್ವಾಮಿಗಳಿಗೆ ನೆರವಾಗಲು ದ್ವಂದ್ವಮಠದ ಸ್ವಾಮಿಗಳೂ ಇರುತ್ತಾರೆ. ಈ ದ್ವಂದ್ವಮಠಗಳ ಪ್ರಸ್ತಾಪ ಆಗಲೇ ಬಂದಿದೆ. ಕಾಣಿಯೂರುಮಠ (ಈಗ ಪರ್ಯಾಯಕ್ಕೆ ಬರುವ ಮಠ), ಪೇಜಾವರಮಠ, ಫಲಿಮಾರುಮಠ, ಅದಮಾರುಮಠ, ಕೃಷ್ಣಾಪುರಮಠ, ಪುತ್ತಿಗೆಮಠ, ಶೀರೂರುಮಠ, ಸೋದೆಮಠ (ಇಲ್ಲಿಯವರೆಗೆ ಪರ್ಯಾಯ ನಡೆಸಿದ ಮಠ) ಇದು ಪರ್ಯಾಯ ಕ್ರಮ.

ಪ್ರಮುಖವಾದ ಅಂಶವೆಂದರೆ ಈ ಎಂಟೂ ಸ್ವಾಮಿಗಳ ನಡುವೆ ಕಾಣುವ ಸಹಕಾರ, ಸೌಹಾರ್ದ, ಸೌಭ್ರಾತೃತ್ವ. ಕೃಷ್ಣನ ಗುಡಿಯನ್ನು ಎಂಟೂ ಮಠಗಳ ಸಂಯುಕ್ತ ನಿರ್ವಹಣೆಗೆ ವಶಪಡಿಸಿದ ಮಧ್ವಾಚಾರ್ಯರು ದೂರದರ್ಶಿಗಳು. ಕೃಷ್ಣನ ಗುಡಿಯಲ್ಲಿ ಆಗಮೋಕ್ತ ವ್ಯವಸ್ಥೆಯಿಲ್ಲ. ಅಲ್ಲಿನ ಪೂಜೆ ಮಧ್ವಾಚಾರ್ಯರೇ ಸಿದ್ಧಪಡಿಸಿದ ತಂತ್ರಸಾರದಂತೆ ನಡೆಯುತ್ತದೆ. ಈ ಎಂಟು ಮಠದ ಸ್ವಾಮಿಗಳಲ್ಲಿ ಪರ್ಯಾಯಸ್ಥರೇ ಕೃಷ್ಣನ ಅರ್ಚಕರು, ಗುಡಿಯ ವ್ಯವಸ್ಥಾಪಕರು, ಮಠದ ಯಜಮಾನರು; ತಮ್ಮ ಪರ್ಯಾಯದ ಅವಧಿಯಲ್ಲಿ ಅವರೇ ಸರ್ವಾಧಿಕಾರಿಗಳು, ಸರ್ವಸ್ವತಂತ್ರರು. ಆದರೆ ಈ ಸ್ವಾಮ್ಯ ಸಾರ್ವಕಾಲಿಕ

ವಾದುದಲ್ಲವಾಗಿ ಪರ್ಯಾಯದ ಸ್ವಾಮಿಗಳು ಜಾಗರೂಕರಾಗಿ ವರ್ತಿಸುತ್ತಾರೆ. ತಮ್ಮ ಅಧಿಕಾರವನ್ನು ದುರ್ವ್ಯಯ ಮಾಡುವುದಿಲ್ಲ. ತಮ್ಮ ಅವಧಿಯಲ್ಲಿ ಸಾಧ್ಯವಾದಷ್ಟು ಸುಧಾರಣೆಗಳನ್ನು ಮಾಡಿ ಕೃಷ್ಣಮಠದ ಕೀರ್ತಿಯನ್ನು ಹೆಚ್ಚಿಸಲು ಶ್ರಮಿಸುತ್ತಾರೆ. ಹೀಗೆ ಹೊಣೆಗಾರಿಕೆಯ (ಟ್ರಸ್ಟಿಷಿಪ್) ಕಲ್ಪನೆಯನ್ನು ಮೂಡಿಸಿದವರು ಮಧ್ವಾಚಾರ್ಯರು; ಪದ್ಧತಿಯನ್ನು ಪರಿಷ್ಕರಿಸಿದವರು ವಾದಿರಾಜ ಸ್ವಾಮಿಗಳು. ಅವರು ಮಾಡಿದ ಎರಡು ವರ್ಷಗಳ ಪರ್ಯಾಯ ಸಂಪ್ರದಾಯವು ಈಗ್ಗೆ ಐನೂರು ವರ್ಷಗಳಿಗೂ ಮೀರಿ ಪ್ರಚಲಿತವಾಗಿದೆ.

ಏಳುವ ಮಠ

ಈಗ ಪರ್ಯಾಯದಿಂದೇಳುವ ಸೋದೆ-ಮಠದ ಮೂಲಪುರುಷರು ಮಧ್ವಾಚಾರ್ಯರ ಪೂರ್ವಾಶ್ರಮದ ಸೋದರರೂ ಶಿಷ್ಯರೂ ಆದ ವಿಷ್ಣುತೀರ್ಥರು. ಅವರ ಹಳ್ಳಿಯಾದ ಪರಂಮಾಡು ಎಂಬೂರಿನಿಂದಲೇ ಈ ಮಠವನ್ನು ಮುಂಚೆಗೆ ವ್ಯವಹರಿಸುತ್ತಿದ್ದರು. ಈ ಮಠದ ಪರಂಪರೆಯಲ್ಲಿ ಬಂದ ಉಜ್ವಲ ವ್ಯಕ್ತಿಯಾದ ವಾದಿರಾಜ ತೀರ್ಥರ ಕಾಲದಲ್ಲಿ ಸೋದೆ ಸಂಸ್ಥಾನದ ಅರಸಪ್ಪನಾಯಕನು ಈ ಮಠಕ್ಕೆ ಜಹಗೀರುಗಳನ್ನು ಕೊಟ್ಟನಾಗಿ ಅಲ್ಲಿಂದ ಮುಂದೆ ಇದು ಸೋದೆಮಠ ಎಂದು ಪ್ರಸಿದ್ಧವಾಯಿತು. ಈಗಿನ ವಿಶ್ವೋತ್ತಮ ತೀರ್ಥರು ಈ ಮಠದ. ಪರಂಪರೆಯಲ್ಲಿ ಮೂವತ್ತನಾಲ್ಕನೆಯವರು. ಇವರ ಹಿಂದಿನವರಾದ ವಿಶ್ವೇಂದ್ರತೀರ್ಥರು ಶಾಲೆಗಳನ್ನು ಕಟ್ಟಿ ವಿದ್ಯಾದಾನ ಮಾಡಿ ಕೃತಾರ್ಥರಾಗಿದ್ದಾರೆ. ಶೀರೂರು ಮಠವು ಈ ಮಠಕ್ಕೆ ದ್ವಂದ್ವ ಮಠ.

ಕೂಡುವ ಮಠ

ಇನ್ನು ಪರ್ಯಾಯವನ್ನೇರುವ ಕಾಣಿಯೂರು ಮಠದ ಮೂಲಪುರುಷರು ಶ್ರೀರಾಮತೀರ್ಥರು. ಈ ಮಠದ ಪಟ್ಟದ ದೇವರು ನರಸಿಂಹ. ವಾದಿರಾಜರ ಕಾಲದಲ್ಲಿಯೇ ಪ್ರಸಿದ್ಧರಾಗಿದ್ದ ವಾರಿಜಾಕ್ಷ ತೀರ್ಥರು ಈ ಮಠದವರು. ಈ ಮಠದ ಪರಂಪರೆಯಲ್ಲಿ ವಿದ್ಯಾಸಾಗರತೀರ್ಥರು, ವಿದ್ಯಾಪತಿ ತೀರ್ಥರು,

ವಾಮನ ತೀರ್ಥರು, ವಾಸುದೇವ ತೀರ್ಥರು ಮುಂತಾದವರು ತುಂಬ ಪ್ರತಿಭಾಶಾಲಿಗಳಾಗಿದ್ದವರು, ರಾಜಸನ್ಮಾನಿತರಾದವರು, ಕೃಷ್ಣಮಠಕ್ಕೆ ವಿಪುಲವಾದ ಸೇವೆ ಸಲ್ಲಿಸಿದವರು. ಈಗಿನ ವಿದ್ಯಾವಾರಿನಿಧಿ ತೀರ್ಥರು ಮಠದ ಪೀಳಿಗೆಯಲ್ಲಿ 29ನೆಯವರು. ಪೇಜಾವರ ಮಠವು ಇದಕ್ಕೆ ದ್ವಂದ್ವಮಠ.

ಉಡುಪಿಯ ಅಷ್ಟಮಠಗಳ ಸ್ವಾಮಿಗಳು ಕೇವಲ ಕೃಷ್ಣಾರ್ಚನೆಗಾಗಿಯೇ ನಿಯಮಿತರಾದವರೆಂದೂ ಆಧ್ಯಾತ್ಮಿಕ, ಸಾಮಾಜಿಕ ಉದ್ಧಾರದ ಕಾರ್ಯ ಅವರ ವ್ಯಾಪ್ತಿಗೆ ಮೀರಿದುದೆಂದೂ ಕಲ್ಪನೆಯಿದ್ದಿತು; ಅವರು ಅರ್ಚಕ-ಸಂನ್ಯಾಸಿಗಳೆಂದು ಅಪವಾದವೂ ಇದ್ದಿತು. ಆದರೆ ಈ ವ್ಯವಸ್ಥೆಯಲ್ಲಿ ಕಾಣಿಸಿಕೊಂಡ ನೂರಾರು ಸಂನ್ಯಾಸಿಗಳಲ್ಲಿ ಹಲವರು ರಚನಾತ್ಮಕ ಕಾರ್ಯಗಳನ್ನು ಮಾಡಿದ್ದಾರೆ. ತತ್ವಪ್ರಸಾರ ಮಾಡಿದ್ದಾರೆ; ಪಂಡಿತರೆಂದು ಕೀರ್ತಿವೆತ್ತಿದ್ದಾರೆ; ಸಮಾಜದ ಮುನ್ನಡೆಗೆ ನೆರವಾಗಿದ್ದಾರೆ. ಪ್ರಸ್ತುತ ಅಷ್ಟಮಠಾಧೀಶರಾಗಿರುವವರಲ್ಲಿ ಬಹುಮಂದಿ ತರುಣರು, ಉತ್ಸುಕರು, ಪ್ರಗತಿಶೀಲರು, ಸಂಪನ್ನರು. ಇವರಲ್ಲಿ ಪೇಜಾವರ ಮಠದ ವಿಶ್ವೇಶ ತೀರ್ಥರು ಕೈಗೊಂಡಿರುವ ಸಮಾಜ ಸಂಘಟನಾ ಕಾರ್ಯ, ವಿದ್ಯಾವಿತರಣ ಪ್ರಯತ್ನ ಪ್ರಸಿದ್ಧವಾಗಿವೆ. ಇಂದಿನ ಸಮಾಜದಲ್ಲಿ ಮಠಗಳ ಪಾತ್ರವೇನು, ಯತಿಗಳ ಪ್ರಾಶಸ್ತ್ಯವೇನು ಎಂಬುದನ್ನು ಉಡುಪಿಯ ಕೆಲವು ಸ್ವಾಮಿಗಳು ಮನಗೊಂಡು ಸಮಾಜದ ಋಣವನ್ನು ತೀರಿಸುವ ಸಂಕಲ್ಪ ಮಾಡಿದ್ದಾರೆ.

ಸ್ವಾಮಿಗಳ ಕರ್ತವ್ಯ

ಈ ಸಂದರ್ಭದಲ್ಲಿ ಪರ್ಯಾಯಕ್ಕೆ ವಿಶೇಷವಾದ ಅರ್ಥವಿದೆ : ಪರ್ಯಾಯ ಪಟ್ಟಭದ್ರರಾದ ಸ್ವಾಮಿಗಳ ಮೇಲೆ ಗುರುತರವಾದ ಭಾರವಿದೆ. ನಾಡಿನ ಜನರಲ್ಲಿ ಧಾರ್ಮಿಕ ಪ್ರಸಕ್ತಿ ಸಾರೋದ್ಧಾರವಾಗಿ ಬೆಳೆಯುವಂತೆ ಮಾಡುವುದು ಅವರ ಕರ್ತವ್ಯ; ನಾಡಿನ ಸುಭದ್ರತೆಗೆ, ಶಾಂತಿಗೆ, ಸಮಾಧಾನಕ್ಕೆ ಅಗತ್ಯವಾದ ಮನೋಧರ್ಮವನ್ನು ಮೂಡಿಸಬೇಕಾದವರು ಅವರು. ಸಂಕುಚಿತವಾದ ಛಲ ಈ ಯುಗಧರ್ಮಕ್ಕೆ ವಿರುದ್ಧವಾದುದು. ವಿಶ್ವವಿಶಾಲವಾದ ಧರ್ಮದೃಷ್ಟಿಯಿಂದಲೇ ಎಲ್ಲ ಜನಾಂಗಗಳಿಗೂ ಶ್ರೇಯಸ್ಸು. ಇದನ್ನು ಪೇಜಾವರ

ಮಠದ ಸ್ವಾಮಿಗಳು ಅರಿತಿದ್ದಾರೆ; ಈ ಸೂತ್ರವನ್ನೇ ಅನುಸರಿಸುತ್ತಿದ್ದಾರೆ. ಅವರ ದ್ವಂದ್ವ ಮಠವು ಈಗ ಪರ್ಯಾಯವೇರುವಾಗ ಅವರ ಮನೋಧರ್ಮದ ಪ್ರಭಾವ ಈ ಧರ್ಮಪೀಠದ ಮೇಲೆ ಬೀಳಬೇಕು, ಅಭ್ಯುದಯದ ದಾರಿ ಸುಗಮವಾಗಬೇಕು.

ಕೋಟೆಯ ವೆಂಕಟೇಶ್ವರ

ಬೆಂಗಳೂರು ನಗರದ ಪ್ರಾಚೀನ ಗುಡಿಗಳಲ್ಲಿ ಕೋಟೆ ವೆಂಕಟರಮಣ ಸ್ವಾಮಿ ಗುಡಿ ಒಂದು. ಪ್ರಾಚೀನತೆಯಷ್ಟೇ ಇದರ ವೈಶಿಷ್ಟ್ಯ ಅಲ್ಲ; ನಗರದ ಗುಡಿಗಳಲ್ಲೆಲ್ಲ ಇದು ತುಂಬ ಸುಂದರವಾದುದು ಎಂದರೆ ಉತ್ಪ್ರೇಕ್ಷೆಯಲ್ಲ. ಅದರ ಸರಳಸೌಂದರ್ಯ ಇನ್ನೂ ಉಳಿದುಬಂದಿರುವುದು ಇನ್ನೊಂದು ವಿಶೇಷ. ನಗರದ ಇತಿಹಾಸಕ್ಕೆಲ್ಲ ಸಾಕ್ಷಿಯಾಗಿ ನಿಂತಿರುವುದೂ ಸ್ವಾರಸ್ಯವಾದ ವಿವರವೇ.

ಗುಡಿಯನ್ನು ಕುರಿತು ಶಾಸನವೊಂದಿದೆ. ನಗರದ ನೆರೆಯಲ್ಲಿಯೇ ಬೇಗೂರು ಹೋಬಳಿ ಕೊತ್ತನೂರು ಗ್ರಾಮದ ಊರಬಾಗಿಲ ಬಳಿ ನೆಟ್ಟ ಕಲ್ಲಿನ ಮೇಲಿರುವ ಈ ಶಾಸನವು ಕ್ರಿಸ್ತಾಬ್ದ 1705ರದ್ದು. "ಕಂಠೀರವ ನರಸರಾಜ ಒಡೇರಯ್ಯ"ನವರು "ಶ್ರೀರಂಗಪಟ್ಟಣದ ಸಿಂಹಾಸನಾರೂಢರಾಗಿ ಪೃಥುವೀ ಸಾಮ್ರಾಜ್ಯವಮಾ"ಳುತ್ತಿದ್ದಾಗ, ತಮ್ಮ ಆಳ್ವಿಕೆಗೆ ಒಳಪಟ್ಟಿದ್ದ ಬೆಂಗಳೂರು ಕೋಟೆ ಒಳಗೆ "ತಂಮ ಅಪ್ಪಾಜಿಯವರು ನೂತನವಾಗಿ ಪ್ರತಿಷ್ಟೆಮಾಡಿಸಿ ದಂತಾ ವೆಂಕಟೇಶ್ವರ ಸ್ವಾಮಿಯವರ ಪಡಿತರ ದೀಪಾರಾಧನೆಗೆ" ಗ್ರಾಮವನ್ನು ಬಿಟ್ಟುಕೊಟ್ಟದ್ದು ಶಾಸನದಲ್ಲಿ ಬಂದಿದೆ. 'ಮೂಕರಸು' ಎಂದು ಹೆಸರು ಪಡೆದ ಇಮ್ಮಡಿ ಕಂಠೀರವ ನರಸರಾಜ ಒಡೆಯರ ಶಾಸನ ಇದು. ಅವರ ಅಪ್ಪಾಜಿ ಯವರೆಂದರೆ ಸುಪ್ರಸಿದ್ಧ ಚಿಕ್ಕದೇವರಾಜ ಒಡೆಯರು (1673–1704), ಮೈಸೂರು ರಾಜವಂಶದಲ್ಲಿ ಯದುರಾಯರಿಂದ ಹದಿನಾಲ್ಕನೆಯವರು.

ಇವರೇ ಬೆಂಗಳೂರು ನಗರವನ್ನು ಮೂರು ಲಕ್ಷ ರೂಪಾಯಿಗಳಿಗೆ ಕೊಂಡು ಮೈಸೂರು ರಾಜ್ಯಕ್ಕೆ ಸೇರಿಸಿದವರು. ಆಗ ಅದು ಮುಗಲರ ವಶ ದಲ್ಲಿದ್ದಿತು; ಅವರು ಅದನ್ನು ಶಿವಾಜಿ ಛತ್ರಪತಿಯ ಮಲತಮ್ಮ ವೆಂಕಾಜಿಯಿಂದ

ಕಸಿದುಕೊಂಡಿದ್ದರು. ಇದು ನಡೆದದ್ದು 1687ರಲ್ಲಿ. ವೆಂಕಾಜಿಯೇ ಇದನ್ನು ಚಿಕ್ಕದೇವರಾಜರಿಗೆ ಮೂರು ಲಕ್ಷ ರೂಪಾಯಿಗಳಿಗೆ ಮಾರಲೊಪ್ಪಿದ್ದ. ವ್ಯವಹಾರ ಪೂರೈಸುವುದರೊಳಗೆ ಮುಗಲರು ದಂಡೆತ್ತಿ ಬಂದು ಈ ಭಾಗ ವನ್ನೆಲ್ಲ ಆಕ್ರಮಿಸಿಕೊಂಡುಬಿಟ್ಟರು. ಖಾಸಿಂಖಾನ್ ಎಂಬುವನು ಸಿರಾದಲ್ಲಿದ್ದು ಫೌಜುದಾರ ದಿವಾನನಾಗಿ ಮುಗಲರ ಪರವಾಗಿ ಬೆಂಗಳೂರಿನ ಆಡಳಿತವನ್ನು ಮೂರುವರ್ಷ ನಡೆಸಿದನಂತರ, ಚಿಕ್ಕದೇವರಾಜರಿಗೆ ಅದೇ ಬೆಲೆಗೆ ನಗರವನ್ನು ಮಾರಿದ. ಹೀಗಾಗಿ ಬೆಂಗಳೂರು ಮೈಸೂರು ರಾಜ್ಯಕ್ಕೆ ಸೇರಿದ್ದು 1690ರ ಸುಮಾರಿಗೆ.

ಕೋಟೆಯ ಕಾವಲು ದೇವರು

ಆಗ ರಾಜ್ಯದ ರಾಜಧಾನಿ ಇನ್ನೂ ಶ್ರೀರಂಗಪಟ್ಟಣವೇ ಆಗಿದ್ದಿತು. ಆಗ ಚಿಕ್ಕದೇವರಾಜರ ರಾಜ್ಯವಿಸ್ತರಣೆಯಲ್ಲಿ ಬೆಂಗಳೂರು ಪ್ರಮುಖವಾದ ಗುಡಿಯಾಯಿತು. ಇಲ್ಲಿ ಕೆಂಪೇಗೌಡನ ಕಾಲದಿಂದಲೂ ಇದ್ದ ಮಣ್ಣಿನ ಕೋಟೆ ಯನ್ನು ಇವರು ದುರಸ್ತಿಪಡಿಸಿ, ಕಲ್ಲಾಗಿಸಿ, ವಿಸ್ತರಿಸಿಕೊಂಡರು. ಕೋಟೆಯ ಕಾವಲಿಗೆಂದು ವೆಂಕಟೇಶ್ವರನ ಗುಡಿ ಸಿದ್ಧವಾಯಿತೆಂದು ತೋರುತ್ತದೆ.

ಶಾಸನದಲ್ಲಿ ಗುಡಿಯನ್ನು ಕಟ್ಟಿಸಿದ ಪ್ರಸ್ತಾಪವಿಲ್ಲ. ವೆಂಕಟೇಶ್ವರ ಸ್ವಾಮಿಯ ಮೂರ್ತಿಯ ಪ್ರತಿಷ್ಠಾಪನೆಯಷ್ಟೇ ಚಿಕ್ಕದೇವರಾಜರ ಕೆಲಸವೆಂದು ಅಲ್ಲಿ ಬರುವ ವಿವರ. ಗುಡಿಯೊಂದು ಮೊದಲಿಂದ ಇದ್ದಿತೆಂದು ಸೂಚನೆಯಿದೆ. ಬಹುಶಃ ಕೆಂಪೇಗೌಡನು ಕೋಟೆಯನ್ನು ಕಟ್ಟಿದಾಗಲೇ ಇದೂ ಎದ್ದಿರಬಹುದು. ಗುಡಿಯ ವಿಮಾನವನ್ನು ನೋಡಿದರೆ ಶಕ್ತಿಯ ಗುಡಿಯಿದ್ದಂತೆ ತೋರುತ್ತದೆ. ಸಾಮಾನ್ಯವಾಗಿ ಕೋಟೆಕೊತ್ತಲಗಳಲ್ಲಿ ದುರ್ಗೆಯ ಸನ್ನಿಧಿಯನ್ನು ಏರ್ಪಡಿಸು ವುದು ವಾಡಿಕೆ. ವಿಮಾನಸ್ತರದ ಮೂಲೆಗಳಲ್ಲಿ ಸಿಂಹಗಳನ್ನು ನಿಲ್ಲಿಸುವುದು ದೇವೀಗುಡಿಗಳ ಲಕ್ಷಣ.

ಈಗ ಈ ಗುಡಿಯಲ್ಲಿ ಪ್ರಮುಖವಾಗಿ ವೆಂಕಟೇಶ್ವರನ ಆಲಯವಿದ್ದು, ಆವರಣದೊಳಗೆ ಎಡಬದಿಯಲ್ಲಿ ಹಿಂದುಗಡೆ ಲಕ್ಷ್ಮಿಯ ಸನ್ನಿಧಿಯಿದೆ. ಇದರ

ಉಲ್ಲೇಖ ಶಾಸನದಲ್ಲಿ ಬಂದಿಲ್ಲ. ವೆಂಕಟೇಶ್ವರನ ಈ ಆಲಯ ಏಕಮೂರ್ತಿ ಆಲಯವೇ; ತಿರುಮಲೆಯ ಮೇಲಿರುವಂತೆ. ಈಗ ಲಕ್ಷ್ಮಿ ಎನಿಸಿಕೊಳ್ಳುವ ಈ ಮೂರ್ತಿ ಮೊದಲು ಶಕ್ತಿಯಾಗಿ ಪ್ರಮುಖ ದೈವವಾಗಿದ್ದಿತೋ ಏನೋ! ಚಿಕ್ಕದೇವರಾಜ ಒಡೆಯರು ಅದರ ಸ್ಥಾನಪಲ್ಲಟಮಾಡಿ, ಅದಿದ್ದ ಕಡೆ ವೆಂಕಟೇಶ್ವರನನ್ನು ನಿಲ್ಲಿಸಿದ್ದರೆ ಸೋಜಿಗವಲ್ಲ.

ಚಿಕ್ಕದೇವರಾಜರು ವೈಷ್ಣವ ಶ್ರದ್ಧಾಳು; ಮೇಲುಕೋಟೆಯ ಚೆಲುವ ನಾರಾಯಣ ಅವರ ಕುಲದೈವ. ಅವರ ಐವರು ಮಂತ್ರಿಗಳಲ್ಲಿ ಪರಮಾಪ್ತರಾಗಿದ್ದ ತಿರುಮಲಾಚಾರ್ಯರಿಗಂತೂ ಶ್ರೀವೈಷ್ಣವ ಛಲವೇ ಇದ್ದಿತು. ಇವರಿಬ್ಬರ ಸಾಹಿತ್ಯವೂ ವೈಷ್ಣವ ಒಲುವನ್ನು ಸ್ಪಷ್ಟವಾಗಿ ಸೂಚಿಸುತ್ತದೆ. ರಾಜರು ಗುಂಡಲು ಪರವಾಸುದೇವ, ಶ್ರೀರಂಗಪಟ್ಟಣದ ಶ್ವೇತವರಾಹ, ಹರದನ ಹಳ್ಳಿ ಗೋಪಾಲ ಕೃಷ್ಣ, ಒರಕೋಡು ವರದರಾಜ ಮೊದಲಾದ ಹಲವು ವಿಷ್ಣು ಆಲಯಗಳನ್ನು ಕಟ್ಟಿಸಿದರು. ಅಷ್ಟಲ್ಲದೆ, ರಾಜ ಒಡೆಯರ ಕಾಲದಿಂದಲೂ (1580ರಿಂದ) ತಿರುಮಲೆಯ ವೆಂಕಟೇಶ್ವರನಿಗೆ ಈ ಅರಸು ಮನೆತನ ನಡೆದುಕೊಳ್ಳುವುದಿದ್ದಿತು. ಇವರ ಹಿರಿಯರು ಆ ದೇವಾಲಯಕ್ಕೆ ಹಲವು ಸೇವೆಗಳನ್ನು ಸಲ್ಲಿಸಿದ್ದರು. ಚಿಕ್ಕದೇವರಾಜರು ತಿರುಮಲೆಯ ದೇವರನ್ನು ಬೆಂಗಳೂರಿನಲ್ಲಿ ನಿಲ್ಲಿಸುವ ಮನಸ್ಸುಮಾಡಿದುದು ಈ ಕಾರಣದಿಂದ.

ಮೇಲಾಗಿ, ವೆಂಕಟೇಶ್ವರನೂ ದುರ್ಗದ ದೈವವೇ. ಮೂರ್ತಿಪ್ರಕಾರದಲ್ಲಿ 'ಆಭಿಚಾರಿಕ'ವೆಂಬ ಗುಂಪಿಗೆ ಸೇರಿದ ಈ ದೇವರನ್ನು ಕೋಟೆಯ ಕಾವಲಿಗೆ ಶತ್ರುಗಳ ಸೋಲಿಗೆ, ಪಿಡುಗುಗಳ ನಿವಾರಣೆಗೆ ಕುರಿಯುತ್ತಿದ್ದುದು ಕಂಡುಬರುತ್ತದೆ. ಕೋಟೆಗಳಲ್ಲಿ, ಬೆಟ್ಟಗಳ ಮೇಲೆ, ಕಾಡಿನ ನಡುವೆ, ನದಿಯ ದಡದಲ್ಲಿ ಈ ದೇವರಿಗೆ ಪೂಜೆ ಸಲ್ಲುತ್ತಿದ್ದಿತು. ಚಿಕ್ಕದೇವರಾಜರು ಹೊಸದಾಗಿ ಕೋಟೆಯೊಂದನ್ನು ಕೊಂಡು, ಅದನ್ನು ಬಲಪಡಿಸಿ ಊರಿನಲ್ಲಿ ಪೇಟೆಗಳನ್ನು ಏರ್ಪಡಿಸಿದಾಗ ವೆಂಕಟೇಶ್ವರನನ್ನು ನೆನಸಿಕೊಂಡರು. ಇನ್ನೆಲ್ಲಿಯೂ ಅವರು ವೆಂಕಟೇಶ್ವರನಿಗೆ ಆಲಯವನ್ನಾಗಲೀ, ಪ್ರತಿಷ್ಠೆಯನ್ನಾಗಲಿ ವ್ಯವಸ್ಥೆಮಾಡಿದ ಉಲ್ಲೇಖ ಇಲ್ಲ. ಬೆಂಗಳೂರಿನಲ್ಲಿ ಅವರು ಪ್ರತಿಷ್ಠೆ ಮಾಡಿಸಿದ ದೇವರ

ವಿಚಾರವೂ ರಾಜವಂಶದ ಅಧಿಕೃತ ಚರಿತ್ರೆಗಳಲ್ಲಿ ಬರುವುದಿಲ್ಲ. ಎಂದರೆ, ಬೆಂಗಳೂರು ಗುಡಿಯನ್ನು ಅವರಾಗಲಿ ಅವರ ಕಡೆಯವರಾಗಲಿ ಹೆಚ್ಚಿನದೆಂದು ಭಾವಿಸಿದ ಸೂಚನೆಯಿಲ್ಲ. ಅವರನಂತರ ಬಂದ ರಾಜರು ಯಾರೂ ಈ ಗುಡಿಗೆ ವಿಶೇಷವಾದ ಸೇವೆ ಸಲ್ಲಿಸಿದ ಪ್ರಸ್ತಾಪವಿರದು, ಮೇಲೆ ಹೇಳಿದ ಶಾಸನವೊಂದರ ಹೊರತು.

ವೆಂಕಟೇಶ್ವರ ಹದಿನಾರಾಣೆ ವೈಷ್ಣವ ದೇವರು ಎಂಬ ನಂಬಿಕೆ ಆ ಕಾಲಕ್ಕೆ ಇನ್ನೂ ಬೇರೂರಿರಲಿಲ್ಲವೋ ಏನೋ ! ಅಥವಾ ತಿರುಮಲಾರ್ಯರ ತೀರ್ಮಾನ ಅಷ್ಟು ಸ್ಪಷ್ಟವಾಗಿರಲಿಲ್ಲವೋ ! ಅಂತೂ, ಕೋಟೆಯ ಕಾವಲಿಗೆಂದು ವೆಂಕಟೇ-ಶ್ವರ ಇಲ್ಲಿಗೆ ಬಂದಾಗ ತಿರುಮಲೆಯ ಪಡಿಯಚ್ಚಿನಲ್ಲೇ ಬಂದುದಂತೂ ದಿಟ. ಶತಮಾನಗಳ ಹಿಂದೆ ತಿರುಮಲೆಯ ಗುಡಿ ಹೇಗಿದ್ದಿತೆಂದು ಕಾಣಬೇಕಾದರೆ ಬೆಂಗಳೂರು ಕೋಟೆಯ ಗುಡಿಯನ್ನು ಕಾಣಬಹುದು. ಏಕಮೂರ್ತಿ ಆಲಯ, ಏಕಾಂಕಣ ಗರ್ಭಗೃಹ, ತೆರೆದ ಒಂದೇ ಪ್ರದಕ್ಷಿಣಾವರಣ, ಗರ್ಭಗುಡಿಯ ಮೇಲ್ಭಾಗದಲ್ಲಿ ಸಣ್ಣ ವಿಮಾನ, ಮೂಲೆಗಳಲ್ಲಿ ಸಿಂಹಗಳು, ಗರ್ಭಗುಡಿಯೆದುರು ಕೊಂಚದೂರದಲ್ಲಿ (ಮೊದಲಿಗೆ ಸೇರದಂತೆ, ಆದರೆ ಈಗ ಸೇರಿಕೊಂಡು) ಮುಖ ಮಂಡಪ, ಮುಖ್ಯಾವರಣದಲ್ಲಿ ಎಲ್ಲಿಯೂ ಉಳಿದ ಯಾವ ಮೂರ್ತಿಗಾಗಲಿ, ಆಚಾರ್ಯ ಪುರುಷರಿಗಾಗಲಿ ಸನ್ನಿಧಿಯಿಲ್ಲದಿರುವುದು ಮೊದಲಾದ ವಿವರಗಳೆಲ್ಲ ಎರಡೂ ಗುಡಿಗಳಿಗೆ ಸಮ. ಎರಡೂ ಕಡೆ ವೆಂಕಟೇಶ್ವರ ಏಕಾಂಗಿಯಾಗಿ ನಿಂತಿರುವುದನ್ನು ಕಾಣಬಹುದು.

ಲಕ್ಷ್ಮಿಯ ಸನ್ನಿಧಿ

ಆದರೆ ತಿರುಮಲೆಯಲ್ಲಿ ಇಂದಿಗೂ ಗುಡಿಯಲ್ಲೆಲ್ಲೂ ಲಕ್ಷ್ಮಿಯ ಸನ್ನಿಧಿಯಿಲ್ಲ. ಬೆಟ್ಟದ ಕೆಳಗೆ ತಿರುಚಾನೂರಿನ ಅಲರ್‌ಮೇಲ್ ಮಂಗೈ ಅಮ್ಮನವರನ್ನು ಲಕ್ಷ್ಮಿಯ ಮಾನುಷೀರೂಪವೆಂದು ಬಗೆಯುವುದು ವೆಂಕಟಾಚಲ ಮಹಾತ್ಮೆಯ ಕಾಲದಿಂದ. ಇದು ಪಾಶಿಂಡಿ ವೆಂಕಟತ್ತುರೈವಾರ್ ಎಂಬುವರು 1491 ರಲ್ಲಿ ರಚಿಸಿದ ಪೌರಾಣಿಕ ಗ್ರಂಥ. ಇಲ್ಲಿ ವೆಂಕಟೇಶ್ವರನೇ ವಿಷ್ಣುವೆಂದೂ ಅಲರ್

ಪೇಲ್ ಮಂಗೈ (ಪದ್ಮಾವತಿ) ಲಕ್ಷ್ಮಿ ಎಂದೂ ನಿರ್ದೇಶಿಸಿ ಅವರಿಬ್ಬರೂ ಇಲ್ಲಿ ಕಲೆತ ಕಥೆಯನ್ನು ಹೇಳಲಾಗಿದೆ. ಈ ಕಥೆಗೆ ಒಪ್ಪಿಗೆಯ ಮುದ್ರೆ ಮೂಡಿಸಿದ ವರು 1500ರ ವೇಳೆಗೆ ಬೆಟ್ಟದ ಮೇಲೆ ಬಂದ ಉತ್ತರಭಾರತದ ಮಹಂತರು. ಅವರ ಪ್ರಾಬಲ್ಯದೊಂದಿಗೆ ವೆಂಕಟಾಚಲ ಮಹಾತ್ಮೆಯ ಕಥೆಯ ಪ್ರಚಾರವೂ ಹೆಚ್ಚಿತು. ಹೀಗಾಗಿ ಲಕ್ಷ್ಮೀ-ವೆಂಕಟೇಶ್ವರನ ಕಲ್ಪನೆ ಬೇರೂರಿತು. ತಿರುಮಲೆಯ ಗುಡಿಗೆ ತುಂಬ ನಡೆದುಕೊಂಡ ವಿಜಯನಗರದ ಅರಸರಲ್ಲಿ ಅಚ್ಯುತರಾಯನು ತಿರುಮಲೆಯ ಗುಡಿಯಲ್ಲಿ 1535ರ ವೇಳೆಗೆ ಲಕ್ಷ್ಮೀ ಮಹೋತ್ಸವವನ್ನು ನಡೆ ಸುವ ಪದ್ಧತಿಯನ್ನು ಮೊದಲುಮಾಡಿದ.

ಹೀಗಾಗಿ ವೆಂಕಟೇಶ್ವರನನ್ನು ಏಕಾಂಗಿಯಾಗಿ ನಿಲ್ಲಿಸಿದ ಗುಡಿಯಲ್ಲಿಯೂ ಲಕ್ಷ್ಮೀದೇವಿ ಮಂಟಪವನ್ನು ಅಳವಡಿಸುವುದು ವಾಡಿಕೆಯಾಯಿತು. ಬೆಟ್ಟದ ಮೇಲೆ ಈ ವಾಡಿಕೆ ನೆಲೆಗಾಣದಿದ್ದರೂ ಬೆಂಗಳೂರು ಕೋಟೆಯಲ್ಲಿ ಫಲಿಸಿತು. ಮೈಸೂರಿನ ರಾಜರು ತಮ್ಮನ್ನು ವಿಜಯನಗರದ ಅರಸರಿಗೆ ಸಾಮಂತರೆಂದು ಪರಿಗಣಿಸಿಕೊಳ್ಳುತ್ತಿದ್ದರು. ವಿಜಯನಗರದ ಬಲ ಕುಂದಿ, ಅದರ ವೈಭವ ಮರೆ ಯಾದ ಮೇಲೂ ಮೈಸೂರರಸರು ಅದೇ ಭಾವನೆಯನ್ನು ಇರಿಸಿಕೊಂಡಿದ್ದರು. ನಾಲ್ಕನೆಯ ಶ್ರೀರಂಗರಾಜನು ತನ್ನ ರಾಜ್ಯದಿಂದ ತಲೆತಪ್ಪಿಸಿಕೊಂಡು ಓಡಿ ದಾಗ ಅವನಿಗೆ ಆಶ್ರಯವನ್ನಿತ್ತವರು ಮೈಸೂರರಸರೇ. ಅವನು ಬೇಲೂರಿನಲ್ಲಿ ಸುಖವಾಗಿರಲು ಅವರು ವ್ಯವಸ್ಥೆ ಮಾಡಿದರು. ಇದು 1663ರ ಮಾತು. ಇವನು ನಿಷ್ಠಾವಂತನಾದ ಶ್ರೀವೈಷ್ಣವ. ಶ್ರೀವೈಷ್ಣವ ಸಂಪ್ರದಾಯದ ಕಲ್ಪನೆ ಗಳು ಇಲ್ಲಿ ಹರಡಲು ಇದು ನೆರವಾಯಿತು.

ಹೊಂದದ ಕಟ್ಟಡ

ಅಂತೂ ಕೋಟೆಯ ಗುಡಿಯಲ್ಲಿ ಲಕ್ಷ್ಮೀ ಮಂಟಪ ಮೂಡಿತು. ಯಾವಾಗ ಎನ್ನುವುದು ತಿಳಿಯದು. ಚಿಕ್ಕದೇವರಾಜರ ಕಾಲದಲ್ಲಂತೂ ಅಲ್ಲ. ಮುಂದೆ ಎಂದೋ ಇರಬೇಕು. ಈ ಲಕ್ಷ್ಮೀಮಂಟಪ ವಾಸ್ತುಶಿಲ್ಪ ದೃಷ್ಟಿ ಯಿಂದ ಕಳಪೆಯಾದ ಕಟ್ಟಡವೇ. ವೆಂಕಟೇಶ್ವರನ ಭವ್ಯವಾದ ಆಲಯದ ಪಕ್ಕ ದಲ್ಲಿರಲು ತಕ್ಕುದಲ್ಲ. ಆವರಣದಲ್ಲಿ ಇದು ಇರದಿದ್ದರೆ ಗುಡಿಯ ಸರಳ

ಸೌಂದರ್ಯ ಇನ್ನೂ ಎದ್ದು ಕಾಣುತ್ತಿದ್ದಿತು. ಆದರೆ ಈ ಮಂಟಪದಲ್ಲಿರುವ ದೇವೀಮೂರ್ತಿ ತುಂಬ ಸೊಗಸಾದುದು; ತುಂಬ ಹಳೆಯದೂ ಹೌದು; ಕಳೆಯೂ ಚೆನ್ನಾಗಿದೆ. ಶಿಲ್ಪವನ್ನು ನೋಡಿದರೆ ವೆಂಕಟೇಶ್ವರನ ಮೂರ್ತಿಗಿಂತ ಪ್ರಾಚೀನವಾದುದು ಎನಿಸುತ್ತದೆ.

ವೆಂಕಟೇಶ್ವರನ ಆಲಯದಲ್ಲಿ ಈ ದೇವೀಮೂರ್ತಿಯೇ ಇದ್ದಿತೇನೋ ಎಂಬ ಸಂದೇಹವನ್ನು ಆಗಲೇ ಮುಂದುಮಾಡಿದೆಯಷ್ಟೆ. ಗರ್ಭಗುಡಿಯ ಹೊರಗೋಡೆಗಳ ಮೇಲೆ ನಡುಪಟ್ಟಿಯ ಬಳಿ ಮೂರೂ ಕಡೆ ಸೊಗಸಾದ ಶಿಲ್ಪ ಸರಣಿಯೊಂದಿದೆ. ಇದು ಗಿರಿಜಾ ಕಲ್ಯಾಣ ಸಂದರ್ಭದ ಉತ್ಸವದ ಚಿತ್ರಣ. ಇದರಲ್ಲಿ ಸಪ್ತಮಾತೃಕೆಯರು, ಸಪ್ತರ್ಷಿಗಳು, ತ್ರಿಮೂರ್ತಿಗಳು (ತಂತಮ್ಮ ವಾಹನಗಳನ್ನೇರಿ) ಸೇರಿದ್ದಾರೆ. ವಿಷ್ಣು ದೇವಾಲಯಕ್ಕೆ ಸರಿಹೋಗದ ಶಿಲ್ಪ ಸಾಲು ಇದು. ಎಂದರೆ ಆಲಯ ವೈಷ್ಣವವಾಗುವ ಮೊದಲು ಮೂಡಿಬಂದ ಈ ಕಲಾಕೃತಿಗಳು ಗುಡಿಯ ಪ್ರಾಚೀನತೆಯನ್ನೂ ಅನ್ಯ ಸಂಪ್ರದಾಯವನ್ನೂ ಸೂಚಿಸುತ್ತವೆ. ವಿಮಾನದ ಬಳಿ ಮೂಲೆಗಳಲ್ಲಿ ಸಿಂಹಗಳು ಇರುವುದನ್ನು ಆಗಲೇ ಹೇಳಿದೆ. ಸಾಮಾನ್ಯವಾಗಿ ಶ್ರೀವೈಷ್ಣವ ದೇವಾಲಯಗಳ ವಿಮಾನಸ್ತರದಲ್ಲಿ ಕಾಣಬರುವ ಅಂಜಲಿಬದ್ಧ ಗರುಡಮೂರ್ತಿಗಳು ಇಲ್ಲಿ ಇರವು.

ಆಲಯವು ವಿಜಯನಗರ ಯುಗದಲ್ಲಿ ಪ್ರಚಲಿತವಾಗಿದ್ದ ಶೈಲಿಯನ್ನು ಅಳವಡಿಸಿಕೊಂಡಿದೆ. ಆದರೆ ಸಣ್ಣ ದೇವಾಲಯಗಳಿಗೆ ಸರಿಯಾದ ವಿನ್ಯಾಸಗಳನ್ನು ಬಳಸಿಕೊಂಡಿರುವುದು ಸಹಜವೇ. ಮಹಾದ್ವಾರದ ಮೇಲೆ ಗೋಪುರವೂ ಮೊನ್ನೆಮೊನ್ನೆಯವರೆಗೆ ಇರಲಿಲ್ಲ; ಆವರಣಕ್ಕೆ ಪ್ರಾಕಾರವೂ ಇಲ್ಲ. ಆವರಣದಾಚೆ, ದೇವರಿಗೆ ಎದುರಾಗಿ ಧ್ವಜಸ್ತಂಭವಿದೆ. ಇದರಲ್ಲಿ ನಾಲ್ಕೂ ಕಡೆ ಹನುಮಂತ, ಗರುಡ, ಶಂಖ, ಊರ್ಧ್ವಪುಂಡ್ರಗಳ ಚಿತ್ರಣ ಉಬ್ಬು ಶಿಲ್ಪದಲ್ಲಿದೆ. ಆಲಯ ಮೇಲೆ ಹೇಳಿದಂತೆ ಭವ್ಯವಾದ ಕಟ್ಟಡ, ಅದರ ವಾಸ್ತು ಸೌಂದರ್ಯ ನೋಡಿದೊಡನೆ ಮನದಟ್ಟಾಗುತ್ತದೆ; ಅದರ ಸರಳತೆ ಎದ್ದು ಕಾಣುತ್ತದೆ. ಜಗತಿಯ ಮೇಲಿರುವ ಮುಖಮಂಡಪದ ಕಂಬಗಳು, ಅಲ್ಲಿರುವ ಶಿಲಾ ಆಸನ, ಗರ್ಭಗುಡಿಯ ಮೇಲಿರುವ ವಿಮಾನ–ಇವೆಲ್ಲವೂ ಆಲಯದ ಸ್ವಾರಸ್ಯವಾದ ವಿವರಗಳು.

ಮೈಸೂರು ರಾಜ್ಯದ ಆಡಳಿತವು ರಾಜರ ವಂಶದಿಂದ ಹೈದರ್‌ಆಲಿ (1761-1782) ಮತ್ತು ಅವನ ಮಗ ಟೀಪು ಸುಲ್ತಾನ್ (1782-1799) ಇವರ ಕಾರುಬಾರಿಗೆ ಬಂದಾಗ ಅವರು ಬೆಂಗಳೂರು ಕೋಟೆಯಲ್ಲಿ ತಮಗಾಗಿ ಒಂದು ದೊಡ್ಡ ಅರಮನೆಯನ್ನು ಕಟ್ಟಿಸಿಕೊಂಡರು. ಇಮ್ಮಡಿ ಕೃಷ್ಣರಾಜಒಡೆಯರು 1759 ರಷ್ಟು ಹಿಂದೆಯೇ ಹೈದರ್‌ಆಲಿಯ ಸೇವೆಯನ್ನು ಮೆಚ್ಚಿಕೊಂಡು ಬೆಂಗಳೂರು ನಗರವನ್ನು ಅವನಿಗೆ ಜಹಗೀರಿಯನ್ನಾಗಿ ಕೊಟ್ಟಿದ್ದರು. 1761 ರಲ್ಲಿ ರಾಜ್ಯದ ಆಡಳಿತವೇ ಅವನ ಕೈಸೇರಿದಾಗ ಈ ನಗರದ ಪ್ರಾಮುಖ್ಯವನ್ನು ಅರಿತುಕೊಂಡು ಇಲ್ಲಿಯೇ ಇರಲು ಮನಸ್ಸು ಮಾಡಿದ್ದ. ಹೈದರ್ ಮತ್ತು ಟೀಪು ಕಟ್ಟಿಸಿದ ಅರಮನೆಯ ಒಂದು ತುಣುಕು ಇನ್ನೂ ಉಳಿದಿದೆ; ಬಹುಪಾದ ಮತ್ತು ಭವ್ಯವಾದ ಭಾಗ ಮರೆಯಾಗಿದೆ.

ಅರಮನೆಯಿದ್ದ, ಆದರ ತುಣುಕು ಉಳಿದಿರುವ ಸ್ಥಳವೆಂದರೆ ಗುಡಿಯ ಹಿಂಭಾಗದಲ್ಲಿಯೇ, ತುಂಬ ಹತ್ತಿರದಲ್ಲಿಯೇ. ಸುಮಾರು ನೆಲವತ್ತು ವರ್ಷಗಳ ಕಾಲ ಈ ಪ್ರದೇಶವೆಲ್ಲ ಮುಸಲ್ಮಾನರ ಹೆಚ್ಚಳವನ್ನು ಅನುಭವಿಸಿತು. ಆದರೆ ಈ ಗುಡಿ ಮಾತ್ರ ಎಂದಿನಂತೆಯೇ ಇದ್ದಿತು; ಇದಕ್ಕೆ ಯಾವ ತೊಂದರೆಯೂ ಒದಗಲಿಲ್ಲ. ಅವರ ಅರಮನೆಗೆ ಸೇರಿದಂತೆ ಇದ್ದ ಈ ಗುಡಿಯಲ್ಲಿ ಪೂಜೆಗಾಗಲೀ, ಮೂರ್ತಿಗಳಿಗಾಗಲಿ, ಆವರಣಕ್ಕಾಗಲಿ ಏನು ಉಪದ್ರವವೂ ಉಂಟಾಗಲಿಲ್ಲವೆಂದರೆ ಸೋಜಿಗವೇ.

ಮುಂದೆ, ಮೂರನೆಯ ಮೈಸೂರು ಸಮರ (1790–92) ನಡೆದಾಗ ಈ ಗುಡಿಯು ಅದಕ್ಕೆ ಸಾಕ್ಷಿಯಾಗಿ ನಿಂತಿದ್ದಿತು. ಆಂಗ್ಲರ ಅಧಿಕಾರ ಎಲ್ಲೆಲ್ಲೂ ಕವಿಯುತ್ತಿದ್ದು, ಕಾರ್ನ್‌ವಾಲೀಸನು ರಾಷ್ಟ್ರದ ಅಧಿಪತಿಯಾಗಿದ್ದಾಗ, ಅವನ ಆಣತಿಯಂತೆ ಜನರಲ್ ಮೆಡೋಸ್ ಮತ್ತು ಕರ್ನಲ್ ಮೂರ್‌ಹೌಸ್ ಇವರು ಸೇನೆಯ ನೇತಾರರಾಗಿ ಬೆಂಗಳೂರು ಕೋಟೆಯನ್ನು ಮುತ್ತಿದರಷ್ಟೆ. ಆಗ 1791ರ ಮಾರ್ಚ್ 21ರ ನಡುರಾತ್ರಿಯ ವೇಳೆ ಈ ಸೇನೆ ವೆಂಕಟೇಶ್ವರನ ಗುಡಿಗೇ ಗುಂಡಿಡಲು ತೊಡಗಿತು. ಟೀಪುವಿನ ಅರಮನೆಗೆ ಇದು ರಕ್ಷೆಯಾಗಿದ್ದಿ

ತಲ್ಲವೆ ? ಗುಂಡೊಂದು ಸಿಡಿದುಬಂದು ಗುಡಿಯ ಎದುರಿಗಿದ್ದ ಧ್ವಜಸ್ತಂಭಕ್ಕೆ ಹೊಡೆದು ಚಿಪ್ಪೆಬ್ಬಿಸಿತು. ಇಷ್ಟು ವಿನಾ ಸ್ತಂಭಕ್ಕಾಗಲಿ ಗುಡಿಗಾಗಲಿ ಯಾವ ಅಪಾಯವೂ ಒದಗಲಿಲ್ಲ ! ಬುಡದಿಂದ ಸುಮಾರು ಹನ್ನೆರಡು ಅಡಿಯ ಎತ್ತರದಲ್ಲಿ ಧ್ವಜಸ್ತಂಭಕ್ಕೆ ಆಗ ಬಿದ್ದ ಪೆಟ್ಟನ್ನು ಈಗಲೂ ಕಾಣಬಹುದು. ಗುಡಿಯ ನೆರೆಯಲ್ಲಿಯೇ ಸುಮಾರು ಒಂದು ವಾರ ಕಾಲ ಟೀಪುವಿನ ಸೇನೆಗೂ ಆಂಗ್ಲರ ಸೇನೆಗೂ ನಡುವೆ ಬಿರುಸಾದ ಸಮರ ಜರುಗಿತು. ಗುಡಿಗೆ ಯಾವ ಗಾಸಿಯೂ ಆಗಲಿಲ್ಲ !

ನಗರದ ದೇವತೆ

ಅಲ್ಲಿಂದ ಮುಂದೆ ಸುಮಾರು ಒಂದು ವರ್ಷಕಾಲ ಬೆಂಗಳೂರು ಕೋಟೆ ಆಂಗ್ಲಸೇನೆಯ ವಶದಲ್ಲಿದ್ದಿತು. ಆಗಲೂ ಗುಡಿಯಲ್ಲಿ ಪೂಜೆ ತಪ್ಪಲಿಲ್ಲ. 1792ರ ಮಾರ್ಚ್ 19ರಂದು ಶ್ರೀರಂಗಪಟ್ಟಣದ ಕರಾರು ಏರ್ಪಟ್ಟು, ಅದರ ಅಂಶದಂತೆ ಬೆಂಗಳೂರು ಕೋಟೆ ಟೀಪುವಿನ ಆಳ್ವಿಕೆಗೆ ಹಿಂದಿರುಗಿಸಲ್ಪಟ್ಟಿತು. ಮುಂದೆ ತಾನು 1799ರಲ್ಲಿ ಮಡಿಯುವವರೆಗೂ ಟೀಪು ಬಹು ಮಟ್ಟಿಗೆ ಶ್ರೀರಂಗಪಟ್ಟಣದಲ್ಲಿಯೇ ಇರುತ್ತಿದ್ದನಾದರೂ ಬೆಂಗಳೂರು ಕೋಟೆಗೆ ಮತ್ತೆ ಮತ್ತೆ ಬರುತ್ತಿದ್ದ. ತನ್ನ ಅರಮನೆಯ ಬಹುಭಾಗ ಹಾಳಾದರೂ ಗುಡಿಯು ಎಂದಿನಂತೆಯೇ ಇದ್ದುದನ್ನು ಅವನು ನೋಡಿ ಅಚ್ಚರಿಗೊಂಡಿರಬೇಕು.

ಟೀಪುವಿನ ಮರಣಾನಂತರ ಮೈಸೂರಿನ ರಾಜಕಾರಣದಲ್ಲಿ ಆಂಗ್ಲರ ಕೈವಾಡ ಬಿಗಿಯಾಗಿ, ಅವರು ರಾಜ್ಯದ ಆಡಳಿತವನ್ನು ರಾಜವಂಶದ ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ಒಪ್ಪಿಸಿದ ಸಂದರ್ಭದಲ್ಲಿ ರಾಜರು ಬೆಂಗಳೂರು ಕೋಟೆಯ ಅರಮನೆಯಲ್ಲಿ ದರ್ಬಾರೊಂದನ್ನು ನಡೆಸಿದರು. ಸಭೆಗೆ ಬರುವ ಮುನ್ನ ಈ ಗುಡಿಗೆ ಬಂದು ಪೂಜೆ ಸಲ್ಲಿಸಿದರು.

ಹೀಗೆ ಈ ಗುಡಿಯು ಬೆಂಗಳೂರು ನಗರದ ಮುಖ್ಯ ಘಟನೆಗಳಲ್ಲೆಲ್ಲ ಪಾಲ್ಗೊಂಡು ಯಾವೊಂದು ಘಟನೆಯಿಂದಲೂ ವಿಕಾರವನ್ನು ತಳೆಯದೆ,

ಎಲ್ಲಕ್ಕೂ ನಿತ್ಯಸಾಕ್ಷಿಯಾಗಿ ನಿಂತಿದೆ. ಕೋಟೆಯ ವೆಂಕಟೇಶ್ವರ ನಗರದ ಅಭಿಮಾನಿ ದೇವತೆ ಎಂದರೆ ತಪ್ಪಾಗದು. 'ಬೆಂಗಳೂರು' ಎಂಬ ಮಾತು ಮೂಡಿದುದು ಹೇಗೆಂದು ಹಲವಾರು ವಿವರಣೆಗಳಿವೆ. ವೆಂಕಟೇಶ್ವರನ ಊರು ವೆಂಕಟೂರಾಗಿ, ದ್ರಾವಿಡ ಕ್ರಮವನ್ನನುಸರಿಸಿ 'ವೆಂಗಳೂರು' ಎಂದಾಗಿ ಮುಂದೆ ಬೆಂಗಳೂರಾಯಿತೆ? ಹಳೆಯ ಮರಾಠಿಯ ದಾಖಲೆಗಳಲ್ಲಿ 'ವೆಂಗ್ರೂಳ್' ಎಂದು ಅಸ್ತವ್ಯಸ್ತವಾಗಿರುವುದನ್ನು ಕಾಣಬಹುದು. ಒಂದು ವೇಳೆ ವ್ಯುತ್ಪತ್ತಿ ಹೀಗಲ್ಲವಾದರೂ ಕಲ್ಪನೆಯಲ್ಲಿ ಸ್ವಾರಸ್ಯವಿಲ್ಲದೆ ಇಲ್ಲ.

ಗೂಳೂರಿನಲ್ಲಿ ಶ್ರೀಶೈಲಸನ್ನಿಧಿ

ಕನ್ನಡನಾಡಿನ ಅಂಚಿನಲ್ಲಿ ಆಂಧ್ರಪ್ರದೇಶವನ್ನು ಎದುರು ನೋಡುತ್ತಿರುವ ಗೂಳೂರು ಇಂದಿಗೆ ಕುಗ್ರಾಮ; ಆದರೆ ಒಂದು ಕಾಲಕ್ಕೆ ಹಿರಿಮೆಯ ಊರು. ಕೋಲಾರ ಜಿಲ್ಲೆ, ಬಾಗೇಪಲ್ಲಿ (ಬಾಗೇರ ಹಳ್ಳಿ) ತಾಲ್ಲೂಕಿಗೆ ಸೇರಿರುವ ಗೂಳೂರು ಒಮ್ಮೆ ಚೋಳಮಂಡಲದ ಹರವಿನಲ್ಲಿ ಸೇರಿದ್ದ ಗುಯ್ಯಲೂರೆನಿಸಿದ್ದಿತು. ಕ್ರಿಸ್ತಾಬ್ದ 1008ರ ಸುಮಾರಿಗೆ ಶ್ರೀಶೈಲದಿಂದ ವೀರಶೈವ ಮಠಾಧಿಪತಿಗಳೊಬ್ಬರು ಇಲ್ಲಿಗೆ ಬಂದು ನೆಲೆಸಿದುದೇ ಈ ಊರಿನ ಹಿರಿಮೆಗೆ ನಿಮಿತ್ತವಾಯಿತು. ಮುಂದೆ ರಾಜರೂ, ದಂಡನಾಯಕರೂ ಈ ಮೂಲೆಯ ಹಳ್ಳಿಗೆ ಬಂದು ಮಠಕ್ಕೆ ಮರ್ಯಾದೆ ಸಲ್ಲಿಸಿ ಭೂಮಿ–ಕಾಣಿ, ಕಪ್ಪ–ಕಾಣಿಕೆಗಳನ್ನು ದಾನಮಾಡಿ ಸಂಸ್ಥಾನವನ್ನಾಗಿಸಿದರು. ಬಹುಕಾಲದಿಂದ ಆಂಧ್ರರ ಪ್ರಭಾವವೇ ಪ್ರಬಲವಾಗಿದ್ದ ಈ ಸ್ಥಳದಲ್ಲಿ ಕನ್ನಡಿಗರ ಗುರುಪೀಠವಿದ್ದರೂ ಮಠದವರು ಕನ್ನಡತನವನ್ನೇ ಉಳಿಸಿಕೊಂಡು ಬಂದಿದ್ದಾರೆ. ಆಂಧ್ರ ಸಮುದ್ರದ ನಡುವೆ ಇದ್ದ ಈ ಕನ್ನಡದ ನಡುಗಡ್ಡೆ ಬಾಳಿ ಬಂದುದು ಹೆಚ್ಚೇ. ಈ ಕಾಲಕ್ಕೆ ಮಠದ ಸಂಪತ್ತು ಬಹುವಾಗಿ ಕೈಬಿಟ್ಟದೆಯಾದರೂ ಅವ್ಯಾಹತವಾಗಿ ಹರಿದು ಬಂದ ಕನ್ನಡತನ ಈಗಿನ ಸ್ವಾಮಿಗಳಲ್ಲಿ ಉಜ್ವಲವಾಗಿ ಮೈದುಂಬಿ ಬಂದಿದೆ.

ಈ ಮಠದ ಮೂಲಸ್ಥಳ ಶ್ರೀಶೈಲ; ಇಂದಿಗೂ ಗೂಳೂರುಮಠವನ್ನು ಶ್ರೀಶೈಲ ಮಠವೆಂದೇ ವ್ಯವಹರಿಸುತ್ತಾರೆ. ಕರ್ನೂಲು ಜಿಲ್ಲೆಯ ನಂದಿಕೊಟ್ಕೂರು ತಾಲ್ಲೂಕಿಗೆ ಸೇರಿರುವ ಶ್ರೀಶೈಲ ಸಪ್ತಕುಲಾಚಲಗಳಲ್ಲಿ ಒಂದೆಂದು ಪುರಾಣ ಪ್ರಸಿದ್ಧವಾಗಿದೆ. ಇದು ಶಿವಸ್ಥಳ, ಶಾಕ್ತಕ್ಷೇತ್ರ, ಇಲ್ಲಿನ ಮಲ್ಲಿಕಾರ್ಜುನ ಲಿಂಗವು ದ್ವಾದಶ ಜ್ಯೋತಿರ್ಲಿಂಗಗಳಲ್ಲೊಂದು. ಹಲವಾರು ಶೈವಾಮ್ನಾಯ

ಗಳಿಗೆ ಇದು ತೌರೂರು. ಕ್ರಿಸ್ತಾಬ್ದ ಮೊದಲನೆಯ ಶತಮಾನದಿಂದಲೂ ಇಲ್ಲಿ ಶೈವ ಸಂಪ್ರದಾಯವು ಬೆಳೆದು ಬಂದಿರುವುದು ಸ್ಪಷ್ಟವಾಗಿದೆ. ನರ್ಮದಾ ನದಿಯ ಉತ್ತರ ದಂಡೆಯಲ್ಲಿ ಇರುತ್ತಿದ್ದ ಭಾರಶಿವರ ಮತ್ತು ಅಹಿಚ್ಛತ್ರದ ನಾಗವಂಶದ ಅರಸರ ಉತ್ಸಾಹದಿಂದ ಲಾಟಸೋಮನಾಥಪಂಥ, ಕಾಳಾಮುಖ ಕಾರುಣಿಕಪಂಥ. ಪಾಶುಪತ ಪಂಥ ಈ ಪ್ರದೇಶಕ್ಕೆ ಹರಡಿತು. ಏಳನೆಯ ಶತ ಮಾನದಲ್ಲಿದ್ದ ಶಂಕರಾಚಾರ್ಯರ ಕಾಲಕ್ಕೆ ಶ್ರೀಶೈಲವು ಕಾಪಾಲಿಕರ, ಮಹಾ ಪಾಶುಪತ ಶೈವರ ಕೇಂದ್ರವಾಗಿದ್ದಿತು. ಅವರು ಇಲ್ಲಿಗೆ ಬಂದು ಉಗ್ರಭೈರವ ನೆಂಬ ಕಾಪಾಲಿಕಾಚಾರ್ಯನೊಂದಿಗೆ ವಾದ ಮಾಡಿ ಈ ಸಂಪ್ರದಾಯವನ್ನು ನಿರಸನ ಮಾಡಿದರೆಂಬ ಉಲ್ಲೇಖವಿದೆ. ಭವಭೂತಿಯ 'ಮಾಲತೀಮಾಧವ' ದಲ್ಲಿ ಶ್ರೀಶೈಲದ, ಅಲ್ಲಿದ್ದ ಅಘೋರಘಂಟನೆಂಬ ಕಾಪಾಲಿಕ ಗುರುವಿನ ಪ್ರಸ್ತಾಪ ಬರುತ್ತದೆ.

ಪಂಚ ಮಠಗಳು

ವೀರಶೈವ ಸಂಪ್ರದಾಯದ ಬಸವಮಠ, ಗಣಮಠ, ಸಾರಂಗಮಠ, ಗೋಳಕೀಮಠ, ನರಲೋಕ ಸೂರಿಯನ್ ತಿರುಮಠ ಎಂಬ ಪಂಚಮಠಗಳು ಇಲ್ಲಿದ್ದುವೆಂದು ತಿಳಿದುಬರುತ್ತದೆ. ಗೋಳಕೀಮಠವು ಪಾಶುಪತ ಪಂಥದ್ದು; ಓರಂಗಲ್ಲಿನ ಮಂಥನಕಾಳೇಶ್ವರದಲ್ಲಿಯೂ, ಪೂರ್ವ ಗೋದಾವರಿಯ ದಾಕ್ಷಾ ರಾಮದಲ್ಲಿಯೂ, ಕಡಪಾದ ಪುಷ್ಪಗಿರಿಯಲ್ಲಿಯೂ, ಶ್ರೀಶೈಲದಲ್ಲಿಯೂ, ಈ ಪಂಥದ ಮಠಗಳಿದ್ದವು. ಪ್ರಾಚೀನ ವೀರಶೈವ ಸಂಪ್ರದಾಯವಾದ ಪಂಚಾ ಚಾರ್ಯ ಪದ್ಧತಿಯ ಒಂದು ಮಠವೂ ಇಲ್ಲಿದ್ದಿತು. ಇದರ ಪ್ರವರ್ತಕರು ಪಂಡಿತಾರಾಧ್ಯರು. ಈ ಗುರುಪರಂಪರೆಯಲ್ಲಿ ಬಂದ ಚಂದ್ರಗುಂಡ ಶಿವಾ ಚಾರ್ಯರೆಂಬ ಪ್ರಭಾವಶಾಲಿ ಗುರುವಿನಿಂದಾಗಿ ಇದಕ್ಕೆ ಚಂದ್ರಗುಂಡ ಮಠ ಅಥವಾ ಗುಂಡುಮಠವೆಂದೂ ವ್ಯವಹರಿಸುತ್ತಿದ್ದಂತೆ ತಿಳಿದುಬರುತ್ತದೆ, ಮಾಧ್ವ ಮಠಗಳಲ್ಲಿ ವ್ಯಾಸರಾಯ ಮಠ, ರಾಘವೇಂದ್ರ ಸ್ವಾಮಿ ಮಠಗಳಿದ್ದಂತೆ. ಶ್ರೀಶೈಲದ ಮಲ್ಲಿಕಾರ್ಜುನ ಲಿಂಗದಿಂದಲೇ ಉದ್ಭವಿಸಿದರೆನ್ನಲಾದ ಪಂಡಿತಾ ರಾಧ್ಯರು ಪ್ರವರ್ತಿಸಿದ ಈ ಮಠಕ್ಕೆ ಶ್ರೀಶೈಲ ಸೂರ್ಯಸಿಂಹಾಸನವೆಂದು ಪ್ರಶಸ್ತಿಯಿದೆ. ಇವರ ಕಾಲ ನಿರ್ದಿಷ್ಟವಾಗಿ ತಿಳಿದುಬಂದಿಲ್ಲ.

ಇವರ ಶಿಷ್ಯರಾದ ವಿರೂಪಾಕ್ಷ ದೇಶಿಕೇಂದ್ರರು ಶ್ರೀಶೈಲದವರೇ ಎಂದು ಪ್ರತೀತಿ. ಸುಪ್ರಸಿದ್ಧ ವೀರಶೈವ ಭಾಷ್ಯಕಾರನಾದ ಶ್ರೀಪತಿ ಪಂಡಿತನಿಗೆ ದೀಕ್ಷಾ ಗುರುಗಳಂತೆ ಇವರು; ಶಕ್ತಿ ವಿಶಿಷ್ಟಾದ್ವೈತ ಸಂಪಾದನೆಗೆ ವಿಶೇಷವಾಗಿ ಶ್ರಮಿಸಿದ ಇವರು ಹದಿನೆಂಟು ವಿಭಿನ್ನ ಕುಲದವರಿಗೆ ವೀರಶೈವದೀಕ್ಷೆ ಕೊಟ್ಟು ಲಿಂಗಧಾರಣೆ ಮಾಡಿಸಿದರು. ಯೋಗವಿದ್ಯೆಯಲ್ಲಿ ಪಾರಂಗತರಾಗಿ ಹಲವಾರು ಸಿದ್ಧಿಗಳನ್ನು ಗಳಿಸಿದ್ದ ಇವರನ್ನು ಆಗದವರು ಕೊಲೆ ಮಾಡಲೆಳೆಸಿದ್ದರಂತೆ. ಇವರ ಶಿಷ್ಯ ಚಂದ್ರಗುಂಡ ಶಿವಾಚಾರ್ಯರು ಈ ಪೀಠದಲ್ಲಿ ತುಂಬ ಪ್ರತಿಭಾ-ಶಾಲಿಗಳಾದ, ಪ್ರಭಾವಶಾಲಿಗಳಾದ ಗುರುಗಳು. ಶ್ರೀಪತಿ ಪಂಡಿತನ ವಂಶದವರಾದ ಇವರು ಕ್ರಿಸ್ತಾಬ್ದ 1008ರ ಸುಮಾರಿಗೆ ಶ್ರೀಶೈಲ ಸೂರ್ಯ ಸಿಂಹಾಸನವನ್ನೇರಿ ಅಲ್ಲಿ ಅನುಭವ ಮಂಟಪವನ್ನು ವ್ಯವಸ್ಥೆಮಾಡಿ (ಜೇಡರ) ದಾಸಮಯ್ಯ, ಡೋಹರ ಕಕ್ಕಯ್ಯ, ಮಾದರ ಚೆನ್ನಯ್ಯ, ಉದ್ಭಟಯ್ಯ, ಸಿರಿಯಾಳ ಮೊದಲಾದ ಸಂತರ ಚೇತನಗಳನ್ನು ಪಕ್ವ ಮಾಡಿದರು. ಇವರೆಲ್ಲ ಬಸವಣ್ಣನವರಿಗೆ ಪೂರ್ವದ ಶರಣರು, ಪ್ರಸ್ತುತ ವೀರಶೈವ ಧರ್ಮದ ನೆಲೆಯನ್ನು ನಿರ್ಧರಿಸಲು ನೆರವಾದವರು.

ಅದು ಚೋಳರಾಜನಾಗಿದ್ದ ರಾಜೇಂದ್ರನ (1006-1064) ಕಾಲ, ಅವನ ತಂದೆ ರಾಜರಾಜ ಚೋಳನು ಇಡೀ ದಕ್ಷಿಣ ದೇಶದಲ್ಲೆಲ್ಲ ತನ್ನ ಪ್ರಭಾವವನ್ನು ಬೀರಿ ಚೋಳಮಂಡಲದ ವಿಸ್ತಾರವನ್ನು ಬಹುಮಟ್ಟಿಗೆ ಹಿಗ್ಗಿಸಿದ್ದನು. ರಾಜೇಂದ್ರ ಚೋಳನು ಚಂದ್ರಗುಂಡಾಚಾರ್ಯರ ಪ್ರಭಾವಕ್ಕೆ ವಶನಾಗಿ ಅವರನ್ನು ಬಹುವಾಗಿ ಸನ್ಮಾನಿಸಿದ್ದನೆಂದು ತಿಳಿದುಬರುತ್ತದೆ. ಆಚಾರ್ಯರು ಚೋಳಮಂಡಲದಲ್ಲೆಲ್ಲ ಸಂಚಾರ ಮಾಡುತ್ತ ಕೋಲಾರ ಜಿಲ್ಲೆಯ ಗುಯ್ಯ-ಲೂರಿಗೆ (ಗೂಳೂರಿಗೆ) ಬಂದು ಅಲ್ಲಿನ ಸ್ನಿಗ್ಧಸುಂದರ ವಾತಾವರಣಕ್ಕೆ ಮನಸೋತು ಅಲ್ಲಿಯೇ ಇರಲು ಮನಸ್ಸು ಮಾಡಿದಾಗ, ರಾಜೇಂದ್ರ ಚೋಳನು ಅವರಿಗಾಗಿ ಅಲ್ಲಿಯೇ ಮಠವೊಂದನ್ನು ಕಟ್ಟಿಸಿಕೊಟ್ಟನಂತೆ.

ಚಂದ್ರಗುಂಡರು ಇಲ್ಲಿಯೇ ಇರುತ್ತಿದ್ದರಾಗಿ ಇದಕ್ಕೆ ಗೂಳೂರು ಶ್ರೀಶೈಲ ಮಠವೆಂದು ಹೆಸರು ಬಂದಿತು. ಅವರ ಗದ್ದುಗೆಯು ಇದೇ ಮಠದಲ್ಲಿದೆ.

ಅಂದಿನಿಂದ ಈ ಪುಣ್ಯಪುರುಷರ ತಪಃಸಾಮರ್ಥ್ಯವೇ ಸಂಸ್ಥಾನದ ಸಂಪತ್ತಾದ ಕಾರಣ ಪಂಡಿತಾರಾಧ್ಯರ ಈ ಮಠಕ್ಕೆ ಚಂದ್ರಗುಂಡಮಠವೆಂದೇ ಹೆಸರಾಯಿತು. ಮುಂದಿನ ಪೀಠಾಧಿಪತಿಗಳಾದ ಕರಿವೃಷಭದೇಶೀಕೇಂದ್ರರು ಪೆನುಗೊಂಡೆ ತಾಲ್ಲೂಕಿನ ನಿಡುಮಾಮಿಡಿಯೆಂಬಲ್ಲೇ ಇರುತ್ತಿದ್ದುದರಿಂದ ಇದೇ ಮಠಕ್ಕೆ ನಿಡುಮಾಮಿಡಿ ಮಠವೆಂದೂ ಹೆಸರು ಬಿದ್ದಿತು. ಮುಂದೆ ಮುಮ್ಮಡಿ ಕೃಷ್ಣ ರಾಜ ಒಡೆಯರವರು ಮೈಸೂರು ರಾಜರಾಗಿದ್ದಾಗ (1775-1815) ಈ ಮಠದ ಇಮ್ಮಡಿ ಕರಿ ವೃಷಭದೇಶಿಕೇಂದ್ರರು ನಿಡುಮಾಮಿಡಿಯನ್ನು ಬಿಟ್ಟು ಗೂಳೂರಿಗೇ ಹಿಂದಿರುಗಿ ಅದನ್ನೇ ತಮ್ಮ ಕೇಂದ್ರಸ್ಥಳವನ್ನಾಗಿ ಮಾಡಿಕೊಂಡರು.

ಪಂಡಿತರಾಧ್ಯ ಪರಂಪರೆ

ಇಂದು ಶ್ರೀಶೈಲ ಸೂರ್ಯಸಿಂಹಾಸನದ ಪೀಠ ಗೂಳೂರಿನಲ್ಲಿಯೇ ಇದೆ. ಪಂಡಿತಾರಾಧ್ಯ ಪರಂಪರೆಗೆ ಇದೊಂದು ಕೇಂದ್ರ. ಸುಮಾರು ಎಂಬತ್ತು ಶಾಖಾ ಮಠಗಳ ನಿರ್ವಹಣೆ ಇಲ್ಲಿಂದಲೇ ನಡೆಯುತ್ತದೆಯಂತೆ. ಬಾಗೇಪಲ್ಲಿಯಿಂದ ಐದು ಮೈಲು ದೂರದಲ್ಲಿರುವ ಗೂಳೂರು ಹಳ್ಳಿಯಾಚೆ ವಿಸ್ತಾರವಾದ ಕೆರೆಯೊಂದಿದ್ದು ಅದರ ಏರಿಯ ಮೇಲೆ ಮಠವನ್ನು ಕಟ್ಟಿಸಿದ್ದಾರೆ. ನಿಸರ್ಗ ಸುಂದರವಾದ ಪ್ರದೇಶವಿದು. ಸುತ್ತಮುತ್ತ ಕಣ್ಣು ಓಡುವಷ್ಟು ದೂರವೂ ಮಠಕ್ಕೆ ಸೇರಿದ ಭೂಮಿಯೇ. ದೂರದಲ್ಲಿ ನಿಂತ ಗುಡ್ಡಗಳೇ ಇದಕ್ಕೆ ಅಡ್ಡಿ. ಮಠದ ಸುತ್ತ ಭದ್ರವಾದ ಕೋಟೆಯಿದೆ. ದೂರದಿಂದಲೇ, ನಿಧಿನಿಕ್ಷೇಪ ಮಾಡುತ್ತಿದ್ದ ಬುರುಜು ಎದ್ದು ಕಾಣುತ್ತದೆ. ಮಠವು ಒಂದು ಕಾಲಕ್ಕೆ ಸಂಪದ್ಭರಿತವಾಗಿದ್ದಿತು; ಸುಭದ್ರ ವಾಗಿರಬೇಕಾಗಿದ್ದ ಅಗತ್ಯವಿದ್ದಿತು. ಕೋಟೆಯ ಮಹಾದ್ವಾರದಿಂದ ಒಳ ಹೊಕ್ಕು ಎಡಪಕ್ಕಕ್ಕೆ ತಿರುಗಿದರೆ ಮಠ. ಮಠಕ್ಕೆ ಹೊಂದಿಕೊಂಡಂತೆ ವೀರ ಭದ್ರದೇವರ ಗುಡಿ: ಹಿಂದೆ ಮಠದ ಗುರುಗಳ ಗೋತ್ರ ಪುರುಷನಾದ ನಂದಿಯ ಮಂಟಪ, ಪುರಾತನ ವೀರಭದ್ರಾಲಯ, ಪಕ್ಕದಲ್ಲಿ ಹಿಂದಿನ ಗುರುಗಳ ಗದ್ದುಗೆ ಗಳು.

ಇಲ್ಲಿನ ವೀರಭದ್ರ ದೇವಸ್ಥಾನ ಸ್ವಾರಸ್ಯವಾಗಿದೆ. ಈ ಮಠದವರಿಗೆ 'ಪ್ರಳಯ ಕೋಳಾಹಳವೇ ಜೋಗುಳ'ವೆನಿಸಿದ ವೀರಭದ್ರನೇ ಆರಾಧ್ಯ ದೈವ.

'ಪಂಡಿತಾರಾಧ್ಯ ಚರಿತ್ರೆ"ಯನ್ನು ತೆಲುಗಿನಲ್ಲಿ ಬರೆದ ಪುಲ್ಲ ಕವಿಯು ಗ್ರಂಥಾರಂಭದಲ್ಲಿ ಸಂಸ್ಕೃತ ಮಂಗಳವನ್ನು ಮಾಡಿದ್ದಾನೆ-

ಜಯತು ಜಗದಶೇಷತ್ರಾಣಪಾರೀಣ ಲೀಲಾ
ಮಹಿಮ ವಿಜಯವಂದೀಭೂತಧಾತ್ರಾದಿ ಭೇದ:
ಭರಿತವಿಭವಕೇಳೀ ಭದ್ರಕಾಳೀಕುಚಾಗ್ರ-
ಸ್ಥಗಿತ ಮುರಮುದ್ರೋ ವೀರಭದ್ರೋ ದಯಾಳುಃ ॥

ಕನ್ನಡನಾಡಿನಲ್ಲಿ ವೀರಭದ್ರನ ಪ್ರಾಚುರ್ಯಹೆಚ್ಚು. ನಾಡಿನ ಎಲ್ಲೆಡೆಯೂ ವೀರಭದ್ರಾಲಯಗಳಿವೆ. ಹನುಮಂತ, ವೀರಭದ್ರ, ಗಣೇಶ, ಸುಬ್ರಹ್ಮಣ್ಯನ ಗುಡಿಗಳಿಲ್ಲದ ಹಳ್ಳಿಯೇ ವಿರಳ. ಆದರೆ ಉತ್ತರ ದೇಶದಲ್ಲಿ ವೀರಭದ್ರನ ಕೀರ್ತಿ ಅಷ್ಟಾಗಿ ಇಲ್ಲ. ದಕ್ಷಾಧ್ವರಧ್ವಂಸಕಾರಿಯೆಂದೂ, ಹರಕಾರ್ಯಸಾಧಕನೆಂದೂ ಪುರಾಣ ಹೇಳುತ್ತದೆ. ಆದರೆ ವೀರಶೈವ ಪಂಥದ ಅಭಿಮಾನಿ ದೇವತೆಯೆಂಬುದು ನಮ್ಮ ನಾಡಿನಲ್ಲಿ ಮಾತ್ರ ಪ್ರಚಲಿತವಾಗಿರುವ ಕಲ್ಪನೆ. ಶೈವಾಮ್ನಾಯಗಳ ತೌರೂರೆಂದು ಕೀರ್ತಿವೆತ್ತ ಶ್ರೀಶೈಲದಲ್ಲಿಯೂ ವೀರಭದ್ರನಿಗೆ ಅಷ್ಟಾಗಿ ಪುರಸ್ಕಾರವಿಲ್ಲ. ಅಲ್ಲಿನ ನಾಗಲೂಟಿ ವೀರಭದ್ರನು ಪುರಾತನ ದೇವತೆಯೇ ಆದರೂ ಶ್ರೀಗಿರಿ ಮಲ್ಲಿಕಾರ್ಜುನನ ಮುಂದೆ ಅವನು ಮಿಣಕುಹುಳವೇ; ಶ್ರೀಶೈಲದ ಇನ್ನೊಬ್ಬ ವೀರಭದ್ರನಿಗೆ ಆಲಯವೇ ಇಲ್ಲ; ಅವನು ಬಯಲು ವೀರಭದ್ರ. ಅವನಿಗೆ ಗುಡಿ ಕಟ್ಟಬಾರದೆಂಬ ನಿಯಮದ ಐತಿಹ್ಯವೂ ಸ್ವಾರಸ್ಯವಾದುದು. ಹನುಮಂತನಂತೆ ವೀರಭದ್ರನೂ ಕನ್ನಡಿಗರ ಕುಲದೇವತೆ ಕನ್ನಡನಾಡಿಗೆ ವಿಶಿಷ್ಟಮೂರ್ತಿ.

ವೀರಭದ್ರ

ಗೂಳೂರು ದೇವಾಲಯದ ಗರ್ಭಗುಡಿಯಲ್ಲಿರುವ ವೀರಭದ್ರದೇವರು ಐದಡಿಯುಷ್ಟಿರುವ ಸ್ಥಾನಕ ಶಿಲಾಮೂರ್ತಿ. ನಾಲ್ಕು ಕೈಗಳು, ಬಲಗೈಯಲ್ಲಿ ಹಿರಿದ ಕತ್ತಿ, ಎಡಗೈಯಲ್ಲಿ ಊರಿನಿಂತ ಹಲಗೆಕತ್ತಿ ಅಥವಾ ಗುರಾಣಿ, ಬಲ ಮೇಲ್ಗೈಯಲ್ಲಿ ಬಾಣ, ಎಡ ಮೇಲ್ಗೈಯಲ್ಲಿ ಬಿಲ್ಲು. ಬಲಪಾರ್ಶ್ವದಲ್ಲಿ ದಕ್ಷ

ಅಂಜಲಿಬದ್ಧನಾಗಿ ನಿಂತಿದ್ದಾನೆ. ಮೂರ್ತಿಯ ಸುತ್ತ ಸಿಂಹಲಲಾಟದ ಸರಳ ಪ್ರಭಾವಳಿ. ಕಿರೀಟಪಟ್ಟದಲ್ಲಿ ಲಿಂಗವಿದೆ. ಉದರ ಬಂಧದಲ್ಲಿ ಸಿಂಹಮುಖವಿದೆ. ಆಜಾನುಮಾಲೆಯ ಮುಂಭಾಗದಲ್ಲಿ ಮಾತ್ರ ಮೂಡಿಸಿರುವ ನಾಲ್ಕೈದು ರುಂಡಗಳು; ಭಂಗಿ ಉಗ್ರವಾದರೂ ಮುಖದಲ್ಲಿ ಮಂದಹಾಸವಿದೆ.

ಶಿಲ್ಪದ ಶೈಲಿ ನಿರ್ವಿವಾದವಾಗಿ ಮಧ್ಯಯುಗದ್ದು. ಮೂರ್ತಿಯ ಮುಂಭಾಗದಲ್ಲಿ ಊರ್ಧ್ವಲಿಂಗ ಅಥವಾ ಸ್ಥಾಣುಲಿಂಗದಂತಿರುವ ಕಲ್ಲುಗುಂಡು; ಇದು ತಾನಾಗಿ ರೂಪಗೊಂಡ ಸ್ವಯಂಭುಲಿಂಗವೆಂದು ಪ್ರತೀತಿ. ಇದಕ್ಕೆ ಯೋನಿಪೀಠ ಮುಂತಾದ ಅಂಗಗಳಿಲ್ಲ. ವೀರಭದ್ರಮೂರ್ತಿ ಪ್ರಾಚೀನವಾದುದೋ ಈ ಸ್ವಯಂಭುಲಿಂಗ ಪ್ರಾಚೀನವಾದುದೋ ಹೇಳುವುದು ಕಷ್ಟ. ನಿರ್ದಿಷ್ಟ ರೂಪವಿಲ್ಲದ, ಶಿಲ್ಪಿಯು ಕೈಯಾಡಿಸದ ಬಂಡೆಗಲ್ಲುಗಳನ್ನೇ ದೇವತೆಗಳೆಂದು ಬಗೆದು ದೇಗುಲಗಳನ್ನು ಕಟ್ಟಿಸಿ, ಅನಂತರ ಆಗಮೋಕ್ತವಾದ ಸ್ವರೂಪಗಳಲ್ಲಿ ಮೂಡಿಸಿದ ವಿಗ್ರಹಗಳನ್ನು ಅವುಗಳ ಮುಂದೆಯೋ ಹಿಂದೆಯೊ ನಿಲ್ಲಿಸುವ ವಾಡಿಕೆಯೇನೋ ಇದೆ. ಮಾಗಡಿ ತಾಲ್ಲೂಕಿನ ಸುಗ್ಗನ ಹಳ್ಳಿಯ ನರಸಿಂಹ, ಅದೇ ತಾಲ್ಲೂಕಿನ ತಿರುಮಲೆಯ ರಂಗನಾಥ, ಮಧುಗಿರಿ ತಾಲ್ಲೂಕಿನ ದೊಡ್ಡದಲವಟ್ಟದ ಲಕ್ಷ್ಮೀನರಸಿಂಹ, ತುಮಕೂರು ಜಿಲ್ಲೆಯ ಬೇಚಿರಖ್ ರಂಗಪುರದ ರಂಗಸ್ವಾಮಿ, ಚನ್ನಗಿರಿ ತಾಲ್ಲೂಕಿನ ದೇವರಹಳ್ಳಿಯ ರಂಗನಾಥ ಹೀಗೆ ಹಲವಾರು ನಿದರ್ಶನಗಳುಂಟು. ಇಲ್ಲೆಲ್ಲ ಮೂಲ ಮೂರ್ತಿಗಳು ಬರಿಯ ಕಲ್ಲುಗುಂಡುಗಳು. ಅವಕ್ಕೆ ಕಿರೀಟ, ವಜ್ರಾಂಗಿ, ಶಂಖ-ಚಕ್ರಗಳನ್ನಿಟ್ಟು ಪೂಜೆ ಸಲ್ಲಿಸುತ್ತಾರೆ. ಹೀಗೆಯೇ ಗೂಳೂರಿನಲ್ಲಿ ಈ ಸ್ವಯಂಭುಲಿಂಗ ಪುರಾತನವಾದದ್ದಿರಬಹುದು. ಕಾಲಕ್ರಮದಲ್ಲಿ ವೀರಭದ್ರಮೂರ್ತಿ ಅದರ ಹಿಂಬದಿಯಲ್ಲಿ ನಿಂತು ತಾನೇ ಪ್ರಮುಖ ದೇವರಾಗಿರಬಹುದು.

ಈ ವೀರಭದ್ರನನ್ನು ಕುಮಾರ ವೀರಭದ್ರನೆನ್ನುತ್ತಾರೆ. ಇಲ್ಲಿನ ವೀರಭದ್ರ ಮೂರ್ತಿಯ ಬದಿಯಲ್ಲಿ ಭದ್ರಕಾಳಿಯು ಇಲ್ಲದೇ ಇರುವುದರಿಂದ, ಮೂರ್ತಿಯು ಏಕಾಕಿಯಾಗಿರುವುದರಿಂದ ಈ ಹೆಸರು ಬಂದಿರಬಹುದು. ಅಥವಾ ಶಿವಕುಮಾರನಾದ ಕುಮಾರನನ್ನೂ ಸೇರಿಸಿ ಈ ಮೂರ್ತಿಯ ಕಲ್ಪನೆ ಮೂಡಿಕೊಂಡಿರಬಹುದು. ಆದರೆ ಈ ವಿಗ್ರಹದಲ್ಲಿ ಸುಬ್ರಹ್ಮಣ್ಯನ ಲಕ್ಷಣಗಳಾಗಲೀ ಲಾಂಛನ

ಗಳಾಗಲೀ ಏನೂ ಇಲ್ಲ. ಮೈಸೂರು ಸೀಮೆಯ ಹಲವೆಡೆ ಬೆಟ್ಟಗಳ ಮೇಲೆ ವೀರಭದ್ರಾಲಯವಿದ್ದೆಡೆ ಸ್ಕಂದ (ಅಥವಾ ಸುಬ್ರಹ್ಮಣ್ಯ)ನ ಆಲಯವೂ ಇರುತ್ತದೆ. ಈ ಪದ್ಧತಿಯ ಪ್ರಭಾವ ಇಲ್ಲಿ ಎಷ್ಟು ಮೂಡಿದೆಯೋ ತಿಳಿಯದು.

ಗರ್ಭಗುಡಿ

ಗರ್ಭಗುಡಿ ಸಣ್ಣದು; ಬಾಗಿಲಿಲ್ಲ. ಅದರ ಮೇಲೆ ಗಾರೆಗಚ್ಚಿನ ವಿಮಾನ ವಿದೆ. ಗರ್ಭಗುಡಿಯ ಮುಂದೆ ಇಕ್ಕಟ್ಟಾದ ಅಂತರಾಳವಿದೆ. ಅದರ ಮುಂದೆ ಸುಖನಾಸಿ, ಬಾಗಿಲ ಬಳಿಯೇ ನಂದಿ. ನವರಂಗದಲ್ಲಿ ಆರು ಕಂಬಗಳು. ಒಂದೊಂದು ಕಂಬಕ್ಕೂ ನಾಲ್ಕು ಮುಖ, ಒಂದೊಂದು ಮುಖದಲ್ಲೂ ಸೂರ್ಯ ಫಲಕಗಳು. ನವರಂಗದಲ್ಲಿರುವ ಕಂಬಗಳ ಮೇಲೆ ಸುಮಾರು ಐವತ್ತು ಸ್ವಾರಸ್ಯ ವಾದ ಫಲಕ ಶಿಲ್ಪಗಳಿವೆ. ಇವುಗಳಲ್ಲಿ ಮಠದ ಪ್ರಾಚೀನ ಗುರುಗಳ ವ್ಯಕ್ತಿಚಿತ್ರ ಗಳನ್ನು ಕಡೆದಿರುವುದೊಂದು ವಿಶೇಷ. ಕನ್ನಡನಾಡಿನ ಮಠಗಳಲ್ಲಿ ಈ ಬಗೆಯ ಐತಿಹಾಸಿಕ ಶಿಲ್ಪಗಳಿರುವುದು ವಿರಳ.

ಬಲಗಂಬದ ಕಂಬದಲ್ಲಿ ಮಧ್ಯ ಫಲಕವೊಂದು ಈ ಮಠದ ಪ್ರವರ್ತಕ ಪುರುಷರೆನಿಸಿದ ಚಂದ್ರಗುಂಡ ಶಿವಾಚಾರ್ಯರು ತಮ್ಮ ತಪಸ್ಸಿನ ಪ್ರಭಾವ ದಿಂದಾಗಿ ತೆಂಗಿನ ಮರದಿಂದ ಫಲಭಿಕ್ಷೆ ಪಡೆದ ಪ್ರಸಂಗವನ್ನು ನಿರೂಪಿಸುತ್ತದೆ. ಶಿರೋಪಟ್ಟ ಸ್ವಾರಸ್ಯವಾಗಿದೆ. ಕುಲಾವಿಯಂತೆ ಕಂಡರೂ ಕೇಶಬಂಧ ಅದು. ಶಿವನು ಜಟಾಧಾರಿಯೆಂದೂ, ಅವನ ಭಕ್ತರಾದ ಗುಡ್ಡದ ಜನರೂ ಜಡೆಗೊಂಡೆ ಗಳನ್ನು ಧರಿಸುತ್ತಿದ್ದರೆಂದೂ ವಿವರಣೆ. ಇಲ್ಲಿರುವ ಆರು ಮಂದಿ ಪ್ರಾಚೀನ ಆಚಾರ್ಯರ ಚಿತ್ರಣಗಳಲ್ಲೂ ಜಟೆಗಳನ್ನು ತೋರಿಸಿದ್ದಾರೆ. ಜಟೆಯನ್ನು ವಸ್ತ್ರ ದಿಂದ ಅಚ್ಚುಕಟ್ಟಾಗಿ ಕಟ್ಟಿಕೊಳ್ಳುವ ಪದ್ಧತಿಯೂ ಮುನಿಗಳಲ್ಲಿದ್ದಿತು. ಈಗಲೂ ಉತ್ತರ ದೇಶದಲ್ಲಿದೆ. ಉಷ್ಣೀಷದಂತೆ ತೋರುವ ಇಂಥ ಶಿರೋಪಟ್ಟ ಇಲ್ಲಿನ ಶಿಲ್ಪಗಳಲ್ಲಿವೆ. ಕಂಠಮಾಲೆ, ಕಂಕಣ, ಬಾಹುವಲಯ, ಉದರಬಂಧ, ಧೋತರ ಬಹಿರ್ವಾಸಗಳನ್ನು ಇಲ್ಲಿ ನಿರ್ದೇಶಿಸಿದ್ದಾರೆ. ನೊಸಲಲ್ಲಿ ಎಲ್ಲರಿಗೂ ಪೂರ್ಣ ಚಂದ್ರನಂತಿರುವ ಚಂದನ ಲಾಂಛನವಿದೆ, ಭಸ್ಮತ್ರಿಪುಂಡ್ರವಿಲ್ಲ. ಕೊರಳಲ್ಲಿ ಯಾರಿಗೂ ಲಿಂಗವಿದ್ದಂತೆ ಕಾಣುವುದಿಲ್ಲ. ಕುಳಿತವರು ಎಡಗೈಯಲ್ಲಿ ಲಿಂಗವನ್ನು

ಹಿಡಿದು ಬಲಗೈಯಿಂದ ಮರೆ ಮಾಡಿದ್ದಾರೆ. ಲಿಂಗಧಾರಣೆಯು ಪ್ರಚಲಿತವಾಗುವ ಮುನ್ನ ಬಾಳಿದ ಶಿವಾಚಾರ್ಯರ ಪ್ರತಿಕೃತಿಗಳಿವು ಎನ್ನಬಹುದೇ.

ಸ್ಥಾನಕಭಂಗಿಯಲ್ಲಿ ಇರುವ ಮುನಿಯೊಬ್ಬರು ಬಲಗೈಯಲ್ಲಿ ತ್ರಿಶೂಲ ವನ್ನೂ, ಎಡಗೈಯಲ್ಲಿ ಯತಿ ದಂಡವನ್ನೂ ಹಿಡಿದು ನಿಲುವಂಗಿ (ಕಫಿನಿ) ಯನ್ನು ಧರಿಸಿ ಜಟಾಬಂಧವನ್ನು ಮೂಡಿಸಿಕೊಂಡಂತಿದೆ. ಈ ಮೂರ್ತಿ ಯಾರೆಂದು ನಿರ್ದೇಶಿಸುವುದು ಕಷ್ಟ. ಶ್ರೀಗಳವರು ಇದನ್ನು ಮಠದ ಮೂಲ ಗುರುಗಳೆನ್ನು ತ್ತಾರೆ. ಈ ಮೂರ್ತಿಯು 'ಭಲ್ಲೂಕದಂಡ ಹಸ್ತರ್, ಗುಡ್ಡ-ಧ್ವಜರ್' ಎಂಬ ಶೈವ ಯತಿಗಳ ಹಳೆಯ ವರ್ಣನೆಯನ್ನು ನೆನಪಿಗೆ ತರುತ್ತದೆ. ಗಿರಿಮಲ್ಲಯ್ಯನ ಭಕ್ತರು ಗುಡ್ಡಗಾಡಿನ ಜನ ಹೀಗೆಯೇ ಇದ್ದರೋ ಏನೋ.

ನವರಂಗದ ಸ್ತಂಭವೊಂದರಲ್ಲೇ ಇರುವ ದ್ವಿಭುಜ ವೀರಭದ್ರನ ಶಿಲ್ಪ ಸ್ವಾರಸ್ಯವಾಗಿದೆ. ಬಲಗೈಯಲ್ಲಿ ಹಿರಿದ ಕತ್ತಿ; ಎಡಗೈಯಲ್ಲಿ ಗುರಾಣಿ; ಶಿರೋಪಟ್ಟ, ಮುನಿಗಳಿಗಿದ್ದಂತೆ. ಮುಖಮುದ್ರೆ ಶಾಂತ, ಗಂಭೀರ. ಲಲಾಟದಲ್ಲಿಪೂರ್ಣಾಕಾರದ ಚಂದನ ಲಾಂಛನ. ವೀರಭದ್ರನಿಗೆ ಸಾಮಾನ್ಯವಾಗಿ ಇರುವ ಉಗ್ರ ರೂಪ, ಅನೇಕ ಭುಜಗಳು, ರುಂಡಮಾಲೆ ಮುಂತಾದ ಲಕ್ಷಣಗಳು ಯಾವುವೂ ಇಲ್ಲಿ ಕಾಣಬರುವುದಿಲ್ಲ. ಉಟ್ಟ ಪಂಚೆ, ತೊಟ್ಟ ಆಭರಣ, ಕಟ್ಟಿದ ತಲೆಗೂದಲಿನಿಂದ, ಇದು ದೇವತಾಮೂರ್ತಿಯಲ್ಲವೆನ್ನುವುದು ಸ್ಪಷ್ಟವಾಗುತ್ತದೆ. ಆದರೆ ವೀರಭದ್ರನೆಂದು ತಟ್ಟನೆ ಭಾಸವಾಗುತ್ತದೆ. ಎಂದರೆ ಈ ಮೂರ್ತಿ ಯಾರು ? ಈ ಜಿಜ್ಞಾಸೆಯಿಂದ ವೀರಭದ್ರನೆಂಬುವನು ಪ್ರಾಚೀನವಾದ ವೀರಶೈವ ಮತ ಪ್ರವರ್ತಕನಾಗಿರಬಹುದೆಂಬ ಊಹೆ ಬಲವಾಗುತ್ತದೆ. ಇದಕ್ಕೆ ಗೂಳೂರಿನ ಶಿಲ್ಪ ನೆರವಾಗುತ್ತದೆ.

ವೀರಶೈವ ಸಂಪ್ರದಾಯದಲ್ಲಿ ಬಸವೇಶ್ವರರಿಗೆ ಮುಂಚೆ, ಎಂದರೆ ಬಿಜ್ಜಳನ ಕಾಲವಾದ 1157-1167ರ ಮುಂಚೆ, ಆಚಾರ್ಯ ಪುರುಷರು ಹಲವಾರು ಮಂದಿ ಆಗಿ ಹೋದರೆಂಬುದು ನಿರ್ವಿವಾದ. ಬಸವಣ್ಣನವರು ಮತ ಪ್ರವರ್ತಕರಲ್ಲ, ಮತ ಸಂಸ್ಕರ್ತರು ಮಾತ್ರ. ಇವರಿಗೆ ಬಹು ಹಿಂದೆಯೇ ಎಂದರೆ ಸುಮಾರು ಕ್ರಿಸ್ತಾಬ್ದ ಒಂದೆರಡು ಶತಮಾನಗಳಲ್ಲೇ, ವೀರಶೈವ ಆಮ್ನಾಯವು ಪ್ರವರ್ತಿತವಾಯಿತೆನ್ನಲು ಆಧಾರವುಂಟು. ಆದರೆ ವೀರಶೈವ ವೆಂಬ ಪದಪ್ರಯೋಗವೇನೋ ರೇಣುಕಶಿವಯೋಗಿಗಳ 'ಸಿದ್ಧಾಂತ ಶಿಖಾಮಣಿ' ಯೆಂಬ ಹತ್ತು ಹನ್ನೊಂದನೆಯ ಶತಮಾನದ ಗ್ರಂಥದಲ್ಲಿ ಮೊಟ್ಟಮೊದಲಿಗೆ ಬರುತ್ತದೆ. ಪ್ರಖ್ಯಾತ ಪಂಡಿತರಾದ ಸುರೇಂದ್ರನಾಥ ದಾಸಗುಪ್ತರು ಅವಲೋಕಿಸಿ ಉಲ್ಲೇಖಿಸಿದ ಹಸ್ತಲಿಖಿತ ಗ್ರಂಥವೊಂದರಲ್ಲಿ ವೀರಶೈವ ಗುರು ಪರಂಪರೆಯನ್ನು ಹೀಗೆ ನಿರೂಪಿಸಿದ್ದಾರೆ-ವಿಶ್ವೇಶ್ವರ ಗುರು, ಏಕೋರಾಮ, ವೀರೇಶಾರಾಧ್ಯ, ವೀರಭದ್ರ, ವೀರಣಾರಾಧ್ಯ, ಮಾಣಿಕ್ಯಾರಾಧ್ಯ, ಬುಚ್ಚಯ್ಯಾ-ರಾಧ್ಯ, ವೀರಮಲ್ಲೇಶಾಚಾರ್ಯ, ದೇಶಿಕಾರಾಧ್ಯ, ವೃಷಭ, ಅಕ್ಷಕ, ಮುಖ-ಲಿಂಗೇಶ್ವರ. ಈ ಪರಂಪರೆಯಲ್ಲಿ ವೀರಭದ್ರನ ಹೆಸರಿರುವುದು ಗಮನಾರ್ಹ. ವೀರಭದ್ರನು ಪ್ರಾಚೀನ ಆಚಾರ್ಯರಲ್ಲಿ ಒಬ್ಬನೆಂದು ಪ್ರತೀತಿಯೂ ಇದೆ.

ಗೂಳೂರು ಮಠದಿಂದ 1816ರಲ್ಲಿ ಶ್ರೀ ಮರಿಕರಿಬಸವಸ್ವಾಮಿಗಳು ಕಳುಹಿಸಿದ ಶ್ರೀ ಮುಖವೊಂದರಲ್ಲಿ 'ನಮ್ಮ ಮಠದ ಶಿಷ್ಯರಾದ ಕುಮಾರ ವೀರಭದ್ರ ದೇವರಿಗೆ" ರಥೋತ್ಸವವಾಗಬೇಕೆಂಬ ಮಾತು ಬರುತ್ತದೆ. ಈ ಪ್ರಸ್ತಾಪ ಸ್ವಾರಸ್ಯವಾಗಿದೆ. ಮಠದ ಹಿಂಭಾಗದಲ್ಲಿ ಗುಹೆಯಂತಿರುವ ಸಣ್ಣ

ಮಂಟಪವೊಂದರಲ್ಲಿ ಗುಂಡುವೀರಭದ್ರನ ಉದ್ಭವ ಮೂರ್ತಿಯನ್ನು ತೋರಿಸುತ್ತಾರೆ. ಬಂಡೆಯೊಂದರ ಮೇಲೆ ಅಸ್ಪಷ್ಟವಾಗಿ ದ್ವಿಭುಜ ವ್ಯಕ್ತಿಯೊಬ್ಬನ ರೂಪ ಮೂಡಿಬಂದಿದೆ. ಆಯುಧವಾಗಲೀ, ಆಭರಣವಾಗಲೀ ಇಲ್ಲ. ಈ ಮಠದ ನವರಂಗ ಶಿಲ್ಪಗಳಲ್ಲಿರುವಂತೆ ಯಾವ ಶಿರೋಪಟ್ಟವಾಗಲೀ, ಕೇಶ ಬಂಧವಾಗಲೀ, ಕಿರೀಟವಾಗಲೀ, ವಸ್ತ್ರವಿನ್ಯಾಸವಾಗಲೀ ಕಾಣಬರುವುದಿಲ್ಲ. ಯತಿಸಹಜವಾದ ಮುಂಡನ, ಗುಂಡುತಲೆ ಇಲ್ಲಿ ಎದ್ದು ಕಾಣುತ್ತದೆ. ಇದು ತುಂಬ ಪ್ರಾಚೀನವಾದ ಶಿಲ್ಪ (?) ವೆನ್ನುವುದು ನಿರ್ವಿವಾದ. ಬಹುಶಃ ಗೂಳೂರು ಮಠದ ಮೂಲವೀರಭದ್ರಮೂರ್ತಿ ಇದೇ ಇದ್ದೀತು.

ಇದನ್ನು ಆಕಾರದಿಂದಲೂ ಭಂಗಿಯಿಂದಲೂ ಕುಮಾರನೆಂದರೆ ಒಪ್ಪೀತು. ಅಷ್ಟಲ್ಲದೆ ಪುಲ್ಲಕವಿಯ ಪಂಡಿತಾರಾಧ್ಯಚರಿತ್ರೆಯಲ್ಲಿ ಗೂಳೂರು ಮಠದ ಕುಮಾರ ವೀರಭದ್ರ ಮೂರ್ತಿಯನ್ನು ಆದ್ಯರಾದ ಚಂದ್ರಗುಂಡಾಚಾರ್ಯರು ಪ್ರತಿಷ್ಠೆ ಮಾಡಿದರೆಂದು ದ್ವಿತೀಯಾಶ್ವಾಸದಲ್ಲೂ, ಅವರಿಗೆ ಮೂರನೆಯ ತಲೆಯವರಾದ ಇಮ್ಮಡಿ ಕರಿಬಸವ ಸ್ವಾಮಿಗಳು (1289-1339) ಪ್ರತಿಷ್ಠೆ ಮಾಡಿದರೆಂದು ಸಪ್ತಮಾಶ್ವಾಸದಲ್ಲೂ ಹೇಳಿದೆ. ಈ ವಿರೋಧವನ್ನು ಪರಿಹರಿಸಲು ಚಂದ್ರಗುಂಡರು ಗುಂಡುವೀರಭದ್ರನನ್ನೂ ಇಮ್ಮಡಿ ಕರಿಬಸವ ಸ್ವಾಮಿಗಳು ದೇವಾಲಯದ ಗರ್ಭಗುಡಿಯಲ್ಲಿರುವ ವೀರಭದ್ರನನ್ನೂ ಪ್ರತಿಷ್ಠೆ ಮಾಡಿಸಿದರೆಂದು ಹೇಳಬಹುದು. ಚಂದ್ರಗುಂಡರಿಂದ ಪ್ರತಿಷ್ಠೆ ಮಾಡಲ್ಪಟ್ಟ ನಂದಿಯೂ ಗುಂಡುವೀರಭದ್ರಗುಡಿಯ ಮುಖಮಂಟಪಕ್ಕೆ ಸೇರಿದಂತೆಯೇ ಇದೆ. ಅಷ್ಟಲ್ಲದೆ, ಸ್ಥಳದ ಐತಿಹ್ಯವು ಗೂಳೂರು ಕೆರೆಯಿಂದ ವೃಷಭೇಶ್ವರನು ಎದ್ದು ಚಂದ್ರಗುಂಡರ ಮುಂದೆ ಬಂದು ನಿಂತು ಅವರಿಂದ ವೀರಶೈವ ತತ್ವದ ಬೋಧೆ ಪಡೆದನೆಂದೂ, ಅನಂತರ ಅವರಿಂದ ಅಲ್ಲಿಯೇ ವೀರಭದ್ರನಿಗೂ ತತ್ತ್ವೋಪದೇಶವಾಯಿತೆಂದೂ ಹೇಳುತ್ತದೆ. ಈ ಕಾರಣದಿಂದ ವೀರಭದ್ರನು "ಮಠದ ಶಿಷ್ಯ."

ಹೀಗೆ ಚಂದ್ರಗುಂಡರಿಂದ ಉಪದೇಶ ಪಡೆದ ವೀರಭದ್ರನು ಐತಿಹಾಸಿಕ ವ್ಯಕ್ತಿಯಾಗಿರಲಾರನೆ ? ಕಡೂರು ಜಿಲ್ಲೆಯ ಬಾಳೆಹಳ್ಳಿಯಲ್ಲಿ ಪಂಚಾಚಾರ್ಯ

ರಲ್ಲಿ ಅಗ್ರರಾದ ರೇಣುಕಾಚಾರ್ಯರ ವೀರಸಿಂಹಾಸನವಿದೆಯಷ್ಟೆ. ಅಲ್ಲಿ ಅವರ ಗದ್ದುಗೆಯಿಲ್ಲ. ಅವರ ಮಗನಾದ ರುದ್ರಮುನಿಯ ಗದ್ದುಗೆಯಿದೆ; ರುದ್ರ ಮುನಿಗೆ ಪೂಜೆ ಸಲ್ಲುತ್ತದೆ. ಮಠಕ್ಕೆ ಸೇರಿದಂತೆ ವೀರಭದ್ರಾಲಯವಿದೆ.

ಶಿವಗಂಗೆಯಲ್ಲಿ ಮೇಲುಗವಿಮಠವೆಂಬ ರೇಣುಕ ಮಠದ ಶಾಖಾಮಠ ವಿದೆ. ಈ ಮಠಕ್ಕೆ ಸೇರಿದಂತೆ ರುದ್ರಮುನಿಯ ಗುಹೆಯೊಂದಿದೆ. ಇಲ್ಲಿರುವ ರುದ್ರಮುನಿಯ ಚತುರ್ಭುಜ ಮೂರ್ತಿ ಒಂದೂವರೆ ಅಡಿಯಷ್ಟು ಎತ್ತರವಿದ್ದು ರುಂಡಮಾಲೆ ಧರಿಸಿದೆ. ಅಲ್ಲಿಯೇ ಪಾತಾಳ ಗಂಗಾ ತೀರ್ಥಕ್ಕೆ ಹೋಗುವ ದಾರಿಯಲ್ಲಿ ದೊಡ್ಡ ಬಂಡೆಯೊಂದರಲ್ಲಿ ಇದೇ ಆಧಾರದ ಒಂಬತ್ತಡಿ ಮೂರ್ತಿ ಯೊಂದನ್ನು ಕಡೆದಿದ್ದಾರೆ; ಇದು ವೀರಭದ್ರನೆಂದು ನಿರ್ದೇಶಿಸುತ್ತಾರೆ. ಚಿಕ್ಕ ನಾಯಕನ ಹಳ್ಳಿಯಲ್ಲಿ ರುದ್ರಮುನಿಯ ಗುಡಿಯೊಂದಿದೆ; ಅದರಲ್ಲಿರುವ ದೇವತೆ ವೀರಭದ್ರ; ಇಲ್ಲಿ ಭದ್ರಕಾಳಿಯೂ ಇದ್ದಾಳೆ. ಎಂದರೆ ದೇವತೆ ಯೆಂದು ಪರಿಗಣಿತನಾದರೂ ರುದ್ರಮುನಿಯು ರೇಣುಕಾಚಾರ್ಯರ ಮಗನಾಗಿ ಮನುಷ್ಯನಷ್ಟೆ. ರುದ್ರಮುನಿಗೂ ವೀರಭದ್ರನಿಗೂ ನಿಕಟವಾದ ನೆಂಟಿರುವುದು ಮೇಲಿನ ನಿದರ್ಶನಗಳಿಂದ ವ್ಯಕ್ತವಾಗುತ್ತದೆ. ರೇಣುಕರೊಂದಿಗೆ ರುದ್ರ ಮುನಿಯೂ ಒಮ್ಮೆ ಶ್ರೀಶೈಲಕ್ಕೆ ಬಂದಿದ್ದು ಪಂಡಿತಾರಾಧ್ಯರಿಂದ ಸತ್ಕೃತನಾದ ನೆಂದು 'ರೇಣುಕ ವಿಜಯ'ದಲ್ಲಿ ಹೇಳಿದೆಯಂತೆ. ಪ್ರಕೃತ, ಈ ರುದ್ರಮುನಿಯೇ ವೀರಭದ್ರನ ಕಲ್ಪನೆಗೆ ಆಕರನೆನ್ನಬಾರದೆ? ಇದೊಂದು ಊಹೆ ಮಾತ್ರ. ತಿಳಿದವರು ಬಿಡಿಸಬೇಕಾದ ತೊಡಕು.

ಅಭಿಮಾನಿ ದೇವತೆ

ಅಂತೂ ಗೂಳೂರು ಮಠಕ್ಕೆ ವೀರಭದ್ರನೇ ಅಭಿಮಾನಿ ದೇವತೆ. ಲೇಪಾಕ್ಷಿಯ ವೀರಭದ್ರಾಲಯವನ್ನು ಕಟ್ಟಿಸಿದ ವೀರಣ-ವಿರೂಪಣ್ಣ ಸಹೋ ದರರು ಈ ಮಠದ ಶಿಷ್ಯರೇ. ಹಂಪಿಯ ಉದ್ದಾನ ವೀರಭದ್ರನನ್ನು ಪ್ರತಿಷ್ಠೆಮಾಡಿಸಿದವರು ಈ ಮಠದ ಗುರುಗಳೇ. ಗೂಳೂರು ಗುಡಿಯ ನವ ರಂಗದಲ್ಲಿ ವೀರಭದ್ರ, ಭದ್ರಕಾಳಿಯರ ಹಿತ್ತಾಳೆಯ ಉತ್ಸವಮೂರ್ತಿಗಳನ್ನಿಟ್ಟಿ ದ್ದಾರೆ. ನವರಂಗದಲ್ಲಿ ಎರಡನೇ ಸಾಲಿನ ಬಲಗಂಬವೊಂದರ ಮೇಲೆ ಹಂಸ

ನಾಟ್ಯವೆನ್ನಲಾದ ಶಿಲ್ಪವೊಂದಿದೆ. ಹಿಂಭಾಗ ಹಂಸದೇಹ. ಮುಂಭಾಗ ನಡುವಿನವರೆಗೆ ಮನುಷ್ಯದೇಹ. ಬಲಗೈಯಲ್ಲಿ ಯತಿದಂಡವಿರುವುದು ಸ್ಪಷ್ಟ ವಾಗಿದೆ. ಮುಖದಲ್ಲಿ ಮಂದಹಾಸ, ಲಲಾಟಲಾಂಛನವಿಲ್ಲ. ತಲೆಯ ಮೇಲೆ ಸರಳವಾದ ಪ್ರಾಚೀನ ರೀತಿಯ ಕರಂಡಮುಕುಟ. ಇದು ಪರಮಹಂಸ ಯತಿಯ ಚಿತ್ರಣವೆಂದು ತೋರುತ್ತದೆ. ಇದು ವೀರಶೈವ ಧರ್ಮದ ಬೆಳ ವಣಿಗೆಯಲ್ಲಿ ಒಂದು ಹಂತವನ್ನು ನಿರ್ದೇಶಿಸುತ್ತದೆಯೆ ?

ಒಂದು ಕಾಲಕ್ಕೆ ವೀರಶೈವ ಧರ್ಮವು ವೈದಿಕ ವ್ಯಾಪ್ತಿಯಲ್ಲಿಯೇ ಇದ್ದಿತು. ಹರಿಭದ್ರಸೂರಿಯ 'ಷಡ್ದರ್ಶನ ಸಮುಚ್ಚಯ'ಕ್ಕೆ ವ್ಯಾಖ್ಯೆ ಬರೆದು ಪ್ರಸಿದ್ಧನಾದ ಗುಣರತ್ನನು ಶೈವರು, ಪಾಶುಪತರು, ಮಹಾವ್ರತಧರರು (ಕಾಪಾಲಿಕರು ?) ಮತ್ತು ಕಾಳಾಮುಖರು ಎಂಬ ನಾಲ್ಕು ಬಗೆಯ ಶೈವಸಂಪ್ರ ದಾಯಗಳನ್ನು ಹೇಳಿ ಇವರೆಲ್ಲರೂ ವೈದಿಕರೆಂದು ಸೂಚಿಸಿದ್ದಾನೆ. ಆದರೆ ರಾಮಾನುಜರ ಕಾಲಕ್ಕೆ, ಎಂದರೆ ಹನ್ನೊಂದನೆಯ ಶತಮಾನಕ್ಕೆ, ಕಾಳಾ ಮುಖರೂ ಕಾಪಾಲಿಕರೂ ವೇದಬಾಹ್ಯರೆನಿಸಿಕೊಂಡಿದ್ದರು; ಶೈವರೂ ಪಾಶು ಪತರೂ ವೇದವನ್ನು ಒಪ್ಪಿ ಶಿಷ್ಟರೆಂದು ಪರಿಗಣಿಸಲ್ಪಟ್ಟಿದ್ದರು. ಪಾಶುಪತ ಸೂತ್ರಗಳೂ, ಕಾಮಿಕಾಗಮದಿಂದ ವಾತುಲಾಗಮದವರೆಗೂ ಶೈವಾಗಮಗಳೂ ಶ್ರುತಿಸಮ್ಮತವಾಗಿಯೆ, ಸಿದ್ಧವಾಗಿದ್ದವು.

ಶ್ರೀಕಂಠ ಶಿವಾಚಾರ್ಯರೂ ಶ್ರೀಪತಿ ಪಂಡಿತರೂ ಬ್ರಹ್ಮಸೂತ್ರಗಳಿಗೆ ಶೈವಪರವಾದ ಭಾಷ್ಯ ಬರೆದು ವೈದಿಕ ಧರ್ಮವನ್ನೇ ಪುಷ್ಟಿಗೊಳಿಸಿದರು. ಶ್ರೀಕಂಠಶಿವಾಚಾರ್ಯರು ತಮ್ಮ ಗ್ರಂಥದ ಆರಂಭದಲ್ಲಿ 'ವ್ಯಾಸಸೂತ್ರಮಿದಂ ನೇತ್ರಂ ವಿದುಷಾಂ ಬ್ರಹ್ಮದರ್ಶನೇ, ಪೂರ್ವಾಚಾರ್ಯೈಃ ಕಲುಷಿತಂ ಶ್ರೀ ಕಂಠೇನ ಪ್ರಸಾದ್ಯತೇ" ಎಂದೇ ಪ್ರತಿಜ್ಞೆ ಮಾಡಿದರು. ಈ ನಿಲುವು ಗೂಳೂರಿನ ಶಿಲ್ಪಗಳಲ್ಲಿ ಕಾಣುತ್ತದೆ. ಅಲ್ಲಿನ ಗುರುಗಳ ಭಂಗಿ, ವೇಷ-ಭೂಷ, ದಂಡ ಮುಂತಾದುವು ಇದನ್ನು ಸೂಚಿಸುತ್ತವೆ.

ತ್ರಿಶೂಲವನ್ನೂ ಎಡಗೈಯಲ್ಲಿ ಯತಿದಂಡವನ್ನೂ ಹಿಡಿದು ನಿಂತಿರುವು

ದರ ಪ್ರಸ್ತಾಪ ಮೊದಲೇ ಬಂದಿತು. ತ್ರಿಶೂಲಧಾರಿಯಾದ ಇನ್ನೊಬ್ಬ ಮುನಿಯ ಶಿಲ್ಪವೂ ಇಲ್ಲಿದೆ. ಸಾಂಕೇತಿಕವಾದ ಅರ್ಥವಾದರೂ ಇದು ವೀರಶೈವ ಪಂಥದ ವೀರ್ಯವನ್ನುಸೂಚಿಸುತ್ತದೆ. 'ಸಿದ್ಧಾಂತ ಶಿಖಾಮಣಿ'ಯು ಪ್ರಾಚೀನವೆಂದು ಉದ್ಧರಿಸಿರುವ 'ಶಿವನಿಂದಾಕರಂ ದೃಷ್ಟ್ವಾ ಘಾತಯೇದಥವಾ ಶಪೇತ್ ಎಂಬ ಮಾತು ಈವೀರ ನಿಲುವನ್ನೇ ಹೇಳುತ್ತದೆ. ದಕ್ಷಯಜ್ಞವನ್ನು ಧ್ವಂಸ ಮಾಡಿದ ವೀರಭದ್ರನ ಕಲ್ಪನೆ ವೈದಿಕವಾದ ಅಗ್ನಿಹೋತ, ಹೋಮ, ಹವನಾದಿ ವಿಧಿಗಳನ್ನು ಖಂಡಿಸುವ ಮನೋಧರ್ಮದ ಆಳದಿಂದಲೇ ಬಂದದ್ದು. ಈ ವೀರಾವೇಶವು ಪ್ರಾಚೀನ ಶೈವ ಧರ್ಮದಲ್ಲಿ ಇದ್ದುದರಿಂದಲೇ ಆನಂದಗಿರಿಯ 'ಶಂಕರವಿಜಯ'ದಲ್ಲಿ, ಶೈವ, ಜಂಗಮಗಳಲ್ಲದೆ ರೌದ್ರ, ಉಗ್ರ ಶೈವ ಪಂಥಗಳೂ ಪ್ರಚಲಿತವಾಗಿದ್ದುದು ತಿಳಿದು ಬರುತ್ತದೆ.

ನವರಂಗ

ನವರಂಗದಲ್ಲಿ ಆರು ಕೈಗಳ ಸಂಧ್ಯಾ ತಾಂಡವ, ದ್ವಿಭುಜ ಕಂಕಾಳ ಮೂರ್ತಿ, ಬಲಗಾಲನ್ನು ಮೇಲೆತ್ತಿ ಕುಣಿಯುತ್ತಿರುವ ನಟರಾಜ. ಉಮಾಲಿಂಗನಮೂರ್ತಿ, ವೃಷಭಾರೂಢ ದಿವ್ಯ ದಂಪತಿಗಳು, ಬೇಡರ ಕಣ್ಣಪ್ಪ, ವೀರಭದ್ರ, ಭದ್ರಕಾಳಿ ಮುಂತಾದ ಮನೋಜ್ಞವಾದ ಶಿಲ್ಪಗಳನ್ನು ಮಾಡಿದ್ದಾರೆ. ಇವೆಲ್ಲ ಚೋಳರ ಕಾಲದ ಶಿಲ್ಪ. ನವರಂಗವನ್ನು ಪ್ರವೇಶಿಸುವ ಇಕ್ಕೆಲದ ಕಂಬಗಳಲ್ಲಿ ಚೋಳರಾಜನ, ರಾಣಿಯ ಭಕ್ತಮೂರ್ತಿಗಳನ್ನು ಕಡೆದಿದ್ದಾರೆ. ಹಜಾರದ ಉಳಿದ ಕಂಬಗಳ ಮೇಲೆ ರಾಜಪರಿವಾರವನ್ನು ಅಂಜಲಿಬದ್ಧ ಭಂಗಿಯಲ್ಲಿಯೇ ಬಿಡಿಸಿದ್ದಾರೆ.

ನವರಂಗದ ಮುಂದಿರುವ ವಿಶಾಲವಾದ ಹಜಾರವು ಮೊದಲಿಗೆ ಮುಖಮಂಟಪವಾಗಿದ್ದಂತೆ ತೋರುತ್ತದೆ. ಅದನ್ನು ಮಠವನ್ನಾಗಿ ಉಪಯೋಗಿಸುತ್ತಾರೆ. ಅದರ ಮೇಲ್ಭಾಗದಲ್ಲಿ ಅರ್ವಾಚೀನ ಶೈಲಿಯ ಗೋಡೆಗಳನ್ನೆಬ್ಬಿಸಿ ಕೋಣೆಗಳನ್ನು ಮಾಡಿಕೊಂಡಿದ್ದಾರೆ. ಮಠದ ಸಾರಸ್ವತ ಭಂಡಾರ, ಸಭಾಭವನ, ಶ್ರೀಗಳವರ ಬಿಡಾರ ಎಲ್ಲವೂ ಮೇಲೆ.

ಕೆಳಬಂಡೆಯ ಮೇಲೆ ಧನುರ್ಧಾರಿಯಾದ ಪುರುಷನೊಬ್ಬ ಶಿವಲಿಂಗದೆಡೆ ನಡೆದಿರುವ ಶಿಲ್ಪವಿದೆ. ಇದನ್ನು ಕಿರಾತಾರ್ಜುನೀಯ ಪ್ರಸಂಗವೆಂದು ನಿರ್ದೇಶಿಸುತ್ತಾರೆ. ಆದರೆ ಬೇಡರ ಕಣ್ಣಪ್ಪನಿದ್ದಂತಿದೆ. ಇಂಥದೇ ಶಿಲ್ಪ ಚಿಕ್ಕನಾಯಕನಹಳ್ಳಿಯ ಕಣ್ಣಪ್ಪನ ಗುಡಿಯಲ್ಲಿದೆ. ಲಿಂಗದ ಪಕ್ಕದಲ್ಲಿ ಇಬ್ಬರು ದಂಡಧಾರಿಗಳೂ ಕರಲಿಂಗಧಾರಿಗಳೂ ಆದ ಪುರುಷರು ನಿಂತಿದ್ದಾರೆ. ಈ ಬಂಡೆಯ ಪಕ್ಕದಲ್ಲೇ ಸಣ್ಣ ಶಿಲಾಫಲಕವೊಂದಿದೆ. ಇದರಲ್ಲಿ ಲಿಂಗದೆಡೆ ಬಿಜಯ ಮಾಡುತ್ತಿರುವ ವೃಷಭಾರೂಢ ಪಾರ್ವತೀಪರಮೇಶ್ವರರು, ಹಿಂದೆ ಧ್ವಜವನ್ನು ಹಿಡಿದು ಹಿಂಬಾಲಿಸುತ್ತಿರುವ ವೈತಾಳಿಕನ ಶಿಲ್ಪವಿದೆ.

ನಂದಿ

ಇದೇ ಸಾಲಿನಲ್ಲಿ ಚಂದ್ರಗುಂಡರಿಗೆ ಕಾಣಿಸಿಕೊಂಡ ನಂದಿಯ ಮೂರ್ತಿಯಿದೆ. ಒಂಬತ್ತು ಕಂಬಗಳ ಮಂಟಪದಲ್ಲಿ ಸುಮಾರು ಎಂಟಡಿ ಉದ್ದ, ಐದೂವರೆ ಅಡಿ ಎತ್ತರದ ನಂದಿಯನ್ನು ಏಕಾಂಡ ಶಿಲೆಯಲ್ಲಿ ಕಡೆದಿದ್ದಾರೆ. ಮುಖ ಸ್ವಲ್ಪ ಚಪ್ಪಟೆಯೆನಿಸಿದರೂ ಭಂಗಿ ಭವ್ಯವಾಗಿದೆ. ಈ ಮಠದ ಗುರುಗಳು ವೃಷಭ ಗೋತ್ರದವರಾದ್ದರಿಂದ ನಂದಿಗೆ ಇಲ್ಲಿ ವಿಶೇಷವಾದ ಪ್ರಾಶಸ್ತ್ಯವುಂಟು. ನಂದಿ ಮಂಟಪದಿಂದ ನಡೆದರೆ ಮೇಲೆ ಹೇಳಿದ ಗುಂಡು ವೀರಭದ್ರನ ಗುಡಿಯಿದೆ.

ಪ್ರದಕ್ಷಿಣೆಯ ಬಲಭಾಗದಲ್ಲಿ ಮಠದ ಮೂಲ ಪುರುಷರಾದ ಪಂಡಿತಾರಾಧ್ಯರ ಸನ್ನಿಧಿ, ಆದ್ಯರಾದ ಚಂದ್ರಗುಂಡ ಶಿವಾಚಾರ್ಯರ ಗದ್ದುಗೆ, ಮತ್ತೆ ಕೆಲವು ಹಿಂದಿನ ಗುರುಗಳ ಗದ್ದುಗೆಗಳು, ಪ್ರಾಚೀನವಾದ ಚಂದ್ರಮೌಳೇಶ್ವರನ ಗುಡಿ ಇವೆ. ಎರಡಂಕಣದ ಈ ಸಣ್ಣ ಗುಡಿಯು ಚಂದ್ರಗುಂಡರು ಇಲ್ಲಿಗೆ ಬರುವ ಮೊದಲೇ ಇದ್ದಂತೆ ತಿಳಿದು ಬರುತ್ತದೆ.

ವೀರಭದ್ರನ ಗುಡಿಗೆದುರಾಗಿ ನೆಟ್ಟಿರುವ ಶಿಲಾ ದೀಪಸ್ತಂಭವು ಈಗ ಕೋಟೆ ಪ್ರಾಕಾರದ ಹೊರಗೆ, ಮಹಾದ್ವಾರದ ಎಡಪಾರ್ಶ್ವದಲ್ಲಿದೆ. ಅಂತೂ

ಕನ್ನಡನಾಡಿನ ಗುರುಪೀಠಗಳಲ್ಲಿ ಪ್ರಮುಖವೆನಿಸಿದ ಗೂಳೂರು ಶ್ರೀ ಶೈಲ ಮಠದ ಶಿಲ್ಪಸಂಪತ್ತು ವಿಶಿಷ್ಟವಾಗಿದೆ; ಶೈವ ಧರ್ಮದ ಮುನ್ನೋಟದ ಹಲವು ಹಂತಗಳನ್ನು ಮೂಡಿಸಿಕೊಂಡು ನಿಂತಿರುವ ಈ ಗುಡಿ ಹೇಳಬೇಕಾದ ಕಥೆ ತುಂಬ ಸ್ವಾರಸ್ಯವಾದುದು. ಪ್ರಸ್ತುತ ಪೀಠಾಧಿಪತಿಗಳಾದ ಶ್ರೀ ಚನ್ನ ಬಸವರಾಜ ದೇಶಿಕೇಂದ್ರರು (ಶ್ರೀ ಜ. ಚ. ನಿ. ಯವರು) ಜಿಜ್ಞಾಸುಗಳು, ಕುತೂಹಲಿಗಳು, ಕಲಾಭಿಮಾನಿಗಳು, ವಿದ್ವಾಂಸರು ಆಗಿರುವುದು ಇಲ್ಲಿನ ಶಿಲ್ಪ ಗೋಷ್ಠಿ ಬಾಯ್ಬಿಡಲು ಸಹಾಯಕವಾಗುತ್ತದೆ.

ಮಹಾಸಿದ್ಧರ ಸಿರಿನೆಲೆ

ಮೊದಲಿನ ಪುದುಕ್ಕೋಟೆ ಸಂಸ್ಥಾನಕ್ಕೆ ಸೇರಿದಂತೆ ಕೊಳತ್ತೂರು ತಾಲೂಕಿನ ನಾತ್ತಾರ್ಮಲ್ಲೈ ಫಿರ್ಕಾದಲ್ಲಿ ಶಿತ್ತನವಾಶಲ್ ಒಂದು ಹಳ್ಳಿ. ಅದರ ಜನಸಂಖ್ಯೆ ಸುಮಾರು ಐನೂರು ಅಷ್ಟೆ. ಅಜಂಟಾ ಚಿತ್ರಶೈಲಿಯ ಪರಂಪರೆಯಲ್ಲೇ ಬಂದ ಚಿತ್ರಣಕ್ಕೆ ಇದು ಪ್ರಸಿದ್ಧವಾದ ಸ್ಥಳ.

ಶಿತ್ತನವಾಶಲ್ ಎನ್ನುವ ಹೆಸರು 'ಶಿತ್ತು-ಅಣ್ಣಲ್-ವಾಯಿಲ್' ಎನ್ನುವ ಮಾತಿನ ಅಪಭ್ರಂಶ. 'ಶಿತ್ತು' ಎಂದರೆ ಸಿದ್ಧ, ಜೈನರಲ್ಲಿ ಶ್ರೇಷ್ಠ ತರಗತಿಯ ಸಂತ; 'ಅಣ್ಣಲ್' ಎಂದರೆ ಗೌರವಾಸ್ಪದನಾದವನು, ಮಹಾನ್; 'ವಾಶಲ್' ಎಂದರೆ ಬಾಗಿಲು. ಶಿತ್ತನವಾಶಲ್ ಎಂದರೆ 'ಮಹಾಸಿದ್ಧರ ಬಾಗಿಲು' ಅಥವಾ ಅವರ ವಾಸಸ್ಥಳ. ಒಂದು ಕಾಲದಲ್ಲಿ ಇಲ್ಲಿ ಜೈನ ಸಂಪ್ರದಾಯಕ್ಕೆ ಸೇರಿದ ಸಿದ್ಧರು ಇರುತ್ತಿದ್ದರು. ಈ ಸ್ಥಳಕ್ಕೆ ಮೊದಲು ಚಿತ್ತುಪ್ಪೋಶಿಲ್ ಎನ್ನುವ ಹೆಸರಿದ್ದಂತೆ ತೋರುತ್ತದೆ. ಕ್ರಿಸ್ತಪೂರ್ವ ಎರಡನೆಯ ಶತಮಾನದ ಬ್ರಾಹ್ಮೀಲಿಪಿಯ (ಆದರೆ ತಮಿಳು ಭಾಷೆಯ) ಶಾಸನವೊಂದು ಈ ಹೆಸರನ್ನೇ ಬಳಸಿದೆ.

ಇಷ್ಟು ಪ್ರಾಚೀನವಾದ ಸ್ಥಳ ಇದು. ಸಾವಿರಾರು ವರ್ಷಗಳವರೆಗೆ ಜೈನಸಾಧುಗಳು ಇಲ್ಲಿಗೆ ಬಂದು ತಪಶ್ಚರ್ಯೆಯನ್ನು ನಡೆಸುತ್ತಿದ್ದರು. ಕ್ರಿಸ್ತಪೂರ್ವ ಮೂರನೆಯ ಶತಮಾನದಿಂದ ಕ್ರಿಸ್ತಾಬ್ದ ಒಂಬತ್ತನೆಯ ಶತಮಾನದವರೆಗೆ ಜೈನರಿಗೆ ಪವಿತ್ರವಾದ ಪ್ರದೇಶವಾಗಿದ್ದಿತು. ಇದಕ್ಕೆ ಸುತ್ತಮುತ್ತ ಇರುವ ಅಮ್ಮಾಚತ್ರ, ಶೆಟ್ಟಿಪಟ್ಟಿ (ಇಲ್ಲಿನ ಸಮಣರ್ ಕುಂಡು), ಕಣ್ಣಂಗಡಿ,

ಮಂಗತ್ತೈವನ್‌ಪಟ್ಟಿ. ನಾತ್ತಾರ್ಮಲೈ ಬೆಟ್ಟಗಳು (ಆಳುರುಟ್ಟಿಮಲೈ, ಮಲ-ಮಲೈ, ಶಮಣರ್ ಮಲೈ) ಮೊದಲಾದುವು ಜೈನ ಕ್ಷೇತ್ರಗಳೇ ಆಗಿದ್ದವು. ಅದರಲ್ಲಿಯೂ ನಾರ್ತಾಮಲೈ ಬೆಟ್ಟಸಾಲಿನಲ್ಲಿ ಹಲವಾರು ಪಳ್ಳಿಗಳು (ಎಂದರೆ ಜೈನ ದೇಗುಲಗಳು), ತೀರ್ಥಂಕರ ವಿಗ್ರಹಗಳು, ಜೈನ ಗುಹೆಗಳು ಉಳಿದಿವೆ. ತಿರುಪ್ಪಳ್ಳಿ ಮಲೈ ಎಂಬಲ್ಲಿ ಧರ್ಮದೇವ ಆಚಾರ್ಯ ಮತ್ತು ಕನಕಚಂದ್ರ ಪಂಡಿತ ಎಂಬಿಬ್ಬರು ಜೈನ ಗುರುಗಳಿದ್ದ ಉಲ್ಲೇಖವಿದೆ.

ಏಳಡಿಪಟ್ಟಂ

ಇಲ್ಲಿನ ಬೆಟ್ಟಸಾಲನ್ನು ಮೂರು ವಿಭಾಗವಾಗಿ ವಿಂಗಡಿಸುವ ವಾಡಿಕೆಯಿದೆ: ಏಳಡಿ ಪಟ್ಟಂ, ನವಚ್ಚುನೈ ಮತ್ತು ಅರಿವರ್ ಕೋಯಿಲ್ ಇವೇ ಈ ಮೂರು ವಿಭಾಗಗಳು. ಬೆಟ್ಟದ ಮಧ್ಯಭಾಗದಲ್ಲಿ ಪೂರ್ವದ ಕಡೆ ಇರುವ ಗುಹೆ ಏಳಡಿ ಪಟ್ಟಂ ಎನಿಸಿಕೊಳ್ಳುತ್ತದೆ; ಇದು ನಿಸರ್ಗಸಿದ್ಧವಾದ ಗುಹೆ. ಬೆಟ್ಟದ ಮೇಲ್ಭಾಗದಲ್ಲಿದೆ; ಪೂರ್ವಕ್ಕೆ ಮುಖ ಮಾಡಿದ್ದರೂ ಅದನ್ನು ಮುಟ್ಟಬೇಕಾದರೆ ಪಶ್ಚಿಮದಿಂದಲೇ ಹೋಗಬೇಕು. ಅದೂ ಇಕ್ಕಟ್ಟಾದ ಒಂದು ಬಂಡೆಯಲ್ಲಿ ಏಳು ಮೆಟ್ಟಲುಗಳನ್ನು ಕಡೆದಿರುವ ದಾರಿಯಿಂದಲೇ ಹೋಗಬೇಕು. ಈ ಏಳು ಹೆಜ್ಜೆ ಅಥವಾ ಮೆಟ್ಟಲುಗಳಿಂದಲೇ ಅದಕ್ಕೆ 'ಏಳಡಿ' (ಏಳು ಅಡಿ) ಎಂಬ ಹೆಸರಾಗಿರುವುದು.

ಗುಹೆ ವಿಶಾಲವಾಗಿದೆ, ಆದರೆ ಕುಳ್ಳು. ನೆಲದ ಭಾಗದಲ್ಲಿ ಹದಿನೇಳು ಕಲ್ಲಿನ ಹಾಸಿಗೆಗಳಿಗೆ ಅನುಕೂಲವಾಗುವಂತೆ ಗೆರೆಗಳನ್ನು ಹಾಕಿ ವಿಂಗಡಿಸಿದ್ದಾರೆ. ಒಂದೊಂದು ವಿಭಾಗದಲ್ಲಿಯೂ ಕಲ್ಲಿನ ದಿಂಬೊಂದು ಇದೆ. ಈ ವಿಭಾಗಗಳಲ್ಲಿ ತುಂಬ ದೊಡ್ಡದಾದುದು ತುಂಬ ಪ್ರಾಚೀನವಾದುದೂ ಹೌದು. ಇಲ್ಲಿಯೇ ಮೇಲೆ ಹೇಳಿದ ಬ್ರಾಹ್ಮೀಲಿಪಿಯ ಶಾಸನವಿರುವುದು. ಶಾಸನದ ಭಾಷೆ ಹಳೆಗಾಲದ ತಮಿಳು. ಇದು ಕ್ರಿಸ್ತಪೂರ್ವ ಎರಡನೆಯ ಶತಮಾನದ್ದೆಂದು ಭಾಷಾ ವಿಜ್ಞಾನಿಗಳು ನಿರ್ಧರಿಸಿದ್ದಾರೆ. ಆ ವಿಭಾಗದಲ್ಲಿರುವ ಕಲ್ಲಿನ ಹಾಸಿಗೆಯನ್ನು ಒಯ್ಯನಾಡಿನ ಕುಮ್ಮತ್ತೂರು ಹಳ್ಳಿಯವನಾದ ಕಾವಿಡಿ ಈತೆನ್ ಎಂಬ ಸಾಧುವಿನ ತಪಶ್ಚರ್ಯೆಗೆಂದು ಚಿತ್ತುಪ್ಪೋಶಿಲ್ (ಎಂದರೆ ಶಿತ್ತನ

ವಾಶಲ್) ಗ್ರಾಮದ ಇಳೆಯ್ಯಾರ್ ಎಂಬಾತನು ಮಾಡಿಸಿದುದೆಂದು ಶಾಸನ ಹೇಳುತ್ತದೆ. ಒಯ್ಯನಾಡೆಂಬುದು ಈಗಿನ ತಿಂಡಿವನಂ ಸುತ್ತುಮುತ್ತ ಇರುವ ಪ್ರದೇಶ; ಇದಕ್ಕೆ ಎರುಮೂನಾಡು ಎಂದೂ ಹೆಸರಿದ್ದಿತು.

ಇತರ ವಿಭಾಗಗಳಲ್ಲಿ ಇತರ ಜೈನ ಸಾಧುಗಳು ತಪಶ್ಚರ್ಯೆ ಮಾಡಿದಂತೆ ಶಾಸನಗಳಿವೆ; ಇವು ಕ್ರಿಸ್ತಾಬ್ದ ಏಳೆಂಟನೆಯ ಶತಮಾನಗಳಿಗೆ ಸೇರಿದ ಬರಹಗಳು. ಜೈನ ಸಾಧುಗಳಲ್ಲಿ ಹಲವಾರು ಬಗೆಯ ತಪಶ್ಚರ್ಯೆಗಳು ವಾಡಿಕೆಯಲ್ಲಿವೆ. ಅವುಗಳಲ್ಲಿ ಒಂದು ಸಲ್ಲೇಖನ ಅಥವಾ ಸಮಾಧಿಮರಣ ಎನ್ನುವುದು. ಕಡೆಗಾಲದಲ್ಲಿ ಅಥವಾ ರೋಗಗ್ರಸ್ತನಾದಾಗ ಸಾಧುವು ಅನ್ನಾಹಾರಗಳನ್ನು ಬಿಟ್ಟು ಸತತವಾದ ಧರ್ಮಧ್ಯಾನದಲ್ಲಿ ನಿರತನಾಗಿ ದೇಹವನ್ನು ಇಡುವುದು ಸಲ್ಲೇಖನವ್ರತ. ಇದಕ್ಕೆ ಶ್ರಾವಕರಾದವರು ಅನುಕೂಲಗಳನ್ನು ಮಾಡಿಕೊಡುತ್ತಿದ್ದರು. ನಮ್ಮ ಸೀಮೆಯ ಶ್ರವಣಬೆಳಗೊಳದಲ್ಲಿ ಚಿಕ್ಕಬೆಟ್ಟದ (ಚಂದ್ರಗಿರಿ) ಮೇಲೆ ಕೂಡ ಇಂಥ ಅನುಕೂಲಗಳನ್ನು ಕಾಣಬಹುದು. ಅಂತೂ ಏಳಡಿಪಟ್ಟಂ ಒಂದು ಸಾವಿರ ವರ್ಷಗಳಿಗೂ ಮೇಲ್ಪಟ್ಟು ಜೈನಸಾಧುಗಳಿಗೆ ಸಲ್ಲೇಖನ ಸ್ಥಳವಾಗಿದ್ದಂತೆ ತಿಳಿದುಬರುತ್ತದೆ.

ನವಚ್ಚುನೈ

ಏಳಡಿಪಟ್ಟಂಗೆ ಉತ್ತರ ಭಾಗದಲ್ಲಿ, ಕೊಂಚ ಕೆಳಗಣ ನೆಲೆಯಲ್ಲಿ ದೊಣೆಯೊಂದು ಕಾಣಸಿಗುತ್ತದೆ. ಇದೂ ಬೆಟ್ಟದ ಪೂರ್ವ ದಿಕ್ಕಿನ ಇಳಿಜಾರಿನಲ್ಲಿಯೇ ಇದೆ. ಎರಡೂ ಕಡೆ ಬಂಡೆಗಳಿದ್ದು, ನಡುವೆ ಬಂಡೆಯಿಂದಲೇ ಕಡೆದ ಒಂದು ದೇಗುಲವಿದೆ. ಈ ದೇಗುಲದ ಮಧ್ಯಭಾಗದಲ್ಲಿ ಈಗ ಒಂದು ಶಿವಲಿಂಗವಿದ್ದು ಸುತ್ತಲೂ ಇಕ್ಕಾಟ್ಟಾದ ಒಂದು ಪ್ರದಕ್ಷಿಣಾಪಥವಿದೆ. ಈ ದೇಗುಲವು ದೊಣೆಯಲ್ಲಿ ಮುಳುಗಿಯೇ ಇರುತ್ತದೆ ; ಆಗಾಗ ನೀರನ್ನು ಹೊರಗೆ ತೆಗೆದು ಹಾಕಿ, ಲಿಂಗವನ್ನು ಪೂಜೆ ಮಾಡುತ್ತಾರೆ. ದೊಣೆಯ ಹತ್ತಿರವೇ ಒಂದು ನೇರಳೆ ಮರವಿದೆ. ನೇರಳೆ ಮರಕ್ಕೆ ತಮಿಳಿನಲ್ಲಿ ನಾವಲ್ ಎಂದು ಹೆಸರಿದ್ದು ಈ ಕೊಳಕ್ಕೂ ಅದೇ ಹೆಸರುಬಂದಿದೆ. ಇದು ಶೈವರು ಪ್ರಬಲವಾದಾಗ ಮೂಡಿಬಂದ ಗುಡಿ. ಜೈನರಿಗೂ ಇದಕ್ಕೂ ಸಂಬಂಧವಿದ್ದಂತೆ ತೋರುವುದಿಲ್ಲ.

ಅರ್ಹತರ ಗುಡಿ

ಶಿತ್ತನವಾಶಲ್ ಪ್ರದೇಶದಲ್ಲಿ ಮುಖ್ಯವಾದುದೆಂದರೆ 'ಅರಿವರ್ ಕೋಯಿಲ್'. ಈ ಮಾತಿಗೆ 'ಅರ್ಹತರ ಗುಡಿ' ಎಂದರ್ಥ. ನಡುವಣ ಬಂಡೆಯ ಪಶ್ಚಿಮ ಇಳಿಜಾರಿನಲ್ಲಿ ಇರುವ ಈ ಗುಡಿ ಗುಹಾ ದೇಗುಲ; ಬಂಡೆಯಲ್ಲಿಯೇ ಕಡೆದುದು. ಇದು ಪಲ್ಲವ ರಾಜನಾದ ಮೊದಲನೆಯ ಮಹೇಂದ್ರವರ್ಮ ಕಡೆಯಿಸಿದುದೆಂದು ತಿಳಿದುಬರುತ್ತದೆ ; ಇದರ ಕಾಲ ಕ್ರಿಸ್ತಾಬ್ದ ಏಳನೆಯ ಶತ ಮಾನ. ಈ ರಾಜನು ಶೈವಧರ್ಮಾನುಯಾಯಿಯಾಗುವ ಮೊದಲು ಜೈನನೇ ಆಗಿದ್ದನು; ಜೈನನಾಗಿದ್ದಾಗ ಈ ಗುಡಿಯ ನಿರ್ಮಾಣವಾಗಿರಬಹುದು. ಗುಹೆ ಯನ್ನು ಮುಟ್ಟಲು ಸುಮಾರು ಒಂದು ನೂರು ಅಡಿಯಷ್ಟು ಬಂಡೆಯನ್ನು ಹತ್ತಬೇಕಾಗುತ್ತದೆ; ಬಂಡೆಯೇನು ಕಡಿದಾದುದಲ್ಲ, ಹತ್ತುವುದು ಸುಲಭ.

ಈ ಗುಹಾ ದೇಗುಲದ ರಚನೆ ಆ ಕಾಲದ ಇತರ ಗುಹಾ ದೇಗುಲ ಗಳಂತೆಯೇ ಇದೆ. ಗರ್ಭಗುಡಿ ಏಳೂವರೆ ಅಡಿ ಎತ್ತರವಿದ್ದು ಹತ್ತಡಿ ಚಚ್ಚೌಕ ವಾಗಿದೆ; ಮುಂದಿನ ಅರ್ಧಮಂಟಪ ಇಪ್ಪತ್ತೆರಡು ಅಡಿ ಉದ್ದ, ಏಳೂವರೆ ಅಡಿ ಅಗಲ, ಎಂಟೂವರೆ ಅಡಿ ಎತ್ತರ ಇದೆ. ಐದೂವರೆ ಅಡಿ ಎತ್ತರ, ಎರಡೂವರೆ ಅಡಿ ಅಗಲವಿರುವ ದ್ವಾರವನ್ನು ಮುಟ್ಟಲು ಹೊರ ಸಭಾಂಗಣ ದಿಂದ 'ಶೂರಲ್‌ಯಾಳಿ'ಗಳಿಂದ ಕೂಡಿದ ಮೆಟ್ಟಿಲುಗಳಿವೆ.

ಹೊರಗಣ ಸಭಾಂಗಣದ ಉತ್ತರ ಗೋಡೆಯಲ್ಲಿ ಒಂದು ಮಾಡವಿದ್ದು ಅಲ್ಲಿ ಒಬ್ಬ ಜೈನ ಮುನಿಯ ವಿಗ್ರಹವಿದೆ. ಪದ್ಮಾಸನದಲ್ಲಿ ಧ್ಯಾನಮುದ್ರೆಯಲ್ಲಿ ಕುಳಿತಿರುವ ಈತನನ್ನು ಹತ್ತಿರವಿರುವ ಕಂಬದ ಮೇಲಿನ ಶಾಸನ 'ತಿರುವಾಶಿ ರಿಯನ್' (ಎಂದರೆ ಹಿರಿಯ ಆಚಾರ್ಯ) ಎಂದು ನಿರ್ದೇಶಿಸಿದೆ. ಈತನು ತೀರ್ಥಂಕರನಂತೂ ಅಲ್ಲವೆಂದು ಶಿಲ್ಪ ಲಕ್ಷಣಗಳಿಂದ ಸ್ಪಷ್ಟವಾಗುತ್ತದೆ; ಯಾವ ಆಚಾರ್ಯನೋ ಹೇಳಬರುವುದಿಲ್ಲ. ಅದಕ್ಕೆ ಎದುರಿನ ಗೋಡೆಯಲ್ಲಿರುವ ಮಾಡದಲ್ಲಿ ಪಾರ್ಶ್ವನಾಥ ತೀರ್ಥಂಕರನ ಮೂರ್ತಿಯಿದೆ. ಇದಲ್ಲದೆ ಗುಡಿಯೊಳಗೆ ಇನ್ನೂ ಮೂವರು ತೀರ್ಥಂಕರರ ಮತ್ತು ಅರ್ಹತರ ಶಿಲ್ಪಗಳಿವೆ. ಈ ಕಾರಣ

ಗಳಿಂದಲೇ ಈ ಗುಹಾ ದೇಗುಲಕ್ಕೆ 'ಅರ್ಹತರ ಗುಡಿ'ಯೆಂದು ಸಾಮಾನ್ಯವಾದ ಹೆಸರು ಬಂದಿರುವುದು.

ವರ್ಣಚಿತ್ರಗಳು

ಒಳ ಅಂಗಣದಲ್ಲಿರುವ ಮೂವರು ತೀರ್ಥಂಕರರ ಶಿಲ್ಪಗಳ ಮೇಲ್ಭಾಗ ದಲ್ಲಿ ಬಂಡೆಯ ಮೇಲೆ ಸೊಗಸಾದ ವರ್ಣ ಚಿತ್ರಗಳಿವೆ. ಚಪ್ಪರ ರತ್ನಗಂಬಳಿ ಯಂತೆ ಬಿಡಿಸಿರುವ ಈ ಚಿತ್ರಗಳಲ್ಲಿ ಪಟ್ಟೆಯ ಅಂಚು, ಚಚ್ಚೌಕ ಮತ್ತು ವರ್ತುಲ ವಿನ್ಯಾಸಗಳನ್ನು ಕಾಣಬಹುದು. ಚಚ್ಚೌಕ ವಿನ್ಯಾಸಗಳೊಳಗೆ ಕಮಲದ ಹೂಗಳನ್ನು ಬಿಡಿಸಿದ್ದಾರೆ. ಅರ್ಧ ಮಂಟಪದಲ್ಲಿರುವ ಆಚಾರ್ಯ ಮತ್ತು ಪಾರ್ಶ್ವನಾಥ ಶಿಲ್ಪಗಳ ಮೇಲೆ ಕೂಡ ಬೇರೆ ಬೇರೆ ವಿನ್ಯಾಸಗಳ ಚಪ್ಪರ ರತ್ನ ಕಂಬಳಿಗಳ ಚಿತ್ರಣವಿದೆ. ಆಚಾರ್ಯನ ಶಿಲ್ಪದ ಮೇಲಿರುವ ಚಿತ್ರಗಳು ಮಾಸಿ ಹೋಗಿವೆ; ಸರಿಯಾಗಿ ಕಾಣುವುದಿಲ್ಲ. ಪಾರ್ಶ್ವನಾಥನ ಮೇಲಿನವು ಮಾತ್ರ ಸೊಗಸಾದ ಕಮಲ ವಿನ್ಯಾಸಗಳಿಂದ ಆಕರ್ಷಕವಾಗಿವೆ; ಆಕೃತಿಗಳು ಇಂದಿಗೂ ಸ್ಪಷ್ಟವಾಗಿವೆ.

ಅರ್ಧಮಂಟಪದ ಸುಕನಾಸಿಯ ಮೇಲೆ ಜೈನರ ಸ್ವರ್ಗಭೂಮಿಯಲ್ಲಿರುವ ಸಮವಸರಣದ ದೃಶ್ಯವನ್ನು ಸ್ವಾರಸ್ಯವಾಗಿ ಚಿತ್ರಿಸಿದ್ದಾರೆ. ತೀರ್ಥಂಕರರ ದಿವ್ಯ ಪ್ರವಚನವನ್ನು ಕೇಳಲು ಭವ್ಯ ಜೀವಗಳು ನೆರೆದಿರುವ ಸುಂದರ ಸಭಾ ಭವನದೊಳಗೆ ಪ್ರವೇಶ ಮಾಡುವ ಮೊದಲು ಈ ಜೀವಗಳು ಹಲವಾರು ನೆಲೆ ಗಳನ್ನು ದಾಟಬೇಕಾಗುತ್ತದೆ. ಇಂಥ ಒಂದು ನೆಲೆ ಕಮಲ ಸರೋವರ. ಇಲ್ಲಿ ಭವ್ಯರು ವಿಹರಿಸುತ್ತಿರುವ ಚಿತ್ರಣ ಈಗ ಜಗತ್ಪ್ರಸಿದ್ಧವಾಗಿದೆ.

ಪರಂಪರೆ

ಈ ವರ್ಣಚಿತ್ರಗಳು ಅಜಂಟ ಗುಹಾಂತರ್ದೇವಾಲಯದ, ಸಿಂಹಳದ ಸೀಗಿರೀಯ ಮತ್ತು ಗ್ವಾಲಿಯರ್ ಬಳಿಯಿರುವ ಬಾಗ್ ಭಿತ್ತಿಚಿತ್ರಗಳ ಪರಂಪರೆಗೆ ಸೇರಿದುವು. ಅಜಂಟ ಚಿತ್ರಗಳು ಕ್ರಿಸ್ತಾಬ್ದ ಮೊದಲ ಶತಮಾನದಿಂದ ಏಳನೆಯ

ಶತಮಾನದವರೆಗೂ ಆದುವು. ಸೀಗಿರೀಯ ಚಿತ್ರಗಳು ಐದನೆಯ ಶತಮಾನಕ್ಕೂ ಬಾಗ್ ಚಿತ್ರಗಳು ಆರನೆಯ ಶತಮಾನಕ್ಕೂ ಸೇರಿದುವು. ಶಿತ್ತನವಾಶಲ್ ಚಿತ್ರಗಳು ಸುಮಾರು ಆರು-ಏಳನೆಯ ಶತಮಾನಗಳಿಗೆ ಸೇರಿದುವೆಂದು ತಜ್ಞರ ಅಭಿಪ್ರಾಯ.

ಬಂಡೆಯ ಮೇಲ್ಮೈಯನ್ನು ಸುಣ್ಣದ ಗಾರೆಯಿಂದ ಮೆತ್ತಿ, ಅದರ ಮೇಲೆ ಸುಣ್ಣ ನೀರನ್ನು ಸಿಂಪಡಿಸಿ ಅನಂತರ ಬಣ್ಣಗಳಿಂದ ಸಿದ್ಧಪಡಿಸಿದ ಚಿತ್ರಗಳು ಇವು. ಅವರು ಬಳಸಿರುವ ಬಣ್ಣಗಳು, ಕಪ್ಪು, ಹಸಿರು, ಹಳದಿ, ನೀಲಿ, ಬಿಳಿ ಮತ್ತು ಕಾವಿಬಣ್ಣಗಳು. ಕೆಲವು ಕಡೆ ಕಿತ್ತು ಬೀಳುತ್ತಿದ್ದ ಸುಣ್ಣ ಗಾರೆಯಿಂದ ಚಿತ್ರಣವಿಧಾನ ಸ್ಪಷ್ಟವಾಯಿತು. ಶಿಥಿಲವಾಗಿದ್ದ ಚಿತ್ರಗಳನ್ನು ಪುದುಕ್ಕೋಟೆ ಸಂಸ್ಥಾನದ ಅರಸರು 1937–1939ರಲ್ಲಿ ಮದ್ರಾಸ್ ಮ್ಯೂಸಿಯಂನ ಡಾ. ಪರಮಶಿವಂ ಎಂಬ ತಜ್ಞರ ನಿರ್ದೇಶನದಲ್ಲಿ ದುರಸ್ತಿ ಮಾಡಿಸಿದರು. ಧೂಳು ಮುಚ್ಚಿದ ಚಿತ್ರಗಳನ್ನು ಮೊದಲಿನ ಬಣ್ಣ ಅಳಿಸದಂತೆ ಶುದ್ಧಿ ಮಾಡಿಸಿದರು; ಚಿತ್ರಗಳ ಮೇಲೆ ರಕ್ಷಣಾಪದರವೊಂದನ್ನು ಮೂಡಿಸಿದರು. ಶಿತ್ತನವಾಶಲ್ ಚಿತ್ರಗಳ ಸಂರಕ್ಷಣೆಗೆ ಆಗಿನ ಸಂಸ್ಥಾನದ ರಾಜರಾಗಿದ್ದ ಬೃಹದಾಂಬಾದಾಸ ರಾಜರಾಜ ಗೋಪಾಲ ತೋಂಡಮಾನ್ ಬಹದ್ದೂರ್ ತುಂಬ ಶ್ರಮಿಸಿದರು.

ಹಳ್ಳಿ

ಬೆಟ್ಟದ ಪಶ್ಚಿಮ ಭಾಗದ ತಪ್ಪಲಿನಲ್ಲಿ ಶಿವದೇವಾಲಯವೊಂದಿದೆ. ಕಲ್ಲು-ಇಟ್ಟಿಗೆಗಳಿಂದ ಕಟ್ಟಿದ ಈ ದೇಗುಲ ಈಗ ಶಿಥಿಲವಾಗಿದೆ. ಅಲ್ಲಿಯೇ ಅಯ್ಯನಾರ್, ಪೀಡಾರಿ ಮೊದಲಾದ ಗ್ರಾಮದೇವತೆಗಳಿಗೂ ಸಣ್ಣ ಸಣ್ಣ ಗುಡಿಗಳಿವೆ. ಈಗ ಸುತ್ತುಮುತ್ತಲೂ ಬಯಲಿದೆ ಅಷ್ಟೆ. ಆದರೆ ಮೊದಲಿಗೆ ಅಲ್ಲೊಂದು ಹಳ್ಳಿಯಿದ್ದಿರಬೇಕು; ಕಾಲಕ್ರಮದಲ್ಲಿ ಬಯಲಾಗಿರಬೇಕು.

ಬೆಟ್ಟದ ಪಕ್ಕದಲ್ಲಿರುವ ತುಂಬ ಪ್ರಾಚೀನ ಅವಶೇಷಗಳನ್ನು ಗಮನಿಸಿದರೆ ಮಡಕೆಯ ಚೂರುಗಳೊಳಗೆ ಬಣ್ಣದ ಮತ್ತು ಕುದಿಸಿದ ಗಾಜನ್ನು ಬಳಿದಿರು

ವುದು ಕಾಣಬರುತ್ತದೆ. ಅಲ್ಲಿಯೇ ಬಣ್ಣಬಣ್ಣದ ಗಾಜಿನ ಚೂರುಗಳೂ ದೊರೆತಿವೆ. ಒಂದು ಕಾಲದಲ್ಲಿ ಈ ಹಳ್ಳಿಯಲ್ಲಿ ಗಾಜಿನ ಬಳೆಗಳನ್ನೂ ಗುಂಡುಗಳನ್ನೂ ತಯಾರಿಸುವ ಉದ್ಯಮವಿದ್ದಿತೆಂದು ಊಹಿಸಬಹುದು. ಪ್ರಾಗಿತಿಹಾಸಕಾಲದ ರುದ್ರಭೂಮಿಯೂ ಇಲ್ಲಿದ್ದ ಸೂಚನೆಗಳಿವೆ. ಬೆಟ್ಟದ ದಕ್ಷಿಣ ದಿಕ್ಕಿನಲ್ಲಿ ಶೆಂಗುಳಂ ಕೆರೆಯ ಪಕ್ಕದಲ್ಲಿ ಮತ್ತು ಪೆರಿಯಕುಳಂ ಬಳಿ ಶವಗಳನ್ನು ಮಡಕೆಗಳಲ್ಲಿಟ್ಟು ಹೂಳಿದ್ದ ನಿದರ್ಶನಗಳಿವೆ. ಇದು ತುಂಬ ಪ್ರಾಚೀನವಾದ ಶವ ಸಂಸ್ಕಾರ ಪದ್ಧತಿ. ಎಂದರೆ ಶಿತ್ತನವಾಶಲ್ ಪರಿಸರವು ಪುರಾತನ ಕಾಲದಿಂದಲೂ ಪ್ರಸಿದ್ಧವಾದ ಸ್ಥಳವಾಗಿದ್ದಿತು,

ಮುಂದೆ ಸಿಂಹಳ, ಅಜಂಟಾಗಳೊಂದಿಗೆ ಸಂಬಂಧವನ್ನು ಬೆಳೆಸಿಕೊಂಡು ಬಂದುದೂ ಅದರ ಇತಿಹಾಸ ಪ್ರಸಿದ್ಧಿಯನ್ನು ಪುಷ್ಟಿಗೊಳಿಸುತ್ತದೆ. ಪ್ರಮುಖವಾಗಿ ಜೈನ ಕ್ಷೇತ್ರವಾಗಿದ್ದರೂ ಶೈವರ ಪ್ರಭಾವವೂ ಇಲ್ಲಿದ್ದಿತು. ಪಲ್ಲವ ರಾಜರೂ ಚೋಳರಾಜರೂ ಈ ಸ್ಥಳದಲ್ಲಿ ಆಸಕ್ತಿಯನ್ನು ತಳೆದಿದ್ದರು.

ನಮ್ಮ ನಾಡಿನ ಕ್ಷೇತ್ರಗಳು ದಿಟವಾಗಿ ಸಾಂಸ್ಕೃತಿಕ ಕೇಂದ್ರ-ಗಳು. ಧರ್ಮ ಅವುಗಳಲ್ಲಿ ಒಂದು ಪಾಲಾದರೆ ಇತಿಹಾಸ-ಕಲೆ-ಜನಜೀವನಗಳು ಮೂರು ಪಾಲು. ನಾಡಿನ ಸಂಸ್ಕೃತಿ ಬೆಳೆದ ಬಗೆಯನ್ನು ಈ ಕ್ಷೇತ್ರಗಳು ಚೆನ್ನಾಗಿ ತೋರಿಸಿಕೊಡುತ್ತವೆ. ಕ್ಷೇತ್ರಗಳ ಪರಿಚಯ ನಮ್ಮ ಇತಿಹಾಸಪ್ರಜ್ಞೆಯನ್ನು, ದೇಶಾಭಿಮಾನವನ್ನು, ವ್ಯಕ್ತಿಸಂಸ್ಕೃತಿಯನ್ನು ಹೆಚ್ಚಿಸಬಲ್ಲುದು. ಈ ದೃಷ್ಟಿಯಿಂದ ಸಿದ್ಧವಾದ ಬರಹಗಳ ಸಂಕಲನ ಇದು.

ಇಡೀ ನಾಡಿನ ಹಲವು ಹೆಸರಾಂತ ಕ್ಷೇತ್ರಗಳ (ಕಾಶಿಯಿಂದ ಶಬರಿಮಲೆಯವರೆಗೆ) ಸಮಗ್ರ ಚಿತ್ರವನ್ನು ಒದಗಿಸುವ ಯತ್ನ ಇಲ್ಲಿ ನಡೆದಿದೆ; ಕಲೆಯ ಕಾಣ್ಕೆಯದು ಮೇಲುಗೈಯಾಗಿದೆ.

ಲೇಖಕರು ನಾಡಿನ ಪ್ರಸಿದ್ಧ ವಿದ್ವಾಂಸರಾದ ವಿದ್ಯಾಲಂಕಾರ ಪ್ರೊ॥ ಎಸ್. ಕೆ. ರಾಮಚಂದ್ರರಾಯರು. ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ ಮಟ್ಟದ ಪ್ರಾಧ್ಯಾಪಕರೂ, ಪಂಡಿತ ಮಂಡಲಿಗಳಲ್ಲಿ ಗಣ್ಯರಾದವರೂ, ಸಂಶೋಧನೆಯಲ್ಲಿ ನುರಿತವರೂ, ಸೊಗಸಾದ ಬರಹಗಾರರೂ ಆದ ರಾಯರು ಮನಃಶಾಸ್ತ್ರ, ಸಮಾಜಶಾಸ್ತ್ರ, ವೇದಾಂತ, ಬೌದ್ಧ-ಜೈನ ದರ್ಶನಗಳು, ಸಂಗೀತ, ಚಿತ್ರಕಲೆ, ಶಿಲ್ಪ ಮೊದಲಾದ ಹಲವು ಕ್ಷೇತ್ರಗಳಲ್ಲಿ ಪರಿಣತರು; ಹಲವು ಭಾಷೆಗಳನ್ನರಿತವರು. ರಾಜ್ಯದ ಲಲಿತಕಲಾ ಅಕ್ಯಾದಮಿ, ಸಂಗೀತ ನೃತ್ಯ ಅಕ್ಯಾದಮಿಗಳ ಸದಸ್ಯರಾಗಿದ್ದಾರೆ. ಭಾರತ ಸರ್ಕಾರವು ರಾಷ್ಟ್ರಪ್ರಶಸ್ತಿಗಾಗಿ ಕುಶಲಕರ್ಮಿಗಳನ್ನು ಆಯ್ಕೆ ಮಾಡಲು ಏರ್ಪಡಿಸಿದ ಪ್ರಾದೇಶಿಕ ಸಮಿತಿಯಲ್ಲಿ ಇವರನ್ನು ಸೇರಿಸಿಕೊಂಡಿದೆ.

ಅವರ ಹಲವಾರು ಗ್ರಂಥಗಳು ಕನ್ನಡ, ಸಂಸ್ಕೃತ, ಪಾಳಿ, ಇಂಗ್ಲೀಷ್ ಭಾಷೆಗಳಲ್ಲಿ ಈಗಾಗಲೇ ಪ್ರಕಟವಾಗಿವೆ. ಅವರ 'ಮೂರ್ತಿಶಿಲ್ಪ' ಪುಸ್ತಕಕ್ಕೆ ರಾಜ್ಯದ ಪ್ರಶಸ್ತಿ ದೊರೆತಿದೆ. ಅವರ ಕಲಾಕೃತಿಗಳ ಪ್ರದರ್ಶನಗಳು ಬೆಂಗಳೂರಿನಲ್ಲಿ ನಡೆದಿವೆ.